ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ
ಕ.ರಾ.ಶಿ. ಸಂಸ್ಥೆಯ ಹೈದ್ರಾಬಾದ ಕರ್ನಾಟಕ ಸಂಶೋಧನ ಕೇಂದ್ರ ಬೀದರ

ಬೀದರ ತಾಲೂಕಿನ ಜಾನಪದ ಅನ್ವೇಷಣೆ

(ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಮೋರೆ ಸಾವಿತ್ರಿಬಾಯಿ ಕಾಶಪ್ಪ

ಮಾರ್ಗದರ್ಶಕರು
ಡಾ. ಶ್ರೀಶೈಲ ನಾಗರಾಳ
ಕರಾಶಿ ಸಂಸ್ಥೆ
ಹೈದ್ರಾಬಾದ ಕರ್ನಾಟಕ ಸಂಶೋಧನ ಕೇಂದ್ರ ಬೀದರ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-583276
2018

ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ
ಕ.ರಾ.ಶಿ. ಸಂಸ್ಥೆಯ ಹೈದ್ರಾಬಾದ ಕರ್ನಾಟಕ ಸಂಶೋಧನ ಕೇಂದ್ರ ಬೀದರ

ಬೀದರ ತಾಲೂಕಿನ ಜಾನಪದ ಅನ್ವೇಷಣೆ

(ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಸೂರೆ ಸಾವಿತ್ರಿಬಾಯಿ ಕಾಶಪ್ಪ

ಮಾರ್ಗದರ್ಶಕರು
ಡಾ. ಶ್ರೀಶೈಲ ನಾಗರಾಳ
ಕರಾಶಿ ಸಂಸ್ಥೆಯ
ಹೈದ್ರಾಬಾದ ಕರ್ನಾಟಕ ಸಂಶೋಧನ ಕೇಂದ್ರ ಬೀದರ

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ–585276
2018

<u>ಪ್ರಮಾಣ ಪತ್ರ</u>

ಬೀದರ ತಾಲೂಕಿನ ಜಾನಪದ ಅನ್ವೇಷಣೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಶ್ರೀಶೈಲ ನಾಗರಾಳ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯ ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ ಜಾನಪದ ಅಧ್ಯಯನ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಪ್ರಸ್ತುತ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ. ಈ ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೇ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ಬೀದರ
ದಿನಾಂಕ:–20/02/2018

ಸೂರೆ ಸಾವಿತ್ರಿಬಾಯಿ ಕಾಶಪ್ಪ
ಸಂಶೋಧನಾ ವಿದ್ಯಾರ್ಥಿನಿ
ಕರಾಶಿ ಸಂಸ್ಥೆಯ
ಹೈದ್ರಾಬಾದ ಕರ್ನಾಟಕ ಸಂಶೋಧನ
ಕೇಂದ್ರ ಬೀದರ–585401

<u>ಮಾರ್ಗದರ್ಶಕರ ಪ್ರಮಾಣಪತ್ರ</u>

ಬೀದರ ತಾಲೂಕಿನ ಜಾನಪದ ಅನ್ವೇಷಣೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಸೂರೆ ಸಾವಿತ್ರಿಬಾಯಿ ಕಾಶಪ್ಪ** ಅವರು ನನ್ನ ಮಾರ್ಗದರ್ಶನದಲ್ಲಿ ಪಿಹೆಚ್.ಡಿ. ಪದವಿಗಾಗಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಬೀದರ
ದಿನಾಂಕ:–21/02/2018

ಡಾ. ಶ್ರೀಶೈಲ ನಾಗರಾಳ
ಮಾರ್ಗದರ್ಶಕರು
ಕರಾಶಿ ಸಂಸ್ಥೆಯ
ಹೈದ್ರಾಬಾದ ಕರ್ನಾಟಕ ಸಂಶೋಧನ
ಕೇಂದ್ರ ಬೀದರ–585401

ಮಾರ್ಗದರ್ಶಕರು
ಡಾ|| ಶ್ರೀಶೈಲ ನಾಗರಾಳ
ಕ.ರಾ.ಶಿ. ಸಂಸ್ಥೆ
ಸ್ನಾತಕೋತ್ತರ ಕನ್ನಡ ಸಂಶೋಧನಾ ಕೇಂದ್ರ
ಬೀದರ

ಪರಿವಿಡಿ

ಅನುಬಂಧ

ಅಧ್ಯಾಯ – 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

1.1 ಪ್ರಸ್ತಾವನೆ

1.2 ಅಧ್ಯಯನದ ಸ್ವರೂಪ

1.3 ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

1.4 ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

1.5 ಅಧ್ಯಯನದ ವೈಧ್ಯಾನಿಕತೆ

1.6 ಬೀದರ ತಾಲೂಕಿನ ಐತಿಹಾಸಿಕ ಹಿನ್ನೆಲೆ

1.1 ಪ್ರಸ್ತಾವನೆ

ಕರ್ನಾಟಕ ರಾಜ್ಯದ ಉತ್ತರ ದಿಕ್ಕಿನಲ್ಲಿ ಬರುವ ಗಡಿ ತಾಲೂಕುಗಳಲ್ಲಿ ಬೀದರ ತಾಲೂಕು ಒಂದು ಇಲ್ಲಿ ಸಮ್ಮಿಶ್ರ ಸಂಸ್ಕೃತಿ ಇದೆ. ಕನ್ನಡ, ಉರ್ದು, ಹಿಂದಿ, ಮರಾಠಿ ಮತ್ತು ತೆಲುಗು ಭಾಷೆಯಲ್ಲಿ ಮಾತನಾಡುತ್ತಾರೆ. ಒಂದಡೆ ತೆಲಂಗಾಣ ಇನ್ನೊಂದೆಡೆ ಬೀದರ ಜಿಲ್ಲೆಯ ಔರಾದ ತಾಲೂಕಿಗೆ ಮಹಾರಾಷ್ಟ್ರ ಗಡಿಯನ್ನು ಹೊಂದಿರುತ್ತದೆ. ಇಲ್ಲಿಯ ಜನಪದ ಸಾಹಿತ್ಯ ಮತ್ತು ಕಲೆ ಸಮೃದ್ಧವಾಗಿದೆ. ಕಥೆ, ಹಾಡು, ಗಾದೆ, ಒಗಟು, ಒಡಪು, ಒಡಬು, ಬಯಲಾಟ, ಸಣ್ಣಾಟ, ದಪ್ಪಿನಾಟ ಮುಂತಾದ ಪ್ರಕಾರಗಳು ಅನಂತ ಮುಖಿಯಾಗಿವೆ. ಈ ಜನಪದ ಸಾಹಿತ್ಯ ಕುರಿತಾಗಿ ಈಗಾಗಲೇ ಸಂಗ್ರಹ ಮತ್ತು ಸಂಶೋಧನೆಗಳು ನಡೆದಿವೆ ಪುಸ್ತಕಗಳು ಪ್ರಕಟಗೊಂಡಿವೆ. ಆದರೆ ಅನೇಕ ವಿಷಯಗಳು ಬೆಳಕಿಗೆ ಬಾರದೆ ಉಳಿದಿದೆ ಹಾಗಾಗೀ ನನ್ನ ಸಂಶೋಧನ ವಿಷಯಕ್ಕೆ ಪೂರಕವಾಗಿ ಬೆಳಕಿಗೆ ಬಾರದ ವಿಷಯವನ್ನು ಕಲೆಹಾಕಲು ಪ್ರಯತ್ನಿಸಿದ್ದೇನೆ. ಜನಪದ ಸಾಹಿತ್ಯ ಪ್ರಕಾರಗಳನ್ನು ಕೈಬಿಟ್ಟಿದ್ದೇನೆ. ಗ್ರಾಮಾಂತರಗಳಲ್ಲಿ ಸಂಚರಿಸಿ ಕ್ಷೇತ್ರ ಕಾರ್ಯ ಕೈಗೊಂಡಿದ್ದೇನೆ. ಅಂಥ ಸಂದರ್ಭದಲ್ಲಿ ಅನೇಕ ವಿಷಯಗಳು ಲಭ್ಯವಾದವು. ಅವುಗಳನ್ನೆಲ್ಲ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲು ಪ್ರಯತ್ನಿಸಿದ್ದೇನೆ.

ಜನಪದ ಸಾಹಿತ್ಯ ಪ್ರಕಾರಗಳಾದ ಕಥೆ, ಹಾಡು, ಗಾದೆ, ಒಗಟು, ಒಡಪು, ಒಡಬು, ದೊಡ್ಡಾಟ, ಸಣ್ಣಾಟ ಮತ್ತು ದಪ್ಪಿನಾಟ ಇತ್ಯಾದಿ ವಿಷಯಗಳನ್ನು ಹೊರೆತು ಪಡಿಸಿ ಇನ್ನುಳಿದ ಜಾನಪದೀಯ ವಿಷಯಗಳ ಕುರಿತು ನನ್ನ ಸಂಶೋಧನ ಮಹಾಪ್ರಬಂಧವನ್ನು ರಚನೆ ಮಾಡಬೇಕೆಂಬ ಆಶಯವನ್ನು ಹೊಂದಿ, ಬೀದರ ತಾಲೂಕಿನ ಜಾನಪದೀಯ ವಿಷಯಕ್ಕೆ ಪೂರಕವಾಗಿ ಕೃಷಿ ಉಪಕರಣಗಳು ಜನಪದ ಚಿತ್ತಾರಗಳು, ಕುಣಿತಗಳು, ದೇಶಿ ಕ್ರೀಡೆಗಳು, ಉಡುಗೆ ತೊಡುಗೆಗಳು, ಶಿಸು ಪ್ರಾಸಗಳು, ಭಾಷಾ ಚಮತ್ಕಾರಗಳು ಇತ್ಯಾದಿ ವಿಷಯಗಳನ್ನು ಈ ಸಂಶೋಧನಾ ಅಧ್ಯಯನದಲ್ಲಿ ವಿವರಿಸಿದ್ದೇನೆ.

ಈ ಮಹಾಪ್ರಬಂಧದಲ್ಲಿ ಪ್ರಸ್ತಾಪಿಸಿದ ವಿಷಯಗಳು ಸಂಶೋಧಕರಿಗೆ ಮತ್ತು ಅಧ್ಯಯನಶೀಲರಿಗೆ ಕೆಲಮಟ್ಟಿಗಾದರೂ ಸಹಕಾರ ನೀಡಬಹುದೆಂದು ಭಾವಿಸಿದ್ದೇನೆ. ಬೀದರ ತಾಲೂಕಿನ ಜಾನಪದ ಅನ್ವೇಷಣೆ ನನ್ನ ಸಂಶೋಧನಾ ವಿಷಯವಾಗಿರುವುದರಿಂದ ಸಾಹಿತ್ಯ ಪ್ರಕಾರಗಳನ್ನು ಹೊರತು ಪಡಿಸಿ ಜಾನಪದರ ದೈನಂದಿನ ಚಟುವಟಿಕೆಗಳನ್ನು ಹಳ್ಳಿಗಾಡಿನ ಸಂಪ್ರದಾಯಗಳನ್ನು, ಕೃಷಿಗೆ ಸಂಬಂಧಿಸಿದ ತಂತ್ರಜ್ಞಾನವನ್ನು, ಭಾಷೆಯಲ್ಲಿ ಬಳಸುವ ಚಮತ್ಕಾರಗಳನ್ನು ಇತ್ಯಾದಿಗಳು ಈ ಮಹಾಪ್ರಬಂಧದಲ್ಲಿ ಪ್ರಸ್ತಾಪಗೊಂಡಿವೆ.

1.2 ಅಧ್ಯಯನದ ಸ್ವರೂಪ

ಅಧ್ಯಾಯ ಒಂದರಲ್ಲಿ ಪ್ರಸ್ತಾವನೆಯೊಂದಿಗೆ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ, ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ, ಮಾಡಲಾಗಿದೆ. ಅಧ್ಯಯನದ ವೈಧಾನಿಕತೆ ಕುರಿತು

ವಿವರಿಸಿದೆ. ಅಧ್ಯಯನದ ಸ್ವರೂಪ ಯಾವ ರೀತಿಯಾಗಿಗೆ. ಅವುಗಳ ಮಿತಿಗಳನ್ನು ಹೇಳುವುದು ಮೂಲಕ ಅಧ್ಯಯನದ ಉದ್ದೇಶ ವ್ಯಾಪ್ತಿ ಏನು ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಬೀದರ ತಾಲೂಕಿನ ಐತಿಹಾಸಿಕ ಹಿನ್ನೆಲೆ, ಅಟ್ಟಳೆ ನಾಡು ಎಂದರೇನು? ಬೀದರನಲ್ಲಿ ಆಡಳಿತ ನಡೆಸಿದ ರಾಜಮನೆತನಗಳು, ವಚನ ಚಳುವಳಿ, ಬೀದರ ತಾಲೂಕಿನ ಊರು ಕೇರಿಗಳು, ಪುರ ಮತ್ತು ಪೂರ ಎಂದಾಗಿರುವ ಹಳ್ಳಿಗಳು, ಹಳ್ಳಿ, ಹಾಳ, ಪಳ್ಳಿ ಗಾಂವಗಳ ಹೆಸರಿನ ಬಳಕೆ ಹೇಗೆ ಎನು ಎಂಬುವುದರ ಕುರಿತು ಸಾಂಸ್ಕೃತಿಕ ವೈಶಿಷ್ಟತೆಯನ್ನು ಕಟ್ಟಿಕೊಡುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ. ಅಧ್ಯಾಯ ಎರಡು 'ಜನಪದ ಕೃಷಿ ಮತ್ತು ಪಶುಸಂಗೋಪನ ಉಪಕರಣಗಳು' ಎಂಬ ಶೀರ್ಷಿಕೆಯಾಗಿದೆ. ಇದರಲ್ಲಿ ಹದಿನಾರು ವಿವಿಧ ಕೃಷಿ ಉಪಕರಣಗಳ ಪರಿಚಯ ಮಾಡಿ ಕೊಡಲಾಗಿದೆ. ಕೃಷಿಕರು ಋತುಮಾನಕ್ಕೆ ತಕ್ಕಂತೆ ಯಾವ ಉಪಕರಣವನ್ನು ಹೇಗೆ ಬಳಸುತ್ತಾರೆಂಬುದು ವಿವೇಚಿಸಲಾಗಿದೆ. ಕೃಷಿ ಉಪಕರಣಗಳು ಇವತ್ತಿಗೂ ಬಳಕೆಯಲ್ಲಿವೆ. ಆದರೆ ಅವುಗಳ ಬಗ್ಗೆ ಎಲ್ಲೂ ಸಂಶೋಧನೆಗಳು ನಡೆದಿಲ್ಲ. ಎಂಬುದೇ ವಿಷದದ ಸಂಗತಿ. ಇಂಥ ಅಮೂಲ್ಯ ಜ್ಞಾನವನ್ನು ಈ ಮಹಾಪ್ರಬಂಧದ ಮೂಲಕ ಕೊಡಲು ಪ್ರಯತ್ನಿಸಿದ್ದೇನೆ. ಅಳಿದು ಹೋಗಿರುವ ಅಳಿಯುತ್ತಿರುವ ಹಾಗೂ ಬಳಕೆಯಲ್ಲಿರುವ ಕೃಷಿ ಉಪಕರಣಗಳನ್ನು ದಾಖಲಿಕರಣದ ಜೊತೆಗೆ. ಜನಪದರ ಕೊಡುಗೆ ಯಾವ ಬಗೆಯದು? ಎಂಬುದರ ಕಡೆ ಹೆಚ್ಚು ಒತ್ತು ಕೊಡಲಾಗಿದೆ. ಕೃಷಿ ಉಪಕರಣಗಳ ಸ್ಥಾನದಲ್ಲಿ ಆಧುನಿಕ ಕೃಷಿ ಉಪಕರಣಗಳು ಯಾಕೆ? ಬಳಕೆಗೆ ಬಂದವು ಎಂಬುದನ್ನು ಚರ್ಚಿಸಲಾಗಿದೆ.

ಅಧ್ಯಾಯ ಮೂರು 'ಜನಪದ ಚಿತ್ರ ಹಾಗೂ ಕರಕುಶಲ ಕಲೆಗಳು' ಎಂಬ ವಿಷಯಕ್ಕೆ ಸಂಬಂಧಿಸಿರುವಂಥದ್ದು. ಈ ಅಧ್ಯಾಯದಲ್ಲಿ ಜನಪದರ ಬದುಕಿನೊಂದಿಗೆ ಜನಪದ ಚಿತ್ತಾರಗಳು ಹೇಗೆ ಹಾಸುಹೊಕ್ಕಾಗಿ ಅದರ ಸಾಮಾಜಿಕ ಗ್ರಹಿಕೆಗಳೇನು? ಎಂಬುದರ ಕುರಿತು ಚರ್ಚಿಸಲಾಗಿದೆ.

ನಮ್ಮ ಹಳ್ಳಿಯ ಜೀವನ ಎಷ್ಟು ಸುಂದರ. ಅವರು ಸ್ವಾವಲಂಬಿಯಾಗಿ ಬದುಕುತ್ತಾರೆ. ಜೀವನವೂ ಒಂದು ಕಲೆ ಎಂದು ತಿಳಿದಿರುತ್ತಾರೆ. ಸುಂದರವಾಗಿ ಬದುಕಿ ಆನಂದ ಕಾಣಬೇಕೆಂಬ ಹಂಬಲ ಹೆಚ್ಚಾಗಿರುತ್ತದೆ. ಈ ಆನಂದ ಅನ್ವೇಷಣೆಯೇ ಕಲೆ ಎನ್ನಬಹುದು. ಬಡಿಗ, ಹೂಗಾರ, ಬಳಿಗಾರ, ಚಮ್ಮಾರ, ತಳವಾರ, ಕುಂಬಾರ ಮುಂತಾದವರು ಜನಪದ ಚಿತ್ತಾರದ ರಾಯಭಾರಿಗಳಾಗಿ ಕೆಲಸ ಮಾಡಿರುತ್ತಾರೆ.

ಅಧ್ಯಾಯ ನಾಲ್ಕು 'ಜನಪದ ಕಲೆಗಳು' ಎಂಬ ವಿಷಯವನ್ನು ಕುರಿತು ಚರ್ಚಿಸಲಾಗಿದ್ದು, ಇಲ್ಲಿ ಹದಿನಾರು ಕಲೆಗಳ ವಿವರ ಕೊಡಲಾಗಿದೆ. ಅವುಗಳು ಯಾವ ಸಂದರ್ಭದಲ್ಲಿ ಪ್ರದರ್ಶನಕ್ಕೆ ಒಳಪಡುತ್ತವೆ. ಆಯಾ ಕಲೆಗಳ ಹಿನ್ನೆಲೆ ಎನು? ಆಶಯವೇನಾಗಿತ್ತು? ಜನಪದ ಕಲೆಗಳು ಬೀದರ ತಾಲೂಕಿನಲ್ಲಿ ಹೇಗೆ ವಿಭಿನ್ನವನ್ನು ಪಡೆದಿವೆ. ಜನಪದರು ಪಾಲುಗಾರಿಕೆ ಯಾವ ರೀತಿಯದು?

ಜನಪದ ಕಲೆಗಳು ಸಾಂಸ್ಕೃತಿಕ ಜಗತ್ತಿನಲ್ಲಿ ಹೇಗೆ ಕಾಣಲಾಗಿದೆ. ಎಂಬುದನ್ನು ಈ ಅಧ್ಯಾಯದ ಮೂಲಕ ನೋಡುವ ಪ್ರಯುತ್ನವನ್ನು ಮಾಡಲಾಗಿದೆ.

ಅಧ್ಯಾಯ ಐದು 'ದೇಶಿ ಕ್ರೀಡೆಗಳು' ಎಂಬ ವಿಷಯವನ್ನು ಚರ್ಚಿಸಲಾಗಿದ್ದು, ಬೀದರ ತಾಲೂಕಿನಲ್ಲಿ 32ಕ್ಕೂ ಹೆಚ್ಚು ದೇಶಿ ಕ್ರೀಡೆಗಳು ಜೀವಂತವಾಗಿವೆ. ಈ ಕ್ರೀಡೆಗಳಿಗೆ ಸಾವಿರಾರು ವರ್ಷಗಳ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಇತಿಹಾಸವೇ ಇದೆ ಎಂಬುದನ್ನು ವಿವರಿಸಲಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನರನ್ನು ಪರಸ್ಪರ ಕೂಡಿ ಬಾಳುವ ಅವಕಾಶವನ್ನು ಹೇಗೆ ಕಲ್ಪಿಸುತ್ತವೆ. ಈ ದೇಶಿ ಕ್ರೀಡೆಗಳು ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಹೇಗೆ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕೂಡಿ ಬಾಳುವ ಗುಣವನ್ನು ಹೇಗೆ ಉಂಟುಮಾಡುತ್ತವೆ. ಸ್ಪರ್ಧಾತ್ಮಕವಿದ್ದರೂ ಅಲ್ಲಿ ಯಾವ ಕಲಹಕ್ಕೂ ಎಡೆ ಇರುವುದಿಲ್ಲ ಏಕೆ? ಆಧುನಿಕತೆಯಿಂದ ದೇಶಿ ಕ್ರೀಡೆಗಳ ಮೇಲಾದ ಪರಿಣಾಮ ಯಾವ ರೀತಿಯದು ಎಂಬ ಈ ಎರಡು ನೆಲೆಯಲ್ಲಿ ವಿಷಯವನ್ನು ಚರ್ಚಿಸಲಾಗಿದೆ.

ಅಧ್ಯಾಯ ಆರು 'ಉಡುಗೆ ತೊಡುಗೆಗಳು' ಎಂಬ ಶೀರ್ಷಿಕೆಯನ್ನು ಹೊಂದಿದ್ದು, ಪ್ರಾಚೀನ ಕಾಲದಿಂದಲೂ ಜನಪದರು ಬಳಸುತ್ತಿದ್ದ ಉಡುಗೆ ತೊಡುಗೆಗಳು ಅವರ ವೃತ್ತಿಗೆ ವಾತಾವರಣಕ್ಕೆ ತಕ್ಕಂತೆ ಹೇಗೆ ರೂಪುಗೊಳ್ಳುತ್ತಿದ್ದವು ಎಂಬುದನ್ನು ವಿವರಿಸಲಾಗಿದೆ. ಕಾಲಕ್ರಮೇಣ ಸೌಂದರ್ಯದ ಆ ಮೂಲಕ ಉಂಟಾಗುವ ಸಂತೋಷದ ದೃಶ್ಯಗಳನ್ನು ಒಳಗೊಳ್ಳುತ್ತ ಪರಿಷ್ಕರಿಸಲ್ಪಡುತ್ತ ಹೋಗಿ, ಇತ್ತೀಚೆಗೆ ಅಗತ್ಯಕ್ಕಿಂತ ಹೆಚ್ಚಿಗೆ ಅಂದಚೆಂದ ಮತ್ತು ಕಲಾತ್ಮಕತೆಗಳಿಗೆ ಹೆಚ್ಚು ಹೊತ್ತುಕೊಡುತ್ತ, ರೂಪುಗೊಂಡು ಪರಾಕರ್ಷಣೆಯ ಪ್ರಮುಖ ಮಾಧ್ಯಮಗಳಾಗಿ ಹೇಗೆ ಮಾರ್ಪಟಿವೆ ಎಂಬುದನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ಏಳು 'ಶಿಸು ಪ್ರಾಸಗಳು' ಎಂಬ ವಿಷಯವನ್ನು ಕುರಿತು ಚರ್ಚಿಸಲಾಗಿದೆ. ಶಿಸುಪ್ರಾಸಗಳು ಜನಪದ ಸಾಹಿತ್ಯದ ಒಂದು ಅಂಗ. ಜನಪದ ಸಾಹಿತ್ಯ ಪ್ರಕಾರಗಳಾದ ಗೀತೆ, ಒಗಟು, ಗಾದೆ, ಕಥೆ, ಇತ್ಯಾದಿಗಳಂತೆ ಶಿಶುಪ್ರಾಸಗಳೂ ವೃಷ್ಟಿಯಿಂದ ಸೃಷ್ಟಿಗೊಂಡು ಸಮಷ್ಟಿಯಾಗಿ ಮಕ್ಕಳಲ್ಲಿ ಚಲಾವಣೆಗೆ ಹೇಗೆ ಬಂದಿವೆ. ನಿತ್ಯ ಜೀವನದಲ್ಲಿ ಕಾಣುವ, ಕೆಲವು ಅಂಶಗಳನ್ನು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುತ್ತಾರೆ. ಈ ಪ್ರಾಸಗಳು ಬಾಯಿಂದ ಬಾಯಿಗೆ ಹರಿಯುವಾಗ ವ್ಯತ್ಯಾಸ ಮತ್ತು ರೂಪಾಂತರ ಹೇಗೆ ಆಗುತ್ತವೆ. ಇವು ಮಕ್ಕಳ ಕ್ರಿಯಾತ್ಮಕ ಬೆಳವಣಿಗೆ ಹೇಗೆ? ಶಿಸುಪ್ರಾಸಗಳಲ್ಲಿ ದೈನಂದಿನ ವ್ಯವಹಾರಗಳಿಗೆ ಸುತ್ತ ಮುತ್ತ ಕಾಣುವ ವಸ್ತುಗಳನ್ನು ಹೇಗೆ ಪ್ರತಿಬಿಂಬಿತವಾಗಿವೆ. ಬೀದರ ತಾಲೂಕಿನ ಶಿಸುಪ್ರಾಸುಗಳು ಹೇಗೆ ವೈವಿಧ್ಯತೆಯನ್ನು ಕೂಡಿವೆ. ಎಂಬುದನ್ನು ಪರಿಚಯ ಮಾಡಿಕೊಡುವ ಪ್ರಯತ್ನ ವಾಡಲಾಗಿದೆ. ಶಿಸುಪ್ರಾಸಗಳಲ್ಲಿ ಯಾವ ವಸ್ತು ಹೇಗೆ ಅಭಿವ್ಯಕ್ತಗೊಂಡಿವೆ. ವಸ್ತುವಿನ ಹಿನ್ನಲೆಯಲ್ಲಿ ಶಿಸುಪ್ರಾಸಗಳನ್ನು ಹದಿನೆಂಟು ಪ್ರಕಾರಗಳನ್ನು ಮಾಡಿ ವಿಷಯವನ್ನು ಚರ್ಚಿಸಲಾಗಿದೆ.

ಅಧ್ಯಾಯ ಎಂಟು 'ಭಾಷಾ ಚಮತ್ಕಾರಗಳು' ಕುರಿತಂತೆ ಚರ್ಚಿಸಲಾಗಿದೆ. ಜಾನಪದ ಸಾಹಿತ್ಯಿಕ, ಕ್ರಿಯಾತ್ಮಕ, ವೈಜ್ಞಾನಿಕ, ಹಾಗೂ ಭಾಷಿಕ ಈ ನಾಲ್ಕೂ ಬಗೆಗಳಲ್ಲಿ ಕಂಡು ಬರುವಂಥದು.

ಕತೆ, ಗೀತೆ, ಲಾವಣಿ ಇವು ಸಾಹಿತ್ಯಿಕದಲ್ಲೂ; ನೃತ್ಯ ಸಂಗೀತ, ಕಲೆ, ಆಟ ಇವು ಕ್ರಿಯಾತ್ಮಕದಲ್ಲೂ, ಆಚಾರ, ವೈದ್ಯ, ನಂಬಿಕೆ ಇವು ವೈಜ್ಞಾನಿಕದಲ್ಲೂ, ಒಗಟು ಒಡಪು, ಗಾದೆ, ಗಣಿತ, ಭಾಷಾ ಚಮತ್ಕಾರಗಳು ಭಾಷಿಕ ಬಗೆಯಲ್ಲಿ ಹೇಗೆ ಮೂಡಿ ಬಂದಿವೆ. ಬೀದರ ತಾಲೂಕಿನ ಭಾಷಾ ಚಮತ್ಕಾರಗಳನ್ನು ಸ್ಥಳೀಯ ಸೊಗಡಿನ ಹಿನ್ನೆಲೆಯಲ್ಲಿ ಹದಿಮೂರು ಪ್ರಕಾರಗಳಲ್ಲಿ · ಹೇಗೆ ವಿಂಗಡಿಸಬಹುದಾಗಿದೆ. ಜನಪದದ ಅನೇಕ ಪ್ರಕಾರಗಳಂತೆ ಭಾಷಾ ಚಮತ್ಕಾರಗಳ ಕೊಡುಗೆ ಹೇಗೆ ವೈವಿಧ್ಯಮಯವಾಗಿದೆ. ಈ ಪ್ರಕಾರವನ್ನು ಅಲಕ್ಷಿತ ಜನಪದ ಪ್ರಕಾರವೆಂದು ಕರೆಯಲು ಏಕೆ ಸಾಧ್ಯವಿಲ್ಲ. ಸಾಮಾನ್ಯ ಹಳ್ಳಿಗರಿಗಿಂತ ತಕ್ಕ ಮಟ್ಟಿನ ಅಕ್ಷರ ಜ್ಞಾನವುಳ್ಳ ವ್ಯಕ್ತಿಗಳಿಂದ ಭಾಷೆ ಚಮತ್ಕಾರಗಳ ಕೊಡುಗೆ ಯಾವ ರೀತಿಯದು ಎಂಬುದನ್ನು ಉದಾಹರಣೆ ಸಹಿತವಾಗಿ ವಿವರಿಸಲಾಗಿದೆ.

ಅಧ್ಯಾಯ ಒಂಭತ್ತು 'ಸಮಾರೋಪದಲ್ಲಿ ಒಟ್ಟು ಅಧ್ಯಯನಕ್ಕೆ ಸಂಬಂಧಪಟ್ಟಂತೆ ಫಲಿತಗಳ ಕುರಿತು ಚರ್ಚಿಸಲಾಗಿದೆ. ಗ್ರಂಥಋಣ, ವಕ್ತಾರರ ವಿವರಗಳನ್ನು ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

1.3 ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಬೀದರ ತಾಲೂಕಿನ ಜಾನಪದ ಅನ್ವೇಷಣೆ ಎಂಬ ವಿಷಯವನ್ನು ಡಾಕ್ಟರೇಟ್ ಪದವಿ ಅಧ್ಯಯಕ್ಕಾಗಿ ಆಯ್ದುಕೊಂಡು ಈ ಕೆಳಗಿನಂತೆ ಉದ್ದೇಶವನ್ನು ಹೊಂದಲಾಗಿದೆ.

1. ಬೀದರ ತಾಲೂಕ ಕರ್ನಾಟಕದ ರಾಜ್ಯದ ಗಡಿ ಅಂಚಿನಲ್ಲಿದೆ. ಒಂದಡೆ ತೆಲಂಗಾಣ ರಾಜ್ಯ ಮತ್ತೊಂದೆಡೆ ಮಹಾರಾಷ್ಟ್ರದ ಗಡಿಯಲ್ಲಿ ಬರುವ ಬೀದರ ಜಿಲ್ಲೆಯ ಔರಾದ ತಾಲೂಕು ಬರುತ್ತದೆ. ಬೀದರ ತಾಲೂಕಿಗೆ ಸುತ್ತುವರೆದ ತಾಲೂಕಗಳೆಂದರೆ ಭಾಲ್ಕಿ, ಔರಾದ ಮತ್ತು ಹುಮನಾಬಾದ ತಾಲೂಕಗಳು. ಇಲ್ಲಿ ಸಮ್ಮಿಶ್ರ ಸಂಸ್ಕೃತಿ ಎದ್ದು ಕಾಣುತ್ತದೆ. ಈ ಬೀದರ ತಾಲೂಕಿನ ಸಾಂಸ್ಕೃತಿಕ ವೈವಿಧ್ಯತೆಯನ್ನು ಗುರುತಿಸುವುದು.
2. ಬೀದರ ಜಿಲ್ಲೆಯ ಜಾನಪದ ಸಾಹಿತ್ಯ, ಸಂಸ್ಕೃತಿ ಕುರಿತು ಅಧ್ಯಯನಗಳು ನಡೆದಿವೆ ಆದರೆ ಬೆಳಕಿಗೆ ಬಾರದೆ ಇರುವ ವಿಷಯಗಳನ್ನು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳುವುದು.
3. ಜನಪದ ಕೃಷಿಕ ಮತ್ತು ಕೃಷಿ ಉಪಕರಣಗಳ ಗ್ರಹಿಕೆಗಳೇನು? ಎನ್ನುವುದನ್ನು ಹೇಳುತ್ತ ಅವರ ಬದುಕಿನಲ್ಲಿ ಯಾವ ಬಗೆಯ ಸ್ಥಾನಮಾನ ಇವೆ ಎನ್ನುವುದನ್ನು ತಿಳಿಸುವುದು.
4. ಬೀದರ ತಾಲೂಕಿನ ಜನಪದ ಚಿತ್ತಾರಗಳು ಕುರಿತು ಅಧ್ಯಯನ ನಡೆದಿರುವುದಿಲ್ಲ. ಸಮುದಾಯದಲ್ಲಿ ಅವುಗಳ ಮಹತ್ವ ಮತ್ತು ಕೌಶಲ್ಯಗಳ ಪರಿಯನ್ನು ಅರಿಯುವುದು.

5. ಬೀದರ ತಾಲೂಕಿನಲ್ಲಿ ಕನ್ನಡ, ಮರಾಠಿ, ಉರ್ದು ಮತ್ತು ತೆಲಗು ಭಾಷೆಯಲ್ಲಿ ಮಾತನಾಡುವ ಜನರಿದ್ದಾರೆ. ಅಲ್ಲಿನ ಜನಪದ ಕುಣಿತಗಳು ಹೇಗೆ ವಿಭಿನ್ನತೆಯನ್ನು ಪಡೆದುಕೊಂಡಿವೆ. ಎಂಬುದನ್ನು ಗಮನಿಸುವುದು.
6. ಬೀದರ ತಾಲೂಕು ದೇಶಿ ಕ್ರೀಡೆಗಳ ತೌರೂರು ಎನ್ನಬಹುದು. ಆಧುನಿಕ ಜಗತ್ತಿನಲ್ಲಿ ಈ ದೇಶಿ ಕ್ರೀಡೆಗಳು ನಶಿಸಿ ಹೋಗುವ ಅಂಚಿನಲ್ಲಿದ್ದೇವೆ. ಅವುಗಳಲ್ಲಿ ಅಡಗಿರುವ ಮಹತ್ವವನ್ನು ಎತ್ತಿಹಿಡಿಯುವ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.
7. ಬೀದರ ತಾಲೂಕಿನಲ್ಲಿ ಕಂಡು ಬರುವ ವಿವಿಧ ಪ್ರಕಾರದ ಉಡುಗೆ ತೊಡುಗೆಗಳನ್ನು ಗುರುತಿಸಿಕೊಂಡು ಅದರ ಮಹತ್ವವನ್ನು ಅಧ್ಯಯನಕ್ಕೆ ಒಳಪಡಿಸುವುದು. ಸತ್ವಯುತವಾದ ಅಂಶಗಳನ್ನು ಸಂಶೋಧನಾ ಅಧ್ಯಯನದಲ್ಲಿ ಗುರುತಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.
8. ಕರ್ನಾಟಕದ ಗಡಿನಾಡ ಭಾಗವಾಗಿರುವ ಬೀದರ ತಾಲೂಕಿನ ಜಾನಪದದ ಮೇಲೆ ಅನ್ಯ ಭಾಷೆಯ ಪ್ರಭಾವವು ಹೆಚ್ಚಾಗಿ ಕಂಡುಬರುತ್ತದೆ. ಹೀಗಾಗಿ ಈ ತಾಲೂಕಿನ ಭಾಷಾ ಚಮತ್ಕಾರಗಳು ಹೇಗೆ ಬಳಕೆಗೊಂಡಿವೆ. ಇತರೆ ಭಾಷೆಗಳ ಜೊತೆಗೆ ಸ್ಥಳೀಯ ಭಾಷೆಯ ಸೊಗಡು (ಕನ್ನಡ) ಹೇಗೆ ಉಳಸಿಕೊಂಡು ಮತ್ತು ಬಳಸಿಕೊಂಡು ಜನಪದರು ಬಂದಿರುತ್ತಾರೆ. ಎಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.
9. ಬೀದರ ಜಿಲ್ಲೆಯಲ್ಲಿ ಜನಪದ ಹಾಡುಗಳ ಕುರಿತು ಅಧ್ಯಯನಗಳು ನಡೆದಿವೆ. ಪುಸ್ತಕಗಳು ಪ್ರಕಟಗೊಂಡಿವೆ. ಆದರೆ ಶಿಸು ಪ್ರಾಸಗಳ ಕುರಿತು ಸಂಶೋಧನಾಧ್ಯಯನ ಕಡಿಮೆ ಎಂದೇ ಹೇಳಬೇಕು. ಶಿಶು ಪ್ರಾಸಗಳು ಅನಾದಿ ಕಾಲದಿಂದಲೂ ಬೆಳೆದು ಬಂದಿರುವ ಕಾರಣ ಅವುಗಳ ಮಹತ್ವ ತಿಳಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ಇಂತಹ ಮೌಖಿಕ ಜಾನಪದವನ್ನು ಅಧ್ಯಯನ ಮಾಡುವ ಮೂಲಕವಾಗಿ ಈ ಶಿಸುಪ್ರಾಸಗಳ ಮೌಲ್ಯವನ್ನು ಆಧುನಿಕ ಜೀವನದೊಂದಿಗೆ. ಮುಖಾಮುಖಿಯಾಗಿಸುವ ಹಂಬಲದಿಂದಾಗಿ ಬೀದರ ತಾಲೂಕಿನ ಜಾನಪದ ಅನ್ವೇಷಣೆ ವಿಷಯವನ್ನು ಆಯ್ದುಕೊಳ್ಳಲಾಗಿದೆ.
10. ಜಾನಪದ ಸೊಗಡು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಈ ಅಂಶವನ್ನು ಹಿನ್ನಲೆಯಾಗಿಟ್ಟುಕೊಂಡು ಬೀದರ ತಾಲೂಕಿನ ಜಾನಪದ ಉಳಿದ ತಾಲೂಕು ಮತ್ತು ಜಿಲ್ಲೆಕ್ಕಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ಗುರುತಿಸುವ ಉದ್ದೇಶವನ್ನು ಈ ಮಹಾಪ್ರಬಂಧವು ಹೊಂದಿರುತ್ತದೆ.
11. ದಾಖಲಿಸಲ್ಪಟ್ಟ ಜಾನಪದ ಸಂಬಂಧಿ ಮೌಖಿಕ ಪಠ್ಯಗಳ ವಿವರಗಳಿಗೂ ಮತ್ತು ಈ ಹೊತ್ತಿನ ವಾಸ್ತವದ ನಡುವೆ ಸಂಬಂಧಗಳಿವೆಯೇ? ಅಥವಾ ವೈರುಧ್ಯಗಳಿವೆಯೇ? ಎಂಬುದನ್ನು ಪರಿಶೀಲಿಸುವುದು.
12. ಕರ್ನಾಟಕದಂಥ ಬಹು ಭೌಗೋಳಿಕತೆಯ ವಾತವರಣ, ಉಡುಗೆ ತೊಡುಗೆ, ಊಟ ಉಪಚಾರ, ಆಚರಣೆ ಸಂಪ್ರದಾಯಗಳು, ಭಾಷೆ-ಉಪಭಾಷೆ ವಿಭಿನ್ನವಾಗಿರುತ್ತವೆ. ಆಯಾ ಜಿಲ್ಲೆ ಮತ್ತು ತಾಲೂಕ ಗುಣ ವಿಶಿಷ್ಟವಾಗಿರುತ್ತದೆ. ಸಾಂಸ್ಕೃತಿಕ ಬದುಕು ಬದಲಾವಣೆಯ

ಕ್ರಿಯೆಯನ್ನು ಆವರಿಸಿರುತ್ತದೆ. ಇಂಥ ಹತ್ತು ಹಲವು ಕಾರಣಕ್ಕಾಗಿ ಸಂಶೋಧನೆಯ ವಿಷಯ ಬೀದರ ತಾಲೂಕಿನ ಜಾನಪದ ಅನ್ವೇಷಣೆ, ಕುರಿತಾಗಿರುತ್ತದೆ.

ಪ್ರಸ್ತುತ ಅಧ್ಯಯನವು ಬೀದರ ತಾಲೂಕಿಗೆ ಕೇಂದ್ರವಾಗಿರಿಸಿಕೊಂಡಿದೆ. ಅಧ್ಯಯನದ ಸ್ಪಷ್ಟತೆಗಾಗಿ ಅಧ್ಯಯನದ ವ್ಯಾಪ್ತಿಯನ್ನು ಬೀದರ ಜಿಲ್ಲೆಯ ಬೀದರ ತಾಲೂಕಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ಅಧ್ಯಯನಕ್ಕೆ ರೂಪಿಸಿಕೊಂಡ ಕ್ಷೇತ್ರಾಧ್ಯಯನವು ಬೀದರ ತಾಲೂಕಿನ ಪ್ರಮುಖ ಹಳ್ಳಿಗಳನ್ನು ಮತ್ತು ಹೋಬಳಿಗಳನ್ನು ಒಳಗೊಂಡಿದೆ. ಅಲ್ಲದೆ ಸಾರ್ವತ್ರಿಕ ನೆಲೆಯಲ್ಲಿ ವಿಚಾರಗಳನ್ನು ವಿಸ್ತರಿಸುವ ಉದ್ದೇಶವಿರುವುದರಿಂದ ಇತರ ಸ್ಥಳದ ಜಾನಪದಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ಅಧ್ಯಯನವು ಕ್ಷೇತ್ರಾಧಾರಿತ ಮಾಹಿತಿಯನ್ನು ಆಧರಿಸಿದೆ. ಅಲ್ಲದೆ ಈಗಾಗಲೇ ಸಂಗ್ರಹಿತವಾದ ಜನಪದ ಸಂಬಂಧಿಸಿದ ಸಾಹಿತ್ಯವನ್ನು ಕೆಲವು ಆಚರಣೆಗೆ ಸಂಬಂಧಿಸಿದ ಮಾಹಿತಿಗಳನ್ನು ಮಹಾಪ್ರಬಂಧದಲ್ಲಿ ಬಳಸಿಕೊಂಡಿದೆ. ಅಲ್ಲದೆ ಸಂಶೋಧನಾಧ್ಯಯನಕ್ಕೆ ಪೂರಕವಾಗುವಂಥ ಲೇಖನಗಳನ್ನು, ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು, ಸ್ಮರಣ ಸಂಚಿಕೆಗಳನ್ನು ಅಧ್ಯಯನದ ಸಂದರ್ಭದಲ್ಲಿ ಬಳಸಿಕೊಳ್ಳಲಾಗಿದೆ. ಒಟ್ಟಿನಲ್ಲಿ ಮಹಾಪ್ರಬಂಧ ಕಟ್ಟುವ ಸಂದರ್ಭದಲ್ಲಿ ಲಿಖಿತ ಅಲಿಖಿತ, ಪ್ರಕಟಿತ ಅಪ್ರಕಟಿತ, ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ.

1.4 ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಜಾನಪದ ಕ್ಷೇತ್ರದಲ್ಲಿ ಜಾನಪದ ಕುರಿತಂತೆ ಮೊಟ್ಟಮೊದಲಿಗೆ ಅಧ್ಯಯನ ಮಾಡಿದವರಲ್ಲಿ ಕ್ಯಾತನಹಳ್ಳಿ ರಾಮಣ್ಣನವರು. ಬೀದರ ಜಿಲ್ಲೆಯ ಜನಪದ ಕಥೆಗಳು, ಬೀದರ ಜಿಲ್ಲೆಯ ಜನಪದ ಗೀತೆಗಳು ಸಂಗ್ರಹಿಸಿ ಪುಸ್ತಕ ಹೊರತಂದಿದ್ದಾರೆ. ತದನಂತರದಲ್ಲಿ ಎಚ್.ಎಸ್. ಸಿದ್ಧಗಂಗಪ್ಪ ಅವರ ಸಂಪಾದನೆಯಲ್ಲಿ ಬೀದರ ಜಿಲ್ಲೆಯ ಜನಪದ ಕಥೆಗಳು, ಮತ್ತು ಬೀದರ ಜಿಲ್ಲೆಯ ಜನಪದ ಗೀತೆಗಳು ಎಂಬೆರಡು ಪುಸ್ತಕಗಳು ಪ್ರಕಟಗೊಂಡಿವೆ. ಈ ಕೃತಿಗಳು ಜಾನಪದ ಅಧ್ಯಯನ ಕ್ಷೇತ್ರಕ್ಕೆ ಹೊಸ ಮೈಲಿಗಲ್ಲನ್ನು ಸೃಷ್ಟಿಸಿತು ಎನ್ನಬಹುದು.

ಡಾ. ಜಗನ್ನಾಥ ಹೆಬ್ಬಾಳೆ ಅವರು ಸಂಗ್ರಹಿಸಿದ ಬೀದರ ಜಿಲ್ಲೆಯ ಬುಲಾಯಿ ಹಾಡುಗಳು ಸತ್ತವರ ಹಾಡುಗಳು, ಧರಿನಾಡಿನ ಜನಪದ ಹಾಡುಗಳು ಪುಸ್ತಕ ಜನಪದ ಸಂಸ್ಕೃತಿ ಮತ್ತು ಸಂಪ್ರದಾಯಗಳು ಇವುಗಳಿಗೆ ಸಂಬಂಧ ಕಲ್ಪಿಸಿ ವಿಷಯ ವಿಸ್ತಾರಕ್ಕೆ ತಳಹದಿಯನ್ನು ರೂಪಿಸಿಕೊಟ್ಟಿವೆ. ಬುಲಾಯಿ ಪದ ಹೇಗೆ ಬಳಕೆಗೆ ಬಂತು ಎಂಬುದನ್ನು ವಿವರಿಸಿದ್ದಾರೆ.

ದೇಶಾಂಶ ಹುಡಗಿ ಮತ್ತು ಚಂದ್ರಪ್ಪ ಹೆಬ್ಬಾಳಕರ ಸಂಪಾದನೆಯಲ್ಲಿ ಬೀದರ ಜಿಲ್ಲೆಯ ಜಾನಪದ ಸೊಗಡು ಪುಸ್ತಕ ಹೊರಬಂದಿದೆ. ಇದರಲ್ಲಿ ವಿವಿಧ ಸಂಪ್ರದಾಯ ಹಾಡುಗಳ ಕುರಿತು ವಿಶೇಷ ಗಮನಹರಿಸಲಾಗಿದೆ. ಅಲ್ಲದೆ ಡಾ. ಜಗನ್ನಾಥ ಹೆಬ್ಬಾಳೆ ಅವರು 'ಬೀದರ ಜಿಲ್ಲೆಯ

ನಾಟಿವೈದ್ಯ ಪದ್ಧತಿ ಪುಸ್ತಕದಲ್ಲಿ ವಿವಿಧ ರೋಗರುಜಿನಗಳಿಗೆ ಯಾವ ಬಗೆಯ ನಾಟಿವೈದ್ಯ ಸಿದ್ಧಪಡಿಸಿ ಕೊಡುತ್ತಾರೆಂಬುದರ ಕುರಿತು. ಪರಿಚಯಿಸಿದ್ದಾರೆ ಜೊತೆಗೆ ಪಶುವೈದ್ಯದ ಮಾಹಿತಿಯು ನೀಡಿರುತ್ತಾರೆ.

ಡಾ. ಮಹಾದೇವಿ ಮೂಲಗೆ ಅವರು ಬೀದರ ಜಿಲ್ಲೆಯ ದೇವರೋತ್ಸವಗಳು ಕುರಿತು ಅಧ್ಯಯನ ಮಾಡಿ ಅವುಗಳ ವೈಶಿಷ್ಟ್ಯತೆಯನ್ನು ಕುರಿತು ವಿವರವಾಗಿ ಹೇಳಿರುತ್ತಾರೆ. ಬೀದರ ಜಿಲ್ಲೆಯ ಜನಪದ ಸಾಹಿತ್ಯ ಕುರಿತು ಡಾ. ಧನಲಕ್ಷ್ಮಿ ಪಾಟೀಲರು ಸಂಶೋಧನಾಧ್ಯಯನ ಮಾಡಿ ಕನ್ನಡ ವಿಶ್ವವಿದ್ಯಾಲಯದಿಂದ ಡಾಕ್ಟರೇಟ ಪದವಿ ಪಡೆದಿರುತ್ತಾರೆ. ಬೀದರ ಜಿಲ್ಲೆಯ ಜನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ಸಾಹಿತ್ಯಕ ಮತ್ತು ಸಂಸ್ಕೃತಿಯ ಹರವುಗಳ ವಿಶ್ಲೇಷಣೆ ಮಾಡಿರುತ್ತಾರೆ.

ಜಗನ್ನಾಥ ಹೆಬ್ಬಾಳೆ ಅವರ 'ಹೈದ್ರಾಬಾದ ಕರ್ನಾಟಕದ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ' ವಿಷಯದ ಕುರಿತು ಪಿಎಚ್.ಡಿ. ಪದವಿ ಪಡೆದಿರುತ್ತಾರೆ. ಈ ಸಂಶೋಧನ ಮಹಾಪ್ರಬಂಧದಲ್ಲಿ ಜಾತ್ರೆಗಳು ಭಾವೈಕ್ಯತೆಯ ಕೇಂದ್ರಗಳಾಗುತ್ತವೆ. ಎಂಬುದನ್ನು ತಿಳಿಸಿರುತ್ತಾರೆ.

ಮಹಿಳಾ ಜಾನಪದ ಹಾಡುಗಳು ಒಂದು ಅಧ್ಯಯನ (ಬೀದರ ಜಿಲ್ಲೆಯನ್ನು ಅನುಲಕ್ಷಿಸಿ) ವಿಷಯದ ಕುರಿತು ಸಿರ್ಸೆಕಮಲಾ ಮಲ್ಲಿಕಾರ್ಜುನಪ್ಪ ಅವರು ಸಂಶೋಧನಾಧ್ಯಯನ ಮಾಡಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಮಹಾಪ್ರಬಂಧವನ್ನು ಸಾದರಪಡಿಸಿದ್ದಾರೆ. ಡಾ. ಜಗನ್ನಾಥ ಹೆಬ್ಬಾಳೆ ಅವರು ಮಾರ್ಗದರ್ಶಕರಾಗಿರುತ್ತಾರೆ.

ಡಾ. ಶ್ರೀಶೈಲ ನಾಗರಾಳ ಅವರ ಮಾರ್ಗದರ್ಶನದಲ್ಲಿ ಬೀದರ ಜಿಲ್ಲೆಯ ಜನಪದ ಆಹಾರ ಸಂಸ್ಕೃತಿ ವಿಷಯದ ಕುರಿತು ಸುರೇಖಾ ಶಿವರಾಜ ಅವರು ಸಂಶೋಧನಾಧ್ಯಯನ ಕೈಗೊಂಡು ಪಿಎಚ್.ಡಿ. ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಇಲ್ಲಿ ಆಹಾರ ಸಂಸ್ಕೃತಿಯ ಮಹತ್ವವನ್ನು ಚರ್ಚಿಸಲಾಗಿದೆ.

ಧರಿ ಜಾನಪದ ಕುರಿತು ಡಾ. ಜಗನ್ನಾಥ ಹೆಬ್ಬಾಳೆ ಅವರು ಪುಸ್ತಕವೊಂದನ್ನು ಹೊರತಂದಿದ್ದಾರೆ. ಬೀದರ ಜಿಲ್ಲೆ ಮತ್ತು ತಾಲೂಕಿನ ಜಾನಪದ ಸಾಹಿತ್ಯ ಕುರಿತು ವಿಮರ್ಶಾತ್ಮಕ ಲೇಖನಗಳಿವೆ. ಬಹುತೇಕ ಲೇಖನಗಳನ್ನು ಈ ಕೃತಿ ಒಳಗೊಂಡಿರುವುದರಿಂದ ಒಂದರ್ಥದಲ್ಲಿ ಇದು ಮೌಖಿಕ ಸಾಹಿತ್ಯದ ದಾಖಲೆಯೂ ಆಗಿದೆ.

'ಬೀದರ ಜಿಲ್ಲೆಯ ಕೋಲಾಟಗಳು' ವಿಷಯದ ಕುರಿತು ಸೋಮನಾಥ ನುಚ್ಚಾ ಸಂಶೋಧನಾಧ್ಯಯನ ಮಾಡಿ ಪಿಎಚ್.ಡಿ. ಪದವಿ ಪಡೆದಿರುತ್ತಾರೆ. ಈ ಮಹಾಪ್ರಬಂಧದಲ್ಲಿ 48 ಪ್ರಕಾರದ ಕೋಲಾಟದ ಪ್ರಕಾರಗಳನ್ನು ಗುರುತಿಸಿದ್ದಾರೆ. ಕೋಲಾಟದ ಸಂದರ್ಭ ಮತ್ತು ಹಾಡುಗಳ ಕುರಿತು ಚರ್ಚಿಸಿದ್ದಾರೆ.

ಅರುಣಾ ಸುಲ್ತಾನಪೂರೆ ಅವರು 'ಬುಲಾಯಿ ಹಾಡುಗಳ ಸಾಂಸ್ಕೃತಿಕ ಅಧ್ಯಯನ' ಬೀದರ ಜಿಲ್ಲೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿ ಮಹಾಪ್ರಬಂಧ ಬರೆದು ಡಾಕ್ಟರೇಟ್ ಪದವಿ ಪಡೆದಿರುತ್ತಾರೆ. ಬುಲಾಯಿ ಹಾಡುಗಳು ಹೇಗೆ ವಿಭಿನ್ನವಾಗಿವೆ. ನಾಗರ ಪಂಚಮಿ ಸಂದರ್ಭದಲ್ಲಿ ಏಕೆ ಹಾಡುತ್ತಾರೆ. ಎನ್ನುವುದನ್ನು ವಿವರಿಸಿದ್ದಾರೆ.

'ಜನಪದ ಹಾಡುಗಳಲ್ಲಿ ಅಂಬೇಡ್ಕರ' ಇದು ವನಿತಾ ಬಿಜಾಪೂರೆ ಅವರ ಎಂ.ಫಿಲ್. ಸಂಪ್ರಬಂಧವಾಗಿದೆ. ಜನಪದರು ಅಂಬೇಡ್ಕರ ಬಾಬಾ ಅವರನ್ನು ತಮ್ಮ ಹಾಡುಗಳಲ್ಲಿ ಹೇಗೆ

ಉಲ್ಲೇಖ ಮಾಡಿರುತ್ತಾರೆಂಬುದನ್ನು ವಿಭಿನ್ನ ನೆಲೆಯಲ್ಲಿ ಗುರುತಿಸಿದ್ದಾರೆ. ಬೀದರ ಜಿಲ್ಲೆಯ ಭೂತೇರು ಒಂದು ಅಧ್ಯಯನ ಇದು ಶಿವಾಜಿ ಕಾಂಬಳೆ ಅವರ ಎಂ.ಫಿಲ್. ಸಂಪ್ರಬಂಧ. ಇದರಲ್ಲಿ ವೃತ್ತಿ ಕಲಾವಿದರಾದ ಭೂತೇರ ಜೀವನ ಪರಂಪರೆ ಮತ್ತು ಹಾಡುಗಳ ಕುರಿತು ಚರ್ಚಿಸಿದ್ದಾರೆ.

ಬೀದರ ಜಿಲ್ಲೆಯ ಕೃಷಿ ಆಚರಣೆಗಳು ಇದು ಸುರೇಖಾ ಅಂಬಾದಾಸ ಅವರ ಸಂಶೋಧನಾ ಕಿರು ಪ್ರಬಂಧ ಇದಕ್ಕೆ ಕನ್ನಡ ವಿಶ್ವವಿದ್ಯಾಲಯವು ಎಂ.ಫಿಲ್. ಪದವಿ ನೀಡಿದೆ. ಜನಪದರು ಕೃಷಿ ಸಂಬಂಧಿ ಆಚರಣೆಗಳು ಹೇಗೆ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆಂಬುದನ್ನು ಪ್ರಸ್ತಾಪಿಸಿದ್ದಾರೆ.

ಈ ರೀತಿಯಾಗಿ ಬೀದರ ಜಿಲ್ಲೆಯ ಜನಪದ ಸಾಹಿತ್ಯ ಕುರಿತು ಅಧ್ಯಯನಗಳು ನಡೆದಿವೆ. ವೈಚಾರಿಕ ನೆಲೆಯಲ್ಲಿ ಬಂದ ಅಧ್ಯಯನಗಳು ಕಡಿಮೆ. ಒಟ್ಟಿನಲ್ಲಿ ಇಲ್ಲಿಯವರೆಗೆ ಪ್ರಕಟಗೊಂಡ ಕೃತಿಗಳು ಮತ್ತು ಸಂಶೋಧನಾಧ್ಯಯನಗಳು ಜಾನಪದದಲ್ಲಿ ನಡೆದ ಅಧ್ಯಯನಗಿಂತ ವಿಶಿಷ್ಟ ಕೃತಿಗಳಾಗಿವೆ. ಜನಪದ ಸಾಹಿತ್ಯ ಅಧ್ಯಯನಕ್ಕೆ ಬೀದರ ಜಿಲ್ಲೆಯ ಕೊಡುಗೆ ಮಹತ್ವಪೂರ್ಣ ಎಂದೇ ಹೇಳಬೇಕು. ಜೊತೆಗೆ ದೇಶಿ ಸಮ್ಮೇಳನ, ಜಾನಪದ ಉತ್ಸವ, ಪ್ರಪ್ರಥಮ ಅಖಿಲ ಭಾರತ ಜಾನಪದ ಸಮ್ಮೇಳನ, ಜಾನಪದ ಸಂಭ್ರಮ, ರಾಷ್ಟ್ರೀಯ ಜನಪದ ಸಮ್ಮೇಳನ, ಅಖಿಲ ಭಾರತ ಜನಪದ ಹಾಡುಗಳ ಉತ್ಸವ, ಇಂಥ ನೂರಾರು ಸಮಾರಂಭಗಳು ಬೀದರ ನಗರದಲ್ಲಿ ನಡೆದಿವೆ. ಪ್ರಮುಖ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸಿ ಆನಂದವನ್ನು ಅನುಭವಿಸಿದ್ದೇನೆ. ಜನಪದ ಸಾಹಿತ್ಯ ಸಂಸ್ಕೃತಿಯ ಸಂವರ್ಧನೆ ಮತ್ತು ಸಂರಕ್ಷಣೆ ಬೀದರ ಜಿಲ್ಲೆ ತನ್ನದೇ ಆದ ಕಾಣಿಕೆಯನ್ನು ನೀಡುತ್ತ ಬಂದಿದೆ

1.5 ಅಧ್ಯಯನದ ವೈಧಾನಿಕತೆ

ಜಾನಪದ ಅಧ್ಯಯನವು ಶಾಸ್ತ್ರೀಯ ನೆಲೆಯಲ್ಲಿ ನಡೆದಿದೆ. ಆದ್ದರಿಂದ ಹತ್ತಾರು ಶಾಸ್ತ್ರಗಳಲ್ಲಿ ಜಾನಪದ ಶಾಸ್ತ್ರವೂ ಒಂದು ಎನ್ನಬಹುದು. ಜನಪದದಲ್ಲಿ ಅಧ್ಯಯನಗಳು ಹೆಚ್ಚು ಸಮರ್ಪಕವಾಗಿ ನಡೆಯುತ್ತಿವೆ. ಜನಪದ ಸಾಹಿತ್ಯದ ಕುರಿತಾಗಿ ಕಾಳಜಿ, ಜನಪ್ರಿಯತೆ, ಸಂಶೋಧನಾಧ್ಯಯನದ ಆಸಕ್ತಿಯನ್ನು ಹೆಚ್ಚಿಸಿದೆ. ಈ ಹಿನ್ನೆಲೆಯಲ್ಲಿ ನನ್ನ ಸಂಶೋಧನಾಧ್ಯಯನವು ಈ ಕೆಳಕಂಡಂತೆ ಹಲವು ವಿಧಾನಗಳನ್ನು ಅಳವಡಿಸಿಕೊಂಡಿದ್ದೇನೆ. ಅವು ಈ ರೀತಿಯಾಗಿವೆ.

1. ಪ್ರಶ್ನಾವಳಿ ವಿಧಾನ
2. ಅವಲೋಕನ ವಿಧಾನ,
3. ಕ್ಷೇತ್ರಕಾರ್ಯ ವಿಧಾನ
4. ಗುಂಪುಚರ್ಚೆ ಹಾಗೂ ಸಂದರ್ಶನ ವಿಧಾನ
5. ಆಕರ ಗ್ರಂಥಗಳ ಅಧ್ಯಯನ ವಿಧಾನ

ಬೀದರ ತಾಲೂಕಿನ ಜಾನಪದ ಅನ್ವೇಷಣೆ ನನ್ನ ಸಂಶೋಧನಾಧ್ಯಯನಕ್ಕೆ ಈ ಆರು ಅಧ್ಯಯನ ವಿಧಾನಗಳು ಹೆಚ್ಚು ಉಪಯುಕ್ತವಾಗಿವೆ ಎಂಬುದು ತಿಳುವಳಿಕೆಯಾಗಿದೆ.

1) ಪ್ರಶ್ನಾವಳಿ ವಿಧಾನ

ನನ್ನ ಮಹಾಪ್ರಬಂಧದ ಅಧ್ಯಯನಕ್ಕೆ ಪೂರಕವಾಗಿ ಜನಪದ ಸಮುದಾಯದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಗ್ರಹಿಸುವ ದಿಶೆಯಲ್ಲಿ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು ಗ್ರಾಮೀಣ ವಲಯದಲ್ಲಿರುವ ಕುಟುಂಬದ ಮುಖ್ಯಸ್ಥರು, ಸಮಾಜದ ಮುಖಂಡರು, ಹಾಗೂ ಸ್ತ್ರೀಯರಿಂದ ಮಾಹಿತಿಯನ್ನು ಪಡೆದುಕೊಂಡಿದ್ದೇನೆ.

2) ಅವಲೋಕನ ವಿಧಾನ

ಸಂಶೋಧನಾಧ್ಯಯ ಮಾಡುವಾಗ ಮಹಾಪ್ರಬಂಧದಲ್ಲಿ ವಸ್ತು ನಿಷ್ಠತೆ ಮತ್ತು ಖಚಿತತೆ ಇರಬೇಕೆಂಬ ಆಶಯವಿದೆ. ಸಂಶೋಧನೆ ಮಾಡುವಾಗ ಕೇವಲ ಮಾಹಿತಿಯನ್ನು ನೀಡಬಾರದು. ಮಹಾಪ್ರಬಂಧದಲ್ಲಿ ಸಂಶೋಧನೆಯ ವಿಷಯಕ್ಕನುಗುಣವಾಗಿ ವಿಶ್ಲೇಷಣೆ ಮಾಡಬೇಕು. ಸಂಶೋಧನೆ ಮಾಡುವಾಗ, ಕ್ಷೇತ್ರ ಕಾರ್ಯಕ್ಕೆ ಹೋದಾಗ, ಆಕರ ಗ್ರಂಥಗಳನ್ನು ಅಧ್ಯಯನ ಮಾಡುವಾಗ ಅವುಗಳಿಂದ ಸಂಗ್ರಹಿಸಿದ ವಿಷಯಗಳು ಸತ್ಯಾಸತ್ಯತೆಯ ದೃಷ್ಟಿಯಿಂದ ಪರಿಶೀಲಿಸುವುದು. ಆಗಿರುತ್ತದೆ. ಇಂಥ ವಿಧಾನವನ್ನು ನನ್ನ ಅಧ್ಯಯನದ ಸಂದರ್ಭದಲ್ಲಿ ಅನುಸರಿಸಿಕೊಳ್ಳಲಾಗಿದೆ.

3) ಕ್ಷೇತ್ರಕಾರ್ಯ ವಿಧಾನ

ನನ್ನ ಅಧ್ಯಯನವು ಬಹುಮುಖ್ಯವಾಗಿ ಕ್ಷೇತ್ರ ಕಾರ್ಯಧಾರಿತವಾಗಿದೆ. ಅದರಲ್ಲಿ ಜನಪದ ಕಲೆಗಳು, ಕೃಷಿ ಉಪಕರಣಗಳು, ಜನಪದ ಚಿತ್ತಾರಗಳು, ದೇಶಿ ಕ್ರೀಡೆಗಳು, ಉಡುಗೆ ತೊಡುಗೆಗಳು, ಶಿಶು ಪ್ರಾಸಗಳು, ಭಾಷಾ ಚಮತ್ಕಾರಗಳು, ಮುಂತಾದ ವಿಷಯಗಳು ನನ್ನ ಮಹಾಪ್ರಬಂಧದ ಜೀವಾಳವಾಗಿರುವುದರಿಂದ ವಿಷಯಕ್ಕೆ ಸಂಬಂಧಪಟ್ಟಂತೆ ಬೀದರ ತಾಲೂಕಿನಲ್ಲಿ ಬರುವ ಪ್ರಮುಖ ಗ್ರಾಮಗಳಿಗೆ ವಲಸಿ ನೀಡಿ ಅಲ್ಲಿನ ಹಿರಿಕರಿಂದ ಉಪಯುಕ್ತ ಸಲಹೆ ಸೂಚನೆ ಹಾಗೂ ಮಾಹಿತಿಯ ವಿವರಗಳನ್ನು ಕಲೆ ಹಾಕಿರುತ್ತೇನೆ. ತದನಂತರದಲ್ಲಿ ಖಚಿತತೆಯನ್ನು ಪರ್ಯಾಲೋಚನೆ ಮಾಡಿ ಮಹಾಪ್ರಬಂಧದ ಅಂತಿಮ ಬರಹವನ್ನು ಪೂರ್ಣಗೊಳಿಸಿದ್ದೇನೆ. ಬೀದರ ತಾಲೂಕಿನಲ್ಲಿ 150ಕ್ಕೂ ಹೆಚ್ಚು ಹಳ್ಳಿಗಳಿವೆ ನಾಲ್ಕೂ ಹೋಬಳಿಗಳಿವೆ. ವಿವಿಧ ಜಾತಿಯ ಮತ್ತು ಧರ್ಮದ ಜನಸಮುದಾಯಗಳಿವೆ ಮಹಾಪ್ರಬಂಧದ ವಿಷಯಕ್ಕೆ ಪೂರಕವಾಗುವ ಜನಸಮುದಾಯ ಕಡೆ ಕ್ಷೇತ್ರಕಾರ್ಯ ಕೈಗೊಂಡಿರುತ್ತೇನೆ. ಅಲ್ಲಿರುವ ಗಂಡಸರು, ಹೆಂಗಸರು, ಕೂಲಿಕಾರ್ಮಿಕರು, ಕೃಷಿಕರು ಮುಂತಾದವರು ಸಹಾಯ ಮಾಡಿರುತ್ತಾರೆ. ಪ್ರಶ್ನಾವಳಿಗೆ ಸಂಬಂಧಪಟ್ಟಂತೆ ಮಾಹಿತಿ ಮತ್ತು ಅಭಿಪ್ರಾಯಗಳನ್ನು ನೀಡಿರುತ್ತಾರೆ. ಎಲ್ಲವುಗಳನ್ನು ಸಂಗ್ರಹಿಸಿ ಖಚಿತತೆಗೆ ಪೂರಕವಾಗುವಂಥ ವಿಷಯಗಳನ್ನು ವಿವರಿಸಿದ್ದೇನೆ.

4) ಗುಂಪು ಚರ್ಚೆ ಹಾಗೂ ಸಂದರ್ಶನ ವಿಧಾನ

ನನ್ನ ಮಹಾಪ್ರಬಂಧದ ವಿಷಯ ಬೀದರ ತಾಲೂಕಿನ ಜಾನಪದ ಅನ್ವೇಷಣೆಯಾಗಿರುವುದರಿಂದ ಬೀದರ ತಾಲೂಕಿನ ಪ್ರಮುಖ ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು ಅಲ್ಲಿಗೆ ಭೇಟಿ ನೀಡಿ ವ್ಯಕ್ತಿಗತವಾಗಿ ಮತ್ತು ಗುಂಪು ಚರ್ಚೆಯಲ್ಲಿ ಭಾಗವಹಿಸಿ ಸಂದರ್ಶನ ಮಾಡಿರುತ್ತೇನೆ. ಬೀದರ ತಾಲೂಕಿನ ಊರು ಕೇರಿಗಳ ಜನಜೀವನ, ಕೃಷಿ ಪದ್ಧತಿ, ಬಳಸುವ

ಉಪಕರಣಗಳು, ದೇಶಿ ಕ್ರೀಡೆಗಳು, ಶಿಶು ಪ್ರಾಸಗಳು ಜನಪದ ನೃತ್ಯಗಳು, ಜನಪದ ಭಾಷೆಯಲ್ಲಿ ಬರುವ ಚಮತ್ಕಾರಗಳು ಅದರ ಬಳಕೆ ಪದ್ಧತಿ, ಸಂದರ್ಭ ಸನ್ನಿವೇಶ, ಮೊದಲಾದ ವಿವರಗಳನ್ನು ಸಂದರ್ಶನ ಮತ್ತು ಗುಂಪು ಚರ್ಚೆಯ ಮೂಲಕ ದಾಖಲಿಸಿಕೊಳ್ಳಲಾಗಿದೆ.

5) ಆಕರ ಗ್ರಂಥಗಳ ಅಧ್ಯಯನದ ವಿಧಾನ

ಜನಪದ ಸಾಹಿತ್ಯ ಜನಪದರ ಬದುಕಿನ ಪ್ರತಿಬಿಂಬವಾಗಿದೆ. ಯಾವುದೇ ಒಂದು ವಿಷಯ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದು ಅದು ಬದುಕಿನೂದ್ಧಕ್ಕೂ ಅಳವಡಿಸಿಕೊಳ್ಳುವುದು ಆಗಿದೆ. ಅದಕ್ಕೆ ಸಾವೆಂಬುವುದು ಇಲ್ಲ. ಜನಪದರ ಜ್ಞಾನ, ಹಾಡು ಪಾಡು, ಅಭಿವ್ಯಕ್ತಿ, ಕೃಷಿ ತಂತ್ರಜ್ಞಾನ, ಜನಪದ ಭಾಷೆಯ ಸೊಗಡು ಮುಂತಾದವುಗಳನ್ನು ಮೌಖಿಕವಾಗಿ ಹೇಳಿಬಿಡುತ್ತಾರೆ. ಅದನ್ನು ನಶಿಸಿ ಹೋಗಬಾರದೆಂಬ ಸದಾಶಯದ ಹಿನ್ನೆಲೆಯಲ್ಲಿ ಅಕ್ಷರ ರೂಪ ಕೊಟ್ಟವರು. ಅಕ್ಷರ ಬಲ್ಲವರು. ಅಂಥವರಿಂದ ಜನಪದಕ್ಕೆ ಸಂಬಂಧಪಟ್ಟಂತೆ ಸಹಸ್ರಾರು ಪುಸ್ತಕಗಳ ಬೆಳಕು ಕಂಡಿದೆ ಆ ಪುಸ್ತಕಗಳಲ್ಲಿ ನನ್ನ ಅಧ್ಯಯನದ ಪರಿಧಿಗೆ ಬರುವ ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡು, ಓದಿ ಟಿಪ್ಪಣಿ ಮಾಡಿಕೊಂಡು ವಿಷಯವನ್ನು ಚರ್ಚಿಸಿದ್ದೇನೆ. ಜಾನಪದ ಎನ್ನುವುದು ಕೇವಲ ಕಥೆ, ಹಾಡು, ಗಾದೆ, ಒಗಟು, ಒಡಪು, ಒಡಬು, ಬಯಲಾಟ ಮುಂತಾದವುಗಳಿಗೆ ಸೀಮಿತ ಮಾಡಿಕೊಳ್ಳದೆ ಇನ್ನುಳಿದ ವಿಷಯಗಳ ಕುರಿತು ಹೊರಬಂದ ಆಕರ ಗ್ರಂಥಗಳ ಸಹಾಯವನ್ನು ಪಡೆಯಲಾಗಿದೆ.

1.6 ಬೀದರ ತಾಲೂಕಿನ ಐತಿಹಾಸಿಕ ಹಿನ್ನೆಲೆ

ಬೀದರ ಜಿಲ್ಲೆ ಸ್ಥಿತವಾಗಿರುವುದು ಭರತದ ಭೌಗೋಳಿಕ ದಖ್ಖನ್ನಿನ ಮಧ್ಯದಲ್ಲಿ. ಐತಿಹಾಸಿಕವಾಗಿ ಮೆರೆದ ನಾಡಿದು. ಒಂದು ರೀತಿಯಲ್ಲಿ ಸಾಂಸ್ಕೃತಿಕ ಕೂಡು ಸಂಗಮ. ಕಲ್ಯಾಣಿ ಚಾಲುಕ್ಯರ ರಾಜಧಾನಿ ಕಲ್ಯಾಣಪುರ, ಬಹಮನಿಯರ ನಂತರದ ರಾಜಧಾನಿ ಬೀದರ ಇದೇ ಜಿಲ್ಲೆಯಲ್ಲಿದ್ದವು. ಶ್ರೀ ಬಸವೇಶ್ವರರ ನೇತೃತ್ವದಲ್ಲಿ ಭಕ್ತಿ ಚಳುವಳಿ, ಸಾಮಾಜಿಕ-ಧಾರ್ಮಿಕ ಕ್ರಾಂತಿಗೆ ಚಾಲನೆ ದೊರೆತದ್ದು ಇದೇ ನೆಲದಲ್ಲಿ ಪ್ರಾಚೀನ ಕಾಲದಿಂದಲೂ ಇಲ್ಲಿಂದ ಜನ ಹಾದು ಹೋಗಿದ್ದಾರೆ. ಅನೇಕರು ಇಲ್ಲಿಯೇ ನೆಲೆಸಿದ್ದಾರೆ. ಪರಿಣಾಮವಾಗಿ ಇಲ್ಲಿಯ ಜನ ಜೀವನ ಸಮೃದ್ಧಗೊಂಡಿದೆಯಲ್ಲದೇ ತನ್ನದೇ ಆದ ವೈಶಿಷ್ಟ್ಯ ಪಡೆದಿದೆ.

ಗೋದಾವರಿ ನದಿ ಕಣಿವೆಗೆ ಈ ಜಿಲ್ಲೆಯ ಹೆಚ್ಚಿನ ಭಾಗ ಸೇರಿದೆ. ಕಾರಂಜಾ ಹಾಗೂ ಮಾಂಜರಾ ಈ ಜಿಲ್ಲೆಯ ಪ್ರಮುಖ ನದಿಗಳು. ಕಾರಂಜಾ ನದಿಗೆ ಅಡ್ಡಲಾಗಿ ಜಲಾಶಯವೊಂದು ನಿರ್ಮಾಣಗೊಂಡಿದೆ. ಈ ಎರಡು ನದಿಕಣಿವೆಗಳ ತೀರದಲ್ಲಿ ನವ ಶಿಲಾಯುಗದ ಕಾಲದಿಂದಲೂ ಜನವಸತಿ ಇದ್ದಿತೆಂಬ ಅಂಶ ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ಆದರೆ ಜನಜೀವನ ತೀರಾ ಸರಳ ಸ್ವರೂಪದ್ದಾಗಿದ್ದಿತು.

ಬೀದರ ಜಿಲ್ಲೆಯಾದ್ಯಂತ ಅನೇಕ ಕಡೆ ರಾಮಲಿಂಗೇಶ್ವರ ದೇವಾಲಯಗಳುಂಟು. ಬೀದರನ ಪಾಪನಾಶಲಿಂಗ ಅವುಗಳಲ್ಲಿ ಪ್ರಮುಖ. ಚಾಳಕಾ(ಚಾಳುಕ್ಯ) ಪುರದಲ್ಲಿ ಪ್ರಸಿದ್ಧ ಹನುಮಾನ ದೇವಾಲಯವಿದೆ. ಅಲ್ಲಿಗೆ ಸಮೀಪದ ದಿಬ್ಬದ ಮೇಲೆ ಮೂಲ ಚಾಳುಕ್ಯಮ್ಮ ದೇವಾಲಯವನ್ನು

ಇಂದಿಗೂ ಕಾಣಬಹುದಾಗಿದೆ. ಮೈಲಾರ ಪ್ರದೇಶದ ಮೈಲಾರ (ಮಹಾದೇವ) ಮಲ್ಲಣ್ಣ ದೇವಸ್ಥಾನವೂ ಪುರಾತನವಾದದ್ದೇ. ಔರಾದ (ಅಮರೇಶ್ವರವಾಡಿ)ನಲ್ಲಿ ಅಮರೇಶ್ವರ ದೇವಾಲಯ. ಔರಾದನ ಆಚೆ ಮುಂದೆ ದೇಗಲೂರು (ದೇಗುಲಗಳ ಊರು), ಬೋಧನ (ಪೋದನ-ಬಹುಧಾನ್ಯಪುರ?) ಅಶ್ಮಕ ಪ್ರದೇಶದ ರಾಜಧಾನಿಯಾಗಿದ್ದಿತು. ಮಾಂಜರಾ ಹಾಗೂ ಗೋದಾವರಿ ನದಿ ತೀರಗಳಲ್ಲಿ ಪ್ರಸಿದ್ಧ ಆಶ್ರಯಗಳಿದ್ದವು. ಒಂದು ರೀತಿಯಲ್ಲಿ ವಿದರ್ಭದೇಶ ಮತ್ತು ಕುಂತಲ ದೇಶಗಳ ಕೂಡು ಪ್ರದೇಶವಿದು.

ಬೀದರ ಪಟ್ಟಣವನ್ನು ಸುತ್ತಣ ಗ್ರಾಮಸ್ಥರು ಇಂದಿಗೂ 'ಕೋಟೆ' ಎಂದೇ ಗುರುತಿಸುತ್ತಾರೆ. ಯಾವ ಕಾಲದಿಂದ ಇಲ್ಲಿ ಕೋಟೆ ಇದ್ದಿತು ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಹನ್ನೆರಡನೇ ಹದಿಮೂರನೇ ಶತಮಾನದಲ್ಲಿ ಬೀದರ ಬಿದಿರೂರುಪುರ, ಬೆಡಣದ ಕೋಟ ಎಂದಾಗಿ ಉಲ್ಲೇಖಿತಗೊಂಡಿದೆ. ಹಳೆ ಬೀದರನಲ್ಲಿರುವ ರಾಮ ಮಂದಿರದ ಓಣಿಗೆ ತಳವಾಡಿ ಎನ್ನುತ್ತಾರೆ. ಸಿದ್ಧೀ ತಾಲಿಮ್‌ನ ಪಕ್ಕ ವನವಾಸಿ ರಾಮ ಮಂದಿರವಿದೆ. ಇವೆಲ್ಲ ಏನನ್ನು ಸೂಚಿಸುತ್ತವೆ? ಅಷ್ಟೇ ಅಲ್ಲ ಬೀದರನ ಹೊರ ವಲಯದಲ್ಲಿರುವ ಝೀರಾ ನರಸಿಂಹ ಗುಹಾಂತರ ದೇವಾಲಯ, ಶುಕ್ಲತೀರ್ಥ, ಅಗ್ರಹಾರದಲ್ಲಿರುವ ವಿಷ್ಣುಮಂದಿರ, ಶಾಹಗಂಜನಲ್ಲಿರುವ ಜೈನ ಮಂದಿರ, ಸೋಮವಾರ ಪೇಟೆ(ಇಂದಿನ ಲಾಡಂಕೇರಿ), ಮಂಗಳವಾರಪೇಟೆ, ಬುಧವಾರಪೇಟೆ, ಹೂಗೇರಿ ಹಾರೂರಗೇರಿ, ಕುಂಬಾರವಾಡಾ, ನಾವದಗೇರಿ ಮುಂತಾದ ಸ್ಥಾನಗಳು ತಮ್ಮೊಳಗೆ ಏನೋ ಇತಿಹಾಸವನ್ನು ಹುದುಗಿಸಿಟ್ಟುಕೊಂಡಿದೆ. ಇವೆಲ್ಲವುಗಳ ಬಗೆಗೆ ಸಂಶೋಧನೆ ನಡೆಯಬೇಕಾಗಿದೆ. ಬೀದರ ಈ ಹೆಸರು ಹೇಗೆ ಬಂದಿತು ಈ ಬಗೆಗೂ ಸ್ಪಷ್ಟನೇ ಇಲ್ಲ.

ಅಟ್ಟಳೆ ನಾಡು

ಇತಿಹಾಸ ಕಾಲಕ್ಕೆ ಬಂದಾಗ ಈ ಭಾಗದಲ್ಲಿ ರಾಜಕೀಯ ಘಟಕವೊಂದು ಸ್ಪಷ್ಟವಾಗಿ ಮೂಡಿಬಂದದ್ದು ಕ್ರಿ.ಶ. ನಾಲ್ಕನೇ ಶತಮಾನದ ಸುಮಾರಿಗೆ ಎನ್ನುವ ಅಂಶವನ್ನು ರಂಜೇರು (ಇಂದಿನ ಖೇಣಿರಂಜೋಳ)ವಿನ ಸಿಂದರ ಶಾಸನಗಳು ಖಚಿತಗೊಳಿಸುತ್ತವೆ. ಆ ಮೊದಲು ಈ ಪ್ರದೇಶವು ಸ್ಥೂಲವಾಗಿ ನಂದರು ಹಾಗೂ ಮೌರ್ಯರಿಗೆ ಸೇರಿದ್ದಿತು. ಶಾತವಾಹನರು ಪ್ರತಿಷ್ಠಾನಪುರ(ಇಂದಿನ ಪೈಠಣ) ವನ್ನು ರಾಜಧಾನಿಯನ್ನಾಗಿಸಿಕೊಂಡು ಆಳುತ್ತಿರುವಾಗ ಬೀದರನ ಭಾಗ ಅವರ ಆಳ್ವಿಕೆಗೆ ಸೇರಿತ್ತು. ಶಾತವಾಹನರ ನಂತರ ಬನವಾಸಿಯ ಕದಂಬರು ಆಳಿದರು. ಅವರ ಆಳ್ವಿಕೆಯ ಆರಂಭದ ಕಾಲದಲ್ಲಿ ಕದಂಬವಂಶ ಸ್ಥಾಪಕ ಮಯೂರವರ್ಮನ ಮಗಳಾಗಿದ್ದ ಲಕ್ಷ್ಮೀಮತಿ ಹಾಗೂ ನಿಡುದೋಳ ಸಿಂದ ಇವರ ನಾಲ್ಕು ಮಕ್ಕಳಲ್ಲಿ ಒಬ್ಬನಾಗಿದ್ದ ಜಗತ್‌ಸೇಬ್ಯನು ಕಾರಂಜಾನದಿ ತೀರದಲ್ಲಿ ಅಟ್ಟಳೆ ನಾಡಿಗೆ ಅಧಿಪತಿಯಾಗಿ ಆಳಲಾರಂಭಿಸಿದನೆಂದು ಖೇಣಿರಂಜೋಳದಲ್ಲಿರುವ ಶಾಸನಗಳು ತಿಳಿಸುತ್ತವೆ. ರಂಜೇರು ಅದರ ರಾಜಧಾನಿ ಹಾಗೂ ಭಲ್ಲುಂಕೆ ಪ್ರಮುಖ ಅಗ್ರಹಾರವಾಗಿ ಬೆಳೆಯಲಾರಂಭಿಸಿದವೆಂಬ ಅಂಶ ಅವೇ ಶಾಸನಗಳಿಂದ ತಿಳಿದುಬರುತ್ತದೆ.

ಬನವಾಸಿ ನಾಡು, ಉತ್ತರ ಕನ್ನಡ ಪರಿಸರದ ಕೆಲ ಗ್ರಾಮಗಳು ಹಾಗೂ ಖೇಣಿರಂಜೋಳ (ರಂಜೇರು) ಇದರ ಸುತ್ತಣ ಕೆಲ ಗ್ರಾಮಗಳ ಹೆಸರುಗಳ ನಡುವೆ ಸಾಮ್ಯತೆ ಇರುವುದು ಈ ವಿಷಯವನ್ನು ಪುಷ್ಠಿಗೊಳಿಸುತ್ತದೆ. ಉದಾಹರಣೆಗೆ ಕಾಡವಾದ, ಶಿರಸಿ, ಚಟ್ಟನಹಳ್ಳಿ, ಆಣಂದೂರು, ಭೈರನಹಳ್ಳಿ, ಕುಮಟಾ, ಆಲೂರು, ಬರೂರು, ಬೆಳ್ಳನಕೇರಿ, ಬೇಲೂರು, ಬೋರಿ, ದೇವಗಿರಿ, ಡಿಗ್ಗಿ, ಗುಡಹಳ್ಳಿ, ಗೋರ್ಟಾ, ಗುರವಳ್ಳಿ, ಹಲಸಿ, ಹಣಕೋಣಿ, ಇಟಗಿ, ಜಂಬಗಿ, ಕಲಕೇರಿ, ಕಲ್ಲೂರ, ಕನಹಳ್ಳಿ, ಸಿಂದೋಲ, ಮೈನಳ್ಳಿ, ಮರಗುಂದಿ, ಮರೂರು, ನಾಗೂರ, ಸಾತನಳ್ಳಿ, ಸಿಂದೋಲ, ಶಿವಪುರ, ಇತ್ಯಾದಿ, ಅಷ್ಟೇ ಅಲ್ಲ ಕೆಲ ಆಚರಣೆಗಳೂ ಒಂದೇ ತೆರನಾದವುಗಳು. ಆಳವಾದ ಅಧ್ಯಯನ ನಡೆಸಿದ್ದಲ್ಲಿ ಹೆಚ್ಚಿನ ಅಂಶಗಳು ತಿಳಿದು ಬರಬಹುದಾಗಿದೆ.

ನಾಗವಂಶದ ಸಿಂದ ಮನೆತನದ ನಿಡುದೋಳ ಸಿಂದನ ವಂಶಜರು ಬಹುಕಾಲ ರಂಜೇರುವಿನಿಂದ ಮಾಂಡಳಿಕರಾಗಿ ಆಳಿದರು. ನಾಲ್ಕನೇ ಶತಮಾನದಿಂದ ಆರಂಭಗೊಂಡ ಸಿಂದರ ಆಳ್ವಿಕೆ ಹದಿಮೂರನೇ ಶತಮಾನದವರೆಗೆ ಸಾಗಿಬಂದಿತು. ಕಲ್ಯಾಣಿ ಚಾಳುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಹಜ್ಜರಸನು ಅಟ್ಟಳೆ-300 ಈ ನಾಡಿಗೆ ಮಾಂಡಳಿಕನಾಗಿದ್ದನು. ರಂಜೇರುವಿನ ಸಿಂದರು ಅನೇಕ ಕಡೆಗಳಲ್ಲಿ ಶಿವ ಮಂದಿರಗಳನ್ನು ನಿರ್ಮಿಸಿದ ಉಲ್ಲೇಖವಿದೆ. ಅದರೆ ಅವುಗಳು ಇಂದು ಉಳಿದಿಲ್ಲ. ರಂಜೇರು, ಹಿಲಾಲಪುರ, ಭಲ್ಲುಂಕೆ ಮುಂತಾದ ಕಡೆಗಳಲ್ಲಿ ಅವಶೇಷಗಳು ಮಾತ್ರ ಕಾಣಸಿಗುತ್ತವೆ.

ಕದಂಬರ ಆಳ್ವಿಕೆಯ ಕಾಲಕ್ಕೆ ಕುಂತಲದ ಉತ್ತರಕ್ಕೆ ವಾಕಾಟಕರು ಆಳುತ್ತಿದ್ದರು. ಕದಂಬರ ನಂತರ ಬಾದಾಮಿ ಚಾಳುಕ್ಯರು ಹಾಗೂ ರಾಷ್ಟ್ರಕೂಟರು ಆಳಿದರು. ಬಾದಾಮಿ ಚಾಳುಕ್ಯರ ಆಳ್ವಿಕೆಯ ಕಾಲದಲ್ಲಿ ದೇವಿ ಆರಾಧನೆ ಪ್ರಾಮುಖ್ಯತೆ ಪಡೆಯಿತು. ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಜೈನ ಧರ್ಮಕ್ಕೆ ಆದ್ಯತೆ ದೊರೆಯಿತು. ಕಲ್ಯಾಣಿ, ಕಂಬಿತಾಣಾ, ಭಲ್ಲುಂಕೆ ಮುಂತಾದೆಡೆ ಜೈನ ಬಸದಿಗಳು ಇದ್ದವು. ಕಂಬಿತಾಣಾದಲ್ಲಿ ಇಂದಿಗೂ ಜೈನ ಬಸದಿಯ ಭಾಗವನ್ನು ಕಾಣಬಹುದಾಗಿದೆ.

ಕಲ್ಯಾಣಿ ಚಾಳುಕ್ಯರು

ಮಳಖೇಡದ ರಾಷ್ಟ್ರಕೂಟರ ಅವಸಾನದೊಂದಿಗೆ ಚಾಳುಕ್ಯರು ಮತ್ತೆ ಬಲಗೊಂಡರು. ಕಲ್ಯಾಣಪುರಕ್ಕೆ ರಾಜಧಾನಿಯನ್ನಾಗಿಸಿಕೊಂಡರು. ಕಲ್ಯಾಣಿ ಚಾಳುಕ್ಯರೆಂದು ಪ್ರಸಿದ್ಧರಾದರು. ಈ ವಂಶದ ಆರನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲ (ಕ್ರಿ.ಶ. 1077-1126) ಸುದೀರ್ಘವಾದದ್ದಾಗಿದ್ದಿತು. ಒಂದು ರೀತಿಯಲ್ಲಿ ಸುವರ್ಣಯುಗ, ಶಾಂತಿ ಸುವ್ಯವಸ್ಥೆ ಏರ್ಪಟ್ಟಿದ್ದಿತು. ಅನೇಕ ಶಾಸನಗಳು ಬರೆಸಲ್ಪಟ್ಟವು. ಮಿತಾಕ್ಷರ ಗ್ರಂಥದ ರಚಯಿತ ವಿಜ್ಞಾನೇಶ್ವರ ಹಾಗೂ ವಿಕ್ರಮಾಂಕದೇವ ಚರಿತರ ಇದರ ರಚಯಿತ ಬಿಲ್ಹಣ ಆರನೇ ವಿಕ್ರಮಾದಿತ್ಯನ ಆಸ್ಥಾನ ಪಂಡೀತರಾಗಿದ್ದರು.

ವಿಶೇಷವೆಂದರೆ ಆರನೇ ವಿಕ್ರಮಾದಿತ್ಯನ ಗೌರವಕ್ಕೆ ಪಾತ್ರರಾಗಿದ್ದ ವಿಜ್ಞಾನೇಶ್ವರರು ಹುಟ್ಟಿದ್ದು ಭಾಲ್ಕಿ ಸಮೀಪದ ಮಾಸಿಮಡು ಅಗ್ರಹಾರದಲ್ಲಿ ಗೋರ್ಟಾ ಕಲ್ಯಾಣಿ ಚಾಳುಕ್ಯರ ಕಾಲದಲ್ಲಿ ಮಹತ್ವದ ವಿದ್ಯಾಕೇಂದ್ರವಾಗಿದ್ದಿತು.

ಬಸವಣ್ಣನವರು–ಭಕ್ತಿಚಳುವಳಿ–ವಚನ ಸಾಹಿತ್ಯ

ಕಲ್ಯಾಣಿ ಚಾಳುಕ್ಯರನ್ನು ಹಿಂದೆ ತಳ್ಳಿ ಅವರ ಸಂಬಂಧಿ ಕಳಚೂರಿ ಬಿಜ್ಜಳ 1157ರ ಸುಮಾರಿಗೆ ತನ್ನನ್ನು ಚಕ್ರವರ್ತಿ ಎಂದಾಗಿ ಘೋಷಿಸಿಕೊಂಡ. ಆತನ ಕಾಲದಲ್ಲಿ ಮಂತ್ರಿಗಳಾಗಿದ್ದ ಬಸವೇಶ್ವರರು ಕಲ್ಯಾಣದಿಂದ ಭಕ್ತಿ ಚಳುವಳಿಗೆ ಚಾಲನೆ ನೀಡಿದರು. ಅಸಂಖ್ಯಾತ ಶರಣ--ಶರಣೆಯರು ಕಲ್ಯಾಣದತ್ತ ಧಾವಿಸಿ ಬಂದರು. ಅನುಭವ ಮಂಟಪ ಸ್ಥಾಪಿತಗೊಂಡಿತು. ವಚನ ಸಾಹಿತ್ಯ ಬೆಳೆದುಬಂದಿತು. ಬಸವೇಶ್ವರರ ನೇತೃತ್ವದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಆರಂಭಗೊಂಡ ಸಾಮಾಜಿಕ, ಧಾರ್ಮಿಕ ಚಳುವಳಿ ಹೊಸ ಸಾಮಾಜಿಕ ವ್ಯವಸ್ಥೆಗೆ ನಾಂದಿ ಹಾಡಿತು. ಇಂದಿಗೂ ತನ್ನ ಪ್ರಭಾವವನ್ನು ಉಳಿಸಿಕೊಂಡು ಬಂದಿದೆ.

ಓರಂಗಲ್ಲಿನ ಕಾಕತೀಯರು

ಕಳಚೂರಿಗಳ ಆಳ್ವಿಕೆ ಬಹುಕಾಲ ನಡೆಯಲಿಲ್ಲ. ಚಾಳುಕ್ಯರು ಕಲ್ಯಾಣದಲ್ಲಿ ಮತ್ತೆ ಅಧಿಕಾರಕ್ಕೆ ಬಂದರಾದರೂ ಸಾಮ್ರಾಜ್ಯವನ್ನು ವಿಘಟನೆಯಿಂದ ಉಳಿಸಿಕೊಳ್ಳಲು ಅವರಿಂದ ಸಾಧ್ಯವಾಗಲಿಲ್ಲ. ಸಾಮ್ರಾಜ್ಯದ ಅಧೀನದಲ್ಲಿದ್ದ ಓರಂಗಲ್ಲಿನ ಕಾಕತೀಯರು, ದೇವಗಿರಿಯ ಸೇವುಣರು(ಯಾದವರು) ಹಾಗೂ ದ್ವಾರ ಸಮುದ್ರದ ಹೊಯ್ಸಳರು ಸ್ವತಂತ್ರಗೊಂಡರು. ಬೀದರನ ಈ ಭಾಗವು ಸೇವುಣರು ಮತ್ತು ಕಾಕತೀಯರ ನಡುವೆ ಹಂಚಿಹೋಯಿತು. ರಂಜೇರುವಿನ ಸಿಂದರು ಕಾಕತೀಯರ ಪರ ಹೋರಾಡಿದರು–ಮೈಲಾರ ನಾಡಿನಲ್ಲಿ.

ಕಾಕತೀಯರ ಆಳ್ವಿಕೆಯ ಕಾಲದಲ್ಲಿ ಅಂದು ಬೆಡಣದ ಕೋಟಿ ಎಂದಾಗಿ ಕರೆಯಲ್ಪಡುತ್ತಿದ್ದ ಬೀದರ ಬೆಳೆಯಲಾರಂಭಿಸಿತ್ತು. ರಕ್ಷಣಾ ಕೋಟೆಯನ್ನು ಭದ್ರಗೊಳಿಸಲಾಯಿತು. ಬೀದರ ಗಡಿಭಾಗದ ನೆಲೆ ಆಯಿತು. ಮರಾಠಿ ಹಾಗೂ ತೆಲುಗು ಭಾಷೆಗಳ ಪ್ರಭಾವ ಇಲ್ಲಿಯ ಜನರ ಮೇಲೆ ಆಗಲಾರಂಭಿಸಿತು. ಸೇವುಣರ ಗಡಿಯಲ್ಲಿದ್ದ ಹಳ್ಳಿಗಳು ಗಾಂವ ಎಂದಾಗಿ ಕಾಕತೀರ ಪ್ರಭಾವದ ಹಳ್ಳಿಗಳು ಪಲ್ಲಿ ಎಂದಾಗಿ ಕರೆಯಲ್ಪಡಲಾರಂಭಸಿದವು. ಬೀದರಿನ ಸುತ್ತಣ ಪ್ರದೇಶದಲ್ಲಿ ಸಿಂದರು ಮಾಂಡಲಿಕರಾಗಿ ಆಳುತ್ತಿದ್ದರಿಂದ ಕನ್ನಡದ ಪ್ರಭಾವ ಉಳಿದುಕೊಂಡಿತು. ಬೀದರ ಕೋಟೆಯ ವಸ್ತುಸಂಗ್ರಹಾಲಯದಲ್ಲಿರುವ ಕನ್ನಡ ಶಾಸನಗಳು ಆ ಕಾಲದ ಘಟನೆಗಳ ವಿವರಣೆ ನೀಡುತ್ತವೆ.

ಆ ಮೊದಲಿಗೆ ಶರಣ ವೀರ ಸಂಗಯ್ಯನವರು ಬೀದರಿನಲ್ಲಿ ತಮ್ಮ ಪ್ರಭಾವ ಬೀರಿದ್ದರು. ಬಹುಶಃ ಶರಣ ಬೊಮ್ಮಗೊಂಡೇಶ್ವರ ಅವರ ಸಮಕಾಲೀನರು. ಸೋಮವಾರಪೇಟೆ (ಇಂದಿನ ಲಾಡಗೇರಿ)ಯಲ್ಲಿ ಶೈವ ಮಠವಿತ್ತು. ವೀರ ಸಂಗಯ್ಯ ಇವರ ಸಮಾಧಿ ಹಾಗೂ ಬೊಮ್ಮಗೊಂಡೇಶ್ವರ

ಹೆಸರಿನ ಕೆರೆ ಇಃಪುಗಳನ್ನು ಇಂದಿಗೂ ಬೀದರ ಕೋಟೆಯ ಒಳಭಾಗದಲ್ಲಿ ಪುರಾನಾ ಕಿಲಾ ಹಾಗೂ ಒಳಕೋಟೆ ಇವುಗಳ ನಡುವೆ ಕಾಣಬಹುದಾಗಿದೆ. ಕಾಕತೀಯರ ಕಾಲದ ಕೋಟೆ ಹಾಗೂ ಆ ಹಿಂದಿನ ಸ್ಮಾರಕಗಳು ನಂತರದ ಬಹಮನಿ ಕೋಟೆಯೊಂದಿಗೆ ಒಂದಾಗಿದೆ.

ಬಹುಮನಿ ಸುಲ್ತಾನರು–ಅಹಮದ್ ಶಹಾ ಅಲ್–ವಲಿ

ಕ್ರಿ.ಶ. 1322 ರಲ್ಲಿ ಅಂದು ದಖ್ಖನ್ನಿನಲ್ಲಿ ಯುವರಾಜನಾಗಿ ಆಡಳಿತ ನೋಡಿಕೊಳ್ಳುತ್ತಿದ್ದ ಉಲ್ಫಖಾನ (ಮುಂದೆ ಮೊಹಮ್ಮದ್ ಬಿನ್ ತೊಗಲಖ್)ನು ಕಾಕತಿಃಯರಿಂದ ಬೀದರನ್ನು ವಶಪಡಿಸಿಕೊಂಡು ಇಲ್ಲೊಂದು ಸೈನ್ಯದ ನೆಲೆಯನ್ನು ಸ್ಥಾಪಿಸಿದ. 1341 ರಲ್ಲಿ ಮುಲ್ತಾನಿನ ಸಿಯಾಬುದ್ದೀನ್ ಎನ್ನುವಾತನಿಗೆ ಈ ಭಾಗವನ್ನು ಪ್ರಾಂತವನ್ನಾಗಿ ಅಧಿಕಾರ ವಹಿಸಿಕೊಟ್ಟ. ದಖ್ಖನ್ನಿನ ಸದಾಹ್ ಅಮೀರರು ತೊಗಲಖ್‌ನ ವಿರುದ್ಧ ದಂಗೆ ಎದ್ದರು. ಅವರುಗಳು ಮೊದಲು, ಇಸ್ಮಾಯಿಲ್ ಮುಖ್ ಆಮೇಲೆ ಹಸನ ಗಂಗೂ ಬಹಮನ್ ಶಾಹನು ಗುಲಬರ್ಗಾ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿಸಿಕೊಂಡ. ಬೀದರಿಗೆ ಪ್ರಾಂತೀಯ ರಾಜಧಾನಿಯನ್ನಾಗಿಸಿದ. ಬೀದರ ಪಟ್ಟಣ ಹೊಸ ರೀತಿಯಲ್ಲಿ ಬೆಳೆಯಲಾರಂಭಿಸಿತು.

ಬಹಮನಿ ಮನೆತನದ ಒಂಭತ್ತನೇ ಸುಲ್ತಾನನಾಗಿದ್ದ ಅಹಮದ್ ಶಾಹನು 1429ರಲ್ಲಿ ರಾಜಧಾನಿಯನ್ನು ಗುಲ್ಬರ್ಗಾದಿಂದ ಬೀದರಿಗೆ ವರ್ಗಾಯಿಸಿದೆ. ಹೊಸದಾಗಿ ಅರಮನೆಗಳು, ಮಹಲುಗಳು, ಕೋಟೆ ಆವರಣಗಳು ನಿರ್ಮಾಣಗೊಂಡವು. ಕಿರಮಾನದಿಂದ ಧರ್ಮಗುರುಗಳನ್ನು ಬೀದರಿಗೆ ಬರಮಾಡಿಕೊಂಡ. ಪರ್ಷಿಯ, ತುರ್ಕಿ ಮುಂತಾದ ಕಡೆಗಳಿಂದ ಜನ ಬೀದರಿಗೆ ಬರಲಾರಂಭಿಸಿದರು. ಹಾಗೇ ಬಂದವರಲ್ಲಿ 1453ರಲ್ಲಿ ಗಿಲಾನಿನಿಂದ ಬಂದ ಮಹಮ್ಮದ್ ಗವಾನ್ ಓರ್ವ, ಮುಂದೆ ಆತ ಬಹಮನಿ ಸುಲ್ತಾನರ ವಜೀರನಾಗಿ ನೇಮಕಗೊಂಡ, ಬಹಮನಿಯರ ಏಳಿಗೆಗಾಗಿ ದುಡಿದು ರಾಜ್ಯವನ್ನು ವಿಸ್ತರಿಸಿದನಲ್ಲದೇ ಆಡಳಿತವನ್ನು ಬಲಗೊಳಿಸಿದ. ಹೋರಾಟ ಮಾಡಿ ಗೋವೆಯನ್ನು ಬಹಮನಿ ಸಾಮ್ರ್ಯಾಜ್ಯದ ಭಾಗವಾಗಿಸಿದ. ಶಿಕ್ಷಣ ಪ್ರೇಮಿಯೂ ಆಗಿದ ಪ್ರಧಾನ ಮಂತ್ರಿ ಮಹಮ್ಮದ್ ಗವಾನ್ ಪ್ರೇಮಿಯೂ ಆಗಿದ ಪ್ರಧಾನ ಮಂತ್ರಿ ಮಹಮ್ಮದ್ ಗವಾನ್ 1472ರಲ್ಲಿ ಬೀದರಿನಲ್ಲೊಂದು ವಿದ್ಯಾ ಕೇಂದ್ರವನ್ನು ಸ್ಥಾಪಿಸಿದೆ. ಅದರ ಕಟ್ಟಡದ ಭಗ್ನಾವೇಷ ಇಂದಿಗೂ ಆಕರ್ಷಣೀಯ ಸ್ಮಾರಕವಾಗಿದೆ. ಇಂತಹ ವಾಸ್ತುಶಿಲ್ಪ ಭಾರತದಲ್ಲಿ ಬಹುಶಃ ಏಕೈಕವಾದದ್ದಾಗಿದೆ.

ಈ ವಿಶ್ವವಿದ್ಯಾಲಯದ ಕಟ್ಟಡದ ಹಾಗೂ ನಿರ್ವಹಣೆಯ ಖರ್ಚನ್ನು ಗವಾನ್ ತನ್ನ ಸ್ವಂತ ಆದಾಯದಿಂದ ಪೂರೈಸುತ್ತಿದ್ದ ತನ್ನ ಬಿಡುವಿನ ಸಮಯವನ್ನು ಆತ ವಿದ್ವಾಂಸರೊಂದಿಗೆ ಈ ವಿದ್ಯಾಲಯದಲ್ಲಿ ಕಳೆಯುತ್ತದ್ದ. ಅಂತಹ ಮಹಾನ್ ವ್ಯಕ್ತಿಯನ್ನು, ಆತನ ಏಳಿಗೆ ಸಹಿಸದ ಕೆಲವರು ಕುತಂತ್ರಕ್ಕೆ ಹತ್ಯೆಗೊಳಿಸಿದ. ತದನಂತರ ಸುಲ್ತಾನನಿಗೆ ತನ್ನ ತಪ್ಪಿನ ಅರಿವಾಯಿತು. ಆದರೆ ಕಾಲ ಮಿಂಚಿಹೋಗಿತ್ತು. ಪಶ್ಚಾತಾಪದ ಬೇಗೆಯಲ್ಲಿ ಸುಲ್ತಾನ ಬೆಂದು–ಬೆಂದು ಅಸುನೀಗಿದ. ಬಹಮನಿ ಸಾಮ್ರಾಜ್ಯ ಪತನದ ಹಾದಿಹಿಡಿಯಿತು.

ಬಹಮನಿಯರ ಅಧೀನ ಅಧಿಕಾರಿಗಳಾಗಿದ್ದ ಬರೀದಿಗಳು ಪ್ರಾಬಲ್ಯ ತಳೆದು ರಾಜ್ಯವನ್ನು ವಶಪಡಿಸಿಕೊಂಡರು. ಸಾಮ್ರಾಜ್ಯದ ಪ್ರಾಂತದವರು ತಮ್ಮನ್ನು ಸ್ವತಂತ್ರರೆಂದು ಘೋಷಿಸಿಕೊಂಡರು. ಬಹಮನಿ ಸಾಮ್ರಾಜ್ಯ ಐದು ಚಿಕ್ಕ ಚಿಕ್ಕ ರಾಜ್ಯಗಳಲ್ಲಿ ಹಂಚಿಹೋಯಿತು. ಬೀದರನಿಂದ ಬರೀದ ಶಾಹಿಗಳ ಆಳ್ವಿಕೆ ಆರಂಭಗೊಂಡಿತ್ತಾದರೂ ಮುಂದೆ 1619ರಲ್ಲಿ ಬಿಜಾಪುರದ ಅಲಿ ಆದಿಲ್ ಶಾಹನು ಬೀದರನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು.

1656ರಲ್ಲಿ ಮೊಗಲರ ಸೇನೆ ಔರಂಗಜೇಬನ ನೇತೃತ್ವದಲ್ಲಿ ಬೀದರ್ ಹಾಗೂ ಕಲ್ಯಾಣಿಯನ್ನು ವಶಪಡಿಸಿಕೊಂಡಿತು. ಹದಿನೆಂಟನೇ ಶತಮಾನದ ಆರಂಭದ ಕಾಲದವರೆಗೆ ಬೀದರ ಮೊಗಲ ಸಾಮ್ರಾಜ್ಯದ ಪ್ರಾಂತೀಯ ರಾಜಧಾನಿಯಾಗಿ ಮುಂದುವರೆಯಿತು.

1724ರಲ್ಲಿ ಆಸಿಫ್ ಜಾಹಿ ಮನೆತನದ ಆಳ್ವಿಕೆ ಆರಂಭಗೊಂಡು ಬೀದರ ಪ್ರಾಂತ ಅವರ ರಾಜ್ಯದ ಭಾಗವಯಿತು. 1846ರಲ್ಲಿ ಬೀದರನ್ನು ಪ್ರಾಂತೀಯ ರಾಜಧಾನಿಯ ಬದಲಾಗಿ ವಿಭಾಗದ ಕೇಂದ್ರವನ್ನಾಗಿಸಲಾಯಿತು. 1905ರಲ್ಲಿ ಬೀದರ ಆ ದರ್ಜೆಯನ್ನೂ ಕಳೆದುಕೊಂಡು ಜಿಲ್ಲಾ ಕೇಂದ್ರವಾಗಿ ಮಾತ್ರ ಉಳಿಯಿತು. ಸೆಪ್ಟೆಂಬರ್, 1948ರಲ್ಲಿ ನಿಜಾಂರ ಆಳ್ವಿಕೆ ಕೊನೆಗೊಂಡು, ಹೈದ್ರಾಬಾದ ರಾಜ್ಯದ ಜಿಲ್ಲೆಯಾಗಿದ್ದ ಬೀದರ ಭಾರತದ ಒಕ್ಕೂಟದ ಭಾಗವಾಯಿತು. ಆಗ ಬೀದರ ಜಿಲ್ಲೆ ಒಂಭತ್ತು ತಾಲ್ಲೂಕುಗಳನ್ನು ಹೊಂದಿತ್ತು. ನವೆಂಬರ್ 1,1956ರಂದು ಭಾಷಾವಾರು ಪ್ರಾಂತಗಳ ರಚನೆ ಆಗಿ ಬೀದರ ಜಿಲ್ಲೆ ಕೇವಲ ನಾಲ್ಕು ತಾಲ್ಲೂಕುಗಳೊಂದಿಗೆ ನವ ಮೈಸೂರು (ಇಂದು ಕರ್ನಾಟಕ) ರಾಜ್ಯದ ಭಾಗವಾಯಿತು. ಇಂದು ಬಸವಕಲ್ಯಾಣ ಸಹಿತ ಈ ಜಿಲ್ಲೆ ಐದು ತಾಲ್ಲೂಕುಗಳಲ್ಲಿ ಒಳಗೊಂಡಿದೆ.

ಬೀದರ ತಾಲೂಕಿನ ಊರು ಕೇರಿಗಳು

ಮಾನವರು ಸ್ಥಳವೊಂದರಲ್ಲಿ ಸ್ಥಿರವಾಗಿ ನೆಲೆಸಿದ ನೆಲೆ ಕ್ರಮೇಣದಲ್ಲಿ ಹೆಸರೊಂದನ್ನು ಪಡೆದುಕೊಳ್ಳುತ್ತದೆ. ಊರಾಗುತ್ತದೆ. ಊರು ಬೆಳೆದು ಪುರವೂ ಆಗಬಹುದು–ಬಿದಿರು ಊರು. ಬಿದಿರೂರು ಪುರ ಆದಂತೆ, ಅಂತಹ ಜನ ವಸತಿಗಳು ಸ್ಥಿತಿ ಆದರಿಸಿ ಊರು. ಹಳ್ಳಿ, ಹಾಳು, ಪಳ್ಳಿ, ವಾಡ, ಖೇಡ ಬಾಡ/ಬಾದ, ಗಾಂವ, ಗಿ, ಪೇಟಿ ಮುಂತಾದ ಸ್ವರೂಪ ಪಡೆದುಕೊಳ್ಳುತ್ತವೆ. ಅವುಗಳ ಸಂಖ್ಯೆ ಅಧಿಕಗೊಂಡಾಗ ಗುರುತಿಸಲು ಸುಲಭ ವಾಗಲೆಂದು ಹಿಂದೆ ಹೆಸರೊಂದರ ಜೋಡಣೆ ಆಗುತ್ತದೆ. ಹೆಸರುಗಳು ವ್ಯಕ್ತಿ ಪ್ರಾಣಿ–ಪಕ್ಷಿ, ಸಂಖ್ಯೆ, ಗಾತ್ರ, ಭೌಗೋಳಿಕ ಸ್ಥಿತಿ, ಘಟನೆ ಗಿಡ–ಗಂಟಿ, ರಾಜವಂಶ, ದೇವರು, ಮುಂತಾದವುಗಳಿಂದ ಬರಬಹುದಾಗಿದೆ. ಉದಾಹರಣೆಗಳು, ಶ್ಯಾಮರಾಜಪುರ, ಮೈಲೂರು, ನಾಗೂರ, ಏಕಹಳ್ಳಿ, ಅಷ್ಟೂರ, ಅತಿವಾಳ, ರೇಕುಳಗಿ, ಯದಲಾಪುರ, ಬೆನಕನ ಹಳ್ಳಿ–ಇಂತಹ ವಿಷಯಗಳ ವೈಜ್ಞಾನಿಕ ಅಧ್ಯಯನಕ್ಕಾಗಿ ಸ್ಥಳ ನಾಮಗಳ ಅಧ್ಯಯನ ಜರುಗಿಸಲಾಗುತ್ತದೆ. ನಮ್ಮ ಜಿಲ್ಲೆಯ ಸ್ಥಳ ನಾಮಗಳ ಬಗೆಗೆ ಡಾ. ವೈಜಿನಾಥ ಭಂಡೆಯವರು ವಿಶೇಷ ಅಧ್ಯಯನ ಮಾಡಿದವರಾಗಿರುತ್ತಾರೆ.

ಬೀದರ ತಾಲೂಕಿನಲ್ಲಿ ಬೀದರ ಪಟ್ಟಣ ಅಲ್ಲದೆ 147 ಗ್ರಾಮಗಳಿವೆ. ವಾಡಿ ಹಾಗೂ ತಾಂಡಾಗಳೂ ಇವೆ. ಕೆಲ ಊರುಗಳಿಂದ ಜನರೆಲ್ಲ ಊರುತೊರೆದು ಹೋಗಿರುವುದರಿಂದ ಜನವಸತಿ ರಹಿತ ಆಗಿ ಬೇ–ಚಿರಾಗ ಆಗಿವೆ. ಗ್ರಾಮಗಳ ಪಟ್ಟಿಯಲ್ಲಿ ಅಂತಹ ಊರಿನ ಹೆಸರುಗಳು ಮಾತ್ರ ಉಳಿದುಕೊಂಡಿವೆ. ಬೀದರ ಪಟ್ಟಣ ಹಾಗು ತಾಲೂಕಿನ ಗುಮಟಾ ಪುರ, ಇಮಾಮಪುರ, ಶೇರಿ ಹುಸೇನಿ, ಶೇರಿ ಚಂಪಾ, ಬಾಗೆ ಖಾರಿದಿ, ಬಾಗೆ ಶಾಹಿ, ಬಾಗೆ ಇಬ್ರಾಹಿಂ, ಜಂಗಲ ಕೋಯಿ, ಮೊಹಿಲ್ಲತೆ ಗೈರಬಿ, ಗುಲ್ಲರ ಹವೇಲಿ, ಖದೀಮ ಸುಲ್ತಾನಪುರ, ಅಲ್ಲಮಕೇರಿ, ಚವರ ಫತೆಪುರ, ಬಾವಾಪುರ ಮುಂತಾದವುಗಳ ಅಂತಹವುಗಳಾಗಿವೆ. ಮೈಲಾರ ಗ್ರಾಮ ಅಂತಹ ಸ್ಥಿತಿಯಿಂದ ಚೇತರಿಸಿಕೊಂಡು ಈಗ ಪುನಃ ಬೆಳೆಯುತ್ತಿದೆ.

ಬೀದರ ತಾಲೂಕಿನಲ್ಲಿ ಊರು, ಹಳ್ಳಿ, ಕೇರಿ ಈ ಹೆಸರುಗಳುಳ್ಳ ವಸತಿಗಳ ಸಂಖ್ಯೆ ಅಧಿಕವಾಗಿರಬಹುದೆಂದು ಮೇಲ್ನೋಟಕ್ಕೆ ಅನಿಸುವುದು ಸಹಜ. ಆದರೆ ವಿಶ್ಲೇಷಣೆ ಮಾಡಿ ನೋಡಿದಾಗ ಕಂಡುಬರುವುದು ಪುರ ಎಂದಾಗಿ ಕರೆಯಲ್ಪಡುವ ಜನವಸತಿಗಳೇ ಅಧಿಕ ? ಅದಕೆ ಐತಿಹಾಸಿಕ ಕಾರಣವೂ ಉಂಟು, ಮೊದಲಿನಿಂದ ನಡೆದುಕೊಂಡ ಪುರ ಎಂದಾಗಿ ಕರೆಯಲ್ಪಡುವ ಪದತಿಯನ್ನು ಬಹಮನಿ, ಬರೀದ ಶಾಹಿಗಳ ಹಾಗು ನಂತರದ ಕಾಲದಲ್ಲೂ ಮುಂದುವರಿಸಿಕೊಂಡು ಬರಲಾಯಿತು.

<u>ಬೀದರ ತಾಲೂಕಿನ ಪುರ/ಪೂರ ಎಂದಾಗಿರುವ ಊರುಗಳು:</u>

ಶ್ಯಾಮರಾಜಪುರ, ಸೋಲಪುರ, ಬಸಂತಪುರ, ಸಿದ್ದಾಪುರ, ಧರ್ಮಾಪುರ, ಕಪಲಾಪುರ, ಕಪಲಾಪುರ (ಜೆ), ಯದಲಾಪುರ, ಗುಮಟಾಪುರ, ವಿಲಾಸಪುರ, ಮಮದಾಪುರ, ದದ್ದಾಪುರ, ಇಸ್ಲಾಂಪುರ, ನೌಲಸಪುರ, ಅಯಾಜಪುರ, ಝುಮಿಸ್ತಾಪುರ, ನಿಜಾಂಪುರ, ಸಿಕಿಂದ್ರಾಪುರ, ಶೇಖಾಪುರ, ಕಾಸಿಂಪುರ (ಪಾನ) ಕಾಸಿಂಪುರ, ಗೌಸ್‌ಪುರ, ತೆಲುಗ ಮಿರ್ಜಾಪೂರ, ಯಾಖುತಪುರ, ಅಮಲಾಪುರ, ಶಹಾಪುರ, ಸುಲ್ತಾನಪುರ (ಜೆ), ಮಲಕಾಪುರ, ಖ್ವಾಜಾಪುರ, ಮಿರ್ಜಾಪುರ, ತಾಜ ಮಿರ್ಜಾಪುರ, ಫತೆಹಪುರ, ಚವರ ಫತೆಪುರ, ಬ್ರಹ್ಮಪುರ ಮತ್ತು ಬಾವಾಪುರ ಈ ಊರುಗಳು ಜನ ವಸತಿ ರಹಿತ ವಾದವುಗಳು. ಎರಡು ಊರುಗಳು ಚಿಕ್ಕವು ಆಗಿದ್ದರೂ ಗಳೆಂದು ಕರೆಯಲ್ಪಡುತ್ತವೆ. ಅವುಗಳೆಂದರೆ ಶಮಶೇರನಗರ ಮತ್ತು ಖಾದೆರ ನಗರ.

ಇನು ಕೆಲವು ಊರುಗಳ ಹೆಸರುಗಳು: ಬಾದ/ಅಬಾದ ಹೀಗೆ ಕೊನೆಗೊಳ್ಳುತ್ತವೆ. ಅವುಗಳೆಂದರೆ ಇಮಾಮಬಾದ, ಅಲಿಯಾಬಾದ, ನಿಯಾಮತಾಬಾದ, ಬರೀದಾಬಾದ, ಕುತಬಬಾದ, ರಸೂಲಾಬಾದ ಮತ್ತು ನೌಬಾದ, ತಾಲೂಕಿನ ಕೆಲ ಹಳೇ ಊರುಗಳು ಊರುಗಳೆಂದೇ ಕರೆಯಲ್ಪಡುತ್ತವೆ. ಅವುಗಳು: ಅಷ್ಟೂರ, ಭಂಗೂರ, ಬೇಲೂರು, ಮೈಲೂರು, ಬರೂರ, ಅಣದೂರು, ಬಾಪೂರ ಮತ್ತು ನಾಗೂರ, ಕೆಲ ವಸತಿಗಳು ವಾಡ, ವಾಡಿ ಪಾಡ ಈ ಪದಗಳಿಂದ ಕೊನೆಗೊಳ್ಳುತ್ತವೆ. ಓಡವಾಡ, ನೆಲವಾಡ, ಜನವಾಡ, ಕಾಡವಾಡ, ಕುಂಬಾರ ವಾಡ, ಕಬೀರ ವಾಡಿ, ಜಾಮಪಾಡ ಮತ್ತು ಅಂಬಲ ಪಾಡ.

ಬೀದರ ಪಟ್ಟದ ಪರಿಸರದಲ್ಲಿರುವ ಕೆಲ ವಸತಿಗಳು ಕೇರಿ, ಪೇಟೆ ಎನಿಸಿಕೊಳ್ಳುತ್ತವೆ; ನಾವದ ಕೇರಿ, ಹಳ್ಳದ ಕೇರಿ, ಸಿಪ್ಪಳ ಗೇರಿ, ಮಾಮನ ಕೇರಿ, ದತ್ತನ ಕೇರಿ, ಅಲ್ಲಮ ಕೇರಿ, ಹೂಗಾರ ಗೇರಿ, ಹಾರುರ ಗೇರಿ, ಮಂಗಳವಾರ ಪೇಟೆ ಮತ್ತು ಚಿಕ್ಕ ಪೇಟೆ ಬೀದರನ ಭಾಗವಾಗವಾಗಿರುವ ಇಂದಿನ ಲಾಡಗೇರಿಯ ಮೊದಲಿನ ಹೆಸರು ಸೋಮವಾರ ಪೇಟೆ ಆಗಿದ್ದಿತು. ಬೀದರ ಕೋಟೆ ಭಾಗಕ್ಕೆ ಕಿಲಾ ಅರ್ಕ ಎನ್ನಲಾಗುತ್ತಿತ್ತು. ಬಹಮನಿ, ಬರೀದ ಶಾಹಿ ಹಾಗು ಮೊಗಲ ಆಳ್ವಿಕೆಯ ಕಾಲದಲ್ಲಿ ಬೀದರ ಹೊರವಲಯದಲ್ಲಿ ಕೆಲ ತೋಟಗಳಿದ್ದವು ಅವುಗಳಿಗೆ ಬಾಗ ಎಂದಾಗಿ ಕರೆಯುತ್ತಿದ್ದರು. ಈಗ ಅವುಗಳಲ್ಲಿ ಹೆಚ್ಚಿನವುಗಳು ಬೀದರ ಪಟ್ಟಣದ ವ್ಯಾಪ್ತಿಗೆ ಸೇರಿವೆ. ಅವುಗಳೆಂದರೆ ಬಾಗೇ ಕಾರಂಜಾ, ಬಾಗೇ ಹಮ್ಮಾಮ, ಬಾಗೆ ಖಾರಿದಿ, ಬಾಗೇ ಇಬ್ರಾಹಿ, ಬಾಗೆ ಗೋರನಳ್ಳಿ, ಬಾಗೆ ಶಾಹಿ.

ಹಳ್ಳಿ ಹಾಳ, ಪಳ್ಳಿ ಗಾಂವಗಳು:

ಬೀದರ ತಾಲೂಕಿನ ಕೆಲ ಪ್ರಸಿದ ಊರುಗಳು ಹಳ್ಳಿಗಳೆಂದೇ ಕರೆಯಲ್ಪಡುತ್ತವೆ. ಚಟ್ನಳ್ಳಿ ಮಂದಕನಳ್ಳಿ, ಹೊಚಕನಹಳ್ಳಿ, ಶಿರಕಟನಲ್ಲಿ, ಗೂನಳ್ಳಿ, ಭೈರನಹಳ್ಳಿ, ಬೆನಕನಹಳ್ಳಿ ಮೊಹಿಲ್ಲತೆ ಗೋರನಳ್ಳಿ ಕನ್ನಳ್ಳಿ, ಯರನಳ್ಳಿ (ದೇಶಮುಖ) ಯರನಳ್ಳಿ (ಪಹಲ್ವಾನ), ಅತಿವಾಳ, ರಾಜನಾಳ, ಮೊಗದಾಳ, ಬಗದಾಳ, ಮರಾಠರ ಪ್ರಭಾವದಿಂದಾಗಿ ಕೆಲ ಊರುಗಳು ಗಾಂವ ಆಗಿವೆ. ಮಾಳೇಗಾಂವ, ನಂದಗಾಂವ ಮತ್ತು ಹಿಪ್ಪಳಗಾಂವ, ಓರಂಗಲ್ಲಿನ ಕಾಕತೀಯರ ಆಳ್ವಿಕೆ ಕಾಲದಲ್ಲಿ ಕೆಲ ಹಳ್ಳಿಗಳು ಪಳ್ಳಿಗಳೆಂದು ಕರೆಯಲ್ಪಟ್ಟವು, ತಡಪಳ್ಳಿ ಬೊಂಪಳ್ಳಿ, ಪಾತರಪಳ್ಳಿ ಮತ್ತು ಘೋಡೆಪಳ್ಳಿ.

ಬೀದರ ತಾಲೂಕಿನಲ್ಲಿ ಗಿರಿ ಈ ಪದದಿಂದ ಕೊನೆಗೊಳ್ಳುವ ಎರಡು ಊರುಗಳು ಇವೆ; ಚಿಂತಲಗಿರಿ ಮತ್ತು ರಾಜಗಿರಿ, ಬೀದರ ತಾಲೂಕಿನ ಕೆಲ ಊರುಗಳು ಗಿ ಮುಂತಾದ ಅಕ್ಷರಗಳಿಂದ ಕೊನೆಗೊಳ್ಳುತ್ತವೆ. ಸಂಗೊಳಗಿ, ಚಿಲ್ಲರಗಿ, ಗಾದಗಿ, ಬೊಂಬಳಗಿ, ರೇಕುಳಗಿ, ಮತ್ತು ಬಾವಗಿ, ಉಳಿದ ಊರುಗಳನ್ನು ಈ ಮೇಲಿನ ಯಾವುದೇ ತರಹದ ವ್ಯಾಪ್ತಿಗೆ ತರಲು ಆಗುವುದಿಲ್ಲ. ಅವುಗಳೆಂದರೆ – ಸಿಂದೋಲ, ಮರಕುಂದಾ, ಚಿದ್ರಿ, ಚೊಂಡಿ, ಚವಳಿ, ಕೊಳಾರ(ಬಿ), ಕೊಳಾರ (ಕೆ) ಚಾಂಬೋಳ, ಶ್ರೀಮಂಡಲ, ಅಲಿಯಂಬರ, ಸಂಗವಿ, ಕಮಠಾಣ, ಬುಧೇರಾ, ಚಿಟ್ಟ, ಚಿಮಕೋಡ, ಗುಮ್ಮಾ ಕಂಗಟ, ಮರಕಲ್, ಹೊಕರಾಣಾ (ಬಿ), ಹೊಕರಾಣಾ (ಕೆ), ಹೊನ್ನಡ್ಡಿ, ಔರಾದ (ಎಸ್), ಖೇಣಿ ರಂಜೋಳ, ಸಿರಸಿ (ಔ), ಕಂಗನಕೋಟ, ನಿಡವಂಚ ಮತ್ತು ಬಕಚೌಡಿ, ಈ ಸ್ಥೂಲ ವಿಶ್ಲೇಷಣೆ ಕೇವಲ ನಿದರ್ಶನ ಮಾತ್ರ, ಜಿಲ್ಲೆಯ ಪ್ರತಿ ತಾಲೂಕಿನ ಊರುಗಳ ವಿಶ್ಲೇಷಣೆ, ಸಂಶೋಧನೆ ಹಾಗು ಅಧ್ಯಯನ ಜರುಗಿಸಬೇಕಾದ ಅಗತ್ಯವಿದೆ. ಪ್ರತಿ ಊರಿನ ವೈಶಿಷ್ಟ್ಯಗಳನ್ನು ಕಂಡು ಹಿಡಿದು ಅಭಿವೃದ್ಧಿಗೆ ಪೂರಕ ಆಗುವಂತೆ ಮಾಡುವ ಅಗತ್ಯವೂ ಇದೆ. ಇದರಿಂದಾಗಿ ನಮ್ಮ ಸಾಂಸ್ಕೃತಿಕ ಹಿರಿಮೆ–ಗರಿಮೆಗಳ ಪರಿಚಯವು ನಮಗೆ ಆಗುತ್ತದೆ. ಜೊತೆಯಲ್ಲಿ ಬೀದರ, ಬಸವಕಲ್ಯಾಣ ಹಾಗು ಉಳಿದ ನಗರಗಳ ಸಾಂಸ್ಕೃತಿಕ ಅಧ್ಯಯನ ಕೂಡ ಜರುಗಿಸಬೇಕಾದ ಅಗತ್ಯವಿದೆ, ಗುರಿಯತ್ತ ಸಾಗುವ ದಾರಿಯಲ್ಲಿ ನಿಂತು ಹಿಂದೆ ನೋಡಿ ಮುಂದೆ ಹೋಗುವ ಅಗತ್ಯವಿರುತ್ತದೆ. ನಿಂತು ನೋಡೋಣ–ಮುಂದೆ ಸಾಗೋಣ. ಬೀದರ ತಾಲೂಕಿನಲ್ಲಿ ಇದುವರೆಗೆ ಒಟ್ಟು 76 ಶಾಸನಗಳು ದೊರೆತಿದ್ದು ಅವುಗಳು

ಇರುವ ಸ್ಥಳಗಳು ಇಂತಿವೆ: ಅಣದೂರು, ಅಷ್ಟೂರು, ಬಗದಾಳ, ಬರೂರು, ಬೀದರ, ಬೀರ್ಗಿ, ಬುದೇರಾ. ಂಮಕೋಡ, ಗೋರನಳ್ಳಿ ಕಮಠಾಣ, ಕಪಲಾಪುರ, ಮೊಗದಾಳ, ರಂಜೋಳ, ರಾಜಗಿರಾ ಮತ್ತು ಸಿರಸಿ.

ಈ ಶಾಸನಗಳ ಹಳೆಗನ್ನಡ ಪರ್ಶಿಯನ್, ಅರೆಬಿಕ, ಸಂಸ್ಕೃತ ಹಾಗೂ ಮರಾಠಿ ಭಾಷೆಗಳಲ್ಲಿ ಇದ್ದು. ಅವುಗಳು ವಾಕಾಟಕರು, ಕಲ್ಯಾಣಿ ಚಾಳುಕ್ಯರು, ತೊಘಲಕ್, ಬಹಮನಿ, ಬರೀದ ಶಾಹಿ, ಆದಿಲ್‌ಶಾಹಿ ಮತ್ತು ಮೊಗಲರ ಆಳ್ವಿಕೆ ಕಾಲದಲ್ಲಿ ಬರೆಸಲ್ಪಟ್ಟವುಗಳಾಗಿವೆ.

ಅಧ್ಯಾಯ:– 2

ಜನಪದ ಕೃಷಿ ಮತ್ತು ಪಶುಸಂಗೋಪನ ಉಪಕರಣಗಳು

2.1 ಪ್ರಸ್ತಾವನೆ

2.2 ನೇಗಿಲು

2.3 ಕುಂಟೆ

2.4 ತೂರುವ ತಟ್ಟಿ

2.5 ಹಗ್ಗ

2.6 ಒನಕೆ

2.7 ಕಣ್ಣಿ ಜರಡಿ

2.8 ಗಾಡಿ

2.9 ಕುಡುಗೋಲು

2.10 ಕೊಡಲಿ

2.11 ಮೂಗು ದಾರ

2.12 ಕೊರಳ ಗಂಟೆ

2.13 ಕೊರಳ ಪಟ್ಟಿ

2.14 ಬಿದಿರು ಅಂಬು

2.15 ಕವಣೆ

2.16 ಮಂಚಿಗೆ

2.1 ಪ್ರಸ್ತಾವನೆ

ಇಂದು ದೇಸಿ ಜ್ಞಾನಕ್ಕೆ ಪೂರಕವಾಗುವ ಮೂರು ಒಗೆಯ ಕೃಷಿ ಪದ್ಧತಿಗಳು ನಮ್ಮ ನಡುವೆ ಬಳಕೆಯಲ್ಲಿವೆ. ಸಾಂಪ್ರದಾಯಿಕ ಕೃಷಿ ಪದ್ಧತಿ; ಸಾವಯವ ಕೃಷಿ ಪದ್ಧತಿ; ಸಹಜ ಕೃಷಿ ಪದ್ಧತಿ. ಮೇಲುನೋಟಕ್ಕೆ ಈ ಮೂರೂ ಮಾದರಿಗಳು ಭಿನ್ನ ಎಂಬಂತೆ ಕಂಡುಬಂದರೂ ಅವುಗಳ ಮೂಲ ಆಶಯ ಒಂದೇ; ಭೂಮಿಯ ಜೈವಿಕ ಸತ್ವವನ್ನು ನಾಶಮಾಡದೆ ಉತ್ತು ಬಿತ್ತಿ ಬೆಳೆ ತೆಗೆಯುವುದು ಮತ್ತು ಅಧಿಕ ಹಣದ ಖರ್ಚಿಲ್ಲದೆ ಹವಾಮಾನಕ್ಕೆ ಹೊಂದಿಕೊಂಡ ಸರಳ ಜ್ಞಾನ ಪ್ರಯೋಗದಲ್ಲಿ ವ್ಯವಸಾಯ ಮಾಡುವುದು. ದುರಾಸೆಗೆ ಬಲಿಯಾಗದೇ ನಿರಾಶೆಯ ಕೂಪಕ್ಕೂ ಬೀಳದೇ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು. ಈ ಮೂರೂ ಕೃಷಿ ಪದ್ಧತಿಗಳು ಬೀಳದೇ ಸಮಸ್ಥಿತಿಯ ಕೃಷಿ ಬದುಕನ್ನು ಕಟ್ಟಿಕೊಳ್ಳುವುದು. ಈ ಮೂರು ಕೃಷಿ ಪದ್ಧತಿಗಳು ನೆಲಕ್ಕೆ ವಿಷ ಉಣ್ಣಿಸುವ ದ್ರೋಹ ಚಿಂತನೆಗೆ ಎಂದೂ ತೊಡಗಿದವುಗಳಲ್ಲ. ನೆಲ, ಹವಾಮಾನಗಳ ಲಭ್ಯತೆಯನ್ನು ಅರಿತು ಕೃಷಿಜ್ಞಾನವನ್ನು ಬಳಸಿಕೊಂಡವು ಹಾಗೂ ಬೆಳೆಸಿಕೊಂಡವು. ಇದರ ಜೊತೆಗೆ ಸ್ಥಳೀಯ ಪ್ರಾಕೃತಿಕ ಲಭ್ಯತೆಯನ್ನು ನಾಶವಾಗದ ಪರಿಯಲ್ಲಿ ಕೃಷಿಗೆ ಪೂರಕವಾಗಿ ದುಡಿಸಿಕೊಂಡವು. ಈ ಎಲ್ಲ ಸಮಾನಾಂಶಗಳನ್ನು ಗಮನಿಸಿದರೆ ಇವುಗಳನ್ನು ಸರಳವಾಗಿ ಜೈವಿಕ ಕೃಷಿಪದ್ಧತಿಗಳೆಂದು ಕರೆಯಬಹುದು. ಈ ಮೂರೂ ಪದ್ಧತಿಗಳಲ್ಲಿ ಸ್ಥಳೀಯ ಜ್ಞಾನ ಪ್ರಧಾನವಾಗಿ ಬಿಂಬಿತವಾಗುವುದರಿಂದ ದೇಸಿ ಜೈವಿಕ ಕೃಷಿ ಪದ್ಧತಿಗಳೆಂದು ಸಾಮಾನ್ಯೀಕರಿಸಬಹುದು. ಅಲ್ಲದೆ ಈ ಮೂರು ವಿಧಾನಗಳನ್ನು ಪ್ರತ್ಯೇಕ ಜ್ಞಾನ ಮಾರ್ಗಗಳಾಗಿ ಕಾಣದೆ ಪರಸ್ಪರ ಬಳಕೆಯ ಪೂರಕ ಮಾದರಿಗಳಾಗಿ ಸ್ವೀಕರಿಸುವ ಅಗತ್ಯವೂ ಇದೆ. ಹಾಗಾದಾಗ ಮಾತ್ರ ನೆಲಮೂಲ ಜ್ಞಾನದ ಬಳಕೆಯ ಹೊಸತನಕ್ಕೆ ಅವಕಾಶಗಳನ್ನು ಕಲ್ಪಿಸುವುದು. ಹೊಸ ಹೊಸ ಅವಿಷ್ಕಾರಗಳು ಈ ಜೈವಿಕ ಕೃಷಿ ಪದ್ಧತಿಯನ್ನು ವಿಸ್ತರಿಸುವುದು ಸಾಧ್ಯವಾಗುತ್ತದೆ. ದಿಕ್ಕು ತಪ್ಪಿರುವ ಕೃಷಿ ಬದುಕಿಗೆ ಒಂದು ನಿರ್ದಿಷ್ಟವೂ ಅತಿರೇಕಗಳ ಅವಾಂತರವೂ ಇಲ್ಲದ ತಿಳುವಳಿಕೆಯನ್ನು ನೀಡುವುದು ಇದರಿಂದ ಸಾಧ್ಯವಾಗುತ್ತದೆ. ಇಲ್ಲಿ ದುರಾಸೆಯಿಂದ ಭ್ರಮೆಗಳ ಬೆನ್ನುಹತ್ತುವ ಪ್ರಮೇಯವಿಲ್ಲ. ವಸ್ತುಸ್ಥಿತಿ ಅರಿವಿನಲ್ಲಿ ಅಗತ್ಯಗಳನ್ನು ಪೂರೈಸಿಕೊಳ್ಳುವ ಮಧ್ಯಮ ಮಾರ್ಗದ ಜೀವನ ವಿಧಾನ ಇದಾಗಿದೆ. ಮಧ್ಯಮ ಮಾರ್ಗವೆಂಬುದು ಮಧ್ಯಮ ವರ್ಗದ ಜೀವನ ಮಾರ್ಗವಲ್ಲ. ನಿಸರ್ಗ ಧರ್ಮಕ್ಕೆ ಎರವಾಗದಂತೆ ಬದುಕನ್ನು ಅರಿಯುವ, ಬದುಕನ್ನು ಬಾಳುವ ಜೀವನ ಮಾರ್ಗ. ತಾನೂ ಬದುಕಿ ಜೀವಜಗತ್ತನ್ನೂ ಬದುಕಿಸುವಂತೆ ತನ್ನ ನಡೆಯನ್ನು ನಿಯಂತ್ರಿಸಿಕೊಳ್ಳುವ ಜೀವನಮಾರ್ಗ, ಇಂಥ ಒಂದು ಜೀವನ ಮಾರ್ಗಕ್ಕೆ ಸದಾ ಹಂಬಲಿಸುವ ಜನಪದ ಇಂದಿಗೂ ನಮ್ಮ ನಡುವೆ ಇದೆ. ಅವರ ಎದೆಯಾಳದಲ್ಲಿ ಈ ಮೂರೂ ಕೃಷಿ ಪದ್ಧತಿಗಳ ಪಾರಂಪರಿಕ ಅನುಭವ ಜ್ಞಾನ ನೆನಪಾಗಿ ನೆಲದ ಕರ್ಮರೂಪಿ ಪ್ರಾತ್ಯಕ್ಷಿಕೆಯಾಗಿ ಮರುಭೂಮಿಯಲ್ಲಿನ ಓಯಸಿಸ್‌ಗಳಂತೆ ಇನ್ನೂ ಜೀವಂತವಿದೆ. ಅವುಗಳನ್ನು ಸಂಗ್ರಹಿಸಿ ಉಳಿಸುವ ಹಾಗೂ ಆಸಕ್ತ ರೈತ ಪ್ರಜ್ಞೆಗಳಿಗೆ ಒದಗಿಸುವ ಉದ್ದೇಶದ ಹಿನ್ನಲೆಯಲ್ಲಿ ಕೃಷಿ ಉಪಕರಣಗಳನ್ನು ಪಾರಂಪರಿಕವಾಗಿ ಜನಪದರು ಬಳಸಿಕೊಂಡು ತನ್ನ ಬದುಕಿನ ಅಂಗವಾಗಿ ರೂಪಿಸಿಕೊಂಡಿದ್ದಾರೆ.

2.2 ನೇಗಿಲು

ಮನುಷ್ಯ ವ್ಯವಸಾಯ ಆರಂಭಿಸಿದಾಗ ಭೂಮಿ ಬಗೆಯಲು ಉಪಯೋಗಿಸಿದ ಮರದ ಕವಲೇ ಮೊದಲ ನೇಗಿಲು. ಈ ನೇಗಿಲಿನ ವಿಚಾರ ರಾಮಾಯಣ, ಮಹಾಭಾರತದಲ್ಲೂ ಉಲ್ಲೇಖವಾಗಿದೆ. ಮಹಾಭಾರತದಲ್ಲಿ ನೇಗಿಲು ಬಲರಾಮನ ಆಯುಧವಾದರೆ, ರಾಮಾಯಣದಲ್ಲಿ ಸೀತೆ ಜನನ 'ನೇಗಿಲಿನಿಂದಲೇ'.

ನೇಗಿಲು ಉಳುಮೆ ಉಪಕರಣ, ಬಿತ್ತನೆಗೆ ಮುನ್ನ ಭೂಮಿಯನ್ನು ಸಡಿಲಗೊಳಿಸಲು ನೇಗಿಲಿನಿಂದ ಉಳುಮೆ ಮಾಡುತ್ತಾರೆ. ರಾಜ್ಯದ ಬಹುತೇಕ ಕಡೆ ದೇಸೀ ನೇಗಿಲ ಬಳಕೆಯಿದೆ.

ಈ ದೇಸೀ ನೇಗಿಲ ಚೂಪಾದ ತುದಿಗೆ ಕಬ್ಬಿಣದ ಕುಳ(ಗುಳ) ಜೋಡಿಸುತ್ತಾರೆ. ಆ ಕುಳ ನೆಲವನ್ನು ಕೊರೆದು ನೇಗಿಲು ಚಲಿಸಲು ಹಗರು ಮಾಡಿಕೊಡುತ್ತದೆ. ಈ ನೇಗಿಲನ್ನು ಎಳೆಯಲು ಜೋಡೆತ್ತು ಬಳಸುತ್ತಾರೆ. ನೇಗಿಲು ಆಯಾ ಪ್ರದೇಶದ ಭೂಗುಣ, ಬೆಳೆ ವೈವಿಧ್ಯಕ್ಕೆ ಅನುಗಣವಾಗಿರುತ್ತಿತ್ತು. ಬಯಲು ಸೀಮೆ ಹಾಗೂ ಉತ್ತರ ಕರ್ನಾಟಕದಲ್ಲಿ ಬಳಕೆಯಾಗುತ್ತಿದ್ದ ನೇಗಿಲು ದೊಡ್ಡದಾಗಿದ್ದರೆ, ಕರಾವಳಿ, ಮಲೆನಾಡು ಪ್ರದೇಶಗಳಲ್ಲಿ ಅಂದರೆ ಅತಿ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಬಾತುಕೋಳಿ ಕಾಲಿನ ಆಕಾರದ ನೇಗಿಲು ಬಳಕೆಯಾಗುತ್ತಿತ್ತು. ಏಕೆಂದರೆ ಮಲೆನಾಡಿನಲ್ಲಿ ಭತ್ತ ಬೆಳೆಯಲು ಕೆಸರು ಗದ್ದೆಯಲ್ಲಿ ಮಾತ್ರ ನೇಗಿಲು ಬಳಸುತ್ತಿದ್ದರು. ಆಳವಾದ ಉಳುಮೆಯ ಅಗತ್ಯವಿಲ್ಲದಿದ್ದರಿಂದ ಇಂಥ ನೇಗಿಲು ಬಳಸುತ್ತಿದ್ದರು.

ನೇಗಿಲು ಇಡಿಯಾಗಿ ಒಂದೇ ಉಪಕರಣ, ಆದರೆ ಅದರ ಭಾಗಗಳಾದ ಬಾಳು, ಹಿಡಿಕೆ, ಈಸು, ಕುಳ ಮತ್ತು ಅದರ ಜೊತೆ ಜೋಡಣೆಯಾಗುತಿದ್ದ ನೊಗ, ಚಿಟಿಕೆಗಳು ಬೇರೆ ಬೇರೆ ಕೃಷಿ ಚಟುವಟಿಕೆಗೆ ಬಳಕೆಯಾಗುತ್ತಿದ್ದವು. ಬಾಳು ದಪ್ಪವಾಗಿದ್ದು ಇನ್ನುಳಿದ ಭಾಗಗಳನ್ನು ಹಿಡಿದಿಟ್ಟರೆ, ಗುಳ(ಕುಳ) ಭೂಮಿಯಲ್ಲಿ ಚಲಿಸುವ ಕಬ್ಬಿಣದ ಭಾಗ, ಈಸು ನೊಗದಿಂದ ನೇಗಿಲನ್ನು ಎಳೆಯುವ ಸಾಧನ, ಇವೆಲ್ಲವನ್ನೂ ನಿಯಂತ್ರಿಸಿ ನೇಗಿಲನ್ನು ನಿರ್ವಹಣೆ ಮಾಡುವ ಭಾಗವೇ ಹಿಡಿಕೆ, ನೇಗಿಲು ಮತ್ತು ನೊಗಕ್ಕೆ ಸಂಪರ್ಕ ಕಲ್ಪಿಸುವುದೇ 'ಈಸು' ಇದು 3 ರಿಂದ 4 ಮೀ. ಉದ್ದ, 5ರಿಂದ 10 ಸೆಂ. ಮೀ ದಪ್ಪವಾಗಿರುತ್ತದೆ.

ಭೂಮಿಯನ್ನು ಉಳುವ ಮುಖ್ಯ ಭಾಗ, ನೇಗಿಲಿನ ಬಾಳು ಭಾಗಕ್ಕೆ ಜೋಡಿಸಿರುತ್ತಾರೆ. ಗಡಸು ಕಬ್ಬಿಣದಿಂದ ತಯಾರಿಸುವ ಈ ಕುಳದ ಒಂದು ತುದಿ ಚೂಪಾಗಿದ್ದು, ಮತ್ತೊಂದು ತುದಿ ಚಪ್ಪಟ್ಟೆಯಾಗಿರುತ್ತದೆ. ಕುಳ, ಬಾಳು ಜೊತೆ ಭದ್ರವಾಗಿ ನಿಲ್ಲಲು ಅರ್ಧ ಉಂಗುರದಾಕಾರದ ಎರಡು ಬಳೆಗಳನ್ನು ಜೋಡಿಸುತ್ತಾರೆ. ಅದಕ್ಕೆ ಜಿಗಣಿ ಮತ್ತು ಮೊಳೆ ಎನ್ನುತ್ತಾರೆ. ಕುಳ ಸವೆದಂತೆ ಅದನ್ನು ಸರಿಪಡಿಸುವಾಗ ಈ ಎರಡನ್ನು ಬಿಡಿಸಲಾಗುತ್ತದೆ. ಅಂದ ಹಾಗೆ ಈ ಕುಳದ ಉದ್ದ ಸಾಮಾನ್ಯವಾಗಿ 60 ರಿಂದ 70 ಸೆಂ.ಮೀ. ಮತ್ತು ದಪ್ಪ 2 ಸೆಂ. ಮೀ. 5ರಿಂದ 7 ಸೆಂ. ಮೀ. ಅಗಲ. ಇದು ಪ್ರದೇಶದಿಂದ ಪ್ರದೇಶಕ್ಕೆ ವ್ಯತ್ಯಾಸವಾಗುವ ಸಾಧ್ಯತೆ ಇದೆ.

ನೇಗಿಲಿಗೆ ನೊಗ ಜೋಡಿಸಿಕೊಂಡು, ಎರಡು ಎತ್ತುಗಳನ್ನು ಕಟ್ಟಿ ಉಳುಮೆ ಮಾಡುತ್ತಾರೆ. ವಿಮಾನ ಗಾಳಿ ಸೀಳಿ ಮುಂದೆ ಹೋಗುವಂತೆ ನೇಗಿಲು ಕೂಡ ಭೂಮಿಯನ್ನು 'ವಿ' ಆಕಾರದಲ್ಲಿ ಸೀಳುತ್ತದೆ. ಉಳುಮೆ ಎಲ್ಲ ಭೂಮಿಗೂ ಒಂದೇ ತೆರನಾಗಿ ಮಾಡುವುದಿಲ್ಲ. ಕೆಲವೊಂದು ಬೆಳೆಗಳಿಗೆ ಆಳವಾಗಿ, ಕೆಲವೊಂದಕ್ಕೆ ತೇಲಿಸಿ ಉಳುಮೆ ಮಾಡಬೇಕಾಗುತ್ತದೆ. ಆಳವಾಗಿ ಉಳುಮೆ ಮಾಡುವವರು ನೊಗವನ್ನು 'ಈಸಿನ' ಕೆಳ ಭಾಗಕ್ಕೆ (ಚಿತ್ರ ನೋಡಿ) ನೊಗ ಕಟ್ಟುತ್ತಾರೆ. ಆಳ ಬೇಡ ಎಂದಾಗ ಅದೇ ನೊಗವನ್ನು ಸ್ವಲ್ಪ ಮೇಲ್ಭಾಗಕ್ಕೆ ಕಟ್ಟುತ್ತಾರೆ. ನೊಗವನ್ನು ಸ್ವಲ್ಪ ಹಿಂದೆ ಮುಂದೆ ಮಾಡಿದರೂ ಆಳವನ್ನು ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. 'ಅದೆಲ್ಲ ನಮಗೆ ಕಣ್ಣಳತೆ ಮೇಲೆ ಗೊತ್ತಾಗುತ್ತದೆ. ಅದನ್ನು ಹೀಗೆ ಅಂತ ಹೇಳಕಾಗಲ್ಲ. ಒಮ್ಮೊಮ್ಮೆ ಆಳ ಹೆಚ್ಚಾಗಿ ಬೇಕು ಎಂದರೆ ಆಗ ಈಸಿನ ಮೇಲೆ ಕಾಲು ಮಡಗಿ, ಒಸಿ ಭಾರ ಹಾಕಿ ಉಳುಮೆ ಮಾಡ್ತೀವಿ 'ಎನ್ನುತ್ತಾರೆ ಅತಿವಾಳದ ರೈತ ತಿಪ್ಪಣ್ಣ

ಒಂದು ಜೊತೆ ಎತ್ತುಗಳು ದಿನದಲ್ಲಿ ಕಾಲು ಎಕರೆಯಿಂದ ಅರ್ಧ ಎಕರೆ ಹೊಲವನ್ನು ಉಳುತ್ತವೆ. ಮರದ ನೇಗಿಲಿಗೆ ಹೂಡುವ ನೊಗದ ಉದ್ದಳತೆ ಸಾಮಾನ್ಯವಾಗಿ ತೆರೆದ ಸಾಲಿನ ಅಗಲಳತೆಯ ನಾಲ್ಕುಪಟ್ಟು ಇರುತ್ತದೆ. ಅಂದರೆ ನೇಗಿಲು ತೆರೆದ ಸಾಲಿನ ಅಗಲಳತೆ 30 ಸೆಂ. ಮೀ. ಇರುತ್ತದೆ.

ಉತ್ತರ ಕರ್ನಾಟಕದಲ್ಲಿ ನೇಗಿಲಿಗೆ ಮಡಿಕೆ ಎಂಬ ಪದವೂ ಬಳಕೆಯಲ್ಲಿದೆ. ಬಯಲು ಸೀಮೆಯಲ್ಲಿ ನೇಗಿಲನ್ನು ಮುಖ್ಯವಾಗಿ ಉಳುಮೆಗೆ ಬಳಸಿದರೆ, ಉತ್ತರ ಭಾಗದಲ್ಲಿ ಜಮೀನು ಹದ ಮಾಡಲು ಮಡಿಕೆಗಳನ್ನು ಬಳಸುತ್ತಾರೆ. ಹಿಂದೆ ಟನ್‌ಗಟ್ಟಲೇ ತೂಗುವ ಮಡಿಕೆಗಳಿಂದ ಹಿಡಿದು ಒಂದೇ ಕೈನಲ್ಲಿ ಹಿಡಿದೆತ್ತುವಷ್ಟು ಹಗುರವಾದ ಮಡಿಕೆಗಳೂ ಬಳಕೆಯಲ್ಲಿದ್ದವಂತೆ. ಆದರೆ ಈಗ ಕಬ್ಬಿಣದ ನೇಗಿಲು. ಯಂತ್ರಗಳ ಅಬ್ಬರದಲ್ಲಿ ಅವೆಲ್ಲ ಮಾಯವಾಗಿವೆ.

ಬೀದರ ತಾಲೂಕಲ್ಲದೆ. ಉತ್ತರ ಕರ್ನಾಟಕದಲ್ಲೂ ನೇಗಿಲ (ಮಡಿಕೆಯ)ನ್ನು ವಿವಿಧ ಉಳುಮೆ ಚಟುವಟಿಕೆಗಳಲ್ಲಿ ಬಳಸುತ್ತಾರೆ. ಅದರಲ್ಲಿ ಹತ್ತು ಎತ್ತಿನ ಮಡಿಕೆ, ಆರು ಎತ್ತಿನ ಮಡಿಕೆ, ನಾಲ್ಕು ಎತ್ತಿನ ಮಡಿಕೆ, ರಂಟೆ ಮಡಿಕೆ, ಕಬ್ಬಿಣ ಮಡಿಕೆ, ಬೀಜ ಮಡಿಕೆ, ಎಂದು ಹಲವಾರು ವಿಧಗಳಿವೆ. ಹತ್ತು ಎತ್ತಿನ ಮಡಿಕೆಯಂತಹ ದೊಡ್ಡಮಡಿಕೆಗಳನ್ನು ಉಳುಮೆ ಮಾಡುವುದು ಈಗ ಸಂಪೂರ್ಣ ನಿಂತಿದ್ದು ಈಗ ಕೇವಲ ರಂಟೆ ಮಡಿಕೆ ಮಾತ್ರ ಬಳಕೆಯಾಗುತ್ತಿದೆ.

ಬೀದರ ಅಲ್ಲದೆ ಬಯಲು ಸೀಮೆಯಲ್ಲಿ ಮರದ ನೇಗಿಲನ್ನು ಬಿತ್ತಲು ಬಳಸುವಾಗ ನೇಗಿಲಿನ ಬಾಳಿಗೆ ಎಳೆಸಡ್ಡೆ ಕಟ್ಟಿ, ಸಡ್ಡೆಯಿಂದ ನೇಗಿಲಿನ ತೆರೆದ ಸಾಲಿನಲ್ಲಿ ಬೀಜಗಳನ್ನು ಹಾಕುತ್ತಾರೆ. ನೇಗಿಲಿನಿಂದ ಗೊಬ್ಬರ ಹಾಕಲು ಈಸಿನ ಮೇಲೆ ಒಂದುಕಬ್ಬಿಣದ ಪಟ್ಟಿ ಬಡಿದು ಬಾಳಿನಲ್ಲಿ ತೂತು ತೆಗೆದು ಸಡ್ಡೆಯ ಮುಖಾಂತರ ಗೊಬ್ಬರವನ್ನು ಆಳವಾಗಿ ಹರಗುತ್ತಾರೆ.

ಅದೇ ಉತ್ತರ ಕರ್ನಾಟಕದಲ್ಲಿ ಬಿತ್ತನೆ ನಂತರ ಬಂದ ಬೆಳೆಯಲ್ಲಿ ಬೀಜ ಹುಟ್ಟದಿದ್ದರೆ, ಅಂಥ ಸಾಲುಗಳ ನಡುವೆ ದೊಡ್ಡ ದೊಡ್ಡ ಉಪಕರಣಗಳಿಂದ ಮರು ಬಿತ್ತನೆ ಕಷ್ಟ, ಅದಕ್ಕಾಗಿಯೇ ಕೇವಲ ಕೈಯಿಂದಲೇ ಹೊಡೆಯುವಂತಹ ಚಿಕ್ಕ ಮಡಿಕೆ ಬಳಸಿ ಬೀಜ ಹುಟ್ಟದ ಸ್ಥಳದಲ್ಲಿ ಬಿತ್ತನೆ ಮಾಡುತ್ತಿದ್ದರು. ಹೀಗಾಗಿಯೇ ಇದಕ್ಕೆ ಬೀಜ ಮಡಿಕೆಯಂತಲೂ ಕರೆಯುತ್ತಾರೆ.

ಬೀದರನಲ್ಲಿ ನೇಗಿಲು ಬಳಸಿ ನೆಲ ಹರಗುತ್ತಾರೆ. ಉಳುಮೆ ಮಾಡಿದ ನಂತರ ಭೂಮಿಯನ್ನು ಕುಂಟೆಯಿಂದ ಹರಗಿ ಹದ ಗೊಳಿಸುತ್ತಾರೆ. ಎರೆ ಜಮೀನಿನಲ್ಲಿ ನೇಗಿಲಿನ ಉಳುಮೆ ಮಾಡದೇ ಆಳವಾಗಿ ಹರಗಿ ಭೂಮಿಯನ್ನು ಹದಗೊಳಿಸಿದರೆ ಬೇಸಾಯದ ಖರ್ಚ ಕಡಿಮೆಯಾಗುತ್ತದೆ ಎನ್ನುವುದು ರೈತರ ಲೆಕ್ಕಾಚಾರ. ಈ ಪದ್ಧತಿ ಬೀದರನಲ್ಲಿ ಹೆಚ್ಚು ಚಾಲ್ತಿಯಲ್ಲಿದೆ. ಅಲ್ಲಿ ಕಪ್ಪು ಮಣ್ಣು ಹೆಚ್ಚಾಗಿರುವುದರಿಂದ ನೇಗಿಲು ಬಳಸುವ ಪ್ರಮಾಣ ಕಡಿಮೆ. ಹಾಗಾಗಿ ನೇಗಿಲಿಗೆ ಕುಂಟೆಗಳನ್ನು ಜೋಡಿಸಿ, ಅದರಿಂದ ಭೂಮಿಯನ್ನು ಹರಗುತ್ತಾರೆ. ಉತ್ತರ ಕರ್ನಾಟಕದಲ್ಲಿ ನೆಲ ಹರಗಲು ಕಬ್ಬಿಣದ ಮಡಿಕೆ ಬಳಸುತ್ತಾರೆ. ಸುಮಾರು ಮೂರು ಅಡಿ ಆಳದವರೆಗೂ ಇಳಿದು ಉಳುಮೆ ಮಾಡುವ ಈ ಕಬ್ಬಿಣ ಮಡಿಕೆ ಇತ್ತೀಚೆಗೆ ಟ್ರ್ಯಾಕ್ಟರ್ ಪ್ರಭಾವದಿಂದ ಮೂಲೆಗುಂಪಾಗಿದೆ. ಸಂಪೂರ್ಣ ಕಬ್ಬಿಣದಿಂದ ರಚಿತವಾಗಿರುವ ಈ ಮಡಿಕೆಗೆ ಮಜಬೂತ (ಗಟ್ಟಿ) ಎನಿಸುವ ಎರಡು ಹಿಡಿಕೆ, ನೆಲಕ್ಕೆ ಊರುವ ಮಡಿಕೆ ಎಡ ಬಲಕ್ಕೆ ಬದಲಾಯಿಸುವಂತೆ ಮಾಡಿರುವಕೊಂಡಿ ವ್ಯವಸ್ಥೆ, ಮಡಿಕೆಯ ಮುಂದೆ ಆರು ಅಡಿ ಉದ್ದನೆಯ ದಪ್ಪ ಸಲಾಕೆ, ಅದರ ತುದಿಯಲ್ಲಿ ಕುಂಟೆಯನ್ನು ಉರುಳಿಸುತ್ತಾ ಮುಂದೆ ಕರೆದೊಯ್ಯುವ ಒಂದು ಚಕ್ರ ಜೋಡಣೆಯಾಗಿರುತ್ತದೆ.

ಈ ಮಡಿಕೆಗೆ ಹಿಂದೆ ಆರು ಎತ್ತುಗಳನ್ನು ಏಕಕಾಲಕ್ಕೆ ಹೂಡಿ ಉಳುಮೆ ಮಾಡಲಾಗುತ್ತಿತ್ತು. ಇದರ ವಿಶೇಷತೆ ಏನೆಂದರೆ ತಳದಲ್ಲಿರುವ ಜೇಕಿ (ಕೂಳೆ)ನಂತಹ ಕಸ, ಕಡ್ಡಿ, ಬೇರುಗಳನ್ನು ಕಿತ್ತೆಸೆದು ಸಂಪೂರ್ಣವಾಗಿ ಕಳೆ ನಿರ್ಮೂಲನೆ ಮಾಡುವುದು, ಜೊತೆಗೆ ಪೆಂಟಿ-ಪೆಂಟಿ(ಹೆಂಟೆ ಹೆಂಟೆಯಾಗಿ)ಮಣ್ಣು ತಳ ಮೇಲು ಮಾಡುವುದು. ಈಗ ಈ ಮಡಿಕೆಯ ಬಳಕೆ ಸ್ಥಗಿತಗೊಂಡಿದೆ. ಆದರೆ ಹಳ್ಳಿಗಳಲ್ಲಿ ಈ ಮಡಿಕೆಗಳು ಈಗಲೂ ಮ್ಯೂಸಿಯಂ ವಸ್ತುಗಳಂತೆ ಕಾಣಸಿಗುತ್ತವೆ.

2.3 ಕುಂಟೆ

ಜಮೀನಿನ ಮಣ್ಣನ್ನು ತಳಮೇಲು ಮಾಡಲು ಬಳಸುವ ಸಾಧನವೇ ಕುಂಟೆ. ಈ ಉಪಕರಣಕ್ಕೆ ಪ್ರತಿ ಕೃಷಿ ಚಟುವಟಿಕೆಯಲ್ಲೂ ಪ್ರಧಾನ ಸ್ಥಾನ. ಆಯಾ ಕುಂಟೆಯನ್ನನುಸರಿಸಿ ತಾಳಗಳು (ಹಲ್ಲು), ತಲುವು (ನೆಲಕ್ಕೆ ಊರುವ ಕಬ್ಬಿಣ ಮೊನಚು) ಹೊಂದಿದ್ದರೆ ಎಲ್ಲ ಕುಂಟೆಗಳು ಎರಡು ಈಸು (ಉದ್ದನೆಯ ಕಟ್ಟಿಗೆ ಕಂಬ), ಒಂದು ಮರದ ದಿಮ್ಮಿಯನ್ನು ಹೊಂದಿರುತ್ತವೆ. ಆಯಾ ತಾಳುಗಳ ಅಳತೆಗೆ ಹರಿತವಾದ ಕಬ್ಬಿಣ ಹಾಗೂ ಉಕ್ಕಿನಿಂದ ಮಾಡಿದ ಆಲಗು ಜೋಡಿಸಲಾಗಿರುತ್ತದೆ. ಬಯಲು ಸೀಮೆಯ ಒಣ ಬೇಸಾಯದಲ್ಲಿ ನೆಲ ಹರಗಲು, ಹದ ಮಾಡಲು, ಮಣ್ಣು ತಳಮೇಲಾಗಿಸಲು ಕುಂಟೆ ಬಳಸುತ್ತಾರೆ.

ಉತ್ತರ ಕರ್ನಾಟಕಕ್ಕೆ ಹೋಲಿಸಿದರೆ ಬಯಲು ಸೀಮೆ ಹಾಗೂ ಮಲೆನಾಡು ಕರಾವಳಿ ಪ್ರದೇಶಗಳಲ್ಲಿ ಕುಂಟೆಗಳ ಬಳಕೆ ಕಡಿಮೆ, ಬಯಲು ಸೀಮೆಯಲ್ಲಿ ನಾಲ್ಕೈದು ತರಹದ ಕುಂಟೆಗಳು ಬಳಕೆಯಲ್ಲಿದ್ದವು. ಈಗಲೂ ಕೂಡ ಬಳಕೆಯಲ್ಲಿದೆ ಎನ್ನುತ್ತಾರೆ ರೈತ ಶಂಕರ್.

ಎರೆ ಭೂಮಿಗಳಲ್ಲಿ ಹೆಚ್ಚಾಗಿ ಎಡೆಕುಂಟೆಗಳನ್ನು ಬಳಸುತ್ತಾರೆ. ಉತ್ತರ ಕರ್ನಾಟಕದಲ್ಲಿ ಮೂವತ್ತು ವರ್ಷಗಳ ಹಿಂದೆ ಈ ಕುಂಟೆ ಬಳಕೆಯಲ್ಲಿತ್ತು. ಅತ್ಯಂತ ನಾಜೂಕಿನ ಕುಂಟೆಯಾದ ಇದು ಒಂದು ಅಡಿ ಉದ್ದ ಹಾಗೂ ಆರು ಕೆ.ಜಿಯಷ್ಟು ತೂಕವಿರುತ್ತದೆ(ಇದರಲ್ಲಿ ಮುಖ್ಯವಾಗಿ ಚೌಕ ಅಥವಾ ಅಷ್ಟಕೋನಾಕೃತಿಯಾಗಿ ಕೆತ್ತಿದ ಮರದ ತುಂಡು ಸುಮಾರು 3 ರಿಂದ 6 ಅಡಿ ಉದ್ದ 15 ಅಂಗುಲ ಅಗಲ ಮತ್ತು 34 ಇಂಚಿನಷ್ಟು ದಪ್ಪವಾಗಿರುತ್ತದೆ). ಎರಡು ಎತ್ತಿನ ಸಹಾಯದಿಂದ ಏಕಕಾಲಕ್ಕೆ ಒಂದೇ ನೊಗಕ್ಕೆ ಇಂತಹ ಮೂರು ಕುಂಟೆಗಳನ್ನು ಕಟ್ಟಿ ಕಳೆ ತೆಗೆಯುತ್ತಿದ್ದರು.

ಕುಂಟೆಯ ಬಾಯಿಯಲ್ಲಿ ಎರಡು ಹಲ್ಲುಗಳು. ಆ ಹಲ್ಲುಗಳ ಬಾಯಿಯಲ್ಲಿ ಮೊನುಚಾದ ಅಲಗು, ಆ ಅಲಗಿನ ಮಧ್ಯ ಭಾಗದಲ್ಲಿ ಬೆಳೆಗಳು ಪಾರಾಗುವಂತೆ ಖಾಲಿ ಜಾಗ(ಗ್ಯಾಪ್) ಇರುತ್ತದೆ. ಒಂದುವರೆ ಅಡಿ ಎತ್ತರದವರೆಗೆ ಬೆಳೆದ ಬೆಳೆಗಳ ನಡುವೆ ಈ ಕುಂಟೆ ಹೊಡೆಯುತ್ತಾ ಹೋದಂತೆ ಅಲಗಿನ ನಡುವೆ ಇರುವ ಖಾಲಿ ಜಾಗೆಯಲ್ಲಿ ಬೆಳೆಗಳು ಪಾರಾದರೆ ಪಕ್ಕದಲ್ಲಿರುವ ಒಂದಿಂಚು ಕರಿಕೆ ಕಸಗಳು ಉಳಿಯದಂತೆ ಅಲಗು ಕತ್ತರಿಸುತ್ತಾ ಸಾಗುತ್ತದೆ. ಜೊತೆಗೆ ಪಕ್ಕದ ಮಣ್ಣು ಸಡಿಲಗೊಂಡು ಬೇರುಗಳು ಹಬ್ಬಲು ಅನುವು ಮಾಡಿಕೊಡುತ್ತಿತ್ತು. ವರ್ಷದಲ್ಲಿ ಒಂದು ಬಾರಿ ಈ ಕುಂಟೆಯಿಂದ ಜಮೀನನ್ನು ಉಳುಮೆ ಮಾಡಿದರೆ ಬೆಳೆ ಚಿಕ್ಕಟಾಗಿರುತ್ತಿತ್ತು. ಆದರೆ ರೈತ ಎಚ್ಚರ ತಪ್ಪಿದರೆ ಇಲ್ಲವೆ ಸಾಗುವ ಎತ್ತುಗಳು ಹೆಜ್ಜೆ ತಪ್ಪಿದರೆ ಗರಿಕೆ ಹರಿಯುವುದರ ಬದಲಿಗೆ ಬೆಳೆಗಳೆ ಹರಿದು ಬರುವ ಸಾಧ್ಯತೆಗಳಿವೆ. ಈ ಉದ್ದೇಶದಿಂದ ತಾಳ್ಮೆ ಇಲ್ಲದ ರೈತರು ಈ ಕುಂಟೆ ಹೊಡೆಯುವ ಬದಲಿಗೆ ಬೆಳೆಯ ಪಕ್ಕದ ಸಾಲಿನಲ್ಲಿ ಎರಡೆರಡು ಬಾರಿ ಉಳುಮೆ ಮಾಡುವ ಕುಂಟೆ ಬಳಸುತ್ತಿದ್ದಾರೆ.

ಬಯಲು ಸೀಮೆಯಲ್ಲಿ ಎಡೆಕುಂಟೆ ಹೆಚ್ಚು ಬಳಕೆಯಲ್ಲಿದೆ. ರಾಗಿ ಬಿತ್ತನೆ ಮಾಡಿದ ನಂತರ ಮಂದವಾಗಿ ಬೆಳೆಯುವ ಪೈರುಗಳನ್ನು ತೆಳ್ಳಗೆ ಮಾಡಲು ಚಿಪ್ಪು ಕುಂಟೆಯನ್ನು ಬಳಸುತ್ತಾರೆ. ಆದರೆ ಉತ್ತರ ಕರ್ನಾಟಕದ ರೈತರ ತರಹದ ಕುಂಟೆ ಇಲ್ಲಿ ಬಳಸುವುದು ಕಡಿಮೆ.

ಸಸಿ ಎತ್ತರ ಕಡಿಮೆ ಇದ್ದಾಗ ಉತ್ತರ ಕರ್ನಾಟಕದಲ್ಲಿ ಬಳಸುವಂತಹ ಕುಂಟೆಯನ್ನು ಬಳಸುತ್ತಾರೆ. ಪೈರು ಎತ್ತರವಾಗಿ ಬೆಳೆದಾಗ ಕುಳಗಳನ್ನು ಬಳಸಿ ಕುಂಟೆ ಹೊಡೆಯುತ್ತಾರೆ. ಈ ಒಂದೊಂದು ಕುಳಕ್ಕೆ ಒಂದು 'ಚಿಪ್ಪು' ಎನ್ನುತ್ತಾರೆ. ಆದ್ದರಿಂದೇ ನಾಲ್ಕು ಕುಳ ಬಳಸಿದರೆ ನಾಲ್ಕು ಚಿಪ್ಪಿನ ಕುಂಟೆ, ಎರಡು ಬಳಸಿದರೆ ಎರಡು ಚಿಪ್ಪಿನ ಕುಂಟೆ, ಆರು ಬಳಸಿದರೆ ಆರು ಚಿಪ್ಪಿನ ಕುಂಟೆ ಎಂಬ ಪದ ಬಳಕೆಯಲ್ಲಿದೆ.

'ಕುಂಟೆ ಬಳಸಿ ಉಳುಮೆ ಮಾಡುತ್ತಾನೆಂದರೆ ಅವನೊಬ್ಬ ಬೇಸಾಯ ಪರಿಣತ ಎಂದೇ ಹೇಳಬೇಕು' ಕುಂಟೆ ಬಳಸುವವನಿಗೆ ಸೂಕ್ಷ್ಮ ಸಂವೇದನೆ ಇರಬೇಕು. ಮೈಯೆಲ್ಲ ಕಣ್ಣಾಗಿರಬೇಕು.

ಎತ್ತುಗಳನ್ನು ಬಲಗೈಲಿ ನಿಯಂತ್ರಿಸಬೇಕು, ಎಡ–ಬಲದ ಚಿಪ್ಪು(ಕುಳ) ಗಳನ್ನು ಬೇಕಾದ ಕಡೆ ಊರಬೇಕು. ಬೇಡವಾದ ಕಡೆ ತೇಲಿಸಬೇಕು. ಎತ್ತುಗಳು ಹಾದಿ ತಪ್ಪಿದಾಗ ಬಲಗೈನಲ್ಲಿನ ಮುಳ್ಳುಕಡ್ಡಿಯನ್ನು ಬಳಸಿ ಎತ್ತುಗಳನ್ನು ತಟ್ಟಿಕೊಳ್ಳಬೇಕು. ಇದರ ಜೊತೆ ಪೈರು ಎಲ್ಲಿ ದಟ್ಟವಾಗಿದೆ ಅಲ್ಲಿ ಆಳವಾಗಿ ಕುಂಟೆಯನ್ನು ಒತ್ತಬೇಕು. ಕಳೆ ಇದ್ದಕಡೆಗೆ ಕುಂಟೆಯನ್ನು ಎತ್ತೊಯ್ಯಬೇಕು. ಪೈರು ಇಲ್ಲದ ಕಡೆ ಕುಂಟೆ ಹೊಡೆಯಬಾರದು ಇಂಥ ಅನೇಕ ಸೂಕ್ಷ್ಮ ವಿಚಾರಗಳನ್ನು ಒಂದೇ ಸಮಯದಲ್ಲಿ ಗ್ರಹಿಸುವಂತಹ ರೈತನಿಗೆ ಮಾತ್ರ ಕುಂಟೆ ಹೊಡೆಯಲು ಸಾಧ್ಯ ಎನ್ನುವುದು ಆ ಇಬ್ಬರು ರೈತರ ಅಭಿಪ್ರಾಯ.

'ಭೂಮಿಗೆ ಗಾಯ ಮಾಡಿ, ಮಣ್ಣು ಪೈರಿನ ದಡಕ್ಕೆ ದಂಡೆಯಾಗಿ ಬಿತ್ತು ಎಂದರೆ ಬೇಸಾಯ ಚಂದಕ್ಕಾಯಿತು ಎಂದು ಅರ್ಥ' ಎನ್ನುತ್ತಾರೆ. ಬಸವರಾಜ ಅವರ ಪ್ರಕಾರ ಕುಂಟೆ ಹೊಡೆದು ಭೂಮಿಯನ್ನು ಜಳ್ಳು(ಜಾಲರಿಯಂತೆ)ಮಾಡಿದರೆ ಪೈರಿನ ಸಾಲಿಗೆ ಮಣ್ಣು ಸೇರಿ, ಪಕ್ಕದ ಸಾಲು ನೀರಿಂಗಿಸಿಕೊಳ್ಳಲು ಸಿದ್ಧವಾಗುತ್ತದೆ. ಆಗ ಪೈರು ಚೆನ್ನಾಗಿ ಬರುತ್ತದೆ. ಇಳುವರಿ ಹೆಚ್ಚುತ್ತದೆ ಎನ್ನುವುದು ಅವರ ಮಾತಿನ ಅರ್ಥ.

ಹೆಚ್ಚು ಪೈರು ಒಂದೇ ಕಡೆ ಬೆಳೆದಷ್ಟು ಇಳುವರಿ ಕಡಿಮೆಯಾಗುತ್ತದೆ. ಆದ್ದರಿಂದ ಪೈರು ತೆಳ್ಳಗೆ ಮಾಡಲು ಕುಂಟೆ ಹೊಡೆಯುತ್ತೇವೆ ಎನ್ನುತ್ತಾರೆ ರೈತ ಶಂಕರ್. ದುಡಿಯುವವನು ಒಬ್ಬ, ತಿನ್ನುವವರು ಆರು ಮಂದಿಯಾದರೆ ಹೊಟ್ಟೆಗಾದರೆ ಬಟ್ಟೆಗಿಲ್ಲ, ಬಟ್ಟೆಗಾದರೆ ಸೂರಿಗಿಲ್ಲ ಎನ್ನುವಂತಾಗುವುದಿಲ್ಲವೇ. ಅದೇ ರೀತಿ ಪೈರುಗಳು ಒಂದೇ ಕಡೆ ದಟ್ಟವಾಗಿ ಬೆಳೆಯಬಾರದು ಎಂಬ ವ್ಯಾಖ್ಯಾನವನ್ನು ಶಂಕರ್ ನೀಡುತ್ತಾರೆ.

ಉತ್ತರ ಕರ್ನಾಟಕದಲ್ಲಿ ಬಳಕೆಯಾಗುತ್ತಿದ್ದ ಕುಂಟೆಗಳು ಈ ರೀತಿ ಇವೆ: ಹತ್ತು ಎತ್ತಿನ ಕುಂಟೆ, ನಾಲ್ಕು ಎತ್ತಿನ ಕುಂಟೆ, ರಂಟೆ ಕುಂಟೆ, ಐದು ಗೇಣಿನ ಕುಂಟೆ, ಎಡೆ ಕುಂಟೆ ದಳೆ ಕುಂಟೆ, ಜಂತು ಕುಂಟೆ, ರಾಶಿ ಕುಂಟೆ ಹೀಗೆ ತರಹೆವಾರಿ ಕುಂಟೆಗಳಿದ್ದು ಕೆಲವೊಂದು ಎತ್ತುಗಳಿಂದ ಬಳಕೆಯಾದರೆ ಇನ್ನು ಕೆಲವು ಮಾನವ ಚಾಲಿತವಾಗಿವೆ. ಹತ್ತು ಎತ್ತಿನಿಂದ ಉಳುಮೆ ಮಾಡುವ ನಾಲ್ಕು ಎತ್ತಿನ ಕುಂಟೆ ಹಾಗೂ ರಂಟೆ ಕುಂಟೆಗಳನ್ನು ಜಾಲಿ ಕಟ್ಟಿಗೆಗಳಿಂದಲೇ ಮಾಡುತ್ತಾರೆ.

ಕುಂಟೆಗೆ ಬಳಸುವ ತಾಳನ್ನು ಜಾಲಿ ಮರ ಅಥವಾ ಕಬ್ಬಿಣದಿಂದ ತಯಾರಿಸುತ್ತಾರೆ. ತಾಳುಗಳು 40 ರಿಂದ 60 ಸೆಂ. ಮೀ ಉದ್ದವಾಗಿವೆ. ಮರದ ತಾಳು ಗೋಲಾಕಾರವಾಗಿವೆ. ಭೂಮಿಯಲ್ಲಿ ಚಲಿಸುವ ಭಾಗದಲ್ಲಿ ಬಳೆಗಳು ಇರುತ್ತವೆ. ಈ ಬಳೆಗಳು ಬುಡವನ್ನು ಅಲುಗಾಡದಂತೆ ಬಿಗಿಯಾಗಿ ಹಿಡಿದಿರುತ್ತವೆ ಮತ್ತು ತಾಳಿನ ಸವಕಳಿ ಕಡಿಮೆ ಮಾಡುತ್ತವೆ.

ಬೃಹದಾಕಾರವಾದ ಕುಂಟೆಯನ್ನು ಹೆಗ್ಗುಂಟೆ ಎನ್ನುತ್ತಾರೆ. ಅಂದರೆ ಇದು ಕುಂಟೆಗಳೆಲ್ಲೆಲ್ಲಾ ದೊಡ್ಡದು. ಇದಕ್ಕೆ ನಾಡಕುಂಟೆ ಎಂತಲೂ ಕರೆಯುತ್ತಾರೆ. ಮುಂಗಾರು ಮಳೆಯಾದಾಗ ಭೂಮಿಯಲ್ಲಿನ ತೇವಾಂಶ ಹಾಳಾಗದಂತೆ ಭೂ ಮುಚ್ಚಿಗೆ ಮಾಡಲು ಈ ಉಪಕರಣ ಬಳಸುತ್ತಿದ್ದರು.

ಬಯಲು ಸೀಮೆಯಲ್ಲಿ ಈ ಉಪಕರಣದ ಬಳಕೆ ಹೆಚ್ಚು ಒಂದೂವರೆಯಿಂದ ಎರಡು ಅಡಿ ಉದ್ದದ ಸುಮಾರು ನಾಲ್ಕೂವರೆ ಅಂಗುಲ ದಪ್ಪದ ಮರದ ದಿಮ್ಮಿಗೆ ತಳದಲ್ಲಿ ಎರಡು ನೇರ ಅಥವಾ ಒಳಬಾಗಿದ ಕಬ್ಬಿಣದ ಪಟ್ಟಿಯನ್ನು ಜೋಡಿಸಿರುತ್ತಾರೆ. ಈ ಹಲ್ಲುಗಳು ಭೂಮಿಯನ್ನು ಕೊರೆಯಲು ಅನುಕೂಲವಾಗಿವೆ.

ಸುಮಾರು 20 ವರ್ಷಗಳಿಂದ ಬಳಕೆಯಲ್ಲಿದ್ದ ಈ ಕುಂಟೆ ಈಗ ರೈತ ಸಮೂಹದಿಂದ ಮಾಯ ವಾಗಿದೆ. ಕುಂಟೆ ನಾಲ್ಕು ಕ್ವಿಂಟಲ್ ಭಾರವಾಗಿದ್ದುದೇ ಈಗ ಮಾಯವಾಗಲು ಕಾರಣ ಎನ್ನುತ್ತಾರೆ. ರೈತರು.

ಈ ಕುಂಟೆಯನ್ನು ಜಮೀನು ಹರಗಲು ಹತ್ತು ಎತ್ತು ಹಾಗೂ ಎಂಟು ಜನರು ಏಕ ಕಾಲಕ್ಕೆ ಉಳುಮೆ ಮಾಡುತ್ತಿರುವುದರಿಂದಾಗಿಯೇ ಇದಕ್ಕೆ ಹತ್ತು ಎತ್ತಿನ ಕುಂಟೆ ಎನ್ನುತ್ತಾರೆ. ಈಗ ಕುಂಟೆ ಕಾಣೆಯಾಗಿದೆ. ಬದಲಿಗೆ ಇದಕ್ಕೆ ಬಳಸುತ್ತಿದ್ದ ನೊಗ ಮಾತ್ರ ಕೆಲವು ಮನೆಗಳಲ್ಲಿವೆ. ಅದರ ಉದ್ದವೇ 15 ಅಡಿ ಇದೆ. ಒಣ ಜಮೀನಿನಲ್ಲಿ ಬೇಸಿಗೆ ಸಮಯದಲ್ಲಿ ಈ ಕುಂಟೆಯಿಂದ ಉಳಿಮೆ ಮಾಡಿದರೆ ಸುಮಾರು ಎರಡು ಅಡಿ ಆಳಕ್ಕೆ ಇಳಿದು ಜೇಕಿ(ಕೂಳೆ)ನ ಕಳೆಯಂತಹ ಕಸಗಳನ್ನು ಬುಡಮೇಲು ಮಾಡುವುದರ ಜೊತೆಗೆ ಮಣ್ಣನ್ನು ತಿರುಗ ಮರುಗ(ತಳಮೇಲು) ಮಾಡುತ್ತಿತ್ತು. ಒಂದು ಬಾರಿ ಈ ಕುಂಟೆಯಿಂದ ಉಳುಮೆ ಮಾಡಿದರೆ ಹತ್ತು ವರ್ಷಗಳವರೆಗೆ ಕುಂಟೆ ಉಳುಮೆ ಮಾಡುವ ಪ್ರಮೆಯವೇ ಇದ್ದಿಲ್ಲ ಎಂದು ಹೇಳುವ ಬೀದರನ ತೋಟಪ್ಪ ತಳವಾರ 'ಈಗಿನ ಜನರಲ್ಲಿ ಆ ತಾಕತ್ತು ಇಲ್ಲ ಜೊತೆಗೆ ರೈತರಲ್ಲಿ ಪರಸ್ಪರ ಸಹಕಾರ ಮನೋಭಾವ ಕಡಿಮೆಯಾಗಿದೆ. ಅಲ್ಲದೇ ಟ್ರಾಕ್ಟರ್ ಬಂದಿರುವುದರಿಂದ ಆದೀಗ ಮಾಯ ಆಗ್ಯೆತ್ರಿ' ಎಂದು ಹೇಳುತ್ತಾರೆ.

ಹತ್ತು ಎತ್ತಿನ ಕುಂಟೆ ಮೂಲೆ ಸೇರಿದ ನಂತರ ಚಾಲ್ತಿಗೆ ಬಂದ ಈ ನಾಲ್ಕು ಎತ್ತಿನ ಕುಂಟೆ ಹತ್ತು ಎತ್ತಿನ ಕುಂಟೆಯ ಅರ್ಧ ಕೆಲಸವನ್ನು ಮಾಡುತ್ತದೆ, ಶೇಂಗಾ ಹರಗಲು, ಮಡಿಕೆ ಹೊಡೆದ(ಉಳುಮೆ ಮಾಡಿದ) ಹೊಲವನ್ನು ಹರಗಲು, ಮಾಗಿ ಮಾಡಲು ಈ ಕುಂಟೆಯನ್ನು ಬಳಸುತ್ತಾರೆ. ಈಗಲೂ ಕೆಲವು ಕಡೆ ಈ ಉಪಕರಣ ಬಳಕೆಯಲ್ಲಿದೆ.

ಮಳೆಯಾದ ನಂತರ ಹಾಗೂ ಬಿತ್ತನೆ ಮಾಡುವ ಪೂರ್ವದಲ್ಲಿ ರಂಟೆ ಕುಂಟೆ ಹೊಡೆಯುವುದು ಸಂಪ್ರದಾಯ. ಈ ಕುಂಟೆ ಹೊಡೆಯುವುದರಿಂದ ತಳದಲ್ಲಿದ್ದ ಮಣ್ಣು ಬಿಸಿಲಿಗೆ ಹರಡಿಕೊಳ್ಳಲು ಸಹಾಯವಾಗುತ್ತದೆ. ಇದನ್ನು ಸಾಮಾನ್ಯವಾಗಿ ಮಾಗಿ ಉಳುಮೆ ಸಂದರ್ಭದಲ್ಲಿ ಬಳಸುತ್ತಾರೆ. ಕಾರಣ, ಭೂಮಿಯಲ್ಲಿರುವ ಕೀಟಗಳ ಮೊಟ್ಟೆ ಮೇಲ್ಭಾಗಕ್ಕೆ ಬಂದು, ಬಿಸಿಲಿಗೆ ಬೆಂದು ನಾಶವಾಗಲಿ ಎಂಬ ಉದ್ದೇಶ ಈ ರಂಟೆ ಕುಂಟೆಯದ್ದಾಗಿದೆ. ಈ ಉಪಕರಣ ಬಳಸಿ ಉಳುಮೆ ಮಾಡುವುದರಿಂದ ಬಿತ್ತನೆ ಮಾಡುವಾಗ ಕೂರಿಗೆ ನೆಲಕ್ಕೆ ಊರಲು ಸರಳವಾಗುತ್ತದೆ. ಅಲ್ಲದೆ ಜೋಳ, ತೊಗರಿ, ಸಜ್ಜೆ, ಎಳ್ಳಿನಂತಹ ಬೆಳೆಗಳನ್ನು ಕೊಯ್ಲು ಮಾಡಿದ ನಂತರ ನೆಲದಲ್ಲಿ ಉಳಿಯುವ ಕೂಳೆ(ಕೋಲಿ)ಗಳನ್ನು ಇಡಿಯಾಗಿ ಮೇಲಕ್ಕೆ ಎತ್ತಲು ಸಹಕಾರಿಯಾಗುತ್ತದೆ. ಇದನ್ನು ಈಗಲೂ ಸಣ್ಣ ಹಿಡುವಳಿದಾರರು ಬಳಸುತ್ತಾರೆ.

ಇದು ಕೂಡ ಎರಡು ಎತ್ತುಗಳನ್ನು ಬಳಸಿ ಉಳಿಮೆ ಮಾಡುವಂತಹದ್ದಾಗಿದ್ದು ಅಷ್ಟೊಂದು ಭಾರವಲ್ಲದ ಹಾಗೂ ಬೇವಿನ ಕಟ್ಟಿಗೆಯಿಂದ ಮಾಡಿದ ನಾಲ್ಕು ಅಡಿ ಉದ್ದವಿರುವ ಕುಂಟೆಯಾಗಿದೆ. ಕೂರಿಗೆ ಸಹಾಯದಿಂದ ಬಿತ್ತನೆ ಮಾಡುತ್ತಾ ಮುಂದೆ ಮುಂದೆ ಹೋದಂತೆ ಈ ಕುಂಟೆಯ ಸಹಾಯದಿಂದ ಬೀಜಗಳನ್ನು ಮಣ್ಣಿನಲ್ಲಿ ಮುಚ್ಚಲು ಹಾಗೂ ಕಳೆಗಳನ್ನು ಬೇರು ಸಮೇತ ಹೊರ ಹಾಕಲು ಬಳಸುತ್ತಾರೆ. ಹೀಗೆ ಉಳುಮೆ ಮಾಡುತ್ತಿರುವಾಗ ಕುಂಟೆಯ ಅಲಗಿನಲ್ಲಿ (ಬಾಯಿಯಲ್ಲಿ) ಸಿಕ್ಕಿ ಹಾಕಿಕೊಂಡಿರುವ ಕಳೆಗಳ ಬೇರುಗಳನ್ನು ಕೀಳಲು ರೈತ ಕುಂಟೆಯನ್ನು ಕೈಯಿಂದ ಮೇಲಕ್ಕೆ ಎತ್ತಬೇಕಾಗುವುದರಿಂದಲೇ ಈ ಕುಂಟೆಯನ್ನು ಹಗುರವಾಗಿ ಮಾಡಿರುತ್ತಾರೆ.

ಈ ಕುಂಟೆಯನ್ನು ಬಿತ್ತನೆ ಕಾರ್ಯ ಮುಗಿದ ನಂತರ ಸಾಲಿನ ಮಧ್ಯೆ ಸರಾಗವಾಗಿ ಮಳೆ ನೀರು ನಿಲ್ಲಲೆಂದು ಅಡಿಗೊಂದರಂತೆ ಆಜೂ ಬಾಜು ಪುಟ್ಟ ಒಡ್ಡುಗಳನ್ನು ಹಾಕುವುದಕ್ಕಾಗಿ ಬಳಸುತ್ತಾರೆ. ಬೆಳೆಗಳ ಬೆಳೆದ ನಂತರ ಈ ಕುಂಟೆಯ ಹಲ್ಲುಗಳಿಗೆ ಬಳ್ಳಿಯಿಂದ ಸಿಂಬೆ ಸುತ್ತಿ ಮಧ್ಯದ ಮಣ್ಣು ಪಕ್ಕದ ಬೆಳೆಗಳ ಬೇರುಗಳಿಗೆ ಬಿದ್ದು ಬೇರುಗಳು ಹೊರ ಕಾಣದಂತೆ ರಕ್ಷಣೆ ಮಾಡುತ್ತದೆ. ಇದು ಈಗಲೂ ಉತ್ತರ ಕರ್ನಾಟಕದ ಗದಗ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳಲ್ಲಿ ಬಳಕೆಯಲ್ಲಿದೆ.

ಒಂದುವರೆ ಅಡಿ ಎತ್ತರ, ಐದು ಉದ್ದವಿದ್ದು ಎರಡು ಹಲ್ಲುಗಳನ್ನು ಹೊಂದಿರುತ್ತದೆ. ಜೊತೆಗೆ ಹಲ್ಲುಗಳಲ್ಲಿ ಅಲಗನ್ನು ಜೋಡಿಸಲಾಗಿರುತ್ತದೆ. ಹಬ್ಬು ಶೇಂಗಾ ಹರಗಿದ ನಂತರ ಬಳ್ಳಿಯಿಂದ ಕಳಚಿಕೊಂಡಿರುವ ಶೇಂಗಾ ಹೆಕ್ಕಲು ಈ ಕುಂಟೆಯನ್ನು ಉಳುಮೆ ಮಾಡುತ್ತಾರೆ.

2.4 ತೂರುವ ತಟ್ಟಿ

ರಾಶಿ ಮಾಡುವ ಸಂದರ್ಭದಲ್ಲಿ ಇದನ್ನು ಬಳಕೆ ಮಾಡುತ್ತಾರೆ. ಮೆಟ್ಟಿನ ಮೇಲೆ ನಿಂತು ಕಾಳು ಹಾಗೂ ಹೊಟ್ಟು ಮಿಶ್ರಿತ ವಸ್ತು ತೂರುವ ವ್ಯಕ್ತಿಗೆ ಕೆಳಗಿನಿಂದ ತುಂಬಿ ಮೇಲಕ್ಕೆ ಎತ್ತಿಕೊಡಲು ಹಗುರವಾಗುವಂತಾಗಲು ಈ ತಟ್ಟೆಯನ್ನು ಬಳಸುತ್ತಾರೆ. ಈಚಲು ಬರಲಿನಿಂದ ಹೆಣೆಯುವ ತಟ್ಟಿ ಸುಮಾರು ಆರು ಕೆಜಿಯಷ್ಟು ಧಾನ್ಯ ಹಿಡಿಯುತ್ತದೆ. ವಿಶೇಷವಾಗಿ ಕೊರವರು ಈ ತಟ್ಟಿಯನ್ನು ತಯಾರಿಸುತ್ತಾರೆ. ಬಯಲುಸೀಮೆಯಲ್ಲಿ ಹಗುರವಾದ 'ಮೊರ'ಗಳನ್ನು ಹೊಟ್ಟು ತೂರುವುದಕ್ಕಾಗಿ ಬಳಸುತ್ತಾರೆ. ಇವನ್ನು ಬಿದಿರಿನಿಂದ ತಯಾರಿಸಿರುತ್ತಾರೆ. ಗದಗದಲ್ಲಿ 'ತೂರುವ ಬಿದಿರಿನ ಮುಟ್ಟಿಗಳೇ ಇವೆ' ಗದಗ ಜಿಲ್ಲೆಯ ಹೊಂಬಳ ಗ್ರಾಮದ ಆರ್.ಎಸ್.ಪಾಟೀಲರ ಮನೆಯಲ್ಲಿ ಈಗಲೂ ತೂರುವ ಬಿದಿರಿನ ಪುಟ್ಟಿಗಳನ್ನು ಬಳಸುತ್ತಾರೆ. ಆದರಿಂದ ಏಳು ಪಾವು ಧಾನ್ಯ ಹಿಡಿಸುವ ಈ ಪುಟ್ಟಿಗಳು ಕಣದಲ್ಲಿ ಬಳಕೆಯಾಗುತ್ತವೆ.

2.5 ಹಗ್ಗ

ಬಯಲು ಸೀಮೆಯಲ್ಲಿ ತೆಂಗಿನ ನಾರಿನ ಹಗ್ಗ, ಹತ್ತಿ ಹಗ್ಗ, ಕತ್ತಾಳೆ ನಾರಿನ ಹಗ್ಗ, ಪುಂಡಿ ಹಗ್ಗ ಹೀಗೆ ತರಾವರಿ ಹಗ್ಗಗಳು ಬಳಕೆಯಲ್ಲಿದ್ದವು. ನಾರಿನ ಹಗ್ಗವನ್ನು ದನ ಕಟ್ಟಲು, ಉಳುಮೆಗೆ

ಕಟ್ಟುವ ಎತ್ತಗಳಿಗೆ ಕಟ್ಟಲು, ಹುಲ್ಲಿನ ಹೊರೆ ಕಟ್ಟಲು ಬಳಸುತ್ತಿದ್ದರೆ ಹತ್ತಿ ಹಗ್ಗವನ್ನ ಮೂಗುದಾರಕ್ಕಾಗಿ, ಬಾರುಕೋಲು ತಯಾರಿಸುವುದಕ್ಕಾಗಿ ಬಳಸುತ್ತಿದ್ದರು.

ನಾನಾ ನಮೂನೆಯ ರಂಗು-ರಂಗಿನ ಹಗ್ಗಗಳು, ದಾರಗಳು, ಕೃಷಿಗೆ ಅತ್ಯಅವಶ್ಯವೆನಿಸಿರುವ ಮಿಣಿದಾರ, ಕೂರಗಿದಾರ, ಎತ್ತಿನ ಬಣ್ಣ-ಬಣ್ಣದ ಜೂಲಗಳು, ಕೊರಳ ಹಾರಗಳು, ಮಡಿಕೆ ಹಾಸುಗಳಂತಹ ತರಾವರಿ ಹಗ್ಗಗಳನ್ನು ತಯಾರಿಸಿ; ಅದನ್ನೇ ಕುಟುಂಬದ ಕಸುಬನ್ನಾಗಿಸಿಕೊಂಡಿದ್ದ ಅದೆಷ್ಟೋ ಕುಟುಂಬಗಳು ಉತ್ತರ ಕರ್ನಾಟಕದ ಮೂಲೆ-ಮೂಲೆಯಲ್ಲಿದ್ದಾರೆ. ಆದರೆ ಮೇಲಿಂದ ಮೇಲೆ ಬೀಳುವ ಬರಗಾಲ ಜೊತೆಗೆ ಇಂದಿನ ಹೈಟೆಕ್ ಕೃಷಿಯಿಂದಾಗಿ ಅವರಿಗೆ ಅನ್ನ ನೀಡುತ್ತಿರುವ ಹಗ್ಗದ ಉದ್ಯೋಗವೀಗ ಅಂತಂತ್ಯ ಸ್ಥಿತಿಯಲ್ಲಿದ್ದು ಹಗ್ಗ ತಯಾರಿಸುವವರ ಜೀವನ ಡೋಲಾಮಾಯವಾಗುತ್ತಿದೆ.

ತಲತಲಾಂತರದಿಂದ ಹಗ್ಗ ತಯಾರಿಸುತ್ತ ಬಂದಿರುವ ಕುಟುಂಬಗಳು ಇನ್ನು ಇವೆ. ಕಲ್ನಾರಿನಿಂದ, ರಕ್ಕಸಬಾಳೆ, ಪುಂಡಿನಾರು, ವಿವಿಧ ಬೇರು ಹೀಗೆ ನಿಸರ್ಗದಲ್ಲಿ ವಿಫಲವಾಗಿ ಸಿಗುವ ಸಸ್ಯಗಳಿಂದ ಹಗ್ಗ ತಯಾರಿಸಿ ಉಪಜೀವನ ನಡೆಸುತ್ತಿದ್ದರು. ಸಸ್ಯಗಳಿಂದಲೇ ತಯಾರಿಸುತ್ತಿದ್ದರಿಂದ ಯಾವುದೇ ಬಂಡವಾಳವಿಲ್ಲದೆ ಹಗ್ಗ ನೇಯುವ ಜಾಣ್ಮೆ ಒಂದೇ ಇವರಿಗೆ ಮೂಲ ಬಂಡವಾಳವಾಗಿತ್ತು. ಆದರೆ "ಭರಪೂರ ಮಳೆಗಾಲ ಅದಾಗಿತ್ರಿ, ಕೆರೆ, ಹಳ್ಳದ ದಂಡೆ, ಜಮೀನುಗಳಲ್ಲಿ ಇಂತಾವು ಭಾಳ ಬೆಳಿತಿದ್ವು, ಆದ್ರೀಗ ಮಳಿಗಾಲ ಕಡಿಮಿ ಆಗ್ಯಾವ್ರಿ ಹಿಂಗಾಗಿ ಇಂತವು ಯಾವೂ ಗಿಡ ನಮಗೀಗ ಸಿಗುವುದಿಲ್ರಿ" ಎಂದು ಕಾಡವಾದ ಬಸವರಾಜ ಕೋರಿ ಹೇಳುತ್ತಾರೆ.

ಎಪ್ಪತ್ತರ ದಶಕದಲ್ಲಿ ನಿಸರ್ಗದ ಕೊಡುಗೆಯಿಂದಲೇ ನಡೆದ ಈ ಕೆಲಸ ಹತ್ತ ವರ್ಷದಿಂದೀಚೆಗೆ ನೂಲನ್ನೇ ಅವಲಂಭಿಸುವಂತಾಯಿತು. ನಾಲ್ಕಾರು ವರ್ಷ ಯಾವುದೇ ತೊಡಕಿಲ್ಲದೇ ಸಾಗಿದ್ದ ಈ ಹಗ್ಗದ ಕೆಲಸ ಈಗ ಮತ್ತೇ ಕಗ್ಗಂಟಾಗುತ್ತಿದೆ. ಪ್ರತಿ ವರ್ಷ ಬೀಳುವ ಬರಗಾಲದಿಂದಾಗಿ ಮೇವಿನ ಸಮಸ್ಯೆ ಉಲ್ಬಣಿಸಿ ನಾಲ್ಕಾರು ಜೊತೆ ದನಕರುಗಳನ್ನು ಹೊಂದಿದ್ದ ರೈತರೀಗ ಒಂದೋ ಎರಡೋ ದನಗಳನ್ನು ಕಟ್ಟಿಕೊಂಡಿದ್ದಾರೆ. ಅಲ್ಲದೆ ಮಡಿಕೆ. ಕುಂಟೆ, ಕೂರಗಿ, ಹಂತಿ ಹೊಡೆಯಲು ಇವರ ಹಗ್ಗಗಳೇ ಬಳಕೆಯಾಗುತ್ತಿದ್ದವು. ಆದರೆ ಈಗ ಅವುಗಳ ಜಾಗೆಯಲ್ಲಿ ಚೈನ್‌ಗಳು, ಪೇಟೆಯಲ್ಲಿಯೇ ಸಿಗುವ ಸಿದ್ಧಪಡಿಸಿದ ಪ್ಲಾಸ್ಟಿಕ್ ಹಗ್ಗಗಳು ಹಾಜರಾಗಿರುವುದರಿಂದ ಜೊತೆಗೆ ರೈತರು ಬಿತ್ತಲು, ಹರಗಲು, ರಾಶಿ ಮಾಡಲು ಯಂತ್ರಗಳನ್ನೇ ಅವಲಂಭಿಸಿದ್ದರಿಂದ ಇವರು ತಯಾರಿಸುತ್ತಿರುವ ಈ ನೂಲಿನ ಹಗ್ಗಗಳನ್ನೂ ಯಾರೂ ಕೇಳದಂತಾಗಿವೆ. "ಊರೂರು, ಸಂತೆ-ಸಂತ್ಯಾಗ ಹೊತ್ತು ಮಾರೀದ್ರೂ ಹೊತ್ತಿಗೆ ಅನ್ನ ಸಿಗದೀಗ ಭಾಳ ದುಸ್ತರ ಮಾತ ಐತ್ರಿ" ಎಂದು ಹಗ್ಗ ತಯಾರಿಸುವ ಹನಮಸಾಗರದ ವೃದ್ಧ ಬಸಲಿಂಗಪ್ಪ ಹೇಳುತ್ತಾರೆ.

2.6 ಒನಕೆ:

ಕೊಯ್ಲಾದ ಧಾನ್ಯಗಳನ್ನು ಶುದ್ಧ ಮಾಡಿದ ಮೇಲೂ ನೇರವಾಗಿ ಆಹಾರವಾಗಿ ಬಳಸುವುದು ಕಷ್ಟ ಅವನ್ನು ಮತ್ತೆ ಸಂಸ್ಕರಿಸಿ, ಕೆಲವು ಧಾನ್ಯಗಳ ಸಿಪ್ಪೆ ಸುಲಿದು, ಇನ್ನು ಕೆಲವು ಧಾನ್ಯಗಳನ್ನು ಹಿಟ್ಟು ಮಾಡಿಸಿ ಬಳಸಬೇಕಾಗುತ್ತದೆ. ಇಂಥ ಸಂಸ್ಕರಣಾ ಸಂದರ್ಭದಲ್ಲಿ ಒನಕೆ ಬಳಸಲಾಗುತ್ತದೆ.

ಭತ್ತ ಕುಟ್ಟುವುದಕ್ಕೆ ಒನಕೆ ಮುಖ್ಯವಾಗಿ ಬಳಕೆಯಾಗುತ್ತಿತ್ತು. ಮೊರದಿಂದ ಜಾಳಿಸಿ, ಜರಡಿಯಿಂದ ಕಡ್ಡಿ ಕಸರು ತೆಗೆದ ನಂತರದ ಭತ್ತವನ್ನು ಒರಳು ಕಲ್ಲಿಗೆ ಹಾಕಿ, ಒರಳು ಕಲ್ಲಿನ ಬಾಯಿಗೆ ಮರದ ಕಡುವಂಚು(ಕುಟ್ಟಿದ ಭತ್ತ ಹಾರದೇ ಹೊರ ಹೋಗದಿರುವುದಕ್ಕೆ ರಕ್ಷಣೆ) ಇಟ್ಟು ಇಬ್ಬರು ಒನಕೆಯಿಂದ ಕುಟ್ಟಲು ಪ್ರಾರಂಭಿಸುತ್ತಾರೆ. ಇದು ಒನಕೆ ಬಳಕೆಯಾಗುವ ಪರಿ.

ತೇಗದ ಮರದಿಂದ ತಯಾರಿಸುವ ಈ ಒನಕೆ ಒಂದೂವರೆ ಹಿಡಿ ಗಾತ್ರವಿದ್ದು, ತುದಿಗಳಲ್ಲಿ ಕಬ್ಬಿಣದ ಬಳೆಗಳನ್ನು ಜೋಡಿಸಲಾಗಿರುತ್ತದೆ. ಕಾರಣ, ಒನಕೆ ಭಾರವಾಗಿದ್ದು, ಧಾನ್ಯದ ಮೇಲೆ ಬೀಳುವ ಏಟಿನಿಂದ ಅವುಗಳ ಸಿಪ್ಪೆ ವೇಗವಾಗಿ ಸುಲಿದುಕೊಳ್ಳುವಂತಾಗಲು ಈ ಬಳೆಗಳನ್ನು ಜೋಡಿಸಿರುತ್ತಾರೆ.

ಎರಡು ತರಹದ ಒನಕೆಗಳಿವೆ. ಒಂದು ಎರಡು ಬಳಕೆಯ ಒನಕೆ, ಇನ್ನೊಂದು ಒಂದು ಬಳೆಯ ಒನಕೆ. ಎರಡು ಬಳೆಯ ಒನಕೆ ಸ್ವಲ್ಪ ಭಾರವಾಗಿರುತ್ತದೆ. ಎರಡೂ ಕಡೆ ಸಮಾನಾದ ಆಕಾರವಿರುತ್ತದೆ. ಎರಡೂ ಕಡೆಗೂ ಬಳೆ ಜೋಡಿಸಿರುತ್ತಾರೆ. ಭತ್ತ ಕಟ್ಟಲು ಈ ಒನಕೆ ಬಳಸುತ್ತಾರೆ. ಒಂದು ಬಳೆಯ ಒನಕೆಯ ಒಂದು ತುದಿಗೆ ಬಳೆ ಹಾಕಿರುತ್ತಾರೆ. ಬಳೆ ಜೋಡಿಸಿರುವ ತುದಿ ದಪ್ಪನಾಗಿದ್ದರೆ, ಬಳೆ ಜೋಡಿಸದ ತುದಿ ಸಣ್ಣದಾಗಿರುತ್ತದೆ. ಇದನ್ನು ಮೆಣಸಿನ ಕಾಯಿ ಪುಡಿ ಮಾಡಲು ಬಳಸುತ್ತಾರೆ. ಒನಕೆ ಬಳಕೆ ಓಬವ್ವನ ಕಾಲದಿಂದಲೂ ಬಳಕೆಯಲ್ಲಿತ್ತು ಎನ್ನುವುದಕ್ಕೆ ಸಾಕಷ್ಟು ಪುರಾವೆಗಳಿವೆ. ಆದರೆ ಇಂದು ಕಬ್ಬಿಣದ ಒನಕೆಗಳನ್ನು ತಯಾರಿಸಿ ಅದನ್ನ ಯಂತ್ರಗಳಿಗೆ ಜೋಡಿಸಿ ಕಾಳುಸಂಸ್ಕರಿಸುವ ವ್ಯವಸ್ಥೆ ಜಾರಿಯಲ್ಲಿದೆ. ಹಾಗಾಗಿ ಒನಕೆಗಳು ಆಯುಧ ಪೂಜೆ ಅಥವಾ ಕಾರಹಬ್ಬದಲ್ಲಿ ಪೂಜಿಸುವ ವಸ್ತುಗಳಾಗಿವೆ.

ಭತ್ತ ಕುಟ್ಟಲು ಒನಕೆ ಹೇಗೋ ರಾಗಿ, ಗೋಧಿ, ಅಕ್ಕಿಯಂತಹ ಆಹಾರ ಧಾನ್ಯಗಳನ್ನು ಹಿಟ್ಟು ಮಾಡಲು ಬಳಸುವ ಏಕೈಕ ಉಪಕರಣ ಬೀಸುವ ಕಲ್ಲು ಇದನ್ನು ಆಯಾ ಪ್ರದೇಶದಲ್ಲಿ ದೊರೆಯುವ ಬಂಡೆ ಕಲ್ಲುಗಳಿಂದ ಮಾಡಿರುತ್ತಾರೆ. ಈ ಉಪಕರಣದಲ್ಲಿ ಎರಡು ದುಂಡಾದ ಕಲ್ಲುಗಳಿವೆ. ಇವುಗಳ ಮಧ್ಯೆ ಕಬ್ಬಿಣದ ಗೂಟವಿದ್ದು, ಎರಡು ಕಲ್ಲುಗಳನ್ನು ಸಂಪರ್ಕಿಸುತ್ತದೆ. ಆ ಗೂಟದ ಸುತ್ತ ವೃತ್ತಾಕಾರದಲ್ಲಿ ಗುಂಡಿಯೊಂದನ್ನು ಕೊರೆದಿರುತ್ತಾರೆ. ಇದರ ಮೂಲಕವೇ ಧಾನ್ಯವನ್ನು ಸುರಿಯಬೇಕು. ಮೇಲ್ಭಾಗದ ಕಲ್ಲಿನಲ್ಲಿ ಮರದ ಗೂಟ ಇದ್ದು, ಇದನ್ನು ಹಿಡಿದು ಕಲ್ಲನ್ನು ಸುತ್ತಿಸಿದರೆ ಎರಡು ಕಲ್ಲಿನ ಮಧ್ಯೆ ಇರುವ ಧಾನ್ಯಗಳು ತಿಕ್ಕಾಟ ನಡೆಸಿ, ಪುಡಿಯಾಗಿ ಹಿಟ್ಟಾಗುತ್ತವೆ.

ಧಾನ್ಯವನ್ನು ಕಡಿಮೆ ಹಾಕಿಕೊಂಡು ನಿಧಾನವಾಗಿ ಬೀಸಿದರೆ ಸಣ್ಣಗೆ ಹಿಟ್ಟು ಬೀಳುತ್ತದೆ. ಹೆಚ್ಚು ಧಾನ್ಯ ಹಾಕಿಕೊಂಡು ವೇಗವಾಗಿ ಬೀಸಿದರೆ ಹಿಟ್ಟು ದಪ್ಪವಾಗಿ ಬೀಳುತ್ತದೆ. ಅಕ್ಕಿಯನ್ನು ನುಚ್ಚು ಮಾಡುವಾಗ ಹೆಚ್ಚು ಅಕ್ಕಿ ಹಾಕಿಕೊಂಡು ವೇಗವಾಗಿ ಬೀಸುತ್ತಾರೆ. ರಾಗಿಯನ್ನು ಕಡಿಮೆ ಹಾಕಿಕೊಂಡು ನಿಧಾನವಾಗಿ ಬೀಸುತ್ತಾರೆ. ಒಂದು ಗಂಟೆಗೆ ಮೂರು ಸೇರು ರಾಗಿ, ಎರಡೂವರೆ ಸೇರು ಬೀಸುತ್ತಿದ್ದರಂತೆ.

2.7 ಕಣ್ಣೆ ಜರಡಿ:

ಇದು ಕಬ್ಬಿಣ ಅಥವಾ ತಗಡಿನಿಂದ ತಯಾರಿಸಿದ ಜರಡಿ. ಇದರಲ್ಲಿ ಎರಡು ವಿಧ. ಒಂದು ದೊಡ್ಡ ಕಣ್ಣಿನ ಜರಡಿ, ಇನ್ನೊಂದು ಸಣ್ಣ ಕಣ್ಣಿನ ಜರಡಿ, ಭತ್ತವನ್ನು ಒರಳಕಲ್ಲಿನಲ್ಲಿ ಕುಟ್ಟಿದ ನಂತರ ಬರುವ ಅಕ್ಕಿಯನ್ನು ಜಾಳಿಸುವುದಕ್ಕೆ ದೊಡ್ಡ ಕಣ್ಣಿನ ಜರಡಿಯನ್ನು ಬಳಸುತ್ತಾರೆ. ಇದರಲ್ಲಿ ಅಕ್ಕಿಯನ್ನು ಜಾಳಿಸಿದರೆ ದಪ್ಪ ಅಕ್ಕಿ ಮೇಲೆ ಉಳಿದು, ನುಚ್ಚು ಕೆಳಗೆ ಉದುರಿ ಅನ್ನ ಮಾಡಲು ಬೇಕಾದ ಅಕ್ಕಿ ಲಭ್ಯವಾಗುತ್ತದೆ. ಹೀಗೆ ಗಟ್ಟಿ ಅಕ್ಕಿ ಆರಿಸಲು ದೊಡ್ಡ ಕಣ್ಣಿನ ಜರಡಿಯನ್ನು ಬಳಸುತ್ತಾರೆ.

ಸಣ್ಣಕಣ್ಣಿನ ಜರಡಿ: ಭತ್ತ ಕುಟ್ಟಿದಾಗ ಒಮ್ಮೊಮ್ಮೆ ಒಂದು ಅಕ್ಕಿ ಎರಡು ತುಂಡಾಗುತ್ತದೆ. ಅಂದರೆ ಅಷ್ಟು ದಪ್ಪ ನುಚ್ಚು ಅಕ್ಕಿಜೊತೆ ಸೇರಿರುತ್ತದೆ. ಇದನ್ನು ಬೇರ್ಪಡಿಸಲು ಸಣ್ಣಕಣ್ಣಿನ ಜರಡಿ ಬಳಕೆಯಾಗುತ್ತದೆ. ದಪ್ಪ ನುಚ್ಚು, ಸಣ್ಣ ನುಚ್ಚುನ್ನು ಈ ಜರಡಿಯಲ್ಲಿ ಗಟ್ಟಿ ಅಕ್ಕಿಯಿಂದ ಬೇರ್ಪಡಿಸಬಹುದು.

ಅತಿ ಸಣ್ಣಕಣ್ಣಿನ ಜರಡಿ: ಇದನ್ನು ರಾಗಿ ಅಚ್ಚುಕಟ್ಟು ಮಾಡಲು ಬಳಸುತ್ತಾರೆ. ತೀರಾ ಸಣ್ಣ ಸಣ್ಣ ರಾಗಿ ಕಾಳುಗಳನ್ನು ಬೇರ್ಪಡಿಸಲು ಅತಿ ಸಣ್ಣ ಕಣ್ಣಿನ ಜರಡಿ ಎನ್ನುತ್ತಾರೆ. ಕೆಲವರು ಇದನ್ನು 'ರಾಗಿ ಮಾಡುವ ಜರಡಿ' ಎಂದೂ ಕರೆಯುತ್ತಾರೆ.

2.8 ಗಾಡಿ (ಬಂಡಿ ವೈವಿಧ್ಯ)

ಹಳೇಮೈಸೂರು ಪ್ರಾಂತ್ಯದಲ್ಲಿ ಬಂಡಿಗೆ ಚಕ್ಕಡಿ ಅಥವಾ ಗಾಡಿ ಎನ್ನುತ್ತಾರೆ. ಕರ್ನಾಟಕದ ಎಲ್ಲ ಭಾಗದಲ್ಲೂ ಬಂಡಿ ತಂತ್ರಜ್ಞಾನ ಒಂದೇ ಇದ್ದರೂ ಮೇಲ್ಮೈ ವಿನ್ಯಾಸದಲ್ಲಿ ಸ್ವಲ್ಪ ಬದಲಾವಣೆಯಾಗುತ್ತದೆ. ಬಳಕೆಯಲ್ಲೂ ವ್ಯತ್ಯಾಸವಿರುತ್ತದೆ. ಬಯಲು ಸೀಮೆಯಲ್ಲಿ ಒಂದು ಕಡೆ ತೋಟಗಾರಿಕೆ ಬೆಳೆಗಳನ್ನು ಸಾಗಿಸುವುದಕ್ಕಾಗಿ ಬಳಸಿದರೆ, ಮತ್ತೊಂದೆಡೆ ಬೀಜ, ಗೊಬ್ಬರ, ಮಣ್ಣು ಸಾಗಿಸಲು ಬಳಸುತ್ತಾರೆ.

ಉತ್ತರ ಕರ್ನಾಟಕದಲ್ಲಿ ಹಾರ್ನಳ್ಳಿ ವಿನ್ಯಾಸದ ಗಾಡಿ ಖ್ಯಾತಿ ಪಡೆದರೆ, ಬಯಲುಸೀಮೆ, ಹಳೇಮೈಸೂರು ಪ್ರಾಂತ್ಯದಲ್ಲಿ ಗಜಾಂ ಗಾಡಿ ಹೆಸರುವಾಸಿಯಾಗಿದೆ.

ಗಾಡಿಗೆ ಗಜಾಂ ಎಂದು ಹೆಸರು ಬಂದಿದ್ದೇ ಒಂದು ವಿಶೇಷ ಮೈಸೂರಿನಲ್ಲಿ ಮಹಾರಾಜರ ಆಳ್ವಿಕೆ ಕಾಲದಲ್ಲಿ ರಥಗಳನ್ನು ತಯಾರಿಸಲು ಒರಿಸ್ಸಾ ರಾಜ್ಯದ ಗಜಾಂನಿಂದ ಕೆಲವು ಕುಶಲಕರ್ಮಿಗಳು ಮೈಸೂರು ಪ್ರಾಂತ್ಯಕ್ಕೆ ಆಗಮಿಸಿದರು. ಶ್ರೀರಂಗಪಟ್ಟಣದ ಸಮೀಪದಲ್ಲಿರುವ ಪ್ರದೇಶವೊಂದರಲ್ಲಿ ಬೀಡುಬಿಟ್ಟು, ರಥಗಳನ್ನು ತಯಾರಿಸುತ್ತಿದ್ದರು. ಕಾಲ ಕಳೆದಂತೆ ರಥ ಬಳಕೆ ಪ್ರಮಾಣ ಕಡಿಮೆಯಾಯಿತು. ತಯಾರಿಕೆ ಪ್ರಮಾಣವೂ ತಗ್ಗಿತು. ಆಗ ಕುಶಲಕರ್ಮಿಗಳು ಬಡಗಿಗಳಾದರು. ರಥ ತಯಾರಿಸುವುದನ್ನು ಬಿಟ್ಟು ಬಂಡಿ ತಯಾರಿಕೆಗೆ ಮುಂದಾದರು. ಗಜಾಂ ಕೆಲಸಗಾರರು ಬಂಡಿಗಳನ್ನು ತಯಾರಿಸುತ್ತಿದ್ದರಿಂದ 'ಗಜಾಂ ಗಾಡಿ' ಎಂದು ಹೆಸರು ಬಂತು. ಗಜಾಂ ಕೆಲಸಗಾರರು ತೇಗದಿಂದ ಮಾತ್ರ ಗಾಡಿ ನಿರ್ಮಿಸುತ್ತಿದ್ದರು. ಒಂದೊಂದು ಗಾಡಿ ಅಂದಿನ ಕಾಲದಲ್ಲೇ ಸಾವಿರಾರು ರೂಪಾಯಿ ವೆಚ್ಚವಾಗುತ್ತಿತ್ತಂತೆ. ಕೆಲವೊಂದು ಗಾಡಿಗಳನ್ನು ಪಲ್ಲಕ್ಕಿಯ ಹಾಗೆ ತಯಾರಿಸುತ್ತಿದ್ದರಂತೆ. ಪಲ್ಲಕ್ಕಿ ಮೇಲ್ಭಾಗದಲ್ಲಿ ಬೊಂಬೆಗಳನ್ನು ಕೆತ್ತುತ್ತಿದ್ದರು. ಕುಟುಂಬದವರು ಊರಿಂದ ಊರಿಗೆ ಸಂಚಾರ ಮಾಡಲು ಗಜಾಂ ಗಾಡಿಗಳನ್ನೇ ಹೆಚ್ಚಾಗಿ ಬಳಸುತ್ತಿದ್ದರೆಂದು ಊರಿನ ಹಿರಿಯರು ನೆನಪಿಸಿಕೊಳ್ಳುತ್ತಾರೆ.

ಬಯಲು ಸೀಮೆಯಲ್ಲಿ ಎತ್ತರದ ಬಂಡಿಗಳನ್ನು ಬಳಸುತ್ತಾರೆ. ಅದಕ್ಕೆ ಕಾರಣ, ಈ ಭಾಗದ ರೈತರ ಜಮೀನಿಗೂ ಮನೆಗೂ ಬಹಳ ದೂರ. ಅಷ್ಟೇ ಅಲ್ಲ, ಬಯಲು ಸೀಮೆಯಲ್ಲಿ ತೋಟ, ಗದ್ದೆಗಳು ಬೇರೆ ಬೇರೆ ಇರುವುದರಿಂದ ಸಾಗಾಟ ತುಂಬಾ ಶ್ರಮ ಅದಕ್ಕಾಗಿ ಅಗಲವಾದ ಚಕ್ರವುಳ್ಳ, ಉದ್ದ ಮೂಕಿನ, ಅಗಲದ ತೊಟ್ಟಿಯ, ಎತ್ತರದ ಎತ್ತಿನ ಗಾಡಿಗಳನ್ನು ಬಳಸುತ್ತಾರೆ. ಅಗಲ ಚಕ್ರದ ಗಾಡಿ ಬಳಸುವುದರಿಂದ ಎತ್ತುಗಳಿಗೆ ಶ್ರಮವಾಗುವುದರಿಲ್ಲ. ಎರಡನೆಯದಾಗಿ ವೇಗವಾಗಿ ಕೆಲಸ ಸಾಗುತ್ತದೆ.

ಬಯಲು ಸೀಮೆಯಲ್ಲಿ ತೋಟಗಾರಿಕೆ ಬೆಳೆಗಳನ್ನು ಸಾಗಾಟ ಮಾಡಲು ಹೆಚ್ಚಾಗಿ ಗಾಡಿ ಬಳಕೆಯಾಗುತ್ತದೆ. ತೆಂಗಿನಕಾಯಿ ಸಾಗಿಸಲು ತಡಿಕೆ ಗಾಡಿ ಬಳಸುತ್ತಾರೆ. ತಡಿಕೆ ಮೂರು ಅಡಿ ಎತ್ತರವಿದ್ದು, ಒಂದು ಸಾರಿಗೆ ಇನ್ನೂರು ಕಾಯಿಯವರೆಗೂ ಹಿಡಿಯುತ್ತದೆ. ಅದೇ ರೀತಿ, ಮಾವು, ಹಲಸು, ಸೀಬೆ, ದಾಳಿಂಬೆಯಂತಹ ಹಣ್ಣುಗಳನ್ನು ಸಾಗಾಟ ಮಾಡಲು ಇದೇ ತಡಿಕೆ ಗಾಡಿ ಬಳಕೆಯಾಗುತ್ತದೆ.

ಇದೇ ಬಂಡಿಗಳನ್ನು ಹೊಲ, ಗದ್ದೆಗಳಿಂದ ಕೊಯ್ಲಾದ ಬೆಳೆಗಳನ್ನು ಸಾಗಿಸಲು ಬಳಸುತ್ತಾರೆ. ಗದ್ದೆಗಳಲ್ಲೇ ಮಾಡಿದ ಕಣಗಳಿಂದ ಧಾನ್ಯ ಹಾಗೂ ಹುಲ್ಲಿನ ಹೊರೆಗಳನ್ನು ಸಾಗಿಸಲು ಬಳಸುತ್ತಾರೆ. ತೆಂಗಿನ ಕಾಯಿ ಸುಲಿದ ಮೇಲೆ ಉಳಿಯುವ ಮಟ್ಟೆ ಸಾಗಣೆಗೆ ಹಾಗೂ ಚಿಪ್ಪು ಸಾಗಣೆಗೂ ಇದೇ ತಡಿಕೆ ಗಾಡಿಗಳು ಬಳಕೆಯಾಗುತ್ತವೆ. ತಡಿಕೆಗಳನ್ನು ತಮಗೆ ಬೇಕಾದ ಪ್ರಮಾಣದಲ್ಲಿ ರೈತರು ಹೆಚ್ಚಿಸಿಕೊಳ್ಳುತ್ತಾರೆ.

ಗೊಬ್ಬರ ಸಾಗಿಸಲು ಇದೇ ಗಾಡಿ ಬಳಸಿದರೂ. ಅದಕ್ಕೆ ತಡಿಕೆ ಇರುವುದಿಲ್ಲ. ಬದಲಿಗೆ ಒಂದೂವರೆ ಅಡಿ ಅಗಲ, ಆರು ಅಡಿ ಉದ್ದದ ಹಲಗೆಗಳನ್ನು ಬಳಸುತ್ತಾರೆ. ಒಂದೊಂದು ತೆಂಗಿನ

ಮರಕ್ಕೆ ಒಂದೊಂದು ಗಾಡಿ ಗೊಬ್ಬರ ಎಂದು ಲೆಕ್ಕ ಹಾಕಿ ಸುರಿಸುತ್ತಾರೆ. ವರ್ಷಕ್ಕೆ ಒಂದು ಸಾರಿ ಒಂದು ಗಾಡಿ ಗೊಬ್ಬರವನ್ನು ಒಂದು ತೆಂಗಿನಮರಕ್ಕೆ ಕೊಟ್ಟರೆ ಸಾಕಾಗುತ್ತದೆ.

ಸುಮಾರು ನೂರು ವರ್ಷಗಳಷ್ಟು ಹಿಂದೆ ಭಾರಿ ಗಾತ್ರದ ವಸ್ತುಗಳ ಸಾಗಣೆಗೆ ವಡ್ಡರ ಬಂಡಿ ಬಹು ಜನಪ್ರಿಯ ವಾಹನವಾಗಿತ್ತು. ನಂತರದ ದಿನಗಳಲ್ಲಿ ಇವು ಅಪರೂಪವಾದವು, ಒಂದೆರೆಡು ದಶಕಗಳ ಹಿಂದೆ ಅಂಗಾಂಗಗಳನ್ನು ಮುರಿದುಕೊಂಡು ಮೂಲೆ ಸೇರಿದವು, ಈಗ ಆ ಅಂಗಾಂಗಳೂ ನಾಪತ್ತೆಯಾಗಿವೆ.

ಸಾಮಾನ್ಯವಾಗಿ ಮರದ ದಿಮ್ಮೆಗಳನ್ನು ಹಾಗೂ ದೊಡ್ಡ-ದೊಡ್ಡ ಹೆಬ್ಬಂಡೆಗಳನ್ನು ಕಾಡುಗಲ್ಲುಗಳನ್ನು ಬೆಟ್ಟದಿಂದ, ಅರಣ್ಯದಿಂದ ಸಾಗಿಸುವುದಕ್ಕಾಗಿ ವಿಶೇಷವಾಗಿ ಇಂತಹ ಬಂಡಿಗಳನ್ನು ಹಿಂದಿನವರು ನಿರ್ಮಿಸಿದ್ದರು. ಭಾರಿ ಶಕ್ತಿಯ ಈ ಬಂಡಿಗೆ ಹೇರಿದ ವಸ್ತುವಿನ ತೂಕಕ್ಕನುಸಾರವಾಗಿ ಒಂದು ಜೊತೆ, ಎರಡು ಜೊತೆ, ಹತ್ತು ಜೊತೆ ಕೊಬ್ಬದ ಕೋಣಗಳನ್ನು ಕಟ್ಟಿ ಎಳೆಸುತ್ತಿದ್ದರು.

ಅಲ್ಲದೇ ಕೋಟೆಕೊತ್ತಲಗಳನ್ನು ನಿರ್ಮಿಸುವಾಗ ಇಂತಹ ಬಂಡಿಗಳಿಂದಲೇ ಬೃಹತ್ ಗಾತ್ರದ ಕಲ್ಲು ಬಂಡೆಗಳನ್ನು ಸಾಗಿಸುತ್ತಿದ್ದರು. ರಾಯಚೂರ ಕೋಟೆಯ ಕಲ್ಲುಗಳನ್ನು ಇಂತಹ ಬಂಡಿಗಳಿಂದಲೇ ತಂದಿರುವುದಕ್ಕೆ ಕೋಟೆಯ ಕಲ್ಲೊಂದರ ಮೇಲೆ ಕೆತ್ತಿದ ಕಲ್ಲು ಸಾಗಿಸುವ ರೇಖಾ ಚಿತ್ರ ಸಾಕ್ಷಿಯಾಗಿದೆ.

ಬೃಹತ್ ಜಾಲಿ ಹಾಗೂ ತೇಗದ ಮರದ ಹಲಗೆಗಳಿಂದ ಜೋಡಿಸಿ ತಯಾರಿಸಲಾಗಿರುವ ಚಟ್ಟಿಗೆ (ಸಾಮಾನು ಹೇರುವ ಜಾಗ) ಭಾರಿ ಗಾತ್ರದ ದಪ್ಪ ಕಾಂಡದ ಜಾಲಿ ದಿಮ್ಮೆಗಳಿಂದ ಕೊರೆದ ಎರಡರಿಂದ ಮೂರು ಅಡಿವರೆಗೆ ಪೂರ್ಣ ಗಾಲಿಗಳಿರುತ್ತವೆ. ಈ ಗಾಲಿಗಳಿಗೆ ಮಧ್ಯದಲ್ಲಿ ಅರ್ಧಅಡಿಯಷ್ಟು ರಂದ್ರಕೊರೆದು ಉಕ್ಕಿನ ಆಕ್ಸೆಲ್‌ಗೆ ಜೋಡಿಸುತ್ತಿದ್ದರು. ಹೀಗೆ ತಯಾರಾದ ಬಂಡಿಯನ್ನು ಎಳೆಯಲು ಅನುವಾಗುವಂತೆ ಜಾಲಿ ಮರದ ಬೊಡ್ಡೆಯನ್ನೇ ಬಲಿಷ್ಠ ಎರಡು ಕೋಣಗಳ ಹೆಗಲ ಮೇಲೆ ಹೇರಿ ಎಳೆಸುತ್ತಿದ್ದರು.

ಹೀಗೆ ಈ ವಡ್ಡರ ಬಂಡಿ ಗಿಡ್ಡದಾಗುವುದರ ಹಿಂದೆ ದೊಡ್ಡ ಉದ್ದೇಶವೂ ಅಡಗಿದೆ. ದಿಮ್ಮೆಗಳನ್ನು ಹಾಗೂ ಹೆಬ್ಬಂಡೆಗಳನ್ನು ಸರಳವಾಗಿ ಬಂಡಿಗೆ ಏರಿಸುವುದು ಕಷ್ಟಕರವಾದುದುರಿಂದ ಈ ಗಿಡ್ಡನೆಯ ಬಂಡಿಯನ್ನು ಹೇರಬೇಕಾದ ವಸ್ತುಗಳ ಮುಂದೆ ಹಿಂಬಂಡಿಯಾಗಿಸುತ್ತಿದ್ದರು. ದಿಮ್ಮೆ ಇಲ್ಲವೆ ಹೆಬ್ಬಂಡೆಗಳ ಕೆಳಗೆ ಉರುಳುವಂತಹ ಸಣ್ಣ-ಸಣ್ಣ ದುಂಡನೆಯ ಕಲ್ಲುಗಳನ್ನು ಇಲ್ಲವೆ ಕಟ್ಟಿಗೆಯ ದುಂಡುಗಳನ್ನು ಹಾಕಿ ಬಂಡೆಯ ಹಿಂದಿನಿಂದ ಸಲಾಕೆಯೊಂದಿಗೆ ಮೀಟುತ್ತಾ ಬಂದರೆ ಹೆಬ್ಬಂಡೆ ತೆವಳುತ್ತಾ ಬಾಗಿ ನಿಂತ ವಡ್ಡರ ಬಂಡಿಗೆ ಮೆಲ್ಲ-ಮೆಲ್ಲಗೆ ಏರುತ್ತಿತ್ತು. ಅದೇ ವಿಧಾನದಂತೆ ಕೆಳಗೂ ಇಳಿಸುತ್ತಿದ್ದರು.

ವಿಶೇಷವಾಗಿ ದೇವಾಲಯ, ಅರಮನೆ, ಹುಡೆ, ಕೋಟೆಗೋಡೆ ನಿರ್ಮಿಸಲು ಬಳಸುತ್ತಿದ್ದ ಬೃಹದಾಕಾರದ ಬಂಡೆಗಳನ್ನು ಇದರ ಮೂಲಕವೇ ಸಾಗಿಸುತ್ತಿದ್ದರು. ಆದರೆ ಟ್ರ್ಯಾಕ್ಟರ್, ಕ್ರೇನ್‌ಗಳು ಬಂದ ನಂತರ ಈ ವಡ್ಡರ ಬಂಡಿಗಳ ಆಯುಸ್ಸು ಮುಗಿದೇ ಹೋಯಿತು.

2.9 ಕುಡುಗೋಲು:

ಬಯಲು ಸೀಮೆಯಲ್ಲಿ ಇದನ್ನು ಕುಡ್ಲು ಎನ್ನುತ್ತಾರೆ. ಕೆಲವರು ಇದನ್ನೇ ಮಚ್ಚು ಎನ್ನುವುದೂ ಉಂಟು. ಆದರೆ ಇದರ ಮೂಲ ಹೆಸರು ಕುಡುಗೋಲು. ಹೆಸರಲ್ಲೇ ಉಪಕರಣದ ವಿವರಣೆ ಇದೆ 'ಗೋಲು' ಎಂದರೆ ಕೋಲು ಎಂತಲೂ 'ಕುಡ' ಎಂದರೆ ಕೊಯ್ಲು ಎಂತಲೂ ಅರ್ಥವಿದೆ. ಹಾಗಾಗಿ ಕೊಯ್ಯಲು ಬಳಸುವ ಕೋಲಿ, ಜೊತೆಗಿರುವ ಉಪಕರಣಕ್ಕೆ ಕುಡುಗೋಲು ಎನ್ನುತ್ತಾರೆ. ಗ್ರಾಮ್ಯ ಭಾಷೆಯಲ್ಲಿ 'ಕುಡ್ಲು' ಎಂದಾಗಿದೆ.

ಇದಕ್ಕೆ ಮರದ ಹಿಡಿ ಇದ್ದು. ಮುಂಭಾಗ ಅರ್ಧ ಚಂದ್ರಕಾರದಲ್ಲಿ ಬಾಗಿದ್ದು, ಆ ಭಾಗ ಹರಿತವಾಗಿರುತ್ತದೆ. ಇದರ ಮುಂಭಾಗ ಚೂಪಾಗಿರುತ್ತದೆ. ಮಧ್ಯ ಭಾಗ ಅರ್ಧ ಚಂದ್ರಾಕಾರದಲ್ಲಿರಲು ಕಾರಣ, ತೆನೆಗಳನ್ನು ಒಟ್ಟು ಮಾಡಿ ಕೊಯ್ಯಲು ಸುಲಭವಾಗಲಿ ಎಂಬುದಕ್ಕೆ ಜೋಳದ ಸೆಪ್ಪೆ, ತೆನೆ, ಭತ್ತದ ತೆನೆ ಬಿಟ್ಟ ಪೈರು, ರಾಗಿ ಹುಲ್ಲು, ಮುಸುಕಿನ ಜೋಳದ ತೆನೆ, ಹೀಗೆ ಧಾನ್ಯ ಕೊಡುವ ಬೆಳೆಗಳನ್ನು ಕಟಾವು ಮಾಡಲು ಈ ಕುಡುಗೋಲನ್ನು ಬಳಸುತ್ತಾರೆ.

ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ಧಾನ್ಯಗಳನ್ನು ಬೆಳೆಯುವುದರಿಂದ ಈ ಕುಡುಗೋಲು ಬಳಕೆ ಪ್ರಮಾಣ ಅಧಿಕ. ಅಲ್ಲಿ ಜೋಳದ ತೆನೆ ಕೊಯ್ಯಲು ಬಳಸುತ್ತಾರೆ. ಮಲೆನಾಡು ಹಾಗೂ ಕರಾವಳಿಯಲ್ಲಿ ಭತ್ತ ಕೊಯ್ಯಲು ಬಳಸುತ್ತಾರೆ. ಈ ಉಪಕರಣವನ್ನು ಉತ್ತರ ಕನ್ನಡದಲ್ಲಿ ಕತ್ತಿ ಎಂತಲೂ ಕರೆಯುತ್ತಾರೆ.

ಬಯಲು ಸೀಮೆಯಲ್ಲಿ ಹೊಲ, ಗದ್ದೆಯಲ್ಲಿ ಭತ್ತ, ರಾಗಿ, ಜೋಳ, ಗೋದಿ ಧಾನ್ಯಗಳನ್ನು ಕೊಯ್ಯಲು ಬಳಸುವ ಜೊತೆಗೆ ತೋಟಗಾರಿಕೆ ಕೆಲಸಗಳಾದ ಗರಿ ಕೊಯ್ಯುವುದು, ಬಾಳೆ ಕೊಯ್ಯುವುದು, ಬೇಲಿ ಸವರುವುದು, ಗರಿ ಸವರುವುದು, ಗುಡ್ಡದಿಂದ ದನಗಳಿಗೆ ತರುವ ಹುಲ್ಲನ್ನು ಕೊಯ್ಯಲು ಬಳಕೆಯಾಗುತ್ತದೆ.

ಕೈ ತೋಟದಲ್ಲಿ ಕೆಲಸ ಮಾಡುವವರಿಗೆ ಈ ಕುಡುಗೋಲು ತುಂಬಾ ಸಹಕಾರಿ. ಅದರಲ್ಲೂ ಹೆಣ್ಣುಮಕ್ಕಳು ತಮ್ಮ ಸೊಂಟದಲ್ಲಿ ಒಂದು ಕಡೆಗೆ ಎಲೆ ಅಡಿಕೆ ಚೀಲ ಸಿಕ್ಕಿಸಿಕೊಂಡಿದ್ದರೆ ಇನ್ನೊಂದು ಕಡೆ ಈ ಕುಡುಗೋಲು ಸಿಕ್ಕಿಸಿಕೊಂಡೇ ತೋಟ, ಹೊಲ, ಗದ್ದೆ ಕಡೆಗೆ ಹೊರಡುವರು.

ಬೀದರ ಹೊರತು ಪಡಿಸಿದರೆ ಅದರಲ್ಲೂ ತುಮಕೂರು, ಕೋಲಾರ, ಮಂಡ್ಯ ಜಿಲ್ಲೆಗಳನ್ನು ಬಿಟ್ಟರೆ ಈ 'ಗರಿ ಕುಡುಗೋಲು' ಎಂಬ ಉಪಕರಣ ಬೇರೆಲ್ಲೂ ಪರಿಚಯವಿದ್ದಂತೆ ಕಾಣಲಿಲ್ಲ. ಬಹಳ

ಅಪರೂಪದ ತೆಂಗಿನ ಕೃಷಿಕರ ಉಪಕರಣ ಇದು. ನೋಡುವುದಕ್ಕೆ ಥೇಟ್ ಮಚ್ಚಿನ ತರಹವೇ ಇರುತ್ತದೆ. ಆದರೆ ಅಷ್ಟು ಚಿಕ್ಕದಾಗಿರುವುದಿಲ್ಲ.

ಹೆಸರೇ ಹೇಳುವಂತೆ ಈ ಕುಡುಗೋಲು ತೆಂಗಿನ ಗರಿಯಷ್ಟೇ ತೆಳ್ಳಗಿರುತ್ತದೆ. ಆದರೆ ಬಹಳ ಹರಿತವಾಗಿರುತ್ತದೆ. ಕೆಲವರಿಗೆ ಕುಡುಗೋಲು ಹರಿತವಾಗಿರುವುದನ್ನು ಪರೀಕ್ಷಿಸುವ ಹವ್ಯಾಸ. ಅಂಥ ಅದೆಷ್ಟೋ ಮಂದಿ ಈ ಕುಡುಗೋಲಿನ ಬಾಯಿ ಸವರಿ ಹೆಬ್ಬರಳಿನಿಂದ ಚಿಳ್ ಎಂದು ರಕ್ತ ಚಿಮ್ಮಿಸಿಕೊಂಡಿದ್ದಾರೆ. ಹಾಗಾಗಿ ಕುಡುಗೋಲಿನಲ್ಲೇ ಹರಿತವಾದ ಕುಡುಗೋಲು ಎಂದರೆ ಗರಿ ಕುಡುಗೋಲು.

ಇದನ್ನು ತೆಂಗಿನ ಗರಿಯನ್ನು ಕಡಿಯುವುದಕ್ಕಾಗಿ ಬಳಸುತ್ತಾರೆ. ಗರಿ ಭದ್ರವಾಗಿ ಮರಕ್ಕೆ ಅಂಟಿಕೊಂಡಿರುತ್ತದೆ. ಅದನ್ನು ಮರದಿಂದ ಬೇರ್ಪಡಿಸಲು ಹರಿತವಾದ ಉಪಕರಣ ಬೇಕು. ಅದಕ್ಕೇ ಈ ಉಪಕರಣವನ್ನು ಬಳಸಲಾಗುತ್ತದೆ. ಎರಡನೆಯದಾಗಿ ಈ ಗರಿ ಕುಡುಗೋಲನ್ನು ರೋಟಿಗಾಣದ ಮುಂಭಾಗಕ್ಕೆ ಉದ್ದವಾಗಿ ಸಿಕ್ಕಿಸಿ, ತೆಂಗಿನ ಮರದಿಂದ ಕಾಯಿ ಕೀಳಲು ಬಳಸುತ್ತಾರೆ. ಮೊದಲೇ ಹೇಳಿದಂತೆ ಮೂತಿ ಹಾಗೂ ಬಾಗಿದ ಕೊಡುಗೋಲಿನ ಬಾಯಿ ಚೂಪಾಗಿರುವುದರಿಂದ ಒಂದು ಸಾರಿ ತೆಂಗಿನ ಗೊನೆಗೆ ಕುಡುಗೋಲು ಸಿಕ್ಕಿಸಿ ಎಳೆದರೆ ತುಪು ತುಪು ತುಪು ಕಾಯಿಗಳು ದಿಕ್ಕಾಪಾಲಾಗಿ ಉದುರುತ್ತವೆ. ಒಮ್ಮೊಮ್ಮೆ ಕುಡುಗೋಲಿನ ಹರಿತಕ್ಕೆ ಗೊನೆಗಳೇ ಕಳಚಿಬಿದ್ದಿರುವ ಉದಾಹರಣೆಗಳಿವೆ ಎನ್ನುತ್ತಾರೆ. ಮರಖಲ ಗ್ರಾಮದ ಬಂಡೆಪ್ಪ.

ಈ ಕುಡುಗೋಲನ್ನು ಆಡು ಮೇಯಿಸುವವರು, ದನಗಾಹಿಗಳು, ಕುರಿ ಮೇಯಿಸುವವರು, ಕಾಡು ಅಲೆಯುವವರು ಹೆಚ್ಚಾಗಿ ಬಳಸುತ್ತಾರೆ. ಆಡು ಮೇಯಿಸುವವರಂತೂ ಒಂದು ರೋಟಿ ಗಳ(ಗಾಣ)ಕ್ಕೆ ಈ ಗರಿ ಕುಡುಗೋಲನ್ನು ಕಾಯಂ ಆಗಿ ಬಿಗಿದಿರುತ್ತಾರೆ. ಆ ಗಾಣವನ್ನು ಸೈಕಲ್ ಬಾರ್‌ಗೆ ಸಿಕ್ಕಿಸಿಕೊಂಡು ಆಡುಗಳನ್ನು ಮೇಯಿಸುವುದಕ್ಕೆ ಹೊರಡುತ್ತಾರೆ. ಹಾದಿಯಲ್ಲಿ ಸಿಕ್ಕ ಮೇವಿನ ಮರಗಳಿಂದ ಸುಲಭವಾಗಿ ಎಲೆಗಳನ್ನು ಸವರಿಕೊಂಡು ಆಡುಗಳನ್ನು ಮೇಯಿಸುತ್ತಾರೆ. ದನಗಾಹಿಗಳು ಈ ಕುಡುಗೋಲನ್ನು ರಕ್ಷಣೆಯ ಜೊತೆಗೆ ಬೆಟ್ಟದಿಂದ ಹಸಿರು ಹುಲ್ಲನ್ನು ತರಲು ಬಳಸುತ್ತಾರೆ. ಬಸ್ಸು. ವ್ಯಾನು, ಕಾರುಗಳಿಗೆ ಅಳವಡಿಸುವ ಕಬ್ಬಿಣದ ಬ್ಲೇಡ್‌ಗಳಿಂದ ತಯಾರಿಸುವ ಈ ಕುಡುಗೋಲು ಈಗಲೂ ಬೀದರ ಜಿಲ್ಲೆಯಲ್ಲಿ ಹೆಚ್ಚಾಗಿ ಬಳಕೆಯಲ್ಲಿದೆ.

2.10 ಕೊಡಲಿ

ಮೂರ್‍ನಾಲ್ಕು ತರಹದ ಕೊಡಲಿಗಳು ಕೃಷಿ ವಲಯದಲ್ಲಿದ್ದವು. ಪರಶುರಾಮನ ಕೊಡಲಿ ಕೃಷಿ ವಲಯದಲ್ಲಿ ಬಹಳ ಹೆಸರುವಾಸಿ, ಅಗಲವಾದಿ ಬಾಯಿಯುಳ್ಳ ಈ ಕೊಡಲಿ ಈಗ ಇತಿಹಾಸದ ಪುಟ ಸೇರಿದೆ. ಎಲ್ಲೋ ಕೆಲವು ಮನೆಯಲ್ಲಿ ಬೇಕೇ ಬೇಕು ಎನ್ನುವವರು ಮಾತ್ರ ಬಳಸುತ್ತಿದ್ದಾರೆ.

ಕೊಡಲಿಯಲ್ಲಿ ಎರಡು. ಭಾಗಗಳು. ಒಂದು 'ಕಾವು' ಇನ್ನೊಂದು ಬಾಯಿ. ಕಾವು ಮರದಿಂದ ಮಾಡಿರುವ ಒಂದು ಹಿಡಿಯಷ್ಟು ಗಾತ್ರದ ಗೂಟ. ಬಾಯಿ ಮಾತ್ರ ಗಡಸು ಕಬ್ಬಿಣದಿಂದ

ಮಾಡಿದ ಚೂಪಾದ ಭಾಗ. ಕಾವು ತಯಾರಿಸುತ್ತಿದ್ದರು. ಜಾಲಿ ಮರದಂತಹ ಗಟ್ಟಿ ಮರದಿಂದ. ಬಾಯಿಯನ್ನು ಮಾಮೂಲಿ ಗಡಸು ಕಬ್ಬಿಣದಿಂದ.

ಮರ ಕಡಿಯಲು ಹಾಗು ಕಡಿದ ಮರದ ತುಂಡುಗಳನ್ನು ಸೌದೆಗಳನ್ನಾಗಿಸಲು ಕೊಡಲಿಗಳು ಬಳಕೆಯಾಗುತ್ತಿದ್ದವು. ಮಚ್ಚು, ಕುಡುಗೋಲಿನಿಂದಾಗದ ಕೆಲಸವನ್ನು ಈ ಕೊಡಲಿಯಿಂದ ಮಾಡಲಾಗುತ್ತಿತ್ತು. ರೈತರ ಬಳಿ ಹೆಚ್ಚಾಗಿರುತ್ತಿದ್ದ ಕೊಡಲಿಗಳೆಂದರೆ ಸಣ್ಣ ಬಾಯಿಯ ಕೊಡಲಿಗಳು. ಅದಕ್ಕೆ ಕಾರಣವನ್ನ ದೇವನಹಳ್ಳಿ ರಮೇಶ್ ಹೀಗೆ ಹೇಳುತ್ತಾರೆ. ರೈತರೆಂದರೆ ಅವರು ಕೇವಲ ರೈತರಷ್ಟೇ ಅಲ್ಲ ಸಾರ್. ಅವರು ಬಡಗಿ ಆಗಿರುತ್ತಿದ್ದರು. ಕಮ್ಮಾರರು ಆಗುತ್ತಿದ್ದರು, ಕುಂಬಾರರೂ ಆಗಿರುತ್ತಿದ್ದರು. ಹಾಗಾಗಿ ತಮ್ಮ ಕೃಷಿ ಉಪಕರಣಗಳಿಗೆ ಬೇಕಾದ ಮರಗಳನ್ನು ಕಾಡಿನಿಂದ ಕಡಿದು ತರಲು ಕೊಡಲಿಗಳನ್ನು ಒಯ್ಯುತ್ತಿದ್ದರು. ಹಾಗೇ ತಮಗೆ ಬೇಕಾದ ಮರದ ಕೊಂಬೆಯನ್ನು ಮಾತ್ರ ಕಡಿದು ತರುತ್ತಿದ್ದರು. ಅಂದಿನ ರೈತರಿಗೆ ಕಾಡು ಹಾಳು ಮಾಡುವುದು ಇಷ್ಟವಿರಲಿಲ್ಲ. ಹಾಗಾಗಿ ಕೊಡಲಿ ಬಳಸಿ ಮರದ ಕೊಂಬೆ ಕಡಿಯುತ್ತಿದ್ದರು. ಆ ಮರಗಳು ಮತ್ತೆ ಚಿಗುರುತ್ತವೆಯೇ ಎಂಬ ಖಚಿತ ಮಾಹಿತಿ ಮೇರೆಗೆ ಮರ ಕಡಿಯುತ್ತಿದ್ದದ್ದು.

2.11 ಮೂಗು ದಾರ

'ಅದೇನ್ ಆಪಾಟಿ ಕುಣಿದಾಡ್ತದೆ ಆ ಕರ. ನಾಳೆ ಅದಕ್ಕೊಂದು ಮೂಗುದಾರ ಪೋಣಿಸ್ಲಾ ಕೈಗೆ ಸಿಗದೆ ಸತಾಯಿಸುತ್ತಿದ್ದ ಎರಡು ಮೂರು ವರ್ಷದ ಕರುಗಳನ್ನು ನೋಡಿದಾಗ ರೈತರು ಸಾಮಾನ್ಯವಾಗಿ ಈ ಮಾತು ಹೇಳುತ್ತಾರೆ. ಮೂಗುದಾರ ಹಾಕುವುದು ಜಾನುವಾರುಗಳನ್ನು ನಿಯಂತ್ರಿಸುವುದಕ್ಕೆ. ಮೊದಲು ನಾರಿನ ಹಗ್ಗದಿಂದ ಈ ಮೂಗುದಾರ ತಯಾರಿಸುತ್ತಿದ್ದರು. ಜಾನುವಾರು ಗಲ ಮೂಗಿನ ಹೊಳ್ಳೆಯಿಂದ ತೂರಿಸಿ. ಕೊಂಬಿನ ಹಿಂದಕ್ಕೆ ಕಟ್ಟುತ್ತಿದ್ದ ಈ ಮೂಗುದಾರ ಒಮ್ಮೊಮ್ಮೆ ಮೂಗನ್ನು ಕೊರೆದು ರಕ್ತ ಬರಿಸುತ್ತಿತ್ತು. ಆದ್ದರಿಂದ ನಾರಿನ ದಾರ ಮಾಯವಾಗಿ, ಹತ್ತಿಯಿಂದ ಮಾಡಿದ ಮೂಗುದಾರ ಚಾಲ್ತಿಗೆ ಬಂತು. ತರಾವರಿ ಬಣ್ಣಗಳಲ್ಲಿ ತರಾವರಿ ಗಾತ್ರದಲ್ಲಿ ಮೂಗುದಾರ ಜಾನುವಾರುಗಳನ್ನು ಅಲಂಕರಿಸುತ್ತಿದ್ದವು. ಹತ್ತಿ ಮೂಗುದಾರ ಜಾನುವಾರುಗಳು ಸುರಿಸುವ ಜೊಲ್ಲು, ಗೊಣ್ಣೆಯಿಂದ ಕಾಲಕ್ರಮೇಣ ಕೊಳೆಯುತ್ತಾ. ರೋಗ ತರುವ ವಸ್ತುಗಳಾದವು. ರೈತರು ಮತ್ತೆ ನಾರಿನ ಹಗ್ಗಕ್ಕೆ ಮೊರೆ ಹೋದರು. ಈಗೀಗ ನಾರೂ ಇಲ್ಲ, ಹತ್ತಿಯೂ ಇಲ್ಲ, 'ಸರ್ವಂ ಪ್ಲಾಸ್ಟಿಕ್ ಮಯಂ' ಆಗಿದೆ.

'ಬಾರುಕೋಲು ಬೆದರಿಸಕೆ ಮಾತ್ರ, ಹೊಡೆಯೋಕಲ್ಲ. ನಾವು ಸಾಕಿದ ಎತ್ತುಗಳನ್ನು ನಾವೇ ಹೊಡೆಯಕಾಗುತ್ತಾ, ಅವು ನಮ್ ತರಾನೇ ಜೀವ ಅಲ್ವಾ, ಅವಕ್ಕೂ ಏಟಾಗ್ತೈತೆ ಅಲ್ವಾ' ಇದು ಮಾಮನಕೇರಿ ಗ್ರಾಮದ ರೈತ ಶಿವಪ್ಪ ಬಾರುಕೋಲು ಬಳಕೆ ಬಗ್ಗೆ ನುಡಿದ ಮನದಾಳದ ಮಾತುಗಳು. ಬಾರುಕೋಲು ಎಂದರೆ 'ಬಾರಿಸುವ ಕೋಲು' ಎಂದೇ ತಿಳಿದಿದ್ದ ನನಗೆ ಹೊಸ ವಿಷಯ ತಿಳಿದುಕೊಂಡ ಹಾಗೆ ಆಯಿತು. ಆ ಮಾತು ಒಂದು ಕಡೆ ಇರ್ಲಿ ಬಿಡಿ;

ಅಂದಾಹಾಗೆ ಶಿವಪ್ಪ ಹೇಳಿದಂತೆ ರೈತರು ಬಾರುಕೋಲು ಬಳಸುವುದು ಜಾನುವಾರುಗಳನ್ನು ಬೆದರಿಸಲು, ಓಡಿಸಲು, ಅವುಗಳ ಮೈಗೆ ಚುರುಕು ಮುಟ್ಟಿಸಲು ಮಾತ್ರ, ಒಂದೊಂದು ಪ್ರದೇಶದಲ್ಲಿ ಒಂದೊಂದು ತರಹ ಬಾರುಕೋಲುಗಳು ಬಳಕೆಯಲ್ಲಿದ್ದವು. ಬಯಲು ಸೀಮೆಯಲ್ಲಿ ಉದ್ದನೆಯ ಕೋಲಿಗೆ ಅಷ್ಟೇ ಉದ್ದನೆ ಎರಡು ತೋರುಬೆರಳು ಗಾತ್ರದ ಹಗ್ಗ ಕಟ್ಟಿರುತ್ತಾರೆ. ಆ ಹಗ್ಗವನ್ನು ಕೋಲಿನ ಮುಂಭಾಗಕ್ಕೆ ಗಟ್ಟಿಯಾಗಿ ಸುತ್ತುತ್ತಾರೆ. ಕೆಲವರು ನೋಡೋಕೆ ಅಂದವಾಗಿ ಕಾಣಲಿ ಅಂತ ಕೋಲಿನ ತುದಿಗೆ ಬಟ್ಟೆ ಹೂವು ಸಿಕ್ಕಿಸಿರುತ್ತಾರೆ. ಕೆಲವರು ಗೆಜ್ಜೆ ಕಟ್ಟುತ್ತಾರೆ. ಕಾರಣ ಆ ಗೆಜ್ಜೆ ಸದ್ದಿಗೆ ಬೆದರಿ ದನಗಳು ಓಡಲಿ ಎಂಬುದು.

ಉತ್ತರ ಕರ್ನಾಟಕದಲ್ಲಿ ಮೊಳದುದ್ದದ ಬಿದಿರಿನ ಕೋಲಿಗೆ ಮಾರುಉದ್ದದ ಹತ್ತಿ ಹಗ್ಗ ಕಟ್ಟುತ್ತಾರೆ. ಈ ಹಗ್ಗದ ತುದಿಗೆ ಮತ್ತೊಂದು ಸಣ್ಣ ಗಾತ್ರದ ದಾರವನ್ನು ಕುಚ್ಚಾಗಿ ಕಟ್ಟುತ್ತಾರೆ. ಈ ಬಾರುಕೋಲನ್ನು ಒಂದು ಸಾರಿ ಕೊಡವಿದರೆ ಸಣ್ಣ ಗಾತ್ರದ ಹಗ್ಗ ದೊಡ್ಡಗಾತ್ರದ ಹಗ್ಗಕ್ಕೆ ತಾಕಿ 'ಚಟಾರ್' ಎಂದು ಸದ್ದು ಮಾಡುತ್ತದೆ. ಆ ಸದ್ದಿಗೆ ಎತ್ತುಗಳು ಬೆದರಿ ಓಡುತ್ತವೆ ಅದಕ್ಕೆ ಶಿವಪ್ಪ ಹೇಳಿದ್ದು, ಬಾರುಕೋಲು ಬಾಸುಂಡೆ ಬರಿಸುವ ಉಪಕರಣವಲ್ಲ, ಬೆದರಿಸುವ ಉಪಕರಣ ಅಂತ.

2.12 ಕೊರಳ ಗಂಟೆ

ನಮ್ಮ ಸೈಕಲ್‌ಗಳಿಗೆ ಬೆಲ್ ಇದ್ದಾಹಾಗೆ, ವಾಹನಗಳಿಗೆ ಹಾರನ್ ಇದ್ದಹಾಗೆ ಜಾನುವಾರುಗಳಿಗೆ ಕೊರಳ ಗಂಟೆ. ಈ ಗಂಟೆಗಳಲ್ಲಿ ಹತ್ತಾರು ತರ ಇದ್ದವು ಎಂದು ಕುಣಿಗಲ್‌ನ ರೈತ ಶಂಕರ್ ಹೇಳುತ್ತಾರೆ. ಒಂದೊಂದು ಗಂಟೆ ಒಂದೊಂದು ಸದ್ದು ಮಾಡುತ್ತಿದ್ದವು. ಆ ಒಂದೊಂದು ಸದ್ದು ಬೇರೆ ಬೇರೆ ವಿಷಯಗಳನ್ನು ಸನ್ನೆ ಮಾಡುತ್ತಿದ್ದವು ಎನ್ನುತ್ತಾರೆ.

ರಾತ್ರಿ ಕಾಡುದಾರಿಗಳಲ್ಲಿ ಎತ್ತುಗಳನ್ನು ಹೊಡೆದು ಹೋಗುವಾಗ ಎದುರಿನಿಂದ ಬಂದವರು ಈ ಗಂಟೆ ಸದ್ದು ಕೇಳಿ ದಾರಿ ಬಿಡುತ್ತಿದ್ದರಂತೆ. ಎಷ್ಟೋ ಕಾಡು ಪ್ರಾಣಿಗಳು ಈ ಗಂಟೆ ಸದ್ದಿಗೆ ಹೆದರಿ ಓಡುತ್ತಿದ್ದವಂತೆ. ಮತ್ತೊಂದು ವಿಷಯವೆಂದರೆ; ಜಂಗಲಿ(ಕಾಡು)ಗೆ ಹೊಡೆದ ದನಗಳು ಒಮ್ಮೊಮ್ಮೆ ಹಾದಿ ತಪ್ಪಿ ಕಾಡೊಳಗೆ ಕಳೆದು ಹೋದಾಗ ಈ ಗಂಟೆ ಸದ್ದಿನಿಂದಲೇ ರೈತರು ತಮ್ಮ ದನಗಳನ್ನು ಹುಡುಕುತ್ತಿದ್ದರಂತೆ. ಕೆಲವು ಜಾನುವಾರುಗಳಿಗೆ ತಮ್ಮ ಯಜಮಾನರ ಧ್ವನಿ ಕೇಳಿದ ಕೂಡಲೇ ತಲೆಯಲ್ಲಾಡಿಸುವ ಪ್ರವೃತ್ತಿ ಇತ್ತಂತೆ. ಅಂಥವು ದೂರದಲ್ಲೆಲ್ಲೋ ಹೆಸರಿಡಿದು ಕೂಗಿದಾಗ, ಇಲ್ಲೆಲ್ಲೋ ಇದ್ದ ಜಾನುವಾರುಗಳು ತಲೆಯಲ್ಲಾಡಿಸಿ, ಕೊರಳಲ್ಲಿದ್ದ ಗಂಟೆ ಸದ್ದು ಮಾಡಿ ಯಜಮಾನನಿಗೆ ತಮ್ಮ ಇರುವಿಕೆಯ ಜಾಗದ ದಾರಿ ತೋರುತ್ತಿದ್ದವಂತೆ.

2.13 ಕೊರಳ ಪಟ್ಟಿ

ಪ್ರತಿಯೊಂದು ಜಾನುವಾರಿಗೆ ಕೊರಳ ಪಟ್ಟಿ ಕಾಯಂ ಆಗಿ ಇರುತ್ತಿದ್ದವು. ಕೆಲವು ಭಾಗದಲ್ಲಿ ಈ ಕೊರಳು ಪಟ್ಟಿ ಬಹಳ ಅಲಂಕಾರಿಕವಾಗಿ ಇರುತ್ತಿದ್ದವು. ಕೆಲವರು ಬೆಲ್ಟ್‌ನಂತ ಪಟ್ಟಿ ಹಾಕಿಸಿದರೆ,

ಇನ್ನು ಕೆಲವರು ದಪ್ಪ ಹಗ್ಗವನ್ನು ಹೊಸೆದು ಕೊರಳಿಗೆ ತೊಡಿಸುತ್ತಿದ್ದರು. ಮೇಲು ನೋಟಕ್ಕೆ ಇದೂ ಕೂಡ ಶೋಕಿಯ ಉಪಕರಣ. ಆದರೆ ಇದರ ಹಿಂದಿನ ಉದ್ದೇಶವೇ ಬೇರೆ. ಅಂದರೆ ಜಾನುವಾರುಗಳ ಕುತ್ತಿಗೆ ಮೇಲೆ ನೊಗ, ಹಾಕಿ ಗಾಡಿ ಹೂಡುತ್ತೇವೆ. ನೇಗಿಲು, ಕುಂಟೆ, ಕೂರಿಗೆ ಇತ್ಯಾದಿ ಉಪಕರಣಗಳನ್ನು ಹೂಡುತ್ತೇವೆ. ಇದರಿಂದ ಕುತ್ತಿಗೆಗೆ ಗಾಯವಾಗುವ ಸಂಭವ ಹೆಚ್ಚು ಇದನ್ನು ತಡೆಯುವುದಕ್ಕಾಗಿಯೇ ಕುತ್ತಿಗೆ ಪಟ್ಟಿ ಬಳಸುತ್ತಿದ್ದರಂತೆ. ಈಗ ಕುತ್ತಿಗೆ ಪಟ್ಟಿ ಹಗ್ಗದ ರೂಪಕ್ಕೆ ಇಳಿದಿದೆ.

ಉತ್ತರ ಕರ್ನಾಟಕದಲ್ಲಿ ಜಾನುವಾರು ಕುತ್ತಿಗೆಗೆ ಕಪ್ಪು ಬಣ್ಣದ ಹಗ್ಗವನ್ನು ಬಳಸುತ್ತಾರೆ. 'ಕಪ್ಪು ಬಣ್ಣದ್ದೇ' ಏಕೆ ಬಳಸುತ್ತಿದ್ದರು ಎಂಬುದು ಮಾಹಿತಿ ಈಗಿನ ಪೀಳಿಗೆಯ ಬಳಿ ಇಲ್ಲ. ಆ ಮಾಹಿತಿ ಹೇಳುವ ಮಂದಿ ಈಗಿಲ್ಲ. ಬೀದರ ಜಿಲ್ಲೆಯ ರೈತರೊಬ್ಬರ ಪ್ರಕಾರ ಕಪ್ಪು ದೃಷ್ಟಿದೋಷ ನಿವಾರಕ ಎಂದು ಬಳಸುತ್ತಿದ್ದರು ಎನ್ನುತ್ತಾರೆ.

2.14 ಬಿದಿರು ಅಂಬು

ರಾಗಿ ಕಡಲೆಕಾಯಿ, ಭತ್ತ ಮುಂತಾದ ಬೆಳೆಗಳು ಕಾಳು ಕಟ್ಟುವ ಸಮಯ ಹಾಗೂ ಕೊಯ್ಲು ಮಾಡುವ ಸಮಯದಲ್ಲಿ ಬೆಳೆಯನ್ನು ಕಾಡು ಪ್ರಾಣಿ ಹಾಗೂ ಪಕ್ಷಿಗಳಿಂದ ರಕ್ಷಿಸುವುದು ರೈತರಿಗೆ ದೊಡ್ಡ ತಲೆನೋವು. ಅವುಗಳ ನಿಯಂತ್ರಣಕ್ಕಾಗಿ ನಮ್ಮ ಹಳ್ಳಿಗರು ಬಳಸುವ ನೂರಾರು ವಿಧಾನಗಳಲ್ಲಿ ಅತ್ಯಂತ ಅಪರೂಪವಾದದ್ದು ಬಿದಿರು ಅಂಬು ವಿಧಾನ.

ಎರಡೂಕಡೆ ಗೆಣ್ಣುಗಳಿರುವ ಒಂದು ದಪ್ಪ ಬಿದಿರನ್ನು(ಹೆಬ್ಬಿದಿರು) ತೆಗೆದುಕೊಂಡು ಒಂದುಭಾಗದಲ್ಲಿ ಕಾಲುವೆ ತೋಡಿ, ಅರ್ಧ ಇಂಚು ಅಗಲವಿರಲಿ ಮತ್ತು ಗೆಣ್ಣುಗಳನ್ನು ತಾಕದಂತಿರಲಿ. ಎರಡು ಮಾರುದ್ದದ ಬಿದಿರು ದಬ್ಬೆಯೊಂದನ್ನು ಹೆಬ್ಬಿದಿರಿನ ತುಂಡಿಗೆ ತಂತಿಯಿಂದ ಬಿಗಿದು ಎರಡೂ ತುದಿಗಳನ್ನು ಬಗ್ಗಿಸಿ ಕಟ್ಟಿ (ಕತ್ತರಿಸುವಾಗಲೇ ಹೆಬ್ಬಿದಿರಿನ ತುಂಡಿಗೆ ಆಕಡೆ-ಈಕಡೆ ಎರಡು ದಬ್ಬೆ ಬಿಟ್ಟುಕೊಂಡರೆ ಇನ್ನೂ ಒಳ್ಳೆಯದು) ಕಟ್ಟಲು ಬಿರುಸಾದ ದಾರವನ್ನು ಬಳಸಿ. ಒಂದು ಗಟ್ಟಿಯಾದ ಮತ್ತು ಹಗುರವಾದ ಕೋಲನ್ನು ಹುರಿಯ ಮಧ್ಯಕ್ಕೆ ತೂರಿಸಿ. ಕೋಲು ಬಿದಿರು ತುಂಡಿನ ಮಧ್ಯಭಾಗಕ್ಕೆ ನೇರವಾಗಿರಲಿ. ಕೆಳಭಾಗಕ್ಕೆ ತೂಕವಿರುವಂತೆ ಬಟ್ಟೆ ಅಥವಾ ಗೋಣಿ ತಾಟನ್ನು ತೂಕುಹಾಕಿ.

ಇದೀಗ ಬಿದಿರು ಅಂಬು ತಯಾರು. ಇದರ ಮೇಲ್ಭಾಗಕ್ಕೊಂಡು ದಾರಕಟ್ಟಿ ಬಾಗಿದ ಮರದ ಕೊಂಬೆಗೋ ಅಥವಾ ಚಿತ್ರದಲ್ಲಿರುವಂತೆ ಬಾಗಿದ ಕಡ್ಡಿಗಳಿಗೋ ನೇತುಹಾಕಿ. ಚೆನ್ನಾಗಿ ಗಾಳಿ ಬೀಸುವ ಎತ್ತರದಲ್ಲಿ ಕಟ್ಟಿದರೆ ಉತ್ತಮ. ಗಾಳಿಯ ಒತ್ತಡ ಮತ್ತು ಬಿರುಸಾದ ಹುರಿ(ದಾರ)ಯ ತಿರುಗುವಿಕೆಯಿಂದ ಕೋಲು ನಿರಂತರವಾಗಿ ಬಿದಿರು ತುಂಡಿಗೆ ಬಡಿದು ಟೊಳಕ್, ಟೊಳಕ್ ಎಂಬ ಸದ್ದ ಹೊರಡಿಸುತ್ತದೆ. ಸುಮಾರು ಅರ್ಧ ಫರ್ಲಾಂಗುವರೆಗೂ ಇದರ ಸದ್ದು ಬರುವುದರಿಂದ ಹಂದಿ,

ಕರಡಿ, ನರಿ ಮತ್ತು ಕಾಗೆ ಮುಂತಾದವು ಹೊಲದತ್ತ ಸುಳಿಯುವುದಿಲ್ಲ. ನಿಷ್ಠ ಯೋಧನಂತೆ ಹಗಲಿರುಳು ದುಡಿವ ಇದನ್ನು ಹೊಲದಲ್ಲಿ ತೂಗುಹಾಕಬಹುದು.

2.15 ಕವಣೆ

ಬಯಲು ಸೀಮೆಯ ರೈತರನ್ನು ಹೊರತು ಪಡಿಸಿ ಬೇರೆ ಯಾವ ಪ್ರದೇಶದ ರೈತರಿಗೂ ಈ ಕವಣೆ ಬಗ್ಗೆ ಮಾಹಿತಿ ಇರಲು ಸಾಧ್ಯವಿಲ್ಲ, ಇದು ಹಕ್ಕಿ ಓಡಿಸುವ ಮತ್ತೊಂದು ಉಪಕರಣ. ಮುಕ್ಕಾಲು ಮಾರು ಎರಡು ಹಗ್ಗವನ್ನು ಅಂಗೈ ಅಗಲದ ಚರ್ಮದ ಹಾಳೆಗಳ ತುದಿಗೆ ಕಟ್ಟುತ್ತಾರೆ. ಎರಡು ಹಗ್ಗದ ತುದಿಗಳನ್ನು ಹಿಡಿದುಕೊಂಡರೆ ಚರ್ಮದ ಹಾಳೆಯಲ್ಲಿ ಗುಂಡಿ ಬೀಳುತ್ತದೆ. ಆ ಗುಂಡಿಗೆ ಸೂಕ್ತವಾದ ದುಂಡು ಕಲ್ಲುಗಳ್ನು ಆರಿಸಿ ತಂದು, ಗದ್ದೆಯ ಒಂದು ಮೂಲೆಯಲ್ಲಿ ನಿಂತು ಒಂದೊಂದೇ ಕಲ್ಲುಗಳನ್ನು ಈ ಕವಣೆಯಲ್ಲಿ ಹಾಕಿ ದಾರವನ್ನು ಜೋರಾಗಿ ತಿರುಗಿಸಿ ಎಸೆದರೆ ಆ ಕವಣೆಯೊಳಗಿನ ಕಲ್ಲು ಅರ್ಧ ಮೈಲಿ ದೂರ ಹೋಗಿ ಬೀಳುತ್ತದೆ. ಈ ಕಲ್ಲು ಕ್ರಮಿಸುವ ವೇಗ ಹಾಗೂ ಸದ್ದಿಗೆ ಬೆಳೆ ತಿನ್ನಲು ಹವಣಿಸುವ ಪ್ರಾಣಿ ಪಕ್ಷಿಗಳು ಗದ್ದೆಯಿಂದ ಓಡಿ ಹೋಗುತ್ತವೆ.

ಸಾಮಾನ್ಯವಾಗಿ ಕವಣೆ ಬೀರುವವರು ಗದ್ದೆ ಮಧ್ಯೆ ಕಟ್ಟಿರುವ 'ಮಂಚಿಗೆ' ಮೇಲೆ ನಿಂತಿರುತ್ತಾರೆ. ಏಕೆಂದರೆ ಮಂಚಿಗೆಯನ್ನು ಸಾಮಾನ್ಯವಾಗಿ ಗದ್ದೆಯ ಮಧ್ಯೆಯೇ ಕಟ್ಟಿರುತ್ತಾರೆ. ಇದರಿಂದ ಸುತ್ತಲಿರುವ ಬೆಳೆಯನ್ನು ಸಂರಕ್ಷಿಸಿಕೊಳ್ಳಲು ಸಹಾಯವಾಗುತ್ತದೆ ಎನ್ನುವುದು ರೈತರ ಅಭಿಪ್ರಾಯ. ಈಗ ಕವಣೆ ಜಾಗವನ್ನು ಬಂದೂಕು ಪಟಾಕಿಗಳು ಆಕ್ರಮಿಸಿಕೊಂಡಿವೆ.

2.16 ಮಂಚಿಗೆ

'ಹಾಳು ಮಾಡೋಕ್ಮುಂಚೆ ಮಂಚಿಗೆ ನೋಡ್ಬೇಕಿಲ್ವಂತೆ' ಅಂದರೆ ಬೆಳೆ ಹಾಳು ಮಾಡಲು ಬರುವವರು ಹೊಲದಲ್ಲಿ ಮಂಚಿಗೆ ಇದೆಯೇ? ಎಂಬುದನ್ನು ಗಮನಿಸಿ ಬರಬೇಕು ಎಂದರ್ಥ.

ನಿಜ, ಹೊಲದಲ್ಲಿ ಬೆಳೆ ತೂಗಾಡುತ್ತಾ ನಿಂತಾಗ 'ದಾಳಿ' ಮಾಡುವವರ ಸಂಖ್ಯೆ ಹೆಚ್ಚು ಅಂಥವರನ್ನು ಪತ್ತೆ ಹಚ್ಚಬೇಕೆಂದರೆ, ಬೆಳೆಯ ಎತ್ತರಕ್ಕಿಂತ ಇನ್ನಷ್ಟು ಎತ್ತರದಲ್ಲಿ ನಿಂತು ಹೊಲ ಕಾಯಬೇಕು! ವಿಶೇಷವಾಗಿ ಜೋಳ ತೆನೆ ಹೊತ್ತು ನಿಂತ ಸಮಯದಲ್ಲಿ ಹೊಲ ಕಾಯಬೇಕಾದರೆ ಆ ಬೆಳೆಗಿಂತ ಇನ್ನಷ್ಟು ಎತ್ತರದ ಸ್ಥಳದಲ್ಲಿ ನಿಲ್ಲಬೇಕು.

ಈ ಉದ್ದೇಶಕ್ಕೆಂದೇ ಮಂಚಿಗೆ ತಯಾರಾಗುತ್ತದೆ. ಹೊಲದ ಮಧ್ಯೆ ನಾಲ್ಕೆಂಟು ಅಡಿ ಜಾಗದಲ್ಲಿ ಒಂದೇ ದಿನದಲ್ಲಿ ದಿಢೀರ್ ಎಂದು ನಿರ್ಮಿಸುವ ಮಂಚಿಗೆ ಉಪಯೋಗಿ. ಕುಳಿತುಕೊಳ್ಳಲು, ಮಲಗಿ ವಿಶ್ರಾಂತಿ ತೆಗೆದುಕೊಳ್ಳಲು ಇದನ್ನು ಬಳಸಬಹುದು.

ಮಂಚಿಗೆ ನಿರ್ಮಾಣಕ್ಕೆ ಬೇಕಾಗುವ ಸಾಮಗ್ರಿಗಳು; ಕಟ್ಟಿಗೆ ತುಂಡು, ಬಿದಿರು ಹಾಗೂ ಕತ್ತಾಳೆ ನಾರು ನಾಲ್ಕು ಬಲವಾದ, ದಪ್ಪನೆಯ ಬೇವಿನ ಕಟ್ಟಿಗೆಯನ್ನು ಸಮನಾದ ಅಂತರದಲ್ಲಿ ನೆಡಬೇಕು.

ಇವುಗಳ ಮೇಲ್ತುದಿಗೆ ನಾಲ್ಕು ಬಿದಿರನ್ನು ನಾರಿನಿಂದ ಕಟ್ಟಬೇಕು. ಚೌಕಾಕಾರದ ಈ ಮೇಲ್ಭಾಗಕ್ಕೆ ಅಡ್ಡ ಹಾಗೂ ಉದ್ದಕ್ಕೆ ಎಂಟು ಅಥವಾ ಹತ್ತು ಕಟ್ಟಿಗೆಗಳನ್ನು ಸಮನಾದ ಅಂತರದಲ್ಲಿ ಕಟ್ಟಬೇಕು

ಇದರ ಮೇಲೆ ಮೊದಲಿಗೆ ಲಕ್ಕಿ ಗಿಡದ ಟೊಂಗೆಗಳನ್ನು ಹಾಕಿ, ನಂತರ ಲಕ್ಕಿ ಎಲೆಗಳ ರಾಶಿ ಹರಡಬೇಕು. ಜೋಳದ ದಂಟು ಅಥವಾ ಭತ್ತದ ಹುಲ್ಲನ್ನು ಸುಡನ್ನಾಗಿ ಕಟ್ಟಿ ಮೇಲೆ ಸಾಲಾಗಿ ಜೋಡಿಸಿ, ಈಚಲು ಚಾಪೆಯೊಂದನ್ನು ಹಾಸಿಗರೆ ಮಂಚಿಗೆ ಸಿದ್ಧ.

ಕುರಿಗಳನ್ನು ಮೇಯಿಸುವವರು ದೂರದವರೆಗೂ ನಿಗಾ ವಹಿಸಬೇಕಾದ ಕಾರಣದಿಂದ ಹತ್ತಾರು ಅಡಿ ಎತ್ತರದ ಮಂಚಿಗೆ ನಿರ್ಮಿಸಿಕೊಳ್ಳುತ್ತಾರೆ. ಕುರಿದೊಡ್ಡಿಗೆ ದಾಳಿ ಮಾಡುವ ತೋಳಗಳನ್ನು ಮೇಲಿನಿಂದಲೇ ಸದ್ದು ಮಾಡಿ ಓಡಿಸುತ್ತಾರೆ! ಹೀಗೆ ಅಪಾಯ ತಪ್ಪಿಸಿಕೊಳ್ಳಲು ಬಳಕೆಯಾಗುವ ಮಂಚಿಗೆಯು, ಬೆಳೆಗೆ ದಾಳಿ ಮಾಡುವ ಪಕ್ಷಿಗಳನ್ನು ಕವಣೆ ಬೀಸಿ ಓಡಿಸಲೂ ನೆರವಾಗುತ್ತದೆ.

ಗಿಡದ ಮೇಲೆಯೇ ಕಟ್ಟುವ ಮಂಚಿಗೆಗೆ ಅಟ್ಟಣೆ ಎಂದರೇನೇ ಸೂಕ್ತ. 'ಕಂಚಿಗೆ ಹೋದರೂ ಮುಂಚಿಗೆಗೆ ನಾಲ್ಕೇ ಕಾಲು' ಎಂಬಂತೆ ನೆಲದ ಮೇಲೆ ನಾಲ್ಕು ಕಾಲಿನಲ್ಲಿನಿಂತ ಮಂಚಿಗೆ ಮಾಡುವುದು ಅದೆಷ್ಟು ಸುಲಭವೆನಿಸುತ್ತದೆ.

ಅಧ್ಯಾಯ:– 3

ಜನಪದ ಚಿತ್ರ ಹಾಗೂ ಕರಕುಶಲಕಲೆಗಳು

3.1 ಪ್ರಸ್ತಾವನೆ

3.2 ಕಸೂತಿ

3.3 ಲಂಬಾಣಿ ಕಲೆ

3.4 ಕೌದಿ

3.5 ರಂಗೋಲಿ

3.6 ತೋರಣ

3.7 ಹೂಗಾರ

3.8 ಬಡಿಗೇರ

3.9 ಹಣಚಿ ಬೊಟ್ಟು

3.1 ಪ್ರಸ್ತಾವನೆ

ಜನಪದರ ಬದುಕಿನೊಂದಿಗೆ ಕಲೆ ಹಾಸುಹೊಕ್ಕಾಗಿ ಹೆಣೆದುಕೊಂಡು ಬಂದಿದೆ. ಜನಪದ ಜೀವನವೇ ಒಂದು ಕಲೆಯಾಗಿದೆ. ಕಲೆಯೊಂದಿಗೆ ಮುಂಜಾವನ್ನು ಜನಪದರು ಸ್ವಾಗತಿಸುತ್ತಾರೆ. ಹಾಡುತ್ತಾರೆ. ಕುಣಿಯುತ್ತಾರೆ. ದಣಿಯುತ್ತಾರೆ. ಕುಣಿಸುತ್ತಾರೆ. ಚಿತ್ರ ಬರೆಯುತ್ತಾರೆ. ಬರೆಸುತ್ತಾರೆ. ಮುಂದಿನ ಪೀಳಿಗೆಗೆ ತಿಳಿಸುತ್ತಾರೆ. ಹೀಗೆ ಮಾಡಲು ಪ್ರಕೃತಿಯೇ ಗುರುವಾಗಿದೆ. ಹಾಡುವ ಕೋಗಿಲೆಗೆ ಹುಟ್ಟುಹಬ್ಬದ ಅವಶ್ಯಕತೆ ಇಲ್ಲ. ಕುಣಿಯುವ ನವಿಲಿಗೆ ಸಂಭಾವನೆ ಬೇಕಿಲ್ಲ. ಅದನ್ನು ಬಳುವಳಿಯಾಗಿ ಬಂದಿರುತ್ತದೆ. ಹಾಗೆಯೇ ಜನಪದರಿಗೆ ಚಿತ್ರ ಬಿಡಿಸುವ ಪರಿಯನ್ನು ಬಳುವಳಿಯಾಗಿ ಬಂದಿರುತ್ತದೆ.

ಹಳ್ಳಿಯ ಜೀವನ ಸ್ವಾವಲಂಬಿ ಜೀವನ. ಬರಿ ಬಾಂಧವ್ಯದ ಹಂದರದ ಮೇಲೆ ಕಟ್ಟಿದುದು. ಜೀವನವೂ ಒಂದು ಕಲೆ. ಬದುಕೂ ಒಂದು ಕಲೆ. ಸುಂದರವಾಗಿ ಮಾತನಾಡುವುದು ಬದುಕುವುದು. ಅದರಲ್ಲಿನ ಅನ್ವೇಷಣೆಯೇ ಕಲೆ. ಅದಕ್ಕಂತಲೇ ನಮ್ಮ ಹಳ್ಳಿಗರು ಪ್ರಕೃತಿಯ ಮಡುವಿನಲ್ಲಿಯೇ ಚಿತ್ರ ಬಿಡಿಸಿ ಸಂತೋಷಪಟ್ಟು ಇನ್ನೊಬ್ಬರನ್ನು ಸಂತಸ ಪಡಿಸುತ್ತಾರೆ.

ದಿನ ಬೆಳಗಾದರೆ ನಿನ್ನ ಮಾತಾಡಸಿದನಿ, ಹಾಡಿದಿನಿ, ಕುಣಿದಿನಿ, ಬಣ್ಣದ ಚಿತ್ರ ಬಿಡಿಸಿನಿ, ಮಣ್ಣಾಗ ನಿನ್ನ ಮೂರ್ತಿ ಬಿಡಿಸಿದಿನಿ, ಗೋಡೆಯ ಮೇಲೆ ಚಿತ್ರ ಬರೆದು ಹಿರಿಯರಿಂದ ಶಹಭಾಷಗಿರಿ ಪಡೆದಿದ್ದೀನಿ. ಹೀಗೆಲ್ಲ ಜನಪದರ ಮಾತುಗಳು ಕೇಳಿಬರುತ್ತವೆ. ಒಂದು ಹಳ್ಳಿಯಲ್ಲಿ ಬಡಿಗ, ಕಂಬಾರ, ಹೂಗಾರ, ಮ್ಯಾದಾರ, ಬಳಿಗಾರ, ಚಮ್ಮಾರ ತಳವಾರ, ಕುಂಬಾರ ಮುಂತಾದವರು ಕಂಡುಬರುತ್ತಾರೆ. ಅವರವರ ಕಸಬನ್ನು ಮಾಡುತ್ತ ತನ್ನ ಕೌಶಲ್ಯವನ್ನು ಬಿಂಬಿಸಲು ಅದರ ಮೇಯೊಂದು ಚಿತ್ರ ಬಿಡಿಸುವ ಪರಿಯನ್ನು ಬೆಳಸಿಕೊಂಡಿರುತ್ತಾರೆ. ಹರಿದ ಚಿಂದಿ ಗೊಂದಿ, ಕಡ್ಡಿಕಸ ಮುಂತಾದವುಗಳಿಗೆ ಜೀವ ತುಂಬುತ್ತಾರೆ. ಅಂಥ ಪರಿಯನ್ನು ಕಸೂತಿ, ಲಂಬಾಣಿ ಕಲೆ, ಕೌದಿ, ಕುಂಚಿಗೆ ಕುಲಾಯಿ, ರಂಗೋಲಿ, ತೋರಣ, ಹೂಗಾರ ಮತ್ತು ಬಡಿಗೇರ ಮುಂತಾದವರು ಬೀದರ ತಾಲೂಕಿನಲ್ಲಿ ಉಳಸಿಕೊಂಡು ಬೆಳಸಿಕೊಂಡು ಬಂದಿರುವುದನ್ನು ಕಾಣುತ್ತೇವೆ.

3.2 ಕಸೂತಿ

ಪರಿಸರಕ್ಕೆ ಸ್ಪಂದಿಸುವುದು ಪ್ರತಿಕ್ರಿಯಿಸುವುದು ಎಲ್ಲ ಜೀವ ರಾಶಿಗಳ ಸಹಜ ಪ್ರವೃತ್ತಿ ಮನುಷ್ಯ ಇದಕ್ಕೆ ಹೊರತಾಗಿಲ್ಲ. ಮನುಷ್ಯನಲ್ಲಿ ಇನ್ನೊಂದು ಶಕ್ತಿ ಇದೆ. ಅದು ನಿರ್ಮಿಸುವ ಶಕ್ತಿ ನಿರ್ಮಾಣ ಮಾಡುವ ಶಕ್ತಿಯಿಂದಲೇ ಮನುಷ್ಯ ಸುಸಂಸ್ಕೃತ ನೆನಸಿಕೊಳ್ಳುತ್ತಾನೆ.

ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ, ಕಲೆ ಇವೆಲ್ಲವೂ ಸಂಸ್ಕೃತಿಯ ಅಂಗವೇ ಸರೀ.

ಮನುಷ್ಯ ಕಂಡ ವಸ್ತುಗಳಿಂದ ಪ್ರೇರಣೆ ಪಡೆಯುತ್ತಾನೆ. ಅಮೂರ್ತ ವಿಚಾರಗಳಿಂದಲೂ ಪ್ರೇರಣೆ ಪಡೆಯುತ್ತಾನೆ.

ಕಣ್ಣಿಗೆ ಕಾಣುವ ಬೃಹ್ಮಾಂಡ ಮೂರ್ತವಾಗಿದೆ. ಮೂರ್ತ ವಸ್ತುಗಳ ರೂಪ, ಆಕ್ರತಿ, ವರ್ಣ, ಗುಣ ಸ್ವಭಾವಗಳನ್ನು ತನ್ನ ಜ್ಞಾನಕ್ಕೆ ನಿಲುಕಿದಂತೆ ಕಲ್ಪಿಸಿ, ಅವುಗಳ ಸ್ವರೂಪ ಹೇಳುವುದು ಮನುಷ್ಯನ ವಿಶೇಷ ಸ್ವಭಾವ.

ಆನಂದವನ್ನು ಅನುಭವಿಸಿ ಅಭಿವ್ಯಕ್ತಿಗೊಳ್ಳಿಸುವುದು ಮನುಷ್ಯನ ಸ್ವಭಾವವಾಗಿರುತ್ತದೆ. ಅಭಿವ್ಯಕ್ತಿಗೊಳಿಸುವ ಗುಣ ವ್ಯಕ್ತಿಗಳ ವಲವಿನಂತೆ ಪ್ರಕಟವಾಗುವದು ಸಾಹಿತಿ ಅಕ್ಷರಗಳಿಂದ, ನರ್ತಕಿ, ನೃತ್ಯದಿಂದ, ಸಂಗೀತಗಾರ ಸ್ವರಗಳಿಂದ, ಚಿತ್ರಕಾರ ಜನಪದ ಕಲಾವಿದ ರೇಖೆ ಬಣ್ಣಗಳ ಹಾಡು ನರ್ತನ ಮಾಧ್ಯಮ ಮುಖಾಂತರ ಹೇಳುತ್ತಾನೆ ಕಲಾ ಸಂವಹನ ಎಷ್ಟು ಗಟ್ಟಿಯಾಗಿರುತ್ತದೊ ಎಷ್ಟೂ ತಿಳಿಯಾಗಿರುತ್ತದೋ, ಎಷ್ಟೂ ಸರಳವಾಗಿರುತ್ತದೋ ಅಂದಾಗ ಮಾತ್ರ ಪ್ರೇಕ್ಷಕರನ್ನು ತಲುಪುತ್ತದೆ. ಇದರಿಂದ ರಸಿಕರಲ್ಲಿ ಆನಂದಾನುಭೂತಿ ಸ್ಫುರಿಸುತ್ತದೆ. ರಸಾನುಭೂತಿ ಪೂರ್ಣತ್ವದಲ್ಲಿ ಮಾತ್ರ ಸಾರ್ಥಕ ಪಡೆಯುತ್ತದೆ ಕಲೆ ಪೂರ್ಣತ್ವ ಹೊಂದಿದ್ದಾಗ ಮಾತ್ರ ಸಾರ್ಥಕತೆ ಬಿಂಬಿಸುತ್ತದೆ.

ಮನುಷ್ಯ ಪ್ರಾಣಿ ಭೂಮಿಯ ಮೇಲೆ ಜನ್ಮ ತಾಳಿ ಬಂದಾಗಿನಿಂದಲೂ ಕಲೆ ಅವನೊಂದಿಗೆ ಭಿನ್ನ ವಿಭಿನ್ನ ರೂಪದಲ್ಲಿ ಕಾಣಿಸಿಕೊಂಡಿರುತ್ತದೆ. ಕಲೆ ಮನುಷ್ಯನ ಅತ್ಯವಶ್ಯಕ ಅಂಗ ಜೀವನದ ಪ್ರತಿಯೊಂದು ಕ್ರಿಯೆಯಲ್ಲಿ ಕಲೆ ಇರುತ್ತದೆ. ಆದುದರಿಂದ ಬೃಹ್ಮಾಂಡವೆಲ್ಲ ನಿಶ್ಚಿತ ತಾಳ ಲಯ ಬಣ್ಣ ಬೆಡಗಿನ ಸಾಂಗತ್ಯದಿಂದ ಬಂದಿತವಾಗಿದೆ.

ಗೂಢಾತಿಗೂಢವಾದಂತಹ ಈ ಬೃಹ್ಮಾಂಡದಲ್ಲಿರುವ ಒಂದು ಚಿಕ್ಕ ಸ್ಥಾನದಲ್ಲಿನ ಮನುಷ್ಯನ ಮಹತ್ವಾಕಾಂಕ್ಷೆಗೆ ಎಲ್ಲೆಯೇ ಇಲ್ಲ. ಅವನ ವಿಶ್ವದ ರಹಸ್ಯಮಯ ಭೇದದ ಹಂಬಲ ಸದ್ಭುತವೇ ಸರಿ, ಆದುದರಿಂದಲೇ ಧರ್ಮ ತತ್ವಜ್ಞಾನ ಇನ್ನೊಂದು ಕಡೆ ವಿಜ್ಞಾನ ತಂತ್ರಜ್ಞಾನ, ಮತ್ತೊಂದು ಕಡೆಗೆ ಕಲೆ ಮತ್ತು ಸಾಹಿತ್ಯ ಹೀಗೆ ಅರಿವಿನ ಪಯಣ ಬಲು ದೂರ ಸಾಗಿದೆ. ನಿರಂತರ ಬದುಕಿನರ್ಥದ ಹುಡುಕಾಟ ನಡೆದಿದೆ.

ಲೀಲಾಮಯ ಪ್ರಕೃತಿಯ ಅಂಗಳದಲ್ಲಿ ಅಸಂಖ್ಯ ವರ್ಣಗಳ ನರ್ತನದಿಂದ ಬದುಕು ಸುಂದರವಾಗುತ್ತದೆ. ಹುಡುಕುತ್ತ ಹುಡುಕುತ್ತ ಅಮರತ್ವವನ್ನು ಪಡೆಯುತ್ತದೆ. ಅಲ್ಲಿ ಚಿರಂಜೀವಿ ಅಸ್ತಿತ್ವದ ಕಲ್ಪನೆ ಸಾಕಾರಗೊಳ್ಳುತ್ತದೆ.

"ಕೆಲ ಪ್ರಕೃತಿಯಲ್ಲಿನ ಒಂದು ಪೂಜಾ ವಿಧಾನ"
"ಕಲೆ ಬೃಹ್ಮಾಂಡದ ನಿರ್ಮಾಪಕನಿಗೆ ಸಲ್ಲಿಸುವ ಕೃತಜ್ಞತೆ"

ಕಲಾ ಆನಂದವನ್ನು ಅನುಭವಿಸಬಲ್ಲ ಮತ್ತು ವ್ಯಕ್ತಿಗಳ ಸಾಮರ್ಥ್ಯಕ್ಕೆ ಅನುಸಾರವಾಗಿ ತೋರಿಸಬಲ್ಲವನು ಮಾನವ ಮಾತ್ರ ಆದುದರಿಂದಲೇ ಅವನ ಹೆಜ್ಜೆ ನಾಗರಿಕತೆ ಮತ್ತು ಸಂಸ್ಕೃತಿಯತ್ತ ನಡೆದಿದೆ. ಮನುಷ್ಯ ಸಂಘರ್ಷ ಹಾಗೂ ಹೋರಾಟದಿಂದ ವಿಕಸನಗೊಳ್ಳುತ್ತ ಹೊಂದಿರುವನು. ಕಷ್ಟ ಕಾರ್ಪಣ್ಯ ನೋವು ಸಾವುಗಳ ಹಿನ್ನೆಲೆಯಲ್ಲಿ ಏನನ್ನೋ ಹುಡುಕಲು ಪಡೆಯಲು ಮುನ್ನಡೆದಿರುವನು.

ಈ ದಿಸೆಯಲ್ಲಿ ಅವನ ಕಲಾಯಾತ್ರೆ ಪಯಣದಲ್ಲಿ ಕಲೆ ಸಂಗೀತ ತತ್ವ ಜ್ಞಾನ ದ್ವೀಪಗಳನ್ನು ಕಂಡು ಕೊಂಡಿರುವನು. ಅವುಗಳಿಂದ ಮನುಷ್ಯ ತನ್ನ ಜೀವನವನ್ನು ಸರಳಗೊಳಿಸುವಲ್ಲಿ ಯಶಸ್ವಿಯಾಗಿದ್ದಾನೆ. ಕಲೆ, ದೇಶ, ಕಾಲ, ಜನ ಸಮುದಾಯದ ಸಂಪ್ರದಾಯದ ಮತ್ತು ಸಂಪ್ರದಾಯ ಸಂದೇಶಗಳನ್ನು ಬಿತ್ತರಿಸುವ ಕೆಲಸ ಮಾಡುತ್ತದೆ.

ಜನಪದ ಕಲೆ ಸಾಂಪ್ರದಾಯಿಕ ಕಲೆ, ತನ್ನದೇ ವಿಶಿಷ್ಟವಾದ ಗತ್ತು ಗಮ್ಮತ್ತಿನಿಂದ ಜನಸಾಮಾನ್ಯರ ಮನಸ್ಸನ್ನು ಸೆಳೆಯುವ ಕಲೆ. ವಂಶ ಪಾರಂಪರ್ಯ ಹಾಗೂ ಪರಿಸರದ ಪ್ರಭಾವದಿಂದಲೇ ಬೆಳೆದುದು. ಅಪ್ಪ, ಅವ್ವ, ಅತ್ತಿಗೆ, ದೊಡ್ಡವ್ವ, ಚಿಕ್ಕಪ್ಪ, ಗೆಳತಿಯರಿಂದ ಒಬ್ಬರಿಗೊಬ್ಬರು ಕಲಿಯುತ್ತ ಕಲಿಸುತ್ತ ಉಳಿಸಿಕೊಂಡು ಬಂದ ಕಲೆಯೇ ಜನಪದ ಕಲೆ, ಹಾಗೂ ಸಹಜ ಸ್ವಾಭಾವಿಕ ಸ್ವ ಆಸಕ್ತಿಯಿಂದ ಕಲಿತ ಕಲೆ.

ಜನಪದ ಕಲೆಗಳನ್ನು ಆರು ವಿಭಾಗಗಳಲ್ಲಿ ವಿಭಜಿಸಬಹುದು.

1.. ವಸ್ತು ರೂಪದ ಕಲೆ

2. ವರ್ಣ ರೂಪದ ಕಲೆ

3. ಪ್ರದರ್ಶನ ರೂಪದ ಕಲೆ

4. ನೃತ್ಯ ರೂಪದ ಕಲೆ

5. ಅಭಿನಯ ರೂಪದ ಕಲೆ

6. ಗಾನರೂಪದ ಕಲೆ

ಇವುಗಳಲ್ಲಿ ಒಂದೊಂದು ಬೃಹತ್ ತಳಹದಿಯ ಮೇಲೆ ವೈವಿಧ್ಯಮಯ ಕಲಾಪ್ರಕಾರಗಳನ್ನು ಪ್ರದರ್ಶಿಸುತ್ತವೆ. ಜನಪದರ ಎಲ್ಲ ಕಲೆಗಳೂ ವೈಶಿಷ್ಟತೆಯಿಂದ ಕೂಡಿವೆ. ಜನಸಾಮಾನ್ಯನ ಹೃದಯವನ್ನು ಬಹುಬೇಗ ತಟ್ಟುತ್ತವೆ. ಜನಪದರ ಜೀವನವೇ ಕಲೆ. ಗುಡಿಗುಂಡಾರ ವಾಸಿಸುವ ಮನೆ ಬಳಸುವ ವಸ್ತುಗಳು, ಆಟದ ಸಾಧನಗಳು ಕೃಷಿ ಉಪಕರಣಗಳು ಎಲ್ಲದರಲ್ಲಿಯೂ ಕಲೆಯನ್ನು ನಾವು ಕಾಣುತ್ತೇವೆ.

ಮನೆಯಬಾಗಿಲು, ಗೋಡೆ, ಕಟಂಜನ, ಖುರ್ಚಿ, ಟೇಬಲ್ಲು, ದೀಪಧಾರೆ, ತೇರು, ಗೋಪುರ, ದೇವರಮೂರ್ತಿ, ಕಳಸ, ಕರಂಡಿಕೆ ಹಸೆಯುಮಣಿ ಕತ್ತಿ, ಕಠಾರಿ ಸರಪಳಿ ಕಡಗ ಮೂಗುತಿ ಓಲೆ, ಸರಗಳು ಕಾಲಂದುಗೆ ಪಿಲ್ಲೆ, ಗುಬ್ಬಿ ಮತ್ತು ತೊಟ್ಟಿಲು, ಉಳ್ಳುಳಿಕೆ, ಒತ್ತುಬಂಡಿ, ಮಂಚ, ಗಡಿಗೆ ಕಡಗೋಲು, ಕೊಡ, ಮರ ಒನಕೆ ಮೇಣದ ಬುಟ್ಟಿ ಹೆಸರಿಸಲಾಗದಷ್ಟು ಜೀವನದ ಪ್ರತಿ ವಸ್ತುವು ಕಲಾತ್ಮಕ.

ತೊಡುವ ಬಟ್ಟೆಯೂ ಕಲಾಕುಸುರಿನಿಂದ ಕೂಡಿರುವುದೇ ಜನಪದರ ವೈಶಿಷ್ಟ ಇದು ವರ್ಣರೂಪಕಲೆ. ಉತ್ತರ ಕರ್ನಾಟಕದಲ್ಲಿ ಪ್ರಚಲಿತವಾಗಿರುವ ಕಸು‌ೂತಿಕಲೆ ಸಾಂಪ್ರದಾಯಕ ಕಲೆ, ಇದು ಹೆತ್ತಾಯಿ ಬಂಧು ಬಳಗದಿಂದ ಬಳವಳಿಯಾಗಿ ಬಂದ ಕಲೆ.

ಜನಪದ ಕಲೆಗಳಿಗೆ ತಾಯಿಬೇರು ನಿಸರ್ಗ ಜನಪದರ ಯಾವುದೇ ಕಲಾಪ್ರಕಾರ ಪ್ರಕೃತಿಗೆ ತೀರ ಹತ್ತಿರ ಜನಪದರ ಪ್ರತಿಯೊಂದು ಕಲೆಯೂ ನಿಸರ್ಗದೊಂದಿಗೆ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ಅದಕ್ಕಂತಲೇ ಪ್ರಾಣಿಪಕ್ಷಿ, ಗಿಡಬಳ್ಳಿ, ಚುಕ್ಕಿಚಂದ್ರಾಮ, ಮುಗಿಲುಮೋಡ, ಹೊಳೆಹಳ್ಳ, ಹೂಹಣ್ಣು ಮೊಗ್ಗುಕಾಯಿ, ಮದುವೆಜಾತೆ, ತೇರುಕಳಸ, ಗುಡಿಗೋಪುರ, ಹಬ್ಬ, ಸುಗ್ಗಿ ಕಾಳುತೆನೆ ಹೀಗೆ ನಿಸರ್ಗದೊಂದಿಗೆ ಹೊಂದಿಕೊಂಡು ಚಿತ್ತಾರಗೊಳ್ಳುವುದೇ ಕಲೆ. ಗರತಿಯರು ಸೃಷ್ಟಿಯಲ್ಲಿಯ ಕಂಡು ಆನಂದಿಸಿ ಪ್ರತಿ ಕ್ಷಣವನ್ನು ಕಸೂತಿ ಕಲೆಯಲ್ಲಿ ಹಿಡಿದಿಟ್ಟಿರುವರು.

ಕಸೂತಿ ಕಲೆ ವೈವಿಧ್ಯಮಯ ಬಣ್ಣ ರೇಖೆಗಳಿಂದ ಹೆಣೆಯಲ್ಪಟ್ಟ ಕಲೆ. ಇಲ್ಲಿಯ ಬಣ್ಣಗಳ ಮೆರುಗೇ ಮಹತ್ವದು, ಗಾಢಬಣ್ಣದ ಸೀರೆಯ ಮೇಲೆ ರೇಶಿಮೆ ಎಳೆಗಳಿಂದ ನೂಲಿನೆಳೆ ಎಣಿಸಿ ಚಿತ್ತಾರ ಬಿಡಿಸುವ ಕಲೆ ಕಸೂತಿ ಸೂತ ಎಂದರೆ ದಾರದೆಳೆ ಎಂದು ಅರ್ಥವಾಗುತ್ತದೆ. ದಾರದೆಳೆ ಅಥವಾ ರೇಶಿಮೆ ಎಳೆಯಿಂದ ನಿಯಮ ಬದ್ಧವಾಗಿ ಆಕೃತಿ ರೂಪಗಳನ್ನು ನೆನಪಿನಲ್ಲಿಟ್ಟುಕೊಂಡು ರೇಖೆ ಬಣ್ಣದಿಂದ ಪ್ರಪಂಚವನ್ನು ಸೃಷ್ಟಿಸುವುದೇ ಕಸೂತಿ.

ವಿಶೇಷವಾಗಿ ಸಾಂಪ್ರದಾಯಿಕ ಸೀರೆಗಳಲ್ಲಿ ಕಸೂತಿಯನ್ನು ಹಾಕುವರು. ಉತ್ತರಕರ್ನಾಟಕದಲ್ಲಿ ಪ್ರಚಲಿತವಿರುವ ಕಸೂತಿಕಲೆ ಇಳಕಲ್ಲ ಸೀರೆಗಳಲ್ಲಿ ಹೆಚ್ಚಾಗಿ ಕಂಡುಬರುವದು, ಮೊಳಕಾಲ್ಮೂರು, ಮೈಸೂರು ರೇಶಿಮೆ ಸೀರೆಗಳಲ್ಲಿ ಕಸೂತಿ ತೆಗೆದರೂ ಕೂಡ ಕಸೂತಿ ಹೆಚ್ಚು ಸೊಬಗನ್ನು ಬೀರುವುದೇ ಇಳಕಲ್ಲ ಸೀರೆಗಳಲ್ಲಿ. ಕರಿಚಂದ್ರಕಾಳಿ ಸೀರೆಯಲ್ಲಿ ಕಸೂತಿ ಹೆಚ್ಚು ಸೌಂದರ್ಯತೆಯನ್ನು ಬೀರುವದು.

ಕಸೂತಿ ಕಲೆಯಲ್ಲಿ ನಾಲ್ಕು ಪ್ರಕಾರಗಳು

1. ಗಾವಂತಿ ಕಸೂತಿ
2. ಮುರಗಿ ಕಸೂತಿ
3. ಮೆಂತೆ ಕಸೂತಿ
4. ನೇಯಗಿ ಕಸೂತಿ

ಗಾವಂತಿ ಕಸೂತಿ, ಮುರಗಿ ಕಸೂತಿ ಎರಡೂ ಕೂಡಿಯೇ ಡಿಸೈನ್ ಸಿದ್ಧವಾಗುತ್ತವೆ. ಇವುಗಳಿಗೆ ಜಮ್ಯಾಟ್ರಿಕಲ್ ಡಿಸೈನ್ ಎಂದು ಕರೆಯಬಹುದು. ಸರಳ ರೇಖೆ ಇವು ತ್ರಿಕೋನ ಚೌಕೋನ ಅಷ್ಟಕೋನಗಳಿಂದ ಕೂಡಿರುತ್ತವೆ. ಈ ಎರಡೂ ಕಸೂತಿ ಹಿಂದೆ ಮುಂದೆ ಒಂದೇ ತೆರನಾಗಿ ಕಾಣಿಸುತ್ತವೆ. ಗಾವಂತಿ ಮುರಗಿ ಕಸೂತಿ ಶುರು ಮಾಡಿದ ರಂಧ್ರ ಅಥವಾ ತೂತಿನಲ್ಲಿಯೇ ಕೊನೆಗೊಳ್ಳಿಸಬೇಕು.

ಮೆಂತೆ ಕಸೂತಿ ಮೆಂತೆಕಾಳಿನಂತೆ ಕಾಣುತ್ತಿದ್ದು ಕ್ರಾಸ್ ಸ್ಟಿಚ್‌ನ್ನು ಹೋಲೆಯುವುದು.

ಮೊದಮೊದಲು ಕಸೂತಿಯನ್ನು ನೂಲಿನ ಸೀರೆಗಳಲ್ಲಿ ರೇಶಿಮೆ ಸೀರೆಗಳಲ್ಲಿ ಹಾಕುತ್ತಿದ್ದರು. ಈಗ ಪಾಲಿಕಾಟನ್, ಸಿಂಥಟಿಕ್ ಸೀರೆಗಳಲ್ಲಿಯೂ ಹಾಕುವರು. ಏನೇ ಆದರೂ ನಮ್ಮ ದೇಶಿ ಸೀರೆಗಳಲ್ಲಿಯೇ ಕಸೂತಿ ಕಲೆ ಅಂದ ನೋಡಬೇಕು. ನಮ್ಮ ಪಾರಂಪರಿಕ ಕಲೆ ಕಸೂತಿ ಉಳಿಯಬೇಕು ಬೆಳೆಯಬೇಕು. ಆ ದಿಸೆಯಲ್ಲಿ ಬೀದರ ತಾಲೂಕಿನ ಹಲವಾರು ಕಸೂತಿ ಕಲಾವಿದೆಯರು ಕಲೆಯ ಬಗೆಗೆ ಆಸಕ್ತಿ ಉಳ್ಳವರಾಗಿದ್ದಾರೆ.

ಶೈಲಜಾ ವಾಗರಾಳಿ ಗಣೇಶಪೂರ ಬೀದರ ತಾಲೂಕ. ಅನ್ನಪೂರ್ಣ ತಂದೆ ಮಲ್ಲಿಕಾರ್ಜುನ ಬೀದರ ತಾಲೂಕಿನ ಬಗದಾಲದವರು ಇವರದು ಸಂಪ್ರದಾಯಸ್ಥ ಮನೆತನ. ಪತಿ–ಪತ್ನಿಯರಿಬ್ಬರೂ ಕಲಾವಿದರು. ತಂದೆ ಮಲ್ಲಿಕಾರ್ಜುನ ಸಹಕಾರಿ ಇಲಾಖೆಯಲ್ಲಿ ಸಹಾಯಕ ನೋಂದಣಿ ಅಧಿಕಾರಿಗಳು ಇವರಿಗೆ ಐದು ಜನ ಮಕ್ಕಳು. ಶೈಲಜಾ, ಶ್ರೀದೇವಿ. ಜಯಶ್ರೀ, ಶಿವಾನಂದ, ಭೂಪಾಲ. ಮಲ್ಲಿಕಾರ್ಜುನ ಅವರು ಮಕ್ಕಳೈವರಿಗೂ ಶಿಕ್ಷಣ ನೀಡಿದವರು.

ಶೈಲಾ ಪ್ರಾಥಮಿಕ ಅಭ್ಯಾಸ ಕೆ.ಎಲ್.ಇ. ಸಂಸ್ಥೆಯ ಜಿ.ಎ. ಪ್ರಾಥಮಿಕ ಶಾಲೆಯಲ್ಲಿ ಹಾಗೂ ಇಲ್ಲಯೇ ಮಾಧ್ಯಮಿಕ ಅಭ್ಯಾಸ ಪೂರೈಸಿದರು.

ಕನ್ನಡ ನಾಲ್ಕನೇಯ ಇಯತ್ತೆಯಲ್ಲಿರುವಾಗಲೇ ಇವರಿಗೆ ಹೊಲಿಗೆ, ಹೆಣಿಕೆ ಹವ್ಯಾಸ ಅವ್ವ ಅನ್ನಪೂರ್ಣ ಮಣಿತಾಟು. ಸೂಜನಹೆಣಿಕೆ ಅಲ್ಪ ಸ್ವಲ್ಪ ಕಸೂತಿ ಹಾಕುತ್ತಿದ್ದರು. ಅಪ್ಪ ಮಲ್ಲಿಕಾರ್ಜುನರೂ ಚಿತ್ರ ಕಲಾವಿದರು. ಹೀಗಾಗಿ ಶೈಲಾಳಲ್ಲಿಯೂ ಹೊಲಿಗೆ ಹೆಣಿಕೆ ಹವ್ಯಾಸ ಬೆಳೆಯಹತ್ತಿತ್ತು. ಶೈಲಾಳಿಗೆ ಕಸೂತಿ ಕಲಾವಿದರು. ಕಸೂತಿ ಬಹಳ ಚೆನ್ನಾಗಿ ಹಾಕುತ್ತಿದ್ದರು. ಅವರೂ ಬಗದಾಲ್‌ದಲ್ಲಿಯೇ ಇರುತ್ತಿದ್ದುದರಿಂದ ಕಲಾಪರಿಸರವೇ ನಿರ್ಮಾಣವಾಗಿತ್ತು. ಇಂತಹ ಪರಿಸರದಲ್ಲಿ ಬೆಳೆದ ಶೈಲಾ ಮೊದ ಮೊದಲು ಹೊಲಿಗೆ ಹೆಣಿಕೆ ಚಿತ್ರಬಿಡಿಸುವುದನ್ನು ಪ್ರಾರಂಭಿಸಿ ಕಸೂತಿ ಕಲೆಯನ್ನು ರೂಢಿಸಿಕೊಂಡರು. ತೈಲವರ್ಣ, ಜನವರ್ಣ ಚಿತ್ರಗಳನ್ನು ಬಿಡಿಸುವರು. ಕಸೂತಿ ಕಲೆಯನ್ನು ಪ್ರಾರಂಭಿಸಿದ ಇವರು ಹೊಲಿಗೆ ಸೂಜನ ಹೆಣಿಕೆ ಸಾವಕಾಶ ಬಿಟ್ಟು ಬಿಟ್ಟರು. ಶಿಕ್ಷಣದ ಜೊತೆಗೆ ಕಸೂತಿ ಹಾಕುವುದು ಇವರ ಹವ್ಯಾಸ. ಇವರು ಬಿ.ಎಸ್.ಸಿ. ಎರಡನೇಯ ವರುಷದಲ್ಲಿರುವಾಗ ತಾಯಿ ಅನ್ನಪೂರ್ಣ ತೀರಿಕೊಂಡರು. ಮನೆ ಜವಾಬ್ದಾರಿ ಕಾಲೇಜ ಶಿಕ್ಷಣ ಜೊತೆಗೆ ಇವರ ಹವ್ಯಾಸ ಕಸೂತಿ ಮುಂದುವರೆಸಿಕೊಂಡು ಹೊರಟರು.

ಬೀದರ ತಾಲೂಕಿನ ಮನ್ನಳ್ಳಿ ಕಾಲೇಜದಿಂದ ಬಿ.ಎಸ್.ಸಿ. ಪದವಿ ಪಡೆದ ಇವರ ವಿವಾಹ ಬೀದರ ತಾಲೂಕಿನ ಅತಿವಾಳ ಶರದ ವಾಗರಾಳಿಯವರೊಂದಿಗೆ ಆಯಿತು. ಶರದ ಇಂಜನೀಯರರು, ಸ್ವಂತ ಉದ್ಯೋಗ ಮಾಡಿಕೊಂಡಿರುವದು. ಗಂಡನ ಮನೆಗೆ ಬಂದ ನಂತರವೂ ಇವರ ಕಲೆಗೆ ಯಾವ ಅಡ್ಡಿ ಆತಂಕ ಬರದಿದ್ದರೂ ಮನೆಯಲ್ಲಿ ಏನು ಇದರಾಗೇನ ಸಿಗತೈತಿ ಯಾಕ ಮಾಡತಿ" ಅಂತ ಅನ್ನುವವರು.

"ಕಸೂತಿಮಾಡಿ ಕಣ್ಣ ಕಳಕೋತಿ ಅನ್ನುತ್ತಿದ್ದರು"

ಯಾರು ಏನಂದರು ಶೈಲಾಳದು ಬಿಡದ ಛಲ ಅದರಲ್ಲಿ ಅವರು ಯಶಸ್ವಿಯಾಗಿದ್ದಾರೆ. ಸ್ವರ್ಣ ಜಯಂತಿ ರೋಜಗಾರ ಯೋಜನೆಯಡಿ ನಗರಸಭೆ ಆಶ್ರಯದಲ್ಲಿ 100 ಜನ ಹೆಣ್ಣುಮಕ್ಕಳಿಗೆ ಕಸೂತಿ ತರಬೇತಿ ನೀಡಿರುವರು.

ಅವಿಷ್ಕಾರ ಉದ್ಯೋಜಕ ಮಹಿಳಾಮಂಡಳ ಟಿಳಕವಾಡಿಯಲ್ಲಿ 100 ಜನರಿಗೆ ತರಬೇತಿ ನೀಡಿರುವರು.

ಬೀದರನ ಮಿಲಿಟರಿ ಸೇವೆಯಲ್ಲಿರುವ ಸೈನಿಕರ ಪತ್ನಿಯರಿಗೆ ಆರು ವರುಷ ಕಸೂತಿ ತರಬೇತಿ ಸುಮಾರು 1000 ಜನ ಹೆಣ್ಣುಮಕ್ಕಳಿಗೆ ನೀಡಿರುವರು. ಸುಮಾರು ಹದಿನೈದು ನೂರು ಹೆಣ್ಣುಮಕ್ಕಳಿಗೆ ಕಸೂತಿ ತರಬೇತಿ ನೀಡಿದ ಹೆಗ್ಗಳಿಕೆ ಶೈಲಾಳದು.

ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮಂಡಳ ಬೀದರ ಉದ್ಯಮಶೀಲ ಮಹಿಳೆಯರ ಕರ್ನಾಟಕ ಸಂಘ ಬೀದರ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಬೀದರ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಬೀದರ ಅಖಿಲ ಶರಣ ಸಾಹಿತ್ಯ ಪರಿಷತ್ತು ಬೀದರದಿಂದ ಹಲವಾರು ಪ್ರದರ್ಶನಗಳನ್ನು ನಡೆಸಿರುವರು.

ಬೀದರದಲ್ಲಿ ಜರುಗಿದ ಅಖಿಲಭಾರತ ಶರಣ ಸಾಹಿತ್ಯ ಪರಿಷತ್ ಇವರ ಕಲೆ ಮೆಚ್ಚಿ ಇವರನ್ನು ಸನ್ಮಾನಿಸಿ ಗೌರವಿಸಿದೆ. ನಾನವರನ್ನು ಸಂದರ್ಶಿಸಿ,

"ಬಿ.ಎಸ್.ಸಿ. ಆದ ತಾವು ನೌಕರಿಗೆ ಸೇರಿಕೊಳ್ಳಲಿಲ್ಲ?

"ನನ್ನ ಮನೆಯಲ್ಲಿ ನೌಕರಿಗೆ ಹೋಗಲು ಒಪ್ಪಲಿಲ್ಲ ಅದು ಒಳ್ಳೆಯದೇ ಆಯಿತು. ನಾನೊಂದು ಸ್ವಂತ ಉದ್ಯೋಗ ಕಂಡುಕೊಂಡೆ ನಾನು ಸ್ವತಂತ್ರಳು ಎಷ್ಟೋ ಜನ ನೌಕರಿ ಮಾಡುತ್ತಾರೆ. ನಾನು ಸ್ವಂತ ಉದ್ಯೋಗ ಮಾಡುತ್ತಿರುವೆ".

ಕಸೂತಿ ಕಲೆಗಾಗಿ ತಾವು ಪಟ್ಟ ಕಷ್ಟಗಳು ಯಾವವು?

ಕಲಾಕಾರರಿಗೆ ಕಷ್ಟಗಳು ಬರುವುದು ಸ್ವಭಾವಿಕ. ನಾನು ದುಡ್ಡು ಹಾಗೂ ಪ್ರತಿಷ್ಠೆ ಆರೋಗ್ಯದ ಬಗೆಗೆ ಎಂದೂ ಬಡಿದಾಡಿಲ್ಲ. ಆದುದರಿಂದ ಕಷ್ಟಗಳೇನು ಬಂದಿಲ್ಲ. ತವರುಮನೆ ಗಂಡನ ಮನೆಯಲ್ಲಿ ಪ್ರೋತ್ಸಾಹ ದೊರೆತಿದೆ. ಅಷ್ಟಕ್ಕು ಮನೆಗೆಲಸ ಮಾಡಿದ ಮೇಲೆ ಕಸೂತಿ ಕೆಲಸ.

ಕಸೂತಿ ಕಲೆಯ ಬಗೆಗೆ ನಿಮಗೇನನ್ನಿಸುತ್ತದೆ?

ನನಗೆ ಖುಷಿ ಆಗುತ್ತದೆ. ತೃಪ್ತಿ ದೊರೆತಿದೆ. ನನ್ನ ಕಲಾಪ್ರೇಮ ಆಸಕ್ತಿ ಎಂದೂ ಕುಂದಲಿಲ್ಲ. ನಾನದರಲ್ಲಿ ಯಶಸ್ವಿಯಾಗಿದ್ದೇನೆಂದು ಕೊಂಡಿದ್ದೇನೆ. ಸತತ ಹೋರಾಟದಿಂದ 1500 ಹೆಣ್ಣುಮಕ್ಕಳಿಗೆ

ಕಸೂತಿ ಕಲಿಸಿದ ತೃಪ್ತಿ ನನ್ನದು. ಪರಂಪರಾಗತ ಕಸೂತಿ ಕಲೆಗೆ ಇಂದು ಬೇಡಿಕೆ ಹೆಚ್ಚಿದೆ. ತಿಂಗಳಿಗೆ ನಲವತ್ತು ಸೀರೆಗಳು ಬರುತ್ತವೆ. ಮೂವತ್ತು ಜನರಿಗೆ ನಾನು ಉದ್ಯೋಗ ಕಲ್ಪಸಿ ಕೊಟ್ಟಿರುವೆ. ನನ್ನ ವಯೋಮಾನವ 10ನೇ ವರುಷದಲ್ಲಿ ಕಸೂತಿ ಕಲೆ ಪ್ರಾರಂಭಿಸಿದ ನಾನು 45 ವರುಷ ಕಲಾಸೇವೆ ಮಾಡಿದ ಹೆಗ್ಗಳಿಕೆ ನನ್ನದು ಇದಕ್ಕೆ ತೃಪ್ತಿ ಇದೆ. ನನ್ನ ಕೈಯಲ್ಲಿ ಕಲಿತ ಹೆಣ್ಣುಮಕ್ಕಳು ಕಸೂತಿ ಕಲೆ ಮುಂದುವರೆಸಿಕೊಂಡು ಬಂದಿರುವರು ಸ್ವಾವಲಂಬಿಗಳಾಗಿರುವರು ಎಂದರು.

ಮುಂದಿನ ಪೀಳಿಗೆಗೆ ಶೈಲ ವಾಗರಾಳಿ ಕೊಟ್ಟ ಕೊಡುಗೆ ದೊಡ್ಡದು. ಅವರ ಕಲಾಪ್ರೇಮ ಮೆಚ್ಚುವಂತಹದು.

ಕಸೂತಿ ಕಲೆಗಾಗಿ ತಮ್ಮನ್ನೇ ಅರ್ಪಿಸಿಕೊಂಡಿರುವರು. ಅನೇಕ ಗ್ರಾಮೀಣ ಮಹಿಳೆಯರಿಗೆ ಉದ್ಯೋಗ ಕಲ್ಪಿಸಿಕೊಟ್ಟಿರುವರು.

ಸರೋಜನಿ ರೋಡ ಬಸಣ್ಣವರ:– ಪರಂಪರಾಗತ ದೇಶಿ ಕಲೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಕಲಾವಿದರಲ್ಲಿ ಸರೋಜನಿ ಶಿವಾನಂದ ರೋಡಬಸಣ್ಣವರು ಒಬ್ಬರು. ಬೀದರನ ನಿವಾಸಿಯಾದ ಇವರು ಹುಟ್ಟಿದ್ದು ದಿನಾಂಕ: 1/–08–1965 ರಲ್ಲಿ ಅವ್ವ ಶಾಂತವ್ವ ಅಪ್ಪ ಮಹಾದೇವಪ್ಪ ಅಂಗಡಿ, ಸೊಪ್ಪಡ್ಲ ಗ್ರಾಮೀಣ ಮನೆತನದಲ್ಲಿ ಹುಟ್ಟಿದ ಸರೋಜನಿ ಹಳ್ಳಿಯ ವಾತಾವರಣದಲ್ಲಿ ಗಜಗ ಕುಂಟಲಪಿ, ಮುಟ್ಟಾಟ, ಖೋಖೋ, ಲಂಗಡಿ, ಗುಳ್ಳವ್ವ, ನಾಗರಪಂಚಮಿ ಆಟ ಆಡುತ್ತ ಹಬ್ಬಗಳನ್ನು ಆಚರಿಸುತ್ತ ಹಾಡುತ್ತ ಆಡುತ್ತ ಬೆಳೆದವರು. ಪ್ರಾಥಮಿಕ ಅಭ್ಯಾಸ ಮನ್ನಳ್ಳಿಯಲ್ಲಿ ಕಲಿತರು ಮುಂದೆ ಎಸ್.ಎಸ್.ಎಲ್.ಸಿ. ವರೆಗೆ ಅಭ್ಯಾಸ ಮಾಡಿದ ಇವರು ಎಳೆತನದಲ್ಲಿಯೇ ಹೊಲಿಗೆ ಹೆಣಿಕೆ ಕಲೆಯನ್ನು ರೂಢಿಸಿಕೊಂಡವರು. ಹೆಣಿಕೆ ಚೀಲಗಳು ಟೇಬಲ್ ಕ್ಲಾಥ್ ದುಪಟಿ ಹೆಣೆಯುವ ಕಲೆಯನ್ನು ರೂಢಿಸಿಕೊಂಡವರು. 10ನೆಯ ತರಗತಿ ಮುಗಿದ ಎರಡು ವರುಷಗಳ ನಂತರ ಬೈಲಹೊಂಗಲದ ಶಿವಾನಂದ ರೋಡ ಬಸಣ್ಣವರೊಂದಿಗೆ ಇವರ ವಿವಾಹವಾಯಿತು.

ನಗರ ಪಾಲಿಕೆ ಬೀದರನವರು ಕಸೂತಿಯ ಮೂರು ತಿಂಗಳ ಶಿಬಿರವನ್ನು ಏರ್ಪಡಿಸಿದ್ದರು. ಹೊಲಿಗೆ, ಹೆಣಿಕೆಯಲ್ಲಿ ಆಸಕ್ತಿಯುಳ್ಳ ಸರೋಜನಿ ಕಸೂತಿ ತರಬೇತಿಗೆ ಹಾಜರಾದರು. ಆಗ ಇನ್ನು ನವತಾರುಣ್ಯ ಕಲಿಯಬೇಕೆಂಬ ಹುಮ್ಮಸ್ಸು ಹೀಗಾಗಿ ಕಸೂತಿ ಕಲೆಯು ಸಲೀಸಾಗಿ ಇವರಿಗೆ ಒಲಿಯಿತು. ಅಂದಿನಿಂದ ಕಸೂತಿ ತೆಗೆಯುತ್ತ ಇಪ್ಪತ್ತೈದು (25) ವರುಷಗಳಿಂದ ಕಸೂತಿ ಬಿಡಿಸುತ್ತಿರುವರು. ದಿನದ 8 ತಾಸುಗಳನ್ನು ಕಸೂತಿ ಬಿಡಿಸುವುದರಲ್ಲಿ ಕಳೆಯುವರು.

ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ, ಸ್ವರ್ಣ ಜಯಂತಿ ರೋಜಗಾರ ಯೋಜನೆಯಡಿ ಹಲವಾರು ಪ್ರದರ್ಶನ ನೀಡಿರುವರು.. ಅಪ್ಪಟ ಗ್ರಾಮೀಣ ಭಾಷೆ, ಗ್ರಾಮೀಣ ನಡೆಯ ಸರೋಜನಿ "ಗವಂತಿ, ಮುರಗಿ, ಮೆಂತೆ ನೇಯಗಿ ನಾಲ್ಕು ಕಸೂತಿ ಚಂದ" ಎನ್ನುವರು ಯಾವುದಕ್ಕೂ ತಾರತಮ್ಯ ಮಾಡಿದವರಲ್ಲ ಕಸೂತಿಯಿಂದ "ಹೊತ್ತು ಹೇಗೆ ಹೋಗುತ್ತದೆ

ಗೊತ್ತಾಗುವುದಿಲ್ಲ. ಎನ್ನುವರಲ್ಲದೇ" ತಮ್ಮದು ಸ್ವಾವಲಂಬಿ ಬದುಕು. ಯಾರಿಗೂ ಕೈ ಒಡ್ಡುವ ಹಾಗಿಲ್ಲ ನಮ್ಮ ಕಾಲ ಮೇಲೆ ನಾವು ನಿಂತಿದ್ದೇವೆ" ಎನ್ನುವರು.

ರೂಪಾ ಬೋಳಣ್ಣವರ:– ರೂಪ ಬೋಳಣ್ಣವರ ಬೀದರ ತಾಲೂಕ ಜನವಾಡದವರು. ತಾಯಿ ಅನ್ನಪೂರ್ಣ ತಂದೆ ಚನಗೌಡ ನಾಗನಗೌಡ, ಊರ ಗೌಡರು, ಇವರು ದಿನಾಂಕ 31–08–1976 ರಂದು ಬೀದರ, ತಾಲೂಕ: ಜನವಾಡದಲ್ಲಿ ಜನಿಸಿದರು. ಒಟ್ಟು ಮೂರು ಜನ ಅಕ್ಕ ತಂಗಿಯರು. ಚೊಚ್ಚಲ ರೂಪಾ. ಮರಚಲು ಕಮಲವ್ವ, ಮೂರನೇಯವಳು ಮಹಾದೇವಿ. ರೂಪಾ ಗ್ರಾಮೀಣ ಪರಿಸರದಲ್ಲಿ ಕುಂಟಲಪಿ, ಖೋಖೋ, ಉಪ್ಪುಪ್ಪ ಜನಪದ ಅಟಗಳನ್ನು ಆಡುತ್ತ ಗುಳ್ಳವ್ವನ್ನಾಡು ಆಡುತ್ತ ಜೋಕಾಲಿ ಜೀಕಿ ಹಾಡುತ್ತ ಬೆಳೆದವಳು.

ಚಿಕ್ಕವಳಿರುವಾಗಲೇ ಸೂಜಿ ಬಣ್ಣದದಾರದ ನಂಟು ಹೊಲಿಗೆ ಹೆಣಿಕೆ ಮಾಡುತ್ತಿದ್ದಳು. ತಂಗಿಯರಾದ ಕಮಲವ್ವ ಮಹಾದೇವಿಯರು ಹೊಲಿಗೆ ಹೊಲಿಯುತ್ತಿದ್ದರು. ಚಿಕ್ಕವಳಿರುವಾಗಲೇ ರೂಪಾ ತನ್ನ ಚಿಗವ್ವ (ತಾಯಿಯ ತಂಗಿ) ಕಾಶವ್ವ ಉಳ್ಳೇಗಡ್ಡಿ ಅವರಿಂದ ಪ್ರಭಾವಿತಳಾದಳು. ಕಸೂತಿ ಕಲಿತದ್ದೇ ಇವರಿಂದ ಕೈಚೀಲ ಉಲನ್ ಹೆಣಿಕೆ ಪ್ಲ್ಯಾಸ್ಟಿಕ್ ಬುಟ್ಟಿ, ಮನೆ ಬಾಗಿಲ ತೋರಣ ಟೇಬಲ್ ವಸ್ತ್ರ ಹೀಗೆ ವಿವಿಧ ಹೆಣಿಕೆಯನ್ನು ಹೆಣೆಯುತ್ತಿದ್ದ ರೂಪಾಳಿಗೆ ಕಾಶವ್ವ ಕಸೂತಿ ಕಲಿಯಲು ಪ್ರೇರಣೆ ನೀಡಿದವರು ಅಷ್ಟಿಷ್ಟು ಹೊಲಿಗೆ ಮಾಡುತ್ತ ಗ್ರಾಮೀಣ ಪರಿಸರದಲ್ಲಿ ಬೆಳೆದ ರೂಪಾ ಅಜ್ಜ ಅಮ್ಮರ ಮನೆ ಬೀದರ ಶಿಕ್ಷಣ ಮುಂದುವರೆಸಲು ಆಸ್ಪದ ನೀಡಲಿಲ್ಲ. ಬೆಳೆದ ಹುಡುಗಿಯನ್ನು ಬೀದರನ ಬೋಳಣ್ಣವರ ಮನೆತನದ ಮಹಾಂತೇಶರಿಗೆ ಕೊಟ್ಟು ಮದುವೆ ಮಾಡಿದರು.

ಬೋಳಣ್ಣವರದು ತುಂಬಿದ ಅವಿಭಕ್ತ ಕುಟುಂಬ ಮನೆಯಲ್ಲಿ ಅತ್ತೆ, ಮಾವ, ಭಾವಂದಿರು, ನೆಗೆಯಣ್ಣಿಯರು ನಾದುನಿ, ಮೇಲಾಗಿ ಕೃಷಿಕ ಮನೆತನ. ಎಲ್ಲರಿಗೂ ಹೊಂದಿಕೊಂಡು ರೂಪಾ ನಡೆದಳು.

ಊರಲ್ಲಿ ನಗರಸಭೆಯವರು ಕಸೂತಿ ತರಬೇತಿಯನ್ನು ಏರ್ಪಡಿಸಿದ್ದರು. ಇದರಿಂದ ಪ್ರೇರಿತಳಾದ ರೂಪಾ ಮೂರು ತಿಂಗಳ ತರಬೇತಿ ಪಡೆದಳು. ಎಳೆತನದಿಂದ ಹೆಣಿಕೆ, ಹೊಲಿಗೆ ಕಲೆಯಲ್ಲಿ ಒಲವಿದ್ದ ರೂಪಾಳಿಗೆ ಕಸೂತಿ ಕಲೆ ಬೇಗನೆ ಒಲಿಯಿತು. ಕಸೂತಿಯಲ್ಲಿ ರೂಪಾ ಪರಿಣಿತಳಾದಳು. ಮುಂದೆ ರೂಪಾಳ ಜೀವನವನ್ನೇ ಬದಲಾಯಿಸಿತು ಈ ತರಬೇತಿ.

ಅವಿಭಕ್ತ ಕುಟುಂಬದಲ್ಲಿದ್ದುಕೊಂಡು ಮನೆಗೆಲಸವನ್ನು ಬೇಗ ಬೇಗನೆ ಮಾಡಿಕೊಂಡು ದಿನಕ್ಕೆ ಎಂಟರಿಂದ ಹತ್ತು ಗಂಟೆ ಕಸೂತಿ ಹೆಣೆಯುವಳು. ತಿಂಗಳಿಗೆ ಮೂರು ನಾಲ್ಕು ಸೀರೆಗಳನ್ನು ಹೆಣೆದು ಕೊಡುವ ಕೌಶಲ್ಯ ಇವಳದು.

"ಕಸೂತಿ ಕಲೆ ದುಡಿಮೆಗೆ ಒಂದು ದಾರಿ ತೋರಿದೆ. ಇದರಿಂದ ನಾನು ಸ್ವಾವಲಂಬಿಯಾಗಿರುವೆ ಯಾರಿಗೂ ದುಡ್ಡಿಗಾಗಿ ಕೈ ಒಡ್ಡುವ ಪ್ರಸಂಗವಿಲ್ಲ ಎಂದು ಅಭಿಮಾನದಿಂದ ಹೇಳುವಳು" ಮಕ್ಕಳು, ಗಂಡ, ತುಂಬಿದ ಅವಿಭಕ್ತ ಕುಟುಂಬದಲ್ಲಿ ರೂಪಾ ಮನೆಯಲ್ಲಿಯೇ

ಇದ್ದುಕೊಂಡು ದುಡಿದು ಬದುಕಿಗೆ ಸ್ವಾವಲಂಬನೆಂಬ ದಾರಿ ಕಂಡವಳು ಅಲ್ಲದೇ ಕಲೆಯಲ್ಲಿ ಸಾರ್ಥಕ ಕಂಡವಳು.

ಮಹಿಳಾ ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಲವಾರು ಪ್ರದರ್ಶನಗಳಲ್ಲಿ ಭಾಗವಹಿಸಿರುವಳು.

ಕಸೂತಿ ಕಲಾವಿದೆ ಅವ್ವ ಶಾಂತವ್ವ ಅಪ್ಪ ರಾಮಲಿಂಗಪ್ಪ ದಿನಾಂಕ:– 19–10–2010ರಲ್ಲಿ ಬೀದರದಲ್ಲಿ ಜನಿಸಿದಳು. ಅಕ್ಕ ಮಂಜುಳ ತಮ್ಮ ಮುತ್ತಣ್ಣ ಒಟ್ಟು ಮೂರು ಜನ. ಪ್ರಾಥಮಿಕ ಅಭ್ಯಾಸ ಕನ್ನಡ 4 ನಂಬರ ಶಾಲೆಯಲ್ಲಿ ಹಾಗೂ ಪಿಯುಸಿ ವರೆಗೆ ಕಿತ್ತೂರ ರಾಣಿ ಚೆನ್ನಮ್ಮ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪೂರೈಸಿರುವಳು. ಎಳೆತನದಲ್ಲಿ ಹಗ್ಗದಾಟ, ಖೋಖೋ ಇವಳ ನೆಚ್ಚಿನ ಕ್ರೀಡೆಗಳು ಚಿಕ್ಕವರಿರುವಾಗಲೇ ಕೈಚೀಲ. ಬಾಗಲಪರದೆ, ಉಲನ್ ಹೆಣಿಕೆ ಪೇಂಟಿಂಗ್ ಮಾಡುವ ಹವ್ಯಾಸ ಜ್ಯೋತಿಯದು.

ಬೆಳೆದ ಮಗಳನ್ನು ಅಪ್ಪ ರಾಮಲಿಂಗಪ್ಪನವರು ಬೀದರ ಹತ್ತಿರ ಇರುವ ಮರಕುಂದಾ ಬಸವರಾಜ ದರಕಾಶಿಯವರಿಗೆ ಕೊಟ್ಟು ಮದುವೆ ಮಾಡಿದರು. ಆದರೆ ಈಗ ಸಧ್ಯ ಇವರ ಕುಟುಂಬ ಬೀದರದಲ್ಲಿಯೇ ವಾಸಿಸುತ್ತಿದೆ. ಜ್ಯೋತಿಯ ಕಲೆಗೆ ಗಂಡನ ಮನೆಯಲ್ಲಿ ಯಾವ ತೊಂದರೆಯಾಗಲಿಲ್ಲ. ಕಲೆಗೆ ಅತ್ತಿ ಮಾವ ಗಂಡ ಪ್ರೋತ್ಸಾಹಿಸಿದರು.

ಹದಿಮೂರು ವರುಷಗಳಿಂದ ಕಸೂತಿ ಕಲೆಯನ್ನು ತನ್ನದಾಗಿಸಿಕೊಂಡ ಜ್ಯೋತಿ ಮೊದಲು ಕಸೂತಿ ಕಲಿತಿದ್ದು ನಗರಸಭೆಯ ತರಬೇತಿಯಿಂದಲೇ ಶೈಲಜಾ ವಾಗರಾಳಿಯವರು ಇವರಿಗೆ ಕಸೂತಿ ಕಲೆ ಕಲಿಸಿದವರು. ಕಸೂತಿ ಕಲೆ ಕಲಿತಮೇಲೆ ಇವಳ ಕಲಾ ಪ್ರತಿಭೆಗೆ ಒಂದು ಆಯಾಮ ದೊರೆಯಿತು. ದಿನಕ್ಕೆ ಎಂಟು ತಾಸು ಕಸೂತಿ ಹಾಕುವ ಜ್ಯೋತಿ ಸರಕಾರದ ಸಂಘ ಸಂಸ್ಥೆಗಳ ಪ್ರದರ್ಶನದಲ್ಲಿ ಭಾಗವಹಿಸಿರುವಳು. ಜ್ಯೋತಿಗೆ ಮುರಗಿ ಕಸೂತಿ ಬಹಳ ಇಷ್ಟ.

ಅವಿಭಕ್ತ ಕುಟುಂಬದಲ್ಲಿದ್ದುಕೊಂಡು ಮನೆಗೆಲಸವನ್ನು ತೀರಿಸಿ ಮೂರನೇಯ ಇಯತ್ತೆ ಹಾಗೂ ಶಿಶು ವಿಹಾರದಲ್ಲಿ ಓದುತ್ತಿರುವ ಇಬ್ಬರು ಮಕ್ಕಳ ಆರೈಕೆ ಮಾಡಿ ಹಿರಿಯರ ಆರೋಗ್ಯದ ಕಾಳಜಿ ಮಾಡಿ ತನ್ನ ದುಡಿಮೆಯನ್ನು ಮಾಡುತ್ತ ಸ್ವಾವಲಂಬಿಯಾಗಿ ಬದುಕಿತಿರುವ ಜ್ಯೋತಿಯ ಬದುಕು ಆದರ್ಶಪ್ರಾಯ. ನಮ್ಮ ಹೆಣ್ಣು ಮಕ್ಕಳು ಸತತ ದುಡಿಯುತ್ತಿರುವದನ್ನು ಕಂಡು ನಮಗೆ ಹೆಮ್ಮೆ ಎನಿಸುವದು.

ಕರ್ನಾಟಕ, ಮಹಾರಾಷ್ಟ್ರದವರು ನೆರೆಹೊರೆಯವರು ಎರಡೂ ರಾಜ್ಯಗಳಲ್ಲಿ ಕಸೂತಿ ಕಲೆ ಪಾರಂಪರಿಕ ಕಲೆಯಾಗಿ ಇವತ್ತು ಕೂಡ ಜನಪ್ರಿಯ ಕಲೆಯಾಗಿದೆ. ಆಧುನಿಕ ಇಂದಿನ ದಿನದಲ್ಲಿ ಕಸೂತಿ ಕಲೆಗೆ ಹೊಸ ಆಯಾಮ ನೀಡುತ್ತಿರುವ ಕಲಾವಿದರನ್ನು ಕಾಣಬಹುದು. ಅಹಲ್ಯಾ ಕಿರ್ಲೋಸ್ಕರ, ಪುಷ್ಪಾ ಭಾಕ್ರೆ ಮಹಾರಾಷ್ಟ್ರದಲ್ಲಿ ಕಸೂತಿ ಕಲೆಗಾಗಿ ಸಾಕಷ್ಟು ಕೊಡುಗೆಯನ್ನಿತ್ತಿರುವರು.

ಹಾಗೆ ಬೀದರ ಜಿಲ್ಲೆಯ ಕಲಾವಿದೆ ಶೈಲಾ ವಾಗರಾಳಿ ಕಸೂತಿ ಕಲೆಗಾಗಿ ನಲವತ್ತು ವರುಷ ದುಡಿದಿರುವರು.

ಕಲೆಗೆ ದೇಶ, ಭಾಷೆ, ಗಡಿ ಯಾವ ಬಂಧನವಿಲ್ಲ.

ಕಲ್ಪನಾ ಮೋರೆ ಮರಾಠಿ ಮಾತೃಭಾಷೆಯ ಕಸೂತಿ ಕಲಾವಿದೆ. ಕಲ್ಪನಾ ಹುಟ್ಟಿದ್ದು 20-10-1962. ಶೈಲಜಾ ವಾಗರಾಳಿಯವರ ಹತ್ತಿರ ಕಸೂತಿ ಕಲೆಯನ್ನು ಕಲಿತವರು. ಶೈಲಜಾ ಮೊದಮೊದಲು ಮನೆಯಲ್ಲಿ ಕಸೂತಿ ಕಲೆಯನ್ನು ಮನೆಯಲ್ಲಿಯೇ ಹೇಳಿಕೊಡುತ್ತಿದ್ದರು. ಆಗ ಮನೆಯ ನೆರೆಯ ಹುಡುಗಿ ಕಲ್ಪನಾ ಮೋರೆ ಕಸೂತಿ ಕಲೆಯನ್ನು ಶೈಲಾ ಅವರ ಹತ್ತಿರ ಕಲಿಯಲು ಪ್ರಾರಂಭಿಸಿದಳು.

ಕಲ್ಪನಾಳ ತಾಯಿ ರುಕ್ಮಿಣಿ, ತಂದೆ ಪಾಂಡುರಂಗ ಗುಡಸಿ. ಲಕ್ಷ್ಮೀನಗರ ಕಂಗಟಿ ರಹವಾಸಿಗಳು ಕಲ್ಪನಾ, ಸಾಗರ, ಸೂರಜ, ಸುರೇಖಾ ನಾಲ್ಕು ಜನ ಮಕ್ಕಳು. ಕಲ್ಪನಾ ಚಿಕ್ಕವಳಿರುವಾಗ ಲಕ್ಷ್ಮೀನಗರದಲ್ಲಿ ಸಾಕಷ್ಟು ವಿಶಾಲ ಜಾಗಗಳಿದ್ದವು. ಅಲ್ಲಿ ಸಹೋದರ ಸಹೋದರಿಯರು ಗೆಳತಿಯರೊಂದಿಗೆ ಲಗೋರಿ ಆಟವನ್ನು ಆಡಿದ್ದೇ ಆಡಿದ್ದು. ಅಂದಿನ ಹುಲ್ಲುಗಾವಲುಗಳನ್ನು ಇಂದಿಗೂ ಕಲ್ಪನಾ ನೆನಿಸುತ್ತ ಈಗೆಲ್ಲಾ ಕಡೆಗೆ ಮನೆಗಳೇ ಮನೆಗಳು ಎನ್ನುವಳು. ಪ್ರಾಥಮಿಕ ಮಾಧ್ಯಮಿಕ ಅಭ್ಯಾಸ ಬೀದರನಲ್ಲಿ ಮಾಡಿ ಎಸ್.ಎಸ್.ಎಲ್.ಸಿ. ಪೂರೈಸಿದಳು. ಬೆಳೆದ ಮಗಳನ್ನು ಗೋಪಾಳ ಮೋರೆಯವರಿಗೆ ಕೊಟ್ಟು ಮದುವೆ ಮಾಡಿದರು. ಕಲ್ಪನಾ ಚಿಕ್ಕವಳಿರುವಾಗ ಅಷ್ಟಿಷ್ಟು ಹೊಲಿಗೆ ಹೆಣಿಕೆ ಮಾಡುತ್ತಿದ್ದಳು. ಮುಂದೆ ಶೈಲಾ ವಾಗರಾಳಿ ಅವರ ಹತ್ತಿರ ಕಸೂತಿ ಕಲೆ ಕಲಿತು ಈಗ ಗವಂತಿ. ಮೆಂತೆ ಮುರಗಿ, ನೇಯಗಿ ಕಸೂತಿ ಹಾಕುವಳು. ಕಸೂತಿ ಕಲ್ಪನಾಳಿಗೆ ಬಹಳ ಹಿಡಿಸುತ್ತದೆ. ದಿನಕ್ಕೆ ಹತ್ತು ತಾಸು ಕಸೂತಿ ಹಾಕುವಳು. ಮಗ ಎಸ್.ಎಸ್.ಎಲ್.ಸಿಯಲ್ಲಿ ಓದುತ್ತಿರುವನು. ಗಂಡ ಹಿಟ್ಟಿನ ಗಿರಿಣಿ ನಡೆಸುವರು. ಇಪ್ಪತ್ತು ವರುಷಗಳಿಂದ ಕಲ್ಪನಾ ಕಸೂತಿ ಹಾಕುತ್ತಿರುವಳು. ಕಸೂತಿ ಜೀವನಕ್ಕೆ ಆಧಾರವೇ ಆಗಿದೆ. ಅನೇಕ ಪ್ರದರ್ಶನಗಳಲ್ಲಿ ಭಾಗವಹಿಸಿರುವಳು.

ಕಸೂತಿ ಕಲೆ ಪಾರಂಪರಿಕ ಕಲೆ ಇಂದು ಅದಕ್ಕೆ ಬೇಡಿಕೆ ಹೆಚ್ಚಿದೆ. ಹೆಣ್ಣು ಮಕ್ಕಳೂ ಸ್ವಾವಲಂಬಿಗಳಾಗಿ ಬದುಕಲು ಆಧಾರವಾಗಿದೆ. ತಮ್ಮ ಕಷ್ಟಗಳನ್ನು ಮರೆತು ಇಂದು ಹೆಂಗಳೆಯರು ಕಲಾರಾಧನೆಯಲ್ಲಿ ಆನಂದ ತೃಪ್ತಿಯ ಹೊಸ ಬದುಕು ಕಂಡುಕೊಂಡಿದ್ದಾರೆ.

3.3 ಲಂಬಾಣಿ ಕಲೆ

ಲಂಬಾಣಿ, ಬಂಜಾರ ಎಂದು ಕರೆಯಿಸಿಕೊಳ್ಳುವ ಈ ಜನಾಂಗ ಅಲೆಮಾರಿ ಜೀವಿಗಳು ಮೂಲತಃ ರಾಜಸ್ಥಾನ, ಗುಜರಾಥದವರಾದ ಲಂಬಾಣಿ ಜನರು ಆಂಧ್ರ ಮಹಾರಾಷ್ಟ್ರ, ಉತ್ತರ ಕರ್ನಾಟಕದಲ್ಲಿ ವಾಸಿಸುವರು.

ಒನ ಎಂದರೆ ಅಡವಿ ಜಾರಾ ಅಂದರೆ ಅಲೆಮಾರಿಗಳು ಹೀಗಾಗಿ ಇವರಿಗೆ "ಬಂಜಾರ" ಎಂದು ಹೆಸರು ಬಂದಿರುವುದು.

ಮೂಲತಃ ಇವರು ಅರಣ್ಯವಾಸಿಗಳು ಜೀವನೋಪಾಯಕ್ಕಾಗಿ ಸಿಗುವ ಸಂಪತ್ತನ್ನು ಅರಸಿ ಅಲೆಮಾರಿಗಳಾದವರು. ರಸ್ತೆಗಳು ಇಲ್ಲದ ಕಾಲದಲ್ಲಿ ಪ್ರಾಣಿಗಳ ಮೇಲೆ ಕಾಳುಕಡ್ಡಿ ಹೇರಿಕೊಂಡು ಹೋಗಿ ಪೂರೈಸುತ್ತಿದ್ದರು. ರಾಜರ ಸೈನಿಕರಿಗೆ ಧಾನ್ಯ ಪೂರೈಸುತ್ತಿದ್ದರು. ಉರುವಲು ಕಟ್ಟಿಗೆ ಬಿದಿರು ಬಾಂಬುಗಳನ್ನು ಹೊತ್ತು ಮಾರುತ್ತಿದ್ದರು. ಇವರು ಕಾಡಿನಲ್ಲಿ ಜೇನು ಸಾಕಾಣಿಕೆಯನ್ನು ಮಾಡುತ್ತಿದ್ದರು. ತಮ್ಮ ಹೆಣಿಕಗಳನ್ನು ಪೇಟೆಯಲ್ಲಿ ಮಾರುತ್ತಿದ್ದರು.

ಭಾರತದ ನಾನಾ ಭಾಗಗಳಲ್ಲಿ ಅಲೆಮಾರಿ ಜೀವನವನ್ನು ನಡೆಸಿದವರು. ಇತ್ತೀಚೆಗೆ ಕೆಲವರು ನೆಲೆಯನ್ನು ಕಂಡಿರುವರು. ತಂಡತಂಡೋಪವಾಗಿ ದೇಶದ ವಿವಿಧ ಸ್ಥಳಗಳಲ್ಲಿ ದುಡಿಯಲು ಹೋದ ಇವರ ತಾಂಡಾಗಳು ಅನೇಕ, ತಾವು ಗುಂಪು ಗುಂಪಾಗಿ ವಾಸಿಸುವ ಒಂದು ಸ್ಥಳಕ್ಕೆ ಒಂದೊಂದು ಹೆಸರು ತಾವೇ ಕೊಟ್ಟುಕೊಂಡಿರುವರು. ಅಂತಹ ತಾಂಡಾಗಳು ಅನೇಕ.

(ದಾಡಿಬಾವಿ ತಾಂಡಾ ಬನ್ನೂರತಾಂಡಾ, ಸಾಲಾಪೂರ ತಾಂಡಾ, ಚೆನ್ನಾಪೂರ ತಾಂಡಾ, ಬಟಕುರ್ಕಿತಾಂಡಾ, ನಾಗನೂರತಾಂಡಾ, ಆರಿಬೆಂಚಿತಾಂಡಾ, ಓಬಳಾಪೂರತಾಂಡಾ, ರಾಮಾಪೂರ ತಾಂಡಾ, ಯಲ್ಲಮ್ಮಗುಡ್ಡ ತಾಂಡಾ, ಕಾರ್ಲಕಟ್ಟಿ)

3.4 ಕೌದಿ

ಗಾಳಿ, ಮಳೆ ಚಳಿಯಿಂದ ಮನುಷ್ಯ ತನ್ನನ್ನು ರಕ್ಷಿಸಿಕೊಳ್ಳಲು ಹಲವಾರು ಸಾಧನ ಉಡುಪು ಬಳಸುವನು. ಅದರಲ್ಲಿ ಉಲ್ಲನ್ ಅರಿವೆಗಳು ಹಾಗೆಯೇ ನಮ್ಮ ಗ್ರಾಮೀಣ ಜನರು ಚಳಿ ಮಳೆ ಗಾಳಿಯಿಂದ ರಕ್ಷಿಸಿಕೊಳ್ಳಲು ಕೌದಿ ಹೊದ್ದುಕೊಳ್ಳುವರು. ಕೌದಿ ಬೇಸಿಗೆಯಲ್ಲಿ ತಂಪು ಚಳಿಗಾಲ ಮಳೆಗಾಲದಲ್ಲಿ ಬೆಚ್ಚಗಾಗಿರುವುದು. ಹಳೆಯ ಅರಿವೆಗಳಿಂದಲೇ ಇದನ್ನು ಸಿದ್ಧಪಡಿಸುವುರು. ಕೌದಿ, ದುಪಟಿ, ಎರಡೂ ಒಂದೇ ಆದರೂ ಕೌದಿ ದೊಡ್ಡದು. ದುಬಟಿ ಸಣ್ಣದು. ಮಕ್ಕಳಿಗೆ ಹೊದಿಸಲು ಮಾತ್ರ, ಚಿತ್ತ ಚಿತ್ತಾರದ ದುಬಟಿ ಸಿದ್ಧಪಡಿಸುವರು ಹಾಗೂ ಬಣ್ಣ ಬಣ್ಣದ ಬೆಡಗಿನ ಬಟ್ಟೆ ಬಳಸುವರು. ಜನಪದ ಗರತಿ ದುಬಟಿಗೆ ಕೌದಿ ಎಂದು ಹೇಳಿರುವ ತ್ರಿಪದಿ ಇಲೊಂದು.

ಬಣ್ಣದ ತೊಟ್ಟಲಾಗ ಜಗ್ಗು ಬಿದ್ದವ ಕೌದಿ
ಇಬ್ಬರು ತೂಗಿದರ ಮಲಗೊಲ್ಲ ಕಂದವ್ವನ
ಅಬ್ಬಣಗಿ ಏಟ ಹಿಡಿಯಿಲ್ಲಿ

ಕೂಸಿನ ಅಬ್ಬರ, ಹಟ ಎಷ್ಟು ಅನ್ನುವುದನ್ನು ಬಣ್ಣಿಸುತ್ತ ಹಾಡಿರುವ ಅವ್ವ ಮೆತ್ತಗೆ ಹಾಸಿದ ಹೊದಿಸದ ದುಬಟಿಗಳಿಗೇ ಕೌದಿ ಎಂದು ಸಂಬೋಧಿಸಿರುವಳು.
ಜಮಖಾನ, ಗೂಡಾರ ಹಾಸಿಕೊಳ್ಳಲಾರದೆ ಕೌದಿ ಹೊದ್ದಿಕೊಳ್ಳುವ ಹೊದಿಕೆ.

ಹೊದ್ದುಕೊಳ್ಳುವ ಹೊದಿಕೆ ಹಾಸಿಕೊಳ್ಳುವ ಜಮಖಾನ. ಮಲಗುವ ಮಂಚ ಎಲ್ಲವೂ ಚಿತ್ತಾರವಾಗಿರುವುದೇ ನಮ್ಮ ಸಂಸ್ಕೃತಿಯ ವೈಶಿಷ್ಟ್ಯ ಅಂತಲೇ ನಮ್ಮ ಗರತಿಯರು ಕೌದಿ ಸುಂದರವಾಗಿಯೇ ಹೊಲಿಯುವರು. ಅದರಲ್ಲೂ ಉಟ್ಟುಕೊಳ್ಳಲಾರದ ಹಳೆಯ ಬಟ್ಟೆಗಳಿಂದ.

ಲ್ಯಾವಿ:– ಕೌದಿಯಲ್ಲಿ ಲ್ಯಾವಿ ಹಾಕಿಕೊಳ್ಳುವುದೇ ಮಹತ್ವದ್ದು. ಲ್ಯಾವಿ ಅಂದರೆ ಕೌದಿ ಹೊಲೆಯುವ ಬಟ್ಟೆಗಳನ್ನು ಜೋಡಿಸಿ ಮೊದಲು ದೊಡ್ಡ ದೊಡ್ಡ ಹೊಲಿಗೆ ಹಾಕಿ ಅರಿವೆಗಳು ಜರೆಯದಂತೆ ಗಟ್ಟಿ ಹಿಡಿಯಲು ಸಿದ್ಧಪಡಿಸುವುದೇ ಲ್ಯಾವಿ. ಆಕಾರಕ್ಕೆ ತಕ್ಕಹಾಗೆ ಅರಿವೆ ಕತ್ತರಿಸಿ ಲ್ಯಾವಿ ಹಾಕಿಕೊಳ್ಳುವರು. ಇದು ಅರಿವೆ ಗಟ್ಟಿ ಹಿಡಿಯುವುದು.

ಕೌದಿದಾರ:– ಕೌದಿ ಹೊಲೆಯಲು ಗಟ್ಟಿದಾರ ಇರುವುದು ಇದರಿಂದ ಮಾತ್ರ ಕೌದಿ ಹೊಲೆಯುವರು. ಇದಕ್ಕೆ ಕೌದಿದಾರವೆಂದೇ ಕರೆಯುವರು.

ಕೌದಿಗೆ ಒಂದು ಚಿತ್ತಾರ ಮಾಡಲು ಹೊಲಿಯುವವರು ಮೊದಲೇ ಒಂದು ಯೋಜನೆ ಮಾಡಿಕೊಂಡು ಅಂತಲೇ ಚಿತ್ತಾರದ ಬಣಬಣದ ಅರಿವೆ ಸಿದ್ಧಪಡಿಸಿಕೊಂಡು ಒಳಗೆ ಸಾದಾ ಅರಿವೆ ಹಾಕಿ ಮೇಲೆ ಚಿತ್ತಾರದ ಅರಿವೆ ಹಾಕಿ ಆಕರ್ಷಕ ಕೌದಿ ಸಿದ್ದಪಡಿಸುವರು. ಕೌದಿ ಹೊಲಿದು ಮಾರುವವರೂ ಉಂಟು. ಕೌದಿ ಕಸಬನ್ನು ಮಾಡುವವರು ಇರುವರು.

ಶಶಿಕಲಾ ಹಿರೇಮಠ:– ಕೌದಿ ಕಲಾವಿದೆ ಶಶಿಕಲಾ ಶಂಕರಯ್ಯ ಹಿರೇಮಠ ಬೀದರ ತಾಯಿ ಸರ್ವಮಂಗಲಾ, ತಂದೆ ಸಿದ್ಧರಾಮಯ್ಯ ಹಾಲದೇವರಮಠ ಹುಟ್ಟಿದ ವರುಷ 1943,

ತಂದೆ ಸಿದ್ಧರಾಮಯ್ಯ ಹಾಲದೇವರಮಠ ಅವರ ಸ್ವಾತಂತ್ರ್ಯ ಯೋಧರು. ಬ್ರಿಟಿಷರ ವಿರುದ್ಧ ಹೋರಾಡಿ ಜೇಲವಾಸ ಅನುಭವಿಸಿದವರು. ಶಶಿಕಲಾಳನ್ನು ಸೇರಿ ಒಟ್ಟು ಐದು ಜನಮಕ್ಕಳು. ಗುರುಲಿಂಗವ್ವ, ಮಹಾಲಿಂಗಯ್ಯ, ಶಂಕರಯ್ಯ ಶಾಂತವ್ವ ಕೊನೆಯವಳು ಶಶಿಕಲಾ ಐದನೇಯ ಇಯತ್ತೆವರೆಗೆ ಶಾಲೆ ಕಲಿತಳು, ಐದು ಮಕ್ಕಳು ಅತ್ತೆ ತಾನು ಒಟ್ಟು ಏಳು ಜನರ ಸಂಸಾರ ತಾಯಿ ಸರ್ವಮಂಗಳಾ ಬಹಳ ಕಷ್ಟದ ದಿನಗಳನ್ನು ಎದುರಿಸಬೇಕಾಯಿತು. ಹೀಗಾಗಿ ನಾಜುಕಾಗಿ ಜೀವನ ಸಾಗಿಸಬೇಕಾಯಿತು.

ಎಳೆತನದಲ್ಲಿ ಶಶಿಕಲಾ ಹಾಡು ಆಟಪಾಠದೊಂದಿಗೆ ಶಗಣಿ ಹಿಡಿಯುವುದು. ಶೇಂಗಾ ಕೀಳಲು ಹೋಗುವುದು ಮಾಡುತ್ತಿದ್ದಳು. ತಾಯಿಯ ಕಷ್ಟದ ಅರಿವು ಶಶಿಕಲಾಳಿಗೆ ಇತ್ತು.

ಸರ್ವಮಂಗಲಾ ಕುಲಾಯಿ ಕುಂಚಗಿ ಕುಬಸ. ಕೌದಿ ಹೊಲಿಯುತ್ತಿದ್ದಳು. "ಮನೆಯೇ ಮೊದಲ ಪಾಠಶಾಲೆ"

ಎನ್ನುವಂತೆ ಶಶಿಕಲಾ ತಾಯಿಯ ಎಲ್ಲ ವಿದ್ಯೆಯನ್ನು ಕಲಿತವಳು. ಅವಳು ಮಾಡುವ ಅಡಿಗೆ ಇದ್ದದರಲ್ಲಿ ಜೀವನ ನಡೆಸುವಿಕೆ. ಅವಳು ಹೊಲಿಯುವ ಕುಲಾಯಿ, ಕುಂಚಗಿ, ಕುಬಸ್, ಕೌದಿಯನ್ನು ಹೊಲಿಯಲು ಕಲಿತವಳು. ವಿಶೇಷವಾಗಿ ಕೌದಿಯನ್ನೇ ಹೆಚ್ಚಾಗಿ ಹೊಲಿಯುವಳು. ದೊಡ್ಡ ದಪ್ಪನ್ನ

ಕೌದಿ ಹೊಲಿದು ತನ್ನ ಬಂಧು ಬಳಗದವರಿಗೆ ಕೊಟ್ಟಿರುವಳು. ಕೌದಿ ಹೊಲಿಯುವುದನ್ನು ಹವ್ಯಾಸವಾಗಿಟ್ಟುಕೊಂಡ ಶಶಿಕಲಾ ಆಗಾಗ ಕೆಲ ಕೌದಿಗಳನ್ನು ಮಾರಾಟವನ್ನು ಮಾಡಿರುವಳು. ಅಲ್ಲದೇ ಬಟ್ಟೆ ದಾರ ಕೊಟ್ಟರೆ ಹೊಲಿದು ಕೊಟ್ಟಿರುವಳು.

ಗ್ರಾಮೀಣ ಜನರು ಯಾವುದೇ ವಸ್ತುವನ್ನು ಕೆಡಿಸುವುದಿಲ್ಲ. ಮರು ಉಪಯೋಗ ಮಾಡಿಕೊಳ್ಳುವರು.

ಉಮಾ ಅಂಬಲಿ:- ಉಮಾ ವಿಶ್ವನಾಥ ಅಂಬಲಿ, ಬೀದರ ಅವ್ವ ಅನ್ನಪೂರ್ಣ, ಅಪ್ಪ ವಿಶ್ವನಾಥ ಕೃಷಿಕ. 10–7–––1971 ಇಸ್ವಿಯಲ್ಲಿ ತಾಯಿಯ ತವರಾದ ಕಮಠಾಣ ತಾಲೂಕ ಬೀದರದಲ್ಲಿ ಜನಿಸಿದಳು. ಪ್ರಾಥಮಿಕ ಅಭ್ಯಾಸ ಬೀದರ ತಾಲೂಕಿನ ಭಂಗುರದಲ್ಲಿ ಆಯಿತು. ಕಬ್ಬು, ಜೋಳ, ಗೋದಿ, ಕಡಲಿ ಇಲ್ಲಿಯ ಬೆಳೆಗಳು. ಎಳೆತನದಲ್ಲಿ ಗ್ರಾಮೀಣ ನಿಸರ್ಗದಲ್ಲಿ ಆಡುತ್ತ ಹಾಡುತ್ತ ಬೆಳೆದ ಉಮಾ ಎಸ್.ಎಸ್.ಎಲ್.ಸಿ ವರೆಗೆ ಭಂಗುರದಲ್ಲಿ ಅಭ್ಯಾಸ ಮಾಡಿದಳು. ಎಳೆತನದಲ್ಲಿಯೇ ಹೊಲಿಗೆ ಹೆಣಿಕೆಯ ಹವ್ಯಾಸ. ದೊಡ್ಡವಳಾಗುತ್ತ ಬೀದರ ಅಂಬಲಿ ಮನೆತನದ ವಿಶ್ವನಾಥ ಅಂಬಲಿಯವರಿಗೆ ಕೊಟ್ಟು ಮದುವೆ ಮಾಡಿದರು. ಉಮಾಳಿಗೆ ಏನಾದರೂ ಮಾಡಬೇಕೆಂಬ ಹಂಬಲ ತನ್ನದೂ ಆದಾಯ ಇರಬೇಕು ಎನ್ನುವ ಹಂಬಲ. ಮನೆಗೆ ಸಂಬಂಧಿಕಳಾದ ಶೋಭಾ ಹಾಲದೇವರಮಠ ಆಗಾಗ ಬರುವಳು ಅವಳು ಕೌದಿ ಕುಂಚಗಿ ಹೊಲಿಯುವ ಕಲಾವಿದೆ. ಅವಳಿಂದಲೇ ಉಮಾ ಕೌದಿ ಹೊಲಿಯುವದನ್ನು ಕಲಿತಳು. ಕೌದಿ ಹೊಲಿಯಲು ಪ್ರಾರಂಭ ಮಾಡಿದಳು. ಸಿದ್ಧರಾಮಯ್ಯ ಚರಂತಿಮಠ ಅವರು ನಾದುನಿ ಗಂಡ ಹೊಲಿಗೆಯಂತ್ರ ತೆಗೆದುಕೊಳ್ಳಲು ಪ್ರೋತ್ಸಾಹ ನೀಡಿದರು. “ಉಮಾ ಹೊಲಿಯಲು ಶುರು ಮಾಡವ್ವಾ” ಎಂದರು. ಮನೆತನದ ಕಸುಬಾದ ಅರಿವೆ ವ್ಯಾಪಾರ ಇಂದಿನ ಜಾಗತೀಕರಣದ ಪ್ರಸಂಗದಲ್ಲಿ ಅಷ್ಟೆಕಷ್ಟೇ ಹಿಂದಿನ ನೂಲಿನ ಬಟ್ಟೆಗಳಾದ ಮಾಂಜರಪಾಟ ಚೀಟ, ಧೋತರ, ಇಳಕಲ್ಲ ಸೀರೆ ಚಾದರ ಎಲ್ಲ ಹಳತಾಗಿ ಪಾಲಿಸ್ಟರ ಮತ್ತು ಜರ್ದೋಸಿ ಆಳುತ್ತಿರುವ ಈ ಕಾಲದಲ್ಲಿ ಸದಾ ಸಾಲವೇ ಸಾಲ. ಹೀಗಾಗಿ ಉಮಾ ಕೌದಿ ಹೊಲಿಯಲು ಪ್ರಾರಂಭಿಸಿದಳು. ಕೌದಿ ಹೊಲಿಯಲು ಕಲಿತದ್ದು ಹೆಚ್ಚಾಗಿ ನೋಡಿಯೇ ಶೋಭಾ ಹಾಲದೇವರಮಠ ಒಂದರೆಡು ಕೌದಿ ಹೊಲಿಯುವುದನ್ನು ಹೊಲಿದು ತೋರಿಸಿದಳು. ಉಮಾ ತಪ್ಪು ತಡಯೋ ಲ್ಯಾವಿ ಹಾಕಿ ಕೌದಿ ಹೊಲಿಯಲು ಪ್ರಾರಂಭಿಸಿದಳು.

ಮನೆಗೆಲಸ ಮುಗಿಸಿ ತಿಂಗಳಿಗೆ ಮೂರು ನಾಲ್ಕು ಕೌದಿಗಳನ್ನು ಹೊಲಿಯುವಳು. ಜನರು ಕೌದಿ ಹೊಲಿಯಲು ಕೊಡುವರು. ಒಂದು ಕೌದಿ ಹೊಲಿಯಲು ಎಪ್ಪತ್ತೈದರಿಂದ ನೂರು ರೂಪಾಯಿಗಳು ದೊರೆಯುವವು. ಸಾಕಷ್ಟು ಕೆಲಸ ದೊರೆಯುತ್ತಿದ್ದರೂ “ಮನೆಯ ಕೆಲಸದ ಮಧ್ಯೆ ತಿಂಗಳಿಗೆ ಎರಡು ಮೂರು ಕೌದಿ ಮಾತ್ರ ಸಿದ್ಧ ಪಡಿಸಲಾಗುವುದು” ಎನ್ನುವಳು.

ಮನೆಗೆಲಸದ ನಂತರ ಉಳಿದ ವೇಳೆಯಲ್ಲಿ ಇಂತಹ ಹವ್ಯಾಸ ಜೀವನಕ್ಕೆ ಆಧಾರವೂ ಕೂಡ.

ಕುಂಚಿಗೆ ಕುಲಾಯಿ: “ಕುಂತಾಡು ಕಂದಗ ಕುಂಚಿಗಿ ಕುಲಾಯಿ

ನಿಂತಾಡು ಕಲಿಯೋ ನನಬಾಲ ನಾ, ನಿನಗ
ನಿಲುವು ನೋಡಿ ಅಂಗಿ ಹೊಲಿಸೇನ"

"ನಿಂತಾಡು ನೀರಾಗ ಕುಂಚಿಗಿ ಒಗದಾಳ
ಕರದೀಲಿ ಚೆಲುವಿ ನನಮಗಳ ಮನಿಯಾಗ
ಹರದಾಡು ಕೂಸೀನ ಹೆಸರೇನ"

ಜನಪದದಲ್ಲಿ ಕುಂಚಿಗಿ ಕುರಿತು ಬರುವ ತ್ರಿಪದಿಗಳು ಕುಂಚಿಗೆ ಕೂಸಿನ ತಲೆಗೆ ಕಟ್ಟುವ ಹೊಲಿದ ವಸ್ತ್ರ. ಹೊಲಿದ ಈ ವಸ್ತ್ರದ ಹಿಂಭಾಗ ಕುಂಚದಂತಿರುವದು ಹಕ್ಕಿಯ ತಲೆಯ ಕುಂಚದಂತೆಯೂ ಇರುವುದು ಇದರಿಂದ ಇದಕ್ಕೆ ಕುಂಚಗಿ-ಕುಂಚಗೆ ಎಂದು ಹೆಸರು ಬಂದಿರಬಹುದೆಂಬುದು ನನ್ನ ಅಭಿಪ್ರಾಯ.

ಕುಂಚಗಿ, ಕುಲಾಯಿ ತಲೆಗೆ ಕಟ್ಟುವ ಉಡುಪುಗಳು ಅವ್ವ ತನ್ನ ಕೂಸಿಗೆ ಥಂಡಿಯಾದೀತೆಂದು ತಲೆ ಬೆಚ್ಚಗೆ ಇಡಲು ಕುಂಚಗಿ ಕುಲಾಯಿ ಕಟ್ಟುವಳು. ಕುಂಚಿಗೆಯಿಂದ ತಲೆ ಕಿವಿ ಬೆಚ್ಚಗಿರುವದು. ಕುಂಚಿಗೆಯ ಪದರು ಬೆನ್ನು ಮೇಲೆ ಕಮಲದ ಎಲೆಯಂತೆ ಹರವಿ ಬೆನ್ನು ಮುಚ್ಚುವುದು. ಮಳೆ, ಗಾಳಿ ಚಳಿಯಿಂದ ಕುಂಚಿಗೆ ಮಕ್ಕಳನ್ನು ರಕ್ಷಿಸುವುದು. ಮಕ್ಕಳ ಆರೋಗ್ಯ ಕಾಪಾಡುವಲ್ಲಿ ಕುಂಚಿಗೆ ಸಹಕಾರಿ.

ಪ್ರಸ್ತುತ ಮೇಲಿನ ತ್ರಿಪದಿಗಳಲ್ಲಿ ಅವ್ವ
"ಕುಂತಾಡು ಕಂದಗ ಕುಂಚೀಗಿ ಕುಲಾಯಿ"

ಎಂದು ಹಾಡಿರುವುದನ್ನು ನೆನೆದರೆ ಒಂದು ವಯಸ್ಸಿನವರೆಗೆ ಕುಂಚಿಗೆ ಕೂಸಿಗೆ ಕಟ್ಟುವುದನ್ನು ಸೂಚಿಸುತ್ತದೆ. ಕೂಸು ಬೆಳೆಯುತ್ತ ಬೆಳೆಯುತ್ತ ಸ್ವಲ್ಪ ದೊಡ್ಡದಾದರೆ. ನಿಂತಾಡುವಂತಾದರೆ ಕುಂಚಿಗೆಯನ್ನು ಕಟ್ಟುವುದು ಕಡಿಮೆ.

ಅರೋಗ್ಯ ದೃಷ್ಟಿಯಿಂದ ಕುಂಚಿಗೆ ಬಹಳ ಮಹತ್ವದ್ದು. ಕೂಸಕಂದವ್ವನ ಕಿವಿಯಲ್ಲಿ ಜಿರಳೆ ಇರವಿ ಜೊಂಡಿಗ ಕ್ರಿಮಿಕೀಟಗಳು ಹೋಗದಂತೆ ರಕ್ಷಿಸುವುದು. ಅಲ್ಲದೆ ಕಿವಿಗೆ ನೋವು ಬಾರದೆ ಇರಲೇಂದು ಕುಂಚಿಗೆ ಕಟ್ಟುವುದು.

ಹೆತ್ತಕೂಸನ್ನು ಅವ್ವ ಮುತ್ತಾಗಿ ಜೋಪಾನ ಮಾಡುವಳು. ಮುತ್ತಿಟ್ಟು ಉಡಿಸಿ ತೊಡಿಸಿ ಉಣಿಸಿ ಆನಂದ ಪಡುವಳು. ಆಯಿಗೆ ಮೊಮ್ಮಗ, ಮೊಮ್ಮಗಳ ಮೇಲೆ ಬಲು ಪ್ರೀತಿ. ಮಗಳ ಬಾಣಂತನ ಮಾಡಿ ತುಂಬಿದುಡಿಯಿಂದ "ತೊಟ್ಟಲಬಟ್ಟಲ" ಕೊಟ್ಟು ಕಳುಹಿಸುವಳು. ಈ ತೊಟ್ಟಿಲ ಬಟ್ಟಲ ಶಬ್ದ ವಿಶಾಲ ಅರ್ಥವನ್ನೊಳಗೊಂಡಿದೆ. ಮದುವೆಯಲ್ಲಿ ಸುರಗಿ ಕೊಡುವಂತೆ ಮಗಳು ಹಡೆದು ಗಂಡನ ಮನೆಗೆ ಹೋಗುವ ಸಂಭ್ರಮ ನೋಡಬೇಕು. ಸೋದರತ್ತೆ ಬಂದು ಹೆಸರಿಟ್ಟು

ಹೋದ ಮೇಲೆ ಬಾಣಂತಿಮಗಳು ತುಂಬಿದುಡಿಯಿಂದ ಗಂಡನ ಮನೆಗೆ ಹೋಗುವಾಗ ಅವ್ವ ಮೊಮ್ಮಗಳಿಗೆ ಏನೆಲ್ಲ ಕೊಡುವಳು. ಕಿವಿಗೆ ಮುರು, ಹಾಲಗಡಗ, ಮಾಗಾಯಿ, ಬಿಂದಲಿ, ಗುಂಡು, ಉಂಗುರ, ಚೈನು, ಪೋಚೆ, ಗುನಗಡಗಿ ತೊಟ್ಟಲ, ಬೆಳ್ಳಿಬಟ್ಟಲ, ಉಳ್ಳುಳಕಿ ಗಾದಿ, ದಿಂಬ, ದುಪ್ಪಟ್ಟಿ ಈಗ ಕುಂಚಿಗೆ ಐದು ಕೊಡಲೇಬೇಕು. ಏನಿಲ್ಲದಿದ್ದರೂ ತೊಟ್ಟಲಬಟ್ಟಲ ಕುಂಚಿಗೆ ಐದು ಅವ್ವ ತವರಿನಿಂದ ಕೊಟ್ಟೇ ಕೊಡುವಳು. ಹೀಗಾಗಿ ತೊಟ್ಟಲ ಬಟ್ಟಲ ನಿಬ್ಬಣದಲ್ಲಿ ಕುಂಚಿಗೆಗೆ ಹೆಚ್ಚಿನ ಪ್ರಾಮುಖ್ಯತೆ.

ತಾಯವ್ವ ಹಾಗೆಯೇ ಕುಂಚಿಗೆ ಕೊಟ್ಟಾಳ? ಇಲ್ಲ, ಸುಂದರ ಕುಂಚಿಗೆಗಳನ್ನು ಹೆಣೆದು ಕೊಡುವಳು. ಹೀಗಾಗಿ ಕುಂಚಿಗೆಯಲ್ಲಿ ಹಲವಾರು ಪ್ರಕಾರಗಳು.

1. ಸಾದಾ ಕುಂಚಿಗೆ
2. ಮುತ್ತಿನ ಕುಂಚಿಗೆ
3. ಜುಲ್ಪಿ ಕುಂಚಿಗೆ
4. ಭಿಂಗ ಕುಂಚಿಗೆ

ಇವೆಲ್ಲ ಹಸೂಗೂಸುಗಳಿಗೆ ಕಟ್ಟುವ ಕುಂಚಿಗೆಗಳು ಮೆತ್ತನ್ನ ಸಾದಾ ಹಳೆಯ ಅರಿವೆಗಳಿಂದ ಕುಂಚಿಗೆಗಳನ್ನು ಹೊಲಿಯುವರು. ಹಸುಗೂಸುಗಳಿಗೆ ಹಳೆಯ ಅರಿವೆಯಿಂದಲೇ ಕುಂಚಿಗೆ ಅಂಗಿ ಹೊಲಿದು ತೊಡಿಸುವುದು ವಾಡಿಕೆ. ಹಳೆ ಅರಿವೆ ಮೆತ್ತಗೆ ಇರುವವು. ಹೊಸ ಅರಿವೆ ಮೃದು ಚರ್ಮಕ್ಕೆ ಚುಚ್ಚುವವೆಂದು ಮೃದು ಬಟ್ಟೆಗಳನ್ನು ತೊಡಿಸುವರು. ಹೊಸ ಚಿತ್ತ ಚಿತ್ತಾರದ ಕುಂಚಿಗೆ ಮಾಡಿ ತೊಡಿಸುವ ಅವ್ವ ಕೂಸಿಗೆ ಕಟ್ಟಿ ಅಂದ ಚೆಂದ ನೋಡುವಳು ಅಂತಲೇ ತಾಯಿಮಕ್ಕಳ ಅಂದಕ್ಕೆ ಬೆರಗಾಗಿ ದೃಷ್ಟಿ ತೆಗೆದೊಗೆಯುವಳು.

"ತೊಟ್ಟಿಲ್ದಾಗಿನ ಕಂದವ್ವಗ ದೃಷ್ಟಿಯಾದೀತೆಂದು
ಕಟ್ಟೇನಿ ನವಿಲ ಗರಿಗೋಳ ಶರಣರ
ಇಟ್ಟೇನಿ ಬತ್ತಿನೊಸಲಾಗ"

ಮುತ್ತಿನಂದ ಸಿಂಗಾರ ಮಾಡಿ ಕುಂಚಿಗೆ ಹೊಲಿಯುವುದು ಮುತ್ತಿನ ಕುಂಚಿಗೆ, ಕೆಂಪು, ನೀಲಿ ಜಾಂಬಳಿ ಅರಿವೆಗಳಲ್ಲಿ ಮುತ್ತಿನ ಚಿತ್ತಾರ ಚೆಂದವಾಗಿ ಕಾಣುವುದು.

ಜುಲ್ಪಿ ಕುಂಚಿಗೆ:– ಬಂಗಾರದ ಜುಲ್ಪಿಹಾಕಿ ಕುಂಚಿಗೆ ಹೊಲಿಯುವರು. ಇದ್ದುಳ್ಳವರು ಹೌಸಿನಿಂದ ಮಾಡಿಸುವರು.

ಭಿಂಗ ಕುಂಚಗೆ:– ಇತ್ತಿತ್ತಲಾಗಿ ಟಿಕಳಿ, ನಕ್ಷತ್ರಗಳನ್ನು ಚಂದಕ್ಕೆ ಹಚ್ಚಿ ಹೊಲಿಯುವ ಕುಂಚಿಗೆ..

ಆರ್ಥಿಕವಾಗಿ ಕುಂಚಿಗೆ ಕಸಬನ್ನು ಮಾಡಿಕೊಂಡು ಜೀವಿಸುವ ಹೆಣ್ಣು ಮಕ್ಕಳೂ ಇರುವರು. ಇವರು ಕುಂಚಿಗೆಮಾಡಿ ಹಳ್ಳಿ ಹಳ್ಳಿ ಮಾರುವ ವ್ಯಾಪಾರಿಗಳಿಗೆ ಸಗಟಾಗಿ ಮಾರುವರು. ಕೆಲವರನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ಕುಂಚಿಗೆ ತಯಾರಿಸುವರು.

ಕುಂಚಿಗೆ ಗಾಳಿ ಮಳೆ ಚಳಿಯಿಂದ ರಕ್ಷಿಸುವ ಸಾಧನ. ದೊಡ್ಡವರೂ ಕೂಡ ಕುಂಚಿಗೆಗಳನ್ನು ಧಿಡೀರನೇ ಮಾಡಿ ಹಾಕಿಕೊಳ್ಳುವರು. ಮೋಡಸರಿದು ಮಳೆ ಬಂದರೆ ಸಾಕು ಹಾಸಿಕೊಂಡ ಗೊಂಗಡಿ, ಕುಂಚಿಗೆಯಾಗುವುದು ಬಿದಿರಿನಿಂದಲೂ ಕುಂಚಿಗೆ ತಯಾರಿಸುವರು. ಬಿದಿರ ಕುಂಚಿಗೆಗೆ ಗೊರಬು ಎಂದು ಕರೆಯುವರು. ಗೊರಬು ಕರಾವಳಿ ತೀರದ ಉತ್ತರಕನ್ನಡ ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಹೆಚ್ಚಾಗಿ ರೈತರು ಗೊರಬುಗಳನ್ನು ಬಳಸುವರು.

ಗೊರಬು ಪ್ರಕೃತಿಯಲ್ಲಿಯೇ ದೊರೆಯುವ ಎಲೆ, ಕಟ್ಟಿಗೆ, ಬಳ್ಳಿಯಿಂದ ತಯಾರಾದ ಕುಂಚಿಗೆ ಇದನ್ನು ತಯಾರಿಸಲು ಬಿದಿರು ಸೀಳುಗಳು ಧೂಪದ ಎಲೆ, ಅಡಕೆ ಬಳ್ಳಿ, ಬಂದಳಿಕೆ ಬಳ್ಳಿ ಬೇಕಾಗುವವು. ಗೊರಬಿನ ಹೊರ ಚೌಕಟ್ಟು ಬಿದಿರಿನ ಸೀಳುಗಳಿಂದ ಸಿದ್ಧಪಡಿಸಿ ಧೂಪದ ಎಲೆಗಳಿಂದ ಜೋಡಿಸುತ್ತಾ ಹೋಗುತ್ತಾರೆ. ನಂತರ ಅಡಿಕೆ ಬಳ್ಳಿ ಬಳ್ಳಿ ಬಂದಳಿಕೆಯಿಂದ ಉದ್ದಗಲಕ್ಕೆ ಗೊರಬು ತಯಾರಿಸುತ್ತಾರೆ. ಕಡಲತೀರ ಕಾರವಾರ ಮಂಗಳೂರುಗಳಲ್ಲಿ ಸುರಿವ ಧೋ, ಧೋ ಮಳೆಗೆ ಈ ಗೊರಬುಗಳು ರೈತರಿಗೆ ಮಳೆಯಿಂದ ರಕ್ಷಿಸಲು ಸಹಾಯಕಾರಿ ಹಾಗೂ ಗಟ್ಟಿಮುಟ್ಟಾಗಿರುತ್ತವೆ. ಈ ಗೊರಬುಗಳು ವಿಶೇಷವಾಗಿ ಬೈಲೂರು, ಕುಂದಾಪೂರ, ಕೋಟ, ಮುಂತಾದ ಕಡೆಗೆ ಹೆಚ್ಚು ಮಾರಾಟವಾಗುತ್ತವೆ. ಮುಂಗಾರು ಮಳೆ ಆರಂಭವಾಗುವುದಕ್ಕೆ ಮುನ್ನವೇ ನಾಲ್ಕು ತಿಂಗಳ ಮೊದಲೇ ಗೊರಬು ತಯಾರಿಕೆ ಆರಂಭವಾಗುತ್ತದೆ. ಹಸಿ ಎಲೆಗಳಿಂದ ನೇಯ್ಗೆ ಮಾಡಿದ ಗೊರಬುಗಳನ್ನು ಬೇಸಿಗೆಯಲ್ಲಿ ಒಣಗಿಸಿ ಮುಂಗಾರು ಆರಂಭದಲ್ಲಿ ಮಾರಾಟ ಮಾಡುತ್ತಾರೆ. ಒಬ್ಬ ವ್ಯಕ್ತಿ ದಿನಕ್ಕೆ ಎರಡರಿಂದ ಮೂರು ಗೊರಬು ತಯಾರಿಸಬಹುದು. ಹಿಂದೆ ಇಪ್ಪತ್ತು ಮೂವತ್ತು ರೂಪಾಯಿಗೆ ದೊರೆಯುತ್ತಿದ್ದ ಗೊರಬು ಇಂದು ನೂರು ರೂಪಾಯಿಗಳಿಗೆ ಮಾರಾಟವಾಗುತ್ತಿವೆ. ಪರಿಸರ ನಾಶದಿಂದಾಗಿ ಕಚ್ಚಾವಸ್ತು ದೊರೆಯುವುದು ಇಂದು ದುರ್ಲಭವಾಗಿದೆ.

ಪ್ಲಾಸ್ಟಿಕ್ ಕುಂಚಿಗೆ ಮಳೆಕೋಟುಗಳು ಹಾವಳಿಯಿಂದಾಗಿ ಈ ಗೊರಬುಕಲೆ ನಶಿಸಿಹೋಗುವ ಭೀತಿಯೂ ಇದೆ. ಮಳೆಯಲ್ಲಿ ಕೆಲಸ ಮಾಡುವ ರೈತರು ಬಿದಿರ ಕುಂಚಿಗೆ ಗೊರಬು ಉಪಯೋಗಿಸಿ ಧೋ ಧೋ ಸುರಿದ ಮಳೆಯಲ್ಲಿ ಕೆಲಸ ಮಾಡುವರು.

ಗೊಂಗಡ ಗೊಂಚಗಿ

ತಟ್ಟ ಗೊಂಚಗಿ

ಬಿದಿರ ಗೊಂಚಗಿ(ಗೊರಬು)

ಕೌದಿ ಕೊಂಚಗಿ – ಪ್ಲಾಸ್ಟಿಕ್ ಕುಂಚಗಿ.

ಇತ್ತೀಚೆಗೆ ಪ್ಲಾಸ್ಟಿಕ್ ಬಳಕೆ ಹೆಚ್ಚಾಗಿರುವುದರಿಂದ ಪ್ಲಾಸ್ಟಿಕ ಚೀಲ ಬಳಸಿ ಕುಂಚಿಗೆಯಂತೆ ತಲೆಯ ಮೇಲೆ ಹಾಕಿಕೊಳ್ಳುವರು. ಅಲೆಮಾರಿ ಜನಾಂಗ ಹಾಗೂ ಒಕ್ಕಲಿಗರು ಈ ಕುಂಚಿಗೆ ಬಳಸುವರು. ಗ್ರಾಮೀಣ ಹಿರಿಯರು ಕುಲಾಯಿ ಬಳಸುವರು. ಧಾರ್ಮಿಕ ದೃಷ್ಟಿಯಿಂದ ನೋಡಿದರೆ ಕುಂಚಿಗೆಗೆ ಪ್ರಾಧಾನ್ಯತೆ ಮಕ್ಕಳಾಗದ ಹೆಣ್ಣುಮಕ್ಕಳು ಜಾತ್ರೆ, ತೀರ್ಥಕ್ಷೇತ್ರ ಧಾರ್ಮಿಕ ಸ್ಥಳಗಳಲ್ಲಿಯ ಗಿಡಗಳಿಗೆ ಕುಂಚಿಗೆ ಕಟ್ಟುವರು. ಹೀಗೆ ಬೆಳಗಾವಿ ಜಿಲ್ಲೆಯಲ್ಲಿಯ ಸಂಕೇಶ್ವರದಲ್ಲಿಯ ಇಂಗಳೋಬಾ ದೇವರಿಗೆ ಹಾಗೂ ಲಗಮವ್ವನ ಜಾತ್ರಯಲ್ಲಿ ಕುಂಚಿಗೆ ಕಟ್ಟುವ ಸಂಪ್ರದಾಯ ವಿದೆ.

ಹಳ್ಳಿಯಲ್ಲಿ ಹಡೆದವರ ಮನಿಗ್ಹೋಗಿ ಕುಂಚಗಿ ಕೊಟ್ಟಬರುವ ವಾಡಿಕೆ ಇದೆ. ಕುಂಚಿಗೆಯು ಧಾರ್ಮಿಕ, ಸಾಂಸ್ಕೃತಿಕ ಆರ್ಥಿಕ ಕಲಾತ್ಮಕ ದೃಷ್ಟಿಯಿಂದ ಮಹತ್ವ ಪಡೆದಿದೆ.

ಕುಂಚಿಗೆ, ಕುಲಾಯಿ, ಕುಬಸ ಕೌದಿ, ದುಬಟಿ, ಹೊಲಿಯುವುದು ದೇಶಿಯ ಕಲೆ, ಕೆಲ ಹೆಣ್ಣುಮಕ್ಕಳ ಜೀವನಾಧಾರವೂ ಇದಾಗಿದೆ.

ಶಕುಂತಲಾ ಕೊಳಕಿ:- ಶಕುಂತಲಾ ದುಂಡಪ್ಪಾ ಕೊಳಕಿ ಕುಂಚಗಿ ಕಲಾವಿದರು. ತಂದೆ ರಾಜಶೇಖರ ತಾಯಿ ಅನ್ನಪೂರ್ಣ ಶಕುಂತಲಾ 1945ರಲ್ಲಿ ತಾಯಿಯ ತವರಾದ ಜನವಾಡದಲ್ಲಿ ಹುಟ್ಟಿದರು. ತಂದೆ ರಾಜಶೇಖರ ಅವರು ಸೀರೆ ಹಾಗೂ ಬಣ್ಣದ ವ್ಯಾಪಾರಿ, ಶಿಕ್ಷಣ ಪ್ರೇಮಿಗಳು ಆಗಿನ ಕಾಲದಲ್ಲಿ ಹೆಣ್ಣುಮಕ್ಕಳು ನಾಲ್ಕೂ ಜನರಿಗೆ ಶಿಕ್ಷಣ ನೀಡಿದವರು. ಶಕುಂತಲಾ ಕಲ್ಮಠದ ಸರಕಾರಿ ಶಾಲೆಯಲ್ಲಿ ಶಿಕ್ಷಣ ಪಡೆದರು.

ಆಗಿನ ಕಾಲದಲ್ಲಿ ಜನರು "ಹೆಣ್ಣುಮಕ್ಕಳಿಗ್ಯಾಕ ಸಾಲಿ?" ಅನ್ನುತ್ತಿದ್ದರು.

ಆದರೆ ತಂದೆಯ ಪ್ರೋತ್ಸಾಹದಿಂದ ಎಸ್.ಎಸ್.ಎಲ್.ಸಿ.ಯವರೆಗೆ ಶಕುಂತಲಾ ಶಿಕ್ಷಣ ಪಡೆದರು. ಶಕುಂತಲಾ ಶಿಕ್ಷಣ ಪಡೆದರು. ಶಕುಂತಲಾ ಬಹಳ ಪ್ರತಿಭಾನ್ವಿತ ವಿದ್ಯಾರ್ಥಿನಿ. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನೂರಕ್ಕೆ 86 ಅಂಕ ಪಡೆದು ಉತ್ತೀರ್ಣರಾದಳು. ರಾಜಶೇಖರಪ್ಪನವರ ನಾಲ್ಕೂ ಜನ ಹೆಣ್ಣುಮಕ್ಕಳು ಎಸ್.ಎಸ್.ಎಲ್.ಸಿ. ಉತ್ತೀರ್ಣರಾದಾಗ ಊರ ಜನರು ಮೊದಲಿಸಿ

"ಮನಿ ಮುಂದ ಬೋರ್ಡ ಹಾಕಿರಿ" ಎಂದು ಮಾತನಾಡುತ್ತಿದ್ದರು.

ಹೆಣ್ಣು ಮಕ್ಕಳು ಪೇಟೆಯಲ್ಲಿ ಹಾಯ್ದು ಶಾಲೆಗಳಿಗೆ ಹೋಗುವಂತಿರಲಿಲ್ಲ. ಹಿಂದಿನ ದಾರಿ ಕೆರೆಯ ಮೇಲಿನ ಹಾದಿಯಿಂದ ಶಾಲೆಗೆ ಹೋಗಬೇಕಾಗಿತ್ತು. ಅದು ದೂರಾಗುತ್ತಿತ್ತು ಅಂತಹ ಕಾಲವದು.

ಎಳೆತನದಲ್ಲಿ ಖೋ ಖೋ, ಕುಂಟಲಪಿ ಆಡುತ್ತ ಪ್ರತಿ ಹಬ್ಬ ಹುಣ್ಣಿಮೆಯನ್ನು ಆಚರಿಸುತ್ತ ಆಡುತ್ತ, ಹಾಡುತ್ತ ಬೆಳೆದ ಹುಡುಗಿ ಶಕುಂತಲಾ, ಗುಳ್ಳವ್ವನ ಹಬ್ಬದ ಹಾಡು ಇಂದಿಗೂ ನೆನಪಿಸುವಳು, ಗುಳ್ಳವನ ಹಬ್ಬಕ್ಕೆ ಚೀಟಿನ ಹೊಸ ಅಂಗಿ ಅಪ್ಪ ಹೊಲೆಸುತ್ತಿದ್ದರು. ಗುಳ್ಳದ ನಾಗರ

ಪಂಚಮಿ ಅಷ್ಟು ದೊಡ್ಡ ಹಬ್ಬಗಳು. ಹಳ್ಳದ್ದದಂಡೆ ಊಟ, ಕಿಚಿಡಿ ಎಳೆತನದ ಒಂದೊಂದು ನೆನಪು, ನಿಸರ್ಗದ ಆಟಗಳ ನೆನಪು, ಒಂದೊಂದು ಈಗ ಅವಳು ನೆನಿಸುತ್ತಾಳೆ.

ಶಕುಂತಲಾ ಮೈನೆರೆದ ಕೂಡಲೇ ಸೀರೆ ಉಡಲು ಪ್ರಾರಂಭಿಸಿದಳು. 15ನೇ ವಯಸ್ಸಿಗೆ ಮದುವೆಯಾಯಿತು. ಮದುವೆಯಾದ ಮೇಲೆಯೇ ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಬಂದಿತು. ಮನೆಯಲ್ಲಿ ಅತ್ತೆ, ಮಾವ, ಮೈದುನ, ನಾದುನಿ, ಮೈದುನ ಎಸ್.ಎಸ್.ಎಲ್.ಸಿಯಲ್ಲಿ ಅನುತ್ತೀರ್ಣಳಾಗಿದ್ದ. ಶಕುಂತಲಾ ಉತ್ತೀರ್ಣಳಾಗಿದ್ದಳು. ಅದರಲ್ಲೂ 100ಕ್ಕೆ 86 ಅಂಕ ಪಡೆದು. ಇದರಿಂದ ಅತ್ತೆಗೆ ತೀರ ಅಸಮಾದಾನವಾಗಿತ್ತು. ಶಕುಂತಲಾಳ ಗಂಡ ಅರಿವೆ ವ್ಯಾಪಾರಸ್ಥರು. ಅರಿವೆ ಹೊತ್ತು ಸಂತೆ ಸಂತೆಗೆ ವ್ಯಾಪಾರ ಮಾಡಿ ಬರುತ್ತಿದ್ದರು.

ಕೂಸಿಗೆ ಹೆಸರಿಡಲು ಯಾರಾದರೂ ಕರೆದರೆ ಶಕುಂತಲಾ ಕುಂಚಗಿ ಹೊಲೆದು ಕಾಣಿಕೆ ಕೊಡುತ್ತಿದ್ದಳು. ಹೀಗೆ ಒಂದು ಸಲ ಗಂಡನ ಗೆಳೆಯನ ಹೆಂಡತಿಯ ಕೂಸಿನ ನಾಮಕರಣ ಸಮಾರಂಭದಲ್ಲಿ ಒಂದು ಮುತ್ತಿನ ಕುಂಚಿಗೆ ಕಾಣಿಕೆಯಾಗಿ ನೀಡಿದ್ದಳು. ಕುಂಚಗಿ ಹೊಲೆದು ಗಂಡನ ಅರಿವೆಗಳೊಂದಿಗೆ ಕುಂಚಗಿ ಕುಲಾಯಿ ವ್ಯಾಪಾರ ಪ್ರಾರಂಭಮಾಡಿದಳು ಶಕುಂತಲಾ. ಕುಂಚಿಗೆ ಬೇಡಿಕೆ ಹೀಗೆ ಹೆಚ್ಚಾಗಿ ಬೆಂಗಳೂರು. ಮುಂಬೈ, ಪುಣೆ ಜನರಿಂದಲೂ ಬೇಡಿಕೆ ಬರಹತ್ತಿದ್ದವು. ಪರದೇಶಕ್ಕೂ ಶಕುಂತಲಾ ಹೊಲೆದ ಕುಂಚಿಗೆಗಳನ್ನು ರವಾನಿಸಲಾಗಿದೆ.

ಶಕುಂತಲಾ ತನಗೆ ಕೆಲಸ ಹೆಚ್ಚಾಗಿದ್ದಾಗ 20 ಜನ ಹೆಣ್ಣು ಮಕ್ಕಳಿಗೆ ಕೆಲಸವನ್ನು ಕೊಟ್ಟಿರುವಳು. ಕುಂಚಿಗೆ ಬಹುಪಯೋಗಿ. ಮನೆಯಲ್ಲಿ ಕುಳಿತು ಕೆಲಸ ಮಾಡಲು ಅನುಕೂಲ, ಗೃಹ ಕೈಗಾರಿಕಾಯಾಗಿದೆ. ಕುಂಚಿಗೆ ಜೊತೆಗೆ ಕುಲಾಯಿ ಬೇಡಿಕೆ ಇದ್ದರೆ ಅದನ್ನು ಹೊಲೆಯುವಳು. ಕುಲಾಯಿಗೆ ಹೆಚ್ಚಿಗೆ ಬೇಡಿಕೆ ಇರುವುದಿಲ್ಲ. ಕುಂಚಿಗೆ ಜೊತೆಗೆ ದುಪ್ಪಟ್ಟಿಗೂ ಬೇಡಿಕೆ ಇರುವುದರಿಂದ ಶಕುಂತಲಾ ದುಪ್ಪಟ್ಟಿಗಳನ್ನು ಹೊಲೆಯುವಳು. ತೊಡುವ ಝುಂಪರ, ಪರಕರ, ಅಂಗಿ ಮುಂತಾದ ಅರಿವೆಗಳನ್ನು ಕತ್ತರಿಸಿ ಹೊಲೆಯುವಾಗ ಉಳಿದ ಅರಿವೆಗಳನ್ನು ಜೋಡಿಸುವುದು. ಕೆಳಗೆ ದಪ್ಪನ ಅರಿವೆ ಹಚ್ಚಿ ದುಪ್ಪಟ್ಟಿ ತಯಾರಿಸುವರು. ದುಪ್ಪಟ್ಟಿಯಲ್ಲಿ ಸ್ವಸ್ತಿಕ, ಕಮಲ, ಶಂಕರಪಾಳಿ, ಹಲವಾರು ನಕ್ಷೆ ಮಾಡಿ ಬಣ್ಣ ಬಣ್ಣದ ಅರಿವೆಯಿಂದ ದುಪ್ಪಟ್ಟಿ ಸಿದ್ಧಪಡಿಸುವಳು ಶಕುಂತಲಾ. ಉಪಯೋಗಕ್ಕೆ ಬಾರದ ವಸ್ತ್ರಗಳಿಂದ ಅಂದಚೆಂದದ ದುಪ್ಪಟ್ಟಿ ಮಾಡಿ ಮಾರುವಳು. ಕುಂಚಗಿ, ಕುಲಾಯಿ, ಕುಪ್ಪಸ, ದುಪ್ಪಟ್ಟಿ, ಕೌದಿ ತಯಾರಿಸುವುದು ಒಂದು ಕಲೆ, ಹೀಗೆ ಶಕುಂತಲಾ ಮುತ್ತಿನ ಕುಂಚಿಗೆ, ಭಿಂಗ ಕುಂಚಿಗೆ, ಜುಲ್ಪಿ ಕುಂಚಿಗೆ, ಸಾದಾ ಕುಂಚಗಿ ಹೀಗೆ ಹಲವಾರು ಪ್ರಕಾರದ ಅಂದ ಚೆಂದದ ಕುಂಚಗಿ ತಯಾರಿಸುವ ಕಲಾವಿದೆ.

ನಿರ್ಮಲಾ ಸಂಗಪ್ಪ ಮಟ್ಟೀಕಲ್ಲಿ, ಕೋರೆಗಲ್ಲಿ ಶಹಾಪೂರ, ಬೀದರ, ಕುಂಚಗಿ ಕಲಾವಿದೆ. ಅವ್ವ ಶಾಂತವ್ವ, ಅಪ್ಪ ನಿರ್ಮಲಾ 22-08-1962 ರಲ್ಲಿ ಅತಿವಾಳದಲ್ಲಿ ಜನಿಸಿದಳು. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಅಕ್ಕಮಹಾದೇವಿ ಕನ್ಯಾಶಾಲೆ ಅತಿವಾಳದಲ್ಲಿ. ಒಟ್ಟು 6 ಜನ ಸಹೋದರ ಸಹೋದರಿಯರು. ಅಪ್ಪ ಶಿವಪ್ಪಾ ಎಣ್ಣೆ ವ್ಯಾಪಾರ ಮಾಡುತ್ತಿದ್ದರು. ಅವಿಭಕ್ತ ಕುಟುಂಬವಾದುದರಿಂದ

ಮನೆಯಲ್ಲಿ ಬಹಳ ಜನ. ಅವ್ವ ಶಾಂತವ್ವ ಬಹಳ ನಾಜುಕಿನಿಂದ ಇದ್ದುದ್ದರಲ್ಲಿ ಜೀವನ ನಡೆಸುತ್ತಿದ್ದರು. ಮನೆಯ ಜನರೆಲ್ಲರ ಅರಿವೆಗಳನ್ನು ಶಾಂತವ್ವಾ ಹೊಲೆಯುತ್ತಿದ್ದರು. ಎಳೆತನದಲ್ಲಿಯೇ ನಿರ್ಮಲಾ ತಾಯಿಯು ಹೊಲೆಯುವುದನ್ನು ನೋಡಿ ನೋಡಿ ಕಲಿತದ್ದೇ ಬಹಳ.

ಚಪ್ಪಿ, ಹಳ್ಳ, ಹಗ್ಗ, ಆಡುತ್ತ, ಹಳ್ಳದ ನೀರು ತರುತ್ತ, ಗುಳ್ಳವನಟ್ಟು ಮನೆಯ ಮುಂದಿನ ಗಣಪತಿಯ ಹಂದರದಲ್ಲಿ ಆಡಿ ಹಬ್ಬ ಹುಣ್ಣಿಮೆಯನ್ನು ಆಚರಿಸುತ್ತಾ ಬೆಳೆದಳು ನಿರ್ಮಲಾ.

ಎಸ್.ಎಸ್.ಎಲ್.ಸಿ ಅಕ್ಕಮಹಾದೇವಿ ಕನ್ಯಾ ಶಾಲೆಯಿಂದಲೇ ಪಾಸಾದಳು. ನಂತರ ಹೊಲಿಗೆ ತರಬೇತಿ ಪಡೆದಳು. ಸಂಗಪ್ಪ ಮಟ್ಟೀಕಲ್ಲಿಯವರೊಂದಿಗೆ ಇವಳ ವಿವಾಹವಾಯಿತು. ವಿವಾಹದ ನಂತರವೂ ಹೊಲಿಗೆಯನ್ನು ಮುಂದುವರೆಸಿಕೊಂಡು ಫ್ರಾಕ್, ಕುಂಚಗಿ, ಕುಲಾಯಿ ಹೊಲಿಯ ಹತ್ತಿದಳು. ಗುಡ್ಡಾಪೂರ ದಾನಮ್ಮನ ಭಕ್ತಳಾದ ಇವಳು ಬಸವಣ್ಣ ಹಾಗೂ ಶಿವಲಿಂಗಕ್ಕೆ ಗಲೀಪಗಳನ್ನು ಹೊಲೆಯುವಳು. ಪ್ಲಾಸ್ಟಿಕ್ ಮಯವಾದ ಇಂದಿನ ದಿನಗಳಲ್ಲಿ ಅರಿವೆ ಚೀಲ ಕುಂಚಿಗೆ ಹೊಲೆದು ಮಾರುವಳು. ಆದಾಯ ಅಷ್ಟಕ್ಕಷ್ಟೆ. ಮಾಡುವ ಹುಮ್ಮಸ್ಸು ಬಹಳ ಇದೆ. ಸ್ಪರ್ಧಾತ್ಮಕ ಇಂದಿನ ದಿನಗಳಲ್ಲಿ ಮನೆಯ ಮುಂದೆಯೇ ಈಗೊಂದು ಹೊಲಿಗೆ ಅಂಗಡಿ ಪ್ರಾರಂಭವಾಗಿರುವುದರಿಂದ ಮೊದಲಿನಷ್ಟು ಈಗ ವ್ಯಾಪಾರವಿಲ್ಲ. ಆದರೂ ಹಳೆಯ ಜನರು ಬಂದು ಕುಂಚಿಗೆ, ಮಾಡಿಕೊಂಡು ಹೋಗುವಳು. ಅದರಿಂದ ಹೇಳಿಕೊಳ್ಳುವಷ್ಟು ಆದಾಯ ಇಲ್ಲದಿದ್ದರೂ ಅಷ್ಟು ಇಷ್ಟು ಬರುತ್ತದೆ ಎನ್ನುವಳು ನಿರ್ಮಲಾ.

3.5 ರಂಗೋಲಿ

ರಂಗೋಲಿ ಜನಸಾಮಾನ್ಯರ ಕಲೆ. ರೂಢಿ ಸಂಪ್ರದಾಯದಿಂದ ಕೂಡಿದ ದೇವತಾರಾಧನೆ, ಮಂಗಲಕಾರ್ಯ, ಧಾರ್ಮಿಕ ಸಮಾರಂಭ ಶುಭಕಾರ್ಯಗಳಲ್ಲಿ ರಂಗೋಲಿಗೆ ಮೊದಲ ಪ್ರಾಶಸ್ತ್ಯ.

ಧಾರ್ಮಿಕ ಸಮಾರಂಭ ಪ್ರಾರಂಭವಾಯಿತೇ ಎಂದು ಕೇಳಲು ಪುರೋಹಿತರು "ಜೇಡಿಮಡಿ ಬರೆಯಲು ಶುರು ಮಾಡಿದರೇ?" ಎಂದು ವಿಚಾರಿಸುವರು. ಏಕೆಂದರೆ ಧಾರ್ಮಿಕ ಕಾರ್ಯಕ್ರಮಗಳು ಶುರುವಾಗುವುದೇ ರಂಗೋಲಿಯಿಂದೆ.

ವೃತ ರತ್ನಾಕರದಲ್ಲಿ "ಚಿನ್ನ ಬೆಳ್ಳಿ ಮುಂತಾದವುಗಳಿಂದ ಮೂರ್ತಿ ಮಾಡಿಸಿ ಪೂಜಿಸುವ ಅಥವಾ ದಾನ ಕೊಡುವ ಶಕ್ತಿ ಇಲ್ಲದವರು ರಂಗೋಲಿ ಬರೆದು ಪೂಜಿಸಬಹುದು. ಅಮೂಲ್ಯ ವಸ್ತು ದಾನ ಮಾಡಿದಷ್ಟೇ ಫಲ ಲಭಿಸುತ್ತದೆ." ಎಂದು ಹೇಳಿದೆ ಹೀಗೆ ಧರ್ಮದ ಹಿನ್ನೆಲೆಯಲ್ಲಿ ನಕ್ಷತ್ರ, ಗಣಪತಿ, ಪದ್ಮ ಮುಂತಾದ ಮಂಡಲಗಳ ತುದಿಗಳಿಗೆ ಹೊರಗಿನಿಂದ ವೃತ್ತಾಕಾರ ಸೇರಿಸಿ ಮಂಡಲಗಳು ಬಂದಿರಬಹುದು. ಮಂಡಲಗಳಿಗೆ ಅಲಂಕಾರ ಸೇರಿಸಿ ರಂಗೋಲಿ ಕಲೆ ಪ್ರಾರಂಭವಾಗಿರಬಹುದು. ವಿವಿಧ ಬಣ್ಣಗಳ ಅಲಂಕಾರದಿಂದ ರಂಗೋಲಿ ಪ್ರಾರಂಭವಾಗಿರಬಹುದು. ದೇವರ ಸಿರಸ್ಸು, ಹಸ್ತ ಪಾದ, ಓಂ, ಹ್ರೀಂ, ಶ್ರೀ, 'ಶ್ರೀ. ರಾಮ ಜಯರಾಮ' 'ಜಯಮಾರುತಿ' ದೇವರ ನಾಮಗಳನ್ನು ರಂಗೋಲಿಯಲ್ಲಿ ಬರೆಯುವರು.

ನಾಗಮಂಡಲ 12 ಅಡಿಗಳಷ್ಟು ಉದ್ದಗಲ ಇರುತ್ತದೆ. ಐದಾರು ಮಂದಿ ಆರೇಳು ಗಂಟೆಗಳ ಕಾಲ ಒಂದು ರಂಗೋಲಿ ಬಿಡಿಸುವರು. ಈ ರಂಗೋಲಿ ಅಂದ ನೋಡಬೇಕು.

ರಂಗೋಲಿಯಲ್ಲಿ ಸ್ವಸ್ತಿಕಕ್ಕೆ ಹೆಚ್ಚಿನ ಪ್ರಾಧಾನ್ಯತೆ, ಸ್ವಸ್ತಿಕ ಪದದ ಅರ್ಥ ಶುಭವನ್ನುಂಟು ಮಾಡುವುದು. ಎಂದು ಅರ್ಥ ಸ್ವಸ್ತಿಕದ ಅರ್ಥ ಜೀವನ ಚಕ್ರವು ತಿರಗುತ್ತಾ ಇದೆ. ಜಗತ್ತು ಪರಿವರ್ತನ ಶೀಲ ಆದರೂ ಸ್ಥಿರವಾದ ಕೇಂದ್ರ ಬಿಂದುವಿಗೆ ಅಂಟಿದೆ.

ಸ್ವಸ್ತಿಕದ ನಾಲ್ಕು ಬಾಹುಗಳು ಕೃತ, ತ್ರೇತಾ, ದ್ವಾಪರ, ಕಲಿಯುಗಗಳ ಸಂಕೇತ, ಇನ್ನೊಂದು ಅರ್ಥದಲ್ಲಿ ನಾಲ್ಕು ಪುರುಷಾರ್ಥಗಳ ಹಾಗೂ ಚತುರ್ವೇದಗಳ ಸಂಕೇತವೆಂದು ಅರ್ಥೈಸುತ್ತಾರೆ. ವ್ಯಾಪಾರಸ್ಥರು ಲೆಕ್ಕ ಪುಸ್ತಕದ ಮೇಲೆ ಸ್ವಸ್ತಿಕ ಬರೆಯುವ ಸಂಪ್ರದಾಯವಿದೆ. ಜೈನರ ಅಷ್ಟಮಂಗಲದಲ್ಲಿ ಸ್ವಸ್ತಿಕವೂ ಒಂದು. ಸ್ವಸ್ತಿಕದಂತೆ ಇನ್ನೊಂದು ಪ್ರಚಲಿತದಲ್ಲಿರುವುದು ಪದ್ಮ.

ನೈಜರೂಪವನ್ನು ಚಿತ್ರಿಸದೆ ಆಕೃತಿಗೆ ತಕ್ಕ ಚಿಹ್ನೆ ಸಂಕೇತವನ್ನು ಚಿತ್ರಿಸುವುದೇ ಸಾಂಕೇತಿಕ ಕಲೆ. ಧಾರ್ಮಿಕ ಸಂಕೇತಗಳನ್ನು ಚಿತ್ರಿಸುವುದೇ ರಂಗೋಲಿ. ಹಬ್ಬ ವ್ರತ ಆಚರಣೆಗಳಲ್ಲಿ ದೇವತೆಯ ಪೂರ್ಣ ಚಿತ್ರ ರಚಿಸದೆ ಕೇವಲ ಸಾಂಕೇತಿಕ ಚಿತ್ರ ಬಿಡಿಸುವರು. ಬಂಗಾಲದಲ್ಲಿಯ ಲಕ್ಷ್ಮಿಯ ವಾಹನ ಗೂಬೆ, ಕುಂಕುಮಕರಡಿಗೆ, ಕಣಜ, ಭತ್ತದ ತೆನೆ ಬಾಳೆಗಿಡ, ಹುಲ್ಲು, ನೇಗಿಲು, ಇವುಗಳೆಲ್ಲ ಧಾನ್ಯಲಕ್ಷ್ಮಿಯ ಸಂಕೇತಗಳು ಪೂರ್ಣ ಬುದ್ಧನನ್ನು ಚಿತ್ರಿಸದೇ ಕೇವಲ ಪಾದಗಳನ್ನು ಮಾತ್ರ ಚಿತ್ರಿಸುವರು. ದೇವರ ಮುಂದೆ ಬರೆಯುವ ರಂಗೋಲಿ ಶಂಖ, ಕಮಲ, ಪುಷ್ಪ, ನಾಮ, ಚಕ್ರ, ಸ್ವಸ್ತಿಕ ಮುಂತಾದವು ಶುಭ ಸಂಕೇತಗಳು.

ಗೌಡಬ್ರಾಹ್ಮಣರ ಮದುವೆ ಸಮಾರಂಭದಲ್ಲಿ ಬೆಳಗು ಸಂಜೆ ಎಂಬ ರಂಗೋಲಿ ಬರೆಯುವ ಸಂಪ್ರದಾಯವಿದೆ. ಅವರು ರಂಗೋಲಿಗೆ 'ಮಾಂಡನಾ' ಎಂದು ಕರೆಯುವರು. ಪ್ರಭಾತ ನಕ್ಷೆಯ ತುದಿಯಲ್ಲಿ ಕಾಗೆ ಕುಳಿತಿರುತ್ತದೆ. ಅದು ಅಲಾರ್ಮದ ಸಂಕೇತ. ಕೆಂಪುಮುಗಿಲು, ಹೂಭ್ರಮರಗಳು ಪ್ರಭಾತದ ರಂಗೋಲಿಯಲ್ಲಿ ಕಂಡರೆ ಸಂಜೆಯ ನಕ್ಷೆಯಲ್ಲಿ ಗೋವು, ನೇಗಿಲು, ಕೃಷಿಕ, ದೀಪ, ನಕ್ಷತ್ರಗಳು ಅಲಂಕರಿಸಲ್ಪಟ್ಟ ಶಯ್ಯೆ ದಂಪತಿಗಳ ಪಾದ ಕಾಣಿಸಿಕೊಳ್ಳುತ್ತವೆ.

ಹೀಗೆ ರಂಗೋಲಿ ಸಾಂಪ್ರದಾಯಿಕ ಧಾರ್ಮಿಕ ನೆಲೆಗಟ್ಟಿನಲ್ಲಿ ಬೆಳೆದುಕೊಂಡು ಬಂದು ಬೈಗುಬೆಳಕಿನಲ್ಲಿ ಮನೆಯ ಹೊಸ್ತಿಲು, ಅಂಗಳ ಅಲಂಕರಿಸುವ ಚಿತ್ತಾರವಾಗಿದೆ. ರಂಗೋಲಿಯ ಬೆಡಗು ಬಿನ್ನಾಣ ಅಂದಚೆಂದ ಪ್ರತಿಯೊಬ್ಬ ಹೆಣ್ಣುಮಕ್ಕಳಲ್ಲಿ ಕಂಡು ಬರುತ್ತದೆ. ಭಾರತೀಯ ಪ್ರತಿಯೋರ್ವ ಹೆಣ್ಣು ಕಲಾವಿದೆ. ಅವಳು ಚಿತ್ರ ಬರೆಯಲು ಶಕ್ತಳು.

ರಂಗೋಲಿ ಕಲ್ಲುಪುಡಿ ಅದಕ್ಕೆ ಬಣ್ಣಬೆರೆಸಿ ಚಿತ್ತ ಚಿತ್ತಾರದ ರಂಗೋಲಿ ಬಿಡಿಸುವರು. ಊರಿನಲ್ಲಿ ತೇರು ಎಳೆದಾಗ ರಂಗೋಲಿ, ಗೌರಿ ಹುಣ್ಣಿಮೆಯ ಬೆಳುದಿಂಗಳ ರಂಗೋಲಿ, ಸುಪ್ರಭಾತದ ರಂಗೋಲಿ, ಮಹಾರಾಷ್ಟ್ರದಲ್ಲಿ ಹದಗದ ರಂಗೋಲಿ. ಧರ್ಮಕಾರ್ಯ ಹಬ್ಬ ಹುಣ್ಣಿಮೆಯಲ್ಲಿ, ಸಾಮಾಜಿಕ ಸಮಾರಂಭಗಳಲ್ಲಿ, ರಾಷ್ಟ್ರೀಯ ದಿನಾಚರಣೆಗಳಲ್ಲಿ ರಂಗೋಲಿಗೆ ಪ್ರಾಶಸ್ತ್ಯ, ಋಷಿ ಮುನಿಗಳು, ಸಾಧು

ಸಂತರು. ಗೌರವಾನ್ವಿತರು, ಬರುವ ಬೀದಿಯ ಇಕ್ಕೆಲಗಳಲ್ಲಿ ರಂಗೋಲಿಯ ಚಿತ್ತಾರ ಕಂಗೊಳಿಸುತ್ತಿರುತ್ತದೆ. ಕಲಾಕಾರರು ರಂಗೋಲಿಯಲ್ಲಿ ತೊಡಗಿಸಿಕೊಂಡು ತಮ್ಮನ್ನು ಮರೆತು ರಂಗೋಲಿ ಬಿಡಿಸುವರು. ಅದಕ್ಕೆ ತಕ್ಕ ಅಂದದ ಬಣ್ಣ ತುಂಬುವರು. ದೀಪಾವಳಿ ನಾಡಹಬ್ಬಗಳಲ್ಲಿ ರಂಗೋಲಿ ಸರ್ವರ ಅಂಗಳ ಅಲಂಕರಿಸುವರು. ಪುಟ್ಟ ಪುಟ್ಟ ಮಕ್ಕಳು ರಂಗೋಲಿ ಮುಂದಿನ ಪೀಳಿಗೆಗೆ ನೀಡಿದ ಸಂಸ್ಕಾರ. ಪಾರಂಪರಿಕ ಕಲೆ ಸದ್ದು ಗದ್ದಲಗಳಿಲ್ಲದೇ ಸ್ವಾಭಾವಿಕವಾಗಿ ಪ್ರತಿಯೊಬ್ಬರೂ ಕಲಾಕಾರರಾಗಿ ಜಗದ ಅಂಗಳದಲ್ಲಿ ಬಣ್ಣ ಬಣ್ಣದ ಚಿತ್ತಾರ. ಭಾರತೀಯರ ಈ ಪರಿಕಲ್ಪನೆ ಎಷ್ಟು ಸುಂದರ. ಈ ರಂಗೋಲಿಯಲ್ಲಿ ಸಾಕಷ್ಟು ಸಾಧಿಸಿರುವವರು ಇರುವರು.

ರಂಗೋಲಿ ಕಲಾವಿದೆಯರು

ಜ್ಯೋತಿ ವಾಲೆ

ಜ್ಯೋತಿ ವಾಲೆ ಬೀದರದವಳು ಮಹಾರಾಷ್ಟ್ರದ ಮಂಥಾದಲ್ಲಿ 12 ನೇ ಜನೇವರಿ 1969ರಲ್ಲಿ ಜನಿಸಿದಳು. ತಾಯಿ ರತ್ನಪ್ರಭಾ ತಂದೆ ಶ್ರೀ ನಾರಾಯಣ ಕಸತ್ ಇವರದು ಅವಿಭಕ್ತ ಕುಟುಂಬ ಜ್ಯೋತಿಗೆ ಮೂವರು ಸಹೋದರಿಯರು ಇಬ್ಬರು ಸಹೋದರರು. ಎಳೆತನದಲ್ಲಿಯೇ ಜ್ಯೋತಿ ಪ್ರತಿಭಾವಂತೆ. ಜ್ಯೋತಿಯ ತಾಯಿ ರತ್ನಪ್ರಭಾ ಮಣ್ಣಿನ ವಿವಿಧ ಮೂರ್ತಿಗಳನ್ನು ಮಾಡುತ್ತಿದ್ದರು. ಅದರಿಂದ ಸಾಕಷ್ಟು ಸ್ಫೂರ್ತಿ ಪಡೆದ ಇವಳು ರಂಗೋಲಿ ಮೆಹಂದಿ ಬಿಡಿಸುವ ಚಿತ್ರ ಕಲೆ ಆರು ವರುಷದವಳಿರುವಾಗಲೇ ಪ್ರಾರಂಭಿಸಿದಳು ಇವಳ ಕಲೆಯನ್ನು ಮೆಚ್ಚಿ ತಂದೆತಾಯಿ ಬಹಳ ಪ್ರೋತ್ಸಾಹಿಸಿದರು. ಜ್ಯೋತಿ ಉಪಯೋಗವಿಲ್ಲದೆ ಒಗೆದ ವಸ್ತುಗಳಲ್ಲಿ ಅಂದದ ಕಲಾಕೃತಿ ಮಾಡುತ್ತಿದ್ದಳು. ಬೆಳೆಯುತ್ತ ಬೆಳೆಯುತ್ತ ಜ್ಯೋತಿ ರಂಗೋಲಿ ತರಗತಿಗಳನ್ನು ಪ್ರಾರಂಭಿಸಿ ಮನೆಗೆ ಸಹಾಯ ಮಾಡಹತ್ತಿದಳು.

ಬಿ.ಎ. ಪದವೀಧರೆಯಾದ ಜ್ಯೋತಿಯ ವಿವಾಹ 1992 ರಲ್ಲಿ ಬೀದರ ರಮೇಶ ಚಿಂಡಕ ಅವರೊಂದಿಗೆ ಆಯಿತು. ವಾಲೆ ಅವರ ಮನೆತನವೂ ಅವಿಭಕ್ತ ಕಲೆಗೆ ಪ್ರೋತ್ಸಾಹವಿತ್ತರು. ವಾಲೆ ಮನೆತನದ ಕಿರಿಯ ಸೊಸೆ ಜ್ಯೋತಿ. ಮೂರನೇಯ ಸೊಸೆ ಸಂಗೀತಾ. ಜ್ಯೋತಿಯ ಕಲೆಗೆ ಸರ್ವರೀತಿಯ ಸಹಕಾರ ನೀಡುತ್ತಾಳೆ, ಅವಳು ರಂಗೋಲಿ ಬಿಡಿಸುತ್ತಿದ್ದರೆ ಇದ್ದಲ್ಲಿಯೇ ಊಟ. ಚಹ, ಫಲಾಹಾರ ನೀಡುವಳು ಇಷ್ಟು ಅನ್ಯೋನ್ಯತೆ ಅವರಿಬ್ಬರಲ್ಲಿ.

ಕಳೆದ ಇಪ್ಪತ್ತು ವರುಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರುವ ಜ್ಯೋತಿ ಅದ್ಭುತ ಶ್ರೇಷ್ಠ ಕಲಾವಿದೆ. ಅವಳು ರಂಗೋಲಿ ಕಲೆಯಲ್ಲಿ ಸಾಧಿಸಿದ ಸಾಧನೆ ಮಹತ್ವದ್ದು ಅವಳು ಹತ್ತಾರು ಪ್ರಕಾರಗಳಲ್ಲಿ ರಂಗೋಲಿ ಬಿಡಿಸುವಳು.

ಕಲ್ಲುಪುಡಿ ರಂಗೋಲಿ, ದಪ್ಪ ಉಪ್ಪಿನ ರಂಗೋಲಿ, ಉಸುಕಿನ ರಂಗೋಲಿ, ಅಕ್ಕಿ ರಂಗೋಲಿ, ಮಾರ್ಬಲ್ ರಂಗೋಲಿ, ನೀರಿನ ಒಳಗೆ ರಂಗೋಲಿ, ನೀರಿನ ಮೇಲೆ ರಂಗೋಲಿ, ಸ್ಪಾರ್ಕಲ್ ರಂಗೋಲಿ, ಥರ್ಮಾಕಾಲ ರಂಗೋಲಿ, ಅಕ್ಕಿತೌಡಿನ ರಂಗೋಲಿ, ಕವಡಿಯ ರಂಗೋಲಿ,

ಕನ್ನಡಿಯಲ್ಲಿ ರಂಗೋಲಿ ಬಳೆಚೂರು ರಂಗೋಲಿ, ಕುಂದನರಂಗೋಲಿ, ಪೋಸ್ಟರ್ ರಂಗೋಲಿ, ಸ್ಟೆನ್ಸಿಲ್ ರಂಗೋಲಿ.

ಅಬ್ಬಾ, ನೋಡಿದ ವಸ್ತುವನ್ನೆಲ್ಲ ತನ್ನ ಕಲೆಗೆ ಬಳಸಿಕೊಳ್ಳುವಳು. ಯಾವುದೇ ವಸ್ತುವನ್ನು ಕಲೆಗಾಗಿ ಬಳಸಿಕೊಳ್ಳುವ ಕಲಾವಿದೆಯ ಸಾಧನೆ ಬಲುದೂರ. ಅವಳ ಕಲಾಯಾತ್ರೆಗೆ ವಿಶೇಷವಾಗಿ ಕೃಷ್ಣರಾಧೆ, ರುಕ್ಮಿಣಿ ಕೃಷ್ಣ ಲೀಲೆಗಳು ನಿಸರ್ಗ, ಪ್ರಾಣಿ, ಪಕ್ಷಿಗಳು, ಕೃಷಿಕ ಹೀಗೆ ಅನೇಕ ವಸ್ತು ಕಥೆಗಳು ಪ್ರಭಾವ ಬೀರಿವೆ. ಅವಳು ತೆಗೆಯುವುದೇ 32ಥ32 ಚದುರ ಅಡಿ ರಂಗೋಲಿಗಳನ್ನು ಎಂಥಹ ಬಣ್ಣಗಳು ಚಿತ್ತಾರ ಗಿಡಬಳ್ಳಿ, ನೀರು ಝರಿ, ಪಕ್ಷಿ ಒಂದೊಂದು ತುಂಬಿಕೊಂಡು ನಿಂತ ಹಾಗೆ ಕಾಣಿಸುತ್ತವೆ.

ಜ್ಯೋತಿ ಅತೀ ದೊಡ್ಡ ರಂಗೋಲಿ ಬಿಡಿಸುವುದರಲ್ಲಿ ವಿಶ್ವದಾಖಲೆ ಸಾಧಿಸಿರುವಳು. ಅವಳು ಬಿಡಿಸಿದ ರಂಗೋಲಿ 3500 ಚದುರ ಅಡಿಯದು. ಇದು ಝೀ.ಟಿ.ವಿ. ಯಲ್ಲಿಯೂ ಬಿತ್ತರಗೊಂಡು ಶಹಬಾಷ್ ಇಂಡಿಯಾದವರು ಇವಳಿಗೆ 85,000 ರೂಪಾಯಿಯ ಸೀರೆ ಕಾಣಿಕೆ ಇಟ್ಟು ಗೌರವಿಸಿದರು.

ಸಧ್ಯ ಜ್ಯೋತಿ 30,000 ಚದುರ ಅಡಿ ರಂಗೋಲಿಯನ್ನು ಗ್ಲೋಬಲ್ ವಾರ್ಮಿಂಗ್. ವಿಷಯದ ಮೇಲೆ ಎಂಟು ತಾಸುಗಳಲ್ಲಿ ಬಿಡಿಸುವ ಸಿದ್ಧತೆಯಲ್ಲಿರುವಳು.

ಜ್ಯೋತಿ ಕೃಷ್ಣ ಜನ್ಮಾಷ್ಟಮಿ ದೀಪಾವಳಿಯಲ್ಲಿ ಅಲಂಕರಿಸುವ ಮನೆಯನ್ನು ನೋಡಲು ಬಹಳ ಜನ ಬರುವರು. ಅದಕ್ಕೆ ತಗಲುವ ವೆಚ್ಚಕ್ಕೆ ಹಿಂದೆ ಮುಂದೆ ನೋಡುವುದಿಲ್ಲ. ಪತಿ ರಮೇಶ ವಾಲೆ ಸಹಕಾರ ಬಹಳ ಇದೆ.

ಜ್ಯೋತಿ ಅನೇಕ ಪ್ರಶಸ್ತಿಗಳನ್ನು ಪಡೆದಿರುವಳು. ಮಹಿಳಾ ದಿನಾಚರಣೆಯಂದು 'ಬೆಸ್ಟ್‌ವುಮೆನ್ ಪ್ರಶಸ್ತಿ' ಪಡೆದ ಈಕೆ ಬೀದರ ಕ್ಲಬ್ ಮೈತ್ರಿಕ್ಲಬ್‌ದಿಂದ ಸನ್ಮಾನ ಪಡೆದಿರುವಳು. ಸಮಾಜ ಕಾರ್ಯಕರ್ತೆಯಾಗಿ ಕೆಲಸ ನಿರ್ವಹಿಸುತ್ತಿರುವ ಈಕೆ 5000 ತರುಣ ಪೀಳಿಗೆಗೆ ರಂಗೋಲಿ ತರಬೇತಿ ನೀಡಿರುವಳು. ಈ ದೃಷ್ಟಿಯಲ್ಲಿ ಪು. ಲ. ದೇಶಪಾಂಡೆ ಖ್ಯಾತ ಮರಾಠಿ ಸಾಹತಿಗಳ ಉಕ್ತಿಯನ್ನು ನೆನೆಯುತ್ತ.

"ಉಪಜೀವನಕ್ಕಾಗಿ ಅವಶ್ಯವಾಗಿರುವ ಶಿಕ್ಷಣವನ್ನು ಪಡೆಯಿರಿ. ಆದರೆ ನಂತರ ಅದಕ್ಕೆ ಕಲೆಯ ನಂಟು ಬೆಳೆಸಿ ಉಪಜೀವನದ ಶಿಕ್ಷಣ ನಿಮ್ಮನ್ನು ಬದುಕಿಸುತ್ತದೆ. ಕಲೆಯೂ ಬದುಕುತ್ತದೆ. ಕಲೆಯ ಬದುಕಿಗಾಗಿ ಪರಿಸರ ನಿರ್ಮಾಣ ಮಾಡಿ. ಸ್ವಾಭಾವಿಕವಾಗಿಯೇ ಮನುಷ್ಯ ಸೌಂದರ್ಯದ ಉಪಾಸಕ. ಸೌಂದರ್ಯ ಪ್ರಜ್ಞೆ ಯಾವಾಗಲೂ ನಮ್ಮ ಸುತ್ತ ಮುತ್ತಲಿನ ಪರಿಸರವನ್ನು ಸುಂದರಗೊಳಿಸುತ್ತದೆ. ಸೌಂದರ್ಯ ಯಾರಿಗೆ ಹಿಡಿಸುವದಿಲ್ಲ? ಮನುಷ್ಯ ಮಾತ್ರವಲ್ಲ ದೇವರೂ ಸೌಂದರ್ಯೋಪಾಸಕ" ಎಂದು ಜ್ಯೋತಿ ಕಲೆ ಹಾಗೂ ಸೌಂದರ್ಯ ಪ್ರಜ್ಞೆಯ ನಂಟನ್ನು ಬಿಚ್ಚಿಟ್ಟಳು.

ರಂಗೋಲಿಗೂ ನೈರ್ಮಲ್ಯಕ್ಕೂ ಅಗಾಧವಾದ ಸಂಬಂಧ ಈ ಸೌಂದರ್ಯ ನೈರ್ಮಲ್ಯದಲ್ಲಿಯೇ ದೇವರ ವಾಸಸ್ಥಾನವಿರುವುದು. ಮುಂಜಾವಿನಲ್ಲಿ ಅಂಗಳ ಕಸಗೂಡಿಸಿ ನೀರಥಳಿ ಹಾಕಿ ರಂಗೋಲಿ ಬಿಡಿಸುವುದು. ನೈರ್ಮಲ್ಯ, ಆರೋಗ್ಯ, ಸಂಪತ್ತು. ಶುಭ ಸೂಚಕದ ಸಂಕೇತ. ರಂಗೋಲಿ ಅಮೌಲ್ಯ ಆವಿಷ್ಕಾರ. ಭಾರತದ ವಿವಿಧ ಪ್ರಾಂತಗಳಲ್ಲಿ ವೈವಿಧ್ಯಮಯ ರಂಗೋಲಿ ಬಿಡಿಸುವರು. ಈ ದೃಷ್ಟಿಯಲ್ಲಿ ರಂಗೋಲಿ ಕಲೆ ತಲೆತಲಾಂತರದಿಂದ ಪಾರಂಪರಿಕವಾಗಿ ಬಂದ ಕಲೆ ಎಂತಲೇ ಅದರಲ್ಲಿಯ ಒಂದು ವಿಭಾಗವೇ ಸಂಸ್ಕಾರ ಭಾರತಿ ರಂಗೋಲಿ ಎಂದು ಹೆಸರಿಸುವುದು. ಜ್ಯೋತಿಯ ಇಬ್ಬರು ಮಕ್ಕಳು ನಿಖಿಲ್ ಅನಿಕೇತ ಇಬ್ಬರೂ ಕಲೆಯಲ್ಲಿ ಪ್ರತಿಭಾನ್ವಿತರು.

ಜ್ಯೋತಿ ರಂಗೋಲಿ ಕಲೆಯಲ್ಲಿ ಇನ್ನೂ ಹೊಸ ಹೊಸ ಅವಿಷ್ಕಾರಗಳನ್ನು ಕಂಡುಕೊಳ್ಳುವ ಮಹಾನ್ ಕಲಾವಿದೆ.

ಪಾರಂಪರಿಕ ರಂಗೋಲಿ ಕಲೆಗೆ ಶಿಲ್ಪಕಲೆಯ ನಂಟನ್ನು ಬೆಳೆಸಿದವಳು (ಶಿಲ್ಪಾ ಬಾಗೇವಾಡಿ ಬೀದರದಲ್ಲಿ ಹೊಯ್ಸಳರ ಕಾಲದ ಕಮಲಬಸದಿ ಬಹಳ ಪ್ರಸಿದ್ಧವಾದುದು. ಇಲ್ಲಿ ಹೊಯ್ಸಳರ ಕಾಲದ ಶಿಲ್ಪಕಲೆ ಅರಳಿ ನಿಂತಿದೆ. ಈ ಬಸದಿಯ ಮೇಲ್ಚಾವಣಿಯಲ್ಲಿರುವ ಶಿಲ್ಪ ಕಲೆಯನ್ನು ರಂಗೋಲಿಗೆ ಇಳಿಸಿದವಳು ಶಿಲ್ಪಾ.)

ಶಿಲ್ಪಾ ಜನಿಸಿದ್ದು ದಿನಾಂಕ 28/11/1972 ರಂದು, ಚಿಕ್ಕಪೇಟನಲ್ಲಿ. ತಾಯಿ. ಶೀಲಾ, ತಂದೆ ಬಾಬುರಾವ ಅಲ್ಲಾಪುರ. ಅಲ್ಲಾಪುರೆ ದಂಪತಿಗಳಿಗೆ ನಾಲ್ಕು ಜನ ಹೆಣ್ಣು ಮಕ್ಕಳು. ವಿಜೇತಾ, ಶಿಲ್ಪಾ ಪ್ರಿಯಾ, ಅನುರಾಧಾ, ನಾಲ್ಕು ಜನರೂ ಕಲಾವಿದರು.

ತಾಯಿ ಶೀಲಾ ಕಲಾವಿದೆ. ಆಲವರ್ಣ, ತೈಲವರ್ಣ ಚಿತ್ರ ಬಿಡಿಸುತ್ತಿದ್ದರು. ಮಕ್ಕಳಿಗೆ ಮುಂಜಾನೆ ಅಂಗಳದಲ್ಲಿ ಕಡ್ಡಾಯವಾಗಿ ರಂಗೋಲಿ ಬಿಡಿಸಲು ಹೇಳುತ್ತಿದ್ದರು. ಮಕ್ಕಳಿಗೆ ಬಣ್ಣ ಬಣ್ಣದ ರಂಗೋಲಿ ಬಿಡಿಸುವುದೆಂದರೆ ಸಂತೋಷ, ಹೀಗಾಗಿ ನಾಲ್ಕನೇಯ ತರಗತಿಯಲ್ಲಿಯೇ ರಂಗೋಲಿ ಬಿಡಿಸುವ ಹವ್ಯಾಸ ಬೆಳೆದುಕೊಂಡು ಬಂದಿತು. ರಂಗೋಲಿ ಜೊತೆಗೆ ಸಂಜೆ ಅಂಗಳದಲ್ಲಿ ಚಪ್ಪಿ. ಮುಟ್ಟಾಟ, ಕಣ್ಣು ಮುಚ್ಚಾಲೆ, ಉಪ್ಪುಪ್ಪ ಆ ಸುಂದರವಾದ ಪರಿಸರದಲ್ಲಿ ಗೆಳತಿಯರೊಂದಿಗೆ ಅಕ್ಕ ತಂಗಿಯರ ಜೊತೆ ಆಡುತ್ತ ಪ್ರಕೃತಿ ಸೌಂದರ್ಯದಲ್ಲಿ ಬೆಳೆದ ಶಿಲ್ಪಾ ಶಾಲಾ ಕಾಲೇಜು ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಳು. ಯಾವುದೇ ರಾಷ್ಟ್ರೀಯ ಹಬ್ಬ ಅಥವಾ ಶಾಲಾ ಸ್ನೇಹ ಸಮ್ಮೇಲನ ವಿದ್ದರೆ ಇವಳದೇ ಅಲಂಕಾರ.

ಬಿ.ಎ. ಪದವೀಧರೆಯಾದ ಈಕೆಯನ್ನು ಸಚಿನ್ ಚಿಟ್ಟಾವಾಡಿಯವರಿಗೆ ಮದುವೆ ಮಾಡಿಕೊಟ್ಟರು. ಇವರದೂ ಅವಿಭಕ್ತ ಕುಟುಂಬ. ಮನೆಯಲ್ಲಿ ಅತ್ತೆ, ಮಾವ ಮೈದುನರೆಲ್ಲರದೂ ಇವರಿಗೆ ಪ್ರೋತ್ಸಾಹ. ಎಲ್ಲರ ಸಹಕಾರದಿಂದ ಇವಳ ಕಲೆ ಮುಂದುವರೆದಿದೆ.

ಶಿಲ್ಪಾ ಭಾರತೀಯ ಸಾಂಪ್ರದಾಯಿಕ ಹಬ್ಬಗಳಲ್ಲಿ ರಂಗೋಲಿ ಕಲೆಗೆ ಎಷ್ಟು ಪ್ರಾಧ್ಯಾಯತೆ ಎನ್ನುವದನ್ನು ಹೇಳುತ್ತ "ದೀಪಾವಳಿ ಮಹಾನವಮಿ ಉಗಾದಿ ಹಬ್ಬದ ಪ್ರಸಂಗಗಳಲ್ಲಿ ಊಟದ

ತಾಟಿನ ಸುತ್ತ ರಂಗೋಲಿ ಮತ್ತು ಮದುವೆಯ ವಧುವರರ ತಾಟಿನ ಸುತ್ತ, ಕುಬಸದ ದಿನ ಕುಬಸದ ಹೆಣ್ಣುಮಗಳ ಎಡ ಬಲ ಬದಿಯಲ್ಲಿ ಐದ್ಯೆದು ಸಮಯ ಇಟ್ಟು ದೀಪ ಬೆಳಗಿನ ಸಮಯಗಳ ಸುತ್ತಲೂ ರಂಗೋಲಿ ಬಿಡಿಸುವರು ಎಂದು ನೆನಪಿಸಿಕೊಂಡಳು.

ಶಿಲ್ಪಾ ಜಲರಂಗೋಲಿ, ಪುಷ್ಪ ರಂಗೋಲಿ, ಧಾನ್ಯ ರಂಗೋಲಿ, ಬಳೆಚೂರು ರಂಗೋಲಿ, ಸಾಂಪ್ರದಾಯಿಕ ಕಲ್ಲುಪುಡಿ ರಂಗೋಲಿ, ಸಂಸ್ಕಾರ ಭಾರತಿ ರಂಗೋಲಿ ಬಿಡಿಸುವಳು.

ಬೀದರನ ಭುವನೇಶ್ವರಿ ಉತ್ಸವ, ಜ್ವಾಯಿಂಟ್ ಗ್ರುಪ್ಸ್, ಗಣೇಶ ಉತ್ಸವ ಮಂಡಲ, ಮಾಣಿಕಬಾಗ ಮಂಡಳ ಸಂಸ್ಥೆಗಳಿಂದಲ್ಲದೆ ಇನ್ನೂ ಸಾಕಷ್ಟು ಪ್ರಥಮ ಬಹುಮಾನಗಳನ್ನು ಪಡೆದಿರುವಳು. ಹೀಗೆ ತಾಯಿಯಿಂದ ಬಂದ ರಂಗೋಲಿ ಕಲೆ ಜೀವನದ ಆನಂದದ ಕ್ಷಣಗಳನ್ನು ಅನುಭವಿಸಲು ಇಂದಿಗೂ ಸಂಗಾತಿಯಾಗಿದೆ. ಮಗಳು ಸಾಕ್ಷಿಕೂಡ ಇಂದು ರಂಗೋಲಿ ಬಿಡಿಸುವಳು. ಅಂಗಳದಲ್ಲಿ ರಂಗೋಲಿ ಬಿಡಿಸುವ ಆನಂದವೇ ಬೇರೆ ಎನ್ನುವಳು ಶಿಲ್ಪಾ.

ಏಕಾಂಗಿಯಾಗಿ ಕಲೆ ಹಾಗೂ ಸಾಹಿತ್ಯವನ್ನು ಬೆಳೆಸಿಕೊಂಡು ಬಂದವಳು ಲೀಲಾ. ತಾಯಿ ಕಮಲಾ, ತಂದೆ ಫಕೀರಗೌಡ ಪಾಟೀಲ ಅಬಕಾರಿ ಇಲಾಖೆಯಲ್ಲಿ ಅಧಿಕಾರಿಗಳು. 31/07/1951ರಲ್ಲಿ ಜನಿಸಿದ ಎಳೆತನದಲ್ಲಿ ಏಕಾಂಗಿಯಾಗಿಯೇ ಚಿತ್ರ ರಂಗೋಲಿ ಬರೆಯುವ ಗೀಳು ಇವಳಿಗೆ. ಒಬ್ಬಳೇ ಕುಳಿತುಕೊಂಡು ಹತ್ತು ಹಲವಾರು ಚಿತ್ರಗಳನ್ನು ರಂಗೋಲಿಗಳನ್ನು ಬಿಡಿಸುವಳು. ಹಾಗೇ ಬೆಳೆಯುತ್ತ ಕಲಾ ಹವ್ಯಾಸವನ್ನು ಬೆಳೆಸಿಕೊಂಡು ಬಂದಳು. ಶಾಲಾ ದಿನಗಳಲ್ಲಿ ಎಲ್ಲ ಉತ್ಸವಗಳಲ್ಲಿ ಇವಳದೇ ಚಿತ್ತಾರದ ರಂಗೋಲಿ. ರಂಗೋಲಿಗಾಗಿ ಎಳೆ ವಯಸ್ಸಿನಲ್ಲಿಯೇ ಅನೇಕ ಬಹುಮಾನ ಪಡೆದಳು.

ರಾಜಾ ಲಖಮಗೌಡ ವಿಜ್ಞಾನ ಮಹಾ ವಿದ್ಯಾಲಯದಿಂದ ವಿಜ್ಞಾನ ಪದವಿ ಪಡೆದ ಈಕೆಯ ವಿವಾಹ ಬೀದರ ತಾಲೂಕ ಜನವಾಡ ಗ್ರಾಮದ ಕಲ್ಲಪ್ಪ ಚೌಗಲೆಯವರೊಂದಿಗೆ ಆಯಿತು. ಗಂಡನ ಮನೆಯಲ್ಲಿಯೂ ಎಲ್ಲ ರೀತಿಯಿಂದ ಪ್ರೋತ್ಸಾಹ ಪಡೆದ ಲೀಲಾ ಬಾಟಿಕ್ ಪೇಂಟಿಂಗ್, ಸಿರ‍್ಯಾಮಿಕ್, ಚಾಕ್ ಪೌಡರ್, ಹೂವಿನ ರಂಗೋಲಿ ಬಿಡಿಸುವಳು. ಉಸುಕು, ಭತ್ತದತೌಡು, ಧಾನ್ಯ, ಮಣ್ಣಿನ ಪುಡಿ ಇವುಗಳಿಂದ ರಂಗೋಲಿ ಬಿಡಿಸುವ ಈಕೆ ಪಡೆದ ಬಹುಮಾನಗಳು ಅನೇಕ.

ಜನವಾಡದ ಗಾರ್ಡನರ್ಸ ಕ್ಲಬ್‌ದಿಂದ ಹೂವಿನ ಅಲಂಕಾರಕ್ಕಾಗಿ ಬಹುಮಾನ ಪಡೆದಿರುವ ಲೀಲಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸುವ ರಾಜ್ಯಮಟ್ಟದ ರಂಗೋಲಿ ಸ್ಪರ್ಧೆಯಲ್ಲಿ ತಾಯಿ ಮಗು ರಂಗೋಲಿಗಾಗಿ ಪ್ರಥಮ ಬಹುಮಾನ ಪಡೆದಿರುವಳು. ಅನುಪಮಾ ಜ್ಯೋತಿಯವರು 2009 ರಲ್ಲಿ ವಿಶ್ವಮಾತೃ ದಿನಾಚರಣೆಯ ಅಂಗವಾಗಿ ಏರ್ಪಡಿಸಿದ ರಂಗೋಲಿ ಸ್ಪರ್ಧೆಯಲ್ಲಿ ಪ್ರಥಮ. ಬೀದರದಲ್ಲಿ ಅದ್ದೂರಿಯಾಗಿ ಜರಗುವ ಶಾರದೋತ್ಸವ ಹಾಗೂ ಭುವನೇಶ್ವರಿ ಉತ್ಸವಗಳಲ್ಲಿ ಪ್ರಥಮ ಬಹುಮಾನ ಪಡೆದ ಈಕೆ ಸಾಹಿತಿ, ನಾಟಕ ಕಲಾವಿದೆ. ಕನ್ನಡದ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಕನ್ನಡಾಭಿಮಾನ.

"ಕಲೆಯಲ್ಲಿ ನಾನು ತೃಪ್ತಿ ಆನಂದವನ್ನು ಕಂಡುಕೊಂಡಿದ್ದೇನನ್ನುವಳು ಲೀಲಾ ಚೌಗಲೆ"

ಬೀದರ ತಾಲೂಕ ಮನ್ನಳ್ಳಿ ಗ್ರಾಮದ ಸುನಂದಾ ಮುಳೆ ಬಹುಮುಖ ವ್ಯಕ್ತಿತ್ವದ ಕಲಾವಿದೆ. ತಂದೆ ವಿಠೋಬರಾವ್ ಧಾವಸ್ಕರ್ ತಾಯಿ ಕೃಷ್ಣಾಬಾಯಿ ಚೊಂಡಿ 27/6/1950 ರಲ್ಲಿ ಹುಟ್ಟಿದ ಈಕೆ ಎಳೆತನದಲ್ಲಿಯೇ ಹಾಡು ಹಸೆ ಹವ್ಯಾಸ ಬೆಳೆಸಿಕೊಂಡವಳು. ನಾಲ್ಕು ಜನ ಸಹೋದರಿಯರು ಇಬ್ಬರು ಸಹೋದರರು. ಕನ್ನಡ ಪ್ರಾಥಮಿಕ. ಮಾಧ್ಯಮಿಕ ಅಭ್ಯಾಸವನ್ನು ಚೊಂಡಿಯಲ್ಲಿ ಪೂರೈಸಿದ ಈಕೆ ತಾಯಿಯಿಂದಲೇ ಕಲೆಯ ಪ್ರೇರಣೆ ಪಡೆದಾಕೆ. ತಂದೆ ಅರಿವೆ ವ್ಯಾಪಾರಸ್ಥರು ಚೊಂಡಿಯಲ್ಲಿ ದೊಡ್ಡಮನೆ. ಮನೆಯಲ್ಲಿ ನಾಲ್ಕು ಹಸು ಎಮ್ಮೆ ಸುನಂದ ಚಿಕ್ಕವಳಿರುವಾಗ ಸಂಜೆ ತಾಯಿ ಕೃಷ್ಣಾ ಬಾಯಿಯವರು ಮಕ್ಕಳಿಗೆ ಹಾಡು ಹೇಳುವರು. ಅಲ್ಲದೇ ಕಥೆಗಳನ್ನು ಹೇಳುವರು.

"ಬೆಳಗು ಹರಿಯುವ ಮುನ್ನ ಅಂಗಳ ಗೂಡಿಸಿ ಶಗಣಿಯಿಂದ ಸಾರಿಸಿ ರಂಗೋಲಿ ಬಿಡಿಸಬೇಕು. ಎಲ್ಲ ಗೆಳತಿಯರಿಗಿಂತ ನಿಮ್ಮ ರಂಗೋಲಿ ಸುಂದರ ಆಗಬೇಕು. ಯಾರೂ ಏಳುವ ಮೊದಲೇ ರಂಗೋಲಿ ಬಿಡಿಸಿದರೆ ದಾರಿಯಲ್ಲಿ ಹೋಗುವ ಬರುವ ಜನ ನೋಡುವರಲ್ಲ. ನಿಮ್ಮ ಗೆಳತಿಯರು ಬಿಡಿಸುವ ಮೊದಲೇ ರಂಗೋಲಿ ಬಿಡಿಸಬೇಕು" ಎಂದು ರಾತ್ರಿ ನಾಳಿನ ರಂಗೋಲಿಯನ್ನು ಹೇಳಿ ಕೊಡುವರು. ಅದಕ್ಕಾಗಿಯೇ ಮಕ್ಕಳು ಬೇಗನೆ ಎದ್ದು ಅಂಗಳ ಕಸಗೂಡಿಸಿ ಶಗಣಿಯಿಂದ ಸಾರಿಸಿ ದೊಡ್ಡ ಮನೆಯ ದೊಡ್ಡ ಅಂಗಳದಲ್ಲಿ ದೊಡ್ಡ ರಂಗೋಲಿ ಬಿಡಿಸುವರು. ಸುನಂದಾಳಿಗೆ ಹಾಡುಹಸೆಯಲ್ಲಿ ಆಸಕ್ತಿ ಇರುವುದರಿಂದ ಅವಳಿಗೇ ಈ ಕೆಲಸ ಹಚ್ಚಲಾಗುತ್ತಿತ್ತು. ಬೆಳಗಿನ ಆ ದೊಡ್ಡ ರಂಗೋಲಿ ತಯಾರಿ ರಾತ್ರಿಯಲ್ಲಿಯೇ ಆಗಿರುತ್ತಿತ್ತು. ಬೇಗನೆ ಏಳಲೂ ಅವ್ವನ ಪ್ರೇರಣೆ ಯಾವ ಗೆಳತಿಯರೂ ಬಿಡಿಸದ ಮೊದಲು ಇವರ ಮನೆಯ ರಂಗೋಲಿ ಚಿತ್ತಾರಗೊಳ್ಳಬೇಕಲ್ಲ. ಹಾಗಾಗಿ ನಸುಕಿನಲ್ಲಿಯೇ ಎದ್ದು ಅಂಗಳ ಸಜ್ಜುಗೊಳಿಸಿ ಶಗಣಿಯಿಂದ ಸಾರಿಸಿ ರಂಗೋಲಿಯನ್ನು ಬಿಡಿಸುವವಳು ಸುನಂದಾ. ಹೂಬಳ್ಳಿಯಿಂದ ಅರಳಿದ ಹೂತಂದು ರಂಗೋಲಿಯ ಮೇಲಿಡುವಳು ಹಾಗೂ ಮಧ್ಯ ದೀಪ ಬೆಳಗಿಸುವಳು. ಹೀಗೆ ರಂಗೋಲಿ ಹವ್ಯಾಸವಾಗಿ ಬಿಟ್ಟಿತು. ಹಾಡುಗಳೂ ಕೂಡ ಎಳೆತನದಲ್ಲಿ ಅವ್ವನಿಂದಲೇ ಬಂದವು ಅಡಿಗೆ, ಕೈತೋಟ, ಹೂದಾನಿ ಅಲಂಕಾರ ಕೈಕೆಲಸ, ರಂಗೋಲಿ ಒಣಹೂವಿನ ರಂಗೋಲಿ ಧಾನ್ಯದ ರಂಗೋಲಿ ಹೀಗೆ ಒಂದೊಂದಾಗಿ ಹೊಸ ಹೊಸ ಅನ್ವೇಷಣೆ ಮಾಡುತ್ತ ಬೆಳೆದ ಸುನಂದಾ ಎಸ್.ಎಸ್.ಎಲ್.ಸಿ. ಚೊಂಡಿ ಸರಕಾರಿ ಶಾಲೆಯಲ್ಲಿಯೇ ಪೂರೈಸಿದಳು.

ಸಂಜೆ ಮನೆಅಂಗಳ ದೇವರಮನೆ ಕಸಗೂಡಿಸಿ ಅಂಗಳಕ್ಕೆ ನೀರು ಹಾಕಿ ದೇವರ ಮುಂದೆ ದೀಪ ಹಚ್ಚಿ ದೇವರ ಪಾತ್ರೆ ತೊಳೆಯುವುದು ಇವಳದೇ ಕೆಲಸ.

ಸುಂದರ ರಂಗೋಲಿ ಬಿಡಿಸುವುದರಿಂದ ಊರ ಜನರ ಪ್ರಶಂಸಗೆ ಪಾತ್ರಳಾದಳು. ಊರಿನ ಹುಡುಗಿ ರಂಗೋಲಿ ಬಿಡಿಸಿದರೆ ಪ್ರೇಕ್ಷಕರು ಊರಿನವರೇ ಊರಿನಲ್ಲಿ ತೇರು ಎಳೆಯುವಾಗ ಸುನಂದಾಳ ಮುಖಂಡತ್ವದಲ್ಲಿ ದಾರಿಯ ಇಕ್ಕೆಲದಲ್ಲಿ ರಂಗೋಲಿ ಇದಕ್ಕಿಂತ ಯಾವ ಪ್ರಶಸ್ತಿ ಪ್ರಶಂಸೆಬೇಕು ಇಂತಹ ಕಲಾವಿದೆಯರು ಗ್ರಾಮೀಣ ಬದುಕಿನಲ್ಲಿ ಸಾಕಷ್ಟು ಜನ ಯಾವ ಪ್ರಶಸ್ತಿ ಬಹುಮಾನ ಪಡೆಯದ ಮಹಾನ್ ಕಲಾವಿದೆಯರು.

ಎಸ್.ಎಸ್.ಎಲ್.ಸಿ. ಆದ ನಂತರ ಮುಂದೆರಡು ವರುಷಗಳಲ್ಲಿ ಹಳಿಯಾಳದ ಸಿದ್ದಪ್ಪ ಮುಳೆಯವರೊಂದಿಗೆ ವಿವಾಹವಾಯಿತು. ಸಿದ್ದಪ್ಪನವರು ಕೊಳಾರ ಇಂಡಾಲ್ ಫ್ಯಾಕ್ಟರಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಹೆಂಡತಿಯ ಪ್ರತಿ ಕಲೆಗೂ ಪ್ರೋತ್ಸಾಹ ನೀಡುವವರು. ಇಂಡಾಲ್ ಫ್ಯಾಕ್ಟರಿ ಕೊಳಾರದಲ್ಲಿ ಪ್ರಸಿದ್ಧ ಫ್ಯಾಕ್ಟರಿ. ಪರದೇಶದ ಹಾಗೂ ಭಾರತದ ಪ್ರಸಿದ್ಧ ಉದ್ಯಮಿಗಳು ಭೇಟ್ಟಿಯನ್ನೀಯುವ ಫ್ಯಾಕ್ಟರಿ. ಅನೇಕ ಪ್ರಸಂಗಗಳಲ್ಲಿ ಇಂಥವರನ್ನು ಉನ್ನತ ಮಟ್ಟದಿಂದ ಸ್ವಾಗತಿಸಲಾಗುತ್ತಿತ್ತು. ಚಂಡು ಹೂಗಳು ಹಸಿರು ಎಲೆಗಳಿಂದ ಅಲಂಕಾರ ಮಾಡಲಾಗುತ್ತಿತ್ತು. ಅದೊಂದು ಅವರ್ಣನೀಯ ಅಲಂಕಾರ ಈ ಪ್ರಸಂಗಗಳಲ್ಲಿ ಸುನಂದಾಳ ಮುಖಂಡತ್ವದಲ್ಲಿ ಹೂ ರಂಗೋಲಿ ಬಿಡಿಸಲಾಗುತ್ತಿತ್ತು. ಗಣೇಶ ಉತ್ಸವ. ನಾಡಹಬ್ಬ ಉತ್ಸವ, ಭುವನೇಶ್ವರಿ ಉತ್ಸವ ಪ್ರಸಂಗಗಳಲ್ಲಿ ಸುನಂದಾ ರಂಗೋಲಿ ಬಿಡಿಸುತ್ತಿದ್ದಳು. ಅಲ್ಲದೇ ರಾಷ್ಟ್ರೀಯ ಹಬ್ಬಗಳ ಸಂದರ್ಭಗಳಲ್ಲಿಯೂ ಸುನಂದಾ ರಂಗೋಲಿ ಬಿಡಿಸುತ್ತಿದ್ದಳು.

ಇವಳ ರಂಗೋಲಿಗೆ ಭುವನೇಶ್ವರಿ ಉತ್ಸವದ ಬಹುಮಾನ, ಗಣೇಶ ಉತ್ಸವಗಳಲ್ಲಿ ಬಹುಮಾನಗಳು ದೊರೆತಿವೆ.

ಭಾರತೀಯ ಹಬ್ಬಗಳಿಗೆ ತಕ್ಕ ಹಾಗೆ ರಂಗೋಲಿ ಕಲೆ ಪ್ರೇರಣೆ ಪಡೆದಿರುವುದು. ನಾಗರ ಪಂಚಮಿಯಲ್ಲಿ ಹಾವುಗಳ ರಂಗೋಲಿ. ಗೋಕುಲಾಷ್ಟಮಿಗೆ ಕೃಷ್ಣನ ರಂಗೋಲಿ ಭುವನೇಶ್ವರಿ ಉತ್ಸವದಲ್ಲಿ ನಾಡದೇವಿ ರಂಗೋಲಿ ದೀಪಾವಳಿಗೆ ದೀಪಾಲಂಕಾರದ ರಂಗೋಲಿ ರಾಷ್ಟ್ರೀಯ ಹಬ್ಬಗಳಲ್ಲಿ ನಾಡಧ್ವಜ, ರಾಷ್ಟ್ರಧ್ವಜದ ರಂಗೋಲಿ ಕಂಗೊಳಿಸುತ್ತವೆ.

ಸುನಂದಾ ನೀರಮೇಲ ರಂಗೋಲಿ, ಅರಿಷಿಣ ಕುಂಕುಮ ರಂಗೋಲಿ, ಧಾನ್ಯರಂಗೋಲಿ, ಕಸಕಸಿ ರಂಗೋಲಿ, ಚಕಮಕ ರಂಗೋಲಿ, ಸಾಬೂದಾಣಿ, ಅಕ್ಕಿತೌಡಿನ ರಂಗೋಲಿ, ಕಸಬರಿಗೆ ತೌಡಿನ ರಂಗೋಲಿ, ಹೀಗೆ ವಿಧವಿಧ ರಂಗೋಲಿ ಬಿಡಿಸುವಳು. ರಂಗೋಲಿ ಕಲೆಯಲ್ಲಿ ಆನಂದ ತೃಪ್ತಿ ಪಡೆದಿರುವಳು. ಇವಳು ಕರ್ನಾಟಕ ಸಂಗೀತಗಾರಳು ಹಾಗೂ ಸಾಹಿತಿಯೂ ಕೂಡ.

"ಹೊಸ್ತಿಲಲ್ಲಿ ರಂಗೋಲಿ ಇದ್ದರೆ ಯಮನು ಬರುವುದಿಲ್ಲ" ವಾರದ ಏಳು ದಿನ ಏಳು ದೇವರನ್ನು ಆಹ್ವಾನಿಸುವುದು ರಂಗೋಲಿಯ ಉದ್ದೇಶ ರವಿವಾರ ಸೂರ್ಯನನ್ನು ಸೋಮವಾರ ಶಿವನನ್ನು ಮಂಗಳವಾರ ಗಣಪತಿಯನ್ನು ಹೀಗೆ ಏಳು ದಿವಸ ಏಳು ದೇವತೆಗಳನ್ನು ನೆನೆದು ಅಹ್ವಾನಿಸುವ ಕಲೆ ರಂಗೋಲಿ. ಶುಕ್ರವಾರ ದೇವಿ ಲಕ್ಷ್ಮಿ ಅರಾಧನೆ, ಶನಿವಾರ ಆಂಜನೇಯನ ಉಪಾಸ ಹೀಗೆ ಜನಪದರಲ್ಲಿ ವಾರದ ಏಳೂದಿನ ದೇವತೆಗಳನ್ನು ಆಹ್ವಾನಿಸುವುದೇ ರಂಗೋಲಿ ಉದ್ದೇಶ. ಹೀಗೆ ಧಾರ್ಮಿಕ ಕಥೆಯನ್ನು ಕಟ್ಟಿಕೊಂಡಿರುವರು ಜನಪದರು. ರಂಗೋಲಿ ಹಿನ್ನೆಲೆ ಏನೇ ಇದ್ದರು ಮನೆ ಸ್ವಚ್ಛಗೊಳಿಸುವುದು ನಿರ್ಮಲಗೊಳಿಸುವುದು ಅಲಂಕಾರ ಪಡಿಸುವುದು ಮನೆಯ ಮುಂದಿನ ಅಂಗಳ ನೈರ್ಮಲ್ಯದೊಂದಿಗೆ ಅಲಂಕಾರವೂ ಮುಖ್ಯವಾಗಿರುತ್ತದೆ. ಕಸಗೂಡಿಸಿ ಶಗಣಿಯಿಂದ ಸಾರಿಸಿ ಎಲ್ಲಾ ಕಡೆ ನೀರ ಥಳಿಯನ್ನು ಹಾಕಿದರೆ ಧೂಳು ಕಸಕಡ್ಡಿ ಮನೆ ಪ್ರವೇಶಿಸುವುದಿಲ್ಲ. ಇದು ಆರೋಗ್ಯಕ್ಕೆ ಹಿತಕರ. ರಂಗೋಲಿ ಉದ್ದೇಶ ಆರೋಗ್ಯ ಕಾಪಾಡುವುದು

ಕೂಡ. ಈ ಎಲ್ಲ ವಿಷಯಗಳನ್ನು ವಿಷದ ಪಡಿಸಿದ ವಿದ್ಯಾಹುಂಡೇಕರ ಬೀದರ ರಹವಾಸಿ. ತಾಯಿ ಸುವರ್ಣ ತಂದೆ ಸೂರ್ಯಕಾಂತ ಅಣದೂರ ಮನೆತನದಲ್ಲಿ ದಿನಾಂಕ 24-12-1965 ರಂದು, ಜನಿಸಿದ ವಿದ್ಯಾ ಪ್ರಾಥಮಿಕ ಮಾಧ್ಯಮಿಕ ಅಭ್ಯಾಸ ಹಾಗೂ ಉನ್ನತ ಶಿಕ್ಷಣವನ್ನು ಬೀದರ ಮಹಿಳಾ ಮಹಾವಿದ್ಯಾಲಯದಲ್ಲಿ ಪೂರೈಸಿ ಬಿ.ಎ. ಪದವಿ ಪಡೆದಳು. ಅಣದೂರದ ಲಕ್ಷ್ಮೀಶ ಹುಂಡೇಕರ ಅವರೊಂದಿಗೆ ಇವಳ ವಿವಾಹವಾಯಿತು.

ವಿದ್ಯಾ ಕಲಾಜಗತ್ತಿಗೆ ಕಾಲಿಟ್ಟಿದ್ದೇ ತಾಯಿಯ ಪ್ರೇರಣೆಯಿಂದ ತಾಯಿ ಸುವರ್ಣಾ ಹಾಡುಹಸೆ, ಹೆಣಿಕಿ, ಕಸೂತಿ ಸಾಂಪ್ರದಾಯಿಕ ಕಲೆಯಲ್ಲಿ ಪರಿಣಿತಳು. ತಾಯಿಯಿಂದಲೇ ವಿದ್ಯಾ ಕಲಾರಂಗಕ್ಕೆ ಕಾಲಿಟ್ಟಳು. ಗೆಳತಿಯರೆಲ್ಲರೂ ಸೇರಿ ಸ್ಪರ್ಧಾತ್ಮಕವಾಗಿ ಈ ಅಂಗಳತುಂಬ ರಂಗೋಲಿ ಬಿಡಿಸುವರು. ಈ ಸ್ಪರ್ಧಾತ್ಮಕ ಮನೋಭಾವವೇ ರಂಗೋಲಿ ಕಲೆ ಮುಂದುವರೆಸಲು ಕಾರಣವಾಯಿತು.

ವಿದ್ಯಾ ಕೇವಲ ರಂಗೋಲಿ ಕಲೆಯಲ್ಲಿ ಮಾತ್ರ ಪರಿಣಿತರಲ್ಲ ಚಿತ್ರಕಲೆ, ಕಸೂತಿ, ಹೂದಾನಿ ಅಲಂಕಾರ ತರಕಾರಿ ಕೆತ್ತನೆ ಕೇಶಾಲಂಕಾರ, ಪಾಕಶಾಸ್ತ್ರ ಕ್ರೋಶಾವರ್ಕ, ಗೊಂಡೆ ಮಾಡುವುದು ಹೀಗೆ ವೈವಿಧ್ಯಮಯ ಕಲಾ ನಿರ್ಮಾಣದಲ್ಲಿ ತೊಡಗಿರುವಳು.

(ವಿದ್ಯಾ ಭುವನೇಶ್ವರಿ ಉತ್ಸವ ಬೀದರ ಲಾಯಿನ್ಸ್ ಕ್ಲಬ್ ಬೀದರ. ಗಾರ್ಡನರ್ಸ ಕ್ಲಬ್ ಬೀದರ, ವೀರಶೈವ ಮಹಿಳಾ ಮಂಡಳ ಬೀದರನವರು ಏರ್ಪಡಿಸಿದ ಹೂವಿನ ಅಲಂಕಾರ ದೀಪಾಲಂಕಾರದಲ್ಲಿಯೂ ಬಹುಮಾನ ಪಡೆದಿರುವಳು.)

ವಿದ್ಯಾಳ ಸಹೋದರಿ ಭಾರತಿ ಕೂಡ ಕಲಾವಿದೆ. ಮಕ್ಕಳು ಆದಿತ್ಯ, ಅಜಿತರು ತಾಯಿಯಿಂದ ಬಂದ ಕಲೆಯ ವಾರಸುದಾರರಾಗಿರುವರು. ಹೀಗೆ ತಲೆಮಾರಿನಿಂದ ವಂಶ ಪಾರಂಪರ್ಯವಾಗಿ ತಾಯಿ ಸಂಸ್ಕೃತಿ ಸಂಸ್ಕಾರವನ್ನು ನೀಡುತ್ತ ನಮ್ಮ ಕಲಾ ಜಗತ್ತನ್ನು ಬೆಳಗಿಸುವ ಗುರುವಾಗಿರುವುದಕ್ಕೆ ವಿದ್ಯಾ ಉದಾಹರಣೆಯಾಗಿರುವರು. ಮೃದು ಮಾತು ಸದುವಿನಯದ ವಿದ್ಯಾ ಅಣದೂರ ಅನೇಕ ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜಕಾರ್ಯ ಮಾಡುತ್ತಿರುವಳು. ಪುಸ್ತಕದ ಅಂಗಡಿಯಲ್ಲಿಯ ರಂಗೋಲಿ ಪುಸ್ತಕಗಳನ್ನು ತಂದು ರಂಗೋಲಿ ಬಿಡಿಸುವ ತಮ್ಮ ಬಾಲ್ಯವನ್ನು ಇಂದಿಗೂ ನೆನಪಿಸಿಕೊಳ್ಳುವಳು. ಅತ್ತೆಯ ಮನೆಯಲ್ಲಿ ಕಲೆಗೆ ಯಾರಿಂದಲೂ ಅಡಚಣೆ ಆತಂಕ ಇಲ್ಲ. ಪತಿ ಲಕ್ಷ್ಮೀಶ ಅವರ ಪ್ರೋತ್ಸಾಹ ಸಾಕಷ್ಟು ಇದೆ. ಇವಳು ರಂಗಕಲಾವಿದೆಯೂ ಕೂಡ.

ಒಟ್ಟಿನಲ್ಲಿ ನಮ್ಮ ಎಲ್ಲ ಕಲಾವಿದರಿಗೆ ತವರಿನಲ್ಲಿ ತಾಯಿಯ ಪ್ರೋತ್ಸಾಹ ದೊರೆತಂತೆ ಗಂಡನ ಮನೆಯಲ್ಲಿ ಅತ್ತೆ ಮಾವಂದಿರ ಪ್ರೋತ್ಸಾಹವೂ ದೊರೆತಿದೆ. ಕಲೆಯಲ್ಲಿ ಅವರೆಲ್ಲರೂ ಆನಂದ ತೃಪ್ತಿಯನ್ನು ಪಡೆದಿರುವರು.

3.6 ತೋರಣ

ದಂಡೆ ಬಾಸಿಂಗದ ಜೊತೆಗೆ ಮನೆಯ ತಲಬಾಗಿಲಿಗೆ ಕಟ್ಟಲು ತೋರಣವನ್ನು ತರುವರು. ಭಾರತೀಯ ಎಲ್ಲ ಕಲೆಗಳಲ್ಲಿ ದೇವರು ಧರ್ಮದ ನಂಟು ಇದ್ದೇ ಇರುತ್ತದೆ. ಅಂತೆಯೇ ಮದುವೆ ಸಮಾರಂಭದಲ್ಲಿ ತಲಬಾಗಿಲಿಗೆ ಕಟ್ಟುವ ತೋರಣ ಪರಮೇಶ್ವರ ಪಾರ್ವತಿ ಹೊಂದಿದ್ದು ಗಿಣಿ, ನವಿಲು, ಕಮಲಗಳನ್ನು ಕೂಡಿರುತ್ತದೆ. ಚಮಕ ಚಮಕ ಬ್ಯಾಂಗಡಿ ಹಾಳೆಗಳಿಂದ ತಯಾರಿಸಿದ ಈ ತೋರಣ ಕೊಳವೆ ಹಾಗೂ ತೆಂಗಿನ ಫಲದಿಂದ ಕೂಡಿ ಕಂಗೊಳಿಸುತ್ತಿರುತ್ತದೆ.

ಮದುವೆ ಬಂದರೆ ಮನೆ ಬಣ್ಣ ಕಾಣುವುದು. ಮನೆಯ ಗೋಡೆ, ಮಾಡಗಳು ಸಿಂಗಾರಗೊಳ್ಳುವುದು. ಕಟ್ಟಿಗೆ, ಕಂಬ, ಎಣ್ಣೆ ಕಾಣುವವು. ಮನೆ ಮುಂಭಾಗದ ಗೋಡೆ ಬಣ್ಣದಿಂದ, ನಕ್ಷೆಯಿಂದ ಸಿಂಗಾರಗೊಳ್ಳುವುದು. ಬರುವ ಜನರನ್ನು ಸ್ವಾಗತಿಸಲು ತಳಿರು ತೋರಣ ಸಿದ್ದವಾಗುವವು.

ಉಪ್ಪಾರ ಉದ್ದಪ್ಪ ಮನೆಗೆ ಬಣ್ಣ ಬಳಿದನಪ್ಪ
ಬಾಗಿಲ ಕಿಟಕಿಗೆ ಹಚ್ಚಿದನು ವಾರ್ನೀಸ ತೂಗಿತು
ತೋರಣ ತೊಲಬಾಗಿಲಿಗೆ

ತಲಬಾಗಿಲದ ಸಿಂಗಾರವನ್ನು ಹೇಳತೀರದು ತಲಬಾಗಿಲ ಅಂದವೇ ಅಂದ ಎಣ್ಣೆಯಲ್ಲಿ ಮಿಂದ ಕನ್ಯೆಯಂತೆ ಬಾಗಿಲು ಎಣ್ಣೆ ಬಳಿದುಕೊಂಡು ಮಿರ ಮಿರ ಮಿಂಚುವುದು. ಬೀಗರು-ಬಜ್ಜರು ಬಂಧುಗಳನ್ನು ಸ್ವಾಗತಿಸಲು ಸಿದ್ಧವಾಗುವುದು. ಇದು ಮನೆಯ ಮಹಾದ್ವಾರವೇ ಸರಿ. ಈ ಬಾಗಿಲುಗಳ ಮೇಲೆ ಬಣ್ಣ ಬಣ್ಣದಿಂದ ಮಿಂಚುತಿಹ ರಂಗುರಂಗಿನ ಗೋಳಾಪು ಹೊಂದಿದ ತೋರಣ ತೂಗುವುದು. ಮೇಲುಗಾಳಿ ಬಿಟ್ಟಾಗ ನವಿರಾಗಿ ಹೊಯ್ದಾಡುವುದು. ಫಳ ಫಳ ಹೊಳೆಯುವ ತೋರಣದ ನಡುವೆ ಮುತ್ತಿನಿಂದ ಹೆಣೆದ ತೆಂಗಿನಕಾಯಿಗಳು ಬಣ್ಣದ ಪರಪರಿಯಿಂದ ಕಂಗೊಳಿಸುವವು. ಬಾಸಿಂಗದವರು ಬಲು ಕೌಶಲತೆಯಿಂದ ಚಿತ್ತಾರದ ತೋರಣ ಸಿದ್ಧ ಪಡಿಸುವರು.

ತೋರಣ ಮನೆಯ ಶೋಭೆ ಹೆಚ್ಚಿಸುವುದು. ಮದುವೆ ಮನೆ ಇದೇ ಎಂಬುದನ್ನು ಸಾರಿ ಸಾರಿ ಹೇಳುವುದು. ತಳಿರತೋರಣ ವಿಶೇಷ ಹಬ್ಬಗಳಲ್ಲಿರುವಂತೆ ಬಿದಿರು. ಭೆಂಡು, ಬಣ್ಣಬಣ್ಣದ ಮಿಂಚು ಸಲಕರಣೆಗಳಿಂದ ಸಿದ್ಧ ಪಡಿಸಿದ ತೋರಣ ಮನೆ ಬಾಗಿಲದ ಸಿಂಗಾರ, ಶುಭ ಸಂಕೇತ.

3.7 ಹೂಗಾರ

ಪ್ರಕೃತಿಯ ಚೆಲುವೇ ಹೂ ಮಲ್ಲಿಗೆ, ಗುಲಾಬಿ, ಜಾಜಿ, ಸುಗಂಧಿ ಚೆಂಡು ಶೇವಂತಿಗೆ, ಸಂಪಿಗೆ ಪಾರಿಜಾತ, ದಾಶಿವಾಳ, ಕಮಲ, ನಾಗಸಂಪಿಗೆ, ಕಣಗಿಲ ಒಂದೊಂದು ಹೂ ನೆನಸಿಕೊಂಡರೂ ಮನಸ್ಸಿಗೆ ಆನಂದ, ಹೂ ಶುಭ, ಆದರ, ಗೌರವ, ಪ್ರೇಮ, ಭಕ್ತಿ, ಮಂಗಲಮಯದ ಸಂಕೇತ,

ಚೆಲುವಿನೊಂದಿಗೆ ಬೆರೆತ ಸುಗಂಧವೆಷ್ಟು ಹಿತ ಆಹ್ಲಾದ ಒಂದೊಂದು ಹೂ ತನ್ನ ಬೆಡಗಿನಿಂದ ರಸಿಕರನ್ನು ಸೆರೆ ಹಿಡಿಯುತ್ತವೆ.

ಉತ್ಸವ, ಕಾರ್ಯಕ್ರಮ, ಜಾತ್ರೆ, ಮಂಗಲ ಕಾರ್ಯಗಳಿಗೆಲ್ಲ ಹೂವಿನದೇ ಕಾರಭಾರು.

ಗ್ರಾಮೀಣ ಬದುಕಿನಲ್ಲಿ ಹೂಗಾರರದೂ ಒಂದು ಕಸಬು. ಅದು ಕೇವಲ ಹೂ ಮಾರುವುದೇ. ಇಂದಿನ ನವಯುಗದಲ್ಲಿ ಊರಲ್ಲಿ ಒಂದು ಹೂವಿನ ಪೇಟೆಯೇ ಇರುತ್ತದೆ. ಇಲ್ಲಿ ಹಲವಾರು ಹೆಣ್ಣುಮಕ್ಕಳು ತಮ್ಮ ಹೊಟ್ಟೆ ಪಾಡಿಗಾಗಿ ಹೂಮಾರಿ ಉಪಜೀವನ ಸಾಗಿಸುತ್ತಾರೆ. ಅಂತೆಯೇ ಗಂಡು ಮಕ್ಕಳೂ ಕೂಡ ಹೂಮಾಲೆ, ಹೂಹಾರ, ಮೊಗ್ಗಿನ ಜಡೆ, ಹೂದಂಡೆ, ಹೂಗಲೀಫ್, ಹೀಗೆ ವೈವಿಧ್ಯಮಯ ಹಾರಗಳನ್ನು ಸುಂದರವಾಗಿ ಹೆಣೆಯುವರು. ಮದುವೆ. ಮುಂಜಿವೆ, ಮೈನರೆದಾಗ, ಕುಬಸದಲ್ಲಿ ಹೂಹಾರ ಹೂದಂಡೆ ಇರಲೇಬೇಕು.

ಉತ್ಸವ, ಹಬ್ಬ, ಜಾತ್ರೆಗಳಲ್ಲಿ ಹೂವಿಗೆ ಎಲ್ಲಿಲ್ಲದ ಬೇಡಿಕೆ, ಸುಗಂಧದಂತೆ ಹೂವಿನ ಬಣ್ಣ ಕೂಡ ಆಕರ್ಷಕ. ಹೂ ಹೆಣೆಯುವುದು ಒಂದು ಕಲೆ. ವಿಧ ವಿಧ ಹೂಗಳ ಮಧ್ಯೆ ಮರಗ, ಗುಲಾಬಿ, ಚೆಂಡು, ಮಲ್ಲಿಗೆ, ಸೇರಿಸಿ ಅಂದದ ಹೂ ಹಾರ, ಹೂಮಾಲೆ ತಯಾರಿಸುವರು ಹೂಗಾರರು. ತುರುಬಿಗೊಂದು ಹೂಮಾಲೆ ಹಾಕಿಕೊಂಡವಳ ವೈಯಾರ ನೋಡಬೇಕು. ಕಾರ್ಯಕ್ರಮದಲ್ಲಿ ಹಾಕುವ ಹಾರಿನ ಗೌರವದಿಂದ ವ್ಯಕ್ತಿ ಬೀಗಿ ಹೋಗುತ್ತಾನೆ. ಹೂಹಾರ ಹಾಕಿಕೊಂಡವರ ಆನಂದ ಹೇಳತೀರದು ಕ್ಷಣದ ಬದುಕಿನ ಹೂ ಕ್ಷಣದ ಆನಂದದ ಗೌರವ ಎಷ್ಟು ದೊಡ್ಡದು.

ಮದುವೆ ಸಮಾರಂಭದಲ್ಲಿ ಮಲ್ಲಿಗೆ, ಗುಲಾಬಿ, ಸುಗಂಧಿ ಸೇವಂತಿಗೆ ಹಾರಗಳನ್ನು ವಧುವರರು ಹಾಕುವುದುಂಟು, ಹಾರಗಳು ಎಷ್ಟು ಅಂದ ಚೆಂದ ಮಧುರ ಬಾಂಧವ್ಯದ ಸಂಕೇತ, ಕೇವಲ ಅಕ್ಷರದಲ್ಲಿ ಅಲ್ಲ ಅವುಗಳನ್ನು ನೋಡಬೇಕು. ಹೂಗಾರರದು ಎಷ್ಟು ಕೋಮಲ ಕಸಬು ಯಾವಾಗಲೂ ಹೂವಿನೊಂದಿಗೆ ನಂಟು. ಹೂಗಾರರು ಮದುವೆ ಮಂಟಪ ಅಲಂಕರಿಸುವರು.

ಹೆಂಗಳೆಯರು ಉತ್ಸವ ಹಬ್ಬ ಮದುವೆಗಳಲ್ಲಿ ಮನೆ ಮುಂದೆ ಹೂ ರಂಗೋಲಿ ಮಧ್ಯ ಒಂದು ದೀಪವನ್ನಿರಿಸುವರು. ಹೂ ರಂಗೋಲಿ ಎಷ್ಟು ಅಂದ.

ಹೂಗುಚ್ಛವೂ ಆದರದ ಗೌರವದ ಸಂಕೇತ ಮದುವೆ ಸಮಾರಂಭಗಳಲ್ಲಿ ಮದುವೆಗೆ ಒಂದವರಿಗೆ ಕಿರು ಹೂ ಗುಚ್ಛಗಳನ್ನು ಕೊಡುವ ವಾಡಿಕೆ ಇದೆ.

ಮೈಸೂರ ಮಲ್ಲಿಗೆ ಮೊಗ್ಗಿನ ಹಾರ ಪ್ರಸಿದ್ಧ ಮೊಗ್ಗಿನ ಜಡೆ ಇನ್ನೂ ಪ್ರಸಿದ್ಧ, ತಾಯಂದಿರು ತಮ್ಮ ಮಕ್ಕಳಿಗೆ ಮೊಗ್ಗಿನ ಜಡೆ ಹಾಕಬೇಕಾದರೆ ಮೊದಲೇ ಹೂಗಾರರಿಗೆ ಆರ್ಡರ ಕೊಡುತ್ತಾರೆ. ಪರಕರ ಪೋಲಕದ ಜೊತೆಗೆ ಜಡೆ ನೀಟಾಗಿ ಹಾಕಿ ರಾಜಗೊಂಡೆಯನ್ನು ಹಾಕಿ ಮೊಗ್ಗಿನ ಜಡೆ ಹೆಣೆಯುವರು. ಮೊಗ್ಗಿನ ಜಡೆ ಹಾಕಿಕೊಂಡು ಆ ಪೋರಿ ಸಾಂಪ್ರದಾಯಿಕ ಉಡುಪಿನಲ್ಲಿ ಎಷ್ಟು ಚೆಂದ ಕಾಣುವಳು.

(ಕರ್ನಾಟಕದ ಲಕ್ಕುಂಡಿ, ಕೊಪ್ಪಳ, ಬಳ್ಳಾರಿ, ಮೈಸೂರು, ಬೆಂಗಳೂರು ಪ್ರದೇಶಗಳಲ್ಲಿ ಮಲ್ಲಿಗೆಯನ್ನು ಹೇರಳವಾಗಿ ಬೆಳೆಯುವರು. ಹೂಗಳಲ್ಲಿ ಮಲ್ಲಿಗೆಗೆ ಹೆಚ್ಚಿನ ಪ್ರಾಧಾನ್ಯತೆ. ದಿನಬೆಳಗಾದರೆ ದಕ್ಷಿಣ ಕರ್ನಾಟಕದವರಿಗೆ ಮಲ್ಲಿಗೆ ಹೂ ಹಾರ ಬೇಕೇಬೇಕು. ಹೀಗಾಗಿ ಈ ಪ್ರದೇಶಗಳಲ್ಲಿ ಅನೇಕ ಹೆಣ್ಣು ಮಕ್ಕಳು ಹೂವಿನ ಕಸಬು ಮಾಡಿಕೊಂಡಿರುವರು.)

ಮಲ್ಲಿಗೆ ದಂಡೆ ಹುಡುಗಿ ಮೈನೆರೆದಾಗ, ನಿಶ್ಚಿತಾರ್ಥ, ಮದುವೆ ಅಕ್ಷತೆಯ ಸಂದರ್ಭದಲ್ಲಿ ಮುಡಿಸುವರು. ಹೂಗಾರರು ಜಾಜಮಲ್ಲಿಗೆ ಸೂಜಿಮಲ್ಲಿಗೆ, ಮೈಸೂರ ಮಲ್ಲಿಗೆ ದಂಡೆ ಹೆಣೆದು ಎಡ ಬಲ, ನಡುವೆ ಅರಳು ಕೆಂಪು ಗುಲಾಬಿ ಹಾಕುವರು. ಅಚ್ಚ ಬಿಳಿ ಮಲ್ಲಿಗೆ ದಂಡೆಯಲ್ಲಿ ಚೆಂಗುಲಾಬಿ ಎದ್ದು ಕಾಣುವುದು. ಘಮ ಘಮ ಸುಗಂಧ ಹರಡುವದು.

ಮದುಮಗಳಿಗೆ ಸಿದ್ಧ ಮೊಗ್ಗಿನ ಜಡೆ ಹೆಣೆಯುವರು. ಮೊಗ್ಗಿನ ಜಡೆ ದಕ್ಷಿಣ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತ. ಹಬ್ಬ, ಉತ್ಸವ ಹುಟ್ಟುಹಬ್ಬ, ಸಂಕ್ರಾಂತಿ ಪ್ರಸಂಗಗಳಲ್ಲಿ ಹುಡುಗೆಯರಿಗೆ ಮೊಗ್ಗಿನ ಜಡೆ ಹೆಣೆಯುವರು.

ಮದುಮಕ್ಕಳಿಗೆ ವೈವಿಧ್ಯಮಯ ಹಾರ ಹೂಗುಚ್ಛ ಮಲ್ಲಿಗೆ ದಂಡೆ ಮೊಗ್ಗಿನ ಜಡೆ ಮಂಟಪ ಹೂ ಅಲಂಕಾರ, ದೇವರಿಗೆ ಹೂ ಅಲಂಕಾರ, ಟೇಬಲ್ ಅಲಂಕಾರ, ಬಾಗಿಲ ಹೂ ಅಲಂಕಾರ, ಒಂದೊಂದು ಸೊಬಗು ಹೂಗಾರ ಮಾಡುವನು. ಹೂಗಾರನ ವರ್ಣಮಯ ಕಲೆಯನ್ನು ಮೆಚ್ಚಿಕೊಳ್ಳುವಂತಹದು.

ಇವರಲ್ಲದೆ ರೇಶಿಮೆಹಾರ, ಗಂಧದಹಾರ, ಮುತ್ತಿನಹಾರ, ಏಲಕ್ಕಿಹಾರ, ಮಾಡುವವರೂ ಪ್ರಸಿದ್ಧ ಹಾವೇರಿ ಏಲಕ್ಕಿ ಹಾರ ಕರ್ನಾಟಕದಲ್ಲಿಯೇ ಪ್ರಸಿದ್ಧ.

ಹೂಗಾರ ಕಸಬನ್ನು ಮಾಡಿಕೊಂಡಿರುವಳು ವಿಜಯಲಕ್ಷ್ಮಿ ಪಿ.ಯು.ಸಿ. ಪ್ರಥಮ ವರ್ಷದವರೆಗೆ ಅಭ್ಯಾಸ ಮಾಡಿದವಳು. ಪಿ.ಯು.ಸಿ. ಪ್ರಥಮ ವರ್ಷ ಮುಗಿದ ನಂತರ ಇವಳನ್ನು ಬೀದರಿನ ಗಿರೀಶ ಹೂಗರರಿಗೆ ಕೊಟ್ಟು ಮದುವೆ ಮಾಡಿದರು.

ತವರಿನಲ್ಲಿ ಅವ್ವ ಕಮಲವ್ವ ಹೊನವಾಡದ ಮನೆಮನೆಗೆ ಹೋಗಿ ಪತ್ರಿ ಹಾಕುತ್ತಿದ್ದರು. ಅಲ್ಲದೇ ದಂಡೆಹಾರ ಸದಾಬಾರಗಿ ಹೂವಿನಿಂದ ಮಾಡಿಕೊಡುವರು. ಮನೆಮನೆ ಪತ್ರಿ ಹಾಕುವುದೇ ಇವರ ಕಸುಬು ಅವ್ವ ಮಾಡುತ್ತಿದ್ದ ಹೂಹಾರ ದಂಡೆ ಮಾಡುವುದನ್ನು ನೋಡಿ ವಿಜಯಲಕ್ಷ್ಮಿ ಎಳೆತನದಲ್ಲಿಯೇ ಹಾರ, ದಂಡೆ, ಮೊಗ್ಗಿನಜಡೆ, ಮಾಡುವುದನ್ನು ಕಲಿತವಳು. ಅದನ್ನೇ ಗಂಡನ ಮನೆಯಲ್ಲಿ ಮುಂದುವರಿಸಿಕೊಂಡು ಹೋಗುತಿರುವಳು. ಗಂಡ ಗಿರೀಶ ಮದುವೆ ಮಂಟಪ ಅಲಂಕಾರ ಮಾಡುತ್ತಾನೆ. ಶೇವಂತಿಗೆ ಗುಲಾಬಿ ಮಲ್ಲಿಗೆ ಗಲಾಟೆ ಹೂವಿನದಂಡೆ ಹಾರ ಮಾಡುತ್ತಾಳೆ. ವಿಜಯಲಕ್ಷ್ಮಿ "ಮದುವೆ ಸೀಜನ್‌ದಲ್ಲಿ ಇದೇ ದಂಥೆ ಮೇಲೆ ಮನೆ ನಡೆಯುತ್ತದೆ. ಉಳಿದ ದಿನಗಳಲ್ಲಿ ತರಾಸ" ಎಂದು ಹೇಳುತ್ತಾಳೆ. ಹೂಗಾರರು ಕೆಲವರು ದೇವರ ಪೂಜೆಯನ್ನು ಮಾಡಿಕೊಂಡು

ಹೋಗುವರು. ಹೇಳಿಕೊಳ್ಳುವಷ್ಟು ಆದಾಯವಿಲ್ಲ. ಆದರೆ ಯಾವಾಗಲೂ ಹೂವಿನೊಂದಿಗೆ ಇರುವುದರಿಂದ ಸಂತಸ.

ಬೀದರದವರು. ತವರು ಮನೆ ಬೀದರ ಜಿಲ್ಲೆಯ ಬಾವಗಿ ಕಮಲವ್ವ ಹೊನವಾಡದಲ್ಲಿ ಪ್ರತಿ ಮನೆಮನೆಗೆ ಹೂ ಹಾಕುವ ಕಸವನ್ನು ಮಾಡಿಕೊಂಡವಳು. ವರ್ಷಾನುಗಟ್ಟಲೆ ಹೂಪತ್ರಿ ಹಾಕಿದರೆ ಸುಗ್ಗಿಯ ಕಾಲದಲ್ಲಿ ಹೊಲ ಹೊಲಸುತ್ತಿ ಆಯಾ ತರುವುದು. ಪ್ರತಿ ಹೊಲದವರು ಜೋಳ, ಗೋದಿ ಕೊಡುವರು ವರುಷಕ್ಕಾಗುವಷ್ಟು ಕಾಳುಕಡ್ಡಿ ಸುಗ್ಗಿಯ ಕಾಲದಲ್ಲಿ ಕೂಡಿಡುವುದು. ವಯಸ್ಸು ಐವತ್ತು ಇದ್ದೋತು, ನಾಲ್ಕು ಮಕ್ಕಳು.

ಕಮಲವ್ವ ಸದಾಮಲ್ಲಿಗೆ ಹೂವಿನಿಂದ ದಂಡೆಹಾರ ಹಳ್ಳಿ ಜನರಿಗೆ ಬೇಕಾದಾಗ ಮಾಡಿಕೊಡುವಳು. ಉಪಜೀವನಕ್ಕೆ ಸುಗ್ಗಿ ಕಾಲದಲ್ಲಿಯೇ ಕೂಡಿಡುವುದು. ಗಂಡ ಹನುಮಂತ ದೇವರ ಪೂಜಾರಿಕೆ ಮಾಡಿಕೊಂಡಿರುವನು.

3.8 ಬಡಿಗೇರ

ಮನೆ, ಗ್ರಾಮ, ನಗರಗಳನ್ನು ಅಂದ ಚೆಂದಗೊಳಿಸುವವರೇ ಬಡಿಗರು. ಇವರು ಪಾಂಚಾಳರಲ್ಲಿ ಒಬ್ಬರು. ಬಡಿಗನಿಗೂ ರೈತನಿಗೂ ತೀರ ಸಂಬಂಧ, ಕೃಷಿಕಾಯಕಕ್ಕೆ ಬೇಕಾಗುವ ಸಾಮಾನುಗಳನ್ನು ಮಾಡಿಕೊಡುವವರೇ ಬಡಿಗರು ಹಾಗೂ ಕುಂಬಾರರು. ಪ್ರತಿ ಹಳ್ಳಿಯಲ್ಲೊಂದು ಬಡಿಗೇರ ಓಣಿ ಇದ್ದೇ ಇರುತ್ತದೆ. ಬಡಿಗ ಕುಶಲಕರ್ಮಿ ಅವನ ಕಲೆ ಮೆಚ್ಚ ತಕ್ಕುದ್ದಾಗಿದೆ.

ವಾಸಿಸುವ ಮನೆ, ಊಳುವ ಸಾಮಾನು ರಕ್ಷಣೆಯ ಕಪಾಟು ಪ್ರವೇಶಿಸುವ ಬಾಗಿಲು ಸುಂದರಗೊಳ್ಳುವುದೇ ಬಡಿಗನಿಂದ ಒಂದೊಂದು ಹಳೆಯ ಗ್ರಾಮೀಣ ಮನೆಗಳನ್ನು ನೋಡಬೇಕು. ಚಿತ್ತಾರವೇ ಚಿತ್ತಾರ. ಕಟ್ಟಿಗೆಯನ್ನು ಕೆತ್ತಿ ಕೆತ್ತಿ ಮಾಡುವ ಅವನ ಕೌಶಲ್ಯವನ್ನು ನೋಡಬೇಕು.

ರೈತನು ಊಳುವ ಪ್ರತಿಯೊಂದು ಸಾಮಗ್ರಿಗಳನ್ನು ಅಂದ ಚಂದವಾಗಿ ಮಾಡಿಕೊಡುವವನೇ ಇವನು. ಕುರಪಿ, ಕುಡಗೋಲು, ಕುಂಟಿ, ರಂಟೆ, ಚಕ್ಕಡಿಯನೊಗ, ಬಾರಕೋಲು ಕಟ್ಟಿಗೆ, ಕೋವಿ ಒಂದೊಂದು ಚಿತ್ತಾರದ ಕೆತ್ತಿದ ಕಲೆಯಿಂದ ಕೂಡಿರುತ್ತವೆ.

ಮನೆಯ ಹೆಬ್ಬಾಗಿಲಿನ ಕೆತ್ತನೆಯನ್ನು ನೋಡಿಯೇ ಅನುಭವಿಸಬೇಕು ಹೂ ನವಿಲು, ಸಿಂಹ, ಹುಲಿ, ಗೋಡಂಬಿ ಬಳ್ಳಿ ಒಂದೊಂದು ಸಾಲುಗಳು ಚೆಲುವಿನ ಆಗರ ಇಂತಹ ಚಿತ್ತಾರ ಮನೆ ಬಾಗಿಲುಗಳನ್ನು ಬದಾಮಿಯ ಬನಶಂಕರಿಯ ಜಾತ್ರೆಯಲ್ಲಿ ನೋಡಬೇಕು. ಈ ಜಾತ್ರೆಯಲ್ಲಿ ಕೆತ್ತನೆಯ ಬಾಗಿಲುಗಳು ಬಲೂ ಪ್ರಸಿದ್ಧ.

ವಾಡೆ, ಗೌಡರ ಮನೆ, ಮಠಗಳಲ್ಲಿಯ ಸಂದುಕ, ಕಿಟಕಿ, ಕಪಾಟು, ಬಾಗಿಲು, ಮೇಲ್ಬಾವಣಿ, ಕಟಂಜನ, ಗೂಟಗಳು ವಿಭೂತಿ ಕರಂಡಿಕೆ ಚಕ್ಕಡಿಮಣಿ ಸುಖಾಸನ, ಮಂಚ, ಊರುಕೋಲು, ಕನ್ನಡಿ ಪೆಟ್ಟಿಗೆ, ಮಕ್ಕಳಾಟಿಕೆ, ಮೂರುಗಾಲಿ ಒತ್ತು ಬಂಡಿ, ತೂಗುತೊಟ್ಟಿಲು, ಬಂಡಿ ಹೇಳಲಾರದಷ್ಟು

ವಸ್ತುಗಳೆಲ್ಲ ಚಿತ್ತಾರದಿಂದ ಕೂಡಿರುತ್ತವೆ. ಬಡಿಗನ ಕೈಯಲ್ಲಿ ಮೃದು ಬೆಣ್ಣೆಯಂತೆ ಕಟ್ಟಿಗೆ ನುಣ್ಣನೆಯ ಸೂಕ್ಷ್ಮ ಕೆತ್ತನೆಯಿಂದ ಕಂಗೊಳಿಸುತ್ತದೆ. ತೇರು ಜಾತ್ರೆ, ಪರಸೆಯಲ್ಲಿ ತೇರು ಎಳೆಯುವ ಸಂಪ್ರದಾಯ. ಕೆತ್ತನೆಯ ಕಲಾ ಕುಸುರಿನಿಂದ ಅದ್ಭುತವಾದ, ಬೃಹತ್ತಾದ ತೇರುಗಳನ್ನು ತಯಾರಿಸುವವನೇ ಬಡಿಗ, ಗೋಕಾಕ ತೊಟ್ಟಿಲು, ಹಣ್ಣಿನ ತಟ್ಟೆ ಚನ್ನ ಪಟ್ಟಣದ ಗೊಂಬೆ ಪ್ರಸಿದ್ಧ.

ಮಾರುತಿ ಭಾವುರಾವ ಜಂಬೂರೆ ವಯಸ್ಸು 82, ಬೀದರ ತಾಲೂಕ ಬೀದರ ಮಾರುತಿಯವರ ತಂದೆ ಹೆಸರು ಭಾವುರಾವ, ತಾಯಿ ಯಮನಾಬಾಯಿ ತಂದೆ-ತಾಯಿಗಳಿಬ್ಬರು ದೈವಭಕ್ತರು. ತಂದೆ ಭಾವುರಾವ ಬೀದರ ಸಂಸ್ಥಾನದ ಬಡಿಗರು ಪಟವರ್ಧನ ಅರಸರ ಸಂಸ್ಥಾನದಲ್ಲಿ ರಾಜರ ಟೇಬಲ್ಲು ಕುರ್ಚಿ, ಸಾರೋಟು, ನಕ್ಷೆಮಂಚ ಕಪಾಟು, ಸಿಂಹಾಸನ, ನಕ್ಷೆಮಣೆ, ಸರಕಾರಮಂಚ, ಮೇಲ್ಛಾವಣಿ ನಕ್ಷೆ ಕಂಬ, ಜಾಳಿಯ ಕಿಟಕಿ, ರಾಜಧಾನಿಯ ಕಲಾಪತ್ತಿನ ಮಂಟಪಗಳು ಮಹಡಿಯ ಕುಸುರಿನ ಕೆಲಸ ಮಾಡುವವರು. ಅವರ ಕೈಯಲ್ಲಿಯೇ ಮಾರುತಿಯ ಬಡಿಗತನ ಶಿಕ್ಷಣವಾಯಿತು.

ಮಾರುತಿ ಜಂಬೂರೆ ದೈವಭಕ್ತರು ಪಲ್ಲಕ್ಕಿ ತೇರು ಗರ್ಭಗುಡಿ ಕಮಾನು. ದ್ವಾರ ಪಾಲಕರನ್ನು ಮಾಡುವರು. ದ್ವಾರದ ಮುಂದಿರುವ ಹುಲಿ ಸಿಂಹ. ಆನೆ ಮಾಡುವರು. ಬೀದರನ ರಾಘವೇಂದ್ರ ಮಠದ ತೇರು ಮಾಡಿ ಕೊಟ್ಟಿರುವರು. ಮತ್ತು ಮಂತ್ರಾಲಯದ ರಾಘವೇಂದ್ರ ಸ್ವಾಮಿಯ ತೇರು ಮಾಡಿ ಕೊಟ್ಟಿರುವರು. ತೇರುಗಳಲ್ಲಿ ಎರಡು ಪ್ರಕಾರ 1. ಚೌಕತೇರು 2. ಗಡ್ಡಿತೇರು ಅವರ ಮಾತಿನಲ್ಲಿಯೇ ಹೇಳುವುದಾದರೆ

ದೈವಭಕ್ತರಾದ ಇವರು ದೇವರ ತೇರು ಪಲ್ಲಕ್ಕಿ ಮಂಟಪ ಎಲ್ಲವನ್ನು ನಸುಕಿನಲ್ಲಿಯೇ ಎದ್ದು ಸ್ನಾನ ನಿತ್ಯಕರ್ಮಾದಿಗಳನ್ನು ತೀರಿಸಿಕೊಂಡು ಮಂದಿರಕ್ಕೆ ಹೋಗಿ ಬಂದು ಮಡಿಯಿಂದಲೇ ಮಾಡುವ ಕೆಲಸ ಪ್ರಾರಂಭಿಸುವರು. ಕೇವಲ ಮಧ್ಯಾಹ್ನದವರೆಗೆ ಮಾತ್ರ ಮಾಡುವರು. ಇಂದಿನ ದಿನಮಾನಗಳಲ್ಲಿ ಇಂತಹ ಕೆಲಸ ಮಾಡುವ ಶಿಲ್ಪಿಗಳು ಕಡಿಮೆ ಏಕೆಂದರೆ ಕುಸಿಯುತ್ತಿರುವ ದೈವಭಕ್ತಿಯೇ ಇದಕ್ಕೆ ಕಾರಣ.

ಇವರ ಮಗ ಸುನೀಲ ಈಗ ಟ್ರಕ್ಕಿಗೆ ಸಾಟಾ ಹಾಕುವ ಕೆಲಸ ಮಾಡಿಕೊಂಡಿರುವರು. ತೇರು, ಪಲ್ಲಕ್ಕಿ, ದ್ವಾರಪಾಲಕರು, ಮಂಟಪ ಮಾಡಲು ನುರಿತ ಶ್ರೇಷ್ಠ ಕಲಾವಿದರು ಬೇಕಾಗುತ್ತಾರೆ. ಅದರಲ್ಲಿ ಕೆತ್ತನೆ ಕಲಾ ಕೌಶಲ್ಯ ಬಹಳ ಇರುತ್ತದೆ. ತಕ್ಕ ಮಟ್ಟಿಗೆ ಉಪಜೀವನಕ್ಕೇನು ಕಡಿಮೆ ಇಲ್ಲದ ಹಾಗೆ ಜೀವನ ಸಾಗಿಸಬಹುದಾಗಿದೆ. ಬಡಿಗತನ ಕಸಬಿನಲ್ಲಿ ಹಳ್ಳಿಯಲ್ಲಾದರೆ ಆಯದ ಮೇಲೆಯೇ ಜೀವನ. ಪಟ್ಟಣಗಳಲ್ಲಿ ಬಡಿಗತನ ತಕ್ಕ ಮಟ್ಟಿಗೆ ಉಪಜೀವನಕ್ಕೆ ಆಧಾರವಾಗಿದೆ.

3.9 ಹಣಚಿ ಬೊಟ್ಟು:

ಮದರಂಗಿ:- ಹಬ್ಬ ಮದುವೆ ಸಂಭ್ರಮದ ದಿವಸ ಯಾವುದೇ ಶುಭ ಕಾರ್ಯವಿದ್ದರೂ ಇಂದಿನ ತರುಣಿಯರು ಮದರಂಗಿ ಚಿತ್ತಾರ ತೆಗೆಯಿಸಿಕೊಳ್ಳುವರು. ಹಿಂದಿನ ದಿವಸಗಳಲ್ಲಿ ಮದರಂಗಿ

ರೂಢಿಯಲ್ಲಿರಲಿಲ್ಲ. ಆದರೆ ಇತ್ತೀಚಿಗೆ ಮದರಂಗಿ ಎಲ್ಲರೂ ತೆಗೆದುಕೊಳ್ಳುವರು. ಮದರಂಗಿಯ ಚಿತ್ತಾರ ಸೂಕ್ಷ್ಮ ಕಲೆ, ಬಳ್ಳಿ ಬಳ್ಳಿಯಾಗಿ ಕೈ ತುಂಬ ತೆಗೆದುಕೊಂಡ ಹುಡುಗಿಯರ ಕೈ ನೋಡಿ, ಬಲು ಸುಂದರವಾಗಿರುತ್ತದೆ. ಅರಬಸ್ಥಾನ, ಗುಜರಾಥ, ರಾಜಸ್ಥಾನದಲ್ಲಿ ರೂಢಿಯಲ್ಲಿರುವ ಮದರಂಗಿ ಇಂದು ವಿಶ್ವದಾದ್ಯಂತ ಮದು ಮಕ್ಕಳಿಗೆ ಅತಿ ಪ್ರಿಯವಾಗಿದೆ. ಇದನ್ನೊಂದು ಸಮಾರಂಭವಾಗಿಯೇ ಮಾಡುವಷ್ಟು ಅದು ಆಕರ್ಷಣೆ ಪಡೆದಿದೆ. ತೋರ ಬೆರಳಿನಿಂದ ಕೈ ಅರ್ಧ ಭಾಗದವರೆಗೆ ಚೆಲುವಿನ ಚಿತ್ತಾರವಾಗಿ ಕಂಗೊಳಿಸುವುದು ಪಾದಗಳ ಸುತ್ತ ಅಲತಿಗೆ ಮೇಲೆ ಮದರಂಗಿಯ ಚಿತ್ತಾರ ಅಂದವಾಗಿ ಕಾಣುವುದು.

ಮದರಂಗಿ ಹಚ್ಚುವುದರಲ್ಲಿ ಪರಿಣಿತರು ಇರುವರು. ಇವರು ಮದರಂಗಿ ಕಲೆಯನ್ನು ಬಲ್ಲವರು. ನೀಳ ಬೆರಳು, ಅಂಗೈ, ಪಾದಗಳಿಗೆ ಸೂಕ್ಷ್ಮತಿ ಸೂಕ್ಷ್ಮ ಕಲೆಯ ಚಿತ್ತಾರ ಬಿಡಿಸುವರು. ಮದುಮಗಳು ಮದರಂಗಿಯ ಚಿತ್ತಾರದ ಕೈಗಳನ್ನು ಪಾದಗಳನ್ನು ನೋಡಿಕೊಂಡು ಹಿಗ್ಗಿನ ಬುಗ್ಗೆಯಾಗುವಳು. ಮದರಂಗಿ ನಕ್ಷೆ ಚೆಂದದ ಕಲೆ.

ಮದರಂಗಿ ನೆತ್ತಿ, ಕಣ್ಣು, ಕಾಲುಗಳಿಗೆ ತಂಪು ಕೂಡ, ಮದರಂಗಿ ಹಚ್ಚಿಕೊಂಡರಾಯಿತು ತಂಪಾಗುವುದು. ಕಾವು ಪ್ರಕೃತಿಯವರು ಮದರಂಗಿ ಕಾಲಿಗೆ, ಕೈಗೆ, ನೆತ್ತಿಗೆ ಹಚ್ಚಿಕೊಳ್ಳುವರು.

ಮದುವೆಯಲ್ಲಿ ಮದರಂಗಿ ಚಿತ್ತಾರ ಬಿಡಿಸುವವರು ಮನೆಗೇ ಬಂದು ಮದರಂಗಿ ಮದುಮಗಳ ಕೈಯಲಿ ಬಿಡಿಸುವರು. ಗೆಳತಿಯರು, ಬಂಧುಗಳೂ ಮದರಂಗಿ ಚಿತ್ರಿಸಿಕೊಂಡು ಆನಂದ ಪಡುವರು.

ಮದರಂಗಿಯಲ್ಲಿ ಹೆಚ್ಚಾಗಿ ಪುಟ್ಟ ಪುಷ್ಪಗಳು ಚಿಗುರು ಎಲೆಗಳದೇ ಚಿತ್ತಾರ. ಬಳ್ಳಿಯಂತೂ ಸೊಗಸಾಗಿ ಕೈತುಂಬ ಹಬ್ಬಿ ಮದುಮಗಳ ಕೈ ಅಂದಗೊಳಿಸುವುದು.

ಹಸುರೇ ಹಚ್ಚೆ, ಹಚ್ಚೆ ದೇಶಿಯಕಲೆ. ಅತ್ಯಂತ ಪಾರಂಪರಿಕ ಕಲೆಯಾದ ಇದನ್ನು ಈಗಲೂ ಅಲ್ಲಲ್ಲಿ ಹಳ್ಳಿಗಳಲ್ಲಿ ಉಳಿಸಿಕೊಂಡು ಬಂದಿರುವರು. ಹಚ್ಚೆಗಾರ ಅಂದರೆ ಹಚ್ಚೆ ಹಾಕುವ ಹೆಣ್ಣು ಮಕ್ಕಳು ಅಲ್ಲಲ್ಲಿ ಹಳ್ಳಿಗಳಲ್ಲಿ ಇರುವರು. ಬೀದರ ತಾಲೂಕಿನ ಕುಳ್ಳೂರ ಗ್ರಾಮದಲ್ಲಿ ಹಚ್ಚೆಹಾಕುವ ಹೆಣ್ಣುಮಕ್ಕಳು. ಕಾಡಿಗೆಯಿಂದ ತಯಾರಿಸಿದ ರಸದಿಂದ ಇವರು ಹಣೆ, ಕೊರಳು ಹಣೆಯ ಎಡಬಲ ಕೈ ತೋರಬೆರಳು, ಮೊಣಕೈ ಮೇಲ್ಭಾಗ ತೋಳು, ಮಿನಗಂಡ, ಕಾಲು ಬೆರಳುಗಳ ಮೇಲೆ ಸೂಜಿಯಿಂದ ಬಿಡಿಸುವ ಹಸರು ಬಣ್ಣದ ಚಿತ್ತಾರವೇ ಹಚ್ಚೆ. “ಗಂಡನ ಮೊಣಕೈಯ ಮೇಲೆ ಹೆಂಡತಿಯ ಹೆಸರು. ಮತ್ತು ಹೆಂಡತಿಯ ಮೊಣಕೈ ಮೇಲೆ ಗಂಡನ ಹೆಸರು ಹಾಕಿಸಿಕೊಳ್ಳುವರು” ಹಚ್ಚೆ ಒಂದು ಸಲ ಹಾಕಿಸಿಕೊಂಡರೆ ಜೀವನ ಪರ್ಯಂತ ಇರುತ್ತದೆ ಅಳಿಸುವುದೇ ಇಲ್ಲ. ಹಚ್ಚೆಯಲ್ಲಿ ಸೂಕ್ಷ್ಮ ಹೂಬಳ್ಳಿ, ದೇವರು, ಚುಕ್ಕೆ, ಚಂದ್ರಾಮಗಳನ್ನು ಹಾಕುತ್ತಾರೆ. ಹೆಚ್ಚಾಗಿ ಲಂಬಾಣಿ ಹೆಣ್ಣುಮಕ್ಕಳು ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಹಚ್ಚೆ ಹಾಕಿದ ಕೈಯಿಂದ ಅಡಿಗೆ ಮಾಡಿದರೆ ಹಳಸುವದಿಲ್ಲವೆಂಬ ನಂಬಿಕೆ ಇದೆ. ಹೀಗೆ ಹಚ್ಚೆದೇಶಿಯ ಪಾರಂಪರಿಕ ಕಲೆ.

ಅಧ್ಯಾಯ:- 4

ಜನಪದ ಕಲೆಗಳು

4.1 ಪ್ರಸ್ತಾವನೆ

4.2 ಕೋಲಾಟ

4.3 ಡೊಳ್ಳು ಕುಣಿತ

4.4 ಗೊಂದಲಿಗರ ಮೇಳ

4.5 ವೀರಭದ್ರ ಕುಣಿತ

4.6 ಹೋಳಿ ಕುಣಿತ

4.7 ಅಣಿ ಪೀಣಿ

4.8 ಬುಡಬುಡಕೆ

4.9 ದೊಂಬರಾಟ

4.10 ಮೊಹರಂ ಕುಣಿತ

4.11 ಪುಂಗಿ

4.12 ಭಜನೆ

4.13 ಲಾವಣಿ

4.14 ಲಂಬಾಣಿ ಕುಣಿತ

4.15 ಹುಲಿ ಕುಣಿತ

4.16 ಕರಡಿ ಕುಣಿತ

4.1 ಪ್ರಸ್ತಾವನೆ

ಜನಪದ ಬದುಕಿನ ಒಂದು ಸ್ವಾರಸ್ಯಪೂರ್ಣ ಕ್ಷೇತ್ರ ಜನಪದ ಕಲೆ, ಹಾಡು, ಬಯಲಾಟ, ಭಜನೆ ಮತ್ತು ಕುಣಿತ ಮೊದಲಾದ ಕಲೆಗಳನ್ನು ಕಿವಿಯಿಂದ ಕೇಳಿ ಕಣ್ಣಿನಿಂದ ನೋಡಿ ಆನಂದಿಸಬಹುದು. ಜನಪದ ಕಲೆಗಳು ಮೂಲತಃ ಗ್ರಾಮೀಣ ಕಲೆಗಳು. ಇವು ಒಂದೇ ಎರಡೇ, ನೂರಾರು. ಇವು ವಿಭಿನ್ನ. ಹಳ್ಳಿ ಜನ ಮುಗ್ಧರು. ಸರಳ ಸ್ವಭಾವದವರು. ನಕ್ಕು ನಗಿಸುವಂಥವರು. ದೈವ ಭಕ್ತರೂ ಶ್ರಮಜೀವಿಗಳು. ಬೆವರು ಸುರಿಸಿ ಕೆಲಸ ಮಾಡುವವರು. ಈ ಜನ ದಿನವಿಡೀ ದುಡಿದು ರಾತ್ರಿ ವೇಳೆಯಾದಾಗ ದಿನದ ದಣಿವು ಕಳೆದುಕೊಳ್ಳಲು ಹಾಡಿ ಕುಣಿಯುವರು. ಈ ಸಂಪ್ರದಾಯ ಅನಾದಿಕಾಲದಿಂದಲೂ ಬೆಳೆದು ಬಂದಿದೆ. ಹಾಡುಗಳು ಹೇಳುವುದಂತೂ ಸಹಜ. ಹಾಡುಗಳೊಂದಿಗೆ ಕೋಲಾಟವಿದ್ದೇ ಇರುತ್ತಿತ್ತು. ಕರಡಿ ಮಜಲು, ಏಕತಾರಿ, ಗೀಗೀ, ನಂದೀಧ್ವಜ ಕುಣಿತ, ಭಜನೆ, ತೊಗಲು ಗೊಂಬೆ ಆಟ, ಸೂತ್ರ ಗೊಂಬೆಯಾಟ, ಬಯಲಾಟ ಇಂಥ ಹಲವು ಹತ್ತು ಜನಪದ ಕಲೆಗಳನ್ನು ಹಳ್ಳಿಗರು ಸೃಷ್ಟಿಸಿದರು.

ಜನಪದ ಕಲೆಗಳಲ್ಲಿ ಕೆಲವು ಪ್ರದರ್ಶನ ಕಲೆಗಳು. ಕೆಲವು ವೃತ್ತಿ ಮತ್ತು ಮನೋರಂಜಕ. ಇನ್ನೂ ಕೆಲವು ಧಾರ್ಮಿಕ. ಹಬ್ಬ ಹರಿದಿನಗಳಲ್ಲಿ ಉತ್ಸವ ಕಾಲಗಳಲ್ಲಿ ಜನಪದಕಲೆಗಳ ಪ್ರದರ್ಶನ ಸಾಮಾನ್ಯವಾಗಿ ಇದ್ದೇ ಇರುತ್ತದೆ. ಇಂತಹ ಕಲೆಗಳ ಪ್ರದರ್ಶನದಿಂದ ಕಲಾವಿದರು ಸಂತೋಷದ ಜೀವನ ನಡೆಸಿರುವರು.

ಹಳ್ಳಿಯ ಜನ ಜನಪದ ಕಲೆ ತಿಳಿದವರು. ಹಳ್ಳಿಯಿಂದ ಹಳ್ಳಿಗೆ ಅಲೆದು ಕಲೆ ಪ್ರದರ್ಶಿಸುವರು. ಇದರಿಂದಲೇ ಜನಪದಕಲೆಗಳು ಚಿಗುರಿ ಹೆಮ್ಮರವಾಗಿ, ಬೇರು ಬಿಟ್ಟು ಉಳಿದವು. ತಲೆಮಾರಿನಿಂದ ತಲೆಮಾರಿಗೆ ಪ್ರಸಾರಗೊಂಡವು ಜನಪದ ಕಲಾವಿದರು ಕಲೆಗಾಗಿ ಕಲೆ ಎಂದು ತಮ್ಮ ಜೀವನ ಮೀಸಲಿಟ್ಟರು. ಪ್ರೇಕ್ಷಕರ ಮುಂದೆ ಕಲೆ ಪ್ರದರ್ಶಿಸಿ ಅವರಿಂದ ಪುರಸ್ಕಾರ ಪಡೆದಾಗಲೇ ತೃಪ್ತಿ. ಜನಪದ ವಿದ್ವಾಂಸರೊಬ್ಬರು ನುಡಿದಿರುವಂತೆ ಜನಪದ ಕ್ರಿಯಾ ಶಕ್ತಿಯ ಚುರುಕು ಬುದ್ಧಿಯ ಅಭಿವ್ಯಕ್ತಿ ಜನಪದ ಕಲೆ.

ಜನಪದರು ಜನಪದ ಕಲೆಗಳನ್ನು ತಮ್ಮ ಜೀವನದ ಅಂಗವೆಂದೇ ತಿಳಿದಿರುವರು. ಎಲ್ಲ ಸಾಹಿತ್ಯಕ್ಕೂ ತಾಯಿ ಬೇರು. ಜನಪದ ಎಂದು ಭಾವಿಸಿರುವ ಜನಪದರು. ಜನಪದ ಕಲೆಗಳು ಗ್ರಾಮ ಜೀವನದ ಹಸಿರು ಮತ್ತು ಉಸಿರು ಎಂದು ಹೇಳುವರು. ದೊಡ್ಡಾಟ, ಸಣ್ಣಾಟ, ಕೋಲಾಟ, ಪಟಕುಣಿತ ಮೊದಲಾದ ಕಲೆಗಳು ಹಳ್ಳಿಗರ ಬಾಳಿನಲ್ಲಿ ಹಾಸುಹೊಕ್ಕಾಗಿವೆ. ಅವರು ಕಲೆಗಳ ಪ್ರದರ್ಶನಕ್ಕೆ ಬೇಕಾದ ವೇಷಭೂಷಣಗಳ ತಯಾರಿ ಮಾಡುವುದರಲ್ಲಿ ಕರಕುಶಲವಸ್ತುಗಳನ್ನು ಸಿದ್ಧಪಡಿಸುವುದರಲ್ಲಿ ಅತ್ಯಂತ ಪರಿಶ್ರಮ ವಹಿಸುವರು.

ಪ್ರತಿಯೊಂದು ಜನಪದ ಕಲೆಯ ಹಿನ್ನಲೆಯಲ್ಲಿ ಒಂದು ಉದ್ದೇಶವಿರುವುದೂ ತಿಳಿದುಬರುತ್ತದೆ. ಕಲೆಗಳನ್ನು ಒಂದು ಸಂದರ್ಭದಲ್ಲಿ ಪ್ರದರ್ಶಿಸುವ ಆಶಯಗಳೂ ಮೂಲ

ಸಂಸ್ಕೃತಿಯೊಂದರ ಕಡೆಗೆ ಬೆರಳು ಮಾಡುತ್ತವೆ. ಧರ್ಮ, ದೇವರು, ಆರಾಧನೆ, ಪಂಥ ಹಾಗೂ ಸಾಮಾಜಿಕ ಬದುಕು ಎಲ್ಲ ಕಲೆಗಳ ಮೇಲೆ ಪ್ರಭಾವ ಬೀರಿವೆ. ಕಲೆಗಳ ಉಗಮ ಒಂದು ಸಂಸ್ಕೃತಿಯ ಬಿಂಬ. ಮಾನವನ ಸಾಂಸ್ಕೃತಿಕ ಇತಿಹಾಸಕ್ಕೂ ಜನಪದ ಕಲೆಗಳ ಉಗಮಕ್ಕೂ ಅವಿನಾಭಾವ ಸಂಬಂಧವಿದೆ. ಕರ್ನಾಟಕದ ಜನಪದ ಕಲೆಗಳ ವಿಷಯದಲ್ಲಿ ಇದು ಅಕ್ಷರಶಃ ನಿಜ. ಹೀಗಾಗಿ ಜನಪದ ಕಲೆಗಳು ಅಧ್ಯಯನದ ವಿಷಯವೂ ಆಗುತ್ತವೆ. ಹಲವು ಆರಾಧನೆಗಳು ಆಚರಣೆಗಳು ನಡೆಯುವ ರೀತಿ ಕಲೆಗಳಾಗಿ ವಿಕಸನ ಹೊಂದಿ ಪೂರ್ಣಸ್ವರೂಪದ ಕಲೆಗಳಾಗಿ ಮಾರ್ಪಟ್ಟಿರುವುದು ರೋಚಕ ಸಂಗತಿ. ಎಷ್ಟೋ ಮಂದಿಗೆ ಕಲೆ ವೃತ್ತಿಯಾಗಿದೆ. ನಂತರ ಅದೊಂದು ಪರಂಪರೆಯಾಗಿ ಬೆಳೆದು ಬಂದಿದೆ.

ಕರ್ನಾಟಕ ಜನಪದ ಕಲೆಗಳು ಹಲವು ಕುತೂಹಲಗಳನ್ನು ಕೆರಳಿಸಬಲ್ಲವು. ಅವು ನಮ್ಮ ಪ್ರಾಚೀನ-ಮಧ್ಯಕಾಲೀನ ಸಂಸ್ಕೃತಿಯ ಅಧ್ಯಯನಕ್ಕೆ ಪ್ರಧಾನ ಆಕರಗಳಾಗಬಲ್ಲವು. ಭಾರತದ ಒಂದೊಂದು ಪ್ರದೇಶದಲ್ಲೂ ಜನಪದ ಕಲೆಗಳಿವೆ. ಅವು ಆರಾಧನೆಯ ಕಲೆಗಳಾಗಿರಬಹುದು. ಧರ್ಮ ಪ್ರಸಾರದ ಕಲೆಗಳಾಗಿರಬಹುದು. ನೀತಿ ರೂಪದ ಕಲೆಗಳಿವೆ. ಕೆಲವು ಜನಪದ ಕಲೆಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಬೇರೆಯಾಗಿರುವೂ ಉಂಟು. ಯಕ್ಷಗಾನ, ತಾಳ ಮದ್ದಳೆ, ಬಯಲಾಟ, ಸಣ್ಣಾಟ, ತೊಗಲು ಗೊಂಬೆ ಮೊದಲಾದ ವಿಶಿಷ್ಟ ಕಲೆಗಳು ಕರಾವಳಿ (ಮಂಗಳೂರು) ಯಲ್ಲೆ ಬೇರೆ. ಮಲೆನಾಡಿನಲ್ಲೆ (ಶಿವಮೊಗ್ಗ-ಹಾಸನ) ಬೇರೆ. ಬಯಲು ಸೀಮೆಯಲ್ಲೆ ಬೇರೆ. ಹೀಗಾಗಿ ಜನಪದ ಕಲೆಗಳು ವೈವಿಧ್ಯಮಯ. ಒಟ್ಟಾರೆ ಒಂದು ನಾಡಿನ ಸಾಂಸ್ಕೃತಿಕ ಇತಿಹಾಸವನ್ನೆ ಜನಪದ ಕಲೆಗಳ ಅಧ್ಯಯನ ತೆರೆದಿಡಬಲ್ಲದು. ಜಾನಪದ ಜೀವಂತ ಸಮಾಜದ ಜೀವದ್ರವ್ಯ.

ಜನಪದ ಕಲೆಗಳು ಇಂದು ಗ್ರಾಮೀಣ ಜೀವನಕ್ಕೆ ಸೀಮಿತವಾಗಿಲ್ಲ. ನಗರಗಳಲ್ಲೂ ಜನಪದ ಕಲೆಗಳ ದರ್ಶನವಿರುತ್ತದೆ. ಬೆಂಗಳೂರೇ ತಗೆದುಕೊಳ್ಳಿ. ನಗರ ದೇವತೆ ಅಣ್ಣಮ್ಮ ಇಡೀ ನಗರವನ್ನು ಆವರಿಸಿರುವಳು. ಒಂದೊಂದು ಬಡವಣೆಯಲ್ಲೂ ಊರಹಬ್ಬ ಎಂದು ಆಚರಿಸಿ ಅಣ್ಣಮ್ಮ ದೇವಿ ವಿಗ್ರಹವನ್ನು ಉತ್ಸವದಲ್ಲಿ ಕೊಂಡೊಯ್ದು ದಾರಿಯುದ್ದಕ್ಕೂ ಜನಪದ ಕಲೆಗಳನ್ನು ಪ್ರದರ್ಶಿಸುವರು. ಬೆಂಗಳೂರು ನಗರದಲ್ಲಿ ಪೂಜಾ ಕುಣಿತ, ನಂದಿ ಕೋಲು ಕುಣಿತ, ಪಟದ ಕುಣಿತ, ವೀರಗಾಸೆ ಮೊದಲಾದ ವೈವಿರ್ಧಯಮಯ ಕುಣಿತಗಳು ನೆಲೆಕಂಡುಕೊಂಡಿವೆ. ಇದೇ ರೀತಿ ಬೇರೆ ಬೇರೆ ನಗರಗಳಲ್ಲೂ ಈ ಕುಣಿತಗಳೇ ಮೊದಲಾದ ಜನಪದ ಕಲೆಗಳನ್ನು ಕಾಣುತ್ತೇವೆ. ಕಡಲೆಕಾಯಿ ಪರಿಸೆ ಬೆಂಗಳೂರಿನಲ್ಲಿ ಒಂದು ಗ್ರಾಮೀಣದ ನೆನಪಾಗಿ ಕಾಣಿಸಿಕೊಳ್ಳುತ್ತದೆಂಬುವದನ್ನು ನೆನಪಿಸಿಕೊಳ್ಳಬಹುದು.

ಎಲ್ಲಿಯವರೆಗೆ ಸಂಸ್ಕೃತಿಗೆ ಸಾವಿಲ್ಲವೋ ಅಲ್ಲಿಯವರೆಗೆ ಜಾನಪದಕ್ಕೂ ಸಾವಿಲ್ಲ. ಜನಸಮೂಹದಾಯದ ಸಂಘಟನೆಯ ಅವಿಭಾಜ್ಯ ಅಂಗವೇ ಜಾನಪದ. ಹಳ್ಳಿ ಇರುಬಹುದು; ನಗರ ಇರಬಹುದು. ಜನರಿದ್ದಲ್ಲಿ ಜಾನಪದ ಹಾಸುಹೊಕ್ಕು.

ಜನಪದ ಕಲೆಗಳು ಕಾಲಕಳೆದಂತೆ, ನಾಗರಿಕತೆ ಬೆಳೆದಂತೆ, ವಿದೇಶೀ ಸಂಸ್ಕೃತಿಗಳು ಬೇರೂರಿದಂತೆ, ಮಾಧ್ಯಮಗಳು ಹೆಚ್ಚಾದಂತೆ ಜನರಿಂದ ಜನಪದ ಕಲೆಗಳಿಗೆ ಪ್ರೋತ್ಸಾಹ ಕಡಿಮೆಯಾಗತೊಡಗಿದೆ ಎನ್ನಲಾಗುತ್ತಿದೆ. ವಾಸ್ತವ ಸತ್ಯ. ಹವ್ಯಾಸಿ ಜನಪದ ಕಲಾವಿದರು ಹೊಟ್ಟೆಪಾಡಿಗಾಗಿ ವೃತ್ತಿಕಲಾವಿದರಾಗುತ್ತಿರುವರು. ಜನಪದ ಸಾಹಿತ್ಯ ಮತ್ತು ಕಲೆಗಳು ನಾಶವಾಗುತ್ತಾ ಹೊರಟು ಸಾಂಸ್ಕೃತಿಕ ಸಾವಿನ ಕಟ್ಟಕಡೆಗೆ ಬಂದುನಿಂತಂತಾಗಿದೆ. ಆದುದರಿಂದ ಜನಪದ ಕಲೆ–ಸಾಹಿತ್ಯ ಉಳಿಸುವುದು ಅಗತ್ಯವಾಗುತ್ತದೆ. ವಿಶ್ವವಿದ್ಯಾನಿಲಯಗಳು ಜಾನಪದವನ್ನು ಒಂದು ದಿಟ್ಟ ಹೆಜ್ಜೆ ಇಟ್ಟಂತಾಗಿದೆ. ಸರ್ಕಾರ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಆಕಾಡೆಮಿ ಸ್ಥಾಪಿಸಿ ಜನಪದ ಕಲಾವಿದರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಾ ಬಂದಿರುವುದು ಉತ್ಸಾಹ ತುಂಬುವುದಾಗಿದೆ. ಜನಪದ ವಸ್ತುಗಳ ಸಂಗ್ರಹಾಲಯಗಳ ಸ್ಥಾಪನೆಯೂ ಜನಪದ ಕಲೆಗಳನ್ನು ಪರಿಚಯಿಸುವಲ್ಲಿ ನೆರವಾಗುತ್ತದೆ.

ಜನಪದ ಸಾಹಿತ್ಯ ಸಂಸ್ಕೃತಿ ಕಲೆಗಳ ಸಂವರ್ಧನೆ ಮತ್ತು ಸಂರಕ್ಷಣೆ ಬಹು ಮುಖ್ಯ ಜನಪದ ಕಲೆಗಳನ್ನು ಸಲಹುವ ಅಗತ್ಯವಿದೆ. ಇದರಿಂದ ನಮ್ಮ ಜನಾಂಗ ಸಾಹಿತ್ಯ ಸಂಸ್ಕೃತಿ ಉಳಿದು ಬೆಳೆಯುತ್ತದೆ. ಜಾಗತೀಕರಣ ಪ್ರಭಾವದಿಂದ ನಮ್ಮ ಸಂಸ್ಕೃತಿಯ ಮೇಲೆ ಕೆಟ್ಟ ಪರಿಣಾಮ ಆಗಿರುವುದೂ ಉಂಟು. ಹಾಗೆ ಆಗದಂತೆ ನೋಡಿಕೊಳ್ಳಬೇಕಾಗುತ್ತದೆ.

ಜನಪದ ಕಲೆಗಳು ಯಾವುದೇ ಪ್ರದೇಶದ ಒಂದು ಜನಾಂಗದ ಅಥವಾ ಒಂದು ನಾಡಿನ ಭವ್ಯ ಪರಂಪರೆಯ ಅಪೂರ್ವ ಸ್ವತ್ತು. ಅವು ಮಾನವನ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯುವಲ್ಲಿ ತುಂಬಾ ಸಹಕಾರಿ ಎಂಬುದಂತೂ ನಿಜ. ಇದೇ ಸಾಕು, ಕಲೆಯ ಮಹತ್ವವನ್ನು ಎತ್ತಿ ಹಿಡಿಯುತ್ತದೆ.

ಇಂದು ನಾವು ಕಾಣುವ ಶಿಷ್ಟ ಕಲೆ ಜನಪದ ಕಲೆಗಳ ಸಂತಾನವೇ ಆಗಿದೆ. ಆದರೆ ಈ ಶಿಷ್ಟ ಕಲೆ ಪ್ರಭಾವಶಾಲಿ ಮಾಧ್ಯಮವಾಗಿ ಬೆಳೆದು ದೇಶೀಯ ಕಲೆಗಳನ್ನು ತಿರಸ್ಕಾರ ಭಾವದಿಂದ ನೋಡುತ್ತಿದೆ. ಹೀಗಿದ್ದರೂ ಜನಪದ ಕಲೆ ತನ್ನಲ್ಲಿರುವ ಸತ್ವದಿಂದಾಗಿ ಆಧುನಿಕ ಯುಗದಲ್ಲಿ ಜೀವಂತವಾಗಿದೆ. ಜನಪದ ಪ್ರದರ್ಶನ ಕಲೆಗಳು ಮಾನವ ಜೀವನದ, ಸಾಂಸ್ಕೃತಿಕ ಇತಿಹಾಸದ ಜೀವಂತ ದಾಖಲೆ.

ಜನಪದ ಕಲೆಗಳ ಪ್ರಾಚೀನತೆ ಬಹು ಹಿಂದಿನದು. ಅವು ಸಂಸ್ಕೃತಿಯಿಂದ ಭಿನ್ನವಾದವು ಅಲ್ಲ. ನಮ್ಮ ಸಂಸ್ಕೃತಿಯ ಪ್ರತೀಕ. ಪ್ರಾದೇಶಿಕ, ಜನಾಂಗೀಯ ಸಂಸ್ಕೃತಿಯ ವೈವಿಧ್ಯತೆಯನ್ನು ಈ ಕಲೆ ಎತ್ತಿ ಹಿಡಿಯುತ್ತವೆ.

ಜನಪದ ಕಲೆಗಳ ಇನ್ನೊಂದು ವೈಶಿಷ್ಟವೆಂದರೆ ಅವು ಶಾಬ್ದಿಕ ಮತ್ತು ಅಶಾಬ್ದಿಕ ರೂಪದಲ್ಲಿ ಮಾನವನ ಬದುಕಿನಿಂದ ಹೊರಹೊಮ್ಮಿದ ಸಂಕೀರ್ಣ ಕಲಾಪ್ರಕಾರಗಳಾಗಿವೆ.

ಇಂದು ಹಳ್ಳಿ ಜನ ಪಟ್ಟಣಗಳತ್ತ ವಲಸೆ ಬರುತ್ತಿರುವ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ತಮ್ಮೊಂದಿಗೆ ತಮ್ಮ ಮೂಲ ನೆಲೆಗಳ ಆಚಾರ–ವಿಚಾರ, ನಂಬಿಕೆ–ನಡಾವಳಿ, ಮೌಲ್ಯಗಳನ್ನು

ನಗರಗಳಿಗೆ ತಂದಿರುವರು. ನಗರಗಳಲ್ಲೂ ಅವನ್ನು ಅನುಷ್ಠಾನಕ್ಕೆ ತಂದರು. ತಾವೂ ಆಚರಿಸುವುದರ ಜತೆಗೆ ಇತರರ ಮೇಲೂ ಅವುಗಳ ಪ್ರಭಾವ, ಪರಿಣಾಮಗಳನ್ನು ಉಂಟುಮಾಡಿದರು. ಹೀಗಾಗಿ ನಗರಗಳಲ್ಲಿ ಸ್ಥಿತ್ಯಂತರ ಸಂಸ್ಕೃತಿಯೊಂದು ರೂಪುಗೊಂಡಿವೆ. ಇದರಿಂದ ಗ್ರಾಮೀಣ ಹಾಗೂ ನಗರ ಸಂಸ್ಕೃತಿಗಳೆರಡೂ ಉಳಿದುಕೊಂಡವು. ಸ್ಥಳೀಯ ಕಲೆಗಳು ಯಾವುವು, ವಲಸೆ ಬಂದ ಕಲೆಗಳು ಯಾವುವು ಎಂದು ತಿಳಿಯದಷ್ಟು ಇವು ಬೇರು ಬಿಟ್ಟಿವೆ.

ಇಂದಿನ ಯುವ ಜನಾಂಗಕ್ಕೆ ಜನಪದ ಕಲೆಗಳ ಪರಿಚಯವಾಗಬೇಕಾದುದು ಅನಿವಾರ್ಯ. ಯುವಕರಲ್ಲಿ ಜನಪದ ಕಲೆಗಳ ಬಗ್ಗೆ ವಿಶೇಷ ಆಸಕ್ತಿ ಹುಟ್ಟಿ ಅವುಗಳನ್ನು ಅವರು ನಶಿಸಿಹೋಗದಂತೆ ಕಾಪಾಡಿಕೊಂಡು ಬರುತ್ತಾರೆ. ಪ್ರಚಾರ ಮಾಡುತ್ತಾರೆ.

ಜನಪದ ಕಲೆಗಳ ಉಳಿವಿಗಿರುವ ಮಾರ್ಗಗಳು

1. ಸಂಘ ಸಂಸ್ಥೆ, ಸರ್ಕಾರ ಮತ್ತು ಜನರ ಸಹಕಾರ.
2. ಚಲನಚಿತ್ರಗಳಲ್ಲಿ ಜನಪದ ಕಲೆಗಳ ಅಳವಡಿಕೆ (ಸಮೂಹ ಮಾಧ್ಯಮ)
3. ಜಿಲ್ಲಾ ಪರಿಷತ್ತು ಆಯಾ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಜನಪದ ಕಲೆಗಳು ಮತ್ತು ಕಲಾವಿದರಿಗೆ ಪ್ರೋತ್ಸಾಹಿಸುವುದು.
4. ಜನಪದ ಸಮಾವೇಷಗಳನ್ನು ಕಾಲಕಾಲಕ್ಕೆ ನಡೆಸಿ ಜನಪದಕಲೆಗಳನ್ನು ಪ್ರದರ್ಶಿಸುವುದು.
5. ಹಬ್ಬಹರಿದಿನ ಉತ್ಸವ. ಕಲಾಮೇಳಗಳ ಸಂದರ್ಭಗಳಲ್ಲಿ ಜನಪದ ಕಲಾಪ್ರದರ್ಶನಗಳಿಗೆ ಆದ್ಯತೆ ನೀಡುವುದು.
6. ಸಾಹಿತ್ಯ ಸಮ್ಮೇಳನ ಕಾಲದ ಮೆರವಣಿಗೆ, ಕರ್ನಾಟಕದಲ್ಲಿ ನಡೆಯುವ ವಿವಿಧ ಉತ್ಸವಗಳು. ಉದಾ: ಕದಂಬೋತ್ಸವ, ಹಂಪಿ ಉತ್ಸವ, ಬೆಂಗಳೂರು ಹಬ್ಬ ಇತ್ಯಾದಿ. ಈ ಕಾಲದಲ್ಲಿ ಯಥೇಚ್ಛವಾಗಿ ಜನಪದ ಕಲೆಗಳನ್ನು ಪ್ರದರ್ಶಿಸುವುದು.
7. ಪಠ್ಯಪುಸ್ತಕಗಳಲ್ಲಿ ಕೆಲವಾದರೂ ಜನಪದ ಕಲೆಗಳ ಪರಿಚಯವಿರುವುದು.
8. ಜಾನಪದ ವಸ್ತು ಸಂಗ್ರಹಾಲಯಗಳನ್ನು ಪ್ರತಿ ಜಿಲ್ಲೆಯಲ್ಲೂ ಸ್ಥಾಪಿಸುವುದು.
9. ಜನಪದ ಕಲೆಗಳು ಕುರಿತ ಪುಸ್ತಕ ಪ್ರಕಟಣೆ
10. ಶಾಲಾಕಾಲೇಜು ಮಕ್ಕಳಿಗೆ ಜನಪದ ಕಲೆಗಳ ಸ್ಪರ್ಧೆಗಳ ಏರ್ಪಾಟು. ಉದಾ; ಕೋಲಾಟ, ಉಮ್ಮತ್ತಾಟ್ ನೃತ್ಯ, ಸುಗ್ಗಿ ಕುಣಿತ ಇತ್ಯಾದಿ.
11. ಜಪದ ಕಲೆಗಳ ಅಭ್ಯಾಸಕ್ಕೆ ವಿದ್ಯಾರ್ಥಿ ವೇತನ ನೀಡಿಕೆ.
12. ಪ್ರತಿಯೊಂದು ಜಿಲ್ಲೆ, ತಾಲ್ಲೂಕು, ಹೋಬಳಿ ಮತ್ತು ಗ್ರಾಮದಲ್ಲಿ ಸ್ಥಳೀಯ ಕಲೆಗಳ ಕುರಿತು ಕಾರ್ಯಕ್ರಮ.

'ಜನಪದ ಕಲೆಗಳು ಸಮಕಾಲೀನ ಬದುಕಿನ ಬದಲಾವಣೆಗಳನ್ನು ಬಿಂಬಿಸುತ್ತವೆ ಹಾಗೂ ಅದರಿಂದ ಬೆಳವಣಿಗೆ ಸಾಧಿಸುತ್ತವೆ. ಜನಪದರ ಕ್ರಿಯಾತ್ಮಕ ಚಟುವಟಿಕೆಗಳನ್ನು ಅನುಸರಿಸಿ

ಜಾನಪದವು ಹುಟ್ಟುತ್ತದೆ ಮತ್ತು ಕಾರ್ಯ ನಿರ್ವಹಿಸುತ್ತದೆ' ಎಂಬ ಫಿನ್ಲೆಂಡಿನ ಜಾನಪದ ಅಧ್ಯಯನಶೀಲ ಎಲಿಯಾಸ್ ಲೋನ್ರಾಟ್ ಅವರ ಮಾತುಗಳು ಅರ್ಥಪೂರ್ಣ.

ಪ್ರತಿಯೊಂದು ಜನಪದ ಕಲೆಯ ಹಿನ್ನಲೆ, ತತ್ಸಂಬಂಧದ ಸಾಂಸ್ಕೃತಿಕ ಸಂಗತಿಗಳು ತಿಳಿಯಬೇಕು. ಯಾವ ಆರಾಧನೆ, ಅದರ ವಿಶಿಷ್ಟತೆ ಏನು, ಅದರ ಬಗೆಗಿರುವ ಪುರಾವೆಗಳೇನು, ಯಾವ ಜನವರ್ಗ, ಯಾವ ಸಂದರ್ಭದಲ್ಲಿ ಅದನ್ನು ಆಚರಿಸುತ್ತಾರೆ ಅಥವಾ ಪ್ರದರ್ಶಿಸುತ್ತಾರೆ. ಹಾಗೂ ಇದರ ಮುಖ್ಯ ಆಶಯವೇನು ಇರಬಹುದು ಎಂಬುದನ್ನು ತಿಳಿದಾಗ ಪ್ರತಿಕಲೆಯ ಕುರಿತಾದ ಅನೇಕಾನೇಕ ವಿಚಾರಗಳು ತಿಳಿಯುತ್ತವೆ.

'ಕಲೆಗಾಗಿ ಕಲೆ' ಎಂಬುದು ಒಂದು ಸಿದ್ಧಾಂತ. ಇದನ್ನು ಜನಪದರೂ ಅರಿತಿದ್ದರು. ಜಾನಪದ ಆಚರಣೆಗಳಿಗೂ ಮಹತ್ವ ನೀಡಿದ್ದರು. ಕಲೆಗಳ ಮೂಲಕ ಅವು ಬಿಂಬಿಸಲ್ಪಡುತ್ತಿದ್ದವು. ಬಹುತೇಕ ಜನಪದ ಕಲೆಗಳಿಗೆ ಗ್ರಾಮದೇವತೆಗಳ ಹಬ್ಬಗಳೇ ಆಶ್ರಯ.

ಜನಪದ ಕಲೆಗಳಲ್ಲಿ ಬಳಸುವ ವಾದ್ಯಗಳು ಜನಪದ ವಾದ್ಯಗಳು. ಗೊರವರ ಕುಣಿತದಲ್ಲಿ ಪಿಳ್ಳಂಗೋವಿ ಬಳಕೆಯಾದರೆ ಡೊಳ್ಳು ಕುಣಿತದಲ್ಲಿ ಡೊಳ್ಳೇ ವಾದ್ಯ

ಢಕ್ಕೆ, ಉಡುಕ್ಕೈ, ಡಮರುಗ, ದುಡಿ, ಬುಡುಬುಡಿಕೆ, ತಮ್ಮಟೆ, ಚಕ್ರಾವಿಬಳೆ, ದಪ್ಪು, ದಮ್ಮಡಿ, ಖಂಜರಿ, ಉಗುಮೆ, ಪಳ, ಮದ್ದಳೆ, ಕರಡಿ (ಕರಡಿ ಮಜಲು ನೃತ್ಯಕ್ಕೆ ಕರಡಿ ಬೇಕು), ಡೊಳ್ಳು, ಕನಕದಮಟೆ, ತಾಸೆ, ಸಂಬಾಳ, ನಗಾರಿ, ಗುಮಟೆ, ನ್ಯಾಲಗುಮ್ಮ, ಏಕತಾರಿ, ತುಂತುಣಿ, ಚೌಡಿಕೆ, ಕಂಟಪಿಟೀಲು, ಕಿನ್ನರಿ, ಪುಂಗಿ, ಗಣೆ, ಕೊಂಬು–ಕಹಳೆ, ಮುಖವೀಣೆ, ಕಂಸಾಳೆ, ನಂದೀಧ್ವಜ ಈ ಮೊದಲಾದವು ಜನಪದ ವಾದ್ಯಗಳು.

ಜಾನಪದ ಕಲೆಗಾರರು ಸಾಮಾನ್ಯವಾಗಿ ತಮ್ಮ ಸಂಗೀತ ವಾದ್ಯಗಳನ್ನು ತಾವೇ ಸ್ಥಳೀಯವಾಗಿ ತಯಾರಿಸಿಕೊಳ್ಳುತ್ತಾರೆ. ಪ್ರಕೃತಿಯಲ್ಲಿ ಸುಲಭವಾಗಿ ದೊರೆಯುವ ಹಲಸಿನ ಮರ, ಅತ್ತೀಮರ, ಸೋರೆಬುರುಡೆ, ಪ್ರಾಣಿಗಳ ನರ, ಧರ್ಮ, ಮೂಳೆ, ಕಂಚು, ತಾಮ್ರ, ಹಿತ್ತಾಳೆ ಮೊದಲಾದ ಲೋಹಗಳು, ಮಣ್ಣು ಮುಂತಾದವುಗಳಿಂದ ತಯಾರಿಸುತ್ತಾರೆ. ಭಾರತ ಜನಪದ ವಾದ್ಯಗಳ ತವರು. ಕರ್ನಾಟಕವೊಂದರಲ್ಲೆ 150ಕ್ಕೂ ಹೆಚ್ಚು ವೈವಿಧ್ಯಮಯ ವಾದ್ಯಗಳನ್ನು ಕಾಣಬಹುದಾಗಿದೆ. ಇವುಗಳಲ್ಲಿ ಕೆಲವು ವಾದ್ಯಗಳಿಗೆ ಅವುಗಳ ಉಗಮವನ್ನು ಕುರಿತ ಪುರಾಣ ಕಥೆಗಳಿವೆ. ಪರಶುರಾಮ ತನ್ನ ತಂದೆಯಾದ ಜಮದಗ್ನಿಯನ್ನು ಕೊಂದ ಕಾರ್ತವೀರ್ಯನನ್ನು ಸಂಹರಿಸಿ ಅವನ ಅವಯವಗಳಿಂದ ಚೌಡಿಕೆ ವಾದ್ಯವನ್ನು ಮಾಡಿಕೊಂಡು ಬಂದು ನುಡಿಸಿ ತನ್ನ ತಾಯಿ ಎಲ್ಲಮ್ಮನನ್ನು ಸಂತೋಷಗೊಳಿಸಿದನಂತೆ. ಶಿವ ಡೊಳ್ಳಾಸುರನನ್ನು ಸಂಹಾರ ಮಾಡಿ ಅವನ ಚರ್ಮದಿಂದ ಡೊಳ್ಳುಮಾಡಿಕೊಂಡು ಬಾರಿಸುತ್ತ ನರ್ತಿಸಿದನಂತೆ.

ಹಲವು ದೈವೀ ಸಂಬಂಧದ ಕಲೆಗಳೇ ಮುಂದೆ ರಂಗರೂಪ ಪಡೆದವು ಕೂಡ. ಉದಾ: ಜಾಲಾಟ, ಹಗರಣ.

ಜನಪದ ಕಲೆಗಳಲ್ಲಿ ಆರಾಧನೆಗಳೊಂದಿಗೆ ಕಂಡುಬರುವ ಕುಣಿತಗಳೇ ಪ್ರಧಾನ. ಸಂಕೀರ್ಣ ಕಲೆಗಳು, ರಂಗಭೂಮಿ ಕಲೆ. ಇತರ ಜನಪದ ಕಲೆಗಳು, ಕೋಲಾಟ ಒಂದು ಪ್ರಸಿದ್ಧ ಜನಪದ ಕಲೆ. ಆರಾಧನೆಗಳಲ್ಲಿ ಮಾರಿಯ ಆರಾಧನೆ, ನಾಗಾರಾಧನೆ, ಭೂತಾರಾಧನೆ, ವೀರಭದ್ರನ ಆರಾಧನೆ, ಯಲ್ಲಮ್ಮನ ಆರಾಧನೆ, ಮೈಲಾರಲಿಂಗನ ಆರಾಧನೆ, ಮತ್ತು ಮೊಹರಂ ಆರಾಧನೆ ಮುಖ್ಯವಾದವು. ವಿಶೇಷ ಬುಡಕಟ್ಟುಗಳ ಮತ್ತು ಜನವರ್ಗಗಳ ಕೆಲವು ಕಲೆಗಳು ಹೆಸರಾಗಿವೆ.

ಕುಣಿತಗಳು ಜಾನಪದ ನೃತ್ಯಗಳೆನಿಸಿವೆ. ಬೀದರ ತಾಲೂಕ ಬಿಟ್ಟು ಕರ್ನಾಟಕದಾದ್ಯಂತ ನಲವತ್ತಕ್ಕೂ ಹೆಚ್ಚು ಜನಪದ ನೃತ್ಯಗಳಿವೆ. ಇವು ಜನಪದ ಕಲೆಗಳಾಗಿ ಖ್ಯಾತಿವೆತ್ತಿವೆ. ಈ ನೃತ್ಯಗಳನ್ನು ಪ್ರಾದೇಶಿಕವಾಗಿ ಹೀಗೆ ವರ್ಗೀಕರಿಸಬಹುದು.

ಕರಡಿ ಮಜಲು, ಡೊಳ್ಳು ಕುಣಿತ, ಗೊಂದಲಿಗರ ಮೇಳ, ಕೋಲಾಟ, ಮೇಳ, ವಾಘೆಮುರುಳಿ.

ಕುರುಬದೇವರ ಕುಣಿತ, ಲಿಂಗದ ಬೀರರ ಕುಣಿತ, ಉಡ್ಡದ ಕುಣಿತ, ರಂಗದ ಕುಣಿತ, ಗಾರುಡಿಕುಣಿತ, ಕೋಲಕುಣಿಯುವುದು, ಭಾಗವಂತಿಕೆ ಮೇಳ, ಕರಪಾಲ ಮೇಳ, ಚೌಡಿಕೆ ಮೇಳ, ಪಟ ಕುಣಿತ, ಚಿಟ್ ಮೇಳ, ಗೊರವರ ಕುಣಿತ, ನಂದಿ ಕೋಲು, ಕಂಬಳಿ ಕುಣಿತ, ಮಾರಮ್ಮನ ಕುಣಿತ, ಮಣೇವು ಕುಣಿತ, ಕೋಲಾಟ.

4.2 ಕೋಲಾಟ

ಜನಪದ ಲೌಕಿಕ ನೃತ್ಯಗಳಲ್ಲಿ ಕೋಲಾಟ ಅತ್ಯಂತ ಜನಪ್ರಿಯವಾದುದು. ಜನಪದ ಮನರಂಜನೆ ಕಲೆಗಳಲ್ಲಿ ಒಂದು. ಕೋಲುಗಳ ಮೂಲಕ ಆಟ ಸಾಗುವುದರಿಂದ ಇದಕ್ಕೆ ಕೋಲಾಟ ಎಂದೇ ಹೆಸರಿದೆ. ಸಂಗೀತ ಮತ್ತು ನೃತ್ಯಗಳ ಸಮ್ಮಿಲನವಾಗಿರುವ ಈ ಆಟ ಗ್ರಾಮ ಜೀವನದ ಒಂದು ವಿಶೇಷ ಮನರಂಜನ ಸಾಧನ. ವಿಶೇಷವಾಗಿ ಸುಗ್ಗಿಕಾಲ. ಹಬ್ಬ ಹರಿದಿನಗಳಲ್ಲಿ ಹೋಳಿ ಹಬ್ಬದ ಸಂದರ್ಭದಲ್ಲಿ ಕೋಲಾಟ ಪ್ರಚುರವಿದೆ.

ಕೋಲಾಟ ನಾಡಿನ ಎಲ್ಲ ಕಡೆಗಳಲ್ಲೂ ಕಂಡುಬರುತ್ತವೆ. ಕೋಲಾಟದಲ್ಲಿ ಸುಮಾರು ಎಂಟರಿಂದ ಇಪ್ಪತ್ನಾಲ್ಕು ಜನರವರೆಗೆ ಕೋಲು ಹುಯ್ಯುವ ಕಲಾವಿದರಿರುತ್ತಾರೆ. ಹುಡುಗರಂತೆ ದೊಡ್ಡವರೂ ಭಾಗವಹಿಸುತ್ತಾರೆ. ಶಾಲಾಮಕ್ಕಳೀಗೆ ಕೋಲಾಟ ಪ್ರಿಯ. ಕೋಲಾಟದ ಕೋಲುಗಳನ್ನು ನೀರಂಜಿ, ಬೈನೆ, ಸೀಬೆ, ಕಾರೆ ಮೊದಲಾದ ಗಿಡಮರಗಳಿಂದ ಮಾಡುವರು. ಆಟದಲ್ಲಿ ಗೆಜ್ಜೆ, ತಾಳ ಮತ್ತು ದಮ್ಮಡಿಗಳ ಬಳಕೆ ಇದೆ. ತಾಳ ಮತ್ತು ದಮ್ಮಡಿಗಳನ್ನು ಬಾರಿಸಲು ಪ್ರತ್ಯೇಕ ಪರಿಣತರಿರುತ್ತಾರೆ. ಕೋಲಾಟ ಆಡುವವರು ತಮ್ಮ ಕಾಲುಗಳಿಗೆ ಗೆಜ್ಜೆ ಕಟ್ಟಿಕೊಳ್ಳುವುದು ಸಾಮಾನ್ಯ.

ಕೋಲಾಟಕ್ಕೆ ವೇಷಭೂಷಣಗಳು ಬೇಕಿಲ್ಲ ಎನ್ನಬಹುದು. ಬಿಳಿ ಅಂಗಿ (ಬನಿಯನ್) ಬಣ್ಣದ ಚಡ್ಡಿ, ತಲೆಗೆ ಮತ್ತು ನಡುವಿಗೆ ಬಣ್ಣದ ವಸ್ತ್ರ, ಕಾಲಿಗೆ ಗೆಜ್ಜೆ ಇವು ಸಾಮಾನ್ಯ ವೇಷಭೂಷಣಗಳು.

ಉತ್ತರ ಕರ್ನಾಟಕದಲ್ಲಿ ಬಿಗಿದು ಕಟ್ಟಿದ ಕಚ್ಚೆ, ತಲೆಗೆ ಟೋಪಿ, ನಡುವಿನ ವಸ್ತ್ರ, ಕಾಲಿಗೆ ಗೆಜ್ಜೆ ಇರುತ್ತವೆ.

ದಕ್ಷಿಣ ಕರ್ನಾಟಕದಲ್ಲಿ ಕೋಲುಗಳ ಶಬ್ದವೇ ಹಾಡಿಗೆ ಪೂರಕವಾದ ತಾಳ. ಆದರೆ ಉತ್ತರ ಕರ್ನಾಟಕದಲ್ಲಿ ಮದ್ದಲೆ, ಡಪ್ಪು, ತಬಲಾ, ಢಕ್ಕೆ ಹಾಗೂ ಕಂಚಿನ ತಾಳಗಳನ್ನು ಬಳಸುವುದು ಉಂಟು.

ಕೋಲಾಟದಲ್ಲಿ ಐವತ್ತಕ್ಕೂ ಹೆಚ್ಚು ವೈವಿಧ್ಯಗಳಿವೆ. ಹೆಜ್ಜೆ ಹಾಕುವ ಅದನ್ನು ಬದಲಿಸುವ ವಿಧಾನವನ್ನು ಅನುಸರಿಸಿ ಹಾಗೂ ಒಂದೆಡೆ ಸೇರುವ ಅಥವಾ ಬೇರ್ಪಡುವ ಮತ್ತು ತಿರುಗಿನ ವಿನ್ಯಾಸವನ್ನು ಅನುಸರಿಸಿ ಕೋಲಾಟದ ವಿಧಗಳನ್ನು ಹೇಳಲಾಗುತ್ತದೆ. ಸುತ್ತುಕೋಲು, ತೂಗುಕೋಲು, ಬಿಚ್ಚುಕೋಲು, ವಸ್ತ್ರಕೋಲು, ಗೀರ್‌ಕಡ್ಡಿಕೋಲು, ದಾವಣೆ ಕೋಲು, ಕೊರವಂಜಿಕೋಲು, ಚಿತ್ರಕೋಲು ಮೊದಲಾದವು.

ಕೋಲಾಟ ಗಣೇಶ ಸ್ತುತಿಯೊಂದಿಗೆ ಆರಂಭವಾಗುತ್ತದೆ. ಸ್ತುತಿಯೊಂದಿಗೆ ಕೋಲುಗಳ ಸಪ್ಪಳವೂ ನಿಧಾನ ಗತಿಯಲ್ಲಿ ಆರಂಭವಾಗುತ್ತದೆ. ಅನಂತರ ಆಯಾ ಗ್ರಾಮಕ್ಕೆ ಸಂಬಂಧಿಸಿದ ವಿವಿಧ ದೇವರುಗಳ ಹಾಡು ಮೊದಲಾಗಿ ಕೆಲವಾರು ಪ್ರಾರಂಭಿಕ ಸ್ತುತಿಗಳ ನಂತರ ನೇರವಾದ ಅಟ ಆರಂಭವಾಗುತ್ತದೆ.

ಒಬ್ಬನ ಕೋಲಿಗೆ ಮತ್ತೊಬ್ಬನ ಕೋಲು ತಾಕಿಸುವ ಮೂಲಕ ಆರಂಬವಾಗುವ ಕೋಲಾಟ ಒಬ್ಬನಿಗೆ ಮತ್ತೊಬ್ಬ ಸುತ್ತು ಹೊಡೆಯುತ್ತಾ ಆಡುವುದು. ಗುಂಪುನಲ್ಲಿಯೇ ಚದುರಿದಂತೆ ನಿಂತು ಒಳಗೂ ಒಳಗಿನವನು ಹೊರಗೂ ಕೋಲನ್ನು ಕೊಡುವುದು ಮೊದಲಾದ ನಾನಾ ವಿಧವಾದ ಗತಿಗಳಲ್ಲಿ ಮತ್ತು ವಿನ್ಯಾಸಗಳಲ್ಲಿ ಕೋಲಾಟ ನಡೆಯುತ್ತದೆ.

ಜಡೆಕೋಲು ಎಂಬುದು ಕೋಲಾಟದಲ್ಲಿ ಒಂದು ವಿಶಿಷ್ಟ ಬಗೆ. ಆಟದ ಪ್ರಾರಂಭಕ್ಕೆ ಮೊದಲು ಹಗ್ಗಗಳಿಂದ ಜಡೆಯ ಹಿಂಡನ್ನು ಹೆಣೆದು ಒಟ್ಟುಗೂಡಿಸಿ ಅವುಗಳಿಂದ ತುದಿಯ ಜಡೆ ಅಥವಾ ಹಗ್ಗಗಳನ್ನು ಬಿಡಿಯಾಗಿಯೇ ಬಿಡುವರು. ಈ ಬಿಡಿ ಹಗ್ಗಗಳನ್ನೆಲ್ಲ ಸೇರಿಸಿದ ದಿಂಡು ಜಡೆಯನ್ನು ಯಾವುದಾದರೊಂದು ಸಾಧನಕ್ಕೆ ಕಟ್ಟಿರುತ್ತಾರೆ. ಉಳಿದ ಬಿಡಿ ಹಗ್ಗಗಳನ್ನು ಕಲಾವಿದರು ಸೊಂಟಕ್ಕೆ ಕಟ್ಟಿರುತ್ತಾರೆ. ಕೋಲು ಹುಯ್ಯುವಾಗ ಬಿಡಿ ಹಗ್ಗಗಳೆಲ್ಲ ಸೇರಿಕೊಂಡು ಜಡೆಯ ಆಕಾರಕ್ಕೆ ತಿರುಗುವುದರಿಂದ ಇದಕ್ಕೆ ಜಡೆಕೋಲು ಎಂಬ ಹೆಸರು ಬಂದಿದೆ.

ಸಾಮಾನ್ಯವಾಗಿ ಕೋಲಾಟದ ಮುಕ್ತಾಯದ ಹಂತದಲ್ಲಿ ಕೊರವಂಜಿ ಕೋಲನ್ನು ಆಡುತ್ತಾರೆ. ಇದರಲ್ಲಿ ಕೊರವಂಜಿ ವೇಷದ ಆಟಗಾರರನ್ನು ಮತ್ತೊಬ್ಬ ಹಿಡಿಯಲು ತೊಡಗುವನು. ಕೋಲು ಹುಯ್ಯುತ್ತಿರುವ ಉಳಿದವರ ಮಧ್ಯದಲ್ಲಿ ಕೊರವಂಜಿ ತಪ್ಪಿಸಿಕೊಳ್ಳಲು ಪ್ರಯತ್ನಿಸುವಳು. ಅವಳನ್ನು ಅಟ್ಟಿಸಿಕೊಂಡು ಹೋಗುತ್ತ ಕಡೆಗೊಮ್ಮೆ ಹಿಡಿಯುವನು. ಇದರ ನಂತರ ಮಂಗಳದೊಡನೆ ಆ ದಿನದ ಕೋಲಾಟ ಕೊನೆಗೊಳ್ಳುತ್ತದೆ.

ಕೋಲಾಟದಲ್ಲಿ ಬಳಸಲಾಗುವ ಪದಗಳದೂ ಪ್ರಮುಖ ಪಾತ್ರವೇ ಕೋಲಾಟ ತನ್ನ ಆರಂಭದ ಹಂತಗಳಲ್ಲಿ ಇತರ ಜನಪದ ಆಟಗಳಂತೆಯೇ ಒಂದು ಆಟವಾಗಿದ್ದು ಕ್ರಮೇಣ ನೃತ್ಯ ಮತ್ತು ಗೀತೆಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಕಲೆಯಾಗಿ ಮಾರ್ಪಟ್ಟಿರಬಹುದು. ಹೀಗಾಗಿ ಪದಗಳು ಕೋಲಾಟಕ್ಕೆ ಆಮೇಲೆ ಬಂದು ಸೇರಿವೆ.

ಕೋಲು ಕೋಲಣ್ಣ ಕೋಲೆ ಕೋಲುಕೋಲೆ

ಎಕ್ಕೋಲೆ ಕೋಃಣ್ಣ ಕೋಲೆ

ಎಂದು ಆರಂಭವಾಗುವ ಕೋಲಾಟದ ಪದದಂತೆ ಹಲವು ಕೋಲಾಟದ ಪದಗಳಿವೆ. 'ಶರಣು ಶರಣುವಯ್ಯ ಗಣನಾಯ್ಕ' ಮೊದಲು ನೆನೆದೇವು ಸ್ವಾಮಿ ಲಿಂಗನ ಸನುಮತ ಶಿವಗಂಗೆ ಬೆನಾವನ' ಎಂಬ ಗಣಪನ ಸ್ತುತಿಗಳು ಕೋಲಾಟದ ಪದಗಳಾಗಿವೆ. ಕೋಲಾಟದ ಪದಗಳಲ್ಲಿ ಕಥನ ರೂಪದ ಪದಗಳೂ ಸಿಗುತ್ತವೆ. ಚಿಟ್ ಮೇಳ ಕೋಲಾಟದಂತೆಯೇ ಉಳಿದುಬಂದಿರುವ ಒಂದು ಲೌಕಿಕ ನೃತ್ಯ ಜನಪದ ವಾದ್ಯ ಸಂಗೀತದ ಹಿರಿಮೆ ಸಾರುವ ಕಲೆ.

4.3 ಡೊಳ್ಳು ಕುಣಿತ

ಇದು ಅತ್ಯಂತ ಪ್ರಸಿದ್ದವಗಿರುವ ಜನಪದ ಕಲೆ ಉತ್ತರ ಕರ್ನಾಟಕದಲ್ಲಿ, ಶಿವಮೊಗ್ಗ, ಚಿತ್ರದುರ್ಗಗಳಲ್ಲಿ ಕಂಡುಬರುವ ಡೊಳ್ಳು ಕುಣಿತ ಬೀರೇಶ್ವರ ಸಂಪ್ರದಾಯಕ್ಕೆ ಸೇರಿದ ಧಾರ್ಮಿಕ ನೃತ್ಯ. ಕುರುಬ ಜನಾಂಗದ ಈ ನೃತ್ಯ ಒಂದು ಗಂಡು ಕಲೆ. ಡೊಳ್ಳು ದೊಡ್ಡ ಆಕಾರದ ಒಂದು ಧರ್ಮ ವಾದ್ಯ ಡೊಳ್ಳಿನ ಉರುಳೆ ಆಕಾರದ ಹೊಳವನ್ನು ತಾಳೆ, ಸುರಹೊನ್ನೆ ಅಥವಾ ಬೈನ ಮರದಿಂದ ಮಾಡಿರುತ್ತಾರೆ. ಉದ್ದ ಮೂರು ಅಡಿ. ಎರಡು ಅಡಿ ವ್ಯಾಸದ ಪೀಪಾಯಿ ಆಕಾರ. ಎಡಭಾಗಕ್ಕೆ ಆಡಿನ ಧರ್ಮವನ್ನು ಬಲಭಾಗಕ್ಕೆ ಕುರಿಚರ್ಮವನ್ನೂ ಹಗ್ಗ ಮತ್ತು ಬಾರುಗಳಿಂದ ಬಿಗಿದಿರುವರು. ಬಡಿಯಲು ಒಂದೂವರೆ ಅಡಿ ಉದ್ದದ ಕೋಲು. ಇದು ಬಿದಿರು ಅಥವಾ ಮರದ ಕೋಲು, ಡೊಳ್ಳು ನಗಾರಿಗಿಂತಲೂ ಹೆಚ್ಚು ಶಬ್ದ ಮಾಡುತ್ತದೆ. ಬೀರೇ ದೇವರ ಕುಣಿತದಲ್ಲಿ ವಿಶೇಷವಾಗಿ ಬಳಸುತ್ತಾರೆ. ಒಂದು ಭಾಗವನ್ನು ಕೋಲಿನಿಂದ ಬಡಿದರೆ ಇನ್ನೊಂದು ಭಾಗವನ್ನು ಕೈಯಿಂದ ತಟ್ಟುತ್ತಾರೆ.

ಡೊಳ್ಳಿನ ಸೃಷ್ಟಿಯ ಕುರಿತು ಒಂದು ಕಥೆಯೇ ಇದೆ. ಶಿವಪಾರ್ವತಿಯರು ಕೈಲಾಸದಲ್ಲಿ ಪಗಡೆ ಆಡುತ್ತ ಒಮ್ಮೆ ಕುಳಿತಿದ್ದರು. ಸೋತವರು ಕೈಲಾಸಬಿಟ್ಟು ಯಾರಿಗೂ ಕಾಣದಂತೆ ವಾಸಿಸಬೇಕು ಎಂದು ಪಂಥ ಕಟ್ಟಿದರು. ಶಿವಸೋತು ಭೂಲೋಕಕ್ಕೆ ಬಂದು ಕಲ್ಲಾಗಿ ಬಿದ್ದ. ಇವನ ಕಾವಲಿಗೆ ಮಾಯಾಮೂರ್ತಿ ಮಾಯೆ ರೂಪದಿಂದ ಸುಳಿದಾಡುತ್ತಿದ್ದ. ಶಿವನಿಲ್ಲದ ಪಾರ್ವತಿ ಶಿವನನ್ನು ಹುಡುಕಿ ಬರಲು ವಾಯುದೇವನನ್ನು ಕಳುಹಿಸಿದಳು. ಶಿವ ಸಿಗಲಿಲ್ಲ. ಕಡೆಗೆ ನಾರದ ಶಿವನ ಪತ್ತೆ ಹಚ್ಚಿದ. ಮಾಯಾಮೂರ್ತಿ ಕಳೇಬರ ಬಿಟ್ಟು ಬರಲಾರದೆ ಅದರಿಂದ ಡೊಳ್ಳು ಮಾಡಿಕೊಂಡನಂತೆ. ನಾರದ

ಡೊಳ್ಳು ಬಾರಿಸುತ್ತ ಕೈಲಾಸಕ್ಕೆ ಬಂದನಂತೆ! ಡೊಳ್ಳು ಪದ ಆರಂಭದಲ್ಲಿ ಈಗಲೂ ಹೇಳುವ 'ದೇವಿ ನಿಮ್ಮಯ ದೇವರ

ಬಂದಾ ಬನ್ನಿರೇ' ಎಂಬ ಮಾತು ನಾರದ ಪಾರ್ವತಿಗೆ ಹೇಳದುದಾಗಿದೆ.

ಡೊಳ್ಳು ಕುಣಿತದಲ್ಲಿ ಹತ್ತರಿಂದ ಇಪ್ಪತ್ತು ಜನ ಭಾಗವಹಿಸುವರು ಅಥವಾ ಇನ್ನೂ ಹೆಚ್ಚು. ಕುಣಿತದ ಮೊದಲಿಗೆ ವೃತ್ತಾಕಾರದಲ್ಲಿ ನಿಂತ ಡೊಳ್ಳಿನವರು ಒಂದೇ ಗತ್ತು ಮತ್ತು ಒಂದೇ ನಾದದಲ್ಲಿ ಡೊಳ್ಳು ಬಡಿಯುವರು. ಆಗ ಕುಣಿತ ಆರಂಭ ಅನಂತರ ಆವೇಶ ಬಂದವನೊಬ್ಬ ಮಧ್ಯೆ ಪ್ರವೇಶಿಸಿ ತನ್ನ ಡೊಳ್ಳಿನ ಗತ್ತು ಬದಲಿಸಿ ಬಡಿಯುತ್ತ ಲಾಗ ಹಾಕುತ್ತಾನೆ. ಉಳಿದವರು ಅವನ ಗತ್ತನ್ನೇ ಅನುಸರಿಸಿ ಅವನನ್ನು ಹುರಿದುಂಬಿಸಲು ಉಬ್ಬುಬ್ಬಿ ಗಟ್ಟಿಯಾಗಿ ಡೊಳ್ಳು ಬಾರಿಸುವರು. ಸುಸ್ತಾಗುವವರೆಗೂ ಅವನು ಬಾರಿಸುತ್ತಿದ್ದು ಆವೇಶ ಇಳಿದ ಮೇಲೆ ತನ್ನ ಗುಣಿ ಬಿಸಾಡಿ ಎರಡೂ ಕೈಗಳಿಂದ ದುಪ್ ದುಪ್ಪಾಂಗ್, ದುಪ್ ದುಪ್ಪಾಂಗ್ ಎಂಬ ಗತ್ತಿನಲ್ಲಿ ನಿಧಾನವಾಗಿ ಬಾರಿಸುತ್ತ ತನ್ನ ಮೊದಲ ಸ್ಥಾನಕ್ಕೆ ಬಂದು ನಿಲ್ಲುತ್ತಾನೆ. ಆಗ ಉಳಿದವರು ಒಂದೇ ಗತ್ತಿನಲ್ಲಿ ಡೊಳ್ಳು ಬಾರಿಸುತ್ತಿರುತ್ತಾರೆ. ಸರತಿ ಪ್ರಕಾರ ಮತ್ತೊಬ್ಬ ಪ್ರವೇಶಿಸಿ ಶುರು ಹಚ್ಚಿಕೊಳ್ಳುತ್ತಾನೆ. ಹೀಗೆ ಸರತಿಯಂತೆ ಒಬ್ಬೊಬ್ಬರಾಗಿ ಮುಂದೆ ಬಂದು ಕುಣಿತದಲ್ಲಿ ಭಾಗವಹಿಸಿ ತಮ್ಮ ಕೌಶಲ ಪ್ರದರ್ಶಿಸುವರು.

ಡೊಳ್ಳು ಕುಣಿತ ಎರಡು ಗಂಟೆ ಕಾಲ ನಡೆಯುತ್ತದೆ. ಗುಣಿ ಬಾರಿಸುತ್ತ ಕಥೆ ಹೇಳುವ ಪರಿಪಾಠವು ಉಂಟು.

ಡೊಳ್ಳಿನ ಮೇಳವನ್ನು ಒಡ್ಡಿ ವಾಲಗ ಎಂದೂ ಕರೆಯುತ್ತಾರೆ. ಡೊಳ್ಳು ಕುಣಿತದಲ್ಲಿ ವಿಶೇಷ ಮಜಲುಗಳಿರುತ್ತವೆ. ಕುಳಿತು ಬಾರಿಸಬಹುದು. ಡೊಳ್ಳು ಹಾರುತ್ತಿರುವಂತೆ ಲಾಗ ಹಾಕುವುದುಂಟು. ಡೊಳ್ಳು ಬಾರಿಸುತ್ತ ಎರಡು ಮೂರು ಅಡಿ ಮೇಲೆ ನೆಗೆಯುವರು. ಜೋಡಿ ಕಲಾವಿದರು ಎಡಗಾಲು ಮಂಡಿಯನ್ನು ನೆಲಕ್ಕೆ ಒತ್ತಿ ಬಲಗಾಲು ಊರಿಕೊಂಡು ಡೊಳ್ಳು ಬಾರಿಸುವರು. ಮರಗಾಲು ಕಟ್ಟಿಕೊಂಡೂ ಡೊಳ್ಳು ಬಾರಿಸುವುದಿದೆ. ಬಾಯಲ್ಲಿ ತುಂಬಿದ ಕೊಡ ಕಟ್ಟಿಕೊಂಡು ನೀರು ಚೆಲ್ಲದಂತೆ ಡೊಳ್ಳು ಬಾರಿಸುತ್ತ ಕುಣಿಯುವರು.

ಕುಣಿತದಲ್ಲಿ ಡೊಳ್ಳಿನೊಂದಿಗೆ ಜೋಡು ಕಂಚಿನ ತಾಳ, ಒಂದು ಹಿತ್ತಾಳೆಯ ಜಾಗಟೆ ಇರುತ್ತವೆ. ಕೊಳಲು ಇರುವುದೂ ಉಂಟು.

4.4 ಗೊಂದಲಿಗರ ಮೇಳ

ಕಥಾ ಪ್ರಧಾನ, ಚೌಡಿಕೆ ಮೇಳ, ಕರಪಾಲ ಮೇಳಗಳಂತೆ ಸಾಹಿತ್ಯ ಸಂಗೀತ, ಕುಣಿತಗಳು ಇಲ್ಲಿ ಇರುತ್ತವೆ. ಕಥಾ ನಿರೂಪಣೆಯ ನಡುವೆ ಹಾಡು, ಕುಣಿತ ಇದ್ದು ಜನರು ಆಸಕ್ತಿ ತಳೆಯುತ್ತಾರೆ.

ಗೊಂದಲಿಗರು ಅಂಬಾಭವಾನಿಯ ಹೆಸರಿನಲ್ಲಿ ಗೊಂದಲ ಹಾಕುವುದನ್ನೇ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿರುವ ಒಂದು ಸಮುದಾಯದವರು. ಮೂಲತಃ ಮಹಾರಾಷ್ಟ್ರಕ್ಕೆ ಸೇರಿದವರು. ಇವರು

ಅನೇಕ ಹಬ್ಬಗಳನ್ನು ಆಚರಿಸುತ್ತಾರೆ. ಮೊಹರಂ ಮತ್ತು ಹೋಳಿ ಹಬ್ಬಗಳಲ್ಲಿ ಇವರು ಕಟ್ಟುವ ವೇಷಗಳನ್ನು ಸೋಂಗು ತಗೆಯುವುದು ಎನ್ನುವರು. ದಸರಾ ಕಾಲದ ಅಂಬಾ ಭವಾನಿ ಪೂಜೆ ಇವರ ದೊಡ್ಡ ಹಬ್ಬ. ಗೊಂದಲ ಹಾಕುವುದು ಸಾಮಾನ್ಯವಾಗಿ ಅಂಬಾಭವಾನಿ ಮುಂದೆ ನಿಂತೇ. ಗೊಂದಲದಲ್ಲಿ ಭಾಗವಹಿಸುವ ಮೂವರಲ್ಲಿ ಎಲ್ಲರೂ ಒಂದೊಂದು ವಾದ್ಯ ಹಿಡಿದಿರುತ್ತಾರೆ. ಸಂಬಾಳ, ಚೌಡಿಕೆ ಮತ್ತು ತಾಳ. ತಾಳ ಹಿಡಿದವನೆ ಕಥೆಗಾರ. ಗಣಪತಿ ಸ್ತುತಿಯೊಂದಿಗೆ ಗೊಂದಲ ಪ್ರಾರಂಭ. ಬಳಿಕ ದೇವಿಸ್ತುತಿ. ಸಂಬಾಳದ ಲಯಬದ್ಧವಾದ ಸದ್ದಿಗೆ ತಾಳಕ್ಕೆ ತಕ್ಕಂತೆ ಮೂವರೂ ವಿಶಿಷ್ಟ ರೀತಿಯಲ್ಲಿ ಮೈಮರೆತು ಕುಣಿಯುತ್ತಾರೆ.

ಸಂಬಾಳ ಜೋಡಿ ಬೋಗುಣಿಗಳುಳ್ಳ ಧರ್ಮವಾದ್ಯ. ಬೋಗುಣಿಗಳ ಬಾಯಿ 10 ಅಂಗುಲ ವ್ಯಾಸದ್ದಿರುತ್ತದೆ. ಮಣ್ಣು, ಮರ ಇಲ್ಲವೆ ಲೋಹದ ಬೋಗುಣಿಗಳು. ಎರಡು ಬಾಯಿಗಳಿಗೆ ಆಡಿನ ಧರ್ಮ ಹೊದಿಸಿರುತ್ತಾರೆ. ಎರಡು ಬೋಗುಣಿಗಳ ನಡುವೆ ಕಂಚಿನ ತಾಳಗಳನ್ನು ಜೋಡಿಸಿರುತ್ತಾರೆ. ವಾದ್ಯವನ್ನು ಹೆಗಲಿಗೆ ಹಾಕಿಕೊಂಡು ಬಾಗಿದ ಬಿದಿರು ಕಡ್ಡಿಗಳಿಂದ ಬಾರಿಸಿದಾಗ ತಾಳಗಳ ಧ್ವನಿಯೂ ಸೇರಿ ಅಕರ್ಷಣೀಯ ನಾದಚಿಮ್ಮುತ್ತದೆ. ಈಚೆಗೆ ಗೊಂದಲಿಗರು ನೌಕರಿಗೆ ಸೇರಿದ್ದಾರೆ. ಮೇಳಗಳು ಕಡಿಮೆ. ಆದರೆ ವಿಶಿಷ್ಟ ಜನಪದ ಕಲೆ.

4.5 ವೀರಭದ್ರ ಕುಣಿತ

ವೀರಭದ್ರ ಶಿವನ ಬೆವರಿನಿಂದ ಹುಟ್ಟಿದ ದಕ್ಷ ಯಜ್ಞವನ್ನು ನಾಶಮಾಡಿದ ಪ್ರಚಂಡ. ಕರ್ನಾಟಕದಲ್ಲಿ ವೀರಭದ್ರನ ಆರಾಧನೆ ವಿಶೇಷವಾಗಿದೆ. ಹಂಪಿಯಲ್ಲಿ ಉದ್ದಾನ ವೀರಭದ್ರ ಗುಡಿ ಇದೆಯಾದರೆ ಕೆಳದಿಯ ಗುಡಿಯಲ್ಲಿ ವೀರಭದ್ರ ಮೂರ್ತಿ ಕಾಣುತ್ತೇವೆ. ವೀರಭದ್ರ ವೀರಶೈವ ಸಂಪ್ರದಾಯದ ಪ್ರಮುಖ ದೈವ ವೀರಭದ್ರನ ಆರಾಧನೆ ವಿಶೇಷ ಶಿವನಿಲ್ಲದೆಯೇ ಯಜ್ಞ ಮಾಡಿದ್ದ ಹಾಗೂ ತವರಿಗೆ ಬಂದ ಮಗಳು ದಾಕ್ಷಾಯಿಣಿಯನ್ನು ನಿರ್ಲಕ್ಷಿಸಿದ ದಕ್ಷ ಬ್ರಹ್ಮನನ್ನು ಬಗ್ಗು ಬಡಿದು ಅವನ ಶಿರವನ್ನು ಕತ್ತರಿಸಿ ಹಾಕಿದ ವೀರಪುರುಷ. ವೀರಭದ್ರನ ಕುಣಿತ ವೀರಭದ್ರನ ಅಭಿನಯವೇ ಆಗಿದೆ.

ಕಾಲಿಗೆ ಗೆಜ್ಜೆ ಮೊಣಕಾಲಿಗೆ ಹಿತ್ತಾಳೆಯ ಗಗ್ಗರ, ಕಾಸೆಹಾಕಿದೆ ಕೆಂಪುಪಂಚೆ, ಕೆಂಪು ಜುಬ್ಬ, ನಡುವಿಗೆ ಬಿಗಿದ ವಸ್ತ್ರ, ಎದೆಗೆ ರುದ್ರನ ಪ್ರತಿಮೆ, ಕೈಲಿ ಖಡ್ಗ, ಹಣೆಗೆ ವಿಭೂತಿ, ಹಿಂದಲೆಗೆ ಬಿಳಿ ಬಣ್ಣದ ಚಾಲಿ, ಹುಬ್ಬಿಗೆ ಕೆಂಪು ಬಣ್ಣ, ಮೊದೆಮೀಸೆ ಇವು ವೀರಭದ್ರ ಕುಣಿತದವನ ವೇಷಭೂಷಣ, ಕಲಾವಿದ ಆಂಗಿಕ ಅಭಿನಯದ ಮೂಲಕ ಕಥೆಯನ್ನು ನಿರೂಪಿಸುತ್ತಾನೆ. ಆಗ ಖಡ್ಗ ಝುಳಪಿಸುತ್ತಿರುತ್ತಾನೆ. ಕರಡೆ ಮತ್ತು ಚಮಾಳ ಬಳಸುವ ವಾದ್ಯಗಳು.

ಕಲಾವಿದ ಶಿವನ ವರ್ಣನೆಗೆ ಮಹತ್ವ ನೀಡುತ್ತಾನೆ. ಇದನ್ನು 'ಒಡಬು' ಎನ್ನುವರು. ವೀರಭದ್ರನ ಕುಣಿತ ರೋಷದ ಆವೇಶದ ಹಾಗೂ ಬಿರುಸಿನ ಕುಣಿತ. ಶಿವನನ್ನು ಸ್ತುತಿಸುವಾಗ ಶೈವ

ಧರ್ಮದ ಪ್ರಚಾರವೂ ಆಗಿ ಆಗ ಬಾರಿಸುವ ಚಮಾಳದ ಶಬ್ದ ಜೋರೇ ಕಲಾವಿದನ ವೀರಾವೇಶ, ಅಪಾರ.

ವೀರಭದ್ರ ಕುಣಿತ ಸಾಮಾನ್ಯವಾಗಿ ಶಿವರಾತ್ರಿ ಗೌರಿಹಬ್ಬ ಹಾಗೂ ಯುಗಾದಿಗಳಂದು ಇರುತ್ತವೆ.

4.6 ಹೋಳಿ ಕುಣಿತ

ಫಾಲ್ಗುಣ ಶುಕ್ಲ ಹುಣ್ಣಿಮೆಯಂದು ಹೋಳಿಹಬ್ಬ ಅಥವಾ ಕಾಮನ ಹಬ್ಬ ಆಚರಿಸುವುದು ಭಾರತದಾದ್ಯಂತ ರೂಢಿಯಲ್ಲಿದೆ.

ಹೋಳಿ ಹುಣ್ಣಿಮೆ ಎಂದೂ ಇದಕ್ಕೆ ಹೆಸರಿದೆ.

ರತಿ. ಮನ್ಮಥರ ಕಥಾನಕದೊಂದಿಗೆ ಅಥವಾ ಹೋಳಿಕಾ ಎಂಬ ರಾಕ್ಷಸಿಯ ಕಥೆಯೊಂದಿಗೆ ರೂಢಿಯಲ್ಲಿರುವ ಹೋಳಿ ಹಬ್ಬ ರಂಗು ರಂಗಿನ ಹಬ್ಬ ಈ ಹಬ್ಬದಾತರಣೆ ಪ್ರದೇಶದಿಂದ ಪ್ರವೇಶಕ್ಕೆ ತುಸು ವ್ಯತ್ಯಾಸವೂ ಇರುತ್ತದೆ.

ಉತ್ತರ ಕರ್ನಾಟಕದಲ್ಲಿ ನಾಲ್ಕೆತ್ತಿನ ಬಂಡಿಯ ಮೇಲೆ ಕಾಮನನ್ನು ಕೂರಿಸಿ ಅಲಂಕರಿಸಿ ಮೋಜು ಮಾಡುವುದು ಒಂದು ಸಂಪ್ರದಾಯ. ಬಂಡಿಯ ಮುಂದೆ ಊರ ಜನರೆಲ್ಲ ಸಾಲುಸಾಲಾಗಿ ನಿಂತು ಕೈಲಿ ಹಲಗೆ ಹಿಡಿದು ಗುಣಿಯಿಂದ ಬಾರಿಸುತ್ತ ಕುಣಿಯುತ್ತಾರೆ. ಕಾಮದಹನ ಒಂದು ಕಾರ್ಯಕ್ರಮ ಕಾಮನನ್ನು ಕಟ್ಟಿಗೆ ರೂಪದಲ್ಲಿ ಸುಟ್ಟ ಬಳಿಕ ಓಕುಳಿ ಪ್ರಾರಂಭವಾಗುತ್ತದೆ. ಒಬ್ಬರ ಮೇಲೆ ಒಬ್ಬರು ಕೆಂಪು ಬಣ್ಣ (ಗುಲಾಲು) ಉಗ್ಗುವುದೇ ಓಕುಳಿಯಾಟ. ಇದೊಂದು ರಂಗಿನಾಟ. ಕೆಲವು ಕಡೆ ಓಕುಳಿ ರಂಗ ಪಂಚಮಿಯವರೆಗೆ ಅಂದರೆ ಐದು ದಿನಗಳ ಕಾಲ ನಡೆಯುತ್ತದೆ. ಬಂಡಿಯ ಮೇಲೆ ಬಣ್ಣದ ಹಂಡೆಗಳನ್ನು ಹೇರಿ ಸಿಕ್ಕು ಸಿಕ್ಕವರಿಗೆಲ್ಲ ಬಣ್ಣ ಹಾಕುತ್ತಾರೆ. ವಿವಿಧ ರೀತಿಯಲ್ಲಿ ಕುಣಿಯುವರು. ಗಂಡಸರಲ್ಲದೆ ಎಷ್ಟೋ ಕಡೆ ಹೆಂಗಸರೂ ಓಕುಳಿಯಾಟ ಆಡುತ್ತಾರೆ.

ಹೋಳಿಕುಣಿತ ಸಂಪ್ರದಾಯದಲ್ಲಿ ಹಾಸುಹೊಕ್ಕಾಗಿರುವ ಕಲೆ, ಬೀದರ ಹಾಗೂ ಹೈದ್ರಾಬಾದ ಜಿಲ್ಲೆಗಳಲ್ಲಿ ಗೊಂಡ ಜನರು ಹೋಳಿಹಬ್ಬ ಎಂದು ಆಚರಿಸುತ್ತಾರೆ. ಇದೊಂದು ವಿಶಿಷ್ಟಕಲೆ. ತಂಡದಲ್ಲಿ ಸುಮಾರು 14 ಜನರಿದ್ದು ಒಬ್ಬೊಬ್ಬರೂ ಢಕ್ಕೆ ಇಟ್ಟುಕೊಂಡಿರುತ್ತಾರೆ. ತಲೆಗೆ ಕೆಂಪು ಪೇಟವಿರುತ್ತದೆ. ಹೂವಿನದಂಡೆ ಇರಿಸಿಕೊಂಡಿರುತ್ತಾರೆ. ಸೊಂಟಕ್ಕೆ ಬಣ್ಣದ ಪಂಚೆ, ಬೆಳ್ಳಿ ಉಡುದಾರ. ಕಾಲುಗಳಿಗೆ ಕಡಗಗಳು ಇವು ಇವರ ವೇಷಭೂಷಣ.

ಕಪ್ಪು ನೀಲಿ ಬಣ್ಣದ ಉದ್ದವಾದ ನಿಲುವಂಗಿ ಧರಿಸಿರುವ ಇಬ್ಬರು ಕಮಂಗಿ ವೇಷದವರಿರುತ್ತಾರೆ. ಇವರು ಉದ್ದವಾದ ಮರದ ದಟ್ಟಿ ಹಿಡಿದುಕೊಂಡಿರುತ್ತಾರೆ. ಢಕ್ಕೆ ನುಡಿಸಿದುದಕ್ಕೆ ಸರಿಯಾಗಿ ಕುಣಿಯುತ್ತಾರೆ. ಹಾಡು ಹೇಳುವುದಿಲ್ಲ. ಬರಿ ಕುಣಿತ. ಮನೆಮನೆಯಲ್ಲಿ ಕುಣಿತ ನಡೆದ ವೇಳೆ ಅವರಿಗೆ ಹಣಸಿಗುತ್ತದೆ. ಆ ಹಣದಿಂದ ಒಂದು ಒಳ್ಳೆ ದಿನದಲ್ಲಿ ದೇವಾಲಯಕ್ಕೆ ಬಂದು ಪೂಜೆ ಮಾಡುವರು. ಹೋಳಿ ಹಬ್ಬ ಕುಣಿತ ಸಾಮಾನ್ಯವಾಗಿ ಶಿವರಾತ್ರಿಯಿಂದ ಮೂರು ದಿನ ಆಚರಿಸುವ

ಕಲೆ ಬೀದರ ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉಡುಪಿ ಜಿಲ್ಲೆಯಲ್ಲಿ ಕುಡುಬಿಯರು ಹಾಗೂ ಮರಾಠಿ ಜನಾಂಗದವರು ಹೋಳಿ ಕುಣಿತ ಮಾಡುವರು. ಶಿವರಾತ್ರಿಯ ಮೊದಲ ಏಕಾದಶಿಯಿಂದ ಆರಂಭಿಸಿ ಹೋಳಿ ಹುಣ್ಣಿಮೆಯ ಪಾಡ್ಯದ ರಾತ್ರಿ ಕುಣಿತ ಮುಗಿಸುತ್ತಾರೆ. ನಾಲ್ಕೈದು ದಿನ ಹಗಲು ರಾತ್ರಿ ಕುಣಿತವಿರುತ್ತದೆ. ಇದೊಂದು ಸಾಮೂಹಿಕ ನೃತ್ಯ, ಕುಡುಬಿಯರಲ್ಲಿ ಸುಮಾರು ಮುನ್ನೂರು ಕಲಾವಿದರು ಕೂಡಿ ಕೊಂಡರೆ ಮರಾಠಿಗಳಲ್ಲಿ ಮೂವತ್ತರಷ್ಟು ಜನರಿರುತ್ತಾರೆ. ಕಲಾವಿದರದು ವೇಷಭೂಷಣಗಳು ವಿಶಿಷ್ಟವಾಗಿರುತ್ತವೆ. ಕುಣಿತ ಆಕರ್ಷಕವಾಗಿರುತ್ತದೆ. ಗುಮ್ಮಟೆ ವಾದ್ಯದ ಬಳಕೆ ಇರುತ್ತದೆ. ನೃತ್ಯ ಚುರುಕು ನಡೆಯದಿರುತ್ತದೆ. ಕೋಲಾಟದ ಬಳಿಕ ಗುಮಟೆ ನೃತ್ಯವಿರುತ್ತದೆ.

ಹೋಳಿ ಕುಣಿತ ಮಾಡುವವರು ಆ ನಿರ್ದಿಷ್ಟ ಅವಧಿಯಲ್ಲಿ ಮಾಂಸಾಹಾರ ಸೇವಿಸುವುದಿಲ್ಲ. ಐದು ದಿನಗಳ ಕಾಲ ಕುಣಿತವಿರವಾಗ ಸ್ನಾನ ಮಾಡುವುದಿಲ್ಲ ಮತ್ತು ಮನೆಗೆ ಬರುವುದಿಲ್ಲ. ಊರ ದೇವಸ್ಥಾನದಲ್ಲಿ ಆಶ್ರಯ ಪಡೆಯುತ್ತದೆ. ಮರಾಠಿಗರಲ್ಲಿ ಹೋಳಿ ಕುಣಿತ ಆಚರಿಸಿದರೆ ಯಾವುದೇ ಮಾರಿ ಬರುವುದಿಲ್ಲ. ಎಂಬ ನಂಬಿಕೆ ಇದೆ.

4.7 ಅಣಿ ಪೀಣಿ

ಬೀದರ ತಾಲೂಕ ಅಲ್ಲದೆ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಕಂಡುಬರುವ ಒಂದು ಜನಪದ ಕಲೆ. ಗಂಡಸರ ಮೇಳ ಎಂದೂ ಇದಕ್ಕೆ ಹೇಳುವರು. ಕಾರ್ತಿಕ ಶುದ್ಧ ಪಾಡ್ಯದಿಂದ ಐದು ದಿನಗಳವರೆಗೆ ನಡೆಯುತ್ತದೆ. ಹಿಂದೆ ಇದ್ದ ವೈಭವ ಈಗ ಇಲ್ಲ. ದನಕಾಯುವ ನಾಲ್ಕೈದು ಮಂದಿ ಪಾಲ್ಗೊಳ್ಳುತ್ತಾರೆ.

ಗಣಜಲಿ ಹುಲ್ಲಿನಿಂದ ಹೆಡೆಯಾಕಾರವನ್ನು ಹೆಣೆಯುತ್ತಾರೆ. ಗೊಗ್ಗಿ ಎಂದು ಇದಕ್ಕೆ ಹೆಸರು. ಮಧ್ಯೆ ಹಣತೆಯೊಂದನ್ನು ಇಡುತ್ತಾರೆ. ಗೊಗ್ಗಿಯೊಂದಿಗೆ ಮನೆ ಹೊಸ್ತಿಲಲ್ಲಿ ಅಥವಾ ದನಕರುಗಳ ಎದುರಲ್ಲಿ ನಿಂತುಕೊಂಡವನು ಒಬ್ಬ ಗೀತೆಗಳನ್ನು ಹೇಳುತ್ತಾನೆ. ಇವು ದನಕರುಗಳಿಗೆ ಸಂಬಂಧಿಸಿದ ಹಾಡುಗಳೇ ಆಗಿರುತ್ತವೆ. ಪ್ರತಿಮನೆಗೂ ಹೋಗಿ ಹಾಡು ಹೇಳಿದ ಬಳಿಕ ಗೊಗ್ಗಿಯಲ್ಲಿರುವ ದೀಪಕ್ಕೆ ಆ ಮನೆಗಳಿಂದ ಎಣ್ಣೆ ತುಂಬಿಸಿಕೊಳ್ಳುತ್ತಾರೆ. ಮನೆಯವರು ಕಲಾವಿದರಿಗೆ ಕೊಬ್ಬರಿ, ಹಣ ಮೊದಲಾದವನ್ನು ಕೊಡುತ್ತಾರೆ.

4.8 ಬುಡಬುಡಕೆ

ಶಕುನ ಹೇಳಿಕೊಂಡು ಜೀವನ ಸಾಗಿಸುವವರು ಬುಡುಡಕೆಯವರು ಬುಡಬುಡಕೆ ಒಂದು ಧರ್ಮವಾದ್ಯ ಇದರ ರಚನೆ ಡಮರಗದಂತೆಯೇ ಇರುವುದರಿಂದ ಕಿರುಡಮರುಗ ಎಂದೂ ಇದಕ್ಕೆ ಹೇಳುವರು. ಸುಮಾರು 4 ಅಂಗುಲ ಉದ್ದವಿರುವ ಮರದ ಕಳಸಿನ ಎರಡು ಬಾಯಿಗಳಿಗೂ ಕಪ್ಪೆಯ ಧರ್ಮವನ್ನು ದಾರಗಳ ಸಹಾಯದಿಂದ ಹೊದಿಸಿರುತ್ತಾರೆ. ಕಳಸಿನ ಮಧ್ಯಭಾಗಕ್ಕೆ ಎರಡು ಸಣ್ಣ ಬಟ್ಟೆಯ ಗಂಟುಗಳಿರುವ ನೂಲಿನ ದಾರವನ್ನು ಕಟ್ಟಿರುವರು. ಕಳಸಿನ ನಡುವೆ ಬೆರಳುಗಳಿಂದ

ಹಿಡಿದು ಕೈಚಳಕದಿಂದ ತ್ವರಿತವಾಗಿ ಈ ವಾದ್ಯವನ್ನು ಅಲುಗಿಸಿದಾಗ ಗಂಟು ಹಾಕಿದ ದಾರಗಳು ಚರ್ಮದಭಾಗಗಳಿಗೆ ಬಡಿದು ನಾದ ಹೊಮ್ಮುತ್ತದೆ.

ಬುಡುಬುಡಕೆಯನ್ನು ಹಾಲಕ್ಕಿ ಶಕುನದವರು, ಹಾವಾಡಿಗರು ಹಾಗೂ ದೊಂಬರೂ ಉಪಯೋಗಿಸುತ್ತಾರೆ. ವಾದ್ಯದ ನಡುವೆ ಬಣ್ಣಬಣ್ಣದ ಬಟ್ಟೆಗಳನ್ನು ಕಟ್ಟಿ ಆ ಬಟ್ಟೆಗಳಿಂದ ಬಿಗಿಯಾಗಿ ಹಿಡಿದು ನುಡಿಸುವುದೂ ಉಂಟು.

ಬುಡುಬುಡಕೆಯವರ ವೇಷ ವಿಚಿತ್ರ ತಲೆಗೆ ಪೇಟ, ಉದ್ದನೆಯ ನಿಲುವಂಗಿ, ಕೋಟು, ಕಚ್ಚೆಪಂಚೆ, ಸೊಂಟಕ್ಕೆ ವಸ್ತ್ರ, ಕಂಕುಳಲ್ಲಿ ಹಿಂದುಮುಂದು ಇಳಿಬಿಟ್ಟಿರುವ ಜೋಳಿಗೆ ಚೀಲಗಳು. ಹೆಬ್ಬೆರಳಿನಲ್ಲಿ ಗಗ್ಗರ, ಕೈಗೆ ಕಡಗ, ಅಥವಾ ಗೆಜ್ಜೆ ಉದ್ದನೆಯ ನಾಮ.

ಬುಡಬುಡುಕೆಯವರು ನಿತ್ಯ ಕೋಳಿ ಕೂಗುವ ಮೊದಲೇ ಬೇಗನೆ ಎದ್ದು ದೇವರನ್ನು ಪೂಜಿಸಿ, ವೇಷ ಧರಿಸಿ, ಹಳ್ಳಿ ಹಳ್ಳಿಗೆ ಹೊಗಿ ಶಕು ನುಡಿಯುತ್ತಾರೆ. ಈ ಶಕುನ ಸತ್ಯವಾಗುತ್ತದೆ ಎಂಬ ನಂಬಿಕೆ ಕಲಾವಿದರದು. ಜಯವಾಗಲಿ ಸ್ವಾಮಿ ಜಯವಾಗಲಿ ಸ್ವಾಮಿ ಎಂದು ಶುಭವನ್ನು ಹಾರೈಸುತ್ತ ಶಕುನ ನುಡಿಯುತ್ತೇವೆ ಎನ್ನುವ ಇವರು ಅಶುಭ ಇದ್ದಾಗ ಶಾಂತಿ ಪರಿಹಾರವನ್ನೂ ಸೂಚಿಸುವರು. ಇವರ ಶಕುನವನ್ನು ಹಾಲಕ್ಕಿ ಶಾಸ್ತ್ರ ಎನ್ನುವರು. ಹಾಲಕ್ಕಿಯ ಭಾಷೆ ಬುಡಬುಡಿಕೆಯವರಿಗೆ ಮಾತ್ರ ಅರ್ಥವಾಗುತ್ತದೆ.

4.9 ದೊಂಬರಾಟ

ಕರ್ನಾಟಕದಲ್ಲಿ ಕಂಡುಬರುವ ದೊಂಬರು ಒಂದು ಅಲೆಮಾರಿ ಜನಾಂಗ. ಇವರು ಪ್ರದರ್ಶಿಸುವ ಕಸರತ್ತು ಒಂದು ಕಲೆ. ಅದೇ ದೊಂಬರಾಟ. ಇಂದಿಗೂ ಈ ಕಲೆ ಪ್ರಚಲಿತದಲ್ಲಿದೆ.

ಕಲೆ ಪ್ರದರ್ಶನ ನೀಡುವ ಮುನ್ನ ದೊಂಬರು ತಾವು ಬೀಡು ಬಿಟ್ಟಿರುವ ಊರಿನಲ್ಲಿ ಡೋಲು ಬಾರಿಸುತ್ತಾ ಪ್ರಚಾರ ಮಾಡುವರು. ಇದರಿಂದ ಜನಕ್ಕೆ ದೊಂಬರಾಟ ನಡೆಯುವುದು ತಿಳಿಯುತ್ತದೆ.

ಇವರ ಸಲಕರಣೆಗಳು ಎಂದರೆ ಅತಿಭಾರದ ಎತ್ತು ಗಂಡು, ಕಬ್ಬಿಣದ ಹಾರೆ, ಸುತ್ತಿಗೆ, ಕಬ್ಬಿಣದ ಬಳೆಗಳು, ಕತ್ತಿ, ಕಿರುಗತ್ತಿ, ದೊಡ್ಡ ಕತ್ತರಿ, ಚಕ್ರಗಾಲಿ, ಸಲಾಕೆ ನೆಟ್ಟು, ಬಾಣಚಕ್ರ, ಚಣಸಾರ, ಕಬ್ಬಿಣದ ಬಾಣ, ಖಡ್ಗಗಳು, ಗಂಟೆ, ಕಿರುಗಂಟೆ, ಗೆಜ್ಜೆಸರ, ಇತರ ಲೋಹ ಸಲಕರಣೆಗಳು ಹಾಗೂ ನಾರು ಮತ್ತು ಚರ್ಮದ ಸಲಕರಣೆಗಳು.

ವಾದ್ಯಗಳು: ಬಗಿಲುರುಳು ಅಥವಾ ಡೊಂಬರ ಡೋಲು.

ಏಣಿ, ಮೋಡಿ ಚೀಲ, ತೋಳಂಗಿಗಳು, agave ಚರ್ಮದ ಟೋಪಿ ಬಾರುಕೋಲು ಈ ಕೆಲವು ಸಲಕರಣೆಗಳೂ ಇರುತ್ತವೆ.

ದೊಂಬರಾಟ ಪ್ರದರ್ಶನಕ್ಕೆ ವಿಶಾಲವಾದ ಬಯಲು ಸೂಕ್ತ. ಇಲ್ಲವೇ ರಸ್ತೆ ಬದಿ ಬಯಲೂ ಆಗುತ್ತದೆ. ಎರಡು ಗಟ್ಟಿಯಾದ ಗಣಿ ನೆಟ್ಟು ಎರಡನ್ನೂ ಕೂಡಿಸಿ ತಂತಿ ಅಥವಾ ಮಿಣಿ ಹಗ್ಗ ಬಿಗಿದಿರುತ್ತಾರೆ. ತಂತಿಯೇ ಹೆಚ್ಚು ಬಳಕೆಯಲ್ಲಿರುತ್ತದೆ.

ಗಂಡಸರೂ ಹೆಂಗಸರೂ ಇಬ್ಬರೂ ಆಟದಲ್ಲಿ ಪಾಲ್ಗೊಳ್ಳುತ್ತಾರೆ. ಗಂಡಸರು ಒಂದು ಚಡ್ಡಿ ಬನಿಯನ್ ಧರಿಸಿರುತ್ತಾರೆ. ಹೆಂಗಸರು ಬಣ್ಣಬಣ್ಣದ ದಾವಣಿಲಂಗ, ಕುಪ್ಪಸ ತೊಟ್ಟಿರುತ್ತಾರೆ. ಈ ಉಡುಗೆಯಲ್ಲಿ ತುಸು ವ್ಯತ್ಯಾಸವೂ ಇರಬಹುದು.

ಆಟಗಾರ ಒಂದು ಮೂಲೆಯಲ್ಲಿ ಚಾಪೆಹಾಕಿ ಅದರ ಮೇಲೆ ಕಂಬಳಿ ಹಾಸುತ್ತಾನೆ. ಮಂತ್ರದ ಗಾಜಿನ ಗುಂಡು, ಕಬ್ಬಿಣದ ಗುಂಡು ಮೊದಲಾದ ಕುಲಕಸುಬಿಗೆಂದು ಬಂದ ವಸ್ತುಗಳನ್ನು ಹರವುತ್ತಾನೆ. ಡೋಲು ಬಾರಿಸುವವನು ಜನರನ್ನು ಆಕರ್ಷಿಸಲು ಡೋಲು ಬಾರಿಸುತ್ತಾನೆ. ಇನ್ನೊಬ್ಬ ಲಾಗ ಹಾಕುತ್ತಿರುತ್ತಾನೆ. ಗುಂಪಿನ ಮುಖ್ಯಸ್ಥ ಸಗಣಿ ಬೆನಕನ ಪೂಜೆ ಮಾಡುವನು. ಬಳಿಕ ಜನರಿಗೆ ಕೈಮುಗಿದು ಆಟ ಪ್ರಾರಂಭ. ಆಟಗಾರರು ಅಂತರ್ಲಾಗ. ತಿಪ್ಪರಲಾಗ ಹಾಕುತ್ತಾ ಚಂಗನೆ ಹಾರಿ ಗಣಿಗೆ ಬಿಗಿದ ತಂತಿ ಮೇಲೆ ಕುಳಿತು ಗಿರಿಗಟ್ಟುವಂತೆ ತಿರುಗುವರು. ಕೈಲಿ ಒಂದು ಬಿದಿರಿನ ಗಳು ಹಿಡಿದು ತಂತಿಯ ಮೇಲೆ ನಡೆಯುವುದು ಹಾಗೂ ತಂತಿಯ ಮಧ್ಯೆ ನಿಂತ ಅದೂ ಇದೂ ಕಸರತ್ತುಗಳನ್ನು ಮಾಡುತ್ತಾನೆ. ಜನ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುವರು.

4.10 ಮೊಹರಂ ಕುಣಿತ

ಮೊಹರಂ ಮುಸ್ಲಿಂ ಸಂಪ್ರದಾಯದ ಹಬ್ಬವಾದರೂ ಮೂಲ ಉದ್ದೇಶ ಶೋಕಾಚರಣೆ. ಜನರಲ್ಲಿ ಭಯ ಭಕ್ತಿ ಮೂಡಿಸುವ 10 ದಿನಗಳ ಹಬ್ಬ ಮೊಹರಂನ ಕೊನೆ ದಿನ ಕರ್ಬಲಾ ಎಂಬಲ್ಲಿ ನಡೆದ ಬಲಿದಾನದ ಸ್ಮರಣೆ. ಒಂದು ರೀತಿಯಲ್ಲಿ ಪುಣ್ಯ ತಿಥಿ.

ಹತ್ತು ದಿನಗಳ ಕಾಲ ಜರುಗುವ ಮೊಹರಂನ ಆರಂಭವೇ ಮಸೀದಿ ಮುಂದೆ ಮಾಡುವ ಅಲಾವಿ ಕುಣಿತದಿಂದ ಆರಂಭ. ಹಬ್ಬದ ವಾತಾವರಣ. ಅಲಾವಿ ಎಂದರೆ ಕೆಂಡದಿಂದ ಮಾಡಿಕೊಂಡ. ಈ ಕೊಂಡದ ಸುತ್ತ ಕುಣಿಯುವದೇ ಅಲಾವಿ ಕುಣಿತ.

ಚಂದ್ರ ಕಂಡಾಗ ಹಬ್ಬದ ಆರಂಭ. ಇಲ್ಲಿ ಮುಸ್ಲಿಂರೊಂದಿಗೆ ಹಿಂದೂಗಳು ಬೆರೆಯುತ್ತಾರೆ. ಫಕೀರಾಗಲು ಇಚ್ಛಿಸುತ್ತಾರೆ.

ಹಲಗೆಗಳ ತಾಳಕ್ಕೆ ಕ್ರಮವಾಗಿ ಇಡುತ್ತ ಕುಣಿಯುವವರಲ್ಲಿ ಉತ್ಸಾಹ ಇರುತ್ತದೆ. ಮೊಹರಂನ ಮುಖ್ಯ ದೇವರನ್ನು ಹೆಚ್ಚಾಗಿ ಹಿಂದೂಗಳೇ ಹೊರುತ್ತಾರೆ. ಭಕ್ತಿ ಆವೇಶವಿರುತ್ತವೆ.

ಮೊಹರಂ ದೇವರುಗಳ ಸವಾರಿ ಹೊರಟಾಗ ಇತರ ದೇವತೆಗಳ ಗುಡಿಗೆ ಭೇಟಿ ಕೊಡುವರು. ಕಾರಣಿಕ ಹೇಳುವಾಗ ಯಾವುದಾದರೊಂದು ದೇವಸ್ಥಾನ ಆರಿಸಿಕೊಳ್ಳುವರು. ಆಗ

ಮಳೆ ಹಾಗೂ ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಕೇಳಿ ತಿಳಿಯುತ್ತಾರೆ. ಸಾಮಾನ್ಯವಾಗಿ ಮೊಹರಂ ದೇವರ ಕಾರಣಿಕ ರಾಮಭಕ್ತ ಆಂಜನೇಯ ಗುಡಿಯಲ್ಲಿ ನಡೆಯುತ್ತದೆ.

ಮೊಹರಂನ ದಿನಗಳಲ್ಲಿ ಮೂಲಕರ್ಬಲಾದ ವಿವರಗಳನ್ನೊಳಗೊಂಡು ಹಾಡಲಾಗುವ ಹಾಡುಗಳನ್ನು ಮೊಹರಂ ಹಾಡುಗಳೆನ್ನುವರು. ಕನ್ನಡದಲ್ಲೂ ಈ ಹಾಡುಗಳಿವೆ. ಉತ್ತರ ಕರ್ನಾಟಕದ ಭಾಗದಲ್ಲಿ ಮೊಹರಂ ಹಾಡು ಹೇಳುವ ತಂಡಗಳೇ ಇವೆ.

4.11 ಪುಂಗಿ

ಹಾವಾಡಿಗರು ವಿಶೇಷವಾಗಿ ಬಳಸುವ ಪುಂಗಿ ಒಂದು ಗಾಳಿ ವಾದ್ಯ ಮೂಗಿನಿಂದ ಉಸಿರೆಳೆದುಕೊಂಡು ಬಾಯಿಯಿಂದ ವಾದ್ಯವನ್ನು ಊದುತ್ತಾರೆ.

ಪುಂಗಿಯಲ್ಲಿ ಎರಡು ಬಗೆ. ತೆಂಗಿನ ಕಾಯಿ ಗಾತ್ರದ ಕಹಿ ಸೋರೆ ಬರುಡೆಯ ತಿರುಳನ್ನು ತೆಗೆದು ತೊಟ್ಟಿನ ಹಾಗೂ ತುದಿಯಭಾಗದಲ್ಲಿ ರಂಧ್ರಗಳನ್ನು ಮಾಡಿ ಅವುಗಳಿಗೆ ಲಾಳದ ಕಡ್ಡಿಯನ್ನು ಮೇಣದ ಸಹಾಯದಿಂದ ಅಳವಡಿಸುತ್ತಾರೆ. ತೊಟ್ಟಿನ ಕಡೆಯ ಲಾಳದ ಕಡ್ಡಿಯನ್ನು ತುಟಿಗಳಿಗೆ ಸೇರಿಸಿಕೊಂಡು ಊದುತ್ತಾರೆ. ಅದೇ ತುದಿಯಲ್ಲಿರುವ ಲಾಳದ ಕಡ್ಡಿಯಲ್ಲಿ ರಂಧ್ರಗಳಿಲ್ಲದೆ ಇದ್ದರೆ ಆಗ ಅದು ಶ್ರುತಿ ಪುಂಗಿಯಾಗುತ್ತದೆ. ಶ್ರುತಿಯೊಂದಿಗೆ ಐದಾರು ರಂಧ್ರಗಳಿರುವ ಮತ್ತೊಂದು ಲಾಳದ ಕಡ್ಡಿಯೂ ಇದ್ದರೆ ಅದು ಹಾಡನ್ನು ನುಡಿಸುವ ಪುಂಗಿಯಾಗುತ್ತದೆ. ಶಂಖವೂ ಗಾಳಿವಾದ್ಯ.

ಢಕ್ಕೆ ಉಡುಕ್ಕೆ, ಪಳ, ಕುಣಿಮಿಣಿ, ಕನಕದಮಟೆ, ತಾಸೆ, ಸಂಬಾಳ, ಗುಮಟೆ, ಪಾಂಗ್‌ಗುಮಟೆ ಇತರ ಧರ್ಮ ವಾದ್ಯಗಳು. ಧರ್ಮವಾದ್ಯಗಳಿಗೆ ಹೆಚ್ಚಾಗಿ ಬಳಕೆಯಾಗುವುದು ಆಡಿನ ಧರ್ಮ

ನ್ಯಾಲಗುಮ್ಮ, ತುಂತುಣಿ, ಕರಟ ಪಿಟೀಲು ಇವು ತಂತೀವಾದ್ಯಗಳು

ಚಟುಕಿ, ಬಟ್ಟು ತಾಳ, ಜಾಗಟೆ, ತಣಿಗೆ, ಗೆಜ್ಜೆ, ಗಗ್ಗರ, ಕೈಸೆಲಂಬು, ಬಳೆಕೋಲು ಇವು ಕೆಲವು ಇತರ ಘನವಾದ್ಯಗಳು.

ಜಾನಪದ ಕಲೆಗಳ ಪ್ರದರ್ಶನಕ್ಕೆ ವಾದ್ಯಗಳ ಸಹಕಾರ ಬೇಕೇ ಬೇಕು. ಗ್ರಾಮಾಂತರ ಪ್ರದೇಶದ ಜನರಲ್ಲಿ ಬಳಕೆಯಲ್ಲಿರುವ ವಾದ್ಯಗಳು ಈ ಜನಪದ ವಾದ್ಯಗಳು ಇಂದಿನ ಶಿಷ್ಟವಾದ್ಯಗಳೆಲ್ಲ ಜನಪದ ವಾದ್ಯಗಳ ಪರಿಷ್ಕೃತ ರೂಪಗಳೇ

4.12 ಭಜನೆ

ನೀವು ಪಂಡರಾಪುರಕ್ಕೆ ಹೋದರೆ ಅಲ್ಲಿ ಭಜನೆ ಮಾಡುವವರನ್ನು ಹುಡುಕಿಕೊಂಡು ಹೋಗಬೇಕಿಲ್ಲ. ವಿಠಲನಾಮಸ್ಮರಣೆ ಮಾಡುತ್ತ ಇರುವ ಪಂಡರಿಭಜನೆ ಮೇಳದವರು ಕಾಣಸಿಗುತ್ತಾರೆ.

ಆದರೆ ಇದು ಪಂಡರಪುರದಲ್ಲಿಯಷ್ಟೆ ಅಲ್ಲ. ಭಕ್ತರು ನಡೆದು ಹೋಗುವಲ್ಲೆಲ್ಲ ದಾರಿಸಾಗುವುದಕ್ಕೆಂದು ಹಾಡಲಾರಂಭಿಸಿದ್ದು ಪಂಡರಿಭಜನೆಯಾಯಿತು.

ಭಜನೆ ಈಗೀಗ ಕಡಿಮೆ. ಒಂದು ಕಾಲಕ್ಕೆ ಭಜನೆ ಇಲ್ಲದ ಊರಿಲ್ಲ ಎನ್ನುವಂತಿತ್ತು. ಭಜನೆ ಜನಪದ ಕಲೆ. ಶೈವ ವೈಷ್ಣವ ಪಂಥಗಳೆರಡೂ ಭಜನೆ ಸಂಪ್ರದಾಯ ಹುಟ್ಟು ಹಾಕಿವೆ.

ಭಜನೆ ಎಂದರೆ ಸಾಮಾನ್ಯವಾಗಿ ಸಾಮೂಹಿಕ ವ್ಯಕ್ತಿಗತ ಭಜನೆಯೂ ಪದ್ಧತಿಯಿದೆ. ಒಂದು ಏಕತಾರಿ ಹಿಡಿದುಕೊಂಡು ಒಬ್ಬನೇ ಭಜನೆ ಹಾಡುತ್ತ ಹೋಗುತ್ತಾನೆ. ಇಲ್ಲವೇ ಒಂದು ಕಡೆ ಕುಳಿತು ಹಾಡುತ್ತಾನೆ.

ಸಾಮೂಹಿಕ ಭಜನೆ ಮೇಳ ರೂಪ. ಇಲ್ಲಿ ಐದಾರು ಜನ ಸೇರಿ ಹಾಡಬಹುದು. ಇಲ್ಲವೇ ಇನ್ನೂ ಹೆಚ್ಚು ಜನ ಇರಬಹುದು. ಏಕತಾರಿ. ತಾಳ, ತಪ್ಪಡಿ, ಚಾಜು, ಶ್ರುತಿ ಈ ಕೆಲವು ವಾದ್ಯಗಳನ್ನು ಬಳಸುತ್ತಾರೆ. ಮುಖ್ಯ ಗಾಯಕ ಭಜನೆ ಹಾಡು ಹೇಳಿಕೊಟ್ಟರೆ ಉಳಿದವರು ಅದೇ ಧಾಟಿಯಲ್ಲಿ ಪುನರವರ್ತಿಸುತ್ತಾರೆ. ಸಾಮಾನ್ಯವಾಗಿ ಭಜನೆ ಆರಂಭವಾಗುವಾಗ ಮತ್ತು ಮುಗಿಯುವಾಗ ಮುಖ್ಯಗಾಯಕ 'ಹರಹರ ಮಹಾದೇವ' ಎನ್ನುತ್ತಾರೆ. ಉಳಿದವರು ತಾವೂ ಹೇಳುತ್ತಾರೆ.

ಭಜನೆಗಳಲ್ಲಿ ನಿತ್ಯ ಭಜನೆ, ವಾರದ ಭಜನೆ ಹಾಗೂ ವರ್ಷದ ಭಜನೆ ಎಂದು ವಿಂಗಡಣೆ ಇದೆ. ಕೆಲವು ನಿರ್ದಿಷ್ಟ ವಾರಗಳನ್ನು, ಉದಾ: ಸೋಮವಾರ, ಶನಿವಾರ ಹೀಗೆ ಭಜನೆಗೆ ಆಯ್ಕೆ ಮಾಡಿಕೊಳ್ಳುತ್ತಾರೆ. ಭಜನೆಗಳಲ್ಲಿ ಸ್ತ್ರೀ ಪುರುಷರ ಭೇದ ಭಾವವಿರುವುದಿಲ್ಲ. ಭಜನೆ ಕಾಲದಲ್ಲಿ ಕುಣಿಯುವುದೂ ಇರಬಹುದು. ಇದನ್ನು ಭಜನೆ ಕುಣಿತ ಎನ್ನುವರು. ಮೋಹದಾವೇಶ ಭಕ್ತಿ. ಕುಣಿತ ಸರಳವಷ್ಟೆ, ಇಂತಹ ಭಜನೆಗಳನ್ನು ನೋಡಲು ಪ್ರೇಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ.

ಭಜನೆ ಭಕ್ತಿ ಪಂಥದ ಹೆಗ್ಗುರುತು. ಭಜನೆ ಸಂಪ್ರದಾಯ ಬೆಳೆಸಿದವರಲ್ಲಿ ಶಿಶುನಾಳಷರೀಫ, ಕಡಕೋಳ ಮಡವಾಳಪ್ಪ ಮೊದಲಾದ ಮುಖ್ಯರು. ದಕ್ಷಿಣ ಕರ್ನಾಟಕದಲ್ಲಿ ಭಜನ ಸಂಪ್ರದಾಯ ಜೋರು. ವೃತ್ತಿ ಗಾಯಕರೇ ಭಜನೆ ಪದಗಳನ್ನು ಹೇಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಪದ್ಧತಿ ಕಂಡು ಬರುವುದಿಲ್ಲ.

4.13 ಲಾವಣಿ

ಲಾವಣಿ ಒಂದು ಸುದೀರ್ಘ ಹಾಡು. ಉತ್ತರ ಕರ್ನಾಟಕದಲ್ಲಿ ಲಾವಣಿ ಹಾಡು ಹೇಳುವವರು ಮತ್ತು ಲಾವಣಿ ಸಂಪ್ರದಾಯ ವಿಶೇಷ. ಲಾವಣಿ ಜನಪದ ಹಾಡುಗಳಲ್ಲಿ ಒಂದು ಪ್ರಕಾರ. ಮರಾಠಿ ಭಾಷೆಯಲ್ಲೂ ಲಾವಣಿಗಳಿವೆ. ಲಾವಣಿಗಳಲ್ಲಿ ಬಯಲು ಲಾವಣಿ ಮತ್ತು ಮೇಳಲಾವಣಿ ಎಂದು ಎರಡು ವಿಧ.

ಬಯಲುಲಾವಣಿ: ಒಬ್ಬನೇ ಲಾವಣಿ ಹೇಳುತ್ತಾನೆ.

ಮೇಳಲಾವಣಿ: ಡಪ್ಪು,ತುಂತುಣಿ, ತಾಳಗಳೊಂದಿಗೆ ಹಾಡಲಾಗುತ್ತದೆ. ಅಂದರೆ ಜನರೂ ಹೆಚ್ಚು. ಲಾವಣಿಯಲ್ಲಿ ನಾಂದಿ ಭಾಗ, ಚೌಪಕ ಎಂದು ಕೆಲವು ಭಾಗಗಳಿರುತ್ತವೆ. ಗೀಗೀಹಾಡು, ಡಪ್ಪಿನ ಪದ, ಹರದೇಶಿ–ನಾಗೇಶಿ ಮೊದಲಾಗಿ ಲಾವಣಿಗಳನ್ನು ಹಲವು ಹೆಸರುಗಳಿಂದ ಕರೆಯುವರು.

(ಬಿಜಾಪುರ ಜಿಲ್ಲೆ ಸಿಂದಗಿ ತಾಲೂಕಿನ ಇಂಗಳಗಿ, ಹಲಸಂಗಿ, ತೇರದಾಳ, ಹಲಕುಂದ ಇಲ್ಲೆಲ್ಲ ಲಾವಣಿಕಾರರು ಇದ್ದಾರೆ. ಇವರು ಹಾಡುವ ಲಾವಣಿಗಳು ಪ್ರಸಿದ್ಧ. ಕೆಲವು ಪೌರಾಣಿಕ ಪ್ರಸಂಗಗಳನ್ನು ಈ ಲಾವಣಿಗಳು ಮುಂದಿಡುತ್ತವೆ. ಇವು ಕೇಳಲೂ ಚಂದ. ಲಾವಣಿ ಹಾಡುವವರಲ್ಲಿ ಹೆಂಗಸರೂ ಇರುತ್ತಾರೆ.)

ಸಾಮಾನ್ಯವಾಗಿ ಹೆಚ್ಚೆಂದರೆ ಒಂದು ಗಂಟೆ ಅವಧಿಯಲ್ಲಿ ಲಾವಣಿ ಮುಕ್ತಾಯವಾಗುತ್ತದೆ. ಈಚೆಗೆ ಸ್ವಾತಂತ್ರ್ಯ ಹೋರಾಟದ ಕಥೆ ಹೇಳುವ ಲಾವಣಿಗಳು ಸ್ವಾತಂತ್ರ್ಯ ಹೋರಾಟಗಾರರು ಕುರಿತಾದ ಲಾವಣಿಗಳೂ ಇವೆ. ಲಾವಣಿಗಳು ಪ್ರಾಸಬದ್ಧ

ಸ್ಮರಣ ಮಾಡುವೆ ಸರಸ್ವತಿ
ದರುಣೆ ಮೇಲೆ ನಿನ್ನ ಕೀರ್ತಿ
ತರುಣಿ ನಮ್ಗ ಕೊಡುಮತಿ.
ಮೊದಲಾಗಿರುತ್ತವೆ.

4.14 ಲಂಬಾಣಿ ಕುಣಿತ

ಮೂಲತಃ ಲಂಬಾಣಿಗಳು ರಾಜಾ ಸ್ಥಾನಿಗಳು ಮೊದಲೆಲ್ಲ ಅಲೆಮಾರಿಗಳು. ಈಗೀಗ ಲಂಬಾಣಿಗಳೂ ವಾಸಿಸುವ ಸ್ಥಳವನ್ನು 'ತಾಂಡ'ಗಳೆನ್ನುತ್ತಾರೆ. ಲಂಬಾಣಿ ಭಾಷೆಯಲ್ಲಿ ಇದು ತಾಂಡೋ. ಕರ್ನಾಟಕದ ಬಹು ಮುಖ್ಯ ಬುಡಕಟ್ಟುಗಳಲ್ಲಿ ಲಂಬಾಣಿಗರೂ ಒಂದು.

ಲಂಬಾಣಿ ಮಹಿಳೆಯರ ವೇಷಭೂಷಣ ಆಕರ್ಷಕ. ಅದೇ ಅವರು ಲಂಬಾಣಿಗಳೆಂದು ಹೇಳುತ್ತದೆ. ಕಸೂತಿಯೇ ಪ್ರಧಾನವಾಗಿ ಉಳ್ಳ ಪೇಟಿಯಾ ಎಂಬ ಕೆಂಪು ಲಂಗ ಧರಿಸುತ್ತಾರೆ. ಆ ಲಂಗದ ಮೇಲೆಲ್ಲ ಗಾಜಿನ ಬಿಲ್ಲೆಗಳಿರುತ್ತವೆ. ಕಾಂಚೋಳಿ ಎಂಬ ಕಸೂತಿಯ ಕುಪ್ಪಸ ಧರಿಸುತ್ತಾರೆ. ತಲೆಯ ಮೇಲಿಂದ ಇಳಿ ಬಿಟ್ಟ ರಂಗು ರಂಗಿನ ಮೇಲು ವಸ್ತ್ರ. ಚೂಡಿ ಎಂಬ ದಂತದ ಬಳೆಗಳು ಬೆರಳುಗಳಿಗೆ ಉಂಗುರ ಕೊರಳಿಗೆ ರಫಿಯಾ ಹಾರ್ ಎಂಬ ಸರ, ಮುತ್ತಿನ ಮೂಗುತಿ ಇವು ಇದರ ವೇಷಭೂಷಣ ತಲೆ ಬಾಚುವಲ್ಲೂ ವೈಶಿಷ್ಟವಿರುತ್ತದೆ. ತೋಳು, ಹಣೆ ಮತ್ತು ಕೆನ್ನೆಯ ಮೇಲೆ ಹಚ್ಚೆ ಹುಯ್ಯಿಸಿಕೊಂಡಿರುತ್ತಾರೆ.

'ತೀಜ್' ಸಂದರ್ಭದಲ್ಲಿ ಲಂಬಾಣಿಗಳು ಕುಣಿದು ಕುಪ್ಪಳಿಸುತ್ತಾರೆ. ಮಂಡಲಾಕಾರದಲ್ಲಿ ನಿಂತು, ಕೈಗಳನ್ನು ಮೇಲೂ ಕೆಳಗೂ ಆಡಿಸುತ್ತಾ ಬಗ್ಗಿ ಬಗ್ಗಿ ಏಳುವಾಗ ಕುಣಿಯುವ ಭಂಗಿ ಆಕರ್ಷಕ.

ನಗಾರಿ, ಹಲಗೆ ವಾದ್ಯಗಳು ಜತೆಗಿರುತ್ತವೆ.-ಲಂಬಾಣಿ ಗಂಡಸರು ಕೋಲಾಟ ಆಡುತ್ತಾರೆ. ಹಲಗೆ, ನಗಾರಿ ಬಾರಿಸಿ ಮಹಿಳೆ ಮರಕುಣಿತಕ್ಕೆ ಸಹಕಾರ ಕೊಡುತ್ತಾರೆ.

4.15 ಹುಲಿ ಕುಣಿತ

ಒಂದು ಕಾಲಕ್ಕೆ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಹುಲಿವೇಷ ಸಾಮಾನ್ಯವಾಗಿ ಕಂಡು ಬರುತ್ತಿದ್ದ ದೃಶ್ಯ. ಮೊಹರಂ ಮತ್ತು ಬಾಬಯ್ಯನ ಹಬ್ಬದ ಸಂದರ್ಭಗಳಲ್ಲಿ ಹುಲಿವೇಷ ಹೆಚ್ಚಾಗಿ ಹಾಕುತ್ತಾರೆ. ಇದೊಂದು ಜನಪದ ಕಲೆಯಾದರೂ ಹೊಟ್ಟೆಪಾಡಿಗಾಗಿ ಹುಲಿವೇಷ ಹಾಕುವವರೂ ಇದ್ದಾರೆ. ಹುಲಿವೇಷ ಹಾಕುವವರು ಸಾಮಾನ್ಯವಾಗಿ ಯುವಕರು.

ಇಡೀ ದೇಹಕ್ಕೆ ಕೆಂಪು ಮಿಶ್ರಿತ ಹಳದಿ ತೈಲವರ್ಣ ಹಚ್ಚುತ್ತಾರೆ. ಹುಲಿವೇಷ ಹಾಕಿದವರು ಚಡ್ಡಿಯಷ್ಟೆ ಧರಿಸಿರುತ್ತಾರೆ. ತಲೆಗೆ ಒಂದು ಟೋಪಿ ಆ ಟೋಪಿಗೆ ರಟ್ಟಿನ ಕಿವಿಗಳು ಜೋಡಿಸಿರುತ್ತಾರೆ. ಇಲ್ಲವೆ ತಲೆಗೆ ಹುಲಿಯ ಕಿವಿ ಆಕಾರ ಕಟ್ಟಿಕೊಳ್ಳುತ್ತಾರೆ. ಬಟ್ಟೆಯಿಂದ ಮಾಡಿದ ಬಾಲವಿರುತ್ತದೆ. ಮೈಮೇಲೆಲ್ಲ ಹುಲಿಚರ್ಮದ ಬಟ್ಟೆಗಳನ್ನು ಹಾಕಿಕೊಂಡಿರುತ್ತಾರೆ. ಇದು ಹಳದಿ ಕಪ್ಪು ಮಿಶ್ರಿತ. ಚಿಕ್ಕಮಕ್ಕಳೂ ಹುಲಿವೇಷ ಹಾಕುವುದುಂಟು. ಐವತ್ತರ ದಶಕದಲ್ಲಿ (1950–60) ಬೆಂಗಳೂರಿನಂತಹ ದೊಡ್ಡ ನಗರದಲ್ಲಿ ಬಡಾವಣೆಗಳಲ್ಲಿ ಹುಲಿವೇಷ ಹಾಕಿಕೊಂಡು ತಮಟೆ ಬಾರಿಸುತ್ತಾ ಬರುತ್ತಿದ್ದರು.ಹುಲಿವೇಷ ಹಾಕಿರುವವನು ಹೆಜ್ಜೆ ಹಾಕಲು ಕಲಿತಿರಬೇಕು. ಆಗಲೇ ಹುಲಿಕುಣಿತಕ್ಕೆ ಕಾಂತಿ. ವಾದ್ಯಗಳ ಬಡಿತ ಜೋರಾದಂತೆ ಹುಲಿಕುಣಿತವೂ ಜೋರು. ಜನ ಇವರಿಗೆ ಹಣ ಕೊಡುತ್ತಾರೆ.

4.16 ಕರಡಿ ಕುಣಿತ

ಹೋಳಿಹಬ್ಬ, ದೀಪಾವಳಿ, ಸುಗ್ಗಿಕಾಲ ಇಂಥ ಸಮಯಗಳಲ್ಲಿ ಕರಡಿವೇಷ ಹಾಕಿ ಕುಣಿಯುವುದು ಒಂದು ಜನಪದ ಕಲೆ. ಕರ್ನಾಟಕದ ಉತ್ತರ ಭಾಗದಲ್ಲಿ ಹೆಚ್ಚು ಪ್ರಚಲಿತ. ಯಾವುದೇ ಜನಾಂಗದವರು ಈ ವೇಷ ಹಾಕುವರಾದರೂ ಸಾಮಾನ್ಯವಾಗಿ ಅಂಬಿಗರು, ಕುರುಬರು, ಬೇಡರು ಈ ವೇಷಹಾಕುವರು.

ಕರಡಿ ಆಡಿಸುವವನು ಎಂದು ಒಬ್ಬ ಕರಿಯ ಕೋಟು ಧರಿಸಿರುತ್ತಾನೆ. ಕರಡಿಯ ಮುಖವಾಡ ಧರಿಸಿದವನ ಸೊಂಟವನ್ನು ಇನ್ನೊಬ್ಬನು ಬಾಗಿ ಕೊಂಡು ಹಿಡಿದಿರುತ್ತಾನೆ. ಕರಡಿಯ ತಲೆ ಮಾತ್ರ ಹೊರಗೆ ಕಾಣುವಂತೆ ಇವರಿಬ್ಬರ ಮೇಲೂ ಕಂಬಳಿ ಹೊದಿಸಿರುತ್ತಾರೆ. ಅಂದರೆ ಕರಡಿ ವೇಷಧಾರಿಗಳು ಹಲಗೆಯ ತಾಳಕ್ಕೆ ಕುಣಿಯುತ್ತಾರೆ. ಮನೆ ಮನೆಗೂ ಹೋಗಿ ಐದಾರು ನಿಮಿಷ ನಿಂತು ಒಂದಿಷ್ಟು ನಟನೆ ಮಾಡುತ್ತಾರೆ. ಮನೆ ಜನ ಚಿಕ್ಕ ಮಕ್ಕಳನ್ನು ಕರಡಿ ಮೇಲೆ ಕೂರಿಸಿ ಸಂಭ್ರಮ ಪಡುತ್ತಾರೆ. ವೇಷಗಾರರು ಎಲ್ಲರಿಗೂ ಸಂತೋಷ ಉಂಟು ಮಾಡಲು ನಟಿಸುವರು. ಹೆಣ್ಣು ಮಕ್ಕಳು ಹೇಗೆ ಕೆಲಸ ಮಾಡುತ್ತಾರೆ. ಕುಸ್ತಿ ಆಡುವುದು ಹೇಗೆ ಮೊದಲಾದ ಪ್ರದರ್ಶನಗಳನ್ನು ಮಾಡಿ ನಗಿಸುತ್ತಾರೆ. ಕರಡಿ ಕುಣಿತ ನೋಡಲು ಚೆನ್ನಾಗಿರುತ್ತವೆ. ಜನ ಕೈಲಾದುದನ್ನು ವೇಷಧಾರಿಗಳಿಗೆಂದು ಕೊಡುತ್ತಾರೆ. ಮೋಜಿನ ವೇಷವಾರರೂ ಕಲೆಯಾಗಿ ಆಕರ್ಷಕ.

ಅಧ್ಯಾಯ:– 5

ದೇಶಿ ಕ್ರೀಡೆಗಳು

5.1 ಪ್ರಸ್ತಾವನೆ

5.2 ಸರಿಬೆಸ

5.3 ಪಗಡೆ ಆಟ

5.4 ಕುಂಟಾಟ

5.5 ಕಣ್ಣು ಮುಚ್ಚಾಲೆ

5.6 ಗೋಲಿ ಆಟ

5.7 ಗಜ್ಜಗದಾಟ

5.8 ಉತುತುದಾಟ

5.9 ಚೆಂಡಾಟ

5.10 ಗಾಳಿಪಟದಾಟ

5.11 ಕುಸ್ತಿ

5.12 ಹಗ್ಗ ಎಳೆಯುವ ಆಟ

5.13 ಮರಕೋತಿ ಆಟ

5.14 ರಾಜ ರಾಣಿ ಕಳ್ಳ ಪೋಲಿಸ ಆಟ

5.15 ಬುಗುರಿ

5.16 ಕುಂಟೋ ಬಿಲ್ಲೆ

5 17 ಬಳಚೂರು ಆಟ

5.18 ಕಲರ್ಸ್ ಆಟ

5.19 ಚಿನ್ನಿ ದಾಂಡುದಾಟ

5.20 ಲಗೋರಿ

5.21 ಗೊಂಬೆಯಾಟ

5.22 ಚೆಂಡಾಟ

5.23 ಸಂಗೀತ ಕುರ್ಚಿ ಆಟ

5.24 ಚುಕ್ಕಿ ಜೋಡಣೆ ಆಟ

5.25 ಜೋಕಾಲಿ ಆಟ

5.26 ಕಪ್ಪೆ ಆಟ

5.27 ಅಂತ್ಯಾಕ್ಷರಿ ಆಟ

5.28 ಸೈಕಲ್ ಸ್ಪರ್ಧೆದಾಟ

5.29 ನಿಂಬೆ ಹಣ್ಣಿನಾಟ

5.30 ಬೊಟ್ಟು ಇಡುವ ಆಟ

5.31 ಖೋಖೋದಾಟ

5.32 ಕಬ್ಬಡ್ಡಿ ಆಟ

5.1 ಪ್ರಸ್ತಾವನೆ

ಜನಪದ ಆಟಗಳು ತಲತಲಾಂತರದಿಂದ ರೂಢ ಮೂಲವಾಗಿ ಬೆಳೆದು ಬಂದಂಥವು. ಪುಟ್ಟ ಮಕ್ಕಳಿಂದ ಹಿಡಿದು ವಯಸ್ಸಾದ ಮುದುಕರವರೆಗೂ ಹಿಡಿಸುವ ವೈವಿಧ್ಯಮಯ ಆಟಗಳಿವೆಯಲ್ಲದೆ ಒಂದೇ ಆಟದಲ್ಲಿ ವೈವಿಧ್ಯವೂ ಇದೆ. ಜನಪದ ಆಟಗಳು ಬೆಳೆದು ಬಂದ ಬಗೆ, ಅವುಗಳ ಹುಟ್ಟು ಅವುಗಳ ಕುರಿತು ಆಧಾರಗಳನ್ನು ಕೊಡುವುದು ಕಷ್ಟ. ಮನುಷ್ಯನ ಉಗಮವಾದಾಗಲೇ ಜನಪದ ಆಟಗಳೂ ಹುಟ್ಟಿಕೊಂಡಿರಬೇಕು.

ಜನಪದರು ತಮ್ಮ ಬಿಡುವಿನ ವೇಳೆಯಲ್ಲಿ ತಮ್ಮದೇ ಆದ ಕೆಲವು ನೀತಿ ನಿಯಮಗಳ ಚೌಕಟ್ಟಿನಲ್ಲಿ ಜಾಣತನದ ಕೆಲವು ಆಟಗಳನ್ನು ಆಡುತ್ತಾರೆ. ಇಲ್ಲಿ ಸ್ಪರ್ಧಾತ್ಮಕ ಮನೋಭಾವ ಹೆಚ್ಚಾಗಿರುವುದಿಲ್ಲ. ಈ ಆಟಗಳೆಲ್ಲ ಜನಪದರೇ ಅಂದರೆ ಜನಗಳೇ ಸೃಷ್ಟಿಸಿಕೊಂಡು ಆಡುವ ಆಟಗಳು. ಇವು ಮರ್ತ್ಯರೂಪಿ ಆಟಗಳಲ್ಲ. ಈ ಆಟಗಳನ್ನು ಕಾಲ ಕಳೆಯುವ ಆಟ, ಬಿಡುವಿನ ವೇಳೆ ಆಟ, ಜನಸಾಮಾನ್ಯರ ಆಟ ಎಂದು ತಿಳಿಯಬಾರದು. ಈ ಜನಪದ ಆಟಗಳು ಜನಪದರ ಬುದ್ಧಿಯನ್ನೂ ಸಾಣೆ ಹಿಡಿಯುವಂಥವು. ಈ ಆಟಗಳಲ್ಲಿ ಚಮತ್ಕಾರವಿರುತ್ತದೆ. ಆಡುವವರ ಚುರುಕು ಬುದ್ಧಿವಂತಿಕೆ ಇರುತ್ತದೆ. ಹಾಗೂ ತಿಳುವಳಿಕೆ ಇರುತ್ತದೆ. ಕೆಲವು ಜನಪದ ಆಟಗಳ ರಂಗಮಂಟಪದ ಹಾಸು ಬಂಡೆಗಳ ಮೇಲೆ ಬಿಡಿಸಿರುವುದನ್ನು ಕಾಣುತ್ತೇವೆ. ಕೆಲವು ಆಟಗಳು ಆಡಿದಾಗ ಮಳೆ ಬರುತ್ತದೆ ಎಂಬ ನಂಬಿಕೆ ಸಹ ಜನಪದರಲ್ಲಿ ಇದೆ.

ವಿದ್ವಾಂಸರ ಪ್ರಕಾರ, ಇಂಥ ಆಟಗಳಲ್ಲಿ ಕೆಲವಕ್ಕೆ ಸಾಹಿತ್ಯಕ, ಶಾಸ್ತ್ರೀಯ ಚಾರಿತ್ರಿಕ ಗ್ರಂಥಗಳಲ್ಲಿ ವರ್ಣನೆಯ ಅವಕಾಶ ಸಿಕ್ಕಿವೆಯಾದರೂ ಇನ್ನು ಕೆಲವಕ್ಕೆ ಅಂಥ ಅವಕಾಶ ದೊರೆಯದೆ ಹೋಗಿರುವುದೂ ಉಂಟು. ಜತೆಗೆ ಎಷ್ಟೋ ಜನಪದ ಆಟಗಳು ಇಂದು ರೂಢಿಯಲ್ಲಿ ಇಲ್ಲದಿರುವ ಸಾಧ್ಯತೆಗಳೂ ಇವೆ. ಈಗಲೂ ನಾವು ನಾಗಾಲೋಟದಲ್ಲಿ ಸಾಗುತ್ತಿರುವ ಮಾಹಿತಿ ತಂತ್ರಜ್ಞಾನ ಮತ್ತು ವಿಜ್ಞಾನ ಯುಗದಲ್ಲಿ ಲಭ್ಯವಿರುವ ಜನಪದ ಆಟಗಳನ್ನು ಉಳಿಸಿಕೊಳ್ಳದೆ ಹೋದಲ್ಲಿ ಒಂದು ದಿನ ಅವೂ ಆಡಲು ತಿಳಿಯದಾಗಿ ನಾಡಿನ ಮಕ್ಕಳಿಗೆ ಅವುಗಳ ಹೆಸರಷ್ಟೇ ಹೇಳಬೇಕಾದೀತು. ಉದಾಹರಣೆಗೆ ಗೋಲಿ ಆಟವನ್ನೇ ತೆಗೆದುಕೊಳ್ಳಿ, ನಗರಗಳಲ್ಲಿ ಶಾಲಾ ಮಕ್ಕಳು ಆಡುತ್ತಿದ್ದ ಗೋಲಿ ಆಟ ಇಂದು ಕಂಡುಬರುತ್ತಿಲ್ಲ. ಐವತ್ತರ ದಶಕದಲ್ಲಿ (20ನೇ ಶತಮಾನ) ಗೋಲಿ ಆಟ ತುಂಬ ಜನಪ್ರಿಯವೇ ಆಗಿದ್ದಿತು. ಎಷ್ಟೋ ಜನಪದ ಆಟಗಳು ಅಜ್ಞಾತವಾಗಿ ಹುಟ್ಟಿ ಬೆಳೆದು, ಬಳಕೆಗೊಂಡು ಕ್ರಮೇಣ ಕಡಿಮೆಯಾಗುತ್ತಾ ಕಣ್ಮರೆಯಾಗುತ್ತ ಹೋಗುತ್ತಿವೆ.

ಕರ್ನಾಟಕದಲ್ಲಿ ಕ್ರೀಡೆಗಳ ಪ್ರದರ್ಶನ ಹೊಸದೇನಲ್ಲ. ಹಲವು ಜನಪದ ಆಟಗಳಿಗೂ ಇಲ್ಲಿ ಪ್ರಾಶಸ್ತ್ಯ ಸಿಕ್ಕಿದೆ. ಜನ ಸಮೂಹದ ಕ್ರೀಡೆಯಾಗಿ ಕುಸ್ತಿ (ಗರಡಿ) ವಿಜಯನಗರ ಸಾಮ್ರಾಜ್ಯದ ನಾಡ ಹಬ್ಬ ಆಚರಣೆಯ ಸಂದರ್ಭದಲ್ಲಿ ಜರುಗುತ್ತಿದ್ದ ಉತ್ಸವಗಳಲ್ಲಿ ಒಂದು ಪ್ರಮುಖ ಆಕರ್ಷಣೀಯವಾಗಿದ್ದಿತು. ಕತ್ತಿವರಸೆ, ದೊಣ್ಣೆವರಸೆ ಪ್ರದರ್ಶನಗಳೂ ಇರುತ್ತಿದ್ದವು. ಕುಸ್ತಿ ಸ್ಪರ್ಧೆಗಳು ಹಬ್ಬ-ಜಾತ್ರೆಗಳಲ್ಲಿಯೂ ಜರುಗುತ್ತಿದ್ದವು. ವಿಜಯನಗರ ಕಾಲದ ಮಹಾನವಮಿ ದಿಬ್ಬದೆದುರು

ನಡೆಯುತ್ತಿದ್ದ ಕ್ರೀಡಾ ವೈಭವ ಈಗಿಲ್ಲವಾದರೂ ಅದೇ ಪರಂಪರೆ, ಸಂಪ್ರದಾಯಗಳು ಮುಂದುವರಿದುಕೊಂಡು ಬಂದಿವೆ. ಕುಸ್ತಿ ಒಂದು ಜನಪ್ರಿಯ ಕ್ರೀಡೆಯೂ ಹೌದು.

ಬೀದರನಲ್ಲಿ ಜಾನಪದ ಆಟಗಳು ಇಂದಿಗೂ ರೂಢಿಯಲ್ಲಿದ್ದು ಮನೆಮಾತಾಗಿವೆ. ಅನೇಕ ರೀತಿಯ ಜನಪದ ಆಟಗಳು ಪ್ರಚಲಿತವಿವೆ. ಈ ಆಟಗಳ ವೈಶಿಷ್ಟ್ಯವೆಂದರೆ ಅತ್ಯಂತ ಕಡಿಮೆ ಖರ್ಚು, ಅಧಿಕ ಸಂತೋಷದ ಲಾಭ. ಕೆಲವು ಆಟಗಳಿಗಂತೂ ಯಾವ ಖರ್ಚು ಇರುವುದಿಲ್ಲ. ಹೆಚ್ಚಾಗಿ ಗ್ರಾಮೀಣ ಪರಿಸರದಲ್ಲಿ ಮನೋರಂಜನೆಯೇ ಪ್ರಮುಖ ಉದ್ದೇಶವಾಗುಳ್ಳ ಅನೇಕ ಜನಪದ ಆಟಗಳಿರುವುದರ ಜತೆಗೆ ದೇಹಕ್ಕೆ ವ್ಯಾಯಾಮವನ್ನು ನೀಡುವ ಹೊರಾಂಗಣ ಆಟಗಳೂ ಇವೆ.

ಜನಪದ ಆಟಗಳನ್ನು ಸ್ತ್ರೀ ಪುರುಷರಿಬ್ಬರೂ ಆಡಬಹುದು. ಇಬ್ಬರೂ ಕಲೆತೂ ಆಡಬಹುದು. ಬರಿಯ ಪುರುಷರೇ ಆಡುವ ಆಟಗಳೂ ಇವೆ. ಮಕ್ಕಳಿಗಂತೂ ಜನಪದ ಆಟಗಳು ಪ್ರಿಯವಾಗುವುದರ ಜೊತೆಗೆ ಹೊತ್ತು ಕಳೆಸುತ್ತವೆ. ಗಣಿತ, ವಿಧವಿಧ ವಸ್ತುಗಳು, ಜನಜೀವನ, ಕಲೆ ಇವುಗಳನ್ನೂ ಪರಿಚಯಿಸುತ್ತವೆಯಾಗಿ ಈ ಆಟಗಳು ಅಧಿಕಾಧಿಕ ಪ್ರಯೋಜನವುಳ್ಳವೂ ಆಗಿವೆ. ಶ್ರೀಮಂತ ಆಟಗಳೆನ್ನಲಾದ ಚದುರಂಗ, ಪಗಡೆ, ಮೊದಲಾದ ಆಟಗಳಿಗೂ ಅಲ್ಪ ಬಂಡವಾಳ ಸಾಕಾಗುತ್ತದೆ. ನಿರ್ವಹಣೆ ಖರ್ಚು ಇರುವುದಿಲ್ಲ.

ಕೆಲವು ಆಟಗಳಿಗೆ ಆಟ ಆಡುವರಿದ್ದರಷ್ಟೇ ಸಾಕು. ಇನ್ನು ಕೆಲವು ಆಟಗಳಿಗೆ ಕೆಲವು ಸಾಮಾನುಗಳು ಬೇಕಾದರೂ ಅವುಗಳಿಗೆ ತಗಲುವ ಖರ್ಚು ಗೌಣ. ಅವುಗಳನ್ನು ಈ ರೀತಿ ಹೆಸರಿಸಬಹುದು.

ಹಾಲವಾಣದ ಬೀಜಗಳು	ಗಾಜಿನ ಗುಂಡಿಗಳು
ಕವಡೆಗಳು	ಹಳೆಯ ಹರಕಲು ಬಟ್ಟೆ ಚೂರುಗಳು
ಹುಣಸೆ ಬೀಜಗಳು	ಚೆಂಡು
ಗಜಗ	ಹಳೆ ಹಲಗೆಯ ಪಟ್ಟಿ
ಮೊಳದುದ್ದ ಕಡ್ಡಿಗಳು	ದಪ್ಪ, ಗಟ್ಟಿ ದಾಂಡು
ಸಣ್ಣ ಬಣ್ಣದ ಕೋಲುಗಳು	ಮರದ ಚಕ್ಕೆ(ಚಿನ್ನ)
ಬಳಪದ ಕಲ್ಲಿನ ಚೂರುಗಳು	ಪಗಡೆಕಾಯಿ/ದಾಳ
ಮಡಕೆ ಹೆಂಚಿನ ಚೂರುಗಳು	ಚದುರಂಗದ ಬೋರ್ಡು

ಬುಗುರಿ ಇಂಥವೇ ಆಗಿರುತ್ತವೆ.

ಹಾಕಿ, ಕ್ರಿಕೆಟ್ ಆಟಗಳಲ್ಲಿ ಬಳಸುವ ದಾಂಡು(ಬ್ಯಾಟು)ಗಳಾಗಲೀ, ವಿಕೆಟ್ ಕೋಲು ಮೊದಲಾದವುಗಳು ಬೇಕಾಗುವುದಿಲ್ಲ.

ಜನಪದ ಆಟಗಳು ಮನೋದ್ದೀಪನವೂ ಹೌದು. ಶರೀರವರ್ಧನಕಾರಿಗಳೂ ಹೌದು. ಬೀದರನಲ್ಲಿ ಸಾಮಾನ್ಯವಾಗಿ ಕಿರಿಯರೇ ಪಾಲ್ಗೊಳ್ಳುವ ಆಟಗಳೂ ಇವೆ. ಮಧ್ಯೆ ವಯಸ್ಕರು, ಅಜ್ಜಂದಿರು, ಅಜ್ಜಿಯರೂ ಆಡುವ ಆಟಗಳಿವೆ. ಪ್ರಾಣಿ ಪಕ್ಷಿಗಳನ್ನು ಬಳಸಿ ಆಡುವ ಜನಪದ ಕ್ರೀಡೆಗಳೂ ಇವೆ.

ಜನಪದ ಆಟಗಳಲ್ಲಿ ಒಳಾಂಗಣ ಮತ್ತು ಹೊರಾಂಗಣ ಆಟಗಳು ಎಂದು ಎರಡು ವಿಧ. ಪಾಶ್ಚಾತ್ಯ ಕ್ರೀಡೆಗಳಲ್ಲೂ ಈ ವರ್ಗೀಕರಣ ಇದೆ. ಇನ್‌ಡೋರ್ ಗೇಮ್ಸ್ ಮತ್ತು ಔಟ್‌ಡೋರ್ ಗೇಮ್ಸ್. ಜನಪದ ಒಳಾಂಗಣ ಆಟಗಳನ್ನು ಅವರವರ ವಯೋಗುಣ, ಬುದ್ಧಿ ಮಟ್ಟಕ್ಕೆ ತಕ್ಕಂತೆ ಹೆಂಗಸರು, ಗಂಡಸರಿಬ್ಬರೂ ಆಡಬಹುದು. ಇದು ಸಾಮಾನ್ಯ ನೆಂಟರಿಷ್ಟರು ಇಲ್ಲವೇ ಒಂದೇ ಮನೆಯವರು ಕೂಡಿ ಆಡಬಹುದು. ಅಲಿನ ಸ್ನೇಹ ಸೌಹಾರ್ದಗಳ ಪ್ರತೀಕವಾಗಿವೆ.

'ಮೂರು ವರುಷದ ಬುದ್ಧಿ ನೂರು ವರುಷದವರೆಗೆ' ಇದೊಂದು ನಾಡು ನುಡಿ, ಜನಪದರ ಅನುಭವದ ಮಾತು, ಅದೂ ಮಕ್ಕಳನ್ನು ಆಡಿದ ವಾಕ್ಯ, ಮಕ್ಕಳ ಮನಸ್ಸು ಹೂವಿನಂತೆ ಮೃದುವಾದದು. ಆಗ ಅಲ್ಲಿ ಮೂಡಿದ ವಿಚಾರಗಳು ಕಡೆತನಕ ಉಳಿಯಬಲ್ಲವು, ಅವು ಹೂವಾಗಿ, ಮಿಡಿಯಾಗಿ, ಕಾಯಾಗಿ, ಹಣ್ಣಾಗಬಲ್ಲವು. ಕೆಲವು ಮಿಡಿಯಾಗಿ ಉದುರಿ ಬೀಳುವವು. ಮತ್ತೆ ಕೆಲವು ಮಿಡಿಯಾಗಿ ಕಾಯಾದರೂ ಕಹಿ ಫಲ ಕೊಡಬಹುದು. ಫಲ ಅದರ ಸಂಸ್ಕಾರ ವಿಶೇಷದ ಮೇಲೆ ಅವಲಂಬಿಸಿರುತ್ತದೆ. ಚಿಕ್ಕಂದಿನಲ್ಲಿ ಮುಗ್ಧ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಮುದ್ರೆ ಮೂಡಿದಲ್ಲಿ ಒಳ್ಳೆಯವರೆನಿಸುತ್ತಾರೆ.

ಮಕ್ಕಳನ್ನು ತಿದ್ದಿ ತೀಡುವ ಮಹತ್ತರ ಕಾರ್ಯದಲ್ಲಿ ತಾಯಿಯ ಪಾತ್ರ ಅಪ್ರತಿಮವೂ, ಅತಿ ಪ್ರಾಮುಖ್ಯವೂ ಆಗಿದೆ. 'ಇಂದಿನ ಬಾಲಕರೇ ನಾಳಿನ ನಾಗರಿಕರು' ಎಂಬ ಗಾದೆಯ ಮಾತಿನಂತೆ ಭಾವೀ ನಾಗರಿಕರೂ, ಸಜ್ಜನರೂ, ಸದೃಢರೂ, ಮೇದಾವಿಗಳೂ, ವೀರರೂ ಆಗಬೇಕಾದಲ್ಲಿ ಮಕ್ಕಳ ಅವಸ್ಥೆಯಲ್ಲಿಯೇ ಆ ಬೀಜಗಳನ್ನು ಬಿತ್ತಬೇಕಾಗುತ್ತದೆ. ಬೆಳೆಯ ಸಿರಿಯನ್ನು ಮೊಳಕೆಯಲ್ಲಿಯೇ ಕಾಣುವಂತೆ ಮಕ್ಕಳನ್ನು ಕಂಡಾಗ ಭಾವೀ ಸಿರಿಸಂಪತ್ತಿನ ಅರಿವೂ ಮೂಡಿಬರುತ್ತದೆ. ಅದನ್ನು ಉಳಿಸಿ, ಬೆಳೆಸಿಕೊಂಡು ಬರಬೇಕಾದುದು ಹಿರಿಯರ ಕರ್ತವ್ಯಾಗಿರುತ್ತದೆ. ಅಂತೆಯೇ ಮಕ್ಕಳ ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಗೆ ಆದ್ಯಗಮನ ಕೊಡಬೇಕಾಗುತ್ತದೆ.

ಮಗುವಿನ ಮಾತು ಬಂದಾಗ, ಕಾಲು ಚಾಚಿ ನಡೆಯಲು ಕಲಿತಾಗ ಅದು ತನ್ನ ಸುತ್ತಮುತ್ತಲಿನ ಪರಿಸರಕ್ಕನುಗುಣವಾಗಿ ಅನುಕರಣೆಗಿಳಿಯುತ್ತದೆ. ತಾಯಿಯ ಅನುಕರಣೆಯಂತೂ ಇದ್ದೇ ಇರುತ್ತದೆ. ತಾಯಿ ಮಾತನಾಡಿದಂತೆ ಮಾತಾಡುತ್ತದೆ, ನಡೆಸಿದಂತೆ ನಡೆಯುತ್ತದೆ. ಹೀಗೆ ತಾಯಿಯಿಂದ ನುಡಿಯ ಕಲಿಯುತ್ತ ಪಡಿಪರಿಯ ವಸ್ತುಗಳ ಪರಿಚಯ ಮಾಡಿಕೊಳ್ಳುತ್ತ ಆಟ ಆಡಲು

ಪ್ರಾರಂಭಿಸುತ್ತದೆ. ಮಗುವಿನ ಜೊತೆ ತಾಯಿಯೂ ಆಟವಾಡುತ್ತಾಳೆ. ಮಗು ದೊಡ್ಡದಾದಂತೆ ತಾಯಿಯ ಕೈಬಿಟ್ಟು ಹೊರಗೆ ಹೋಗಿ ಆಡುತ್ತದೆ. ಹಾಗೆ ಆಡಲು ಹೋದಾಗಲೇ ತಾಯಿಗೆ ಹಿಗ್ಗು 'ಕ್ವಾಣಿ ಕೂಸ ಕೊಳೀತು' ಓಣಿ ಕೂಸ ಬೆಳೀತು' ಎಂಬ ನಾಣ್ಣುಡಿಯೂ ಇದಕ್ಕೆ ಸಾಕ್ಷಿ, ಮಗು ಆಡಿ ಬಂದಾಗ ಅವಳಿಗೆ ಹಿಡಿಸಲಾರದ ಹಿಗ್ಗು.

'ಆಡಿ ಬಾ ನನಕಂದ ಅಂಗಾಲ ತೊಳದೇನ
ತೆಂಗಿನಕಾಯಿ ತಿಳಿನೀರ ತಕ್ಕೊಂಡು
ಬಂಗಾರ ಮಾರಿ ತೊಳದೇನ'

ಹೀಗೆ ಅಂಗಳದಲ್ಲಿ ಆಡಿ ಮೈತುಂಬ ಧೂಳ ಹತ್ತಿದ ಮಗು ಓಡಿ ಮನೆಗೆ ಬಂದಾಗ ತಾಯಿ ಅವನನ್ನು ಅಪ್ಪಿಕೊಂಡು ತೆಂಗಿನ ತಿಳಿನೀರಿನಿಂದ ಬಂಗಾರದ ಮಾರಿ ತೊಳೆವ ದೃಶ್ಯ ಅವಳ ಹಾಡಿನಲ್ಲಿ ಅಚ್ಚೊತ್ತಿದೆ, ಅಷ್ಟೇ ಭವ್ಯವೂ ಆಗಿದೆ. ಈ ತಾಯಿಗಾದ ದುಃಖ ದುಮ್ಮಾನಗಳು ಮಗು ತೊಡೆಯ ಮೇಲೆ ಆಡಿದಾಗ ಕಳಚಿಹೋಗುತ್ತದೆ. ಅಂತೆಯೇ.

'ಆಸರಕಿ ಬ್ಯಾಸರಕಿ ಯಾರಿಂದ ಕಳೆಯಲಿ
ಕೂಸಕಂದಯ್ಯ ತೊಡಿಮೇಲೆ ಆಡಿದರ
ಬಂದ ಬ್ಯಾಸರಕಿ ಬಯಲಾಗಿ'
ಎಂದು ಹಾಡಿ ಸಂತೋಷ ಪಟ್ಟಿದ್ದಾಳೆ.

ಹೀಗೆ ತಾಯಿ ಹಾಡಿ ಮಗುವಿನ ಮನದ ಸಂಸ್ಕಾರ ಮುದ್ರೆಯೊತ್ತುತ್ತಾಳೆ. ಆತನೊಂದಿಗೆ ಆಟವಾಡಿ, ಅವನನ್ನೇ ಆಡಲು ಬಿಟ್ಟು ದೇಹದ ಬೆಳವಣಿಗೆಗೆ ನಿಲ್ಲುತ್ತಾಳೆ. ಮಗು ಬೆಳೆದಂತೆ ತಾಯಿಯ ಕೈಬಿಡುತ್ತದೆ. ಮನೆ ಬಿಟ್ಟು ಹೊರಗೆ ಹೋಗುತ್ತದೆ. ತನ್ನ ಹಾಗೆಯೇ ಹೊರಬಂದ ಮಕ್ಕಳ ಕೂಟವೊಂದು ಅಲ್ಲಿ-ಅಂಗಳದಲ್ಲಿ ಜಮೆಯಾಗುತ್ತದೆ. ಸಾಮೂಹಿಕವಾಗಿ ಹಾಡುತ್ತಾರೆ. ಆಡುತ್ತಾರೆ.

ತಮ್ಮ ಕಣ್ಣ ಮುಂದೆ ಕಂಡ ಪ್ರಪಂಚದ ನಾಟಕ ನಡೆಸುತ್ತಾರೆ. ತಾವೇ ಗಂಡ-ಹೆಂಡಿರಾಗಿ, ತಾಯಿ-ತಂದೆಯರಾಗಿ, ಒಡೆಯ-ಆಳು ಆಗಿ, ಅತ್ತೆ-ಸೊಸೆಯಾಗಿ ಆಡಿಯೇ ಆಡುತ್ತಾರೆ. ಆಟದೊಂದಿಗೆ ಮನಸ್ಸಿಗೆ ಹೊಳೆದಂತೆ ಹಾಡುತ್ತಾರೆ. ಆ ತೊದಲು ನುಡಿಗಳಲ್ಲಿಯ ಅರ್ಥಕ್ಕೆ ಬೆನ್ನು ಹತ್ತಿ ವಿಷಯ ವಿವೇಚನೆಗೆ ಇಳಿಯುವುದಲ್ಲ, ಪ್ರಾಸಕ್ಕೆ ಮಾರು ಹೋಗಿ ಶಬ್ಧಗಳ ಸುರಿಮಳೆಗೆ ಅಚ್ಚರಿಪಡಬೇಕಾಗುತ್ತದೆ. ತಮ್ಮದೇ ಆದ ಸೃಷ್ಟಿಯಲ್ಲಿ ಮಕ್ಕಳು ಮನೆ ಕಟ್ಟುತ್ತಾರೆ. ಕಲ್ಲು-ಇಟ್ಟಿಗೆಗಳ ತುಣುಕುಗಳಿಂದ, ಒಮ್ಮೊಮ್ಮೆ ಕಾಗದ-ರಟ್ಟುಗಳಿಂದ, ಬೆಂಡು-ಕಟ್ಟಿಗೆಗಳಿಂದ, ಅಷ್ಟಿಷ್ಟು ತಪ್ಪಲ ಹರಿದು ತಂದು ಅಡಿಗೆ ಮಾಡುತ್ತಾರೆ. ಮನೆಯಲ್ಲಿಂದ ತಂದ ಸೇಂಗಾಬೀಜ, ಪುಟಾಣಿ, ಚುರಮುರಿ, ಸಕ್ಕರಿ-ಇದು ಅವರ ಪ್ರಸಾದವಾಗುತ್ತದೆ. ದಾಸೋಹ ನಡೆಸಿ ಬಂದವರಿಗೆಲ್ಲ ಉಣಬಡಿಸುತ್ತಾರೆ. ಮನೆಗೆಲಸ, ಹೊಲಗೆಲಸಗಳ, ಅಡಿಗೆ ಮಾಡುವುದು, ನಟ್ಟು ಕಡಿಯುವುದು, ಗಳೆ ಹೊಡಿಯುವದು ಹೀಗೆ ಒಂದೇ ಎರಡೇ ತಮ್ಮದೇ ಕಾಯಕದಲ್ಲಿ ನಿರಂತರಾಗುತ್ತಾರೆ. ಅನುಕರಣದ ಕಾಯಕದೊಂದಿಗೆ ಮಧ್ಯ ಮಧ್ಯ ಆಟ ಆಡುತ್ತಾರೆ. ಬಗಾಟಬಗರಿ, ಕುಂಯ್ಯಾ, ಅಂಡೆಳ್ಯಾಟ, ತಟ್ಟಿಮನಿ ಹೀಗೆ ಹಲವಾರು

ಆಟಗಳನ್ನಾಡಿ ಹಾಡೂ ಹೇಳುತ್ತಾರೆ. ಹೊಂಬೆಯೆ ತಮ್ಮ ಮಗುವೆಂದು ಆಡಿಸಿ ಹೇಳುತ್ತಾರೆ. ಮಕ್ಕಳ ಕ್ರೀಡೆಗಳೊಂದಿಗೆ ಹೊರಹೊಮ್ಮುವ ಹಾಡುಗಳೇ ಮಕ್ಕಳ ಹಾಡುಗಳಾಗಿರುತ್ತವೆ.

ಮಕ್ಕಳ ಹಾಡುಗಳು ಪ್ರತಿಯೊಂದು ದೇಶ ಭಾಷೆಯಲ್ಲೂ ಇರುತ್ತವೆ. ಸುಶಿಕ್ಷಿತ ಜನ ಇವೆಂಥ ಹಾಡುಗಳು ಎಂದು ತಿರಸ್ಕರಿಸಿ ಪರಭಾಷಾ ವ್ಯಾಮೋಹದಲ್ಲಿ ಸಿಲುಕಿ ಇಂಗ್ಲೀಷ್ ಮಾಧ್ಯಮದಿಂದ ಶಿಶುವಿಹಾರಗಳಿಗೆ ತಮ್ಮ ಮಕ್ಕಳನ್ನು ಕಳಿಸಿ 'ಬ್ಯಾ ಬ್ಯಾ ಬ್ಲ್ಯಾಕ್‌ಶಿಪ್' 'ಜಾಕ್ ಎಂಡ್ ಜಿಲ್' ಇಲ್ಲವೆ' ಡಿಂಗ ಡಾಂಗ ಬೆಲ್' ದಂತಹ ಹಾಡುಗಳನ್ನು ಮಕ್ಕಳು ಕಲಿತು 'ಮಮ್ಮಿ ಡ್ಯಾಡಿ' ಎಂದಾಗ ತಿಳಿದೊ ತಿಳಿಯದ್ದಕ್ಕೊ ಅಂತೂ ತಮ್ಮ ಮಕ್ಕಳ ಪೌರುಷಕ್ಕೆ ಅಭಿಮಾನ ಪಟ್ಟುಕ್ಕೊಂಡು ಅದಕ್ಕಾಗಿ ಹಣ ಸುರುವುತ್ತಿರುವುದು ಲಜ್ಜಾಸ್ಪದ ಸಂಗತಿಯಾಗಿದೆ. ಯಾವ ಕಾಸೂ ಇಲ್ಲದೆ ಅಂಗಳದಲ್ಲಿ ಓರಿಗೆಯ ಮಕ್ಕಳೊಂದಿಗೆ ಆಡುತ್ತ ಹಾಡು ಕಲಿತು ಬಂದಾಗ-ಏಕೆ ಸಂತೋಷಪಡಬಾರದು. ಜಾನಪದ ಗರತಿ ಮಾತ್ರ ಅಂಥ ಸಂತೋಷದಲ್ಲಿ ಮೀಯ್ದು ಹಾಡಿದ್ದನ್ನು ಸ್ಮರಿಸಿಕೊಳ್ಳಬಹುದಾಗಿದೆ.

ಕನ್ನಡ ಭಾಷೆಯಲ್ಲೂ ಸಾವಿರಾರು ಮಕ್ಕಳ ಹಾಡುಗಳಿವೆ, ಆಟಗಳಿವೆ, ಅವುಗಳನ್ನು ಅರಿಯಬೇಕಾದರೆ ನಾವು ಮಕ್ಕಳೊಂದಿಗೆ ಮಕ್ಕಳಾದಾಗ ತಿಳಿಯುತ್ತೇವೆ. ಇಲ್ಲವೆ ಇಂಥ ಅವಸ್ಥೆಗಳಲ್ಲಿ ನಾವೂ ಆ ಸಂಸ್ಕಾರದ ಮುದ್ರೆ ಮೂಡಿಸಿಕೊಂಡಿದ್ದಲ್ಲಿ ಈಗ ಸ್ಮರಿಸಿಕೊಳ್ಳಬೇಕೆಷ್ಟೆ.

ಇಂಗ್ಲೀಷ್ ಭಾಷೆಯಲ್ಲಿ ಮಕ್ಕಳ ಹಾಡುಗಳಿಗೆ ನರ್ಸರಿ ರಾಯಿಮ್ಸ್ ಎಂದೂ ಅಮೇರಿಕೆಯ ಜನ ಮದರ್ ಗೂಜ್ ಎಂದೂ ಕರೆದಿದ್ದಾರೆ. ನಮ್ಮಲ್ಲಿಯೇ ಮಕ್ಕಳ ಹಾಡು, ಚುಕ್ಕೋಳ ಪದ, ಶಿಶುಪ್ರಾಸ, ಮಕ್ಕಳ ಜನಪದ ಸಾಹಿತ್ಯ ಶಿಶುಬಾಲ ಸಾಹಿತ್ಯ, ಜನಪದ ಆಟಪಾಟ ಎಂದು ಹಲವು ಹೆಸರುಗಳಿಂದ ಕರೆಯುತ್ತಿದ್ದೇವೆ.

ತಾಯಿಯಾದವಳು, ದಾದಿ ಇಲ್ಲವೆ ದೊಡ್ಡ ಮಕ್ಕಳು, ಚಿಕ್ಕ ಮಕ್ಕಳನ್ನು ಕುರಿತು ಹಾಡಿದ ಹಾಡುಗಳೇ ಮಕ್ಕಳ ಹಾಡುಗಳೆನಿಸಿವೆ. ದೊಡ್ಡವರ ಅನುಕರಣೆಗಿಳಿದು ಚಿಕ್ಕ ಮಕ್ಕಳೂ ಇಂಥ ಹಾಡುಗಳನ್ನು ಹೇಳುವುದುಂಟು, ಅಳುವ ಮಕ್ಕಳನ್ನು ಆಟವಾಡಿಸುತ್ತ ಸುಮ್ಮನಾಗಿಸುವಾಗ ಹಾಡುವ ತೊಟ್ಟಿಲ ಹಾಡು, ಲಾಲಿಪದ, ಅನಿಬಂತಾನಿ, ಅಳಬ್ಯಾಡ ಎನ್ನಕಂದ, ಅಳ್ಳಳ್ಳ ಆಯಿ ಮೊದಲಾದವುಗಳು ರಮಿಸುವ ಹಾಡುಗಳಾಗಿವೆ. ಚಿನಿಕೋಲಾಟ, ಕುಪ್ಪಿ ಆಟ, ಘುಗಡಿ ಆಟ, ಗೋಲಿ ಆಟ, ಚಿಣಿ ಫಣಿ ಆಟ, ಗಜಗದಾಟ-ಮೊದಲಾದವು ಆಟದ ಹಾಡುಗಳಾಗಿವೆ. ಕಥಾರೂಪದ ವಿಡಂಬನೆಗೆ ಮಿಸಲಾದ ಒಗಟು ರೂಪದ ಹಾಡುಗಳನ್ನು ಮಕ್ಕಳ ಹಾಡುಗಳಲ್ಲಿ ಕೇಳುತ್ತೇವೆ.

5.2 ಸರಿ-ಬೆಸ

'ಸರಿ' ಎಂದರೆ ಸಮ ಸಂಖ್ಯೆ. ಉದಾ; 2,4,6,18. 'ಬೆಸ' ಎಂದರೆ ವಿಷಮ ಸಂಖ್ಯೆ. ಉದಾ; 7,11,17,21. ಸಂಖ್ಯೆಗಳ ಕುರಿತಾದ ಈ ಆಟವನ್ನು ಸಾಮಾನ್ಯವಾಗಿ ಇಬ್ಬರು ಅಡಕೆ ಇಟ್ಟುಕೊಂಡು ಆಡುತ್ತಾರೆ.

ಮದುವೆ ಮನೆಗಳಲ್ಲಿ, ಚಪ್ಪರದ ಹಟ್ಟಿಯಲ್ಲಿ, ಕಾಲುಂಗುರ ಶಾಸ್ತ್ರ ಮಾಡುವಾಗ, ಧಾರೆ ಮುಹೂರ್ತದ ವೇಳೆ ಹಾಗೂ ಊಟಕ್ಕೆ ಕೂರಿಸಿದಾಗ ಹಂತಿಯ (ಪಂಕ್ತಿ) ಮೇಲೆ ಎಲೆ ಅಡಿಕೆ ಕೊಡುವರು. ಆಗ ಈ ಆಟವನ್ನು ಮಕ್ಕಳು ಆಡುವುದುಂಟು. ಸಾಮಾನ್ಯವಾಗಿ ಹೆಣ್ಣು-ಗಂಡುಗಳು ಈ ಆಟ ಆಡಬೇಕೆನ್ನುತ್ತಾರೆ. ಆಗ ತಂಗಿಯರು, ದಂಪತಿಗಳು 'ಸರಿ-ಬೆಸವಾಡಿದರು' ಎಂಬ ಜಾನಪದ ಗೀತೆಯನ್ನು ಹಾಡುತ್ತಾರೆ. ಒಟ್ಟಿನಲ್ಲಿ ಮದುವೆ ಮನೆಗಳಲ್ಲಿ ಈ ಆಟ ಹೆಚ್ಚು.

ಆಟವಾಡುವ ಇಬ್ಬರು ತಮ್ಮಲ್ಲಿರುವ ಅಡಿಕೆಗಳಲ್ಲಿ ಇಷ್ಟಬಂದಷ್ಟನ್ನು ಒಂದು ಮುಷ್ಟಿಯಲ್ಲಿ ಅಡಗಿಸಿಟ್ಟುಕೊಂಡು ಸರಿಯೋ ಬೆಸವೋ ಎಂದು ಕೇಳಬೇಕು. ಎದುರಾಳಿ ಊಹಿಸಿ ಸರಿ ಇಲ್ಲವೆ ಬೆಸ ಎನ್ನಬೇಕು. ಎಣಿಸಿ ನೋಡಿದಾಗ ಹೇಳಿದಂತೆ ಸರಿಯೋ ಅಥವಾ ಬೆಸವೋ ಆಗಿದ್ದರೆ ಹೇಳಿದವರಿಗೆ ಅಷ್ಟು ಅಡಿಕೆ ಕೊಟ್ಟುಬಿಡಬೇಕು. ತಪ್ಪಾಗಿದ್ದರೆ ಹೇಳಿದವರು ಅಷ್ಟು ಅಡಿಕೆಯನ್ನು ಕಟ್ಟಿ ಕೊಡಬೇಕು. ಬಳಿಕ ಆಟ ಬದಲಾವಣೆ. ಮೊದಲು ತೋರಿಸುತ್ತಿದ್ದವರು ಈಗ ಹೇಳಬೇಕು. ಹೀಗೆ ತಮ್ಮಲ್ಲಿರುವ ಅಡಿಕೆಗಳನ್ನು ಸೋಲುವವರೆಗೂ ಆಟವಾಡಬಹುದು.

5.3 ಪಗಡೆ ಆಟ

ಪಗಡೆ ಆಡಿ ಪಾಂಡವರು ಕೆಟ್ಟರು
ಕವಡೆ ಆಡಿ ಹೆಣ್ಮಕ್ಳು ಕೆಟ್ಟರು
ಇಸ್ಪೀಟಾಡಿ ಇದ್ದಬದ್ದೋರೆಲ್ಲ ಕೆಟ್ರು

ಇದು ಕನ್ನಡದ ಒಂದು ಗಾದೆ. ಮನೋರಂಜನೆಗಾಗಿ ಆಡುವ ಆಟಗಳನ್ನು ಜೂಜಾಗಿ ಆಡಿ ಕಷ್ಟ ಅನುಭವಿಸಿದವರ ಕುರಿತು ಈ ಗಾದೆ ಹೇಳುತ್ತದೆ. ಪಗಡೆಯಾಟದ ಉಲ್ಲೇಖ ಮಹಾಭಾರತದಲ್ಲಿ ಕಂಡುಬರುತ್ತದೆ. ಋಗ್ವೇದ ಕಾಲದಲ್ಲೂ ಈ ಆಟ ಆಡುತ್ತಿದ್ದರು ಎನ್ನಲಾಗಿದೆ. ಪುರಾಣ ಕಾಲದಿಂದಲೂ ಪ್ರಚಲಿತವಿದ್ದ ಪಗಡೆ ರಾಜ ಮಹಾರಾಜರ ಆಟವಾಗಿದ್ದಂತೆ ಹೆಣ್ಣು ಮಕ್ಕಳ ಬೇಸರ ಕಳೆಯುವ ಆಟ ಕವಡೆ ಆಟವಾಗಿತ್ತು. ಇಸ್ಪೀಟಾಟ ಹಿಂದೆ ಗಂಜೀಫಾ ಆಟದ ರೂಪದಲ್ಲಿದ್ದು ಹೆಚ್ಚಾಗಿ ಅರಮನೆ ಆಟವಾಗಿರುತ್ತಿತ್ತು. ಹರಪ್ಪ. ಮೊಹೆಂಜೊದಾರೋ ಅವಶೇಷಗಳಲ್ಲಿ ಪಗಡೆ ದಾಳಗಳು ಹೇರಳವಾಗಿ ದೊರೆತಿವೆ.

ಪಗಡೆ ಆಟವನ್ನು ಹೊತ್ತು ಕಳೆಯಲು ಜನ ಮದುವೆ ಮನೆಗಳಲ್ಲಿ, ಹಳ್ಳಿಗಳಲ್ಲಿ ರೈತರು, ಜಮೀನುದಾರರು ಕೃಷಿ ಕೆಲಸಗಳ ನಂತರದ ಬಿಡುವಿನ ವೇಳೆಗಳಲ್ಲಿ ಆಡುತ್ತಿದ್ದರು. ಹೊಸದಾಗಿ ಮದುವೆಯಾದವರು ಪಗಡೆ ಆಡಿ ಮನೆಯವರೆಲ್ಲ ಒಂದಾಗುತ್ತಿದ್ದರು. ಮಾವನ ಮನೆಗೆ ಅಳಿಯ ಬಂದಾಗ ಪಗಡೆ ಆಡುತ್ತಿದ್ದುದು ಸಹಜವಾಗಿಯೇ ಇರುತ್ತಿತ್ತು. ಆದರೆ ಅಳಿಯನನ್ನು ಗೆಲ್ಲಿಸಲು ಕಾತರರಾಗಿರುತ್ತಿದ್ದರು. ಅಳಿಯ ಮುನಿದರೆ ಗತಿ ಏನು ಎಂಬ ಭಾವನೆ ಅತ್ತೆ ಮಾವಂದಿರಲ್ಲಿ ಇರುತ್ತಿತ್ತು. ಪಗಡೆಯಾಟ ಬಹು ಪ್ರಾಚೀನವಾದುದಂತೂ ಹೌದು.

ಪಗಡೆಯಾಡಲು ಒಂದು ಪಗಡೆ ಹಾಸು. ಕೆಂಪು, ಕಪ್ಪು, ಹಸುರು ಹಾಗೂ ಹಳದಿ ಬಣ್ಣಗಳ ಪುಟ್ಟ ಗಂಟೆಯಾಕಾರದ ಕಾಯಿಗಳು ಪ್ರತಿ ಬಣ್ಣಕ್ಕೆ ನಾಲ್ಕರಂತೆ ಹದಿನಾರು ಕಾಯಿಗಳು ಹಾಗೂ ಘನ ಆಯತಾಕಾರದ ಎರಡು ದಾಳಗಳು ಬೇಕಾಗುತ್ತವೆ.

ದಾಳಗಳ ನಾಲ್ಕು ಕಡೆಯೂ ಒಂದು, ಮೂರು, ಆರು, ನಾಲ್ಕು ಹೀಗೆ ದಪ್ಪ ಚುಕ್ಕಿಗಳಿರುತ್ತವೆ. ಈ ದಾಳ ಬೀಳುವುದಕ್ಕೆ ಲೆತ್ತ ಅಥವಾ ಗರ ಎನ್ನುವರು. ಎರಡೂ ದಾಳಗಳನ್ನು ಕೈಲಿ ಹಿಡಿದು ನೆಲಕ್ಕೆ ಉರುಳಿಸಿ ಹಾಕಿದಾಗ ಬಿದ್ದ ಗರಗಳ ಪೈಕಿ ಒಂದು ಬಿದ್ದರೆ 'ದುಗ' ಎನ್ನುವರು. ಮೂರು ಬಿದ್ದರೆ 'ಇತ್ತಿಗ' ಎನ್ನುವರು. ಹೆಚ್ಚು ಎಂದರೆ 'ಹನ್ನೆರಡು', ಕಮ್ಮಿ ಎಂದರೆ 'ದುಗ'. ದಾಳಗಳು ದಂತದ ಇಲ್ಲವೇ ಮೂಳೆಯವು. ನಾಲ್ಕು ಬಿದ್ದರೆ ಎಂಟು, ಆರು ಬಿದ್ದರೆ ಹನ್ನೆರಡು ಎಂದು ಲೆಕ್ಕ ಮಾಡುವರು. ಲೆತ್ತದಂತೆ ಕಾಯಿ ನಡೆಸುವರು.

ಕೆಂಪು, ಕಪ್ಪು ಒಬ್ಬರಿಗೆ ಹಾಗೂ ಹಸಿರು, ಹಳದಿ ಒಬ್ಬರಿಗೆ, ಪಗಡೆ ಹಾಸು ಕಸೂತಿ ಹಾಕಿದ ಇಲ್ಲವೆ ಬಣ್ಣ ಬಣ್ಣದ ಬಟ್ಟೆಯಲ್ಲಿ ಹೊಲೆದುದಾಗಿರಬೇಕು. ಒಂದು ರಟಿನ ಮೇಲೂ ಪಗಡೆ ಆಟದ ಚಿತ್ರ ಬರೆದುಕೊಂಡು ಆಡಬಹುದು.

ಆಡುವವರು ತಮ್ಮ ತಮ್ಮ ಬಣ್ಣದ ಕಾಯಿಗಳನ್ನು ವಿರುದ್ಧ ದಿಕ್ಕಿನ ಮನೆಗಳಲ್ಲಿ ಎರಡೆರಡಾಗಿ ಅಂದರೆ ಬಲಗಡೆ ಮಧ್ಯದ ಕಟ್ಟೆ ಮನೆಯಲ್ಲಿ ಎರಡು, ಮಧ್ಯದಲ್ಲಿ ಹಣ್ಣಿನ ಮನೆ ಅಂದರೆ ಕೇಂದ್ರದ ದೊಡ್ಡ ಮನೆಯಿಂದ ಆರು ಮತ್ತು ಏಳನೆಯ ಮನೆಯಲ್ಲಿ ಒಂದೊಂದೇ ಹೀಗೆ ಇಡಬೇಕು. ಈಗ ಯಾರಾದರೊಬ್ಬರು ಆಟ ಪ್ರಾರಂಭಿಸಿ ಲೆತ್ತ ಬೀಳಲು ಅಷ್ಟಕ್ಕೂ ಒಂದೇ ಬಣ್ಣದ ಕಾಯಿ ನಡೆಸುತ್ತಾ ಒಂದು ಪೂರಾ ಮಾಡಬೇಕು. ಹಣ್ಣಿನ ಕಾಯಿಗೆ ಗುರುತು ಕೆಂಪು ಮನೆಯಲ್ಲಿ ಅದು ಮಲಗಿಕೊಳ್ಳುವುದೇ. ಮೊದಲು ಎಲ್ಲ ಕಾಯಿಗಳನ್ನು ಹಣ್ಣು ಮಾಡಿದವರು ಗೆದ್ದಂತೆ.

ಚೌಕ ಬಾರ ಆಟದಂತೆ ಈ ಆಟದಲ್ಲೂ ಒಂಟಿ, ಜತೆ, ಅವುಗಳನ್ನು ಕಟ್ಟುವುದು, ಕೀಳುವುದು, ನಡೆಸುವುದು, ಹೊಡೆಯುವುದು ಈ ವಿಷಯಗಳಲ್ಲಿ ಮೊದಲೇ ಒಪ್ಪಂದ ಮಾಡಿಕೊಂಡ ನಿಯಮಗಳಿರುತ್ತವೆ.

ಈ ಆಟವನ್ನು ಸಾಮಾನ್ಯವಾಗಿ ಇಬ್ಬರು ಪರಸ್ಪರ ಎದುರು ಬದುರಾಗಿ ಕುಳಿತು ಆಡುತ್ತಾರೆ. ಒಬ್ಬೊಬ್ಬರು ಎರಡು ಬಣ್ಣದ ನಾಲ್ಕು ಕಾಯಿಗಳನ್ನು ಇಟ್ಟು ನಡೆಸುವರು. ದಾಳಗಳನ್ನು ಉರುಳಿಸಿದಾಗ ಬೀಳುವ ಸಂಖ್ಯೆಗೆ ಅನುಸಾರವಾಗಿ ಮನೆಗಳ ಕಾಯಿ ನಡೆಸಬೇಕು. ಕೆಲವೊಮ್ಮೆ ನಾಲ್ಕು ದಿಕ್ಕುಗಳಲ್ಲೂ ಪರಸ್ಪರ ನಾಲ್ಕು ಜನರು ಕುಳಿತು ನಾಲ್ಕು ಕಾಯಿಗಳನ್ನು ನಡೆಸಿ ಆಟವಾಡಲೂಬಹುದು. ಈ ಆಟದಲ್ಲಿ ವೈವಿಧ್ಯತೆಗಳಿವೆ.

ಹಂಪಿಯ ದೇವಾಲಯದ ಜಗಲಿಗಳ ಹಾಸು ಬಂಡೆಯ ಮೇಲೆ ಹಾಗೂ ರಂಗ ಮಂಟಪದ ನಡುವೆ ಹಾಗೂ ಬಂಡೆಗಳ ಮೇಲೆ ಪಗಡೆ ಆಟದ ನಕಾಶೆಗಳು ಕಂಡುಬರುತ್ತವೆ. ಪಗಡೆ ಹಾಸಿಗೆ,

ಹೊದಿಕೆ ಹಾಗೂ ಆಟದ ನಕಾಶೆ ಪಟವಾಗಿ ಕೌದಿಯೊಂದು ಜನಪದದಲ್ಲಿ ಬಳಕೆ ಇದೆ. ಜನಪದರ ವಂಶಾವಳಿಯ ವರಹಾ ಗ್ರಂಥವಾಗಿಯೂ ಕೌದಿ ಕೆಲಸ ನಿರ್ವಹಿಸುತ್ತದೆ.

ಹಾಸಿನ ನಕಾಶೆ ಪಟದ ಕೆಳಭಾಗದಿಂದ ಮೊದಲನೇ, ನಾಲ್ಕನೇ ಹಾಗೂ ದಳಾಸಿಯ ಮನೆಗಳು ಹಾಗೂ ಮಧ್ಯ ಸಾಲಿನ ಮೂರನೇ, ಆರನೇ ಮನೆಗಳಿಗೆ ಣ ಆಕಾರ ನೀಡುವರು. ಇವುಗಳು ಕಟ್ಟೆ ಮನೆಗಳು.

ಪಗಡೆಯನ್ನು ಒಂದು ಮನರಂಜನೆಯ ಆಟವಾಗಿ ಆಡಬೇಕಷ್ಟೆ, ಹಣ ಅಥವಾ ಆಸ್ತಿ ಇವನ್ನು ಇಟ್ಟು ಆಡುವುದು ವಿಪತ್ತುಗಳಿಗೆ ಎಡೆಮಾಡುತ್ತವೆ. ಜೂಜು ಎನಿಸಿಕೊಳ್ಳುತ್ತದೆ. ದ್ಯೂತವಾಡಿಯೇ ಪಾಂಡವರು ವನವಾಸ ಅನುಭವಿಸಬೇಕಾಯಿತು. ಅದೂ ಅಲ್ಲದೆ ಪಾಂಡವರು ಶಕುನಿಯು ಆಡಿದ ಮೋಸದ ಆಟದಲ್ಲಿ ಪಾಲ್ಗೊಂಡರು.

5.4 ಕುಂಟಾಟ

ಇದೊಂದು ಮಕ್ಕಳ ಆಟ. ಐದಾರು ಮಕ್ಕಳು ಸೇರಿ ಆಡಬಹುದು. ಎಲ್ಲ ಮಕ್ಕಳೂ ಸೇರಿ ಒಂದು ದೊಡ್ಡ ಚೌಕವನ್ನು ಬರೆದುಕೊಳ್ಳಬೇಕು. ಅದೇ ಆಟದ ಅಂಗಣ. ಈ ಅಂಗಣದೊಳಗೇ ಆಟ. ಚೌಕದ ಗೆರೆಗಳೇ ಎಲ್ಲೆ.

ಎಲ್ಲರೂ ಸೇರಿ ಒಟ್ಟಿಗೆ ಚಪ್ಪಾಳೆ ತಟ್ಟಿ ಒಂದರ ಮೇಲೊಂದು ಕೈಯಿಟ್ಟು ತೋರಿಸಬೇಕು. ಹೀಗೆ ಕೈ ಇಡುವ ರೀತಿಯಲ್ಲಿ ಯಾರ ಕೈ ಇತರರಿಗಿಂತ ಭಿನ್ನವಾಗಿರುತ್ತದೆಯೋ ಅವರು ಇತರರಲ್ಲಿ ಒಬ್ಬರನ್ನು ಹಿಡಿಯಬೇಕು. ಹಾಗೆ ಒಬ್ಬರು ಸಿಕ್ಕಿ ಬೀಳುವವರೆಗೂ ಅವರೆಲ್ಲ ಚಪ್ಪಾಳೆ ತಟ್ಟುತ್ತಿರುತ್ತಾರೆ. ಸಿಕ್ಕಿ ಹಾಕಿಕೊಂಡವರು. ಕುಂಟುತ್ತ ಕುಂಟುತ್ತ ಚೌಕದೊಳಗೆ ಬಾಕಿಯವರನ್ನು ಹಿಡಿಯಬಹುದು. ಕಾಲು ಬಿಡಕೂಡದು. ದಣಿವಾದರೆ ತುಸು ಸಮಯಾವಕಾಶ ಕೇಳಬಹುದು. ಮೊದಲು ಸಿಕ್ಕಿ ಬಿದ್ದವರು ಮುಂದಕ್ಕೆ ಕುಂಟಿಕೊಂಡು ಬೇರೆಯವರನ್ನು ಹಿಡಿಯಬೇಕು. ಚೌಕದ ಎಲ್ಲೆ ಬಿಟ್ಟು ಹೊರ ಹೋದವರೂ ಸಿಕ್ಕಿ ಬಿದ್ದಂತೆ ಲೆಕ್ಕ. ಹೀಗೆ ಆಟ ಮುಂದುವರಿಯುತ್ತದೆ. ದೈಹಿಕವಾಗಿ ವ್ಯಾಯಾಮ.

5.5 ಕಣ್ಣು ಮುಚ್ಚಾಲೆ

ಇದು ಮಕ್ಕಳಾಟ. ಅವಿತೇ ಗುಮ್ಮನಾಟ ಎಂದೂ ಕರೆಯುತ್ತಾರೆ. ಇದೊಂದು ಸಾಮೂಹಿಕ ಆಟ. ಕಣ್ಣಾ ಮುಚ್ಚಾಲೆ ಎಂಬ ಪ್ರಯೋಗವು ಇದೆ.

ಕಣ್ಣು ಮುಚ್ಚಾಲೆ ಆಟ ಆಡು ಎನ್ನುವುದು ಒಂದು ಜನಪದ ನುಡಿಗಟ್ಟು ಇದರ ಅರ್ಥ ಮರೆಮಾಚು, ಕಣ್ಣು ತಪ್ಪಿಸು ಎಂದು ಇದೆ.

ಏಳೆಂಟು ಮಕ್ಕಳು ಸೇರಿ ಈ ಆಟ ಆಡಬಹುದು. ಜತೆಗೆ ಒಬ್ಬಳು ಅಜ್ಜಿ ಇಲ್ಲವೇ ವಯಸ್ಸಿನಲ್ಲಿ ಸ್ವಲ್ಪ ಹಿರಿಯಳು ಬೇಕಾಗುತ್ತಾರೆ. ಆಟದಲ್ಲಿ ಒಬ್ಬರು ಹಿಡಿಯುವವರು, ಉಳಿದವರು ಬಚ್ಚಿಟ್ಟುಕೊಳ್ಳುವವರು. ಯಾರು ಉಳಿದವರನ್ನು ಹಿಡಿಯಬೇಕೋ ಅವರ ಕಣ್ಣನ್ನು ಮುಚ್ಚಲು ಒಬ್ಬ ಅಜ್ಜಿ ಇರುತ್ತಾಳೆ. ಅಂದರೆ ಕಣ್ಣು ಮುಚ್ಚಿ ಆಡಿಸುವ ಆಟ ಎಂದು ಆಟಕ್ಕೆ 'ಕಣ್ಣು ಮುಚ್ಚಾಲೆ' ಎನ್ನುವರು.

<u>ಅಜ್ಜಿ ಒಂದು ಮಗುವಿನ ಕಣ್ಣು ಮುಚ್ಚಿ.</u>

ಕಣ್ಣಾಮುಚ್ಚೆ
ಕಾಡೆಗೂಡೆ
ಉದ್ದಿನ ಮೂಟೆ ಉರುಳೇ ಹೋಯ್ತು
ಹಾಲೇ ಕಂಬ ಹರಿದೇ ಹೋಯ್ತು
ನಮ್ಮ ಹಕ್ಕಿ ಬಿಟ್ಟೆನೋ ಬಿಟ್ಟೆ,
ನಿಮ್ಮ ಹಕ್ಕಿ ಮುಚ್ಚಿಕೊಳ್ಳಿರೋ
ಮುಚ್ಚಿಕೊಳ್ಳಿ

ಎಂದು ಗಟ್ಟಿಯಾಗಿ ಹಾಡಿ ಮಗುವನ್ನು ಬಿಡುತ್ತಾಳೆ. ಅಜ್ಜಿ ಹಾಡು ಹೇಳುವಷ್ಟರೊಳಗೆ ಉಳಿದ ಮಕ್ಕಳು ಸುತ್ತಮುತ್ತ ಬಚ್ಚಿಟ್ಟುಕೊಳ್ಳಬೇಕು. ಅಜ್ಜಿ ಬಿಟ್ಟ ಮಗು ಬಚ್ಚಿಟ್ಟುಕೊಂಡಿರುವವರನ್ನು ಹಿಡಿಯಬೇಕು. ಇಲ್ಲಿ ಹಕ್ಕಿ ಮಗುವಿಗೆ ಬಳಸಿರುವ ಸಂಕೇತ. ಯಾವುದಾದರೂ ಬುದ್ಧಿವಂತ ಮಗು ಇತರರನ್ನು ಹಿಡಿಯುತ್ತಿರುವ ಮಗುವಿನ ಕಾಣದಂತೆ ಅಜ್ಜಿಯನ್ನು ಬಂದು ಮುಟ್ಟಿಸಿಕೊಂಡುಬಿಟ್ಟರೆ ಮೊದಲು ಹಿಡಿಯುತ್ತಿದ್ದ ಮಗುವೇ ಮತ್ತೆ ಕಣ್ಣು ಮುಚ್ಚಿಸಿಕೊಂಡು ಅಜ್ಜಿ ಬಿಟ್ಟ ಬಳಿಕ ಉಳಿದವರನ್ನು ಹಿಡಿಯಬೇಕು ಇಲ್ಲವೇ ಯಾವುದಾದರೊಂದು ಬಚ್ಚಿಟ್ಟುಕೊಂಡಿದ್ದ ಮಗುವನ್ನು ಕಂಡುಬಿಟ್ಟರೆ ಹೆಸರು ಹಿಡಿದು ಕೂಗಿ ಕಂಡೆ, ಕಂಡೆ ಎಂದು ಹೇಳಿ ಹಿಡಿದರಾಯಿತು. ಆ ಮಗು ಮುಂದೆ ಅಜ್ಜಿ ಕೈಲಿ ಕಣ್ಣು ಮುಚ್ಚಿಸಿಕೊಳ್ಳಬೇಕು.

ಈಗೆಲ್ಲ ಈ ಆಟ ತುಸು ಬದಲಾಗಿದೆ. ಅಜ್ಜಿಗೆ ಬದಲಾಗಿ ಹಿಡಿಯಬೇಕಾದವರು. ಒಂದು ಕಡೆ ನಿಂತು ಗೋಡೆಗೋ. ಮರಕ್ಕೋ ಎದುರಾಗಿ ನಿಂತು ಕೈಯಿಂದ ಕಣ್ಣು ಮುಚ್ಚಿಕೊಂಡು ಒಂದರಿಂದ ಹತ್ತರವರೆಗೆ ಎಣಿಸಿ ಬಳಿಕ ಕಣ್ಣು ಬಿಟ್ಟು ಬಚ್ಚಿಟ್ಟುಕೊಂಡಿರುವವರನ್ನು ಕಂಡು ಅವರ ಹೆಸರು ಕೂಗಿಕೊಳ್ಳುವ ರೂಢಿ ಇದೆ. ಇದಕ್ಕೆ 'ಗುಲ್ಪಾ ರಿಯೋ' ಎಂದು ಕರೆಯುವರು. 'ಐಸ್ಪೈಸ್' ಎಂದೂ ಈ ಆಟಕ್ಕೆ ಹೆಸರಿದೆ. ನೆನಪಿನ ಶಕ್ತಿ ಹೆಚ್ಚಿಸಲೂ ಈ ಆಟ ಉಪಯುಕ್ತ.

5.6 ಗೋಲಿ ಆಟ

ಪುರಾಣ ಕಾಲದಲ್ಲಿ ಹರಿಭಕ್ತ ಚಂದ್ರಹಾಸ ಬಾಲಕನಿದ್ದಾಗ ಗೋಲಿ ಆಟ ಆಡುತ್ತಿದ್ದನೆಂದು ತಿಳಿದುಬರುತ್ತದೆ. ಒಮ್ಮೆ ಅವನು ದಾರಿಯಲ್ಲಿ ಬರುತ್ತಿರಬೇಕಾದರೆ ಒಂದು ದುಂಡನೆಯ ಗೋಲಿ ಗಾತ್ರದ ಸಾಲಿಗ್ರಾಮ ಶಿಲೆಯು ಸಿಕ್ಕಿತಂತೆ. ಅದನ್ನು ಅವನು ಯಾವಾಗಲೂ ಬಾಯಿಯಲ್ಲಿ ಇಟ್ಟುಕೊಂಡಿರುತ್ತಿದ್ದನೆಂದೂ ಗೋಲಿ ಆಟದಲ್ಲಿ ಬಹುಬೇಗ ಗೆದ್ದುಬಿಡುತ್ತಿದ್ದನೆಂದೂ ಹೇಳುತ್ತಾರೆ.

ಗೋಲಿಯಾಟ ಗಂಡು ಮಕ್ಕಳ ಆಟ. ಗುರಿ ಇಟ್ಟು ಆಡುವ ಆಟವೂ ಆಗಿದೆ.

ಮಣ್ಣಿನ ನೆಲದಲ್ಲಿ ಒಂದು ಬದ್ದು ಮಾಡಿಕೊಂಡು (ಗುಳಿ ತೋಡಿ) ಆಡುವುದು ಸಾಮಾನ್ಯವಾಗಿ ರೂಢಿಯಲ್ಲಿರುವ ವಿಧ. ಆಟ ಆಡುವವರೆಲ್ಲ ನಿಗದಿಪಡಿಸಿಕೊಂಡ ದೂರದಿಂದ ಬದ್ದಿನ ಕಡೆ ಗೋಲಿ ಬಿಡಬೇಕು. ಒಂದೇ ಎಸೆತಕ್ಕೆ ಗೋಲಿಯನ್ನು ಬದ್ದಿಗೆ ತುಂಬಿದವರು ಗೆದ್ದಂತೆ.

ಗೋಲಿ ಎಸೆದಾಗ ಬದ್ದಿಗೆ ಅತಿ ಹತ್ತಿರವಿರುವ ಗೋಲಿ ಕುಳ್ಳಿ, ಅತಿ ದೂರವಿರುವ ಗೋಲಿ ಗಟ್ಟಿ ಒಪ್ಪಂದ ಮಾಡಿಕೊಂಡಂತೆ ಗಟ್ಟಿ ಗೋಲಿಯವನೋ, ಕುಳ್ಳಿ ಗೋಲಿಯವನೋ ಮೊದಲು ಆಡಬೇಕು. ಅವನು ಬದ್ದು ತುಂಬಿ ಯಾವುದಾದರೊಂದು ಗೋಲಿಗೆ ಗುರಿ ಇಟ್ಟು ಹೊಡೆಯಬೇಕು. ಮತ್ತೆ ಬದ್ದು ತುಂಬಬೇಕು. ಮತ್ತೆ ಹೊಡೆಯಬೇಕು. ಹೀಗೆ ಆಡುವಾಗ ಎಲ್ಲಿ ತಪ್ಪಿದರೂ ಅವನ ಆಟ ಅಲ್ಲಿಗೆ ಮುಗಿದಂತೆ.

ಮತ್ತೆ ಮುಂದಿನ ಕುಳ್ಳಿ ಅಥವಾ ಗಟ್ಟಿ ಗೋಲಿಯವನ ಆಟ ಶುರು. ಮೊದಲು ಹತ್ತು ಮಾಡಿದವನು ಗೆದ್ದಂತೆ. ಒಬ್ಬ ಹತ್ತು ಮಾಡಿಬಿಟ್ಟನೆಂದರೆ, ಉಳಿದವರ ಲೆಕ್ಕವೆಲ್ಲ ವಜಾ ಆಗಿಬಿಡುತ್ತದೆ. ಅಂದರೆ ಅವರು ಮತ್ತೆ ಮೊದಲಿನಿಂದ ಆಡಬೇಕು. ಕೊನೆಯಲ್ಲಿ ಉಳಿಯುವವನು ಸೋತವನಾಗುತ್ತಾನೆ. ಹಾಗೆ ಸೋತವನು ತನ್ನ ಗೋಲಿಯನ್ನು ನಿಗದಿಪಡಿಸಿದ ದೂರದಿಂದ ಬದ್ದಿನ ಕಡೆಗೆ ಒಗೆದು ತುಂಬಲು ಯತ್ನಿಸಬೇಕು. ಹೀಗೆ ತುಂಬಿದರೆ ಮೊದಲು ಗೆದ್ದವನಿಗೆ ಆಟ ಕೊಟ್ಟಂತೆ. ಮುಂದೆ ಇನ್ನೊಬ್ಬನಿಗೆ ಅಂದರೆ ಎರಡನೆಯವನಿಗೆ. ಗೋಲಿ ಬದ್ದಿಗೆ ಬೀಳದೆ ಹೋದರೆ ಗೆದ್ದವನು ಬದ್ದಿನ ಹತ್ತಿರದಿಂದ ಸೋತವನ ಗೋಲಿಯನ್ನು ಗುರಿ ಇಟ್ಟು ಹೊಡೆದು ದೂರ ಓಡಿಸುತ್ತಾರೆ. ಆ ಗೋಲಿಯನ್ನು ಸೋತವನು ಬೆರಳುಗಳಿಂದಲೋ, ಮೊಳಕೈಯಿಂದಲೋ ದೇಕಬೇಕು. ಹೀಗೆ ತಳ್ಳುತ್ತಾ ಬದ್ದು ತುಂಬಬೇಕು. ಬದ್ದು ತುಂಬಿದರೆ ಗೆದ್ದಂತೆ. ಇಲ್ಲದಿದ್ದರೆ ಮತ್ತೆ ಗೋಲಿ ಹೊಡೆಯುವುದು, ಮತ್ತೆ ದೇಕುವುದು ಇದ್ದೇ ಇರುತ್ತದೆ. ಸೋತವನು ಗೆದ್ದವರೆಲ್ಲರಿಗೂ ಗೋಲಿಯನ್ನು ಎಸೆದು ತಳ್ಳಿ ತಳ್ಳಿ ಬದ್ದು (ಕುಳಿ) ತುಂಬಿ ಆಟ ಕೊಡಬೇಕು.

ಗೋಲಿ ಆಟದಲ್ಲೂ ಅನೇಕ ವಿಧಗಳಿವೆ. ಗೋಲಿಗೆ ಬದಲಿಗೆ ಗುಂಡಗಿರುವ ಗೊರ್ಜಿಕಲ್ಲು ಉಪಯೋಗಿಸಿ ಆಡುವರು ಗಾಜಿನ ಗೋಲಿಗಳು ಲಭ್ಯ, ಕೆಲವರು ಬದ್ದಿಗೆ ಬದಲಾಗಿ ಒಂದು ಪಟ್ಟಿ ಚೌಕ ಬರೆದು ಆಡುವಲ್ಲಿ ತಮ್ಮ ತಮ್ಮದೆಂದು ಒಂದೊಂದು ಗೋಲಿಯನ್ನು ಪಣವಾಗಿಟ್ಟು ದೂರದಿಂದ ಅದನ್ನು ಹೊಡೆದು ಚೌಕದಿಂದ ಆಚೆಗೆ ತಳ್ಳಿ ಗೆಲ್ಲುವರು.

ಆಟ ಆಡುವಾಗ ಎಣಿಕೆಗೆ ಬದಲಾಗಿ ಹೊನಗನ್ನೆ, ಹೊನಕೆರಡು, ಬಂಗಾಲಿ, ಬಾಲ ಎಂದೆಲ್ಲ ಇಲ್ಲವೇ ಎಕ್ಕಲ್‌ಗಾಜ, ಡಬ್ಬಿರಾಜ (ದಶಕಟ್ ರಾಜ, ತೀನಂತೀಪು (ದುಡುಂ ದಡೇಲ) ಎಂದೋ ನಾಲ್ಕು, ಏಳು ಇಲ್ಲವೇ ಹತ್ತರವರೆಗೆ ಎಣಿಸುವರು.

ಗೋಲಿ ಆಟ ಗೆಳೆಯರನ್ನು ಹತ್ತಿರ ತರುತ್ತದೆ. ಆಡುವಾಗ ಅವರಾರಿಗೂ ಬೇರೆ ಲೋಕದ ಪರಿವೇಯೇ ಇರುವುದಿಲ್ಲ.

5.7 ಗಜ್ಜುಗದಾಟ

ಗಜ್ಜುಗಗಳು ಮತ್ತು ಆಡುವವರಿಗೆ ತಲಾ ಒಂದು ಬಚ್ಚ ಇದ್ದರೆ ಗಜ್ಜುಗದಾಟ ಆಡಬಹುದು.

ಅಯತಾಕಾರವಾಗಿಯೋ, ಅಂಡಾಕಾರವಾಗಿಯೋ ಮನೆಯೊಂದನ್ನು ಬರೆದುಕೊಳ್ಳಬೇಕು. ಆಡುವರೆಲ್ಲ ಒಬ್ಬೊಬ್ಬರಿಗೆ ಒಂದೊಂದು ಬಡ್ಡಿ ಗಜ್ಜುಗಗಳನ್ನು ಅಂದರೆ ಮೂರು ಗಜ್ಜುಗದ ಮೇಲೆ ಒಂದು ಗಜ್ಜುಗ ಅದರಲ್ಲಿ ಇಡಬೇಕು. ನಿಗದಿಪಡಿಸಿಕೊಂಡ ದೂರದಿಂದ ಗಜ್ಜುಗಳ ಕಡೆಗೆ ಬಚ್ಚ ಎಸೆಯಬೇಕು. ಎಸೆದ ಏಟಿಗೆ ಗಜ್ಜುಗ ಈಚೆಗೆ ಹಾರಿದರೆ ಹಳಿ ಹೊಡೆದಂತೆ. ಅದೇ ಎಲ್ಲೆಯ ಗೀರಿನ ಮೇಲೆ ಬಿದ್ದರೆ ಬಿದ್ದಷ್ಟು ಗಜ್ಜುಗಳನ್ನು ವಟ್ಟ ಕೊಡಬೇಕು. ಬಚ್ಚಾನೇ ಬದ್ದಿನೊಳಗೆ ಬಿದ್ದರೆ ಅದಕ್ಕೂ ವಟ್ಟ ಕೊಡಬೇಕು. ಗಜ್ಜುಗ ಅಲ್ಲಾಡಿದರೆ ಜಮ್ನಿ ಮಾಡಿಕೊಂಡ ಹಾಗೆ. ಅಂಥವನಿಗೂ ಆಟ ಇರುತ್ತದೆ.

ಹಳಿ ಹೊಡೆದವನಿಗೆ ಮೊದಲು ಅವಕಾಶ. ಹಾಗೆ ಯಾರೂ ಇಲ್ಲದಿದ್ದರೆ ಒಪ್ಪಂದದ ಪ್ರಕಾರ ಗಟ್ಟಿ ಅಥವಾ ಕುಳ್ಳಿ ಬಚ್ಚದವರಿಗೇ ಮೊದಲಾಟ. ಅಂದರೆ ಬಚ್ಚದಿಂದ ಹೊಡೆದು ದೂರ ಓಡಿಸಿದ ಗಜ್ಜುಗಗಳು ಗೆದ್ದವನಿಗೆ ಲಭ್ಯ. ಕಳೆದುಕೊಂಡವನಿಗೆ ಇಲ್ಲ, ನಷ್ಟ.

5.8 ಉತುತುದಾಟ

ಈ ಆಟಕ್ಕೆ ಹಲವು ಹೆಸರುಗಳಿವೆ. ಈಗಿನ ಜನಪ್ರಿಯ ಹೆಸರು ಕಬಡ್ಡಿ. ಹುಡುತುತು ಚುಡುಗುಡು, ತತುತುತೂ ಎಂದೂ ಕರೆಯುವರು. ಇದೊಂದು ಯುವಕರ ಆಟ.

ಕರ್ನಾಟಕದಲ್ಲಿಯಷ್ಟೇ ಅಲ್ಲದೆ ಭಾರತದಾದ್ಯಂತ ಹಳ್ಳಿಗಾಡಿನ ಮಕ್ಕಳ ನೆಚ್ಚಿನ ಆಟವಾಗಿ ರೂಪುಗೊಂಡ ಕಬಡ್ಡಿ ಆಟಕ್ಕೆ ನೂರಾರು ವರ್ಷಗಳ ಇತಿಹಾಸವೇ ಇದೆ. ಜಾತ್ರೆಗಳಲ್ಲಿ, ಹಬ್ಬ ಹರಿದಿನಗಳನ್ನೊಳಗೊಂಡಂತೆ ಹೀಗೆ ಹತ್ತಾರು ಸಂದರ್ಭಗಳಲ್ಲಿ ಈ ಜನಪದ ಆಟವನ್ನು ಆಡಲಾಗುತ್ತದೆ.

ಸಾಮಾನ್ಯವಾಗಿ ಆಟಗಾರರು ಈ ಆಟ ಆಡುವಾಗ ಒಂದು ಚಡ್ಡಿ ಹಾಗೂ ಒಂದು ಬನಿಯನ್ ಧರಿಸಿರುತ್ತಾರೆ.

ಆಟಗಾರರಲ್ಲಿ ಸಮನಾಗಿ ಎರಡು ಗುಂಪು ಇರುತ್ತದೆ. ಆಟದ ಮೈದಾನವನ್ನು ಎಲ್ಲೆ ಕಟ್ಟು ಹಾಕಿ ಮಧ್ಯಕ್ಕೆ ಸಮಭಾಗ ಮಾಡಿರುತ್ತಾರೆ. ಯಾವುದಾದರೊಂದು ಕಡೆಯ ಯಾರಾದರೊಬ್ಬರು ಉಸಿರುಕಟ್ಟಿ ಕಬಡಿ, ಕಬಡಿ ಎನ್ನುತ (ಉತ್ತುತ್ತು ಎಂದೂ ಹೇಳುವರು) ಮಧ್ಯದ ಗೆರೆ ದಾಟಿ ಎದುರಾಳಿಗಳ ಅವರಣ ಪ್ರವೇಶಿಸುವರು. ಅವರ ಹಿಡಿತಕ್ಕೆ ಸಿಗದೆ ಅವರಲ್ಲಿ ಒಬ್ಬನನ್ನು ಮುಟ್ಟಿ ಹಿಂತಿರುಗಬೇಕು. ಕಬಡ್ಡಿ ಹೇಳುವುದನ್ನು ಬಿಡುವಂತಿಲ್ಲ. ಮುಟ್ಟಿಸಿಕೊಂಡವನು ಸೋತ ಎಂದು ಅರ್ಥ. ಈ ಯತ್ನದಲ್ಲಿ ಉಸಿರು ಬಿಟ್ಟರೆ, ಸಿಕ್ಕಿ ಬಿದ್ದರೆ, ಗೆರೆಯನ್ನು ದಾಟಿ ತನ್ನ ಪಾಳಯಕ್ಕೆ ಬರದಿದ್ದರೆ ಅವನು ಸೋತಂತೆ. ಯಾರೂ ಸುತ್ತಣ (ಬೌಂಡರಿ) ಗೆರೆ ದಾಟಿ ಪಾಳಯದಿಂದ ಹೊರಗೆ ಹೋಗುವಂತಿಲ್ಲ. ಒಬ್ಬ ಎದುರು ಆವರಣಕ್ಕೆ ಹೋಗಿ ಹಿಡಿಯುವ ಪ್ರಯತ್ನ ಮಾಡಿದ ಮೇಲೆ ಇನ್ನೊಂದು ಕಡೆಯವರ ಆಟ. ಆಟ ಹೀಗೆ ಮುಂದುವರಿದು ಕಡೆಗೆ ಯಾವುದಾದರೊಂದು ಪಂಗಡ ಗೆಲ್ಲುತ್ತದೆ.

ಹೊನ್ನಪ್ಪ (1998), ರಮೇಶ್ (2001–2002) ಇವರುಗಳು ಕಬಡ್ಡಿಯಲ್ಲಿ ಅರ್ಜುನ ಪ್ರಶಸ್ತಿ ಪಡೆದ ಕನ್ನಡಿಗರು. ಕರ್ನಾಟಕದಲ್ಲಿ ಕಬಡ್ಡಿಗೆ ಬೆಂಗಳೂರೇ ತವರು. 1962ರಲ್ಲೇ ಕರ್ನಾಟಕ ಕಬಡ್ಡಿ ಸಂಸ್ಥೆ ಆರಂಭವಾಗಿದೆ. ಕಬಡ್ಡಿ ಇಂದು ಒಂದು ಪ್ರಬಲವಾದ ಆಟ. ಶಾಲಾ ಕಾಲೇಜುಗಳಲ್ಲಿ ಕಬಡ್ಡಿ ಜನಪ್ರಿಯ.

5.9 ಚೆಂಡಾಟ

ಲಗೋರಿ ಅಥವಾ ಚೆಂಡು ಆಟ ಜನಪ್ರಿಯ. ಲಗ್ಗೆ ಎಂದರೆ ಚೆಂಡಾಟದಲ್ಲಿ ಚೆಂಡನ್ನು ಎಸೆಯಲು ಇಟ್ಟಿರುವ ಗುರಿ ಹಲಗೆ, ಗುರಿ ಹಲಗೆಗೆ ಚೆಂಡೆಸೆದು ಆಡುವ ಆಟ ಲಗ್ಗೆ ಚೆಂಡು ಆಟ.

ಶಿವಕೋಟ್ಯಾಚಾರ್ಯರ ವಡ್ಡಾರಾಧನೆ' ಗ್ರಂಥದಲ್ಲಿ ಪ್ರಸ್ತಾಪಗೊಂಡಿರುವ ಚೆಂಡನ್ನು ಬಚ್ಚಿಟ್ಟು ಆಡುವ ಉಳಿಚೆಂಡು ಇಂದೂ ಇದೆ. ಪಂಪ ಮಹಾಕವಿ ಕೂಡ ಈ ಆಟದ ಬಗ್ಗೆಯಲ್ಲದೆ 'ಸಿಕ್ಕಿದೋರಿಗೆ ಸೀರುಂಡೆ' ಎಂದು ಕರೆಯುವ 'ಪೊಡೆಸೆಂಡು' ಬಗ್ಗೆ ಬರೆದಿದ್ದಾನೆ. ಕಲ್ಲುಗಳನ್ನು ಒಂದರ ಮೇಲೊಂದು ಪೋಣಿಸಿಟ್ಟು ಚೆಂಡಿನಿಂದ ಹೊಡೆಯುವ ಲಗ್ಗೆ ಚೆಂಡಿನಾಟದ ಬಗ್ಗೆಯೂ ಪಂಪ ಹೇಳಿದ್ದಾನೆ.

ಸಿಕ್ಕಿದವರಿಗೆ ಸೀರುಂಡೆ ಎಂದರೆ ಎರಡು ಪಂಗಡ ಮಾಡಿಕೊಳ್ಳದೆ ಯಾರು ಬೇಕಾದರೂ ಲಗ್ಗೆ ಬೀಳಿಸಿ ಆಡುವ ಲಗ್ಗೆ ಚೆಂಡು. ಲಗ್ಗೆ ಚೆಂಡಾಟ ಗಂಡು ಮಕ್ಕಳ ಆಟ ಇದಲ್ಲೆ ಲಗ್ಗೆ (ಗುರಿ)ಯಾಗಿ ಚಪ್ಪಟೆಯಾದ ಆಯತಾಕಾರದ ಕಲ್ಲು ಹಾಗೂ ಆಡಲು ಒಂದು ಹಳೆ ಬಟ್ಟೆಯನ್ನು ಪಟ್ಟಿ ಪಟ್ಟಿಯಾಗಿ ಹರಿದು ಸುತ್ತಿ ಹೊಲೆದ ಚೆಂಡು ಬೇಕು.

ಕಲ್ಲು ಬದಲಾಗಿ ಹೆಂಚಿನ ಅಥವಾ ಒಡೆದ ಮಡಕೆ ಚೂರುಗಳನ್ನು ಒಂದರ ಮೇಲೊಂದು ಪೇರಿಸಿಟ್ಟು ಸುಮಾರು ಆರು ಅಂಗುಲ ಎತ್ತರಕ್ಕೆ ಬರುವಂತೆ ಮಾಡಿದರೂ ಅದು ಒಂದು

ಲಗ್ಗೆಯಾಗುತ್ತದೆ. ಆಡುವವರಲ್ಲಿ ಎರಡು ಗುಂಪು. ಲಗ್ಗೆಗೆ ಹೊಡೆಯುವವರದು ಒಂದು ಗುಂಪು. ಲಗ್ಗೆ ಕಾಯ್ದುಕೊಂಡಿದ್ದು ಚೆಂಡೇನಾದರೂ ಪುಟವೆದ್ದು ಬಂದರೆ ಹಿಡಿಯಲು ಒಂದು ಗುಂಪು. ಪ್ರತಿಯೊಬ್ಬರಿಗೂ ಮೂರು ಅವಕಾಶ. ಒಂದು ವೇಳೆ ಚೆಂಡು ಹಿಡಿದುಬಿಟ್ಟರೆ ಮೊದಲ ಎಸೆತವಾಗಿ ಲಗ್ಗೆ ಬಿದ್ದಿದ್ದರೂ ಆಟ ಹೋಯಿತು. ಮುಂದಿನವನಿಗೆ ಆಟ ಸಿಗುತ್ತದೆ.

ಗುರಿ ಅಥವಾ ಲಗ್ಗೆ ಬಿದ್ದು ಚೆಂಡು ಕ್ಯಾಚ್ ಸಿಗದೆ ಹೋದರೆ ಲಗ್ಗೆ ಬೀಳಿಸಿದ ಗುಂಪು ಚೆಂಡನ್ನು ಅಡಗಿಸಿಟ್ಟುಕೊಳ್ಳುತ್ತಾರೆ. ಚೆಂಡು ಯಾರಲ್ಲಿದೆ ಎಂಬುದು ಅವರಿಗಷ್ಟೆ ಗೊತ್ತಿರುತ್ತದೆ. ಆದರೂ ಪ್ರತಿಯೊಬ್ಬರೂ ತಮ್ಮ ಬಳಿ ಚೆಂಡಿದೆ ಎಂಬಂತೆ ನಟಿಸಿ ಲಗ್ಗೆ ಕಾಯುತ್ತಿದ್ದ ಗುಂಪಿನವರನ್ನು 'ಹರತೋ ಹರತೋ' ಎಂದು ಕೂಗುತ್ತ ಹೊಡೆಯಲು ಅಟ್ಟಿಸಿಕೊಂಡು ಹೋಗುವರು. ಚೆಂಡು ಹೊಡೆದು ಯಾರಿಗಾದರೂ ತಗುಲಿದರೆ ಮತ್ತೆ ಅಡಗಿಸಿಟ್ಟುಕೊಳ್ಳುವರು.ತಗಲದಿದ್ದರೂ ಚೆಂಡಿಲ್ಲದವನನ್ನು ಯಾರಾದರೂ ಮುಟ್ಟಿಸಿಕೊಂಡುಬಿಟ್ಟರೂ ಜಾಗ್ರತೆಯಿಂದ ಮರೆಯಲ್ಲಿ ಓಡಿಬಂದು ಲಗ್ಗೆಯನ್ನು ಮೊದಲಿದ್ದಂತೆ ಒಡ್ಡಿದರೆ ಗೆದ್ದಂತೆ. ಆಗ ಕಾಯುತ್ತಿದ್ದವರು ಲಗ್ಗೆ ಹೊಡೆಯುವರಾಗಿ ಹೊಡೆಯುತ್ತಿದ್ದವರು ಲಗ್ಗೆ ಕಾಯುತ್ತಾರೆ. ಲಗ್ಗೆ ಚೆಂಡಿಗೆ ಹರತೋ ಚೆಂಡು ಎಂದು ಹೆಸರಿದೆ.

<u>5.10 ಗಾಳಿಪಟದಾಟ</u>

ಇದು ಹಕ್ಕಿ ಅಲ್ಲ
ಆದರೆ ಹಾರ್ತಯ್ತಲ್ಲ
ಬಾಲ ಇದ್ರೂನೂ ಕೋತಿ ಅಲ್ಲ
ಪಟ ಪಟ ಗಾಳಿಪಟ

ಎಂಬ ಜನಪ್ರಿಯ ಹಾಡು ಇತ್ತೀಚೆಗೆ ಹೆಸರಾಗಿದೆ. ಗಾಳಿಪಟದ ಸ್ಥೂಲ ವಿವರಣೆ ಇದು. ಗಾಳಿಪಟ ಆಡಿಸುವುದು ಒಂದು ಜನಪದ ಕ್ರೀಡೆ. ಗಾಳಿಯಲ್ಲಿ ಹಾಡಿಸುವ ಪಟದ ಆಟ.

ತುಂಬಾ ಪ್ರಾಚೀನವಾದ ಗಾಳಿಪಟಗಳಾಟ ಈಚೆಗೆ ರಾಷ್ಟ್ರ ಮಟ್ಟದಲ್ಲಿ ಬೆಳೆಯುತ್ತಿದೆ. ಗಾಳಿಪಟ ಆಡಿಸುವುದಕ್ಕೆ ಒಂದು ಪಟ, ಅದಕ್ಕೊಂದು ಸೂತ್ರ ಹಾಗೂ ಬಾಲಂಗಚ್ಚೆ (ಬಾಲಂಗೋಚಿ)ಯೂ ಅವಶ್ಯಕ. ಸೂತ್ರದ ದಾರ ಬಿಡುತ್ತಿದ್ದಂತೆ ಪಟ ಮೇಲಕ್ಕೆ ಹಾರಿ ಆಡುತ್ತದೆ. ಆಕರ್ಷಕ ಗಾಳಿಪಟಗಳು ಹಾರಿಸುವುದು ಇಂದು ರೂಢಿಯಲ್ಲಿದೆ. ಕರ್ನಾಟಕದಲ್ಲಿ ಗಾಳಿಪಟದ ಹಬ್ಬ ಎಂದೇ ಆಚರಿಸುತ್ತಿದ್ದರು. ಇಂದು ಇದು ಕಡಿಮೆಯಾಗಿದೆ.

ಒಂದೆರಡಾಳು ಎತ್ತರದ ಪಟಗಳ ಬಾಲಂಗೋಚಿಗೆ ಹಂದಿ ಮರಿಯನ್ನು ಕಟ್ಟಿ ಹಾರಿಸುತ್ತಿದ್ದ ದಿನಗಳಿದ್ದವು ಎನ್ನಲಾಗಿದೆ. ಸಾಲಾಗಿ ನಿಲ್ಲಿಸಿದ ಎತ್ತಿನ ಗಾಡಿಗಳಿಗೆ ಹಾರುವ ಪಟಗಳನ್ನು ಕಟ್ಟಿ ಅವು ಗಾಡಿಗಳನ್ನು ಎಷ್ಟು ದೂರ. ಎಷ್ಟು ಬೇಗ ಎಳೆದುಕೊಂಡು ಹೋಗುತ್ತವೆ ಎಂಬ ಸ್ಪರ್ಧೆಯೂ

ನಡೆಯುತ್ತಿದ್ದಿತು. ಇಲ್ಲೆಲ್ಲ ಉಳೋಹಗ್ಗ, ಸೇದೋ ಹಗ್ಗಗಳನ್ನೇ ಪಟಗಳಿಗೆ ಬಳಸುತ್ತಿದ್ದರು. ಈಗಲೂ ರೇಷ್ಮೆ ಚಂದ್ರಿಕೆಗಳೇ ಪಟಗಳಾಗಿ ಹಾರಾಡುತ್ತವೆ.

ಗಾಳಿಪಟವಿದ್ದಲ್ಲಿ ಬಾಲಂಗೋಚಿ ಇದ್ದೇ ಇರುತ್ತದೆ. ಇದರಿಂದ ಬಾಲಗಚ್ಚೆಯಾಗು (ಬಾಲಬಡುಕನಾಗು) ಎಂಬ ನುಡಿಗಟ್ಟು ಮೂಡಿದೆ.

5.11 ಕುಸ್ತಿ

ಜನಪದರು ಗರಡಿ ಮನೆಗಳಿಗೆ ಹೋಗಿ ವ್ಯಾಯಾಮ ಮಾಡುವುದು ಬಹು ಹಿಂದಿನಿಂದಲೂ ಇರುವುದೇ. ಗರಡಿ ಕುಸ್ತಿ ಮೊದಲಾದ ಅಂಗ ಸಾಧನೆಗಳಿಗಾಗಿ ಗೊತ್ತಾದ ಸ್ಥಳ. ವಿಜಯನಗರ ಸಾಮ್ರಾಜ್ಯದಲ್ಲಿ ಕುಸ್ತಿ ಕಲೆಯ ಮಲ್ಲ ಕಾಳಗ, ಬಹು ಯುದ್ಧ, ಗರಡಿ ವಿದ್ಯೆ ಮೊದಲಾದ ಹೆಸರುಗಳಿಂದ ಅತ್ಯಂತ ಜನಪ್ರಿಯವಾಗಿತ್ತು. ಕುಸ್ತಿ ಮನರಂಜನೆಯ ಕ್ರೀಡಾ ಪ್ರದರ್ಶನವಾಗಿ ರಾಜರ ಮತ್ತು ಜನರ ಮನ್ನಣೆಗೆ ಪಾತ್ರವಾಗಿತ್ತು. ಮಹಾನವಮಿ ಉತ್ಸವ, ಹಬ್ಬ ಹರಿಗಿನ ಮೊದಲಾದ ಕೆಲವು ವಿಶೇಷ ಸಂದರ್ಭಗಳಲ್ಲಿ ಕುಸ್ತಿ ಪಂದ್ಯಾಟವನ್ನು ಏರ್ಪಡಿಸುತ್ತಿದ್ದರು. ಜಟ್ಟಿಗಳಿಗೆ ಪ್ರೋತ್ಸಾಹವಿತ್ತು. ಸಮರ ಕಲೆಗಳಲ್ಲಿ ಒಂದೆಂದು ಪರಿಗಣಿಸಲಾಗಿರುವ ಮಲ್ಲಯುದ್ಧ ಕುಸ್ತಿ ಕಲೆಯೇ ಆಗಿದೆ. ಯಾವುದೇ ಆಯುಧ ಇಲ್ಲದೆ. ತನ್ನ ದೈಹಿಕ ಶಕ್ತಿ ಮತ್ತು ಯುಕ್ತಿಗಳಿಂದ ನಡೆಸುವ ಕ್ರಿಯೆಯೇ ಮಲ್ಲಯುದ್ಧ.

ಗ್ರಾಮೀಣ ಭಾರತದ ಒಂದು ಅಂಗವೇನೋ ಎನ್ನುವಂತೆ ನಂಟನ್ನು ಹೊಂದಿದ್ದ ಕ್ರೀಡೆ ಎಂದರೆ ಕುಸ್ತಿಯೇ.

ಕನ್ನಡ ಕಾವ್ಯಗಳಲ್ಲಿ ಕುಸ್ತಿ-ಮಲ್ಲಯುದ್ಧಗಳನ್ನು ಕುರಿತು ವಿಶೇಷವಾಗಿ ಪ್ರಸ್ತಾಪಿಸಲಾಗಿದೆ. ನಂಜುಂಡ ಕವಿ ಹೊಸಮಲೆ ದುರ್ಗವನ್ನು ವರ್ಣಿಸುವಾಗ ಪುರದ ಹೊರ ವಲಯದಲ್ಲಿ ಎಂಟು ದಿಕ್ಕಿನಲ್ಲಿ ಗರಡಿಗಳಿದ್ದವೆಂದು ಹೇಳುತ್ತಾನೆ. ಕುಮಾರವ್ಯಾಸ ತನ್ನ 'ಭಾರತ' ಕುರಿತಾದ ಕಾವ್ಯದಲ್ಲಿ ಗರಡಿ, ಗರಡಿಮನೆ. ಮಲ್ಲರ ಪಟ್ಟುಗಳ ಬಗೆಗೆ ಅಲ್ಲಲ್ಲಿ ವಿವರಿಸುತ್ತಾನೆ.

ಆದಿ ಪರ್ವದಲ್ಲಿ.
ಗರಡಿಯ ಕಟ್ಟಿತು ನೂರು ಯೋಜನ
ವರೆಯ ವಿಸ್ತಾರದಲಿ ಸಾವಿರ
ಕುರಿಯ ಹೊಯ್ದರು ಪೂಜಿಸಿದರಾ ಚದುರ ಚಂಡಿಕೆಯ

ಎಂದು ಹೇಳುವಲ್ಲಿ ಗರಡಿ ಮನೆ ಆರಂಭಿಸುವ ಮೊದಲು ಆಚರಿಸುತ್ತಿದ್ದ ಆಚರಣೆ ತಿಳಿದುಬರುತ್ತದೆ. ಜರಾಸಂಧ-ಭೀಮ, ಶಿವ-ಅರ್ಜುನ ಮಾಡಿದ ಮಲ್ಲ ಯುದ್ದವನ್ನು ಕುಮಾರಸ್ವಾಮಿ ಸೊಗಸಾಗಿ ವರ್ಣಿಸಿದ್ದಾನೆ.

ವಿಜಯನಗರ ಸಾಮ್ರಾಜ್ಯವನ್ನಾಳಿದ ಶ್ರೀ ಕೃಷ್ಣದೇವರಾಯ ಸ್ವತಃ ಕುಸ್ತಿಪಟುವಾಗಿದ್ದನು. ಸಂಗೊಳ್ಳಿ ರಾಯಣ್ಣ, ಮೈಸೂರಿನ ಅರಸ ರಣಧೀರ ಕಂಠೀರವ ನರಸಿಂಹರಾಜ ಒಡೆಯರ್ ಮೊದಲಾದವರು ಕುಸ್ತಿ ಕಲೆಯಲ್ಲಿ ಪರಿಣತರಿದ್ದರು. ಮೈಸೂರ ದಸರಾ ಕುಸ್ತಿ ಮೂಲತಃ ವಿಜಯನಗರ ಅರಸರ ಕಾಲದಿಂದಲೂ ಬೆಳೆದುಬಂದಿದೆ. ಕುಸ್ತಿ ಕಲ್ಲು 2 ರಿಂದ 15 ಕಿ.ಗ್ರಾಂ ತೂಗುತ್ತಿತ್ತು. ಕುಸ್ತಿ ಪಟುಗಳು ಕಲ್ಲಿಗೆ ಸಿಕ್ಕಿಸಿರುವ ಕೊಕ್ಕೆಯ ಸಹಾಯದಿಂದ ಅದನ್ನು ಎತ್ತುವ ಸಾಹಸ ಮಾಡುತ್ತಿದ್ದರು. ಭಾರ ಎತ್ತುವುದು ಇದಕ್ಕೆ ಹೇಳುವರು.

ಆಧುನಿಕ ಕಾಲದಲ್ಲಿ ಕುಸ್ತಿ ಕಲೆ ಇಳಿಮುಖವಾಗುತ್ತಿದೆ. ಎಷ್ಟೋ ಹಳ್ಳಿಗಳಲ್ಲಿ, ಪೇಟೆಗಳಲ್ಲಿ ಗರಡಿ ಮನೆಗಳು ನಾಶವಾಗಿವೆ. ಹಿಂದಿನ ಅರವತ್ತರ ದಶಕದಲ್ಲಿ ಕುಸ್ತಿ ಕಲೆ ತುಂಬ ಜೀವಂತವೇ ಇತ್ತು. ದಾರಾಸಿಂಗ್, ಕಿಂಗ್‌ಕಾಂಗ್ ಇವರೆಲ್ಲ ಭಾರಿ ಕುಸ್ತಿಪಟುಗಳೇ ಆಗಿದ್ದರು. ಈ ಜಾನಪದ ಕ್ರೀಡೆಯನ್ನು ಉಳಿಸಿಕೊಳ್ಳಲು ಸರ್ಕಾರವಾಗಲಿ, ಯುವ ಜನಾಂಗವಾಗಲೀ ಪ್ರಯತ್ನಿಸುತ್ತಿಲ್ಲ.

ಕುಸ್ತಿಯಂತೆ ಕತ್ತಿ ವರಸೆ, ದೊಣ್ಣೆ ವರಸೆಗಳು ಕೂಡ ರಾಜರ ಪರಿವಾರದವರ ಕ್ರೀಡೆಗಳಾಗಿದ್ದವು.

5.12 ಹಗ್ಗ ಎಳೆಯುವ ಆಟ

ಇದೊಂದು ಸಾಹಸದ ಕ್ರೀಡೆ. ಟಗ್ ಆಫ್ ವಾರ್ ಎಂದೂ ಇದನ್ನು ಆಧುನಿಕ ಕಾಲದಲ್ಲಿ ಕರೆಯಲಾಗುತ್ತದೆ.

ಇದು ಎರಡು ಪಕ್ಷಗಳ ಆಟ. ಆಟದ ಒಂದು ವಿಧ ಹೀಗಿದೆ. ದಪ್ಪನೆಯ ತುಂಬ ಉದ್ದವಾದ ಹಗ್ಗವನ್ನು ಎರಡೂ ಪಕ್ಷದ ಮಂದಿ ಒಂದು ಪಕ್ಷ ಹಗ್ಗದ ಒಂದು ಕಡೆ, ಇನ್ನೊಂದು ಪಕ್ಷ ಹಗ್ಗದ ಇನ್ನೊಂದು ಕಡೆ ಹಿಡಿದುಕೊಳ್ಳುತ್ತಾರೆ. ಮಂದಿ ಹಗ್ಗ ಹಿಡಿದು ಸಾಲಿನಲ್ಲಿ ನಿಂತಿರುತ್ತಾರೆ. ಎರಡೂ ಕಡೆಯವರೂ ಹಗ್ಗ ಜಗ್ಗಿ ಎಳೆಯುತ್ತಾರೆ. ಯಾವ ಪಕ್ಷದಲ್ಲಿ ಬಲಿಷ್ಠ ಜನರಿರುವರೋ ಅವರು ಹಗ್ಗವನ್ನು ತಮ್ಮ ಕಡೆಗೆ ಎಳೆದು ಎದುರು ಪಕ್ಷ ಹಗ್ಗ ಬಿಟ್ಟು ನೆಲಕ್ಕೆ ಬೀಳುವಂತೆ ಮಾಡಿಬಿಡುತ್ತಾರೆ. ಹಾಗೂ ಅವರೇ ಆಗ ಗೆದ್ದರೆಂದು ತೀರ್ಮಾನಿಸಲಾಗುತ್ತದೆ.

ಹಗ್ಗ ಜಗ್ಗುವ ಆಟ ಎಂದೂ ಇದಕ್ಕೆ ಹೇಳುವರು. ಹಗ್ಗ ಜಗ್ಗುವ ಮೊದಲು ಮಧ್ಯೆ ಒಂದು ಗೆರೆಯನ್ನು ಎಳೆಯುವರು. ಈ ಗೆರೆಯನ್ನು ಮುಟ್ಟದಂತೆ ಜಗ್ಗಬೇಕು. ಯಾವ ಗುಂಪು ಹಗ್ಗವನ್ನು ಹೆಚ್ಚು ಎಳೆದು ಪ್ರತಿಸ್ಪರ್ಧಿಯ ಗುಂಪನ್ನು ಗೆರೆ ಮುಟ್ಟಿಸಿ ತಮ್ಮ ಕಡೆಗೆ ಹೆಚ್ಚಾಗಿ ಎಳೆದುಕೊಳ್ಳುತ್ತಾರೋ ಅವರು ಗೆದ್ದಂತೆ.

ಓಟ ನೆಗೆತ, ಗುಂಡೆಸೆತ, ಈಜು, ಬಿಲ್ಲು ಬಾಣ ಇವೆಲ್ಲ ಇತಿಹಾಸ ಪೂರ್ವಕಾಲದಿಂದಲೂ ಇದ್ದಿತು. ಇತಿಹಾಸ ಕಾಲದಲ್ಲಿ ಈಜು, ಖಡ್ಗ ಮಲ್ಲಯುದ್ಧ, ರಥಸ್ಪರ್ಧೆ ಮೊದಲಾದ ಕ್ರೀಡೆಗಳು ಜನಪ್ರಿಯವಾಗಿದ್ದವು. ಬಾಲಕಿಯರು ಗುಂಪುಗಳಲ್ಲಿ ಅಥವಾ ಮಿತ ಸಂಖ್ಯೆಯಲ್ಲಿ ಭಾಗವಹಿಸಿ ಸಲಕರಣೆಗಳಿಲ್ಲದೆ ಅಥವಾ ಮಿತ ಸಲಕರಣೆಗಳಿಂದ ಹಲವು ಸಾಂಪ್ರದಾಯಿಕ ಆಟಗಳನ್ನು ಹಿಂದಿನ

ಕಾಲದಿಂದಲೂ ಆಡುತ್ತಾ ಬರುತ್ತಿರುವರು. ಇವು ದೇಶೀಯ ಆಟಗಳು ಶಾಲಾ ಮಕ್ಕಳಲ್ಲಿ ಸಾಹಸ ಪ್ರವೃತ್ತಿಯ ಬೀಜ ಬಿತ್ತಲು ಹೊರಾಂಗಣ ಜನಪದ ಆಟಗಳನ್ನು ಆಡಲು ಪ್ರೋತ್ಸಾಹಿಸುವುದು ಔಚಿತ್ಯಪೂರ್ಣ, ಬೆಂಗಳೂರಿನ ಜನರಲ್ ತಿಮ್ಮಯ್ಯ ಸಾಹಸ ಅಕಾಡೆಮಿ, ಭೂ, ವಾಯು ಮತ್ತು ಜಲ ಸಾಹಸ ಕ್ರೀಡೆಗಳಲ್ಲಿ ವೈಜ್ಞಾನಿಕ ಮತ್ತು ತಾಂತ್ರಿಕವಾಗಿ ತರಬೇತಿ ನೀಡುತ್ತದೆ. ಹರಿವ ನೀರಿನಲ್ಲಿ ಕನಿಷ್ಠ ತೆಪ್ಪ ಇಟ್ಟುಕೊಂಡು ಪ್ರವಾಹದ ಎದುರು ಈಜುವುದು, ಬಂಡೆ ಗೋಡೆ ಹತ್ತುವುದು ಇವುಗಳಲ್ಲಿ ತರಬೇತಿ ನೀಡುತ್ತದೆ.

ಚಾರಣ ಮತ್ತು ಬಂಡೆ ಹತ್ತುವುದು ನಗರ ಮತ್ತು ಗ್ರಾಮೀಣ ಪ್ರದೇಶದ ಯುವ-ಯುವತಿಯರ ಅಚ್ಚುಮೆಚ್ಚಿನ ಕ್ರೀಡೆ. ಇಂದು ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕದಲ್ಲಿ ಗೋಡೆ ಹತ್ತುವ ಸ್ಪರ್ಧೆಗೆ ಹೆಚ್ಚು ಯುವಕರು ಆಸಕ್ತಿ ತೋರಿಸುತ್ತಿದ್ದಾರೆ.

ಇಂದು ಆಧುನಿಕ ಕ್ರೀಡೆಗಳು, ಉದಾ:ಕ್ರಿಕೆಟ್, ಹಾಕಿ, ಫುಟ್‌ಬಾಲ್, ಗಾಲ್ಫ್ ಇತ್ಯಾದಿ ಪ್ರವೇಶಿಸಿ ಜನಪದ ಆಟಗಳು ಮೂಲೆ ಗುಂಪಾಗುತ್ತಿವೆ. ವಾಸ್ತವದಲ್ಲಿ ದೈಹಿಕ ಶಕ್ತಿ ವರ್ಧನೆಗೆ ಸಹಕಾರಿಯಾಗಿರುವ ಜನಪದ ಆಟಗಳು ಗ್ರಾಮೀಣ ಭಾಗದಲ್ಲಿ ಇನ್ನೂ ಪ್ರಚಲಿತವಿರುವುದರಿಂದ ಇಂದಿಗೂ ಈ ಆಟಗಳು ಕುಟುಕು ಜೀವ ಉಳಿಸಿಕೊಂಡಿರಲು ಸಾಧ್ಯವಾಗಿದೆ. ಸಾಹಸದ ಆಟಗಳಾದ ಕತ್ತಿವರಸೆ, ಪಂಜು ತಿರುಗಿಸುವುದು, ದೊಣ್ಣೆ ಅಥವಾ ಲಾಟಿ ವರಸೆ ಹಳ್ಳಿಗಾಡಿನ ಮೂಲೆ ಮೂಲೆಗಳಲ್ಲಿ ಬದುಕಿವೆ.

ಕೋಲಾಟ ಹೊರಾಂಗಣ ಆಟವೂ, ಜನಪದ ಕಲೆಯೂ ಆಗಿ ಕನ್ನಡ ನಾಡಿನ ಹೆಮ್ಮೆಯೇ ಆಗಿದೆ. ಜನಪದ ಆಟಗಳು ಆಂಧ್ರ, ತಮಿಳುನಾಡುಗಳಲ್ಲೂ ಬದುಕಿ ಉಳಿದಿವೆ. ವಿದೇಶಗಳಲ್ಲಿ ಹಾಗೂ ಭಾರತದ ಇತರ ರಾಜ್ಯಗಳಲ್ಲಿ ಸಹ ಜನಪದ ಆಟಗಳಿರುವ ಮಹತ್ವ ಕಡಿಮೆಯೇನಲ್ಲ. ಸ್ಪೇನಿನಲ್ಲಿ ಗೂಳಿ ಕಾಳಗ ರಾಷ್ಟ್ರೀಯ ಕ್ರೀಡೆಯೇ ಆಗಿದೆ.

ಗಾಳಿಪಟದ ಹಬ್ಬವೆಂದು ಮಕ್ಕಳು ಪ್ರಥಮ ಏಕಾದಶಿ ದಿನ ಕೊಂಡಾಡುತ್ತಾರೆ. ಅತ್ತೆ, ಸೊಸೆಯರು ಒಂದೇ ಹೊಸಲನ್ನು ತುಳಿಯಬಾರದ ಆಷಾಢ ಮಾಸದ ಶುಕ್ಲ ಏಕಾದಶಿ ದಿನ ಗಾಳಿಪಟದ ಹಬ್ಬ, ಮಕ್ಕಳ ಹಿಂದೆ ವಯೋವೃದ್ಧರೂ ಸೇರಿಕೊಳ್ಳುತ್ತಾರೆ.

ಜನಪದ ಆಟಗಳು ಸುಧಾರಣೆಗೊಂಡು ಹಾಕಿ, ಕ್ರಿಕೆಟ್, ಕೊಕ್ಕೋ ಎಂದೆಲ್ಲ ಆಧುನಿಕ ಕಾಲದಲ್ಲಿ ಹೆಸರಾಗಿರುವುದು ಕಾಣುತ್ತಿದ್ದೇವೆ. ಮೂಲ ರೂಪದಲ್ಲಿ ಜನಪದ ಆಟಗಳನ್ನು ಉಳಿಸಿಕೊಳ್ಳಬೇಕಾದುದು ಅವಶ್ಯ.

5.13 ಮರ ಕೋತಿ ಆಟ

ನಾಡೆಲ್ಲ ಕಾಂಕ್ರಿಟು ಕಾಡಾಗುತ್ತಿರುವ ಸಮಯದಲ್ಲಿ ಹಿಂದೆ ಮರ ಕೋತಿ ಎನ್ನುವ ಆಟ ಇತ್ತು ಎನ್ನುವ ಅಂಶ ಕೆಲವರಿಗೆ ಕಲ್ಪನೆ ಎನಿಸಬಹುದು. ಇದ್ದರೂ ಅದು ಕೆಲವು ಹಳ್ಳಿಹೈದರಿಗೆ ಮಾತ್ರ ಗೊತ್ತು. ನೆಲದಿಂದಿ ಸುಮಾರು 6 ಅಡಿ ಎತ್ತರದ ರಂಬೆ ಕೊಂಬೆ ಇರುವ ಒಂದು ಸಣ್ಣ ಮರ/ಗಿಡ ಇದ್ದರೆ ಸಾಕು ಮರ ಕೋತಿ ಆಟ ಆಡಬಹುದು. ಇದು ಮುಚ್ಚಾಟದಂತೆ ಇದ್ದು ದೊಡ್ಡ ಮರ/ಗಿಡಗಳ ಮೇಲೆ ಆಡುವುದರಿಂದ ಇದಕ್ಕೆ ಮರಕೋತಿಯಾಟ ಎಂದು ಹೆಸರು. ಆಟಕ್ಕೆ ಮೊದಲು ಎಲ್ಲರೂ ಮರದ ಕೆಳಗೆ ಇರಬೇಕು. ಆಗ ಎಲ್ಲರೂ ಸೇರಿ ಆಟಕ್ಕೆ ಕಳ್ಳನನ್ನ ಆರಿಸಬೇಕು. ಎಲ್ಲರೂ ಕೈ ಕೈ ಹಿಡಿದು ಸುತ್ತಲು ನಿಲ್ಲುವರು. ಆಗ ಎಲ್ಲರೂ ಜೋರಾಗಿ 'ಅಚ್ಚಚ್ಚು ಬೆಲ್ಲದಚ್ಚು' ಎಂದು ಹೇಳಿ ಎಲ್ಲರೂ ತಾಳಕ್ಕೆ ಸರಿಯಾಗಿ ಚಪ್ಪಾಳೆ ತಟ್ಟುವರು. ಚಪ್ಪಾಳೆ ತಟ್ಟಿದವರ ಕೈಗಳು ಅಂಗೈ ಮೇಲೆ ಅಂಗೈ ಅಥವಾ ಅಂಗೈಗಳು ಎರಡು ಮೇಲೆ ಬರುವಂತೆ ಹಿಡಿದಿರುತ್ತಾರೆ. ಯಾವರ ಕೈಗಳು ಒಂದೇ ತರ ಚಪ್ಪಳೆ ತಟ್ಟುತ್ತಾರೆ. ಅವರು ಮರ ಕೋತಿಗಳಾಗುತ್ತಾರೆ. ಎಲ್ಲರಿಗಿಂತ ಭಿನ್ನವಾಗಿ (ತಪ್ಪಾಗಿ ತಾಳ ಹಾಕಿದ) ಚಪ್ಪಾಳೆ ಹಾಕಿದವರು ಕಳ್ಳ ನಾಗುತ್ತಾನೆ. ಆಗ ಎಲ್ಲರು ಅವನಿಗೆ 'ಹೋ ಕಳ್ಳ ಕಳ್ಳ' ಎಂದು ಕೂಗುತ್ತಾರೆ.

ಆಟದ ವಿಧಾನ: ಕಳ್ಳನಾದವನು ಮರದ ಕೆಳಗೆ ವೃತ್ತವನ್ನು ರಚಿಸಿ ಒಂದು ಅಡಿ ಸಣ್ಣ ಕೋಲನ್ನು ವೃತ್ತದ ಮಧ್ಯದಲ್ಲಿ ಇಡಬೇಕು. ಮರ ಕೋತಿಯಾದವನಲ್ಲಿ ಒಬ್ಬನು ಆ ಕೋಲನ್ನು ತೆಗೆದುಕೊಂಡು ಒಂದು ಕಾಲನ್ನು ಮೇಲಕ್ಕೆ ಎತ್ತಿ ಕೆಳಗಿನಿಂದ ಕೋಲನ್ನು ಬೀಸುತ್ತಾರೆ. ಆಗ ಕಳ್ಳನಾದವನ್ನು ಓಡಿ ಹೋಗಿ ಆ ಕೋಲು ತರಬೇಕು. ನಂತರ ವೃತ್ತದ ಸುತ್ತ ಮೂರು ಸುತ್ತು ಹಾಕಿ ಕೋಲನ್ನು ವೃತ್ತದ ಒಳಗೆ ಇಡುವುದರೊಳಗೆ ಎಲ್ಲರೂ ವೃತ್ತದ ಮೇಲಿನ ಮರವನ್ನು ಹತ್ತಬೇಕು. ಕಳ್ಳನಾದವನು ಈ ಕೋಲನ್ನು ಕಾಯಬೇಕು. ಅಂದರೆ ಮರದ ಮೇಲಿರುವ 'ಮರ ಕೋತಿ'ಗಳು ಯಾರು ಈ ಕೋಲು ತೆಗೆದುಕೊಳ್ಳಲು ಬಿಡಬಾರದು. ಅಲ್ಲದೆ ಮರ ಹತ್ತಿ ಅವರನ್ನು ಹಿಡಿದು ಬೇರೆಯವರನ್ನು ಕಳ್ಳನನ್ನಾಗಿ ಮಾಡಬೇಕು.

'ಮರ ಕೋತಿಯಾದವರು ಯಾರ ಕೈಯಲ್ಲಿ ಮರವನ್ನು ಹತ್ತಲಾಗದು ಅವನನ್ನು ಕಳ್ಳನಾದವನು ಮುಟ್ಟಿದರೆ ಔಟ್. ಎಲ್ಲರೂ ಮರ ಏರಿದರೆ, ಕಳ್ಳನಾದವನು ಮರ ಹತ್ತಿ ಮರದ ಮೇಲೆ ಇರುವವರನ್ನು ಮುಟ್ಟಬೇಕು. ಆಗ ಮುಟ್ಟಿಸಿಕೊಂಡವನು ಔಟ್ ಕಳ್ಳನಾದವನು ಮರದ ಮೇಲಿರುವವರನ್ನು ಮುಟ್ಟುವ ಮೊದಲೇ ಮರ ಕೋತಿಯಾದವರು ಸಮಯ ಸಾಧಿಸಿ ಕೆಳಗೆ ಹಾಕಿ ವೃತ್ತದ ಒಳಗೆ ಇರುವ ಕೋಲನ್ನು ಮುಟ್ಟಿದರೆ ಕಳ್ಳ ಔಟ್ ಮುಂದಿನ ಆಟದಲ್ಲಿ ಮತ್ತೆ ಅವನೇ ಕಳ್ಳನಾಗುತ್ತಾನೆ. ಹೀಗೆ ಯಾರು ಔಟ್ ಆಗಿರುತ್ತಾರೆಯೋ ಅವರು ಕಳ್ಳನಾಗುತ್ತಾರೆ. ಹೀಗೆ ಆಟ ಮುಂದುವರೆಯುತ್ತದೆ.

ಮರ ಕೋತಿ ಆಟದ ಉದ್ದೇಶಗಳು:

- ಮರ ಹತ್ತುವ ಕೌಶಲ್ಯ ಬೆಳವಣಿಗೆಯಾಗುತ್ತದೆ.
- ಸಾಹಸ ಕ್ರೀಡೆಗಳಲ್ಲಿ ಮಕ್ಕಳನ್ನು ಅಣಿಗೊಳಿಸಿದಂತಾಗುತ್ತದೆ.
- ಮರ ಹತ್ತುವ ಮತ್ತು ಮರದಿಂದ ತೆಗೆಯುವ ಸಂದರ್ಭದಲ್ಲಿ ಅಪಾಯ ಆಗದ ಹಾಗೆ ನೋಡಿಕೊಳ್ಳುವ ವಿಧಾನ ಮಕ್ಕಳಿಗೆ ಗೊತ್ತಾಗುತ್ತದೆ.
- ಸ್ಪರ್ಶ ಜ್ಞಾನವನ್ನು ಬೆಳಸುವುದು.

5.14 ರಾಜ ರಾಣಿ ಕಳ್ಳ ಪೋಲೀಸ್ ಆಟ

ಈ ಆಟದಲ್ಲಿ ನಾಲ್ಕು ಜನ ಮಾತ್ರ ಕಡ್ಡಾಯವಾಗಿ ಆಡಬೇಕು. ಈ ಆಟ ಆಡಲು ನಾಲ್ಕು ಚೀಟಿ ಮತ್ತು ಪೇಪರ್ ಇದ್ದರೆ ಆಟ ಶುರು ಮಾಡಬಹುದು. ಇದು ಓಳ್ಳೆಯ ಮನರಂಜನೆ ನೀಡುವ ಆಟವಾಗಿದೆ.

ರಚನೆ:– ನಾಲ್ಕು ಜನ ಆಟಗಾರರು ಸುತ್ತಲು ಕುಳಿತುಕೊಳ್ಳಬೇಕು. ನಾಲ್ಕು ಚೀಟಿಯನ್ನು ತೆಗೆದುಕೊಂಡು ಅವುಗಳ ಮೇಲೆ ಒಂದೊಂದು ಚೀಟಿಗೆ ರಾಜ (1000) ರಾಣಿ (500) ಕಳ್ಳ (0) ಪೋಲಿಸ್ (100) ಎಂದು ಬರೆದು ಮಡಿಚಿರಬೇಕು. ಕೆಲವು ಕಡೆ ರಾಜ ರಾಣಿಯರಿಗೆ ಕೊಡುವ ಮೌಲ್ಯ ಅದಲು ಬದಲಾಗಿರುತ್ತದೆ. ಇಂಥ ಸಂದರ್ಭದಲ್ಲಿ ಅತಿ ಹೆಚ್ಚು ಅಂಕವನ್ನು ಪಡೆದವರು ರಾಣಿ ಎನಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ರಾಣಿಯ ಮೌಲ್ಯ ಹೆಚ್ಚಾಗಿರುವುದು ಹೆಣ್ಣು ಮಕ್ಕಳು ಆಡುವ ಸಂದರ್ಭದಲ್ಲಿ ಮಾತ್ರ ಪ್ರತಿ ಆಟಗಾರರು ಅವರ ಸ್ಕೋರ್‌ಗಳನ್ನು ಬರೆದುಕೊಳ್ಳಲು ಪೆನ್ ಹಾಗೂ ಪೇಪರ್ ಇಟ್ಟುಕೊಂಡಿರಬೇಕು.

ಆಡುವ ವಿಧಾನ:– ಸಮಾನವಾಗಿ ಮಡಿಚಿಕೊಂಡಿರುವ ನಾಲ್ಕು ಚೀಟಿಯನ್ನು ಒಬ್ಬರು ಮುಷ್ಠಿಯಲ್ಲಿ ಕುಲುಕಿ ಹಾಕಬೇಕು. ನಂತರ ನಾಲ್ವರು ಒಂದೊಂದು ಚೀಟಿ ಆರಿಸಿಕೊಳ್ಳಬೇಕು. ತದ ನಂತರ ಎಲ್ಲರು ತಮ್ಮ ಚೀಟಿಯನ್ನು ಯಾರಿಗೂ ತೋರಿಸಬೇ ತಾವೇ ಅದನ್ನು ಓದಿಕೊಳ್ಳಬೇಕು. ಓದಿಕೊಂಡ ನಂತರ ಪೋಲಿಸ್ ಯಾರು ಎಂದು, ಒಬ್ಬರು ಕೇಳುವರು, 'ಪೋಲಿಸ್' ಚೀಟಿ ತೆಗೆದುಕೊಂಡವರು ನಾನೇ ಪೋಲಿಸ್ ಎಂದು ಹೇಳಬೇಕು. ಪೋಲಿಸ್ ಆದವನು ಕಳ್ಳ ಯಾರೆಂದು ಮೊದಲ ಆಯ್ಕೆಯಲ್ಲಿ ಸರಿಯಾಗಿ ತಿಳಿಸಿದರೆ ಅವನಿಗೆ 100 ಅಂಕಗಳು ಇಲ್ಲದಿದ್ದರೆ ಅವನ ಅಂಕಗಳು ಕಳ್ಳನಿಗೆ ವರ್ಗಾವಣೆ ಆಗುತ್ತದೆ.

ನಂತರ ಎಲ್ಲರು ಅವರವರ ಅಂಕಗಳನ್ನು ಬರೆದುಕೊಂಡು ಮತ್ತೆ ಆಟ ಮುಂದುವರೆಯುತ್ತದೆ. ಈ ಆಟವನ್ನು ಎಷ್ಟು ಹೊತ್ತು ಬೇಕು ಅಷ್ಟು ಹೊತ್ತು ಆಡಬಹುದು. ಆಟ ಮುಗಿಸುವಾಗ ಎಲ್ಲರು ತಾವು ಪಡೆದುಕೊಂಡ ಸ್ಕೋರ್ (ಅಂಕ)ಗಳನ್ನು ಕೂಡಿಸುವರು ಯಾರು

ಅತ್ಯಂತ ಹೆಚ್ಚು ಅಂಕವನ್ನು ಪಡೆದಿರುತ್ತಾರೋ. ಅವರು ವಿಜಯ ಶಾಲಿಗಳು (ರಾಜನಾಗುತ್ತಾನೆ) ಎಂದು ಘೋಷಿಸಬೇಕು. ಯಾರು ಕಡಿಮೆ ಅಂಕ ಪಡೆದಿರುತ್ತಾರೆಯೋ ಅವರು 'ಕಳ್ಳ' ಕಳ್ಳನಾದವನು ಇನ್ನೊಮ್ಮೆ ತಪ್ಪು ಮಾಡುವುದಿಲ್ಲ ಹಾಗೂ ನಾನು ಮತ್ತೊಮ್ಮೆ ಕಳ್ಳ ನಾಗುವುದಿಲ್ಲ ಎಂದು ಹೇಳುತ್ತಾನೆ. ಹೀಗೆ ಆಟ ಮುಕ್ತಾಯ ಹೊಂದುವುದು.

ಆಟದ ಹಿಂದಿನ ಉದ್ದೇಶಗಳು:

- ಇದೊಂದು ಸಾಮಾಜಿಕ ಮೌಲ್ಯವನ್ನು ಮಕ್ಕಳಲ್ಲಿ ಬೆಳೆಸುವ ಮತ್ತು ಅವುಗಳ ಬೆಲೆಯನ್ನು ತಿಳಿದುಕೊಳ್ಳಲು ಸಹಾಯವಾಗುವ ಆಟವಾಗಿದೆ. ಅಂದರೆ ಕಳ್ಳನಿಗೆ ಯಾವ ಬೆಲೆಯಿಲ್ಲ, (ಕಳ್ಳ–0) ರಾಜನಿಗೆ ಹೆಚ್ಚು ಬೆಲೆ, (ರಾಜ–1000) ಹಾಗೆಯೇ ಪೋಲಿಸರು ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡದಿದ್ದರೆ ಅವರು ಬೆಲೆ ಕಳೆದುಕೊಳ್ಳುತ್ತಾರೆ. ಅಂದರೆ (ಕಳ್ಳನನ್ನು ಗುರುತಿಸದಿದ್ದರೆ ಇವರ ಅಂಕಗಳು (100) ಕಳ್ಳನಿಗೆ ವರ್ಗಾವಣೆಯಾಗುತ್ತವೆ.
- ಏಕಾಗ್ರತೆ ಮತ್ತು ಅಂತರದೃಷ್ಠಿ ಹೆಚ್ಚಾಗುತ್ತದೆ.
- ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಗುತ್ತದೆ. ಅಂದರೆ ಪೋಲಿಸ್ ಆದವನು ಕಳ್ಳನನ್ನು ಹುಡುಕುವಾಗ ಮೂರು ಜನರ ಮುಖವನ್ನು ನೋಡುತ್ತಾನೆ. ಆಗ ಅವರ ಮುಖ ಭಾವನೆಗಳನ್ನು ಅರ್ಥ ಮಾಡಿಕೊಂಡು ಕಳ್ಳನನ್ನು ಹುಡುಕುತ್ತಾನೆ. ಇದರಿಂದ ವ್ಯಕ್ತಿಯ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.
- ಈ ಆಟ ಆಡುವುದರಿಂದ ಮನರಂಜನೆಯ ಜೊತೆಗೆ ಕೂಡಿಸುವ ಲೆಕ್ಕ (ಸಂಕಲ(+) ಲೆಕ್ಕ) ಕಲಿಯಲು ಸಹಾಯ ಮಾಡುತ್ತದೆ. ಅಂದರೆ ಅವರು ಪಡೆದ ಅಂಕಗಳನ್ನು ಕೂಡಿಸಿಕೊಳ್ಳುತ್ತಾ ಹೋಗುವುದರಿಂದ ಶೀಘ್ರ ಕೂಡಿಸುವ ವಿಧಾನ ಗೊತ್ತಾಗುತ್ತದೆ.

5.15 ಬುಗುರಿ

ಸಾಮಾನ್ಯವಾಗಿ ಗಂಡು ಮಕ್ಕಳು ಹಳ್ಳಿಗಳಲ್ಲಿ ಬುಗುರಿ ಆಟವನ್ನು ಹೆಚ್ಚಾಗಿ ಆಡುತ್ತಾರೆ. ಪ್ರಾಚೀನ ಕಾಲದಿಂದಲೂ ಈ ಆಟವನ್ನು ಆಡುತ್ತಿದ್ದರು ಎಂಬುದು ನಮಗೆ ಸ್ಪಷ್ಟವಾಗಿ ಮಹಾಭಾರತದ ಕಥೆಯಲ್ಲಿ ಪಾಂಡವರು ಮತ್ತು ಕೌರವರು ಆಡುವ ಆಟದ ಸನ್ನಿವೇಶಗಳಲ್ಲಿ ಕಾಣಿಸುತ್ತದೆ. ಹಳ್ಳಿಗಳಲ್ಲಿ ಈಗಲೂ ಕೌರವರು, ಪಾಂಡವರು ಆಡುತ್ತಿದ್ದ ಬುಗುರಿ ಆಟದ ನೆನಪನ್ನು ಐತಿಹ್ಯದ ರೂಪದಲ್ಲಿ ಹೇಳುತ್ತಾರೆ.

ಉದಾ: ಗೌರಿಬಿದನೂರು ತಾಲ್ಲೂಕಿನ ಮಂಚೇನಹಳ್ಳಿಯಲ್ಲಿ "ಭೀಮನ ಬುಗುರಿ" ಎಂದು ಒಂದು ಬೆಟ್ಟಕ್ಕೆ ಕರೆಯುತ್ತಾರೆ.

ಬಣ್ಣದ ಬಗರಿ
ನನ್ನಯ ಬಗರಿ
ಗರಗರ ಸದ್ದನ್ನು ಮಾಡುವ ಬಗರಿ
ಜಾಳಿಗೆ ಸುತ್ತಿ, ಕೈಯನ್ನು ಎತ್ತಿ ಬೀಸಲು ಭರದಿ ಸುತ್ತುವ ಬಗರಿ

ಎಂಬ ಕವಿವಾಣಿಯಂತೆ ಆಷಾಢ ಮಾಸ ಬಂತೆಂದರೆ ಎಲ್ಲೆಡೆ ಮಕ್ಕಳ ಕೈಯಲ್ಲಿ ಬುಗುರಿ ಸಡಗರ.

ಈ ಆಟ ಹೆಚ್ಚಾಗಿ ಮಕ್ಕಳ ಮಧ್ಯೆ ನಡೆಯುತ್ತದೆ. ಹಲವು ಹಂತಗಳನ್ನು ಒಳಗೊಂಡ ಆಟದಲ್ಲಿ ಕಟ್ಟಿಗೆ, ಪ್ಲಾಸ್ಟಿಕ್‌ನಿಂದ ತಯಾರಿಸಲಾದ ಬುಗುರಿಗಳು ಗರಗರ ಸುತ್ತುವುದನ್ನು ನೋಡಿದರೆ ಮೈಯೆಲ್ಲ ಜುಮ್ ಎನ್ನದೇ ಇರದು.

ಬ್ಯಾಟರಿ ಸೆಲ್ಲಿನ ಮುಚ್ಚಳ ಹೊಂದಿದ ನಾರಿನ ಜಾಳಿಗೆಯನ್ನು ಬುಗುರಿಯ ಚೂಪಾದ ಮೊಳೆಗೆ ಹಿಡಿದು ಅದರ ತಲೆತನಕ ಸುತ್ತಿ ಬಲಗೈಯ ಐದೂ ಬೆರಳುಗಳ ನರ್ತನೆಗೆ ಸೇರಿಸಿ 'ಕುಮ್ಮ ಕೂಡುತ್ತೆ ಕುಮ್ಮ' ಎಂದೆನ್ನುತ್ತ ಕೈ ಎತ್ತಿ ಜಾಳಿಗೆ ಸಡಿಲಿಸಿ ಬುಗುರಿ ಬಿಡುತ್ತಾರೆ. ಆಗ ನೆಲದ ಮೇಲೆ ಗರ್ರನೆ ತಿರುಗಲು ಪ್ರಾರಂಭಿಸುವ ಬುಗುರಿಯ ನೋಟ ಹೇಗಿದೆ ನೋಡಿ ನನ್ನ ಬಗರಿ ಆಟ ಎನ್ನುವಂತೆ ಮಾಡುತ್ತದೆ.

ತಿರುಗುತ್ತಿರುವ ಬುಗುರಿಗೆ ಜಾಳಿಗೆ ಹಾಕಿ ಮೇಲಕ್ಕೆ ಎತ್ತುತ್ತಿದ್ದಂತೆ ಆಷಾಡ ಎನ್ನುತ್ತ ಅಂಗೈ ಮೇಲೆ ಆಡಿಸುವ ದೃಶ್ಯ ಕೈ ಅಷ್ಟೇ ಅಲ್ಲ ಮೈಯೆಲ್ಲ ಕಚಗುಳಿ ಮಾಡಿಸುತ್ತದೆ. ಈ ಆಟ ಒಬ್ಬ ಬಾಲಕ ಮಾತ್ರ ಆಡಿದರೆ ಅಷ್ಟೊಂದು ಖುಷಿ ತರದು. ನಾಲ್ಕೈದು ಹುಡುಗರು ಸೇರಿದಾಗ ಇದರ ರಂಜನೆಯೇ ಬೇರೆ. ಬುಗುರಿ ಆಟವನ್ನು ಬುಗರಿ, ಟುವರಿ, ಬೊಗರೆ, ಗಿರಿಗಿಟ ಇತ್ಯಾದಿಯಾಗಿ ಕರೆಯುತ್ತಾರೆ. ಬುಗುರಿಯ ಅರ್ಥ: ತುದಿಯಲ್ಲಿ ಮೊಳೆಯಿರುವ, ದಾರ ಸುತ್ತಿ ಆಡಿಸುವ, ತಿರುಗುವ ಮರದ ಆಟದ ವಸ್ತು ಎಂದು ಅರ್ಥವಿರುತ್ತದೆ.

ಆಟದ ನಿಯಮ:

- ಮೊದಲು ಹುಡುಗನು ಬುಗುರಿಯನ್ನು ಬಂಗರವನ್ನು (ಬುಗುರಿಯ ಮೇಲಿನ ತುದಿ) ಸ್ಪರ್ಶಿಸಿ ತಕ್ಷಣ ನೆಲಕ್ಕೆ ಹಾಕಿದಾಗ ಬುಗುರಿ ತಿರುಗುತ್ತಿರಬೇಕು.
- ನಂತರ ತಿರುಗುತ್ತಿರುವ ಬುಗುರಿಯನ್ನು ಚಾಟಿ (ದಾರ)ಯ ಸಹಾಯದಿಂದ ಕೈಯಲ್ಲಿ (ಕೈಲ್ಲಿ) ಹಿಡಿಯಬೇಕು (ಆಡುತ್ತಿರುವ ಬುಗುರಿಯನ್ನು ಚಾಟಿಯ ಸಹಾಯದಿಂದ ಮೇಲೆತ್ತಿ ಬುಗುರಿಯನ್ನು ಕ್ಯಾಚ್ ಹಿಡಿಯುವುದು)
- 3 ಅವಕಾಶದಲ್ಲಿ ಯಾರು ಕೈಯಲ್ಲಿ (ಕ್ಯಲಿ) ಹಿಡಿಯುತ್ತಾರೋ ಅವರು ಆಟಕ್ಕೆ ಸಿದ್ದವಾಗುತ್ತಾರೆ.

- 3 ಅವಕಾಶದಲ್ಲಿ ಯಾರಿಗೆ ಕೈಲ್ಲಿ (ಕ್ಯಲ್ಲಿ) ಹಿಡಿಯಲು ಆಗುವುದಿಲ್ಲವೋ ಅವರು ಒಂದು ಸಣ್ಣದಾದ ವೃತ್ತದಲ್ಲಿ ನೆಲದ ಮೇಲೆ ಅವರ ಬುಗರಿಯನ್ನು ಇಡುತ್ತಾರೆ.
- ಒಂದು ವೇಳೆ ಎಲ್ಲರು ಬುಗುರಿಯನ್ನು ನೆಲದಿಂದ ಗಾಳ ಹಾಕಿ ಹಿಡಿಯುವಲ್ಲಿ ಯಶಸ್ವಿ ಆದರೆ ಯಾರು ತಡ ಮಾಡಿ ಹಿಡಿಯುವರೋ ಅವರ ಬುಗುರಿಯನ್ನು ನೆಲದ ಮೇಲೆ ಇಡುತ್ತಾರೆ. ಅಥವಾ ಇನ್ನೊಂದು ಅವಕಾಶವನ್ನು ನೀಡಿ ಅದರಲ್ಲಿ ಯಾರು ಕೈಯಲ್ಲಿ (ಕ್ಯಲ್ಲಿ) ಹಿಡಿಯುವುದಿಲ್ಲವೋ ಅವರ ಬುಗುರಿಯನ್ನು ನೆಲದ ಮೇಲೆ ಇಡುತ್ತಾರೆ. ಹಾಗೂ ಕೈಯಲ್ಲಿ (ಕ್ಯಲ್ಲಿ) ಹಿಡಿದವರು ಆಟ ಆಡಲು ಸಿದ್ದರಾಗುತ್ತಾರೆ. ಇವರುಗಳು ನೆಲದ ವೃತ್ತದಲ್ಲಿ ಬಿದ್ದ ಬುಗುರಿಗೆ ಗುರಿ ಇಟ್ಟು ಹೊಡೆದು ಗುನ್ನ (ತೂತು) ಮಾಡುತ್ತಾರೆ. ಗುರಿಯಿಟ್ಟು ಹೊಡೆಯುವುದರಲ್ಲಿ ಯಾರು ವಿಫಲರಾಗುತ್ತಾರೋ. ಅವರ ಬುಗುರಿಯನ್ನು ಕೂಡ ನೆಲದ ಮೇಲೆ ಇಡುತ್ತಾರೆ. ಹೀಗೆ ಕೊನೆಗೆ ಯಾರು ಉಳಿಯುತ್ತಾರೋ ಅವರು ವಿಜಯಶಾಲಿಗಳು ಕೆಲವೊಮ್ಮೆ ಯಾರೂ ವಿಜಯಶಾಲಿ ಆಗದಿದ್ದರೆ ಹೀಗೆಯೇ ಆಟ ಮುಂದುವರೆಯುತ್ತದೆ.
- ಈ ಆಟದಲ್ಲಿ ಬುಗುರಿಗಳು ಎರಡು ಹೋಳು ಆಗುವುದು ಸರ್ವೇ ಸಾಮಾನ್ಯ ನೆಲಕ್ಕೆ ಬುಗುರಿ ಬೀಳದ ಹಾಗೆ ಕೈಯಲ್ಲಿ (ಕ್ಯಲ್ಲಿ) ಹಿಡಿದವರು ಅದಕ್ಕೆ "ಅಂತರ ಮಂಗ" ಎನ್ನುತ್ತಾರೆ.

  ಈ ಬುಗರಿ ಆಟದಲ್ಲಿ ಇದೇ ಅಲ್ಲದೇ ಅನೇಕ ಪ್ರಕಾರವಾಗಿ ಆಡುವುದನ್ನು ಕೂಡ ಕಾಣಬಹುದು. ಪ್ರದೇಶದಿಂದ ಪ್ರದೇಶಕ್ಕೆ ಆಡುವ ವಿಧಾನದಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಆಟಗಾರರು ಅನುಭವದಿಂದ ಬುಗುರಿಯನ್ನು ಅನೇಕ ರೀತಿ ಆಡಿಸುತ್ತಾರೆ.

<u>ಬುಗರಿ ಆಟದ ಹಿಂದಿರುವ ಉದ್ದೇಶಗಳು:</u>

1. ಗುರಿ ಇಟ್ಟು ಹೊಡೆಯುವ ವಿಧಾನ ಗೊತ್ತಾಗುತ್ತದೆ.
2. ಗುರಿ ಇಟ್ಟು ಹೊಡೆಯುವ ಏಕಾಗ್ರತೆ ಹೆಚ್ಚಾಗುತ್ತದೆ.
3. ತೋಳ ಬಲ ಹೆಚ್ಚಾಗುವುದು.
4. ಕಲಾತ್ಮಕವಾದ ಕೌಶಲ್ಯಗಳ ಬೆಳವಣಿಗೆಗಳು ವ್ಯಕ್ತಿಯಲ್ಲಿ ಉಂಟಾಗುತ್ತದೆ.
5. ವ್ಯಕ್ತಿಯಲ್ಲಿ ಕೈ ಕಾಲುಗಳ ಸಹಯೋಗದ ಚಲನೆ ಉಂಟಾಗುತ್ತದೆ.
6. ದೃಷ್ಠಿ ಬಲ ಹೆಚ್ಚಾಗುವುದು.

ಒಟ್ಟಿನಲ್ಲಿ ಈ ಬುಗರಿ ಆಟವನ್ನು ಭಾರತಾದ್ಯಂತ ಆಡುವುದನ್ನು ಕಾಣಬಹುದು. ಆದರೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಆಡುವ ವಿಧಾನದಲ್ಲಿ ಬದಲಾವಣೆ ಕಾಣುತ್ತೇವೆ.

5.16 ಕುಂಟೋ ಬಿಲ್ಲೆ

ಇದು ಚಿಕ್ಕ ಹೆಣ್ಣು ಮಕ್ಕಳು ಆಡುವ ಆಟ. ಚೌಕಾಕಾರಾದ ಮನೆಗಳನ್ನು ಬರೆದು ಮನೆಯಿಂದ ಮನೆಗೆ ಕುಣಿಯುತ್ತ ಆಡುವ ಆಟ.

ಸಾಮಾನ್ಯವಾಗಿ ತಿಂಡಿಗಳ ವಿಷಯಕ್ಕೆ ಬಂದಾಗ ಎಲ್ಲಾ ಮಕ್ಕಳೂ ಒಂದೊಂದು ತಿಂಡಿಗಳ ಮೇಲೆ ಹೆಚ್ಚಿನ ಆಸಕ್ತಿ ಹೊಂದಿರುವರು. ಆದರೆ ಆಟದ ವಿಷಯ ತೆಗೆದುಕೊಂಡಾಗ ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಕುಂಟೋ ಬಿಲ್ಲೆ ಆಟ ತುಂಬಾ ಆಸಕ್ತಿ ಉಂಟುಮಾಡುವ ಆಟವಾಗಿದೆ.

ಈ ಆಟವು ತುಂಬಾ ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದು ಇಂದಿಗೂ ಅದರ ಅಸ್ಥಿತ್ವವನ್ನು ಹಿಂದಿನಷ್ಟೇ ಉಳಿಸಿಕೊಂಡಿರುವುದು ಇದರ ವಿಶೇಷತೆಯನ್ನು ತೋರಿಸುತ್ತದೆ. ಈ ಆಟವನ್ನು ಮನರಂಜನೆಗಾಗಿ ಆಡಿದರೂ ಇದರಿಂದ ದೇಹಕ್ಕೆ ಉತ್ತಮ ವ್ಯಾಯಾಮ ದೊರಕಿದಂತಾಗುತ್ತದೆ. ಹಾಗಾದರೆ ಈ ಆಟ ಆಡುವುದಾದರೂ ಹೇಗೆ ಮತ್ತು ಅದರ ಅನುಕೂಲಗಳೇನು ಎಂಬುದನ್ನು ತಿಳಿಯುವುದು ಅತ್ಯವಶ್ಯಕ ಅನಿಸುತ್ತದೆ.

ಈ ಆಟವನ್ನು ನೆಲದ ಮೇಲೆ 6 ಅಥವಾ 8 ಚೌಕಗಳನ್ನು ಬರೆಯತಕ್ಕದ್ದು ಹಲವಾರು ಶೈಲಿಯಲ್ಲಿ ಬರೆಯಬಹುದು. ಚಪ್ಪಟೆಯಾದ ಕಲ್ಲನ್ನು (ಪಚ್ಚೆ) ಮೊದಲಿನ ಚೌಕಕ್ಕೆ ಸರಿಯಾಗಿ ಗುರಿಯಿಟ್ಟು ಎಸೆದು ನಂತರ ಒಂದು ಕಾಲಲ್ಲಿ ಕುಂಟುತ್ತಾ ಎಲ್ಲಾ ಚೌಕಗಳನ್ನು ಬಳಸಿ ಬರಬೇಕು. ಹೀಗೆ ಕುಂಟುವಾಗ ಎರಡು ಕಾಲು ಬಿಟ್ಟಲ್ಲಿ ಅಥವಾ ಯಾವುದಾದರೂ ಗೆರೆ ತುಳಿದಲ್ಲಿ ಮತ್ತೊಬ್ಬ ಆಟಗಾರ್ತಿಗೆ ಆಟ ಬಿಟ್ಟು ಕೊಡಬೇಕು. ಹೀಗೆ ಒಂದರ ನಂತರ ಮತ್ತೊಂದಾಗಿ ಎಲ್ಲಾ ಚೌಕಗಳಿಗೆ ಯಾರು ಮೊದಲು ಕಲ್ಲು ಎಸೆದು ಸಫಲವಾಗಿ ಮುಗಿಸುತ್ತಾರೋ ಅವರೇ ವಿಜಯಶಾಲಿಗಳು.

ಅನುಕೂಲಗಳು

- ಮಕ್ಕಳಲ್ಲಿ ದೇಹದ ಸಮತೋಲನ ಹೆಚ್ಚುತ್ತದೆ.
- ಕಾಲುಗಳಿಗೆ ರಕ್ತ ಸಂಚಾರ ವೃದ್ಧಿಸಿ ಸದೃಢವಾಗುತ್ತದೆ.
- ಗುರಿಯಿಡುವ ಕಲೆ ಬರುವುದು.

5.17 ಬಳಚೂರು ಆಟ

ಹಿಂದಿನ ಆಟಗಳಲ್ಲಿ ಮೊದಲೆ ತಿಳಿಸಿರುವಂತೆ ನಮ್ಮ ಗ್ರಾಮೀಣರು ಕ್ರಿಯಾತ್ಮಕ ವ್ಯಕ್ತಿಗಳು. ಅವರು ಕಸದಿಂದಲೇ ರಸ ಉತ್ಪತ್ತಿ ಮಾಡುವಂತಹ ವ್ಯಕ್ತಿಗಳು ಅದೇ ರೀತಿ ಈ ಬಾರಿಯೂ ಕೂಡ ಇವರು ಕಸದಿಂದ ರಸ ಎಂಬಂತೆ ಅನುಪಯುಕ್ತ ವಸ್ತುವನ್ನು ಉಪಯೋಗಿಸಿಕೊಂಡು ಆಡುವ

ಆಟವಾಗಿದೆ. ಈ ಬಾರಿಯೂ ಇವರ ಆಟದ ಪ್ರಧಾನ ವಸ್ತುವೆಂದರೇ ಒಡೆದು ಹೋಗಿರುವ ಬಳೆ ಚೂರುಗಳು.

ಒಡೆದು ಹೋಗಿರುವ ಬಳೆ ಚೂರುಗಳನ್ನು ಉಪಯೋಗಿಸಿಕೊಂಡು 'ಸೆಟ್' ಎನ್ನುವ ಆಟ ಆಡುವರು. ಸೆಟ್ ಎಂದರೇ ಜೋಡಿಸು ಎಂದು ಅರ್ಥ ಈ ಆಟದಲ್ಲಿ ಒಂದೇ ಬಣ್ಣದ ಬಳೆ ಚೂರನ್ನೇ ಬೀಡಿಸು ಎಂದರ್ಥ ಹಾಗಾದರೆ ಬನ್ನಿ ಈ ಆಟ ಆಡುವುದು ಹೇಗೆಂದು ತಿಳಿಯೋಣ.

ಮೊದಲಿಗೆ ಈ ಆಟ ಪ್ರಾರಂಭಿಸಲು ಆಟದಲ್ಲಿ ಭಾಗವಹಿಸುವವರು ವರ್ತುಲಾಕಾರದಲ್ಲಿ ಕುಳಿತಿರುತ್ತಾರೆ. ಅವರುಗಳನ್ನು ಗುಂಪಿನಲ್ಲಿ ಒಬ್ಬ ತೆಗೆದುಕೊಂಡು ಉಳಿದವರೆಲ್ಲರಿಗೂ ತಲಾ 4 ಬರುವಂತೆ ಮಿಶ್ರಬಣ್ಣದ ಬಳೆ ಚೂರುಗಳನ್ನು ಹಂಚಿ ಉಳಿದವನ್ನು ಮಧ್ಯ ಭಾಗದಲ್ಲಿ ಇಡುವನು. ನಂತರ ಬಳೆ ಚೂರನ್ನು ಹಂಚಿದವನು ಮೊದಲ ಬಾರಿಗೆ ತನ್ನ ಕೈಯಲ್ಲಿರುವ ಬಳೇ ಚೂರುಗಳನ್ನು ಗಮನಿಸಿ ಹೊಂದಾಣಿಕೆ ಮಾಡಲು ಬೇಡವಾದ ಒಂದು ಚೂರನ್ನು ಕೆಳಗಿಟ್ಟು ಗುಂಪಿನಿಂದ ಒಂದನ್ನು ತೆಗೆದಿಟ್ಟುಕೊಳ್ಳುವನು. ನಂತರ ಮುಂದಿನವನು ಆತನು ಇಟ್ಟ ಬಳೆ ಚೂರನ್ನು ಮಾತ್ರ ತೆಗೆದುಕೊಂಡು ಅದರ ಜಾಗಕ್ಕೆ ತಮ್ಮಲ್ಲಿರುವ ಒಂದು ಚೂರನ್ನು ಇಡಬೇಕು. ಅಥವಾ ಬೇಡದಿದ್ದರೆ ಮುಂದಿನವನಿಗೆ ಆ ಚೂರನ್ನು ಪಾಸ್ ಮಾಡಬೇಕು. ಹೀಗೆ ಮುಂದುವರೆಯುವುದು ಹೀಗೆ ಮುಂದುವರೆಯುವಾಗ ಯಾರಿಗೂ ಆ ನಾಲ್ಕು ಚೂರು ಬೇಡವಾದರೆ ಗುಂಪಿನಿಂದ ಮತ್ತೊಂದು ಚೂರು ತೆಗೆದುಕೊಳ್ಳಬಹುದು. ಯಾರಲ್ಲಿ ನಾಲ್ಕು ಬಳೆಚೂರು ಒಂದೇ ಬಣ್ಣದವು ಬರುತ್ತವೋ ಅವರು ಸೆಟ್ ಎಂದು ಉಳಿದವರಿಗೆ ತಮ್ಮ ಬಳೆಚೂರುಗಳನ್ನು ತೋರುವನು. ಅಲ್ಲಿಗೆ ಒಂದು ಆಟ ಮುಗಿಯುತ್ತದೆ. ಈಗ ಗೆದ್ದವನು ಆಟ ಪ್ರಾರಂಭಿಸಿ ಬಳೆಚೂರು ಹಂಚುವನು ಮತ್ತು ಅವನಿಂದ ಪ್ರಾರಂಭಿಸುವನು. ಹೀಗೆ ಯಾರು ಅತೀ ಹೆಚ್ಚು ಬಾರಿ ಸೆಟ್ ಮಾಡುತ್ತರೋ ಅವರೇ ವಿಜಯಶಾಲಿಗಳು.

ಸೆಟ್ ಆಟದ ಉದ್ದೇಶಗಳು.

- ತಮ್ಮಲ್ಲಿರುವ ನ್ಯೂನತೆಯನ್ನು ತೆಗೆದುಹಾಕಿ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಮುಂದುವರೆಯುವುದನ್ನು ಕಲಿಯುವರು.
- ಉತ್ತಮ ಅವಕಾಶಕ್ಕಾಗಿ ಕಾಯದೆ ಸಿಗುವ ಅವಕಾಶವನ್ನು ಉತ್ತಮ ಅವಕಾಶವನ್ನಾಗಿ ಪರಿವರ್ತಿಸಿಕೊಳ್ಳುವರು.
- ಈ ಆಟದಿಂದ ಗಣಿತ ಸಂಕಲನದ ಕೌಶಲ್ಯ ಬೆಳೆಯುತ್ತದೆ.
- ಅನೇಕ ಸ್ಪರ್ಧಿಗಳಿದ್ದರೂ ತಾನು ಹೇಗೆ ಜಯಿಸಬಹುದು ಎಂಬ ಊಹಾತ್ಮಕ ಆಲೋಚನೆಯನ್ನು ಉಂಟು ಮಾಡುವುದು.

5.18 ಕಲರ್ಸ್ ಆಟ (ಬಣ್ಣಗಳ ಆಟ)

ಬಣ್ಣ ಎಂದರೆ ಯಾರಿಗೆ ಇಷ್ಟವಿಲ್ಲ ಹೇಳಿ. ಯಾಕೆಂದರೆ ಇಂದಿನ ಜೀವನವೇ ಬಣ್ಣದ ಲೋಕ. ಅದು ನಾವುಗಳು ಧರಿಸಿರುವ ಬಟ್ಟೆಯಾಗಿರಬಹುದು. ಉಗುರುಗಳಿಗೆ ಹಾಕಿಕೊಳ್ಳುವ ಬಣ್ಣಗಳಿರಬಹುದು. ಪ್ರತಿನಿತ್ಯ ನೋಡುವ ಪರಿಸರದ ಅನೇಕ ಬಣ್ಣಗಳಿರಬಹುದು. ಹೀಗೆ ಹೆಸರಿಸುತ್ತಾ ಹೋದರೆ ಇನ್ನೂ ಅನೇಕ. ಆದರೆ ಚಿಕ್ಕ ಮಕ್ಕಳಿಗೆ ಬಣ್ಣಗಳನ್ನು ಗುರುತಿಸಿಕೊಳ್ಳುವ ಬಗ್ಗೆ ಸಣ್ಣದರಲ್ಲಿ ಸ್ವಲ್ಪ ಗೊಂದಲವಾಗಬಹುದು. ಅದಕ್ಕಾಗಿಯೇ ಒಂದು ಆಟ ಆಡಿದರೆ ಹೇಗಿರುತ್ತದೆ. ಅದೇ ಬಣ್ಣಗಳ ಆಟ.

ಈ ಆಟವನ್ನು ಆಡಲು ಗರಿಷ್ಠ ಎಷ್ಟು ಜನ ಬೇಕಾದರೂ ಇರಬಹುದು. ಆದರೆ ಕನಿಷ್ಟ ಇಬ್ಬರು ಇರಲೇಬೇಕು. ಆಟದ ಪ್ರಾರಂಭದಲ್ಲಿ ಒಬ್ಬನನ್ನು ಹಿಡಿಯುವವನಾಗಿ ಮಾಡಿ ಉಳಿದವರು ಓಡುವವರಾಗುವರು. ಪ್ರಾರಂಭದಲ್ಲಿ ಒಟ್ಟಾಗಿ ನಿಂತು ಅದರಲ್ಲಿ ಹಿಡಿಯುವವನು ಕಲರ್ಸ್ ಕಲರ್ಸ್ ಎಂದು ಕೂಗುವನು. ಅದಕ್ಕೆ ಉಳಿದವರು ಯಾವ ಕಲರ್ ಆಯ್ಕೆ ಮಾಡು ಎಂದು ಹೇಳುವರು. ಆಗ ಅವನು ಕಣ್ಣಿಗೆ ಕಾಣುವ ಸುತ್ತಲಿನ ವಸ್ತುಗಳ ಬಣ್ಣವನ್ನು ನೋಡಿ ಯಾವುದಾದರೂ ಒಂದು ಬಣ್ಣವನ್ನು ಹೇಳುವನು /ಳು ಆಗ ತಕ್ಷಣ ಓಡಿ ಹೋಗಿ ಅದನ್ನು ಮುಟ್ಟಿ ಅಲ್ಲೇ ನಿಲ್ಲುವರು. ಯಾರು ಬಣ್ಣವನ್ನು ಮುಟ್ಟುವುದಕ್ಕಿಂತ ಮೊದಲು ಹಿಡಿಯುವವನ ಕೈಗೆ ಸಿಕ್ಕಿ ಬೀಳುತ್ತಾರೋ ಅವರು ಮುಂದಿನ ಹಿಡಿಯುವ ಆಟಗಾರರಗುತ್ತಾರೆ. ಹೀಗೆ ಆಟ ಮುಂದುವರೆಯುತ್ತಾ ಎಷ್ಟು ಸಮಯ ಬೇಕಾದರೂ ಆಡಬಹುದು.

- ಬಣ್ಣಗಳನ್ನು ಗುರುತಿಸುವ ಕಲೆ ಬರುತ್ತದೆ.
- ಸುತ್ತಲಿನ ವಸ್ತುಗಳನ್ನು ಗುರುತಿಸುವ ಕಲೆ ಬರುತ್ತದೆ.

5.19 ಚಿನ್ನಿ ದಾಂಡುದಾಟ

ಚಿನ್ನಿ ದಾಂಡು ಇದೊಂದು ಜನಪ್ರಿಯ ಆಟವಾಗಿದೆ. ಈ ಆಟವು ಹಾಣೆಗೆಂಡೆ, ಚಿನ್ನಿ ಕೋಲು, ಚಿನಿ ಪನಿ, ಗಿಲ್ಲಿ ದಾಂಡು ಮುಂತಾದ ಹೆಸರುಗಳಿಂದ ಪ್ರಸಿದ್ಧಿಯಾಗಿದೆ. ಇದರಲ್ಲಿ ಮರದ ಕೋಲಿನಿಂದ ಮಾಡಿದ ಒಂದು ಚಿಕ್ಕ ಚಿನ್ನಿ (ಗಿಲ್ಲಿ/ಹಾಣೆ) ಮತ್ತು ಸ್ವಲ್ಪ ದೊಡ್ಡದಾದ ಒಂದು ದಾಂಡು (ಕೋಲು/ಪನಿ) ಇವುಗಳ ಸಹಾಯದಿಂದ ಆಟವನ್ನು ಆಡುವುದರಿಂದ 'ಚಿನ್ನಿ ದಾಂಡು' ಎಂದು ಕರೆಯುತ್ತಾರೆ. ಈ ಆಟವನ್ನು ವೈಯಕ್ತಿಕವಾಗಿ ಅಥವಾ ತಂಡವಾಗಿ ಆಡಬಹುದು ಅಂಕಣ (ಮೈದಾನ) ಈ ಆಟವನ್ನು ಆಡಲು ವಿಶಾಲವಾದ ಮೈದಾನವಿರಬೇಕು ಕ್ರಿಕೆಟ್ ಮೈದಾನದ ಮಾದರಿಯಂತೆ ಮೈದಾನ ಬೇಕಾಗುತ್ತದೆ. ಮಧ್ಯದಲ್ಲಿ ಸುಮಾರು ಒಂದು ಗೇಣು ಉದ್ದದ ನೆಲದ ಮೇಲೆ ಕೊರೆದ ಒಂದು ಗುಂಡಿ/ಉಳ್ಳ/ಕುಳಿ/ಕುಣಿ ಮಾಡಿಕೊಳ್ಳಬೇಕು.

ಸಲಕರಣೆಗಳು:

1) ಚಿನ್ನಿ: ಒಂದು ಗೇಣಿನಷ್ಟು ಅಥವಾ ಒಂದು ಗೇಣಿಗಿಂತ ಕಡಿಮೆ ಅಥವಾ ಗುಂಡಿ (ಕುಳಿ)ಯಷ್ಟು ಉದ್ದವಾದ ಚಿನ್ನಿ/ಗಿಲ್ಲಿ/ಹಾಣೆ ಇರಬೇಕು. ಚಿನ್ನಿ ಮರದ ಕೋಲಿನಿಂದ ಮಾಡಿದ್ದಾಗಿರಬೇಕು ಹಾಗೂ ಅದರ ಎರಡು ತುದಿ ಚೂಪಾಗಿರಬೇಕು.
2) ದಾಂಡು: ದಾಂಡು ಚಿನ್ನಿಗಿಂತ ಕನಿಷ್ಠ ಎರಡುವರೆ ಅಥವಾ ಮೂರು ಪಟ್ಟು ಉದ್ದವಾಗಿರಬೇಕು. ಮರದ ಕೋಲಿನಿಂದ ಮಾಡಿದ ನೇರವಾದ ದಾಂಡು ಆಗಿರಬೇಕು. ಒಂದು ತುದಿಯನ್ನು ಸ್ವಲ್ಪ ಚೂಪು ಮಾಡಿರಬೇಕು.

ಆಟದ ನಿಯಮಗಳು:

1. ಆಟಗಾರರು ಎರಡು ತಂಡವನ್ನು ಮಾಡಿಕೊಂಡು ಒಂದು ತಂಡದಾಳಿ ಮಾಡುವುದು. (ಚಿನ್ನಿಯನ್ನು ಜೀಕುವುದು ಮತ್ತು ಹೊಡೆಯುವದು ಇನ್ನೊಂದು ತಂಡ ರಕ್ಷಣಾತ್ಮಕವಾಗಿ ಆಡುವುದನ್ನು ಆರಿಸಿಕೊಳ್ಳಬೇಕು.
2. ಆಟಗಾರನು ಗುಂಡಿಯ ಮೇಲೆ ಅಡ್ಡವಾಗಿ ಚಿನ್ನಿಯನ್ನು ಇಡಬೇಕು ಎದುರು ತಂಡದ ಆಟಗಾರರು ಸನ್ನದ್ದರಾಗಿರುವುದನ್ನು ತಿಳಿಯಲು ಒಂದು ಸನ್ನೆಯ ಮುಖಾಂತರ ಸೂಚನೆ ನೀಡುತ್ತಾರೆ.
3. ಸಾಮಾನ್ಯವಾಗಿ ಎದುರು ತಂಡದ ಆಟಗಾರರು 'ಹೊ' ಎಂದು ಅಥವಾ 'ರೆಡಿ ಹೊ' ಎಂದು ಇತ್ಯಾದಿ ರೀತಿಯ ಯಾವುದೋ ಒಂದು ಸಂಜ್ಞೆಯ ಮೂಲಕ ತಾವು ಸಿದ್ದರಾಗಿರುವ ಬಗ್ಗೆ ಉತ್ತರಿಸಿದ ಮೇಲೆ ಚಿನ್ನಿಯ ಕೆಳಭಾಗದಲ್ಲಿ ದಾಂಡನ್ನಿಟ್ಟು ಚಿನ್ನಿಯನ್ನು ಸಾಧ್ಯವಾದಷ್ಟು ದೂರು ಚಿಮ್ಮಬೇಕು.
4. ಹೀಗೆ ಚಿಮ್ಮಿದ ಚಿನ್ನಿಯನ್ನು ನೆಲಕ್ಕೆ ಬೀಳುವ ಮೊದಲು ಅದನ್ನು ಎದುರು ತಂಡದ ಆಟಗಾರರು ಕ್ಯಾಚ್ ಹಿಡಿಯಬಹುದು. ಹೀಗೆ ಕ್ಯಾಚ್ ಹಿಡಿದರೆ ಚಿನ್ನಿ ಚಿಮ್ಮಿದ ಆಟಗಾರ ತನ್ನ ಸರದಿ(ಪಾಳಿ)ಯನ್ನು ಕಳೆದುಕೊಳ್ಳುತ್ತಾನೆ.
5. ಹಾಗೆಯೇ ಎದುರು ತಂಡದವರಿಗೆ ಅದನ್ನು ಹಿಡಿಯಲಾಗದಿದ್ದರೆ ಚಿನ್ನಿಯನ್ನು ಚಿಮ್ಮಿದ ಆಟಗಾರ ದಾಂಡನ್ನು ಗುಂಡಿಯಿಂದ ಒಂದು ದಾಂಡಿನಷ್ಟು ಅಳತೆಯ ಅಂತರದಲ್ಲಿ ಹಿಂದೆ ಗುಂಡಿಗೆ ಅಡ್ಡವಾಗಿರುವಂತೆ ಇಡಬೇಕು.
6. ನಂತರ ಎದುರು ತಂಡದ ಯಾವುದಾದರೂ (ಅಥವಾ ಚಿನ್ನಿ ಬಿದ್ದ ಸ್ಥಳಕ್ಕೆ ಹತ್ತಿರವಿದ್ದ) ಆಟಗಾರ ಚಿನ್ನಿ ಬಿದ್ದ ಸ್ಥಳದಲ್ಲಿ ನಿಂತು ಚಿನ್ನಿಯನ್ನು ಕೈಯಲ್ಲಿ ತೆಗೆದುಕೊಂಡು ದಾಂಡಿಗೆ ತಾಗುವಂತೆ ಹೊಡೆಯಬೇಕು.
7. ಹೀಗೆ ಹೊಡೆಯುವಾಗ ಚಿನ್ನಿ ದಾಂಡಿಗೆ ತಗುಲಿದರೆ(ಮುಟ್ಟಿದರೆ) ಚಿನ್ನಿಯನ್ನು ಚಿಮ್ಮಿದ ಆಟಗಾರ ತನ್ನ ಸರದಿ (ಪಾಳಿ)ಯನ್ನು ಕಳೆದುಕೊಂಡಂತೆ ಹಾಗೂ ಚಿನ್ನಿ ಗುಂಡಿಯ

(ಕುಣಿಯ) ಒಳಗೆ ಬಿದ್ದರೂ ಕೂಡ ಆ ಸಂದರ್ಭದಲ್ಲೂ ಚಿನ್ನಿಯನ್ನ ಚಿಮ್ಮಿದ ಆಟಗಾರ ತನ್ನ ಪಾಳಿ (ಸರದಿ)ಯನ್ನು ಕಳೆದುಕೊಂಡಂತೆ.

8. ಒಂದು ವೇಳೆ ಚಿನ್ನಿ ಗುಂಡಿಯಿಂದ ಒಂದು ಚಿನ್ನಿಯಷ್ಟು ದೂರದಲ್ಲಿ ಬಿದ್ದರೆ ಆಗ ದಾಂಡಿನಿಂದ ಚಿನ್ನಿಯನ್ನು ಚಿಮ್ಮಿದ ಆಟಗಾರ ಎಡಗೈಯಲ್ಲಿ ಆಟ ಮುಂದುವರಿಸಬೇಕು.
9. ಅಂದರೆ ಆಗ ಆಟಗಾರನು ದಾಂಡಿನಿಂದ ಚಿನ್ನಿಯನ್ನು ಮೇಲಕ್ಕೆ ಚಿಮ್ಮಿಸಿ, ಚಿನ್ನಿ ಗಾಳಿಯಲ್ಲಿರುವಾಗ (ನೆಲಕ್ಕೆ ಬೀಳುವುದಕ್ಕಿಂತ ಮುಂಚೆ) ಅದಕ್ಕೆ ಹೊಡೆಯಬೇಕು.
10. ಹೀಗೆ ಮೇಲೆ ಚಿಮ್ಮಿಸಿ ಚಿನ್ನಿಯನ್ನು ಹೊಡೆದಾಗ ಎದುರು ತಂಡದ ಆಟಗಾರನು ಚಿನ್ನಿಯನ್ನು ಕ್ಯಾಚ್ ಹಿಡಿದರೆ ಆಗ ಆ ಆಟಗಾರನ (ಚಿನ್ನಿಯನ್ನು ಹೊಡೆದ ಆಟಗಾರ) ಸರದಿ (ಪಾಳಿ) ಕಳೆದುಕೊಳ್ಳುತ್ತಾನೆ.
11. ಮೂರು ಬಾರಿ (ಅವಕಾಶದಲ್ಲಿ) ಚಿನ್ನಿಯನ್ನು ಹೀಗೆ ಚಿಮ್ಮಿ ಹೊಡೆಯಲಾಗದಿದ್ದರೂ ಕೂಡ ಆ ಆಟಗಾರ ತನ್ನ ಸರದಿ(ಪಾಳಿ)ಯನ್ನು ಕಳೆದು ಕೊಂಡಂತೆ.
12. ಚಿನ್ನಿಯನ್ನು ಎರಡಕ್ಕಿಂತ ಹೆಚ್ಚು ಬಾರಿ ಹೊಡೆದರೆ (3 ಬಾರಿ/3 ಅವಕಾಶ) ಅದನ್ನು ಗಿಲ್ಲಿ ಎಂದು ಕರೆಯುತ್ತಾರೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬೇರೆ ಬೇರೆ ರೀತಿಯಲ್ಲಿ ಆಡುವುದನ್ನು ಕಾಣಬಹುದು. (ಎರಡು ಬಾರಿ ಹೊಡೆದರೆ ಒಂದು ಗಿಲ್ಲಿ, ಮೂರು ಬಾರಿ ಹೊಡೆದರೆ ಎರಡು ಗಿಲ್ಲಿ ಹೀಗೆ ಸ್ಥಳದಿಂದ ಸ್ಥಳಕ್ಕೆ ಈ ನಿಯಮ ಬದಲಾಗಬಹುದು)
13. ಚಿನ್ನಿ ಬಿದ್ದ ಸ್ಥಳದಿಂದ ಗುಂಡಿಯವರೆಗಿನ ದೂರವನ್ನು ಆಟಗಾರ (ಚಿನ್ನಿ ಹೊಡೆದ ಆಟಗಾರ) ಎಷ್ಟು ದಾಂಡು ಅಥವಾ ಚಿನ್ನಿ ಆಗುತ್ತದೆ ಎಂದೂ ಮೊದಲೇ ಊಹಿಸಿ ಹೇಳಬೇಕು. ದಾಂಡಿನಿಂದ ಅಳೆಯಲು ಸಾಧ್ಯವಾಗದಿದ್ದರೆ ಚಿನ್ನಿಯಿಂದ ಅಳೆಯಬೇಕು. ಚಿನ್ನಿಯಿಂದ ಅಳೆದರೆ ಅದನ್ನು ಗಿಲ್ಲಿ ಎಂದು ಕರೆಯುತ್ತೇವೆ. ಎಷ್ಟು ಗಿಲ್ಲಿಯಾಗಿದೆಯೋ ಅಷ್ಟರಿಂದ ಅಂಕಗಳನ್ನು ಗುಣಿಸಬೇಕು.
14. ಊಹಿಸಿ ಹೇಳಿದ್ದಕ್ಕಿಂತ ಕಡಿಮೆ ದೂರವಿದ್ದರೆ ಆ ಆಟಗಾರ ತನ್ನ ಸರದಿ (ಪಾಳಿ) ಕಳೆದುಕೊಳ್ಳುತ್ತಾನೆ. ಸರಿಯಾಗಿ ಊಹಿಸಿ ಹೇಳಿದ್ದರೆ ಆ ಆಟಗಾರನಿಗೆ ಅಥವಾ ಅವನ ತಂಡಕ್ಕೆ ಅಷ್ಟು ಅಂಕಗಳು ದೊರೆಯುತ್ತವೆ.
15. ಮೊದಲೇ ಎಷ್ಟು ಅಂಕಗಳಿಗೆ ಆಟ ಮುಕ್ತಾಯಗೊಳಿಸಬೇಕು ಎಂದು ನಿರ್ಧರಿಸಿದ್ದರೆ ಆ ಅಂಕವನ್ನು ಯಾರು ಮೊದಲು ತಲುಪುತ್ತಾರೆಯೋ ಆ ತಂಡ ಅಥವಾ ಆ ಆಟಗಾರರು 'ವಿಜಯಶಾಲಿಗಳು' ಅಥವಾ ಮೊದಲೇ ನಿರ್ಧರಿಸಿಕೊಂಡಿರದಿದ್ದರೆ ಯಾವ ತಂಡ (ಯಾವ ಆಟಗಾರರು) ಹೆಚ್ಚು ಅಂಕ ಗಳಿಸುತ್ತಾರೆಯೋ ಆ ತಂಡ ಅಥವಾ ಆ ಆಟಗಾರರು ಗೆದ್ದಂತೆ.

ಈ ಆಟದ ಹಿಂದಿನ ಉದ್ದೇಶಗಳು.

1. ದೇಹದಾರ್ಢ್ಯತೆ ಹೆಚ್ಚುತ್ತದೆ.
2. ಆಟದ ಕೆಲವು ತಂತ್ರಗಾರಿಕೆ ತಿಳಿಯುತ್ತಾರೆ.

3. ಏಕಾಗ್ರತೆ ಬೆಳೆಯುತ್ತದೆ.
4. ಚಿನ್ನಿಯನ್ನು ಹೊಡೆಯುವಾಗ ಸರಿಯಾದ ದೃಷ್ಟಿ ಕೋನದಿಂದ ದೇಹ ಮತ್ತು ಮನಸ್ಸನ್ನು ಹೊಂದಾಣಿಕೆ ಮಾಡಿಕೊಳ್ಳುವ ಮನಸ್ಥೈರ್ಯ ಬೆಳೆಯುತ್ತದೆ.
5. ಊಹಿಸಿ ಹೇಳುವುದರಿಂದ ಲೆಕ್ಕಾಚಾರ ಗೊತ್ತಾಗುತ್ತದೆ. ಜೊತೆಗೆ ದೂರದ ಕಲ್ಪನೆಯ ಮೇಲೆ ಹೇಳುವಂತಹ ಸ್ಪಂತಿಕೆ (ಸೃಜನ ಶೀಲತೆ) ಬೆಳೆಯುತ್ತದೆ.
6. ಜ್ಞಾಪಕ ಶಕ್ತಿ ಬೆಳವಣಿಗೆಯಾಗುತ್ತದೆ.

5.20 ಲಗೋರಿ

ಮನೆಯಂಗಳದಲ್ಲೋ ಗದ್ದೆ ಬಯಲುಗಳಲ್ಲೋ, ಹತ್ತಾರು ಮಕ್ಕಳು ಒಟ್ಟು ಸೇರಿದಾಗ ಹೆಂಚಿನ ತುಂಡು, ಗೆರೆಟೆ ಅಥವಾ ಚಪ್ಪಡಿ ಕಲ್ಲುಗಳನ್ನು ಒಂದರ ಮೇಲೆ ಒಂದು ಇಟ್ಟು ಆ ಕಾಲದಲ್ಲಿ ಪ್ರಚಲಿತದಲ್ಲಿದ್ದ ರಬ್ಬರು ಚೆಂಡು, ಇಲ್ಲದಿದ್ದರೆ ಬಟ್ಟೆಯನ್ನು ಸುತ್ತಿ ಮಾಡಿದ ಚೆಂಡು ಅಥವಾ ಹುಲ್ಲನ್ನು ಮುದ್ದೆ ಮಾಡಿ ಅದರ ಮೇಲೆ ಬಾಳೆಗಿಡದ ಒಣಗಿದ ಹಗ್ಗದಿಂದ ಸುತ್ತಿ ತಯಾರಿಸಿದ ಚೆಂಡು ಸಾಕು ಲಗೋರಿ ಆಟ ಆಡಲು

ಲಗೋರಿ ಎನ್ನುವ ಶಬ್ದ 'ಲಗ್ಗೆ+ಗೋರಿ' ಎನ್ನುವ ಶಬ್ದದಿಂದ ಬಂದಿರಬಹುದು. 'ಲಗ್ಗೆ' ಎಂದರೆ ಒಂದು ಬಗೆಯ ಚೆಂಡಾಟ ಅಥವಾ ಗುರಿ ಹಲಗೆಗೆ ಚೆಂಡನ್ನು ಎಸೆದು ಆಡುವ ಆಟ ಎಂದು ಅರ್ಥವಿದೆ. 'ಗೋರಿ' ಎಂದರೆ 'ಕಾಯಿ' ಅಂದರೆ ಒಂದರ ಮೇಲೊಂದು ಚಪ್ಪಟೆಯಾದ ಕಲ್ಲನ್ನು ಗೋರಿ ಆಕಾರದಲ್ಲಿ (ಒಂದು ಪ್ರಕಾರದ ಸಮಾದಿ) ಜೋಡಿಸಿರುವ ಬಿಲ್ಲೆಯನ್ನೆ ಕಾಯಿಗಳು ಎನ್ನುತ್ತಿದ್ದರು.

ನಮ್ಮ ನಾಡಿನಲ್ಲಿ ಹಲವಾರು ವರ್ಷಗಳಿಂದ ಮಕ್ಕಳಿಂದ ಹಿಡಿದು ಹಿರಿಯರ ತನಕ ಎಲ್ಲರೂ ಜೊತೆಗೂಡಿ ಆಡುತ್ತಿದ್ದ ಆಟ ಲಗೋರಿ. ಈಗ ಲಗೋರಿ ಆಡುವವರು ಅತಿ ಕಡಿಮೆಯಾದರೂ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಜನಪ್ರಿಯವಾಗಿದೆ. ಇದು ಮೂಲತಃ ಕರ್ನಾಟಕದಲ್ಲಿ ಆರಂಭವಾದ ಆಟ. ಹಳ್ಳಿ ಹೈದರಿಗೆ ಅಚ್ಚು ಮೆಚ್ಚಿನ ಆಟ ಇದಾಗಿದೆ. ಈ ಆಟವನ್ನು ಕೆಲವು ಪ್ರದೇಶದಲ್ಲಿ ಯುಗಾದಿ ಹಬ್ಬದಲ್ಲಿ ಆಡುವುದುಂಟು.

<u>ಸಲಕರಣೆಗಳು:</u> ಬಿಲ್ಲೆಗಳು: ವೃತ್ತಾಕಾರವಾದ ಚಪ್ಪಟೆಯ 7 ರಿಂದ 9 ಬಿಲ್ಲೆಗಳಿರಬೇಕು. ಬಿಲ್ಲೆಗಳನ್ನು ಮರ ಅಥವಾ ಫೈಬರ್‌ನಿಂದ ಮಾಡಿದ್ದಾಗಿರಬೇಕು. ಇದು ಸಾಧ್ಯವಾಗದಿದ್ದರೆ ಕೊನೆಯ ಪಕ್ಷ ಕಲ್ಲಿನಿಂದ (ಚಪ್ಪಟೆಯಾದ ಕಲ್ಲು ತುಂಡು) ತಯಾರಿಸಿದ ಬಿಲ್ಲೆಗಳು ಅಥವಾ ಮಡಿಕೆ ಚೂರುಗಳು ಆಗುತ್ತದೆ. ಬಿಲ್ಲೆಗಳನ್ನು ಜೋಡಿಸುವಾಗ ದೊಡ್ಡದರಿಂದ ಆರಂಭಿಸಿ ಕೊನೆಗೆ ಚಿಕ್ಕದು ಬರಬೇಕು. ಅಂದರೆ ದೊಡ್ಡ ಬಿಲ್ಲೆಯ ಮೇಲೆ ಉಳಿದ ಬಿಲ್ಲೆಗಳು ಕೊನೆಯ ಬಿಲ್ಲೆ ಚಿಕ್ಕದಾಗಿರಬೇಕು.

<u>ಚೆಂಡು: ಟೆನ್ನಿಸ್ ಬಾಲ್</u>

<u>ಎಸೆತದ ಮಣೆ:</u> ಒಂದು ಮೀಟರ್ ಉದ್ದ 10 ಸೆಂ.ಮೀ. ಅಗಲ. 2 ಸೆಂ.ಮೀ ದಪ್ಪದ ಮರದ ಹಲಗೆ ಇರಬೇಕು. ಮರದ ಹಲಗೆ ಲಭ್ಯವಾಗದಿದ್ದರೆ ಒಂದು ಗೆರೆ ಹಾಕಿಕೊಂಡರು ನಡೆಯುತ್ತದೆ. ಲಭ್ಯತೆ ಆದರೆ ಸ್ಟಾಪ್‌ವಾಚ್, ಹೆಲ್ಮೆಟ್, ಸೆಂಟರ್ ಪ್ಯಾಡ್ ಇತ್ಯಾದಿ ಬಳಸಬಹುದು.

<u>ಆಟಗಾರರ ಸಂಖ್ಯೆ:</u> ನಿರ್ದಿಷ್ಟ ನಿಯಮಕ್ಕನುಗುಣವಾಗಿ ಆಡುವುದಾದರೆ 7 ಜನ ಆಟಗಾರರು ಹಾಗೂ 2 ಜನ ಬದಲಿ ಆಟಗಾರರಿರಬೇಕು. ಇಲ್ಲದಿದ್ದರೆ ಈ ಆಟವನ್ನು ಇಬ್ಬರಿಗಿಂತ ಹೆಚ್ಚಾಗಿ ಎಷ್ಟು ಜನ ಬೇಕಾದರು ಒಂದೊಂದು ತಂಡವಾಗಿ ವಿಭಜಿಸಿಕೊಂಡು ಆಟ ಆಡಬಹುದು ಜನಪದ ಆಟಗಳ ಗುಣವೇ ಇದು. ಇಷ್ಟೇ ಜನ, ಇದೇ ನಿಯಮ ಎನ್ನುವ ನಿರ್ಬಂಧವಿಲ್ಲದೆ ಇರುವಷ್ಟರಲ್ಲೆ ಹೊಂದಾಣಿಕೆ ಮಾಡಿಕೊಳ್ಳುವಂತಿರುತ್ತದೆ.

<u>ಆಟದ ನಿಯಮಗಳು:</u> ನಾಣ್ಯ ಚಿಮ್ಮುವುದರಲ್ಲಿ ಗೆದ್ದ ತಂಡ 'ಬಿಲ್ಡರ್ಸ್' (ಚೆಂಡನ್ನು ಎಸೆಯುವುದು) ಅಥವಾ ಫೀಲ್ಡರ್ಸ್ (ಕ್ಷೇತ್ರ ರಕ್ಷಕರು) ಆಗಿ ಆಟವನ್ನು ಆಡಲು ತಿಳಿಸುವರು. ನಂತರ ಆಟ ಪ್ರಾರಂಭವಾಗುತ್ತದೆ.

ಬಿಲ್ಡರ್ಸ್ (ಚೆಂಡನ್ನು ಎಸೆಯುವವರು) ಆದವರು ಸರದಿಯಲ್ಲಿ ಒಬ್ಬೊಬ್ಬರಂತೆ ಚೆಂಡನ್ನು ಗೋರಿಗೆ (ಗೋಪುರದಂತೆ ಕಟ್ಟಲಾದ ಬಿಲ್ಲೆಗಳಿಗೆ) ಎಸೆಯಬೇಕು. ಒಬ್ಬ ಎಸೆತಗಾರ 3 ಬಾರಿ ಚೆಂಡನ್ನು ಗೋರಿಗೆ ಎಸೆಯಬೇಕು. ಮೂರು ಎಸೆತಗಳಲ್ಲಿ ಬಿಲ್ಲೆಗಳು ಬೀಳದಿದ್ದರೆ ಅವರ ಸರದಿ ಮುಗಿದಂತೆ. ಆಗ ಫೀಲ್ಡರ್ಸ್ ತಂಡಕ್ಕೆ ಒಂದು ಬೋನಸ್ ತಾಗಿ ಬಿದ್ದರೆ ಫೀಲ್ಡರ‍್ಸಗೆ. ಬೋನಸ್ ಅಂಕ ನೀಡಲಾಗುವುದಿಲ್ಲ. ಎಸೆತಗಾರ ಎಸೆತದ ಕ್ಷೇತ್ರದಲ್ಲಿ ನಿಂತು (ಗೋರಿಗೆ ಅಭಿಮುಖವಾಗಿ) ಒಂದು ಕಾಲನ್ನು ಎಸೆತದ ಮಣೆಯ ಮೇಲಿಟ್ಟು ಅಥವಾ ಎಸೆತದ ಗೆರೆ ಹತ್ತಿರ ಕಾಲಿಟ್ಟು ಚೆಂಡನ್ನು ನೇರವಾಗಿ ಗೋರಿಗೆ (ಲಗೋರಿ ಸೆಟ್‌ಗೆ) ಎಸೆಯಬೇಕು. ಎಸೆಯುವಾಗ ಓಡಿ ಬಂದು ಎಸೆಯುವ ಹಾಗಿಲ್ಲ ಹಾಗೂ ಚೆಂಡನ್ನು ಸೊಂಟದ ಮಟ್ಟದ ಕೆಳಗಿನಿಂದ ಎಸೆಯುವ ಹಾಗಿಲ್ಲ.

ಎಸೆತಗಾರ ಚೆಂಡಿನಿಂದ ಹೊಡೆದು ಬಿಲ್ಲೆಗಳನ್ನು ಬೀಳಿಸಿದಾಗ ಪೀಲ್ಡರ‍್ಸ ಆದವರು ಚೆಂಡನ್ನು ತೆಗೆದುಕೊಂಡು ಬಿಲ್ಡರ್ಸ್‌ಗೆ (ಎಸೆತಗಾರರಿಗೆ) ಹೊಡೆಯುವಷ್ಟರಲ್ಲಿ ಎಲ್ಲ ಬಿಲ್ಲೆಗಳನ್ನು 3 ನಿಮಿಷದ ಒಳಗೆ ಕಟ್ಟಿ (ಒಂದರ ಮೇಲೆ ಒಂದು ಇಟ್ಟು) 'ಲಗೋರಿ' ಅಥವಾ ಲಗ್ಗಿ ಎಂದೂ ಜೋರಾಗಿ ಕೂಗಿದರೆ ಸದರಿ ಎಸೆತಗಾರನಿಗೆ ಮತ್ತೆ ಮೂರು ಬಾರಿ ಸತತವಾಗಿ ಚೆಂಡನ್ನು ಗೋರಿಗೆ ಎಸೆಯಲು ಅವಕಾಶ ದೊರೆಯುತ್ತದೆ. ಹಾಗೂ ಎಷ್ಟು ಬಿಲ್ಲೆಯನ್ನು ಬಳಸಿ ಕಟ್ಟಿದ್ದಾರೆಯೋ ಅಷ್ಟು ಅಂಕ ಪಡೆಯುವರು. ಒಂದು ವೇಳೆ ಬಿಲ್ಲೆಗಳನ್ನು ಜೋಡಿಸುವ ಮುನ್ನವೇ ಬಿಲ್ಡರ್ಸ್ (ಎಸೆತಗಾರರು) "ಲಗೋರಿ" ಎಂದು ಕೂಗಿದಾಗ ಹಾಗೂ ಬಿಲ್ಲೆಯನ್ನು ಕಟ್ಟಿದಾಗ ಫೀಲ್ಡರ್ಸ್ ತಂಡದವರು ಚೆಂಡಿನಿಂದ ಬಿಲ್ಡರ್ಸ್ ತಂಡದವರಿಗೆ (ಯಾರಿಗಾದರು) ಹೊಡೆದಾಗ ಚೆಂಡು ಅವರ ಶರೀರಕ್ಕೆ ತಾಗಿದರೆ ಎಸೆತಗಾರನ ಸರದಿ ಮುಗಿದಂತೆ.

ಎಸೆತಗಾರ ಎಸೆದ ಚೆಂಡು ಬಿಲ್ಲೆಗಳಿಗೆ ತಾಗಿ ಫೀಲ್ಡರ್ಸ್ ತಂಡದ ಆಟಗಾರರು ಕ್ಯಾಚ್ ಮಾಡಿದಾಗ ಹಾಗೂ ಚೆಂಡು ಬಿಲ್ಲೆಗೆ ತಾಗದೆ ಒಮ್ಮೆ ನೆಲಕ್ಕೆ ಪುಟಿದಾಗ ಕೂಡ ಫೀಲ್ಡರ್ಸ್ ಕ್ಯಾಚ್ ಮಾಡಿದರೆ ಎಸೆತಗಾರನ ಸರದಿ (ಔಟ್) ಮುಗಿದಂತೆ.

ಎಲ್ಲ ಎಸೆತಗಾರರ ಸರದಿ ಮುಗಿದ ಮೇಲೆ ಬಿಲ್ಡರ್ಸ್ (ಎಸೆತಗಾರರು) ತಂಡ ನಂತರ ಫೀಲ್ಡಿಂಗ್ ಮಾಡಲು ತಯಾರಾಗಬೇಕು. ಹಾಗೆಯೇ ಫೀಲ್ಡಿಂಗ್ ಮಾಡಿದ ತಂಡ ಬಿಲ್ಡರ್ಸ್ (ಎಸೆತದ ಸರದಿಗೆ ಸಿದ್ಧರಾಗಬೇಕು) ರಾಗಿ ಕಾರ್ಯನಿರ್ವಹಿಸಲು ಸಿದ್ಧರಾಗಬೇಕು.

<u>ತಪ್ಪುಗಳು (ಫಾಲ್ಸ್)</u>

- ಎಸೆತಗಾರರು ಬಿಲ್ಲೆಗಳನ್ನು ಬೀಳಿಸಿ ಕಟ್ಟುವಾಗ ಫೀಲ್ಡರ್ಸ್ (ಇನ್ನೊಂದು ತಂಡದವರು) ಆ ಕಾರ್ಯಕ್ಕೆ ಅಡ್ಡಿ ಮಾಡುವುದು ಅಥವಾ ಅದನ್ನು ಕೆಡಿಸುವ ಹಾಗಿಲ್ಲ.
- ಫೀಲ್ಡರ್ಸ್ ತಂಡದವರು ಎಸೆತಗಾರರಿಗೆ ಚೆಂಡಿನಿಂದ ಹೊಡೆಯುವ ಸಂದರ್ಭದಲ್ಲಿ (ಬಿಲ್ಲೆಗಳನ್ನು ಬೀಳಿಸಿ ಕಟ್ಟುವ ಸಂದರ್ಭ) ಯಾರೊಬ್ಬರು ಚೆಂಡನ್ನು 3 ಸೆಕೆಂಡುಗಳಿಗಿಂತ ಹೆಚ್ಚು ಹೊತ್ತು ಹಿಡಿದು ನಿಲ್ಲುವ ಹಾಗಿಲ್ಲ. ಹಾಗೂ ಬಿಲ್ಡರ್ಸ್ಗೆ (ಎಸೆತಗಾರರಿಗೆ) ಹೊಡೆಯಲು ಹೋಗುವಾಗ ಚೆಂಡನ್ನು ಹಿಡಿದು 2 ಹೆಜ್ಜೆಗಿಂತ ಹೆಚ್ಚು ಹೆಜ್ಜೆ ಮುಂದೆ ಹಾಕಿ ಹೊಡೆಯುವಂತಿಲ್ಲ. ಫೀಲ್ಡರ್ಸ್ಗಳು ಬಿಲ್ಲೆಗಳು ಬೀಳುವುದಕ್ಕಿಂತ ಮುಂಚೆ ಎಲ್ಲರು ಮಧ್ಯಾಂಗಣ ಕ್ಷೇತ್ರದಲ್ಲಿ ಬಂದು ನಿಲ್ಲುವ ಹಾಗಿಲ್ಲ. ಅಂದರೆ ಆಟ ಪ್ರಾರಂಭದಲ್ಲಿ (ಬಿಲ್ಲೆ ಬೀಳುವವರೆಗೂ) 4 ಜನ ಹೊರಾಂಗಣ ಹಾಗೂ 3 ಜನ ಮಧ್ಯಾಂಗಣ ಕ್ಷೇತ್ರದಲ್ಲಿ ನಿಲ್ಲಬೇಕು.
- ಎಸೆತಗಾರರು ಚೆಂಡನ್ನು ಬಿಲ್ಲೆಗೆ ಎಸೆಯುವ ಬದಲಾಗಿ ಉರುಳಿಸುವುದು ಅಥವಾ ಕೈ ಸೊಂಟದ ಕೆಳಗಿನಿಂದ ಅಥವಾ ಓಡಿಕೊಂಡು ಬಂದು ಚೆಂಡನ್ನು ಎಸೆಯುವ ಹಾಗಿಲ್ಲ.
- ಎಸೆತಗಾರರು (ಬಿಲ್ಡರ್ಸ್) ಚೆಂಡಿನ ಹೊಡೆತವನ್ನು ತಪ್ಪಿಸಿಕೊಳ್ಳುವ ಸಂದರ್ಭದಲ್ಲಿ ಬೌಂಡರಿ ಗೆರೆಯಿಂದ ಆಚೆ (ಓಡಿ) ಹೋಗುವಹಾಗಿಲ್ಲ.
- ಉದ್ದೇಶ ಪೂರ್ವಕವಾಗಿ ಬಿಲ್ಡರ್ಸ್ (ಎಸೆತಗಾರ) ತಂಡದವರು ಚೆಂಡನ್ನು ಕಾಲಿನಿಂದ ಒದೆಯುವುದು, ಚೆಂಡಿನ ಮೇಲೆ ಮಲಗುವುದು, ಚೆಂಡಿನ ಮೇಲೆ ಕಾಲು ಇಟ್ಟು ನಿಲ್ಲುವುದು ಇತ್ಯಾದಿಯಾಗಿ ಫೀಲ್ಡರ್ಸ್ ತಂಡಕ್ಕೆ ತೊಂದರೆ ಮಾಡಬಾರದು ಹಾಗೂ ಫೀಲ್ಡರ್ಸ್ ತಂಡದವರು ಚೆಂಡನ್ನು ಹಿಡಿಯುವ ಪ್ರಯತ್ನದಲ್ಲಿದ್ದಾಗ ಅವರನ್ನು ಹಿಡಿದು ಎಳೆಯುವುದನ್ನು ಮಾಡಬಾರದು.

- ಬಿಲ್ಡರ್ಸ್ (ಎಸೆತಗಾರರು) ತಂಡದವರು ಬಿಲ್ಲೆಗಳನ್ನು ಬೀಳಿಸಿ ಕಟ್ಟುವ ಸಂದರ್ಭದಲ್ಲಿ ಫೀಲ್ಡರ್ಸ್ ತಂಡದವರು ಬಿಲ್ಲೆಗಳನ್ನು ಕಟ್ಟುವ ಪ್ರಯತ್ನದಲ್ಲಿದ್ದವರನ್ನು ಅಡ್ಡಿಗೊಳಿಸುವುದು, ಬಿಲ್ಡರ್ಸ್‌ನ್ನು ಎಳೆಯುವುದು, ಬಿಲ್ಲೆಗಳನ್ನು ದೂರಕ್ಕೆ ಎಸೆಯುವುದು, ಕಟ್ಟಿದ ಬಿಲ್ಲೆಗಳನ್ನು ಬೀಳಿಸುವುದು ಇತ್ಯಾದಿಯಾಗಿ ಅಡ್ಡಿಯನ್ನು ಉಂಟುಮಾಡುವ ಹಾಗಿಲ್ಲ.

ಒಟ್ಟಿನಲ್ಲಿ ವಿರುದ್ಧ ತಂಡದ ಆಟಗಾರರಿಗೆ ತೊಂದರೆ ತರುವ ಅಶಿಸ್ತಿನ ವರ್ತನೆ ತೋರಿದರೆ ಅಂತಹ ಆಟಗಾರರನ್ನು ಒಂದು ಸಾರಿ ಎಚ್ಚರಿಕೆ ನೀಡಿ. ಅದೇ ತಪ್ಪನ್ನು ಮುಂದುವರಿಸಿದರೆ ಅಂತಹವರನ್ನು ಆಟದಿಂದ ಹೊರ ಹಾಕಬೇಕು.

ವಿಜಯಶಾಲಿ ತಂಡದ ಘೋಷಣೆ: ಒಂದೇ ಇನ್ನಿಂಗ್ಸ್‌ನಲ್ಲಿ ಆಟವಾಡಿದರೆ ಆ ಇನ್ನಿಂಗ್ಸ್‌ನಲ್ಲಿ ಹೆಚ್ಚು ಅಂಕ ಗಳಿಸಿದ ತಂಡದವರನ್ನು "ವಿಜಯಶಾಲಿ ತಂಡ" ಎಂದು ಘೋಷಿಸಬೇಕು. ಒಂದು ವೇಳೆ ಎರಡು ಇನ್ನಿಂಗ್ಸ್ ಆಟವಾಡಿದರೆ ಅದರಲ್ಲಿ ಹೆಚ್ಚು ಅಂಕ ಪಡೆದ ತಂಡ ವಿಜಯಶಾಲಿ ಆಗುವುದು. ಒಂದು ವೇಳೆ ಎರಡು ತಂಡಗಳ ಅಂಕ ಸಮನಾದರೆ ಹೆಚ್ಚು ಕ್ಯಾಚ್ ಗಳಿಸಿದ ತಂಡವನ್ನು 'ವಿಜಯಶಾಲಿ ತಂಡ' ಎಂದು ಘೋಷಿಸಬೇಕು.

ಈ ಆಟದ ಬೆಳವಣಿಗೆ & ಅಭಿವೃದ್ಧಿಗಾಗಿ ಅನೇಕ ಜನರು ಶ್ರಮಿಸುತ್ತಿದ್ದಾರೆ. ಅದರಲ್ಲಿ ಕೊಡಗಿನ ದೊಡ್ಡಣ್ಣ ಬರೆಮೇಲು ರವರು ಈ ಆಟದ ಬಗ್ಗೆಯೇ ಒಂದು ಪ್ರತ್ಯೇಕವಾದ ಲಗೋರಿ ಆಟದ ನಿಯಮಗಳು ಎಂಬ ಪುಸ್ತಕವನ್ನು ಬರೆದಿದ್ದಾರೆ.

<u>ಅನುಕೂಲತೆಗಳು:</u>

1. ನಾಯಕತ್ವ ಗುಣವನ್ನು ರೂಡಿಸಿಕೊಳ್ಳಲಾಗುವುದು.
2. ಉತ್ತಮ ದೈಹಿಕ ಸಾಮರ್ಥ್ಯ ಬೆಳವಣಿಗೆ ಆಗುತ್ತದೆ.
3. ಚೆಂಡಿನ ಎಸೆತದಿಂದ ಗುರಿಗಾರಿಕೆ ಬೆಳೆಯುತ್ತದೆ.
4. ಇದು ಗುಂಪಿನಲ್ಲಿ ಆಡುವ ಆಟವಾದ್ದರಿಂದ ಪರಸ್ಪರ ಹೊಂದಾಣಿಕೆ ಗುಣ ಬೆಳೆಯುತ್ತದೆ.
5. ಎದುರಾಳಿಯನ್ನು ಕಕ್ಕಾಬಿಕ್ಕಿಗೊಳಿಸುವ ಚಾಕಚಕ್ಯತೆ ಬೆಳೆಯುತ್ತದೆ.

5.21 ಗೊಂಬೆಯಾಟ

"ಮಕ್ಕಳ ಮತ್ತು ವಯಸ್ಕರು ತಾವೇ ಗೊಂಬೆಗಳೆಂದುಕೊಂಡು ಆಡುವ ಆಟ ಇದಾಗಿದೆ. ಈ ಆಟ ಹೆಚ್ಚು ಮಕ್ಕಳಿಗೆ ಉಪಯುಕ್ತವಾದ ಅಟವಾಗಿದೆ. ಈ ಆಟದಿಂದ ಮಕ್ಕಳು ಸಹಕಾರ, ಸಹಬಾಳ್ವೆಯಂತಹ ಮೌಲ್ಯಗಳನ್ನು ಕಲಿಯಬಹುದಾಗಿದೆ.

ಈ ಆಟದ ನಿಯಮಗಳು:

- ಈ ಆಟವನ್ನು 4 ಕ್ಕಿಂತ ಹೆಚ್ಚುಜನರು ಆಡಬಹುದಾಗಿದೆ.
- ಆಟದಲ್ಲಿ ಅಡಂ ತುಡಂ, ಅಟ್ಟೆ ಮಟ್ಟೆ ಡಾಂಡುಂ, ಡುಸುಕ್ ಎಂಬ ಹಾಡನ್ನು ಹೇಳಿ ಬಂದವರು ಆಡುವವರಾಗುತ್ತಾರೆ. ಹೀಗೆ ಕೊನೆಗೆ ಉಳಿದವರೇ ಕಳ್ಳ ಆಟದ ಮೂಲಕ ಇದ್ದ ಆಟಗಾರರ ಪೈಕಿ ಒಬ್ಬನನ್ನು ಕಳ್ಳನನ್ನಾಗಿ ಮಾಡಲಾಗುತ್ತದೆ.
- ಈ ಆಟವು ಹೊರಾಂಗಣ ಆಟವಾಗಿದೆ.
- ಕಳ್ಳನನ್ನು ಬಿಟ್ಟು ಉಳಿದ ಆಟಗಾರರು ಮೈದಾನದಲ್ಲಿ ಓಡಬೇಕು. ಕಳ್ಳ ಆಟಗಾರರನ್ನು ಹಿಡಿಯಲು ಬಂದಾಗ ಮುಟ್ಟುವ ಸಂದರ್ಭದಲ್ಲಿ ಗೊಂಬೆ ಎಂದು ಹೇಳಿ ಅಲ್ಲೆ ನಿಂತು ಕೈಗಳನ್ನು ತಲೆಯ ಮೇಲೆ ಇಟ್ಟುಕೊಳ್ಳಬೇಕು.
- ಗೊಂಬೆ ಅಂದಾಗ ಕಳ್ಳ ಆ ಆಟಗಾರನನ್ನು ಮುಟ್ಟುವಂತಿಲ್ಲ.
- ಗೊಂಬೆ ಆಟಗಾರರನ್ನು ಉಳಿದ ಆಟಗಾರರು ಆತನಿಗೆ ಮುಟ್ಟಿ ಪಾಸ್ ಎಂದು ಹೇಳಿ ಬಿಡಿಸಿಕೊಂಡು ಬರಬೇಕು. ಆಗ ಗೊಂಬೆಯಾದವನು ಆಟಗಾರನಾಗುತ್ತಾನೆ.
- ಗೊಂಬೆ ಎಂದು ಹೇಳುವುದರೊಳಗೆ ಕಳ್ಳ ಆಟಗಾರನನ್ನು ಮುಟ್ಟಿದರೆ ಆತ ಔಟ್ ಆಗುತ್ತಾನೆ. ನಂತರ ಮೇಲಿನ ನಿಯಮಗಳಂತೆ ಆಟ ಮುಂದುವರಿಸಬೇಕು.

ಈ ಆಟದ ಹಿಂದಿನ ಉದ್ದೇಶಗಳು

1. ಮಕ್ಕಳಿಗೆ ಉತ್ತಮ ಮನರಂಜನೆ ಒದಗಿಸುತ್ತದೆ.
2. ಮಕ್ಕಳಲ್ಲಿ ಸಹಕಾರ, ಸಹಬಾಳ್ವೆಯಂತಹ ಮೌಲ್ಯಗಳ ಬೆಳವಣಿಗೆಗೆ ಸಹಕಾರಿಯಾಗುತ್ತವೆ.

ಆ ಆಟವನ್ನು ಕಾವೇರಿಸುವ ಚಟುವಟಿಕೆಯಾಗಿ ತೆಗೆದುಕೊಳ್ಳಬಹುದಾಗಿದೆ. ತಕ್ಷಣವೇ ಪ್ರತಿಕ್ರಿಯಿಸುವ ಪ್ರವೃತ್ತಿ ಬೆಳೆಯುತ್ತದೆ. ಸಮಸ್ಯೆ ಬಂದಾಗ ತಕ್ಷಣ ಆ ಸಮಸ್ಯೆಯಿಂದ ತಪ್ಪಿಸಿಕೊಳ್ಳುವ ವಿಧಾನ ಗೊತ್ತಾಗುತ್ತದೆ.

5.22 ಚೆಂಡಾಟ

ಇದು ತೂರು ಚೆಂಡು ಆಟದ ಮಾದರಿಯಲ್ಲಿ ಇದ್ದರೂ ಚೆಂಡಿನಿಂದ ಹೊಡೆದರೆ ಆಟದ ಮಜಾನೆ ಬೇರೆ. ಆ ಆಟದಲ್ಲಿ ನಿರ್ದಿಷ್ಟವಾಗಿ ಇಷ್ಟೇ ಜಾಗ ಎಂದು ಇರದೇ ಅದಕ್ಕಿಂತಲೂ ದೂರ ಹೋಗಬಹುದು. ಆದರೆ 'ಹಿಟ್ ದ ಬಾಲ್' ಆಟದಲ್ಲಿ ನಿರ್ದಿಷ್ಟ ವೃತ್ತಾಕಾರದ ಭಾಗದಲ್ಲಿ ನಿಂತು ಆಡುವ ಆಟವಾಗಿದೆ. ಹಾಗಾದರೆ ಆಟವಾಡುವ ವಿಧಾನವನ್ನು ಮುಂದೆ ತಿಳಿಯೋಣ ಈ ಆಟವನ್ನು ಆಡಲು ಪ್ರಮುಖವಾಗಿ ವಾಲಿಬಾಲ್ ಅಥವಾ ಫುಟ್‌ಬಾಲ್, ಬ್ಯಾಂಡ್ ಬಾಲ್ ನಂತಹ ಒಂದು ಚೆಂಡು ಗುಂಪುಮಾಡಿ ಆಟ ಆಡಿಸಬಹುದಾದಷ್ಟು ಆಟಗಾರರು (ಕನಿಷ್ಠ 10 ಕ್ಕಿಂತ ಹೆಚ್ಚು) ಅವಶ್ಯಕ

ಈ ಆಟದಲ್ಲಿ ಮೊದಲಿಗೆ ಎರಡು ಗುಂಪಿನಲ್ಲಿ ಒಂದು ಗುಂಪು ವೃತ್ತಾಕಾರವಾಗಿ ನಿಂತರೆ ಇನ್ನೊಂದು ತಂಡ ಆ ವೃತ್ತಾಕಾರದ ಒಳಭಾಗದಲ್ಲಿ ಇರುತ್ತಾರೆ. ಆಗ ವೃತ್ತಾಕಾರದಲ್ಲಿ ನಿಂತಿರುವ ತಂಡದ ಸದಸ್ಯರುಗಳಿಗೆ ಇನ್ನೊಂದು ಗುಂಪಿನವರು ಬಾಲ್‌ನಲ್ಲಿ ಹೊಡೆಯಬೇಕು. ಈ ಹೊಡೆಯುವ ವಿಧಾನ ಅನುಸರಿಸಿ ಮೂರು ರೀತಿ ವರ್ಗ ಮಾಡಿಕೊಂಡಿರುವರು.

1. ಮೊದಲು ಕೆಳಭಾಗಕ್ಕೆ ಹೊಡೆಯುವುದು.
2. ಮಂಡಿಯ ಮೇಲ್ಭಾಗದ ದೇಹದ ಭಾಗಗಳಿಗೆ ಹೊಡೆಯುವುದು.
3. ಇಡೀ ದೇಹದ ಯಾವುದೇ ಭಾಗಕ್ಕೆ ಬಾಲನ್ನು ಪಿಚ್ ಬೀಳಿಸಿ ತಾಗಿಸುವುದು.

ಹೀಗೇ ಮೇಲಿನ ಮೂರು ರೀತಿಯ ವಿಧಾನಗಳಲ್ಲಿ ಯಾವುದಾದರೂ ಒಂದು ವಿಧಾನವನ್ನು ಅನುಸರಿಸಿಕೊಂಡು ಆಡಬಹುದು. ಮೊದಲೇ ಹೇಳಿದಂತೆ ವೃತ್ತದ ಒಳಗೆ ಇರುವ ಒಂದು ಗುಂಪಿನ ಆಟಗಾರರಿಗೆ ವೃತ್ತದ ಹೊರಗೆ ನಿಂತಿರುವ ಮತ್ತೊಂದು ಗುಂಪಿನವರು ಚೆಂಡಿನಿಂದ ಮೂರರಲ್ಲಿ ಯಾವುದಾದರು ಒಂದು ವಿಧಾನ ಅನುಸರಿಸಿ ಮೊದಲೇ ನಿರ್ಧರಿಸಿದಂತೆ ಹೊಡೆಯುವರು ಅವರು ಎಸೆದ ಚೆಂಡು ತಾಗಿದವರು ಔಟ್ ಆಗುವರು. ಹೀಗೇ ನಿರ್ದಿಷ್ಟ ಸಮಯದಲ್ಲಿ ಎಷ್ಟು ಜನರನ್ನು ಬೇಕಾದರು ಔಟ್ ಮಾಡಬಹುದು. ನಂತರ ಹೊರವೃತ್ತದಲ್ಲಿ ನಿಂತಿದವರು ಒಳಗಿನ ಗುಂಪಿನವರಾಗುತ್ತಾರೆ. ಈಗ ಹೊರಗುಂಪಿನವರು ಮೊದಲಿನ ಗುಂಪಿನವರು ಔಟ್ ಮಾಡುವುದಕ್ಕಿಂತ ಹೆಚ್ಚಿನ ಜನರನ್ನು ಔಟ್ ಮಾಡಿದರೆ ಜಯಶಾಲಿಗಳಾಗುತ್ತಾರೆ.

ಈ ಆಟದ ಹಿಂದಿನ ಉದ್ದೇಶಗಳು

- ಸಾಂಘಿಕ ಪ್ರಯತ್ನಕ್ಕೆ ಫಲವಿದೆ ಎಂಬ ತತ್ವವಿದೆ.
- ತೋಳುಗಳಿಗೆ ಬಲ ಉಂಟಾಗುತ್ತದೆ.
- ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟ ಕೆಲಸವನ್ನು ಉತ್ತಮವಾಗಿ ಮುಗಿಸುವ ಗುಣ ಬೆಳೆಸುತ್ತದೆ.
- ದೈಹಿಕ ಸಾಮರ್ಥ್ಯ ಹೆಚ್ಚಾಗುತ್ತದೆ.
- ಕಷ್ಟದಲ್ಲಿ ಇದ್ದ ವ್ಯಕ್ತಿ ತಪ್ಪಿಸಿಕೊಳ್ಳುವ ವಿಧಾನ ತಿಳಿಯುತ್ತಾನೆ.
- ಈ ಆಟ ಆಡುವುದರಿಂದ ಒಂದು ಕೆಲಸದಲ್ಲಿ ಹೆಚ್ಚು ಚಟುವಟಿಕೆ ಮತ್ತು ಲವಲವಿಕೆಯಿಂದ ಇರಲು ಸಾಧ್ಯವಾಗುತ್ತದೆ.

5.23 ಸಂಗೀತ ಕುರ್ಚಿ ಆಟ

ಸಂಗೀತ ಕೇಳುವುದು ಎಂದರೆ ಯಾರಿಗೆ ಇಷ್ಟವಿಲ್ಲ ಹೇಳಿ? ಅದೇ ರೀತಿ ಸಂಗೀತವುಳ್ಳ ಹಾಡನ್ನು ಹಾಕಿಕೊಂಡು ಆಟವಾಡಿದರೆ ಇನ್ನೂ ಚೆನ್ನಾಗಿರುತ್ತದೆ. ಅಲ್ಲವೇ ಹಾಗಾದರೆ ಈ ಆಟವನ್ನು ಆಡುವುದು ಹೇಗೆ ಎಂಬುದನ್ನು ತಿಳಿಯೋಣ.

ಮೊದಲಿಗೆ ಕುರ್ಚಿಗಳನ್ನು ಆಟಗಾರರು ಭಾಗವಹಿಸುವ ಸಂಖ್ಯೆಗೆ ಒಂದು ಕಡಿಮೆ ಇರುವಂತೆ ಪ್ರತಿ ಹಂತದಲ್ಲೂ ಜೋಡಿಸುತ್ತಾ ಬರಬೇಕು. ಆಟ ಪ್ರಾರಂಭವಾದಾಗ ಸಂಗೀತವನ್ನು ಆನ್ ಮಾಡುತ್ತಾರೆ. ಹಾಡುತ್ತಿರುವಾಗ ಓಡುತ್ತಲೇ ಇರಬೇಕು ಹೀಗೆ ಓಡುವಾಗ ಮಧ್ಯದಲ್ಲಿ ಸಂಗೀತ ಹಾಡುವದನ್ನು ನಿಲ್ಲಿಸಿದಾಗ ಎಲ್ಲರೂ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕು. ಯಾರಿಗೆ ಕುಳಿತುಕೊಳ್ಳಲು ಕುರ್ಚಿ ಸಿಗುವುದಿಲ್ಲವೋ ಅವರು ಔಟ್ ಆಗುತ್ತಾರೆ. ಹೀಗೆ ಒಂದು ಕುರ್ಚಿ ಉಳಿಯುವವರೆಗೆ ನಂತರ ಅವರಿಬ್ಬರ ಮಧ್ಯೆ ಆಡಿಸುತ್ತಾ ಸಂಗೀತವನ್ನು ಮಧ್ಯದಲ್ಲಿ ನಿಲ್ಲಿಸುವರು. ಆಗ ಒಂದು ಕುರ್ಚಿಯ ಮೇಲೆ ಯಾರು ಕುಳಿತುಕೊಳ್ಳುತ್ತಾರೋ ಮೊದಲ ಅವರೇ ವಿಜಯಶಾಲಿಗಳು.

ಅನುಕೂಲತೆಗಳು:

- ಈ ಆಟ ಆಡುವುದರಿಂದ ದೈಹಿಕವಾಗಿ ವ್ಯಾಯಾಮ ದೊರೆತಂತಾಗುವುದು.
- ಅವಕಾಶಗಳನ್ನು ಹೇಗೆ ಉಪಯೋಗಿಸಿಕೊಳ್ಳಬೇಕು ಎಂಬುದನ್ನು ತಿಳಿಯಬಹುದು.
- ಸಂಗೀತದೊಂದಿಗೆ ಆಟವನ್ನು ಆಡುವುದರಿಂದ ಉತ್ತಮ ಮನರಂಜನೆ ದೊರೆಯುವುದು.
- ಸಂಗೀತ ಆಸಕ್ತಿ ಇರುವವರಿಗೆ ಇನ್ನೊಂದು ಒಳ್ಳೆಯ ಆಸಕ್ತಿ ಬೆಳೆಸಲು ಅನುಕೂಲವಾಗುತ್ತದೆ.

2.24 ಚುಕ್ಕಿ ಜೋಡಣೆ ಆಟ

ವಿಶ್ವಕ್ಕೆ ಬುದ್ದಿ ಚುರುಕುಗೊಳ್ಳುವ ಆಟಗಳ ಕೊಡುಗೆಯಲ್ಲಿ ಭಾರತದ ಪಾತ್ರ ಅತ್ಯಮೂಲ್ಯವಾದದ್ದು. ಅದರಲ್ಲಿ ಚದುರಂಗ್, ಪಗಡೆ, ಚೌಕಾಬಾರ, ಇತ್ಯಾದಿ ಆಟಗಳು ಗಮನಾರ್ಹವಾದುದು. ಅದೇ ಮಾದರಿ ಹೋಲುವ ಆಟಗಳಲ್ಲಿ ಚುಕ್ಕಿ ಜೋಡಣೆ ಆಟವು ಒಂದಾಗಿದೆ. ಈ ಚುಕ್ಕಿ ಜೋಡಣೆ ಆಟಕ್ಕೆ ಅಕ್ಷರ ಜೋಡಣೆ ಆಟವೆಂದು ಕೂಡ ಕರೆಯುತ್ತಾರೆ. ಚುಕ್ಕಿಗಳನ್ನು ಇಟ್ಟು ರಂಗೋಲಿಯನ್ನು ಹಾಕುವುದಲ್ಲದೆ ಆಟವನ್ನು ಆಡಬಹುದು ಎನ್ನುವುದನ್ನು ತಿಳಿಯೋಣ.

ಪರಿಕರಗಳು: ಪೆನ್ನು ಮತ್ತು ಪೇಪರ್

ಆಡುವ ವಿಧಾನ: ಒಂದು ಪೇಪರಿನಲ್ಲಿ ಸಮಾನಾಂತರದಲ್ಲಿ ಅಡ್ಡಸಾಲು ಉದ್ದ ಸಾಲಿನಲ್ಲಿ ಚುಕ್ಕಿಯನ್ನು ಹಾಕಿಕೊಳ್ಳಬೇಕು. ಅಡ್ಡಸಾಲು ಮತ್ತು ಉದ್ದ ಸಾಲಿನ ಚುಕ್ಕಿಗಳ ಎಣಿಕೆ ಒಂದೇ ಆಗಿರಬೇಕು.

ಉದಾ: 5x5 ಇದು ಆಡಲು ಸಿದ್ದವಾದ ಪಟ

ಈ ಆಟವನ್ನು ಆಡಲು ಕನಿಷ್ಟ ಪಕ್ಷ ಇಬ್ಬರು ಬೇಕು. ಹೆಚ್ಚುಚುಕ್ಕಿಗಳನ್ನು ಇಟ್ಟುಕೊಂಡು ಹೆಚ್ಚು ಜನರು ಆಡಬಹುದು.

ಪ್ರತಿಯೊಬ್ಬರು ಸರದಿ ಪ್ರಕಾರ ಎರಡು ಚುಕ್ಕಿಗಳ ಮಧ್ಯಗೆರೆ ಎಳೆದು ಚುಕ್ಕಿಯನ್ನು ಸೇರಿಸಬೇಕು. ಸೇರಿಸುವಾಗ ಇಷ್ಟಬಂದ ಜಾಗದಲ್ಲಿ ಲಂಬ ಅಥವಾ ಅಡ್ಡವಾಗಿ ಜೋಡಿಸಬೇಕು.

ಹೀಗೆ ಸರದಿ ಪ್ರಕಾರ ಒಬ್ಬರಾದ ಮೇಲೆ ಒಬ್ಬರಂತೆ ಚುಕ್ಕಿ ಜೋಡಿಸುವಾಗ ಯಾರಿಗಾದರೂ ಒಂದು ಚೌಕಾಕೃತಿ ಆದರೆ ಅದು ಅವರ ಮನೆ ಆ ಚೌಕಾಕೃತಿಯಲ್ಲಿ ತಮ್ಮ ಅಥವಾ ಗುರುತಿನ ಅಕ್ಷರವನ್ನು ಮಧ್ಯದಲ್ಲಿ ಬರೆಯಬೇಕು.

ಹೀಗೆ ಆಟ ಮುಂದುವರೆದು ಎಲ್ಲ ಚುಕ್ಕಿಗಳ ಜೋಡಣೆ ಮುಗಿದ ನಂತರ ಯಾರ ಮನೆಗಳು ಹೆಚ್ಚಾಗಿರುತ್ತವೆಯೋ ಅವರೇ ವಿಜಯಶಾಲಿಗಳಾಗುವರು.

ಚಿತ್ರದಲ್ಲಿ ತೋರಿಸಿದಂತೆ ಎಸ್ ಚಿನ್ಹೆಯ ಆಟಗಾರ ಒಟ್ಟು 11 ಮನೆಗಳನ್ನು ಪಡೆದಿದ್ದಾರೆ. ಹಾಗು ಪಿ ಚಿನ್ಹೆಯ ಆಟಗಾರ ಒಟ್ಟು 9 ಮನೆಗಳನ್ನು ಪಡೆದಿದ್ದಾರೆ. ಆದ್ದರಿಂದ ಎಸ್ ಆಟಗಾರ ವಿಜಯಶಾಲಿ ಯಾಗುತ್ತಾರೆ.

<u>ಈ ಆಟದ ಹಿಂದಿನ ಉದ್ದೇಶಗಳು</u>

1. ಎಲ್ಲಾ ವಯಸ್ಸಿನವರಿಗೂ ಇದು ಹೊಂದುವಂತಹದ್ದಾಗಿದೆ.
2. ಈ ಆಟವನ್ನು ಆಡುವುದರಿಂದ ಶಿಸ್ತು, ತಾಳ್ಮೆ, ಸಹನೆ ಆತ್ಮವಿಶ್ವಾಸ, ದೃಢತೆ, ವಿಶ್ಲೇಷಣೆ, ನೆನಪಿನ ಶಕ್ತಿ, ಮನಸ್ಸಿನ ಕೇಂದ್ರಿಕರಣ, ತಾರ್ಕಿಕ ಮತ್ತು ಅಮೂಲ್ಯ ಆಲೋಚನೆ ಸಾಮರ್ಥ್ಯ ಅನ್ವೇಷಣಾ ಮನೋಭಾವ, ಸವಾಲು ಎದುರಿಸುವ ಸಾಮರ್ಥ್ಯ ಮುಂತಾದ ಅಂಶಗಳ ಬೆಳವಣಿಗೆ ಹೆಚ್ಚಾಗುತ್ತದೆ.
3. ಉತ್ತಮ ಮನರಂಜನೆಯ ಜೊತೆ ಬುದ್ದಿ ವಿಕಸನವಾಗುತ್ತದೆ.
4. ಈ ಆಟದಿಂದ ಲೆಕ್ಕಚಾರ ಮತ್ತು ಕಲಿಕಾ ಸಾಮರ್ಥ್ಯಗಳ ಅಭಿವೃದ್ಧಿಯಾಗುತ್ತದೆ.
5. ವೈಜ್ಞಾನಿಕ ರೀತಿಯಲ್ಲಿ ಆಲೋಚಿಸುವುದು ಹಾಗೂ ಹೊಸ ರೀತಿಯ ಚಿಂತನೆಗೆ ಈ ಆಟವು ಸಹಕಾರಿಯಾಗಿದೆ.
6. ಆಟಗಾರರಲ್ಲಿ ಕುತೂಹಲ ಮತ್ತು ಆಸಕ್ತಿ ಹೆಚ್ಚಿಸುವುದು.

5.25 ಜೋಕಾಲಿ ಆಟ

ಉತ್ತರ ಕರ್ನಾಟಕದಲ್ಲಿ ನಾಗರಪಂಚಮಿ ಹಬ್ಬವನ್ನು ಬಹಳ ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ. ಆ ದಿನ ನಾಗಪ್ಪನಿಗೆ ಹಾಲು ಎರೆದು ವಿಭಿನ್ನ ರೀತಿ ತಿಂಡಿತಿನಿಸುಗಳನ್ನು ಮಾಡಿ ಸವಿಯಾದ ರುಚಿ ಅನುಭವಿಸುತ್ತಾರೆ. ಅದೇ ದಿನ ಸಾಯಂಕಾಲದಂದು ಬಹಳ ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದ ಒಂದು ಆಟವನ್ನು ಆಡುವುದು ಸರ್ವೆಸಾಮಾನ್ಯವಾಗಿದೆ. ಆ ಆಟವೇ ಜೋಕಾಲಿ ಆಟ. ಆ ದಿನ ಊರಿನಲ್ಲಿ ಇರುವ ಯಾವ ಮರಗಳೂ ಖಾಲಿ ಇರುವುದಿಲ್ಲ ದೊಡ್ಡ, ಸಣ್ಣ ಮರಗಳಿಗೆ ಜೋಕಾಲಿಯನ್ನು ಕಟ್ಟಿರುತ್ತಾರೆ. ಅದನ್ನು ಏರಿ ಆಡುವ ಆಟ ಜೋಕಾಲಿ ಆಟ.

ತಮ್ಮ ತಮ್ಮ ವಯೋಮಾನ ಮತ್ತು ಲಿಂಗಾಧಾರಿತವಾಗಿ ಬೇರೆ ಬೇರೆ ವರ್ಗೀಕರಣದ ಆಧಾರದ ಮೇಲೆ ಈ ಆಟವನ್ನು ಆಡಲಾಗುತ್ತದೆ. ದೊಡ್ಡ ಮರದಲ್ಲಿ ದೊಡ್ಡ ಜೋಕಾಲಿಯನ್ನು ಕಟ್ಟಲಾಗಿರುತ್ತದೆ. ಅಂದರೆ ಬಹಳ ಎತ್ತರವಾದ ಜೋಕಾಲಿ ಇದನ್ನು ಆಡಲು ಅನುಭವ ಯುಕ್ತ ಪುರುಷರಿಂದ ಸಾಧ್ಯ ಸಣ್ಣ ಸಣ್ಣಮರಗಳಲ್ಲಿ ಕಟ್ಟಿದ ಜೋಕಾಲಿಯನ್ನು ಹುಡುಗರು ಹುಡುಗಿಯರು ಹಾಗೂ ಹೆಣ್ಣುಮಕ್ಕಳು (ಮಹಿಳೆಯರು) ಹೆಚ್ಚಾಗಿ ಆಡುವರು. ಪ್ರತಿ ಜೋಕಾಲಿಯ ಮುಂದಿನ ರೆಂಬೆಯ ತುದಿಗೆ (ಸ್ಪರ್ಧೆಯ ಜೋಕಾಲಿಗಳಿಗೆ ಮಾತ್ರ) ಒಂದರೆಡು ವಸ್ತುವನ್ನು ಕಟ್ಟಿರುತ್ತಾರೆ. ಆ ವಸ್ತುಗಳು ಸಾಮಾನ್ಯವಾಗಿ ಕೊಬ್ಬರಿ ಬಟ್ಟಲು, ಚಕ್ಕುಲಿ, ಕರಿಗಡಬು, ಕೋಡುಬಳೆ, ಹೆಚ್ಚು ಬೆಲೆಬಾಳುವ ವಸ್ತು ಹೀಗೆ ಮುಂತಾದ ವಸ್ತುಗಳನ್ನು ಕಟ್ಟಲಾಗಿರುತ್ತದೆ. ಓಹೋ ಈಗ ಈ ಆಟದ ಬಗ್ಗೆ ಕುತೂಹಲ ಹೆಚ್ಚಾಗುತ್ತಿದೆಯೇ? ಹಾಗಾದರೆ ತಡವೇಕೆ ಬನ್ನಿ ಆಟ ಆಡುವ ವಿಧಾನ ತಿಳಿಸಿ ಆಡೋಣ ಬನ್ನಿ ಸರದಿಯ ಪ್ರಕಾರವಾಗಿ ಒಬ್ಬೊಬ್ಬರಂತೆ ಜೋಕಾಲಿ ಆಟದ ಸ್ಪರ್ಧೆಗೆ ಬಾಗಿಯಾಗುವರು. ಒಬ್ಬನು ಜೋಕಾಲಿ ಮೇಲೆ ಹತ್ತಿ ನಿಂತು ಜೋಕಾಲಿ ಚಲನೆ ಆರಂಭವಾದಾಗ ಅವರ ಸ್ಪರ್ಧೆಯು ಆರಂಭವಾದಂತೆ, ಜೋಕಾಲಿ ಚಲನೆಯನ್ನು ಬೇಕಂತಲೆ ಹೆಚ್ಚಿಸುತ್ತಾ ಹೋಗಿ ಮರದ ಮೇಲೆ ಕಟ್ಟಲಾದ ವಸ್ತುವನ್ನು ಬಾಯಿಂದ ಕಚ್ಚಿ ಪಡೆದುಕೊಂಡರೆ ವಿಜಯಶಾಲಿಗಳಾಗುತ್ತಾರೆ. ವೇಗದ ಚಲನೆಯನ್ನು ನಿಲ್ಲಿಸಿದರೆ ಅವರ ಸರದಿ ಮುಗಿಯುತ್ತದೆ. ಆಗ ಅವರು ಜೋಕಾಲಿಯಿಂದ ಇಳಿದು ಕೆಳಗೆ ಬರಬೇಕು. ನಂತರ ಇನ್ನೊಬ್ಬರ ಸರದಿ ಪ್ರಾರಂಭವಾಗುತ್ತದೆ. ಹೀಗೆ ಯಾರು ಜೋಕಾಲಿಯನ್ನು ಆಡುತ್ತಾ ಮೇಲಿರುವ ವಸ್ತುವನ್ನು ಪಡೆಯುತ್ತಾರೆಯೋ ಅವರು ವಿಜಯಶಾಲಿಗಳು ಆಗುತ್ತಾರೆ.

ಜಾಗೃತಿಯ ಅಂಶಗಳು: ಆಡಲು ಶುರು ಮಾಡಿದರೆ ಒಂದು ನಿಮಿಷ ಇರಿ ಈ ಅಂಶಗಳನ್ನು ಪಾಲಿಸಿ ಆಡಿದರೆ ಸುರಕ್ಷಿತ.

- ಜೋಕಾಲಿಯನ್ನು ಗಟ್ಟಿಯಾದ ಮರದ ಕೊಂಬೆಗಳಿಗೆ ಕಟ್ಟಬೇಕು.
- ಜೋಕಾಲಿಯನ್ನು ಗಟ್ಟಿಯಾದ ಹಗ್ಗದಿಂದ ಮಾತ್ರ ಕಟ್ಟಬೇಕು.

- ಜೋಕಾಲಿಯ ಹಗ್ಗವು ಹಿಗ್ಗುವಿಕೆ ಮತ್ತು ಕುಗ್ಗುವಿಕೆಗೆ ಒಳಗಾಗಬಾರದು ಅಂದರೆ ಪ್ಲಾಸ್ಟಿಕ್ ಹಗ್ಗವನ್ನು ಉಪಯೋಗಿಸಬಾರದು.
- ಜೋಕಾಲಿ ಜಗಿದಾಗ ಹಿಂದೆ ಮುಂದೆ ಯಾವುದೇ ವಸ್ತು ಶರೀರಕ್ಕೆ ಅಥವಾ ಜೋಕಾಲಿಗೆ ತಗುಲಿ ಬಳಕುವಂತೆ ಇರಬಾರದು.
- ಎರಡು ಅಥವಾ ಮೂರು ಜನರಿಂದ ಆಡುವಾಗ ಹಗ್ಗ ಮತ್ತು ಮರ ನಿಮ್ಮ ಭಾರ ತಡೆಯುತ್ತದೆಯೋ ಎಂಬುದು ಖಾತ್ರಿಯಾದ ಬಳಿಕ ಆಟ ಆಡಬೇಕು. ಅನುಭವ ಇದ್ದವರು ಮಾತ್ರ ಈ ವಿಧಾನವನ್ನು ಅನುಸರಿಸಬೇಕು. ಸಾಧ್ಯವಾದಷ್ಟು ಎರಡು ಮೂರು ಜನ ನಿಂತು ಆಡುವುದನ್ನು ಕೈ ಬಿಟ್ಟರೆ ಒಳ್ಳೆಯದು.
- ಜೋಕಾಲಿ ಆಡುವಾಗ ವಿವಿಧ ಶೈಲಿಗಳನ್ನು ಅಳವಡಿಸಿಕೊಂಡು ಆಡುವುದನ್ನು ಎರಡು ಕೈ ಅಥವಾ ಕಾಲು ಬಿಟ್ಟು ಆಡುವ ಶೈಲಿಯನ್ನು ನಿಷಿದ್ದಗೊಳಿಸಬೇಕು.

ಈ ಆಟದ ಹಿಂದಿನ ಉದ್ದೇಶಗಳು:

- ಶರೀರ ಸಮತೋಲನ ಕಾಯ್ದುಕೊಳ್ಳಲು ಅನುವು ಮಾಡಿಕೊಡುತ್ತದೆ.
- ಕೈ ಮತ್ತು ಕಾಲುಗಳಿಗೆ ಗಟ್ಟಿತನ ಬರುತ್ತದೆ.
- ಚಲನೆಯಾದ ವಸ್ತುಗಳಲ್ಲಿ ಕಾಲುಗಳ ಮೇಲೆ ಬಿಗಿಯಾಗಿ ನಿಲ್ಲುವುದು ತಿಳಿಯುತ್ತದೆ.
- ಸರಿಯಾದ ಉಸಿರಾಟ ಕ್ರಮ ತಿಳಿಯುತ್ತದೆ.
- ಉತ್ತಮ ಮನರಂಜನೆಯ ಜೊತೆಗೆ ಸಾಹಸ ಕ್ರೀಡಾ ಮನೋಭಾವನೆ ಬೆಳೆಯುತ್ತದೆ.
- ಮನಸ್ಸಿಗೆ ಹೆಚ್ಚು ಉಲ್ಲಾಸ ಸಿಗುತ್ತದೆ.

5.26 ಕಪ್ಪೆ ಆಟ

ಈ ಆಟವನ್ನು ಸಾಮಾನ್ಯವಾಗಿ ಚಿಕ್ಕವರಿದ್ದಾಗ ಎಲ್ಲರೂ ಆಡಿರುವ ಆಟವಾಗಿದೆ. ಹಾಗಾದರೆ ಬನ್ನಿ ಮತ್ತೊಮ್ಮೆ ನಾವುಗಳೆಲ್ಲರು ಬಾಲ್ಯದ ನೆನಪುಗಳಿಗೆ ಹಿಂದಿರುಗಿ ಮುಂದಿನ ಪೀಳಿಗೆಗೆ ಈ ಆಟದ ವಿಧಾನವನ್ನು ತಿಳಿಸಿಕೊಡೋಣ.

ಮೊದಲಿಗೆ ಈ ಆಟದಲ್ಲಿ ಭಾಗವಹಿಸುವವರನ್ನು ಎರಡು ಗುಂಪುಗಳನ್ನಾಗಿ ಮಾಡಿ ಆ ಗುಂಪುಗಳಿಗೆ ಯಾವುದಾದರೂ ಹೆಸರನ್ನು ಕೊಡಬೇಕು. ನಂತರ ಅವರನ್ನು ಉದ್ದಕ್ಕೆ ನಿಲ್ಲಿಸಿ ಎರಡು ತಂಡಗಳ ಹತ್ತಿರವು ಸ್ವಲ್ಪ ಅಂತರವಿರುವಂತೆ ಮಾಡಬೇಕು. ಮತ್ತು ಅವರ ಮುಂದೆ ಒಂದು ಸಮಾರಂಭ ಗೆರೆಯನ್ನು ಎಳೆಯಬೇಕು.

ಮುಂದೆ ಅವರು ಸೀಟಿ ಊದಿದ ತಕ್ಷಣ ಕಪ್ಪೆಕೂರುವಂತೆ ಕುಳಿತುಕೊಂಡು ಕುಪ್ಪುತ್ತಾ ಹೋದಂತೆ ಮುಂದೆ ಸ್ವಲ್ಪ ಅಂತರದಲ್ಲಿ ಇಟ್ಟಿರುವ ಚೆಂಡು ಅಥವಾ ಡಂಬಲ್ಸ್ ಅನ್ನು ಸುತ್ತಿ ಪುನಃ ತಮ್ಮ ಸ್ಥಳಕ್ಕೆ ಬರಬೇಕು. ಸ್ಥಳಕ್ಕೆ ಧಾವಿಸಿದಂತೆ ಅವರ ಹಿಂದೆ ಇದ್ದಂತಹವರು ಇದೇ ಕ್ರಮವನ್ನು ಅನುಸರಿಸಬೇಕು.

ಇದರಲ್ಲಿ ನಿಧಾನಕ್ಕೆ ಬಂದಂತಹ ಮಕ್ಕಳು ಸೋತಂತೆ ಲೆಕ್ಕವಾಗುತ್ತದೆ. ಬೇಗ ಬಂದು ತಮ್ಮ ಸ್ಥಳ ಸೇರಿದ ಮಕ್ಕಳು ಗೆದ್ದಂತೆ ಲೆಕ್ಕವಾಗುತ್ತದೆ. ಹೀಗೆ ಹೆಚ್ಚು ಮಂದಿ ವಿಫಲರಾದಂತಹ ತಂಡ ಸೋತು, ಇನ್ನೊಂದು ತಂಡ ವಿಜಯಶಾಲಿಯಾಗುತ್ತಾರೆ.

ಈ ಆಟವನ್ನು ವೈಯುಕ್ತಿಕವಾಗಿ ಆಡಿಸುವರು. ಆ ಆಟದಲ್ಲೂ ಇದೇ ನಿಯಮ ಅನುಸರಿಸುವರು.

ಅನುಕೂಲತೆಗಳು

- ದೈಹಿಕ ವ್ಯಾಯಾಮ ದೊರೆಯುತ್ತದೆ.
- ಗುಂಪುವಾರು ಆಡುವುದರಿಂದ ಎಲ್ಲರೂ ಉತ್ತಮವಾಗಿ ಆಡಿದರೆ ಗೆಲ್ಲಲು ಸಾಧ್ಯ ಎಂಬ ಮನೋಭಾವ ಮೂಡುತ್ತದೆ.
- ಕಪ್ಪೆ ಜಿಗಿತದ ಕಲ್ಪನೆ ಮೂಡುತ್ತದೆ.
- ಸೀಟಿಯನ್ನು ಗಮನಿಸಿ ಪ್ರಾರಂಭಿಸಬೇಕಾದುದರಿಂದ ಆಲಿಸುವ ಕ್ರಿಯೆ ವೃದ್ದಿಸುತ್ತದೆ.

5.27 ಅಂತ್ಯಾಕ್ಷರಿ ಆಟ

ಅಂತ್ಯ+ಅಕ್ಷರಿ= ಅಂತ್ಯಾಕ್ಷರಿ ಎಂದು ಅಂತ್ಯಾಕ್ಷರಿ ಪದವನ್ನು ಬಿಡಿಸಿ ಹೇಳುವಾಗ ಈ ಆಟದ ಮೊದಲ ನಿಯಮ ಎಲ್ಲರಿಗೂ ಸಾಮಾನ್ಯವಾಗಿ ತಿಳಿಯುತ್ತದೆ. ಹಾಗಾದರೆ ಈ ಅಂತ್ಯದ ಅಕ್ಷರವನ್ನು ತೆಗೆದುಕೊಂಡು ಅಂತ್ಯಾಕ್ಷರಿ ಆಟವನ್ನು ಹೇಗೆ ಆಡುತ್ತಾರೆ ಎಂಬುದನ್ನು ತಿಳಿಯೋಣ. ಮೊದಲಿಗೆ ಈ ಆಟವನ್ನು ಗುಂಪಿನಲ್ಲಿ ಆಡಬೇಕಾಗಿರುವುದರಿಂದ ಒಂದು ತಂಡದಲ್ಲಿ ಕನಿಷ್ಠ ಐದು ಜನರಿರತಕ್ಕದ್ದು ಉತ್ತಮ. ಈ ಆಟವನ್ನು ಹಲವು ವಿಧಗಳಲ್ಲಿ ಆಡುವರು. ಅವುಗಳಲ್ಲಿ ಮುಖ್ಯವಾಗಿ

1) ಅಂತ್ಯಾಕ್ಷರದಿಂದ ಜಾನಪದ ಹಾಡು ಹಾಡುವುದು.
2) ಅಂತ್ಯಾಕ್ಷರದಿಂದ ಪದ ಹೇಳುವುದು ನಿರ್ಧರಿಸುವ ರೀತಿಯಲ್ಲಿ ಸಮನಾರ್ಥ, ವಿರುದ್ದಾರ್ಥ, ಪ್ರಾಸಪದ, ನದಿ–ಪರ್ವತ ಇತ್ಯಾದಿ ಪದ ಹೇಳುವುದು.
3) ಅಂತ್ಯಾಕ್ಷರದಿಂದ ಪ್ರಾಸಪದಗಳನ್ನು ಹೇಳುವುದು.
4) ಅಂತ್ಯಾಕ್ಷರದಿಂದ ಭಕ್ತಿಗೀತೆ ಅಥವಾ ಚಲನಚಿತ್ರಗೀತೆಗಳನ್ನು ಹಾಡುವುದು. ಒಟ್ಟಾರೆಯಾಗಿ ಈ ವಿಧಗಳೆಲ್ಲವನ್ನು ಹೇಗೆ ಆಡುತ್ತಾರೆ ಎಂಬುದನ್ನು ಈಗ ತಿಳಿಸುತ್ತವೆ.

ಮೊದಲಿಗೆ ಗುಂಪಿನಲ್ಲಿರುವವರು ಒಬ್ಬರು ಸ ರಿ ಗ ಮ ಪ ಎಂದು ಒಂದೊಂದು ಅಕ್ಷರವನ್ನು ಒಬ್ಬೊಬ್ಬರಿಗೆ ಹೇಳುತ್ತಾ ಬರುವರು. ಅದರಲ್ಲಿ ಯಾರಿಗೆ ಪ ಅಕ್ಷರ ಬರುವುದೋ ಅವರು ಆ ಅಕ್ಷರದಿಂದ ಹಾಡು, ಪ್ರಾಸಪದ ಅಥವಾ ವಿರುದ್ಧ ಪದ ಇವುಗಳಲ್ಲಿ ಯಾವ ನಿಯಮವನ್ನು/ವಿಧಾನವನ್ನು ಅಳವಡಿಸಿಕೊಂಡಿರುವರೋ ಅದರ ಪ್ರಕಾರ ಆಡುವರು ಯಾರು ಅಂತ್ಯಾಕ್ಷರದಿಂದ ಹೊಸದೊಂದು ಪದ ಅಥವಾ ಹಾಡನ್ನು ಹೇಳಲು ವಿಫಲರಾಗುವರೋ ಅವರು ಆಟದಿಂದ ಹೊರಗುಳಿಯುವರೋ ಹೀಗೆ ಆಡುತ್ತಾ ಯಾರು ಕೊನೆಯಲ್ಲಿ ಉಳಿಯುವರೋ ಅವರೇ ಜಯಶಾಲಿಗಳು.

<u>ಅನುಕೂಲತೆಗಳು</u>:

- ಪದ ಸಂಪತ್ತು ಹೆಚ್ಚುತ್ತದೆ.
- ಸಂಗೀತದ ಅಭಿರುಚಿ ಬೆಳೆಯುತ್ತದೆ.
- ನೆನಪಿನ ಶಕ್ತಿ ಹೆಚ್ಚಾಗುತ್ತದೆ.
- ನೆನಪಿನಲ್ಲಿರುವುದು ತತ್‌ಕ್ಷಣ ಹೊಳೆಯುತ್ತದೆ.
- ಹಾಡಿನ ಮೂಲಕ ಕಠಿಣ ವಿಷಯ ಕಲಿಯಲು ಅನುಕೂಲವಾಗಿ ಜ್ಞಾನಾರ್ಜನೆ ವೃದ್ಧಿಯಾಗುತ್ತದೆ.

5.28 ಸೈಕಲ್ ಸ್ಪರ್ಧೆದಾಟ

ಸೈಕಲನ್ನು ಓಡಿಸುವುದು ಚಿಕ್ಕಮಕ್ಕಳಿಗೆ ಬಲುಖುಷಿಯ ವಿಚಾರ ಬಹುಶಃ ಸೈಕಲನ್ನು ಓಡಿಸದೇ ಇರುವ ಮಕ್ಕಳಸಂಖ್ಯೆ ತುಂಬಾ ಕಡಿಮೆ. ಏಕೆಂದರೆ ಸೈಕಲ್ ಓಡಿಸುವುದು ನಮ್ಮ ಪುಟಾಣಿಗಳಿಗೆ ತುಂಬಾ ಆಸೆಯಾಗಿರುತ್ತದೆ. ನಂತರದಲ್ಲಿ ನೀವುಗಳೆಲ್ಲರೂ ಓಟದ ಸ್ಪರ್ಧೆಗಳನ್ನು ನೋಡಿಯೇ ಇರಲೇಬೇಕು. ಅಥವಾ ಭಾಗವಹಿಸಿರಬಹುದು. ಆದರೆ ಸೈಕಲ್ ಸ್ಪರ್ಧೆ ಗ್ರಾಮೀಣ ಪ್ರದೇಶದಲ್ಲಿ ವ್ಯಾಪಕವಾಗಿ ಹರಡಿದೆ. ಇದರಿಂದ ನಮಗೆ ತಿಳಿಯುವ ಸ್ಪಷ್ಟ ವಿಷಯವೆಂದರೆ ಈ ಸೈಕಲ್ ಸ್ಪರ್ಧೆಯು ಇಂದು ಅಥವಾ ನಿನ್ನೆಯದಲ್ಲ ಬಹಳ ಹಿಂದಿನಿಂದಲೂ ನಡೆದುಬಂದಂತಹ ಆಟವಾಗಿದೆ. ಹಾಗಾದರೆ ಆ ಆಟವನ್ನು ಹೇಗೆ ಆಡುವರು ಎಂಬುದನ್ನು ಈಗ ತಿಳಿಯೋಣ.

ಸೈಕಲ್ ಓಡಿಸುವ ಸ್ಪರ್ಧೆಯಲ್ಲಿ ಹಲವಾರು ವಿಧಾನಗಳಿದ್ದು ಅವುಗಳಲ್ಲಿ ಪ್ರಮುಖವಾಗಿರುವ ವಿಧಾನಗಳೆಂದರೆ.

- ಸೈಕಲನ್ನು ನಿಧಾನವಾಗಿ ಓಡಿಸುವುದು.
- ಸೈಕಲನ್ನು ವೇಗವಾಗಿ ಓಡಿಸುವುದು.

- ಸೈಕಲನ್ನು ಓಡಿಸುವ ಮಧ್ಯದಲ್ಲೇ ಮೇಲ್ಭಾಗದಲ್ಲಿ ನಿರ್ಧಿಷ್ಟ ಅಂತರದಲ್ಲಿ ಕಟ್ಟಿರುವ ಹಣ್ಣನ್ನು ತಿಂದು ಓಡಿಸುವುದು.
- ಸೈಕಲನ್ನು ನಿಧಾನವಾಗಿ ಓಡಿಸುವುದು ಈ ರೀತಿಯ ಸ್ಪರ್ಧೆಯಲ್ಲಿ ಭಾಗವಹಿಸುವವರು ತಮ್ಮ ಸೈಕಲ್ ನೊಂದಿಗೆ ಆಟದ ಪ್ರಾರಂಭದ ಜಾಗಕ್ಕೆ ಬಂದು ನಿಲ್ಲಬೇಕು. ಈ ಆಟವು ಸಾಮಾನ್ಯವಾಗಿ ಪ್ರಾರಂಭಿಕ ಸ್ಥಾನದಿಂದ ಮುಕ್ತಾಯ 50 ಮೀಟರ್ ಅಂತರದೊಳಗಿರುತ್ತದೆ. ಆಟ ಪ್ರಾರಂಭಿಸಲು ಅಥ್ಲೆಟಿಕ್ಸ ಓಟದಂತೆ ಇಲ್ಲಿಯೂ ಸೀಟಿಯನ್ನು ಊದುವರು. ಅಥವಾ ಯಾವುದಾದರು ಸಂಕೇತದ ಮೂಲಕತಿಳಿಸುವರು. ಸೀಟಿಯನ್ನು ಊದಿದ ನಂತರ ಎಲ್ಲರೂ ಸೈಕಲ್ ತುಳಿಯಲು ಪ್ರಾರಂಭಿಸಬೇಕು. ಸೈಕಲನ್ನು ವೇಗವಾಗಿ ಓಡಿಸದೇ ನಿಧಾನವಾಗಿ ಓಡಿಸಬೇಕು. ಓಡಿಸುವಾಗ ಸೈಕಲ್ ಪೆಡಲ್‌ನಿಂದ ನೆಲವನ್ನು ಮುಟ್ಟುವ ಹಾಗಿಲ್ಲ, ಕಾಲು ಕೆಳಗೆ ಬಿಡಬಾರದು ಬಿಟ್ಟರೆ ಸ್ಪರ್ಧೆಯಿಂದ ಹೊರಗುಳಿಯುತ್ತಾರೆ. ಯಾರು ಸೈಕಲನ್ನು ನಿಧಾನವಾಗಿ ಓಡಿಸುತ್ತಾ ಗುರಿಯನ್ನು ತಲುಪುವರೋ ಅವರೇ ವಿಜಯಶಾಲಿ. ಅಂದರೆ ಯಾರು ಕೊನೆಗೆ ಗುರಿ ತಲುಪುವರೋ ಅವರು ಗೆದ್ದಂತೆ ಒಂದು ವೇಳೆ ಗುರಿಯನ್ನು ತಲುಪಲು ಎಲ್ಲರೂ ವಿಫಲರಾದರೆ ಆಗ ಭಾಗವಹಿಸಿದವರಲ್ಲಿ ಯಾರು ಹೆಚ್ಚು ದೂರ ಉಳಿದು ನಿಧಾನವಾಗಿ ಓಡಿಸಿರುತ್ತಾರೋ ಅವರನ್ನು ಜಯಶಾಲಿಯನ್ನಾಗಿ ಘೋಷಿಸಲಾಗುವುದು.
- ಸೈಕಲನ್ನು ವೇಗವಾಗಿ ಓಡಿಸುವ ಆಟ: ಈ ಸ್ಪರ್ಧೆಯಲ್ಲಿ ಸಾಮಾನ್ಯವಾಗಿ 1 ಕಿ.ಮೀ. ದೂರದ ಕನಿಷ್ಠ ಅಂತರದಿಂದ ಗರಿಷ್ಟ ಎಷ್ಟು ದೂರವಾದರೂ ಇರಬಹುದು. ಆಟದ ಪ್ರಾರಂಭಿಕ ಹಂತದಲ್ಲಿ ಆಟಗಾರರೆಲ್ಲರೂ ಪ್ರಾರಂಭಿಕ ಜಾಗಕ್ಕೆ ಸೈಕಲ್‌ನೊಂದಿಗೆ ಬಂದು ನಿಲ್ಲುವರು. ಚಲಿಸಲು ಸಂಕೇತ ನೀಡಿದ ತಕ್ಷಣ ಸೈಕಲ್ ತುಳಿಯಲು ಪ್ರಾರಂಭಿಸಿ ಯಾರು ವೇಗವಾಗಿ ಓಡಿಸಿ ನಿರ್ದಿಷ್ಟ ಗುರಿಯನ್ನು ಬೇಗ ತಲುಪುವರೋ ಅವರೇ ವಿಜಯಶಾಲಿಗಳು.
- ಸೈಕಲ್ ಓಡಿಸುತ್ತಾ ಹಣ್ಣನ್ನು ತಿನ್ನುವುದು. ಈ ಸ್ಪರ್ಧೆಯಲ್ಲಿ ಸೈಕಲನ್ನು ನಿಧಾನವಾಗಿ ಓಡಿಸುತ್ತಾ ಮೇಲ್ಭಾಗದಲ್ಲಿ ಹಣ್ಣುಗಳನ್ನು ನೇತುಹಾಕಲಾಗಿರುತ್ತದೆ. ಅದನ್ನು ಬಾಯಿಂದ ಸರದಿ ಪ್ರಕಾರ ಸ್ಪರ್ಧೆ ಪ್ರಾರಂಭಿಸಿದಾಗ ಆಟಗಾರರೆಲ್ಲರೂ ನಿಧಾನವಾಗಿ ಓಡಿಸುತ್ತ ಮಧ್ಯದಲ್ಲಿ ಮೇಲೆ ನೇತು ಹಾಕಿರುವ ಹಣ್ಣನ್ನು ತಿನ್ನಬೇಕು. ಒಂದು ವೇಳೆ ಯಾರಾದರೂ ಕಾಲನ್ನು ಬಿಟ್ಟರೆ ಅವರು ಆಟದಿಂದ ಹೊರಗುಳಿಯುತ್ತಾರೆ. ಯಶಸ್ವಿಯಾಗಿ ತಿಂದು ತಲುಪಿದವರು ಅವರು ಜಯಶಾಲಿಯಾಗುತ್ತಾರೆ.

ಈ ಆಟದ ಹಿಂದಿನ ಉದ್ದೇಶಗಳು

- ದೈಹಿಕ ಸಮತೋಲನ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ.
- ಕಾಲುಗಳಿಗೆ ಬಲ ಮತ್ತು ವ್ಯಾಯಾಮ ದೊರಕಿಸುತ್ತದೆ.
- ಹೆಚ್ಚು ಮನರಂಜನೆ ದೊರೆಯುತ್ತದೆ.
- ಸೈಕಲ್‌ನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ಗುರಿ ತಲುಪುವಂತೆ ಮಾಡುವುದಾಗಿದೆ.
- ಸೈಕಲ್ ಓಡಿಸುವ ಕಲೆಗಾರಿಕೆ ತಿಳಿಯಬಹುದು.

5.29 ನಿಂಬೆಹಣ್ಣಿನಾಟ

ಆಧುನಿಕ ಜಗತ್ತಿನಲ್ಲಿ ಕೇವಲ ಯಾಂತ್ರೀಕರಣಗೊಳ್ಳುತ್ತಿರುವ ಇಂದಿನ ದಶಮಾನಗಳಲ್ಲಿ ಗ್ರಾಮೀಣ ಆಟಗಳು ಕಣ್ಮರೆಯಾಗುತ್ತಿವೆ. ಈಗಿನ ಮಕ್ಕಳಿಗೆ ಆಟಗಳೆಂದರೆ (Computer & Laptop) ಮತ್ತು ಮೊಬೈಲ್‌ನಲ್ಲಿ ಬರುವ ಆಟಗಳನ್ನು ಆಟಗಳೆಂದು ಭಾವಿಸಿದಂತಿದೆ. ಆದರೆ ಅವು ಮಿದುಳಿಗೆ ಕೆಲಸ ನೀಡುವ ಆಟಗಳೇ ಹೊರತು ಮನಸ್ಸು ಮತ್ತು ದೇಹಕ್ಕೆ ಆನಂದವನ್ನು ನೀಡುವಂತಹ ಆಟಗಳಾಗಿರುವುದಿಲ್ಲ. ಆಟಗಳೆಂದರೆ ಮಾನವನಿಗೆ ದೇಹ ಮತ್ತು ಮನಸ್ಸಿಗೆ ಮುದವನ್ನು ನೀಡುವಂತಿರಬೇಕು. ಈ ನಿಟ್ಟಿನಲ್ಲಿ ಗ್ರಾಮೀಣ ಕ್ರೀಡೆಗಳು/ಆಟಗಳು ಪ್ರಕ್ರಿಯೆ ಈಗಲೂ ಸಾಗುತ್ತಾ ಬಂದಿದೆ. ಗ್ರಾಮೀಣ ಪ್ರದೇಶದ ವಾತಾವರಣ ಮತ್ತು ಅಲ್ಲಿ ಸಿಗುವ ಸಂಪನ್ಮೂಲದ ಲಭ್ಯತೆಯ ಆಧಾರದ ಮೇಲೆ ದಿನನಿತ್ಯದಲ್ಲಿ ಬಳಸುವ ಹಣ್ಣುಗಳು, ತರಕಾರಿಗಳು, ಬಿಸಾಡಿದ ವಸ್ತುಗಳು ಮುಂತಾದ ವಸ್ತುಗಳನ್ನು ಇಟ್ಟುಕೊಂಡು ಆಟವಾಡಿ ಖುಷಿ ಪಡುತ್ತಾರೆ. ಕಸವಾಗಿರುವ ವಸ್ತುಗಳಿಂದ ರಸಮಯವಾದ ಆಟಗಳನ್ನು ಆಡುವ ಕಲೆ ಹಿಂದಿನ ಗ್ರಾಮೀಣ ಪ್ರದೇಶದವರೆಗೆ ಹಾಸುಹೊಕ್ಕಾಗಿತ್ತು. ಇಂತಹ ಗ್ರಾಮೀಣ ಆಟಗಳಲ್ಲಿ ನಿಂಬೆ ಹಣ್ಣಿನ ಆಟವೂ ಒಂದಾಗಿದೆ.

ಭಾರತದ ಆಯುರ್ವೇದ ಶಾಸ್ತ್ರದ ಗಿಡಮೂಲಿಕೆಗಳಲ್ಲಿ ನಿಂಬೆಹಣ್ಣಿಗೆ ತನ್ನದೇ ಆದ ವಿಶಿಷ್ಟ ಸ್ಥಾನಮಾನವಿದೆ. ಎಲ್ಲಾ ರೋಗಗಳಿಗೂ ರಾಮಬಾಣದಂತೆ ಕೆಲಸ ಮಾಡುವ ಶಕ್ತಿ ಈ ನಿಂಬೆಹಣ್ಣಿಗೆ ಇದೆ. ಇಂತಹ ನಿಂಬೆಹಣ್ಣಗಳನ್ನು ಉಪಯೋಗಿಸಿಕೊಂಡು ಗ್ರಾಮೀಣ ಜನರ ಹಬ್ಬಹರಿದಿನಗಳಲ್ಲಿ ಜಾತ್ರೆಗಳ ಸಂದರ್ಭದಲ್ಲಿ ಊರಿನ ಜನ ಒಟ್ಟಿಗೆ (ಪಂಚಮಿ, ಯುಗಾದಿ ದೀಪಾವಳಿ ದಸರ) ಸೇರಿ ಈ ಆಟವನ್ನು ಆಡುತ್ತಾರೆ. ದಿನವಿಡೀ ಹೊಲದಲ್ಲಿ ದುಡಿದು ಬರುವ ರೈತಾಪಿ ಜನರು ಹಬ್ಬದ ದಿನಗಳಲ್ಲಿ ವಿಶ್ರಾಂತಿಯಿಂದ ಇರುವ ಸಂದರ್ಭದಲ್ಲಿ ಮನಸ್ಸಿಗೆ ಆನಂದವನ್ನುಂಟುಮಾಡಿಕೊಳ್ಳಲು ಮತ್ತು ಬಂದ ಎಲ್ಲಾ ಬಂಧು ಬಾಂಧವರೊಂದಿಗೆ ಬೆರೆತು ಆಡುವ ಕ್ರೀಡೆ ಇದಾಗಿದೆ. ಹೊಲದಲ್ಲಿನ ದಿನನಿತ್ಯದ ಜಂಜಾಟದಿಂದ ಹೊರಬರುವ ರೈತಾಪಿ ವರ್ಗದ ಜನರು, ಖುಷಿಯಾಗಿ ತಮ್ಮ ಸಂಗಡಿಗರೊಂದಿಗೆ ಸೇರಿ ಬೆಟ್ಟಿಂಗ್‌ಗಳನ್ನು ಕಟ್ಟಿಕೊಂಡು ತಮ್ಮ ಸಾಮರ್ಥ್ಯವನ್ನು ತೋರಿಸಲು ಉತ್ಸಾಹಿಗಳಾಗಿ ಪಾಲ್ಗೊಳ್ಳುವ ಆಟ ಇದಾಗಿದೆ.

ಈ ನಿಂಬೆಹಣ್ಣಿನ ಆಟ ಅಪ್ಪಟ ಉತ್ತರ ಕರ್ನಾಟಕದ ಶೈಲಿಯ ವಿಶಿಷ್ಠ ಆಟವಾಗಿದೆ. ಗೊತ್ತು ಪಡಿಸಿದ ದೂರಕ್ಕೆ ನಿಂಬೆಹಣ್ಣನ್ನು ಎಸೆಯುವ ಮೂಲಕ ತಮ್ಮ ಸಾಮರ್ಥ್ಯ ತೋರಿಸುವ ಕ್ರೀಡೆ ಇದಾಗಿದೆ.

ಬೇಕಾಗುವ ಸಾಮಾಗ್ರಿಗಳು:

1. 5–6 ನಿಂಬೆಹಣ್ಣುಗಳು ಬೇಕಾಗುತ್ತವೆ.
2. ಈ ಆಟವನ್ನು ನಾಲ್ಕರಿಂದ ಆರು ಜನ ಆಡಬಹುದಾಗಿದೆ.
3. ಈ ಆಟದಲ್ಲಿ ಒಂದು ಗೊತ್ತು ಪಡಿಸಿದ ದೂರವನ್ನು ಎಷ್ಟು ನಿಂಬೆಹಣ್ಣಿನ ಕೈಗಳಿಗೆ ಎಸೆಯುತ್ತಾನೆ ಎಂಬುದು ಬಹಳ ಮುಖ್ಯವಾಗಿರುತ್ತದೆ.
4. ಗೊತ್ತುಪಡಿಸಿದ ದೂರವೆಂದರೆ–ಊರಿನ ಮದ್ಯದ ದೇವಸ್ಥಾನದಿಂದ ದೇವರ ಗುಡಿ, ಹೊರಗಿನಬೀದಿ ದೀಪ ಮುಂತಾದವುಗಳು. ಒಂದು ಗೊತ್ತು ಪಡಿಸಿದ ದೂರವನ್ನು ಇಷ್ಟು ನಿಂಬೆಹಣ್ಣುಗಳಿಗೆ ಎಸೆಯಬೇಕಾಗುವುದನ್ನು ಮೊದಲೇ ತಿಳಿಸಲಾಗುತ್ತದೆ. ಎಸೆಯುವ ವ್ಯಕ್ತಿಯ ಸಾಮರ್ಥ್ಯದ ಮೇಲ ಅವರು ಬೆಟ್ಟಿಂಗ್ ಕಟ್ಟಿಕೊಳ್ಳುತ್ತಾರೆ. ಬೆಟ್ಟಿಂಗ್ ಎಂದರೆ 100 ಊಟ್‌ವೇಸ್ ಮಾಡುವುದು ಡಿಪ್ಸ್ ಹೊಡೆಯುವುದು ಹೋಟೇಲ್‌ನಲ್ಲಿ ತಿನಿಸುವುದು ಹಣವನ್ನು ಕೊಡುವುದು ಒಂದು ಕಿ.ಮೀ. ಓಡುವುದು ಕುಂಟುತ್ತಾ ಓಡುವುದು. ಷರತ್ತಿನ ಕೈಗಳಿಗೆ ಅವಕಾಶದಾರಿ ಎಸೆಯಲಾಗದವನು ಮೇಲಿನ ಕ್ರಿಯೆಗಳನ್ನು ಬೆಟ್ಟಿಂಗ್ ರೂಪದಲ್ಲಿ ಮಾಡಬೇಕಾಗುತ್ತದೆ. ಹೀಗೆ ಊರಿನ ಉಳಿದ ಆಟಗಾರರ ಗುಂಪು ಸೇರಿಕೊಂಡು ಆಟವನ್ನು ಮುಂದುವರೆಸುತ್ತಾರೆ.

5.30 ಬೊಟ್ಟು ಇಡುವ ಆಟ

ದೃಷ್ಠಿಯಿಂದ ನೋಡಿದ ವಿವರಗಳನ್ನು ಜ್ಞಾಪಕವಿಟ್ಟು ಪತ್ತೆ ಮಾಡುವ ಆಟವೇ ಬೊಟ್ಟಿಡುವ ಆಟ.

ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನಿಮ್ಮನ್ನು ಹೊರತು ಪಡಿಸಿ ಬೇರೆಯವರನ್ನು ನಿಮ್ಮಿಂದ ನಿರ್ಧಿಷ್ಟ ಅಂತರದಲ್ಲಿ ನಿಲ್ಲಿಸಿ ಅವರ ಹೇಗೆ ಬೊಟ್ಟನ್ನು ಇಡಲು ಹೇಳಿದರೆ ಇಡುವುದು ಬಹಳ ಸುಲಭವೇ? ಹಾಗಾದರೆ ಇದೇ ಮಾದರಿ ಅನುಸರಿಸಿ ಆಟವಾಡಿದರೆ ಹೇಗಿರುತ್ತದೆ. ಹಾಗಾದರೆ ಬನ್ನಿ ಈಗ ಹೇಗೆ ಯವ ನಿಯಮಗಳನ್ನು ಅನುಸರಿಸಿ ಆಡಬೇಕು. ಎಂಬುದನ್ನು ತಿಳಿಯೋಣ.

ಈ ಆಟವನ್ನು ಆಡಲು ಎಷ್ಟು ಜನರಿದ್ದರೂ ಆಗುತ್ತದೆ. ಈ ಆಟದಲ್ಲಿ ಯಾರು ಭಾಗವಹಿಸಲು ಇಚ್ಚಿಸುವರೋ ಅವರು ಮೊದಲೇ ಹೆಸರು ನೋಂದಾಯಿಸಿಕೊಳ್ಳಬೇಕು ಅಥವಾ ತೀರ್ಪುಗಾರರು ಒಬ್ಬರು ಆಡಿದ ನಂತರ ಮತ್ತೊಬ್ಬರು ಆಡುವಿರಿ ಎಂದು ಕೇಳಿದಾಗ ಮುಂದೆ ಬಂದು ನಿಲ್ಲುವದರ ಮೂಲಕ ಆಟದಲ್ಲಿ ಭಾಗವಹಿಸಬಹುದು.

ಮೊದಲೇ ತಿಳಿಸಿದಂತೆ ಆಟಗಾರರಿಂದ ನಿರ್ದಿಷ್ಟ ದೂರದಲ್ಲಿ ಮಹಿಳೆಯ ಮುಖದ ಭಾವಚಿತ್ರವನ್ನು ಗೋಡೆಗೆ ಅಂಟಿಸಬೇಕು ಅಥವಾ ಗೋಡೆಯಲ್ಲಿ ತೂಗು ಹಾಕಬೇಕು.

ಆಟದಲ್ಲಿ ಭಾಗವಹಿಸುವವರು ಕಣ್ಣಿಗೆ ತೀರ್ಪುಗಾರರು ಕಣ್ಣುಕಾಣದಂತೆ ಒಂದು ಬಟ್ಟೆಯನ್ನು ಕಟ್ಟುವರು. ನಂತರ ಆಟಗಾರನು ಮುಂದೆ ನಿರ್ದಿಷ್ಟ ಅಂತರದವರೆಗೂ ಹೆಜ್ಜೆ ಹಾಕಿ ಭಾವಚಿತ್ರದ ಹಣೆಗೆ ಬೊಟ್ಟು ಅಂಟಿಸಬೇಕು. ಹೀಗೆ ಪಾಲ್ಗೊಂಡ ಆಟಗಾರರಲ್ಲಿ ಯಾರು ಸರಿಯಾಗಿ ಹಣೆಯ ಮಧ್ಯಭಾಗದಲ್ಲಿ ಅಂಟಿಸಿರುತ್ತಾರೋ ಅವರೇ ಜಯಶಾಲಿಯಾಗುವರು.

ಇತ್ತೀಚೆಗೆ ದೂರದರ್ಶನದ ಕೆಲವು ಕಾರ್ಯಕ್ರಮಗಳಲ್ಲಿಯೂ ದಂಪತಿಗಳ ನಡುವೆ ಆಟವನ್ನು ಆಡಿಸಿ ಮನರಂಜನೆಯನ್ನು ನೀಡುವರು. ಒಟ್ಟಾರೆ ಬೊಟ್ಟನ್ನು ಇಡಿಸಿಕೊಂಡ ಭಾವಚಿತ್ರದ ಮುಖವನ್ನು ಕೊನೆಗೆ ನೋಡುವುದೇ ಬಹಳ ಹಾಸ್ಯಮಯವಾಗಿರುತ್ತದೆ. ಎಂದು ತಿಳಿಯಬಹುದಾಗಿದೆ.

<u>**ಅನುಕೂಲತೆಗಳು:**</u>

- ಉತ್ತಮವಾದ ಮನೋರಂಜನೆ ದೊರೆಯುತ್ತದೆ.
- ಕನ್ನಡಿ ಮುಂದೆ ನಿಂತು ಮತ್ತು ಕನ್ನಡಿ ಹೊರುತುಪಡಿಸಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಬೊಟ್ಟು ಇಡುವುದರ ವ್ಯತ್ಯಾಸ ತಿಳಿಯುತ್ತದೆ.
- ಅಂತರದೃಷ್ಟಿ ಹೆಚ್ಚಾಗುತ್ತದೆ.
- ಜ್ಞಾಪಕ ಶಕ್ತಿ ವೃದ್ಧಿಯಾಗುತ್ತದೆ.

5.31 ಖೋ ಖೋ ದಾಟ

ಅಪ್ಪಟ ಭಾರತೀಯ ಗ್ರಾಮೀಣ ಕ್ರೀಡೆಯಾದ ಖೋ–ಖೋ ಆಟವು ಯಾವುದೇ ತರವಾದ ಸಲಕರಣಾರಹಿತವಾದ ಆಟವಾಗಿದ್ದು ಹಾಗೂ ಹೆಚ್ಚು ಚಾಕಚಕ್ಯತೆಯಿಂದ ಕೂಡಿದ್ದ ಆಟವಾದ ಅದು ಮಹಾರಾಷ್ಟ್ರ ರಾಜ್ಯದಲ್ಲಿ ಜನ್ಮತಾಳಿತು. ಮೂಲತಃ ಗ್ರಾಮೀಣ ಜನರು ಹಬ್ಬ ಹರಿದಿನಗಳಲ್ಲಿ ತಮ್ಮ ಮನರಂಜನೆಗಾಗಿ ಕುಟುಂಬವರ್ಗದ ಜನರು ಹಾಗೂ ಸಣ್ಣ ಮಕ್ಕಳು ಇದನ್ನು ಆಡುತ್ತಿದ್ದರು. ದೇವಾಲಯಗಳಲ್ಲಿ ಯುವಕರು ಪ್ರತಿಕಂಬಕ್ಕೆ ಒಬ್ಬರಂತೆ ನಿಂತು ಒಬ್ಬರಿಂದ ಒಬ್ಬರಿಗೆ ಉಪ್ಪು ಕೊಟ್ಟು ಕಂಬದಿಂದ ಕಂಬಕ್ಕೆ ಬದಲಾವಣೆಯಾಗುತ್ತಿದ್ದರು. ಇದಕ್ಕೆ ಉಪ್ಪುಪ್ಪ ಎಂಬ ಹೆಸರಿನಿಂದ ಕರೆಯುತ್ತಿದ್ದರು. ಬಹುಶಃ ಈ ಒಂದು ಮಾದರಿಯಲ್ಲೇ ಖೋ–ಖೋ ಆಟಕ್ಕೆ ಪುನಃ ಡೆಕನ್ ಜಮಖಾನ್ ಸಂಸ್ಥೆ ಹಾಗೂ ಹನುಮಾನ್ ವ್ಯಾಯಾಮ ಶಾಲೆಯವರು ಕ್ರಿ.ಶ 1914 ರಲ್ಲಿ ಕೆಲವು ನಿಯಮಗಳನ್ನು ರಚಿಸಿದರು. ನಿಯಮಬದ್ಧವಾದ ರಾಷ್ಟ್ರೀಯ ನಿಯಮಗಳನ್ನು ಒಳಗೊಂಡ ಖೋ–ಖೋ ಆಟದ ಬಗ್ಗೆ ನಿಮಗೆ ತಿಳಿದೇ ಇರುತ್ತದೆ. ಆದ್ದರಿಂದ ಈ ಖೋ–ಖೋ ಆಟ ಬೆಳವಣಿಗೆಗೆ

ಪರೋಕ್ಷವಾಗಿ ಕಾರಣವಾದಂತಹ ಕೆಲವು ಗ್ರಾಮೀಣ ಖೋ-ಖೋ ಪೂರಕ ಆಟಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ.

ನಿಂತು ಖೋ(Standing Kho) ಕೊಡುವುದು:

ಆಟಗಾರರಲ್ಲಿ ಎರಡು ಗುಂಪುಮಾಡಿ, ಒಂದು ಗುಂಪಿನವರಿಗೆ ಕೈ ಕೈಹಿಡಿದು ಒಂದು ವರ್ತಲವನ್ನು ರಚಿಸಲು ಹೇಳಬೇಕು. ನಂತರ ಇನ್ನೊಂದು ಗುಂಪಿನವರು ಒಬ್ಬರ ಹಿಂದೆ ಒಬ್ಬರು ಸುಮಾರು ಒಂದು ಮೀಟರ್ ಅಂತರದಲ್ಲಿ ನಿಂತಿರಬೇಕು. ಸರದಿ ಪ್ರಕಾರ ಒಬ್ಬನು ಒಳಗೆ ಇನ್ನೊಬ್ಬನು ಹೊರಗೆ ನಿಂತಿರಬೇಕು. ಸಂಜೆಯಾದೊಡನೆ ಹೊರಗೆ ಇದ್ದವನು ಒಳಗಿನವನನ್ನು ಮುಟ್ಟಲು ಹೋಗಬೇಕು ಆಗ ತಪ್ಪಿಸಿಕೊಳ್ಳುವವನು ವರ್ತುಲದ ಸುತ್ತು ಹಾಕುವನು. ತನಗೆ ತಪ್ಪಿಸಿಕೊಳ್ಳಲು ಸಾಧ್ಯವಾಗದಿದ್ದಾಗ (ಸಾಕಾದಾಗ) ಮುಂದೆ ಬಂದು ಮುಂದಿನ ವರ್ತುಲದವನಿಗೆ ಖೋ ಕೊಡುವನು ಆಗ ಅವನ ಹಿಂದಿನವನು ಖೋ ಪಡೆದವನು ಓಡುವನು ಮುಟ್ಟುವವನು ಓಡುವವನನ್ನು ಮುಟ್ಟಿದರೆ ಓಡುವವನು ಮುಟ್ಟುವವನಾಗುತ್ತಾನೆ. ಮುಟ್ಟುವವನು ಓಡುವವನಾಗುತ್ತಾನೆ. ಹೀಗೆ ಆಟವನ್ನು ಮುಂದುವರಿಸಬೇಕು.

ಈ ಆಟದ ಪ್ರಮುಖ ನಿಯಮಗಳೆಂದರೆ:

- ಮುಟ್ಟುವವನು ಓಡುವವನನ್ನು ಮುಟ್ಟಿದರೆ ಅದೇ ಕ್ಷಣ ಮುಟ್ಟುವವನು ಓಡಬೇಕು. ಆಗ ಓಡುವವನು ಮುಟ್ಟಿದವನನ್ನು ಮುಟ್ಟಬೇಕು.
- ಮುಂದೆ ಖೋ ಕೊಟ್ಟಾಗ ಹಿಂದಿನವನು ಓಡಬೇಕು. ಖೋ ಯಾವಾಗಲೂ ಮುಂದೆ ಬಂದು ಖೋ ಎಂದು ಗಟ್ಟಿಯಾಗಿ ಹೇಳಬೇಕು.
- ಯಾರು ವರ್ತುಲದ ಒಳಗಿನಿಂದ ದಾಟಬಾರದು ಮತ್ತು ಸೀಮೆಯನ್ನು ದಾಟಿ ಹೊರಗೆ ಹೋಗಬಾರದು.

ಖೋ-ಖೋ ರಿಲೇ:

ಖೋ-ಖೋ ಆಟದ ಅಂಕಣದಂತೆ ಕೂಡುವವರ ಸಲುವಾಗಿ ಪಟ್ಟಿಗಳು ಇರಬೇಕು. ಈ ಪಟ್ಟಿಗಳ ಎರಡೂ ತುದಿಗಳಲ್ಲಿ ಎರಡೆರಡು ಲೋಡುಗಳನ್ನು (ಕಂಬಗಳ ಬದಲು) ನಿಲ್ಲಿಸಿರಬೇಕು. ಪ್ರತಿ ಪಂಗಡದ 1ನೇ ಯವನು ಕೈಗೆ ಕರವಸ್ತ್ರ ಕಟ್ಟಿಕೊಂಡು ಒಂದು ತುದಿಯ ಲೋಡಿನ ಹತ್ತಿರ ನಿಂತಿರುತ್ತಾರೆ. ಉಳಿದ ಆರು ಆಟಗಾರರು ಪಟ್ಟಿಯಲ್ಲಿ ಸಮಾನ ಅಂತರದಲ್ಲಿ ಖೋ ಆಟದಲ್ಲಿ ಕೂಡುವಂತೆ ಕೂಡುತ್ತಾರೆ. ಈ ಆಟದಲ್ಲಿ ತಪ್ಪಿಸುವವರು ಇರುವುದಿಲ್ಲ.

ಆಟ ಪ್ರಾರಂಭದ ದಿನ ನಿಂತಿರುವ ಪ್ರತಿ ಪಂಗಡದ 1ನೇ ಆಟಗಾರನು ಓಡಿ ಹೋಗಿ 2ನೇಯವನ ಬೆನ್ನಿಗೆ ಖೋ ಕೊಡುತ್ತಾನೆ. ನಂತರ 2ನೇಯವನಿಗೆ ಅವನು 4ನೇಯವನಿಗೆ ಖೋ

ಕೊಡುವುದು ಕ್ರಮವಾಗಿ ಮುಂದುವರೆಯುತ್ತದೆ. ಕೊನೆಯ 2ನೇ ಯವನಿಗೆ ಖೋ ಬಿದ್ದ ಮೇಲೆ ಅವನು ತನ್ನ ಹತ್ತಿರವಿದ್ದ ಲೋಡನ್ನು ಸುತ್ತುವರಿದು, ನೇರವಾಗಿ ಓಡುತ್ತಾ ಇನ್ನೊಂದು ತುದಿಯಲ್ಲಿಯ ಲೋಡನ್ನು ಸುತ್ತಿ 1ನೇಯವನಿಗೆ ಖೋ ಕೊಡುವನು. ಆಗ 1ನೇಯವನು 2ನೇ ಯವರಿಗೆ ಅವನು 3ನೇಯವನಿಗೆ ಖೋ ಕೊಡುತ್ತಾನೆ. ಆಟ ಮುಂದುವರೆಯುತ್ತದೆ. ಹೀಗೆ ಪಂಗಡದ ಎಲ್ಲರೂ ಖೋ ಕೊಡುವುದನ್ನು ಮುಗಿಸಬೇಕು. ಬಂದಾಗ ಕೈ ಎತ್ತಿನಿಲ್ಲಬೇಕು. ಯಾವ ಪಂಗಡವು ಮೊದಲು ಆಟ ಮುಗಿಸುತ್ತದೆಯೋ ಅವರು ವಿಜಯಶಾಲಿಗಳಾಗುತ್ತಾರೆ.

<u>ಪ್ರಮುಖ ನಿಯಮಗಳು:</u>

1. ಖೋ ಕೊಡುವಾಗ ಬೆನ್ನು ಮುಟ್ಟುವದು ಮತ್ತು ಖೋ ಅನ್ನುವುದು ಏಕಕಾಲಕ್ಕೆ ನಡೆಯಬೇಕು.
2. ಮೇಲೆ ಹೇಳಿದಂತೆ ಖೋ ಸಿಕ್ಕದ ಹೊರತು ಕುಳಿತವನು ಏಳುವಂತಿಲ್ಲ.
3. ಪ್ರಾರಂಭ ಮಾಡಿದವನು ತನ್ನ ಮೊದಲಿಗೆ ಸ್ಥಳಕ್ಕೆ ಬಂದು ಕೈ ಎತ್ತಿದಾಗ ಆಟ ಮುಗಿದಂತೆ.
4. ಅವನು ಬಲ ಮುಂಗೈಗೆ ಕರವಸ್ತ್ರ ಕಟ್ಟಿರಬೇಕು.
5. ಲೋಡು ಬಿದ್ದರೆ ಬೀಳಿಸಿದವನು ಅದನ್ನು ನಿಲ್ಲಿಸಿ ಆಟ ಮುಂದುವರಿಸಬೇಕು.

<u>5.32 ಕಬ್ಬಡಿ ಆಟ</u>

ಕಬ್ಬಡಿ ಆಟವು ಪುರಾತನ ಸಂಸ್ಕೃತಿಯ ಅಪ್ಪಟ ಭಾರತೀಯ ಕ್ರೀಡೆಯಾಗಿದೆ. ಸುಮಾರು ನಾಲ್ಕು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. ಈ ಅಟವು ಪುರಾಣಗಳ ಇತಿಹಾಸವನ್ನು ಹೊಂದಿದೆ. ಶ್ರೀ ಕೃಷ್ಣ ಪರಮಾತ್ಮನ ಕಾಲದಲ್ಲಿ ಈ ಆಟವನ್ನು ಆಡುತ್ತಿರುವ ಬಗ್ಗೆ ಸಾಕಷ್ಟು ಕುರುಹುಗಳು ದೊರೆತಿವೆ.

ಆದಿ ಮಾನವನು ಪ್ರತಿನಿತ್ಯ ತನ್ನ ವೈಯುಕ್ತಿಕ ಹಾಗೂ ತನ್ನ ಗುಂಪು ಪರಿವಾರದ ರಕ್ಷಣೆಯ ಸಲುವಾಗಿ, ಬಂದೊದಗುವ ಸಮಸ್ಯೆಯನ್ನು ದೈಹಿಕ ಹಾಗೂ ಮಾನಸಿಕ ಬಲಗಳ ಹೊಂದಾಣಿಕೆಯಿಂದ ಬಗೆ ಹರಿಸಿಕೊಳ್ಳುತ್ತಿದ್ದರು. ಮನುಷ್ಯ ತನ್ನ ರಕ್ಷಣೆಗೋಸ್ಕರ ತಾನು ಅನುಸರಿಸಿದ ರಕ್ಷಣಾ ಕೌಶಲ್ಯಗಳ ಮಾದರಿಯಲ್ಲಿ ರೂಪಗೊಂಡ ಈ ಕ್ರೀಡೆ ಇಂದು ಭಾರತೀಯ ಹಲವಾರು ಆಟಗಳಲ್ಲಿ ಅತ್ಯಂತ ಪ್ರಮುಖ ಆಟವಾಗಿದೆ. ಇದು ವ್ಯಕ್ತಿಯ ನೇರ ದೈಹಿಕ ಸಂಪರ್ಕಗಳಿಂದ ಹೋರಾಡುವ ಆಟವಾದದ್ದರಿಂದ ಈ ಆಟವು ಬೇರೆ ಎಲ್ಲಾ ಆಟಗಳಿಗೆ ಬೇಕಾದ ವೇಗದ ಚಲನೆ, ಸ್ಥೈರ್ಯ, ಶಕ್ತಿ, ಸಾಮರ್ಥ್ಯವನ್ನು ಮೂಲಭೂತವಾಗಿ ಬೆಳೆಸಲು ಸಹಾಯಕವಾಗಿದೆ.

ಗ್ರಾಮಾಂತರ ಪ್ರದೇಶದಲ್ಲಿ ಹುಟ್ಟಿ ಬೆಳೆದ ಆಟಕ್ಕೆ ಒಂದು ರೂಪುರೇಷೆಯನ್ನು ಕೊಟ್ಟವರು, ಮಹಾರಾಷ್ಟ್ರದ ಅಮರಾವತಿಯ ಹನುಮಾನ್ ವ್ಯಾಯಾಮ ಶಾರೀರಿಕ ಮಂಡಳಿಯವರು ಗ್ರಾಮಾಂತರ ಪ್ರದೇಶದಿಂದ ಹುಟ್ಟಿ ಬೆಳೆದು ಏಷ್ಯಾದ ಮಟ್ಟಕ್ಕೆ ಬೆಳೆದು ನಿಂತ ಈ ಆಟಕ್ಕೆ

ಏಷ್ಯಾದಾದ್ಯಂತ ವಿವಿಧ ಹೆಸರಿನಿಂದ ಕರೆಯಲಾಗುತ್ತದೆ. ಹೀಗೆ ಅಂತಾರಾಷ್ಟ್ರೀಯ ಮಟ್ಟವನು ತಲುಪಿ ವಿಶ್ವಕಪ್ ಕಬ್ಬಡಿ ಪಂದ್ಯಾವಳಿ ನಡೆಯುವುದು. ಆಟದ ಬಗ್ಗೆ ಮಾಹಿತಿ ನೀಡುವುದು ನನ್ನ ಉದ್ದೇಶವಲ್ಲ. ಕಬ್ಬಡಿ ಕ್ರೀಡೆಯು ಒಂದು ನಿರ್ದಿಷ್ಟ ಹಂತಕ್ಕೆ ಬಂದು ತಲುಪಲು ಹಲವಾರು ಮಾದರಿಯ ಗ್ರಾಮೀಣ ಕ್ರೀಡೆಗಳು ರೂಪತಾಳಿವೆ. ಆದ್ದರಿಂದ ದಿನಗಳಲ್ಲಿ ಇದ್ದ ಗ್ರಾಮೀಣ ಕ್ರೀಡೆಗಳ ಮೇಲುಕನ್ನು ಹಾಕೋಣ ಬನ್ನಿ.

ಜೆಮಿನಿ: ಈ ವಿಧಾನದಲ್ಲಿ ಆಟವಾಡುತ್ತಿದ್ದ ತಂಡಗಳ ಆಟಗಾರರು ಒಂದುಬಾರಿ ಔಟ್ ಆಗಿ ಹೊರಗಡೆ ಹೋದ ಮೇಲೆ ನಂತರ ಹೋದ ಆಟಗಾರನ ತಂಡದವರು ಯಾವುದೇ ಅಂಕಗಳಿಸಿದರೂ ಕೂಡ ಆತ ಒಳಗೆ ಬರುವಂತಿರಲಿಲ್ಲ. ಆದರೆ ಅವರ ಅಂಕಣದ ಎಲ್ಲರೂ ಔಟ್ ಆಗಿ ಅಂಕಣಖಾಲಿ ಯಾದಾಗ ಎಲ್ಲರೂ ಒಟ್ಟಿಗೆ ಒಳಗೆ ಬರುವ ನಿಯಮವಿತ್ತು. ಈ ಆಟದಲ್ಲಿ ಒಂದು ಬದಿಯಲ್ಲಿ 9 ಜನರಂತೆ ಆಟಗಾರರಿರುತ್ತಿದ್ದರು.

ಈ ಆಟಕ್ಕೆ ನಿರ್ದಿಷ್ಟ ಸಮಯವನ್ನು ಇಟ್ಟು ಆಡುತ್ತಿರಲಿಲ್ಲ. ಪಂದ್ಯವನ್ನು ಪ್ರಾರಂಭಿಸಿದಾಗ ಯಾವ ತಂಡ ಇನ್ನೊಂದು ತಂಡದ ಅಂಕಣವನ್ನು ಬೇಗ ಖಾಲಿ ಮಾಡುತ್ತಿತ್ತೋ ಆ ತಂಡ ಜಯಶಾಲಿಯಾಗುತ್ತಿತ್ತು.

ಅಮರ:– ಈ ವಿಧಾನವು ಜೆಮಿನಿಯ ನಿಯಮಕ್ಕೆ ತದ್ವಿರುದ್ಧವಾದ ಆಟವಾಗಿದೆ. ಅಂದರೆ ಈ ಆಟದಲ್ಲಿ ಔಟ್ ಆದವನು ಹೊರಗೆ ಹೋದರೆ ಆಟ ಮುಗಿಯುವವರೆಗೂ ತಮ್ಮ ಅಂಕಣದಲ್ಲೇ ಇರುತ್ತಿದ್ದರು. ಆದರೆ ತಂಡಗಳ ಪಡೆದ ಅಂಕಣಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಈ ಆಟವನ್ನು ಒಂದು ನಿರ್ದಿಷ್ಟ ಅಂಕಗಳನ್ನು ಇಟ್ಟು ಆ ಅಂಕವನ್ನು ಮೊದಲು ಯಾವ ತಂಡ ಪಡೆದುಕೊಳ್ಳುತ್ತದೋ ಆ ತಂಡ ಜಯಶಾಲಿ ಎಂದು ಅಥವಾ ನಿರ್ದಿಷ್ಟ ಸಮಯಕೊಟ್ಟು ನಿರ್ದಿಷ್ಟ ಸಮಯದ ನಂತರ ಯಾರ ತಂಡದ ಅಂಕ ಹೆಚ್ಚಿರುವುದೋ ಆ ತಂಡವನ್ನು ಜಯಶಾಲಿ ಎಂದು ಘೋಷಿಸುತ್ತಿದ್ದರು.

ಸಂಜೀವಿನಿ:– ಇಂದಿನ ಆಧುನಿಕ ಕಬ್ಬಡಿ ಆಟಕ್ಕೆ ಕೆಲವು ನಿಯಮಗಳನ್ನು ಆಳವಡಿಸಿಕೊಳ್ಳಲು ಈ ಸಂಜೀವಿನಿ ಮಾದರಿಯ ಆಟಗಳು ಪ್ರೇರಕವಾಗಿವೆ. ಈ ವಿಧಾನದಲ್ಲಿ ಆಟಗಾರರು ಔಟ್ ಆಗಿ ಹೊರಬಂದು ನಂತರ ಸಂಬಂದಿಸಿದ ಆತನ ತಂಡದವರು ಮತ್ತೇ ಆಟಗಾರ ಒಳಗೆ ಬರುವ ಅವಕಾಶವಿತ್ತು. ಈ ಪಂದ್ಯಗಳನ್ನು ಸಮಯದ ಆಧಾರದ ಮೇಲೆ ಆಡಿಸಲಾಗುತ್ತದೆ. ಹೀಗೆ ಆಧುನಿಕ ಕಬ್ಬಡಿಗೆ ಪ್ರೇರಕವಾದ ಈ ಸಂಜೀವಿನಿ ವಿಧಾನ ತನ್ನ ಬೆಳವಣಿಗೆ ಅವಧಿಯಲ್ಲಿ ವಿವಿಧ ಶೈಲಿಗಳಲ್ಲಿ ಆಡಲ್ಪಟ್ಟಿತು.

1. ಸರ್ಕಲ್ ಕಬ್ಬಡಿ
2. ಝುಂಡಾ ಕಬ್ಬಡಿ
3. ಘೋಡಾ ಕಬ್ಬಡಿ

4. ಚುಡು ಗುಡು
5. ಹ.ಡುಡುಡು
6. ಹು.ತುತುತು
7. ಬಂಗಾಲಿ ಕಬ್ಬಡಿ.

ಈಗ ಮೇಲ್ಕಂಡ ವಿವಿಧ ಶೈಲಿಗಳನ್ನು ವಿವರವಾಗಿ ಈ ಕೆಳಗಿನಂತೆ ತಿಳಿಯೋಣ.

1. ಸರ್ಕಲ್ ಕಬ್ಬಡಿ:- ವೃತ್ತಾಕಾರದ ಅಂಕಣದಲ್ಲಿ ಮಧ್ಯದ ಗೆರೆಯನ್ನು ಹಾಕಿ ವೃತ್ತವನ್ನು ಎರಡು ಭಾಗಗಳಾಗಿ ವಿಂಗಡಿಸಿ ಅರ್ಹತ ಗೆರೆಯಾಗಿ ಒಂದು ಸಣ್ಣ ವೃತ್ತವನ್ನು ದೊಡ್ಡ ವೃತ್ತದ ಒಳ ಭಾಗಕ್ಕೆ ಹಾಕಿ ಒಂದು ಹಂತದಲ್ಲಿ 3 ಆಟಗಾರರಂತೆ ಒಟ್ಟು 16ಜನ ಆಟಗಾರರು ಆಡುತ್ತಿದ್ದರು. ಈ ಆಟದಲ್ಲಿ ಒಂದು ತಂಡದಲ್ಲಿ 8 ಜನ ದಾಳಿಗಾರರು ಹಿಡಿತಗಾರರೆಂದು ವಿಭಾಗಿಸಲ್ಪಡುತ್ತಿದ್ದರು.
   ಹೋರಾಟದಲ್ಲಿ ದಾಳಿಗಾರರನ್ನು ಒಬ್ಬರೇ ಹಿಡಿಯುವ ಪದ್ಧತಿ ಇತ್ತು. ಅವನು ತಪ್ಪಿಸಿಕೊಂಡರೆ ಮತ್ತೊಬ್ಬ ಹಿಡಿಯುತ್ತಿದ್ದ.
   ಅಂದರೆ ಏಕಕಾಲದಲ್ಲಿ ಒಬ್ಬನಿಗಿಂತ ಹೆಚ್ಚಿಗೆ ಹಿಡಿತಗಾರರು ಹಿಡಿತದಲ್ಲಿ ಭಾಗಿಯಾಗುವಂತಿರಲಿಲ್ಲ ಅಂದರೆ ಅಂಕ ನಿರ್ಧರಿಸುವಾಗ ಒಂದು ಅಂಕಮೊತ್ತ ದಾಳಿಗಾರನ ಕಡೆಯವರ ಖಾತೆಗೆ ಜಮವಾಗುತ್ತಿತ್ತು. ಔಟ್ ಆದವರು ಹೊರಗೆ ಹೋಗುವ ನಿಯಮವಿರಲಿಲ್ಲ.
2. ಝುಂಡಾ ಕಬ್ಬಡಿ:- ಈ ಆಟದ ಅಂಕಣ ಅಂಡಾಕಾರದಲ್ಲಿ ಇರುತ್ತಿತ್ತು. ಒಂದು ಬದಿಯಲ್ಲಿ 9ಜನ ಆಟಗಾರರು ಇರುತ್ತಿದ್ದರು. ಈ ಆಟದ ಅಂಕಣದಲ್ಲಿ ಒಳಗಿನ ಅರ್ಹತಾ ವೃತ್ತದ ಬದಲು ಅರ್ಹತಗೆರೆ (ಬಾಕ್‌ಲೈನ್) ಗಳಿದ್ದವು. ಅಂಕಣದ ಕೋಣೆಯಲ್ಲಿ ಇದ್ದ ಅರ್ಧವೃತ್ತಾಕೃತಿ ಗೆರೆಗೆ ಅಂತಿಮಗೆರೆ (ಎಂಡ್‌ಲೈನ್) ಎಂದು ಕರೆಯಲಾಗಿತ್ತು. ಅಂತಹ ಪ್ರತಿ ಬದಿಯಲ್ಲೂ ಅರ್ಹತಾ ಗೆರೆಗಳ ತುದಿಗೆ ಹಾಗೂ ಅಂತಿಮಗೆರೆಯ ಮಧ್ಯದಲ್ಲಿ ಒಂದೊಂದು ಧ್ವಜಗಳಿರುತ್ತಿದ್ದವು. (ಒಂದು ಬದಿಗೆ 3 ರಂತೆ ದಾಳಿಮಾಡುವ ದಾಳಿಗಾರ ಎದುರಾಳಿಗಳ ಅಂಕಣಕ್ಕೆ ಪ್ರವೇಶಿಸಿ ಹಿಡಿತಗಾರರನ್ನು ಮುಟ್ಟುವುದು ಅಥವಾ ಕೀಳುವುದು ನಿಯಮದಲ್ಲಿತ್ತು. ಮುಟ್ಟಿದರೆ ಅಂಕ, ಅರ್ಹತಾ ಗೆರೆಯ ಅಂತ್ಯದ ಧ್ವಜವನ್ನು ಮುಟ್ಟಿದರೆ 2 ಅಂಕಗಳು ಅಲ್ಲದೇ ಹಿಡಿತಗಾರರರಿಂದ ರಕ್ಷಣೆಗೊಂಡು ಹಿಂಬದಿಯ ಅಂತಿಮಗೆರೆಯ ಮೇಲಿರುವ ಧ್ವಜ ಕಿತ್ತರೆ 4 ಅಂಕಗಳು ಸಿಗುತ್ತಿದ್ದವು. ಹೀಗಿರುವಾಗ ಈ ಧ್ವಜಗಳನ್ನು ರಕ್ಷಿಸಿ ತಾವು ದಾಳಿಗಾರನಿಗೆ ಸಿಗದೇ ರಕ್ಷಣೆಯಿಂದ ಇದ್ದು, ಸಂದರ್ಭಕ್ಕಾಗಿ ಆತನನ್ನು ಹಿಡಿಯಲು ಸಿದ್ದರಿರಬೇಕಾಗಿತ್ತು. ಇಲ್ಲಿ ಕಾಲದ ಮಿತಿ ಇರದೇ ನಾಯಕರು ನಿರ್ಧರಿಸಿದಂತೆ ಆಟನಡೆದು ಮುಕ್ತಾಯವಾಗುತ್ತಿತ್ತು.
3. ಘೋಡಾ ಕಬ್ಬಡಿ:- ಈ ವಿಧಾನದಲ್ಲಿ ಅಂಕಣಗಳಿಗೆ ಅಳತೆ ಇರಲಿಲ್ಲ. ಆದರೆ ಒಂದು ಮಧ್ಯಗೆರೆಯ ಮಾತ್ರ ದಾಳಿಗಾರ ಹಾಗೂ ಎದುರಾಳಿಗಳ ಕಡೆಯವರಿಗೆ ವಿಭಾಗಿಸಿ ಅಂಕಣಕ್ಕೆ

ಒಂದು ಗಡಿ ಹಾಕಲಾಗುತ್ತಿತ್ತು. ಮಧ್ಯಗೆರೆಗೆ ಕೆಲವು ಮೀಟರ್‌ಗಳ ಅಂತರದಲ್ಲಿ ಅಂಕಣದೊಳಗೆ ಒಂದು ಸಣ್ಣ ವೃತ್ತವನ್ನು ರಚಿಸಿ ಅದರಲ್ಲಿ "ಕುದುರೆ" ಎಂಬ ಒಬ್ಬ ಆಟಗಾರರನ್ನು ಕೂರಿಸಿ ಅವನ ಕಡೆಯ ಎಲ್ಲಾ ಆಟಗಾರರು ಮಧ್ಯಗೆರೆಯ ಹೊರಗಿನ ಅಂಕಣದಲ್ಲಿರುತ್ತಿದ್ದರು. ಅದರಲ್ಲಿ ಒಬ್ಬ ದಾಳಿಗಾರ ಮಧ್ಯಗೆರೆಯಿಂದ ದಾಳಿಯನ್ನು ಪ್ರಾರಂಭಿಸಿದಾಗ ಕುದುರೆ ಕುಳಿತಿರುವ ವೃತ್ತದ ಸುತ್ತಲೂ ಹಿಡಿತಗಾರರು ದಾಳಿಗಾರನಿಗೆ ಸಿಗದೇ ಕುದುರೆಯನ್ನು ಮಧ್ಯಗೆರೆಗೆ ಹೋಗದಂತೆ ಬಿಡದೇ ನೋಡಿಕೊಳ್ಳುವ ಜವಾಬ್ದಾರಿಯಿಂದ ಗಡಿಯ ಒಳಗೆ ಓಡಾಡುತ್ತಾರೆ. ದಾಳಿಗಾರ ಒಳನುಗ್ಗಿ ವೃತ್ತದಿಂದ ಹಿಡಿತಗಾರರಿಂದ ರಕ್ಷಿಸಿಕೊಂಡು ಕುದುರೆಯನ್ನು ಕರೆದುಕೊಂಡು ಹೋಗುವುದು ನಿಯಮ. ಆಗ ಯಾರೇ ಎದುರಾಳಿಗಳು (ಕುದುರೆಯ ವೃತ್ತವನ್ನು ಬಿಟ್ಟಾಗ) ಕುದುರೆಗೆ ಮುಟ್ಟಿದ್ದರೆ ಆ ಕುದುರೆಯನ್ನು ಔಟ್ ಎಂದು ಪರಿಗಣಿಸಿ ಆದರೆ ಎದುರಾಳಿಗಳಿಗೆ ಒಂದು ಲೋನಾ ಸಿಗುತ್ತಿತ್ತು. ಕುದುರೆಯನ್ನು ಕರೆತರಲು ದಾಳಿಗಾರ ತನ್ನ ಜಪದೊಂದಿಗೆ ಎದುರಾಳಿಗಳ ಕಡೆಗೆ ಹೋಗಿ ಎಷ್ಟು ಬೇಕಾದರೂ ಔಟ್ ಮಾಡುವ ಅವಕಾಶವಿತ್ತು. ಜಪ ಬಿಡದೆ ಇಚ್ಚಿಸಿದಾಗ ದಾಳಿಗಾರ ಮಧ್ಯಗೆರೆಗೆ ಬರಬೇಕಾಗಿತ್ತು. ಸಮಯ ಮಿತಿ ಇರಲಿಲ್ಲ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

4. ಚಡು–ಗುಡು:– ಈಗಿನ ಕಬ್ಬಡಿಯಲ್ಲಿ ಕಬಡ್ಡಿ–ಕಬಡ್ಡಿ ಎಂಬ ಜಪವಿದ್ದರೆ ಈ ವಿಧಾನದಲ್ಲಿ ಚಡುಗುಡು ಎಂದು ಉಚ್ಚರಿಸಲಾಗುತ್ತಿತ್ತು. ಈಗಿನ ಕಬಡ್ಡಿ ಅಂಕಣದ ಮಾದರಿಯಲ್ಲಿಯೇ ಇದರ ಅಂಕಣವು ಹೋಲುತ್ತಿತ್ತು. ಒಂದು ಆಯತಾಕಾರದ ಅಂಕಣದಲ್ಲಿ ಎರಡು ಬದಿಗೆ ತಂಡಗಳು ಆಡುತ್ತಿತ್ತು. ಒಂದು ಆಯತಾಕಾರದ ಅಂಕಣದಲ್ಲಿ ಎರಡು ಬದಿಗೆ ತಂಡಗಳು ಆಡುತ್ತಿದ್ದವು. ದಾಳಿಗಾರನು ದಾಳಿ ಮಾಡುವ ಸಂದರ್ಭದಲ್ಲಿ ಹಿಡಿತಗಾರರು ಎಷ್ಟು ಜನ ಬೇಕಾದರೂ ಪಾಲ್ಗೊಳ್ಳಬಹುದಿತ್ತು. ಆದರೆ ಒಂದು ಅಂಕವನ್ನು ಮಾತ್ರ ನೀಡಲಾಗುತ್ತಿತ್ತು. (ಮೊದಲು ಯಾರು ಮುಟ್ಟಿಕೊಳ್ಳುವನೋ ಆತನಿಗೆ)

   ಹು ದುಡುಡು:

   ಈ ಮಾದರಿಯ ಅಂಕಣವು ಇಂದಿನ ಅಂಕಣದಂತೆ ಇದ್ದರೂ ಇಂದಿಗಿಂತ ಸ್ವಲ್ಪ ಚಿಕ್ಕ ಅಂಕಣವಾಗಿತ್ತು. ಈ ವಿಧಾನದಲ್ಲಿ 6 ರಿಂದ 7 ಜನ ಆಟಗಾರರು ಆಡುತ್ತಿದ್ದರು. ಆಡುವಾಗ ದಾಳಿಗಾರ ಅಥವಾ ಹಿಡಿತಗಾರರು ಅಂಕಣದ ಹೊರಗೆ ಹೋಗಬಹುದಿತ್ತು. ಆದರೆ ದೇಹದ ಯಾವುದಾದರೊಂದು ಭಾಗದ ಸಂಪರ್ಕ ಅಂಕಣಕ್ಕೆ ಇರಬೇಕಿತ್ತು. ಈ ಆಟದ ನಿಯಮಗಳು ಸರಳವಾಗಿದ್ದವು ಅಧಿಕಾರಿ ಹಾಗೂ ತಂಡದ ನಾಯಕರ ಮಧ್ಯ ಆಟದ ಸಮಯ ಹಾಗೂ ನಿಯಮಗಳ ಕರಾರನ್ನು ಮಾಡಿಕೊಳ್ಳಲಾಗುತ್ತಿತ್ತು.

5. ಬಂಗಾಳಿ ಶೈಲಿ:– ಈ ವಿಧಾನದಲ್ಲಿ ಅಂಕಣದ ಅರ್ಹತಾ ಗೆರೆಗಳು ಹಿಂಬದಿಗೆರೆಗೆ ಸಮೀಪವಿರುತ್ತಿದ್ದವು. ಈ ಆಟದಲ್ಲಿ ಒಂದು ಬದಿಯಲ್ಲಿ 11 ಜನ ಆಟಗಾರರಿರುತ್ತಿದ್ದರು. ಆಟ ಪ್ರಾರಂಭದಿಂದ ಅಂತ್ಯದವರೆಗೆ ಪ್ರತಿ ದಾಳಿಯಲ್ಲಿ ಹಿಡಿತಗಾರರು ಅವರವರ ಅಂಕಣದ ಹಿಂದೆ(ಮುಕ್ತಾಯಗೆರೆಗಳ ಹೊರಗೆ) ಸಾಲಾಗಿ ನಿಂತು ತಮ್ಮ ಬದಿಗೆ ದಾಳಿ ಮಾಡಿದ

ದಾಳಿಗಾರನನ್ನು ಹಿಡಿಯಲು ಸಿದ್ಧರಿದ್ದು ದಾಳಿಗಾರ ಅರ್ಹತಾಗೆರೆಯನ್ನು ದಾಟಲು ಪ್ರಯತ್ನಿಸುವಾಗ ಅವನ ಮೇಲೆ ಹೋರಾಟ ನಡೆಸಲು ಹೊರಗಿನಿಂದ ಒಳಗೆ ಓಡಿ ಬಂದು ಹಿಡಿಯಲು ಅಥವಾ ಮುಟ್ಟಲು ಪ್ರಯತ್ನಿಸುತ್ತಿದ್ದರು. ಮುಟ್ಟಿದರೆ ಆ ದಾಳಿಗಾರ ಎದುರಾಳಿಗಳ ಕಡೆಗೆ ಸೇರಿಕೊಳ್ಳಬೇಕಿತ್ತು. ಅರ್ಹತಾ ಗೆರೆದಾಟಿದ ನಂತರ ದಾಳಿಗಾರ ಮಧ್ಯಗೆರೆಗೆ ಓಡುತ್ತಿದ್ದ ಆತನಿಗೆ ಹಿಡಿತಗಾರರು ಹಿಡಿಯದಿದ್ದರೆ ಅಥವಾ ಮುಟ್ಟದಿದ್ದರೆ ದಾಳಿಗಾರನ ಕಡೆಗೆ ಒಂದು ಅಂಕ ಹೀಗೆ ಬದಿ ಖಾಲಿಯಾದಾಗ ಗಳಿಸಿದ ಅಂಕಗಳ ಹಾಗೂ ಸಮಯದ ಆಧಾರದ ಮೇಲೆ ಪಂದ್ಯಮುಕ್ತಾಯವಾಗುತ್ತಿತ್ತು.

6. ಹು–ತುತುತು:– ಆಧುನಿಕ ಕಬಡ್ಡಿಯ ನಿಯಮಗಳ ಅಳವಡಿಕೆಗೆ ಮುಖ್ಯವಾಗಿ ಕಾರಣವಾದ ಈ ವಿಧಾನದ ಮೂಲ ಮಹಾರಾಷ್ಟ್ರವಾಗಿತ್ತು. ಇದರಿಂದ ಜನಪದ ನಿಯಮಗಳು ಬದಲಾದವು ಕಬಡ್ಡಿ ಎಂಬ ಪದದ ಬಳಕೆ ಈ ಮೂಲದಿಂದ ಹಾಗೂ ಕೌನ್ ಬಡಾ ಎಂಬ ಮೂಲಗಳಿಂದ ರೂಢಿಗೆ ಬಂದಿತು.

   ಈ ವಿಧಾನದಲ್ಲಿ ಆಯತಾಕಾರವಾದ ಆಧುನಿಕ ಕಬಡ್ಡಿ ಅಂಕಣದ ಮಾದರಿಯನ್ನು ಹೋಲುತ್ತಿತ್ತು. 9 ಜನ ಆಟಗಾರರು ಒಂದು ಬದಿಯಲ್ಲಿ ಆಡುತ್ತಿದ್ದರು. ಎಲ್ಲರೂ ಔಟ್ ಆದ ನಂತರ 4 ಪ್ರತ್ಯೇಕ 'ಲೋನಾಪಾಯಿಂಟ್'ಗಳನ್ನು ಎದುರಾಳಿಗೆ ನೀಡಲಾಗುತ್ತಿತ್ತು. ಔಟಾಗಿ ಹೊರಗೆ ಹೋದವರು ಒಳಗೆ ಬರುವ ಅವಕಾಶವಿತ್ತು.

   ಮೊದಲೇ ಹೇಳಿದಂತೆ ಈ ವಿಧಾನವು ಇಂದಿನ ಕಬ್ಬಡ್ಡಿಗೆ ನೀಡಿದ ಕೊಡುಗೆ ಎಂದರೆ ಎರಡು ಬದಿಯ ಅಂಕಣದಲ್ಲಿ ಅರ್ಹತಾ ಹಾಗೂ ಲಾಬಿಗೆರೆಗಳನ್ನು ಅಳವಡಿಸುವಂತೆ ಹಾಗೂ ಲಾಬಿ (ಓಣಿ)ಗಳಲ್ಲಿ ಪ್ರವೇಶಿಸುವ ನಿಯಮಗಳನ್ನು ಅಲ್ಲದೇ 'ಚೈನ್ ಗೇಂ' ಆಡುವ ಕೌಶಲ್ಯವನ್ನು ಪ್ರಾರಂಭಿಸಿದ ಕೀರ್ತಿ ಮಹಾರಾಷ್ಟ್ರದ ಕಬಡ್ಡಿ ಕ್ರೀಡಾಪಟು ಮತ್ತು ಪೋಷಕರಿಗೆ ಸಲ್ಲುತ್ತದೆ. ಕಬಡ್ಡಿ ಬೆಳೆಯಲು ಕಾರಣವಾದ ಇತರೆ ಪೂರಕ ಆಟಗಳು

7. ಹೊಡೆಯುವ ಕಬಡ್ಡಿ:– ಈ ಆಟವನ್ನು 10 ರಿಂದ 20 ಜನರು ಆಡಬೇಕು. ಈ ಆಟದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ಆಟಗಾರನಿಗೆ ಬಟ್ಟೆಯಿಂದ ಸುತ್ತಿ ಮಾಡಿದ ಉಂಡೆ/ಲಡ್ಡು ಆಕಾರದ ಒಂದು ಬಾಲನ್ನು ನೀಡುವರು ಆಟದ ಅಂಕಣದ ತುದಿಭಾಗದಲ್ಲಿ ಒಂದು ಗೆರೆ ಹಾಕಬೇಕು. ಇದು ಮೂಲ ರೇಖೆ ಆಗಿರುತ್ತದೆ. ಒಬ್ಬನನ್ನು ಮುಟ್ಟುವವನನ್ನಾಗಿ ಆರಿಸಬೇಕು. ಮುಟ್ಟುವವನು ಕಬಡ್ಡಿ, ಕಬಡ್ಡಿ ಎಂದು ಜಪ ಹೇಳುತ್ತಾ ಒಳಗಿನವರನ್ನು ಬಟ್ಟೆಯ ಬಾಲಿನಿಂದ ಹೊಡೆದುಮುಟ್ಟಲು ಪ್ರಯತ್ನ ಹೀಗೆ ಮುಟ್ಟಿಸಿಕೊಂಡವರು ಮೂಲ ರೇಖೆಯ ಹಿಂದೆ ಓಡಿಹೋಗಬೇಕು. ಆಗ ಅವನನ್ನು ಉಳಿದವರು ತಮ್ಮಲ್ಲಿರುವ ಬಾಲಿನಿಂದ ಹೊಡೆಯಬಹುದು. ಮುದಾಳಿಕಾರನು ತನ್ನ ಉಸಿರು ಕಳೆದುಕೊಂಡರೆ ಅವನನ್ನು ಉಳಿದವರು ತನ್ನ ಬಾಲಿನಿಂದ ಹೊಡೆಯುವರು ಮುಟ್ಟಿಸಿಕೊಳ್ಳುವ ರೇಖೆಯಿಂದ ಹಿಂದೆ ಹೋದವರು ಮೊದಲಿನ ರೈಡರನು ಉಸಿರು ಕಳೆದುಕೊಂಡು ಮೂಲಗೆರೆಗೆ ಹೋದೊಡನೆ ಒಬ್ಬೊಬ್ಬರಂತೆ ದಾಳಿಯೆರಗಿ ಒಳಗೆ ಬಂದು ಕಬಡ್ಡಿ ಎನ್ನುತ್ತಾ ಎಲ್ಲರೂ ಔಟ್

ಆಗುವವರೆಗೂ ಹೋಗುವರು. ಮುಟ್ಟಿಸಿಕೊಳ್ಳುವುದರಲ್ಲಿ ಕೊನೆಯನಾದವನೆ 'ವೀರಾಗ್ರೆ' ಅಥವಾ ವಿಜಯಶಾಲಿ.

8. ಗೋಪುರ ಬಾಗಿಲು ಕಬಡ್ಡಿ:- ಈ ಆಟವನ್ನು ಆಡಲು 10 ಜನರಂತೆ ಎರಡು ತಂಡಗಳನ್ನು ಮಾಡಬೇಕು. ದೊಡ್ಡ ಅಂಕಣದಲ್ಲಿ ಒಂದುಭಾಗಕ್ಕೆ ಮೂಲರೇಖೆಯನ್ನು ಗುರುತಿಸಬೇಕು. ಒಂದನೇ ತಂಡದವರು ಹಿಡಿಯುವವರೆಗು ಎರಡನೇ ತಂಡದವರು ದಾಳಿ ಮಾಡುವವರಾಗಿ ಮಾಡಬೇಕು. ಮೂಲ ರೇಖೆಯಿಂದ ಆಡುವ ಅಂಕಣದ ಕಡೆಗೆ ಮುಖಮಾಡಿ ನಿಲ್ಲಲಿ ಅವರು ಸ್ವಲ್ಪ ಅಂತರದಲ್ಲಿ ನಿಂತು ತಮ್ಮ ಒಳ ಕೈಗಳನ್ನು ಪರಸ್ಪರರು ಹಿಡಿದು ಮೇಲೆ ಎತ್ತಿ ಹಿಡಿಯಲಿ ಇದೇ ಬಾಗಿಲು ಇದ್ದಂತೆ.

ಹಿಡಿತದಾರರು ಬಾಗಿಲಿನ ಹಿಂದೆ ಚದುರಿ ನಿಲ್ಲುವರು. ದಾಳಿಮಾಡುವವರೊಬ್ಬರು ಮೂಲರೇಖೆಯ ಹಿಂದಿನಿಂದ ಕಬಡ್ಡಿ ಎಂದು ಜಪ ಹೇಳುತ್ತಾ ಬಾಗಿಲು ಮುಖಾಂತರ ಆಡುವ ಅಂಕಣದಲ್ಲಿ ನುಗ್ಗುವನು. ಮತ್ತು ಅವನ ಉಚ್ಚಾರದ ಉಸಿರು ಇರುವಾಗಲೇ ಸಂರಕ್ಷಕರನ್ನು ಮುಟ್ಟಲು ಪ್ರಯತ್ನಿಸುತ್ತಾನೆ. ಹೀಗೆ ಮುಟ್ಟಿಸಿಕೊಂಡವರು ಔಟ್ ಆಗಿ ಅಂಕಣದ ಹೊರಗೆ ಹೋಗುತ್ತಾರೆ. ಮೊದಲಿನ ದಾಳಿಕಾರನ ಹಿಂದೆ ಮೂಲ ರೇಖೆ ದಾಟಿ ಹೋದ ಮೇಲೆ ಇನ್ನೊಬ್ಬ ದಾಳಿ ಮಾಡುವವನು ಜಪ ಹೇಳುತ್ತಾ ಒಳಗೆ ಪ್ರವೇಶಿಸಿ ಹೆಚ್ಚು ಜನರನ್ನು ಮುಟ್ಟಿ ಔಟ್ ಮಾಡಲು ಪ್ರಯತ್ನಿಸುತ್ತಾನೆ. ಹೀಗೆ ಎಲ್ಲರೂ ಔಟ್ ಆದಾಗ ಆಟ ಕೊನೆಗೊಳ್ಳುತ್ತದೆ. ಮತ್ತು ದಾಳಿಕಾರರು ಹಿಡಿತಗಾರರಾಗಿ, ಹಿಡಿತಗಾರರು ದಾಳಿಕಾರರಾಗಿ ಇದೇ ರೀತಿ ಮುಂದುವರೆಸುವರು. ಹೀಗೆ ಯಾರ ತಂಡ ಕೊನೆಗೆ ಹೆಚ್ಚು ಜನರನ್ನು ಔಟ್ ಮಾಡುತ್ತಾರೆಯೋ ಆ ತಂಡ ಜಯಶಾಲಿಯಾಗುತ್ತದೆ.

9. ಕೈದಿಯನ್ನು ಬಿಡಿಸುವ ಕಬಡ್ಡಿ:- ಎರಡು ಅಡಿ ವ್ಯಾಸದ ಒಂದು ತಂಡದ ಒಬ್ಬ ಕೈದಿ ಇರುತ್ತಾನೆ. ವರ್ತುಲದ ಹೊರಗೆ ಕೈದಿಯನ್ನು ಕಾಯುವ ಒಬ್ಬ ಮುಖ್ಯ ಕಾವಲುಗಾರ ಅವನ ಇನ್ನೊಂದು ತಂಡದವನಿರುತ್ತಾನೆ. ತಂಡದ ಉಳಿದವರು ವರ್ತುಳದ ಹೊರಗೆ ಅಲ್ಲಲ್ಲಿ ಚದುರಿ ಕೈದಿಯನ್ನು ಕಾವಲು ಮಾಡುತ್ತಾರೆ. ಕೈದಿಯ ಪಂಗಡದವರು ದಾಳಿಗಾರರು ವರ್ತುಳದಿಂದ 25-35 ದೂರದಲ್ಲಿ ಒಂದು ಸೀಮಾ ರೇಖೆಯ ಹೊರಗೆ ನಿಂತಿರುತ್ತಾರೆ. ಅವರು ದಾಳಿಗಾರರಾಗಿರುತ್ತಾರೆ. ಕೈದಿಯ ಪಂಗಡದವರು ದಾಳಿಗಾರರು ಕೈದಿಯನ್ನು ಕಾಯುವ ತಂಡದವರು ಸಂರಕ್ಷಣಾಗಾರರು. ಕೈದಿಯ ತಂಡದಿಂದ ಒಬ್ಬರ ನಂತರ ಒಬ್ಬರಂತೆ ಕಬಡ್ಡಿ ಅನ್ನುತ್ತಾ ವರ್ತುಳದ ಕಡೆಗೆ ದಾಳಿ ಮಾಡುವರು ಮತ್ತು ದಾಳಿಮಾಡಿ ಬರುವಾಗ ಕಾವಲುಗಾರರನ್ನು ಮುಟ್ಟಿ ಬರಲು ಪ್ರಯತ್ನಿಸುವರು. ಆಗ ಕಾವಲುಗಾರರು ತಪ್ಪಿಸಿಕೊಳ್ಳುವರು ದಾಳಿಕಾರನೇನಾದರೂ ಅವರನ್ನು ಮುಟ್ಟಿದರೆ ಮುಟ್ಟಿಸಿಕೊಂಡವರು ಔಟಾಗಿ ಹೊರಗೆ ಹೋಗುತ್ತಾರೆ.

ವರ್ತುಳದಲ್ಲಿಯ ಕಳ್ಳನನ್ನು ಕಾಯುತ್ತಿರುವ ಮುಖ್ಯ ಕಾವಲುಗಾರನು ಕಳ್ಳನನ್ನು ಮುಟ್ಟಿ ಬರಲು ಪ್ರಯತ್ನಿಸುವರು. ಆಗ ಕಾವಲುಗಾರರು ತಪ್ಪಿಸಿಕೊಳ್ಳುವರು. ದಾಳಿಗಾರನೇನಾದರೂ ಅವರನ್ನು ಮುಟ್ಟಿದರೆ ಮುಟ್ಟಿಸಿಕೊಂಡವರು ಔಟಾಗಿ ಹೊರಗೆ ಹೋಗುತ್ತಾರೆ.

ವರ್ತುಲದಲ್ಲಿಯ ಕಳ್ಳನನ್ನು ಕಾಯುತ್ತಿರುವ ಮುಖ್ಯ ಕಾವಲುಗಾರನು ಕಳ್ಳನನ್ನು ಮುಟ್ಟಲು ದಾಳಿಕಾರನಿಗೆ ಅವಕಾಶ ಕೊಡುವುದಿಲ್ಲ. ಸಾಧ್ಯವಾದರೆ ದಾಳಿಗಾರನನ್ನು ಹಿಡಿಯುವನು. ಆಗ ದಾಳಿಕಾರನು 'ಕಬಡ್ಡಿ' ಎನ್ನುತ್ತ ತನ್ನ ಗೆರೆಯನ್ನು ಮುಟ್ಟಿದರೆ ಮುಖ್ಯ ಕಾವಲುಗಾರ ಔಟ್. ಆ ಸ್ಥಳಕ್ಕೆ ಮುಖ್ಯ ಕಾವಲುಗಾರ ಬರುವನು. ಒಂದು ವೇಳೆ ಕಾವಲುಗಾರನಿಂದ ತಪ್ಪಿಸಿಕೊಂಡು ಕೈದಿಯ ಕೈಯನ್ನು ಮುಟ್ಟಿದರೆ ಕೈದಿಯು ದಾಳಿಗಾರನ ಪಂಗಡದ ಕಡೆಗೆ ಓಡಿ ಬಂದು ಅವರನ್ನು ಕೂಡಿಕೊಳ್ಳುವನು ಅದೇ ಸಮಯಕ್ಕೆ ಕಾವಲುಗಾರರಲ್ಲಿ ಯಾರಾದರೊಬ್ಬರು ಕೈದಿಯನ್ನು ಮುಟ್ಟಿದರೆ ಕೈದಿಯು ಪುನಃ ತನ್ನ ವರ್ತುಳದಲ್ಲಿ ಕೈದಿಯಾಗಿ ನಿಲ್ಲಬೇಕು.

ಹೀಗೆ ಈ ಆಟ ನಿರ್ದಿಷ್ಟ ಅವಧಿಯವರೆಗೆ ನಡೆದು ಅವದಿ ಮುಗಿದ ನಂತರ ಇನ್ನೊಂದು ತಂಡದವರು ಅಷ್ಟೇ ಅವಧಿಯವರೆಗೆ ದಾಳಿ ಮಾಡುವರು. ಹೆಚ್ಚು ಕಾವಲುಗಾರರನ್ನು ಔಟ್ ಮಾಡಿದ ತಂಡ ಜಯಶಾಲಿಯಾಗುವುದು.

ಈ ಆಟಗಳ ಹಿಂದಿನ ಉದ್ದೇಶಗಳು:

- ಈ ಆಟಗಳನ್ನು ರೈತರು ತಮ್ಮ ಸುಗ್ಗಿ ಕಾಲಗಳಲ್ಲಿ ಆಡಿ ಮನೋಲ್ಲಾಸ ಪಡೆಯುತ್ತಿದ್ದರು.
- ರಾಜ ಮಹಾರಾಜರ ಕಾಲದಲ್ಲಿ ವಿಶ್ರಾಂತಿ ಸಮಯದಲ್ಲಿ ಈ ಕ್ರೀಡೆಗಳನ್ನು ಆಡಿ ದೈಹಿಕವಾಗಿ ಸದೃಢವಾಗಿಸುವುದಾಗಿತ್ತು.
- ಶೈಕ್ಷಣಿಕ ತರಬೇತಿ ನೀಡಲು ಈ ಆಟವನ್ನು ಪ್ರದರ್ಶನವಾಗಿ ಬಳಸುವುದಾಗಿತ್ತು.
- ಸಮಸ್ಯೆಯಿಂದ ತಪ್ಪಿಸಿಕೊಳ್ಳುವ ವಿಧಾನ ತಿಳಿಯುವುದಾಗಿತ್ತು.
- ಅನೇಕ ಕಬಡ್ಡಿ ತಂತ್ರಗಾರಿಕೆಯನ್ನು ಬೆಳೆಸುವುದಾಗಿದೆ.
- ಒಗ್ಗಟ್ಟನ್ನು ರೂಪಿಸುವುದು.

ಅಧ್ಯಾಯ:– 6

ಉಡುಗೆ ತೊಡುಗೆಗಳು

6.1 ಪ್ರಸ್ತಾವನೆ

6.2 ಮಕ್ಕಳ ಉಡುಪುಗಳು

6.3 ಸೀರೆಗಳು

6.4 ಬಾಣಂತಿ ಉಡುಪುಗಳು

6.5 ಟವಾಲುಗಳು

6.6 ಟೊಪ್ಪಿಗೆಗಳು

6.7 ಆಭರಣಗಳು

6.8 ಹಾಸಿಗೆ–ಹೊದಿಕೆಗಳು

6.9 ಕಿವಿಯ ಆಭರಣಗಳು

6.10 ತಾಳಿಗಳು

6.11 ಕೈ ಬೆರಳಿನ ಆಭರಣಗಳು

6.12 ಮಕ್ಕಳ ಆಭರಣಗಳು

6.1 ಪ್ರಸ್ತಾವನೆ

ಜಾನಪದ ಕಣ್ಮರೆಯಾಗುತ್ತಿದೆ ಎಂಬ ಅಪಾಯದ ಅರಿವಿನಿಂದ ಜಾನಪದದತ್ತ ಆಸಕ್ತಿ ತೋರಲು ಆರಂಭಿಸಿದಾಗ ಜಾನಪದದ ಮೌಖಿಕ ರೂಪಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ಆದರೆ ಮೌಖಿಕ ಸಾಹಿತ್ಯ ರೂಪಗಳಂತೆಯೇ ಜಾನಪದದ ವಸ್ತುಸಂಸ್ಕೃತಿ ಕೂಡ ಕಣ್ಮರೆಯಾಗುತ್ತಿದೆ. ಅದರತ್ತ ಕೊಡಬೇಕಾದ ಗಮನವನ್ನು ನಾವು ಕೊಟ್ಟಿಲ್ಲ. ವಸ್ತು ಸಂಸ್ಕೃತಿಯು ಕಣ್ಣಿಗೆ ಕಾಣುವಂತಹ ಪ್ರಕಾರಗಳ ಬಗ್ಗೆ ಗಮನ ಕೇಂದ್ರೀಕರಿಸುತ್ತದೆ. ಇದರಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿಬರುವ ಹಾಗೂ ಮೌಖಿಕ ಜಾನಪದದಂತೆಯೇ ಪರಂಪರೆಯ ಪ್ರಭಾವ ಹಾಗೂ ವೈಯಕ್ತಿಕ ಬದಲವಣೆಗಳಿಗೆ ಈಡಾಗುವ ಕಾರ್ಯತಂತ್ರಗಳು, ಕುಶಲತೆಗಳು, ವಿಧಾನಗಳು, ಸೂತ್ರಗಳು ಸೇರುತ್ತವೆ. ವಸತಿ, ಉಡುಗೆತೊಡುಗೆ, ಆಹಾರ ತಯಾರಿಕೆ, ಕೃಷಿಕೆಲಸ, ಪಶುಸಾಕಣೆ, ಆಹಾರ ಸಂಸ್ಕರಣೆ, ಉಪಕರಣ ತಯಾರಿಕೆ, ಪೀಠೋಪಕರಣ ವಿನ್ಯಾಸ, ಪಾತ್ರೆ ಪಡಗ ಇತ್ಯಾದಿಗಳ ಬಗ್ಗೆ ವಸ್ತು ಸಂಸ್ಕೃತಿಯ ಕಡೆ ಹರಿಸಬೇಕಾಗುತ್ತದೆ.

ಪ್ರಸ್ತುತ ಅಧ್ಯಾಯವು ಗ್ರಾಮೀಣ ಉಡುಗೆ ತೊಡುಗೆ ಹಾಗೂ ಆಭರಣಗಳನ್ನು ಕುರಿತ ಒಳಗೊಂಡಿದೆ. ನಮ್ಮ ಪರಂಪರಾಗತ ಉಡುಗೆ ತೊಡುಗೆಗಳು ಕಣ್ಣಿಗೆ ನೇರವಾಗಿ ಕಾಣುವಂತಹ ಸಾಂಸ್ಕೃತಿಕ ಅಭಿವ್ಯಕ್ತಿಗಳು. ಇವುಗಳಲ್ಲಿ ಪ್ರಯೋಜನಾತ್ಮಕತೆಯ ಜೊತೆಗೆ ಕಲೆಯ ಅಂಶವು ಸಮಸಮವಾಗಿ ಬೆಸೆದುಕೊಂಡಿರುವುದನ್ನು ಕಾಣುತ್ತೇವೆ.

ಆಯಾ ಪ್ರದೇಶದ ಭೌಗೋಳಿಕ ಪರಿಸ್ಥಿತಿ ಹವಾಮಾನ ಸಾಂಸ್ಕೃತಿಕ ಹಿನ್ನೆಲೆ, ನಂಬಿಕೆ ಸಂಪ್ರದಾಯಗಳು, ಚಾರಿತ್ರಿಕ ಪ್ರಭಾವಗಳು, ಧರ್ಮ ಹಾಗೂ ಉದ್ಯೋಗ ವೃತ್ತಿ ಸ್ವರೂಪಗಳೂ ಸಹ ವೇಷಭೂಷಣಗಳ ಶೈಲಿಯನ್ನು ನಿರ್ಧರಿಸಿರುತ್ತವೆ. ವ್ಯಕ್ತಿಯ ವಯೋಮಾನ ಲಿಂಗ, ಇವುಗಳನ್ನು ಕೂಡ ಅದು ಅವಲಂಬಿಸಿರುತ್ತದೆ. ದಿನನಿತ್ಯದ ಉಡುಗೆಗಳು, ವಿಶೇಷ ಸಂದರ್ಭದ ಉಡುಪುಗಳು, ಧಾರ್ಮಿಕ ಉಡುಪುಗಳು, ಕಲಾಪ್ರದರ್ಶನಗಳ ಉಡುಪುಗಳು ಹೀಗೆ ಸಂದರ್ಭಾನುಸಾರವಾಗಿ ಇವು ವೈವಿಧ್ಯತೆಯನ್ನು ಪಡೆಯುತ್ತವೆ. ಒಟ್ಟಿನಲ್ಲಿ ಉಡುಗೆ ತೊಡುಗೆಗಳ ಅಧ್ಯಯನ ಜನಪದರ ಬದುಕಿನ ಒಂದು ವರ್ಣರಂಜಿತ ಅಧ್ಯಾಯ, ಆದರೆ ನಮ್ಮ ಪರಂಪರಾಗತ ಸಂಪ್ರದಾಯಗಳು ಈಗ ಬಹುವೇಗವಾಗಿ ಬದಲಾಗುತ್ತಿವೆ, ಕೆಲವು ಸಂಪೂರ್ಣ ಕಣ್ಮರೆಯಾಗಿವೆ. ಧಾರ್ಮಿಕ, ಕಲಾಪ್ರದರ್ಶನ ಮೊದಲಾದ ಸಂದರ್ಭದ ಉಡುಪುಗಳು ಪರಂಪರೆಯ ಛಾಪನ್ನು ಹಾಗೇ ಉಳಿಸಿಕೊಂಡಿವೆಯಾದರೂ ದಿನನಿತ್ಯದ ಉಡುಗೆ ತೊಡುಗೆಗಳಲ್ಲಿ ವ್ಯಾಪಕ ಬದಲಾವಣೆಗಳಾಗಿವೆ. ಅವು ನೋಡುವುದಕ್ಕೆ ಸಿಗುವುದಿರಲಿ ಅವುಗಳ ಪದರೂಪಗಳೂ ಸಹ ಪತ್ತೆಯೇ ಸಿಗದಂತೆ ಕಣ್ಮರೆಯಾಗಿವೆ. ಇಂತಹ ಸಂದರ್ಭದಲ್ಲಿ ಮಾಹಿತಿ ಸಂಗ್ರಹಣೆಗಾಗಿ ಜನಪದ ಸಾಹಿತ್ಯ ಹಾಗೂ ಮತ್ತಿತರ ಜಾನಪದ ಪ್ರಕಾರಗಳನ್ನು ಮಾತ್ರ ಅವಲಂಬಿಸಿದರೆ ಸಾಲದು ನಮ್ಮ ಸಾಮಾಜಿಕ ಬದುಕಿನ ಚಿತ್ರಣ ನೀಡುವಂತಹ ಶಿಷ್ಟ, ಸಾಹಿತ್ಯದ ಕಾದಂಬರಿ, ಮುಂತಾದ ಪ್ರಕಾರಗಳನ್ನು ಸಹ ಪರಿಶೀಲಿಸಬೇಕಾಗಿವೆ.

ಆಭರಣಗಳು, ಚಿನ್ನ ಬೆಳ್ಳಿಯಂತಹ ಬೆಲೆಬಾಳುವ ಲೋಹವನ್ನೇ ಆಧರಿಸಿದ್ದರೂ ಜನಸಾಮಾನ್ಯರ ಬದುಕಿನಲ್ಲಿ ಅವುಗಳ ಪಾತ್ರ ಕಡಿಮೆ ಏನಲ್ಲ. ಆಭರಣಗಳ ವರ್ಣನೆಯಿಲ್ಲದೆ ಹೆಣ್ಣಿನ ವರ್ಣನೆ ಪೂರ್ಣವಾಗದೇನೊ ಆಭರಣಗಳ ಮೇಲೆ ಹೆಂಗಸರ ವ್ಯಾಮೋಹ, ಅಭಿರುಚಿಗಳನ್ನು ಜನಪದ ಸಾಹಿತ್ಯ ವ್ಯಾಪಕವಾಗಿ ಪ್ರತಿಬಿಂಬಿಸಿದೆ. ಇಷ್ಟಾದರೂ ಆಭರಣಗಳು ಹೆಂಗಸರಿಗೆ ಮಾತ್ರ ಸೀಮಿತವೇನಲ್ಲ. ಮಕ್ಕಳಿಗೆ, ಪುರುಷರಿಗೆ, ಕಲಾವಿದರಿಗೇ ವಿಶಿಷ್ಟವಾದ ಆಭರಣಗಳಿವೆ. ನಮ್ಮ ಜನ ತಾವು ಸೃಷ್ಟಿಸಿದ ದೇವರುಗಳಿಗೂ ತಮ್ಮ ಮೆಚ್ಚಿನ ಆಭರಣಗಳನ್ನು ತೊಡಿಸಿದ್ದಾರೆ. ಹೀಗೆ ದೇವರುಗಳಿಗೆ ಹಾಕುವ ಆಭರಣಗಳ ಪ್ರತ್ಯೇಕ ಪ್ರಕಾರವನ್ನು ಗುರುತಿಸಬಹುದು. ಬುಡಕಟ್ಟು, ಜನರಲ್ಲಿ ಕಲ್ಲು, ಹರಳು, ಸಸ್ಯಗಳ ಬೇರು–ಬೀಜ–ಹೂವು; ಪ್ರಾಣಿಗಳ ಉಗುರು, ಎಲುಬು ಮುಂತಾದ ಪದಾರ್ಥಗಳಿಂದ ಆಭರಣಗಳನ್ನು ಮಾಡಿ ಹಾಕಿಕೊಳ್ಳುವುದು ರೂಢಿಯಿದ್ದರೆ ಜನಪದರ ಬದುಕಿನಲ್ಲಿ ಅದೇ ವಿನ್ಯಾಸಗಳು ಲೋಹರೂಪದಲ್ಲಿ ಮರುಕಳಿಸಿರುವುದನ್ನು ಕಾಣಬಹುದು. ಉಡುಗೆ ತೊಡುಗೆಯ ಶೈಲಿಗೆ ಹೊಂದಿಕೆಯಾಗುವಂತೆ ಆಭರಣಗಳ ವಿನ್ಯಾಸವಿರುವುದನ್ನು ಇನ್ನೂ ಜೀವಂತವಿರುವಿದನ್ನು ಕಾಣುತ್ತೇವೆ.

6.2 ಮಕ್ಕಳ ಉಡುಪುಗಳು

ಗಂಡು ಮಗುವಾಗಲಿ, ಹೆಣ್ಣು ಮಗುವಾಗಲಿ ಸುರಕಿ ಅಂಗಿ, ಕುಂಚಗಿ, ಕುಲಾಯಿ ಹಾಕುತ್ತಾರೆ. ಖಣದ ಕುಂಚಿಗಿ, ಗುಬ್ಬಿ ಕುಂಚಗಿ, ಮುತ್ತಿನ ಕುಂಚಿನ, ಜುಲಪಿ ಹೂವಿನ ಕುಂಟುಗಿ, ಗೊಂಡೆ ಕಟ್ಟಿದ ಕುಂಚಿಗಿಗಳನ್ನು ಕಟ್ಟುತ್ತಾರೆ. ಹೆಣ್ಣು ಮಗು ಒಂದು ವರ್ಷದ್ದಾಗುವ ವೇಳೆಗೆ ನೀಲಿ ಅಂಗಿ, ಗಂಡು ಮಗುವಾದಲ್ಲಿ ಅರ್ಧ ತೋಳಿನ ಅಂಗಿ, ಕುಂಚಗಿ ಯಾವಾಗಲೂ ಇದ್ದದ್ದೇ.

ಇಪ್ಪತ್ತು ವರ್ಷಗಳ ಹಿಂದೆ ಗಂಡು ಮಗು ಸಾಧಾರಣ ಹತ್ತು ವರ್ಷದ್ದಾಗುವವರೆಗೆ 'ಚೋಣ್ಣ'ವನ್ನು ಹಾಕುತ್ತಿರಲಿಲ್ಲ. ಅಂಗಿಯನ್ನೇ ಮೊಳಕಾಲವರೆಗೆ ಹೊಲಿಸಿ ತೋಡಿಸುತ್ತಿದ್ದರು. ಜಾತ್ರೆಗೆ ಇಲ್ಲವೆ ಊರಿಗೆ ಹೋಗುವಾಗ ಮಾತ್ರ 'ಚೋಣ್ಣ', ಅಂಗಿ, ಜರದ ಟೊಪ್ಪಿಗಿ ಹಾಕುತ್ತಿದ್ದರು.

ಈಗಲೂ ಸಹ ದುಡಿಯುವ ಹೆಂಗಸರಿಗೆ ಮಕ್ಕಳ ಉಡುಪುಗಳ ಕಡೆಗೆ ವಿಶೇಷ ಗಮನ ಕೊಡಲು ಸಾಧ್ಯವಾಗುವದಿಲ್ಲ. ಹೀಗಾಗಿ ಮಕ್ಕಳು ಒಂದು ಅಂಗಿಯನ್ನು ತೊಟ್ಟುಕೊಂಡು ಮಳೆಗಾಲ–ಚಳಿಗಾಲದಲ್ಲಿ ಯಾವಾಗಲೂ ಕುಂಚಿಗಿ ಕಟ್ಟಿಕೊಂಡು ಆಟವಾಡುವದನ್ನು ಹಳ್ಳಿಗಳಲ್ಲಿ ಇಂದಿಗೂ ನೋಡಬಹುದು.

ಹೆಣ್ಣು ಮಕ್ಕಳಿಗೆ ಐದು ವರ್ಷದವರಾಗುವವರೆಗೆ ಮೊಳಕಾಲವರೆಗಿನ ಚೀಟಿನ ಅಂಗಿ, ನಂತರ ಲಂಗ–ಜಂಪರ್ ತೊಡಿಸುವರು. ಹತ್ತು–ಹನ್ನೆರಡು ವರ್ಷಕ್ಕೆ ಸಣ್ಣಂಚಿನ ಸಣ್ಣ ಸೀರೆ ಉಡಿಸುತ್ತಿದ್ದರು ಐದು ವರ್ಷಕ್ಕೆ ಸೋದರ ಮಾವನು 'ಹುಟ್ಟದಟ್ಟಿ' ಅಥವಾ 'ಹುಟ್ಟಸೀರಿ'ಗಿ ಕೊಡುವ ಪದ್ಧತಿ ಇಂದಿಗೂ ಇದೆ. ಮೈನೆರೆತ ನಂತರ ಅಂಚು ಸೆರಗಿನ (ಆರುವಾರಿನ) ಸೀರೆಯನ್ನುಡುವರು.

ಕಾಲ ಬದಲಾಗಿರುವದರಿಂದ ಮದುವೆಯಾಗುವವರೆಗೆ ಹೆಚ್ಚೆಂದರೆ ಹದಿನಾರು ವರುರ್ಷದವರಾಗುವವರೆಗೆ ಕಟ್ಟುವಲಂಗ-ಜಂಪರ್ ತೊಡುವರು.

ಒಳ ಉಡುಪಾಗಿ ಹುಡುಗಿಯರು ಜಾಕೇಟ್ (ಬಾಡಿ) ಲಂಗವನ್ನು ಧರಿಸಿ, ಚಡ್ಡಿಯನ್ನು ಇತ್ತೀಚೆಗೆ ಧರಿಸುತ್ತಿರುವರು.

6.3 ಸೀರೆಗಳು

ಮೈನೆರೆತ ಸೀರೆ:– ಹುಡುಗಿ ಮೈ ನೆರೆತದ್ದು ತಿಳಿದ ತಕ್ಷಣ ಅವಳನ್ನು ಮುಟ್ಟಿ, ಅರಿಷಿಣ, ಕೊಬ್ಬರಿ ಎಣ್ಣೆ ಮೈ ತುಂಬ ಹಚ್ಚಿ ಎರೆದು ಸೀರೆ ಉಡಿಸಿ ಆರತಿ ಮಾಡುವರು. ದಿನ ನಿತ್ಯ ಬಂಧು-ಬಳಗದವರು ಸಿಹಿ ಊಟ ಮಾಡಿಸಿ ಸೀರೆ-ಕುಪ್ಪಸ ಕೊಟ್ಟು ಆರತಿ ಮಾಡುವರು. ಇಪ್ಪತ್ತೊಂದು ದಿನ ಹುಡುಗಿಯನ್ನು ಮಂಟಪದಲ್ಲಿ ಕೂಡಿಸಿ ಅಲಂಕರಿಸಿ ಆರತಿ ಮಾಡುವ ಪದ್ಧತಿ ಇದೆ. ಇಪ್ಪತ್ತೊಂದನೆಯ ದಿನ ಊರ ಹೆಂಗಸರು ಸೇರಿ 'ಸೋಬಾನ' ಕಾರ್ಯಕ್ರಮ ಮಾಡುವರು. ಅವಳನ್ನು ಮೊದಲು ಮುಟ್ಟಿ 'ಎರದಾಕಿಗೆ ಒಂದು ನೆರದಾಕಿಗೆ ಒಂದು' ಎಂದು ಎರಡು ಸೀರಿ ತಂದು ಆಹೇರು ಮಾಡುವರು. ಹುಡುಗಿಗೆ ಜರದಂಚಿನ ಹಸಿರು ಸೀರೆ, ಹಸಿರು ಕುಪ್ಪಸ ತೋಡಿಸುವರು ಹಸಿರು ಬಳೆ ಇಡಿಸುವರು.

ಮದುವೆ ಸೀರೆಗಳು:– ಹುಡುಗಿ ವರನಿಗೆ ಒಪ್ಪಿಗೆ ಆದಲ್ಲಿ ಅವಳಿಗೆ ಹಣ್ಣು ಉಡಿ ತುಂಬಿ ಬರುತ್ತಾರೆ. ನಂತರ ಮದುವೆಗಿಂತ ಮೊದಲು ಬರುವ ಪಂಚಮಿ ಹಬ್ಬಕ್ಕೆ ಸೀರೆ-ಖಣ ಒಯ್ದುಕೊಟ್ಟು ಆರತಿ ಮಾಡುವರು. ಈ ಕಾರ್ಯಕ್ಕೆ 'ಉಂಡಿ-ಸೀರೆ ಕಾರ್ಯ ಎನ್ನುತ್ತಾರೆ. ಗೌರಿ ಹುಣ್ಣಿಮೆಗೆ ಬಂದರೆ ಹೊಸ ಸೀರೆ-ಕುಪ್ಪಸ ಹೂವಿನ ದಂಡಿ, 'ಸಕ್ಕರಿ ಆರತಿ' ಒಯ್ದು ಕೊಟ್ಟು ಆರತಿ ಮಾಡಿ ಬರುತ್ತಾರೆ.

ಸಕ್ಕರಿ ಸೀರೆ:– "ನಮ್ಮ ಕಾಲಕ್ಕೆ ಹಣ್ಣಿಡುವಾಗ ನಾಲ್ಕು ವರಾ ಅಂದರೆ ಹದಿನಾರು ರೂಪಾಯಿ ಹಣ್ಣಿಗೇ ಹಚ್ಚಿ ಉಡ್ಯಾಗ ಹಾಕಿದ್ರು ಒಂದು ಚೀಲ ಸಕ್ಕರಿ ಹಂಚಿದ್ರು ಹದಿನಾರು ಮೊಳದ ದೊಡ್ಡ ಚೌಕಳಿ ಸೀರೆ, ಕುಬುಸದ ಕಣಾ, ಕಾಲಿಗೆ ಪಂಚೇರಿನ ತೋಡೆ, ಒಂದು ಸೇರಿನ ಗೆಜ್ಜೇ ಪಟ್ಟೆ, ಕಿವಿನಾವು ಹಾಕಿದ್ರು" ಎಂದು ಐವತ್ತೈದು ವರ್ಷದ ಹಿರಿಯ ಮುತ್ತೈದೆ ಪಾರತೆವ್ವ ನಾಲಗೇರ ನೆನಪಿಸಿಕೊಳ್ಳುತ್ತಾರೆ.

ಇದು ಗಂಡಿನವರು ಮದುವೆಗೆಂದು ಕೊಡುವ ಮೊದಲ ಸೀರೆಯಾಗಿರುತ್ತದೆ.

ಅರಷಿಣ ಸೀರೆ:– ಇದು ಹಳದಿ ಬಣ್ಣದ್ದು ಇರುತ್ತದೆ ಇದು ಈಗಿನ ಪ್ರಿಂಟೆಂಡ್ ಪತ್ತಲ ಆಗಿರಬಹುದು. ಇದಕ್ಕೆ 'ಸುರಗೀ ಸೀರೆ' ಎಂದು ಹೇಳುವರು.

ಮೇಲ್ಮುಸುಗಿನ ಸೀರೆ:- ಮದುವೆ ಮೂಹೊರ್ತ ಸಮಿಪಿಸುತ್ತಿದ್ದಂತೆ ಮದುಮಗಳಿಗೆ ಮೇಲ್ಮುಸುಗಿನ ಸೀರೆಯನ್ನು ಹೆಗಲ ಮೇಲೆ ಹೊದಿಸುವರು. 'ಮೇಲ್ಮುಸುಗು' ಎಂದು ಹೇಳುತ್ತಾರಾದರೂ ಯಾರೂ ಮುಖಕ್ಕೆ ಮುಸುಕು ಹಾಕಿಕೊಳ್ಳುವುದಿಲ್ಲ. ಇದನ್ನು ಸೋದರ ಮಾವನೇ ತರುತ್ತಾನೆ.

'ಮಡಿಸೀರೆ' ಮದುವೆ ಅಕ್ಕೀಕಾಳು ಬಿದ್ದ ನಂತರ ದೊಡ್ಡ ಸೀರೆ ಎಂದರೆ ಬೆಲೆ ಬಾಳುವ ರೇಶಿಮೆ ಜರದಂಚಿನ ಸೀರೆಯನ್ನು ಮದುಮಗಳಿಗೆ ಉಡಿಸುತ್ತಾರೆ.

ದೊಡ್ಡ ಸೀರೆ:- ಮತ್ತೊಂದು ದೊಡ್ಡ ಸೀರೆಯನ್ನು ಮದುಮಗಳಿಗೆ ಉಡಿಸಿ ಒಂಬತ್ತು ಖಣಗಳನ್ನು ಉಡಿ ತುಂಬುವರು.

ಬೀಗಿತ್ತಿ ಸೀರೆ:- ಮದುಮಗಳ ತಾಯಿಗೆ 'ಬೀಗಿತ್ತಿ' ಸೀರೆ ಕೊಡುವರು ಇದಕ್ಕೆ 'ಮುಯ್ಯದ ಸೀರೆ' ಎಂದೂ ಹೆಸರು. ಇಂತಹದೇ ಬಣ್ಣದ್ದಿರಬೇಕೆಂಬ ನಿಯಮವಿಲ್ಲ.

ಶ್ಯಾವಿಗಿ ಸೀರೆ:- ಗಂಡಿನವರು ಸೊಸೆಯನ್ನು ಮನೆ ತುಂಬಿಸಿಕೊಂಡು ಮತ್ತೆ ತೌರುಮನೆಗೆ ಕಳುಹಿಸುವಾಗ ಸೊ ಸೀರೆ ಉಡಿಸಿ 'ಉಡೆಕ್ಕಿ' ಹಾಕಿ-ಕಳುಹಿಸುವರು. ಊರ ಹೆಂಗಸರು ಉಡಿ ತುಂಬಿ ಕಳುಹಿಸುವರು. ಗಂಡಿನವರು ಕೊಡುವ ಈ ಸೀರಿಗೆ 'ಶ್ಯಾವಿಗಿ ಸೀರೆ' ಎನ್ನುವರು. ಇದು ಮದು ಮಕ್ಕಳ ಶುಭರಾತ್ರಿಯ ಸೀರೆಯಾಗಿರುತ್ತದೆ. ಇದಕ್ಕೆ ಪ್ರಸ್ತದ ಸೀರೆಯೆಂದೂ ಹೇಳುವರು. ಮದುಮಗಳು ಶ್ಯಾವಿಗಿ ಸೀರೆಯನ್ನುಟ್ಟು ತೌರಿಗೆ ಬಂದಾಗ 'ಶ್ಯಾವೀಗಿ ಸೀರೆ ಚಲೋದು ತಂದೀಯ' ಎಂದು ಹೆಂಗಸರು ಹ್ಯಾಸಮಾಡಿ ಛೇಡಿಸುವರು.

ಶ್ಯಾವಿಗಿ ಬಸಿದು ಪಾಯಸದೂಟ ಉಣಿಸಿ ಮದುಮಗಳಿಗೆ ಈ ಸೀರೆಯನ್ನು ಕೊಟ್ಟಿರುತ್ತಾರೆ.

ಪಂಚಮಿ ಹಬ್ಬಕ್ಕೆ 'ಕರೀ ಚಂದ್ರಕಾಳಿ' ಸೀರೆಯನ್ನು ತೌರಿನವರು ಕೊಡುತ್ತಾರೆ.

ಕುಬಸದ ಸೀರಿ (ಬಸುರಿ ಸೀರೆ):- ಮದುಮಗಳು ಹೊಸ ಸಂತೋಷದಲ್ಲಿ ಗಂಡನ ಮನೆಗೆ ಹೋಗಿ ಪ್ರಥಮ ಸಲ ಗರ್ಭಿಣಿಯಾದಾಗ ಅವಳಿಗೆ ತವರಿನವರು ಬಗೆ ಬಗೆಯ ತಿಂಡಿ ತಿನಿಸುಗಳನ್ನು ಮಾಡಿಕೊಂಡು ಹೋಗಿ ಕೊಟ್ಟು ಬರುವರು ಮತ್ತು ಆರನೆಯ ತಿಂಗಳಲ್ಲಿ ಹಸಿರು ಸೀರೆ-ಹಸಿರು ಕುಪ್ಪಸದ ಖಣವನ್ನು ಕೊಟ್ಟು ಆರತಿ ಮಾಡುವರು. ಬಂಧು-ಬಳಗದವರಿಗೆ ಸಿಹಿ ಊಟ ಮಾಡಿಸುವರು.

6.4 ಬಾಣಂತಿ ಉಡುಪುಗಳು

ಹಳ್ಳಿಗಳಲ್ಲಿ ಸಾಮಾನ್ಯವಾಗಿ ಮನೆಯಲ್ಲಿಯೇ ಹೆರಿಗೆ ಮಾಡಿಸುತ್ತಾರೆ. ಬಸಿರಿಗೆ ಹೆರಿಗೆ ನೋವು ಜೋರಾದ ಕೂಡಲೇ ಕತ್ತಲೆ ಕೋಣೆ ಕರೆದೊಯ್ಯುವರು. ಸೂಲಗಿತ್ತಿಯ ಸಹಾಯದಿಂದ ಮಗು ಹೊರ ಬಂದ ಕೂಡಲೇ ಕೂಸಿನ ಹುರಿ ಕೊಯ್ದು ಹೊಕ್ಕಳ ಹುರಿಯ ತುದಿಗೆ ದಾರಕಟ್ಟುವರು. ಆ ಮೇಲೆ ಎರೆದು ಮೈ ಒರೆಸಿ ಹಳೆಯ ಬಟ್ಟೆಗಳನ್ನು ಸುತ್ತುವರು. ಹೊರಸಿನ ಮೇಲೆ ಪಾಟು ಹಾಸಿ, ಕೌದಿ, ರಗಟೆಗಳನ್ನು ದಪ್ಪಗೆ ಹಾಸಿ, ತಲೆಗೆ 'ಕುಲಾಯಿ' ಕಟ್ಟಿ ಮಲಗಿಸುವರು. ಬಾಣಂತಿಗೆ 'ನೀರು ಹಣಿಸಿ' ಹಳೆಯ ಪಡಕಿ'ಗಳನ್ನು ಉಡಿಸುವರು. ತಲೆ-ಕಿವಿ ಬೆಚ್ಚಗಿರುವಂತೆ 'ಕುಲಾಯಿ' ಕಟ್ಟುವರು. ಬಾಣಂತಿ ಮನೆಯಲ್ಲಿ ಓಡಾಡುವಾಗ ಕಂಬಳಿ ಹೊದ್ದುಕೊಂಡು ಓಡಾಡುವಳು.

ಮಗುವನ್ನು ತೊಟ್ಟಲಿಗೆ ಹಾಕಿ:–ಹೆಸರಿಡುವ ದಿನ ಎರಡೂ ಮನೆಯವರೂ (ತವರು ಮನೆ-ಗಂಡನ ಮನೆ) ಮಗುವಿಗೆ ಕುಂಚಿಗಿ, ಕುಲಾಯಿ, ಅಂಗಿ, ಖಣದ ಕೌದಿ, ಉಣ್ಣೆಯ ಅಂಗಿ, ಟೊಪ್ಪಿಗೆ, 'ಕಾಲು ಕುಬುಸ' ಮುಂತಾದವುಗಳನ್ನು ತಂದು ಬಾಣಂತಿಗೆ ಖಣದೊಡನೆ ಉಡಿ ತುಂಬುವರು.

ಹೆಸರಿಡುವ ಸೋದರತ್ತೆಗೂ ಹೊಸ ಸೀರೆ ಉಡಿಸುವರು. ತವರು ಮನಿಯಿಂದ ಕಳುಹಿಸುವಾಗ ಹೆಣ್ಣು ಮಗುವಿಗೆ ಐದು ಅಂಗಿ, ಐದು ಕುಂಚಿಗಿ, ಐದು ದುಬುಟೆ (ದುಪ್ಪಟೆ)ಯನ್ನು ತರುವರು. ಮತ್ತು ಉಂಗುರ, ಹಾಲಗಡಗ, ಗೆಜ್ಜೆ ಕಿವಿಯಲ್ಲಿ ಮುರುವು ಹಾಕಿ ಕಳುಹಿಸುವರು. ಗಂಡು ಮಗುವಿಗೆ ಅಂಗಿ, ಕುಂಚಿಗೆಗಳ ಜೊತೆಗೆ "ಉಢದಾರ, ಹಾಲಗಡಗ, ಉಂಗುರ, ಚೈನು, ಪೆಂಡೇರ ಗೆಜ್ಜೆ, ಗೋಡಂಬಿ ಗೆಜ್ಜೆ, ಜುಲಪಿ ಹೂವು. ತೊಟ್ಟಿಲ ಬೆಳ್ಳಿ ಬಟ್ಟಲ-ಚಮಚೆ, ಗುಬ್ಬಿ ಚೆಟ್ಟು ಇವುಗಳನ್ನೆಲ್ಲ ತಂದುಕೊಟ್ಟು ತಾಯಿ ಮಗುವನ್ನು 'ತೊಟ್ಟಿಲನಿಬ್ಬಣ' ಕಳುಹಿಸುವರು.

ವಿವಿಧ ಅಂಚು ಸೆರಗುಗಳ ಸೀರೆಗಳು:– ಹೊಲಗೆಲಸ ಮಾಡುವ ಹೆಂಗಸರು ಹಳ್ಳಿಗಳಲ್ಲಿ ಸಾಮಾನ್ಯವಾಗಿ 'ದಡಿ ಸೀರೆ' ಗಳನ್ನುಡುತ್ತಾರೆ. ಹಳೆಯ ತಲೆ ಮಾರಿನ ಹಿರಿಯ ಹೆಂಗಸರು "ಮೂರು ಗಾಡೆ ಧಡಿ, ನಾಲ್ಕುಗಾಡೆ ದಡಿ ಸೀರೆಗಳನ್ನುಡುತ್ತಾರೆ.

ಹೊಸ ಪೀಳಿಗೆ ಹೆಂಗಸರು ದಿನ ನಿತ್ಯ ಹೊಲಗೆಲಸ-ಮನೆಗೆಲಸಗಳಲ್ಲಿ ನೀಲಿ ಹಾಗೂ ಗುಲಾಬಿ ಬಣ್ಣಗಳಲ್ಲಿ ಹೂವುಗಳಿರುವ ಅಂಚು-ಸೆರಗುಗಳ ಸೀರೆಗಳು ಒಜ್ಜ ಆಗ್ತಾವ ಈಗ ಸೂಕ್ಷ್ಮ ಕಾಲ ಐತಿ ನಾವು ಪತ್ತಲ ಉಡ್ತೇವಿ" ಎನ್ನುತ್ತಾರೆ.

ದಡಿ ಸೀರೆಗಳು:– ಮೂರು ಗಾಡೆ ದಡಿ, ನಾಲ್ಕು ಗಾಡೆ, ಪರಾಸೆ ಪೇಟದಡಿ ಇರುವ ಸೀರೆಗಳು ವಿವಿಧ ಬಣ್ಣಗಳಲ್ಲಿ ದೊರೆಯುತ್ತವೆ. ಅಂಚಿನಲ್ಲಿ ಮೇಲೆ ಎರಡು ಸಣ್ಣ ಕುಸುರಿನ ಪಟ್ಟಿಗಳು ರೈಲು ಹಳಿಗಳಂತೆ ಸಾಗಿರುತ್ತವೆ. ಇನ್ನೊಂದು ಸಾಲು ಒಂಟಿ ಹಳಿಯಂತೆ ಕುಸುರಿ ಹೂವಿನಿಂದ

ಸಾಗಿರುತ್ತದೆ. ನಾಲ್ಕು ಗಾಡೆ ದಡಿಯಲ್ಲಿ ಎರಡು ಸಾಲು ರೈಲು ಹಳಿಯಂತೆ ನಾಲ್ಕು ಪಟ್ಟಿಗಳು ಇರುತ್ತವೆ.

ಪರಾಸ ಪೇಟೆ ದಡಿಯಲ್ಲಿ ಸಣ್ಣ ಜರಿಯ ಇಲ್ಲವೆ ರೇಶಿಮೆ ಎಳೆಗಳಿಂದ ಮೂರು ಬೆರಳನಷ್ಟು ಅಗಲವಾದ ಅಂಚು ದಟ್ಟವಾಗಿ ನೇಯಲ್ಪಟಿರುತ್ತದೆ. ಈ ಸೀರೆಗಳಿಗೆ ಪಟ್ಟಿ ಸೆರಗು, ಟೋಪ ಸೆರಗು, ರೇಶಿಮೆ ಸೆರಗುಗಳು ಇರುತ್ತವೆ.

6.5 ಟುವಾಲು

ಹಳ್ಳಿಯ ಸಂಸ್ಕೃತಿಯಲ್ಲಿ ಪುರುಷರು ಬಳಸುವ ದಿನ ನಿತ್ಯದ ತಲೆಯುಡುಗೆಗಳಾಗಿವೆ. ಟುವಾಲುಗಳು ವಿವಿಧ ಬಣ್ಣಗಳಲ್ಲಿ ದೊರೆಯುತ್ತಿವೆ. ಹಿರಿಯರೂ, ಕಿರಿಯರೂ ಟುವಾಲುಗಳನ್ನು ಸುತ್ತಿಕೊಳ್ಳುವರು.

ಹೊಲಗೆಲಸಗಳಲ್ಲಿ ದುಡಿದು ದಣಿವಾದಾಗ, ಬೆವರೊರೆಸಿಕೊಳ್ಳಲು, ಮಳೆ ಬಂದಾಗ ಮೈ ಒರೆಸಿಕೊಳ್ಳಲು ಉಪಯೋಗವಾಗುತ್ತವೆ. ಹೊಲದಲ್ಲಿ ಯಾವುದೇ ಕೆಲಸ ಮಾಡುವಾಗ ಟುವಾಲನ್ನು ಸುತ್ತಿಕೊಳ್ಳುವರು.

ತಲೆಯ ಮೇಲೆ ಗೊಬ್ಬರ ಬುಟ್ಟೆ ಮಣ್ಣು ತುಂಬಿದ ಬುಟ್ಟಿಯನ್ನು ಹೊರುವಾಗ ನೆತ್ತಿಯನ್ನು ಮುಚ್ಚುವಂತೆ ಒಂದು ಪದರನ್ನು ಎಳೆದು ಉಳಿದ ಚುಂಗಿನಿಂದ ದುಂಡಗೆ ಸುತ್ತಿಕೊಳ್ಳುವರು. ಅಂದರೆ ತಲೆಯ ಮೇಲೆ ಧೂಳು ಬೀಳುವದಿಲ್ಲ.

ಭಾರವಾದ ಕಾಳಿನ ಚೀಲಗಳನ್ನು ಬೆನ್ನ ಮೇಲೆ ಹೊರುವಾಗ ನೆತ್ತಿಯ ಮೇಲೆ ಒಂದು ಪದರನ್ನು ಎಳೆದು ಅದೇ ಚುಂಗಿನಿಂದ ಕುತ್ತಿಗೆಯ ಹತ್ತಿರ ಗಂಟು ಹಾಕಿಕೊಳ್ಳುವರು. ಉಳಿದ ಉದ್ದವಾದ ಪದರನ್ನು ಬೆನ್ನಮೇಲೆ ಇಳಿ ಬಿಡುವರು. ಏಕೆಂದರೆ ಕಾಳಿನ ಚೀಲ ಹೊರುವಾಗ ಅಂಗಿಯನ್ನು ಧರಿಸುವುದಿಲ್ಲ.

ದೇವರ ಪ್ರಸಾದ ಸ್ವೀಕರಿಸುವಾಗ ಬಕ್ಕ ನೆತ್ತಿಯಲ್ಲಿ ಪ್ರಸಾದ ಸ್ವೀಕರಿಸುವದಿಲ್ಲ. ಟುವಾಲು ನೆತ್ತಿಯ ಮೇಲೆ ಅವಶ್ಯವಾಗಿಬೇಕು. ಹಣ ಕೊಡುವಾಗ-ತೆಗೆದುಕೊಳ್ಳುವಾಗ ಹಳ್ಳಿಯ ಯಾವುದೇ ಒಳ್ಳೆಯ ಕೆಲಸ ಮಾಡುವಾಗ ನೆತ್ತಿಯ ಮೇಲೆ ಟುವಾಲು ಇರಲೇಬೇಕು.

ಶವ ಸಂಸ್ಕಾರಕ್ಕೆ ಸ್ಮಶಾನಕ್ಕೆ ಹೋಗುವಾಗ ಮಾತ್ರ ಬಕ್ಕನೆತ್ತಿಯಲ್ಲಿ ಹೋಗುವರು. ಟುವಾಲು ಹೊದೆಯುವದಿಲ್ಲ.

6.6 ಟೊಪ್ಪಿಗೆಗಳು

ಹಳ್ಳಿಯ ಪ್ರಾಥಮಿಕ ಶಾಲಾ ಮಾಸ್ತರರು ಸರಳ ಜೀವನ ನಡೆಸುವಂತಹವರಿದ್ದು ಯಾವಾಗಲೂ ಖಾದಿ ಬಟ್ಟೆಯ ಅಂಗಿ, ಧೋತರ, ಖಾದಿ ಟೊಪ್ಪಿಗೆಗಳನ್ನು ಧರಿಸುತ್ತಿದ್ದರು. ಇಂದಿಗೂ ಹಳ್ಳಿಗಳಲ್ಲಿ ನಿವೃತ್ತರಾದ ಪ್ರಾಥಮಿಕ ಶಾಲಾ ಗುರುಗಳು ಗಾಂಧಿ ಟೊಪ್ಪಿಗೆ ಧರಿಸಿ ಖಾದಿ ಬಟ್ಟೆಗಳನ್ನು ಉಡುವುದನ್ನು ನೋಡಬಹುದು.

ಯಜಮಾನಿಕೆಯುಳ್ಳ ಹಿರಿಯರು ಕರಿಯ ರಟ್ಟಿನ ಟೊಪ್ಪಿಗೆಗಳನ್ನು ಧರಿಸಿ ಪೇಟೆಗೆ ಹೋಗುತ್ತಾರೆ. ಕೈಯಲ್ಲಿ ಯಾವಾಗಲೂ ಇವರಿಗೆ ಕೊಡೆ ಬೇಕಾಗುತ್ತದೆ.

ಅಂಗಡಿಯಲ್ಲಿ ಯಜಮಾನಿಕೆ ಮಾಡುವ ಕೊಮಟಿಗರು ಕೆಂಪು ಬಣ್ಣದ ಇಲ್ಲವೆ ಚಾಕ್ಲೇಟ್ ಬಣ್ಣದ ರಟ್ಟಿನ ಟೊಪ್ಪಿಗೆಯನ್ನು ಹಾಕಿಕೊಳ್ಳುವರು.

ಲೆಕ್ಕ ಪತ್ರಗಳನ್ನಿಡುವ ಗುಮಾಸ್ತರು ಕಚೇರಿಗಳಿಗೆ ಹೋಗುವಾಗ ಬಿಳಿ ಬಣ್ಣದ ರಟ್ಟಿನ ಟೊಪ್ಪಿಗೆ ಧರಿಸುವರು.

ರಾಜಕಾರಣಿಗಳು ಗಂಜಿ ಇಸ್ತ್ರೀ ಮಾಡಿದ ಬೆಳ್ಳಗಿನ ಗಾಂಧೀ ಟೋಪ್ಪಿಗೆ ಹಾಕಿಕೊಳ್ಳುವರು. ಹಳ್ಳಿಗಳಲ್ಲಿ ರಾಜಕಾರಣಿಗಳಿಗೆ, ಪುಢಾರಿಗಳಿಗೆ 'ಚೂಪನ್ನ ಟೋಪಿಗಿಯವರು' ಎಂದು ವ್ಯಂಗ್ಯ ಮಾತಾಡಿಕೊಳ್ಳುವರು.

'ಟೋಪಿಗೆ ಹಾಕೋರು' ಎಂದರೆ ಮುಗ್ಧರನ್ನು ಮರಳು ಮಾಡಿ ತಮ್ಮ ಕೆಲಸ ಸಾಧಿಸಿಕೊಳ್ಳುವವರು ಎಂಬರ್ಥದಲ್ಲಿ ಮಾತಾಡುವರು.

ಜರದ ಟೊಪ್ಪಿಗೆಗಳನ್ನು ಜವಳಾ ತೆಗೆಸಿದ ಮಕ್ಕಳಿಗೆ ಹಾಕಿ ಸಂಭ್ರಮ ಪಡುವರು.

ಮುಸ್ಲಿಂ ಧರ್ಮದ ಉಡುಪುಗಳು:-

ಮುಸ್ಲಿಂ ಜನರು ಮಗು ಹುಟ್ಟಿದ ನಲವತ್ತೆರಡು ದಿನಗಳವರೆಗೆ ಹೊಸ ಬಟ್ಟೆಗಳನ್ನು ತೊಡಿಸುವದಿಲ್ಲ. ನಲವತ್ತೆರಡನೆಯ ದಿನಕ್ಕೆ ಹೆಸರಿಟ್ಟು ಹೊಸ ಬಟ್ಟೆಗಳನ್ನು ಹಾಕುವರು. ಈ ಆಚರಣೆಗೆ 'ಚಿಲ್ಲಾರ್' ಎಂದು ಹೆಸರು.

ಮಗುವಿಗೆ ಹೆಸರಿಡುವಾಗ ಎಲ್ಲಾ ಜಾತಿಧರ್ಮದವರಂತೆಯೇ ಅಂಗಿ ಟೋಪಿ, ಚಡ್ಡಿ, ಮಕ್ಕಳಿಗೆ ಹಾಸುವ ದುಪ್ಪಟಿಗಳನ್ನು ಬಾಣಂತಿಗೂ ಹೊಸ ಸೀರೆ ಉಡಿಸುವರು.

ಗಂಡು ಮಕ್ಕಳಿಗೆ ಅಂಗಿ-ಚಡ್ಡಿ, ಪೈಜಾಮ, ಜುಬ್ಬ, ಪ್ಯಾಂಟು-ಶರ್ಟ್ ಹಾಕುವರು. ಬಿಳಿ-ಹಸಿರು-ಚಾಕ್ಲೇಟ್ ಮುಂತಾದ ಬಣ್ಣಗಳ ದಾರದಿಂದ ಹೆಣೆದ ಹೆಣಿಕೆ ಟೋಪಿಗಳನ್ನು ಹಾಕುವರು.

ಈ 'ಟೋಪಿ'ಗಳು ಮುಸ್ಲಿಂ ಧರ್ಮದವರಿಗೆ ಮಾತ್ರ ಸಂಬಂಧಿಸಿದವು ಮಿಂಚುವ ಬೆಳ್ಳಿ-ಬಂಗಾರ ಬಣ್ಣದ ಹೆಣಿಕೆಯ ಟೋಪಿಗಳು ಅವರಿಗೆ ಪ್ರಿಯವಾಗಿರುತ್ತವೆ.

ಹಳ್ಳಿಗಳಲ್ಲಿ ಮಕ್ಕಳು ಎಂದೂ ಬಕ್ಕ ತಲೆಯಲ್ಲಿ ತಿರುಗಾಡುವದಿಲ್ಲ. ಟೋಪಿ ಇಲ್ಲದಿದ್ದರೆ ಟುವಾಲನ್ನು ಸುತ್ತಿ ತಿರುಗಾಡುವರು. ಇಲ್ಲವೆ ಹೆಗಲ ಮೇಲಾದರೂ ಆ ಟುವಾಲು ಇದ್ದೇ ಇರುತ್ತದೆ.

ಹೆಣ್ಣು ಮಕ್ಕಳಿಗೆ ಬಣ್ಣ ಚೀಟಿನ ಅಂಗಿಗಳನ್ನು ತೊಡಿಸುವರು ವಿಶೇಷ ಸಂದರ್ಭಗಳಲ್ಲಿ ಮಿಂಚುವ ಬಟ್ಟೆಯ ಲಂಗಾ ಹೊಲಿಸುವರು.

ಹದಿನಾರರ ಯುವತಿಯರು ಕಟ್ಟುವ ಲಂಗ-ಜಂಪರ ತೊಡುತ್ತಾರೆ. ಒಳಗೆ ಒಂದು ಬಾವಡಿ ಲಂಗಾ ಧರಿಸಿರುತ್ತಾರೆ. ಮೇಲೆ ಜಂಪರ್ ತೊಡುವರು ಕೆಲವರು 'ಓಡನಿ' ಹೊದೆಯುವರು.

ಲಂಬಾಣಿ (ಲಮಾಣಿ) ಹೆಂಗಸರ ಉಡುಪು:- ಕರ್ನಾಟಕ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಲಂಬಾಣಿಗರು ಮೂಲತಃ ರಾಜಸ್ಥಾನದವರೆಂದು ಇವರು ವ್ಯಾಪಾರಕ್ಕಾಗಿ ಸಂಚಾರ ಮಾಡುತ್ತ ದಕ್ಷಿಣದ ಕಡೆಗೆ ಬಂದು ನೆಲೆಸಿದರೆಂದು ವಿದ್ವಾಂಸರ ಅಭಿಪ್ರಾಯ. ಒಟ್ಟಿನಲ್ಲಿ ಇವರು ಅಲೆಮಾರಿಗಳು.

ಉತ್ತರ ಕರ್ನಾಟಕದಲ್ಲಿ ಅಲ್ಲಲ್ಲಿ 'ತಾಂಡಾ' ಮಾಡಿಕೊಂಡು ನೆಲೆಸಿರುವ ಲಂಬಾಣಿಗರು ತಾವು ಕರ್ನಾಟಕದವರು ಎಂದು ಅಭಿಮಾನದಿಂದ ಹೇಳುತ್ತಾರೆ. ಇವರನ್ನು 'ಲಮಾಣ್ಯಾರು' ಎಂದು ಹಳ್ಳಿಗರು ಕರೆಯುತ್ತಾರೆ. ಇವರ ಭಾಷೆ 'ಲಮಾಣಿ' ಭಾಷೆ ಎನ್ನುತ್ತಾರೆ. ಈ ಜನಾಂಗದವರು ಸಂಪ್ರದಾಯ ಪ್ರಿಯರು. ಒಕ್ಕಟ್ಟಿನಲ್ಲಿ ಬಲವಿದೆ. ಎಂದು ನಂಬಿದವರು. ಇವರು ಗುಡ್ಡ ಗಾಡು ಸಮೀಪದಲ್ಲಿಯೇ ತಮ್ಮ ವಸತಿಯನ್ನು ಮಾಡಿಕೊಂಡು ಕಟ್ಟಿಗೆ-ಕಡಿದು ಮಾರಿ ಜೀವನ ಸಾಗಿಸುತ್ತಾರೆ. ಲಮಾಣಿ ಮಹಿಳೆಯರು ಬೆವರು ನೀರಿಳಿಸುತ್ತ ಲಂಗದ ನಿಲಿಗೆಗಳನ್ನು ಚಿಮ್ಮುತ್ತ ಕಟ್ಟಿಗೆ ಹೊರೆ ಹೊತ್ತು ಸಾಗುವದನ್ನು ನೋಡಬಹುದು.

'ಲಮಾಣಿ ಗಿಲ್ಲ್ ಗಿಲ್ಲ್

ನಾನು ಬರ್ತೆನಿ ನಿಲ್ಲ್ ನಿಲ್ಲ್

ಕಟ್ಟಿಗಿ ಹೊರಿ ಚೆಲ್ಲ್ ಚೆಲ್ಲ್'

ಎಂದು ಹಳ್ಳಿಯ ಮಕ್ಕಳು ಅವರನ್ನು ನೋಡಿ ಹಾಡುತ್ತಾರೆ.

ಲಂಬಾಣಿ ಹೆಂಗಸರ ಉಡಿಗೆ-ತೊಡಿಗೆಗಳು ಇತರ ಮಹಿಳೆಯರಿಗಿಂತ ಭಿನ್ನವಾಗಿ ನೋಡಲು ಆಕರ್ಷಕವಾಗಿದ್ದು ತನ್ನದೇ ಆದ ವಿಶೇಷತೆ ಹೊಂದಿವೆ.

"ಲಂಬಾಣಿ ಜನರು ಹೆಚ್ಚಾಗಿ ಕಾಡುಗಳಲ್ಲಿ ಅಲೆದಾಡುವದರಿಂದ ಕೆಂಪು ಬಣ್ಣದ ಬಟ್ಟೆಗಳನ್ನು ಧರಿಸುತ್ತಾರೆ." ಇವರ ಉಡುಗೆ–ತೊಡುಗೆಗಳು ಹೀಗಿವೆ. ಇವರು ಉಡುವ ಲಂಗಕ್ಕೆ 'ಪೇಟಿಯಾ' 'ಲಹಂಗ' ಗಗ್ಗರ' ಮುಂತಾದ ಹೆಸರುಗಳಿವೆ. ಬಣ್ಣದ ತುಂಡುಗಳಿಂದ ಹೊಲಿದ ಕಲಾತ್ಮಕ ಕುಪ್ಪಸಕ್ಕೆ 'ಕಾಂಚಳಿ' ಎನ್ನುತ್ತಾರೆ.

ಎಡಗಡೆ ಸೊಂಟಕ್ಕೆ ಸಿಕ್ಕಿಸಿ ತಲೆಯ ಮೇಲೆ ಹೊದ್ದು ಮತ್ತೊಂದು ಪದರನ್ನು ಎದೆ ಭಾಗ ಮುಚ್ಚುವಂತೆ ಹೊದೆಯುವ ಕೆಂಪು ಬಟ್ಟೆಯೇ ಅವರ ಸೆರಗು. ಅದಕ್ಕೆ 'ಛಾಂಟಿಯಾ' ಘೂಂಗಾಟಾ' ಓಡಣಿ' ಎನ್ನುತ್ತಾರೆ. ಛಾಂಟಿಯಾ ಇದು ಸುಮಾರು 21/2 ಮಿಟರಗಳಷ್ಟು ಇರುತ್ತದೆ. 'ಕಾಂಚಳಿ' ಎದೆ ಭಾಗವನ್ನು ಮುಚ್ಚುವಂತಿದ್ದು, ಬೆನ್ನಿನ ಭಾಗವನ್ನು ಸಣ್ಣ ಲಾಡಿಗಳಿಂದ ಕಟ್ಟುವಂತಿರುತ್ತದೆ. ಶ್ರಮದಾಯಕ ಕೆಲಸಗಳನ್ನು ಇವರು ಮಾಡುವದರಿಂದ ಬೆವರು ಹರಿದು ಹೋಗಲೆಂದು, ಬೆನ್ನು ಹಾಗೆಯೇ ತೆರೆದಿರುವಂತೆ 'ಕಾಂಚಳಿ' ಹೊಲಿಸಿಕೊಳ್ಳುತ್ತಾರೆ. ಸೊಂಟದಲ್ಲಿ ಬಣ್ಣದ ಬಟ್ಟೆಯ ಮೇಲೆ ಕಸೂತಿ ಕೆಲಸ ಮಾಡಿದ ಎಲೆ–ಅಡಿಕೆ ಚಂಚಿ ನೇತಾಡುತ್ತಿರುತ್ತದೆ. ಇದಕ್ಕೆ ಕೋತಳ ಎಂದು ಹೆಸರು.

ಪೇಟಿಯಾ, ಹಾಗೂ ಛಾಂಟಿಯಾ ತುಂಬೆಲ್ಲ ಕಾಜಿನ ಬಿಲ್ಲೆ ಹಾಗೂ ಮಿಂಚಿನ ಬಿಲ್ಲೆ (ಬುಡ್ಡಿ)ಗಳನ್ನು ಹಚ್ಚಿರುವದರಿಂದ ಉಡುಪುಗಳು ಕಣ್ಣು ಕೋರೈಸುವಂತಿರುತ್ತವೆ. ಅಂಚುಗಳಿಗೆ ಕಸೂತಿ ಹೆಣೆದಿರುತ್ತಾರೆ. ಕೆಂಪು ಇಲ್ಲವೆ ಜಾಂಬಳಿ ಬಣ್ಣಗಳ ಉಡುಪಗಳೇ ಇವರಿಗೆ ಪ್ರೀತಿ.

ಕಾಂಚಳಿಯು ಹಳದಿ, ಕೆಂಪು, ನೀಲಿ ವಿವಿಧ ಬಣ್ಣಗಳ ತುಂಡುಗಳಿಂದ ಜೋಡಿಸಿ ಹೊಲಿಯಲ್ಪಟ್ಟಿರುತ್ತದೆ. ಕೊರಳ ಸುತ್ತಲೂ ಹೊಳೆಯುವ ಬಿಲ್ಲೆಗಳನ್ನು ಹಚ್ಚಿ ಹೊಲಿಯುವರು. ಕಾಂಚಳಿಯ ಮುಂಭಾಗದಲ್ಲಿ ಬಣ್ಣ ಬಣ್ಣದ ತುಂಡುಗಳಿಂದ ಮತ್ತೊಂದು, ಉದ್ದ ಭಾಗವನ್ನು ಜೋಡಿಸಿ ಹೊಲಿಯುವದರಿಂದ ಇದನ್ನು ಧರಿಸಿದಾಗ ಹೊಟ್ಟೆ ಕಾಣಿಸುವದಿಲ್ಲ.

ಅವರ ಈ ಸಾಂಪ್ರದಾಯಿಕ ಉಡುಪು ಇತ್ತೀಚಿನ ಪೀಳಿಗೆಯಿಂದ ದೂರ ಸರಿಯುತ್ತಿದೆ. 'ಪ್ರಿಂಟೆಡ್ ಪತ್ತಲ'ಗಳಿಂದ ಪೇಟಿಯಾ ಹಾಗೂ ಕಾಂಚಳಿ ಹೊಲಿಸಿಕೊಳ್ಳುತ್ತಾರೆ. ನೀಲಿ, ಹಳದಿ, ಕೆಂಪು ಬಣ್ಣಗಳ ಘೂಂಗಟಾ ಹೊದಿಯುತ್ತಾರೆ. ಕೆಲವರಂತೂ ಈ ಉಡುಪನ್ನೇ ಬಿಟ್ಟು, ಎಲ್ಲ ಜನಾಂಗದವರಂತೆ ಸಿಂಥೆಟಿಕ್ ಸೀರೆಗಳನ್ನುಟ್ಟು ಅದಕ್ಕೊಪ್ಪುವ ರವಿಕೆಗಳನ್ನು ತೊಡುತ್ತಿರುವದರಿಂದ ಅವರನ್ನು ಲಂಬಾಣಿಗರೆಂದು ಗುರುತಿಸುವದೇ ಕಷ್ಟವಾಗಿದೆ.

6.7 ಆಭರಣಗಳು

'ಘೂಗರಿ' ಇದು ಅವರ ಮಾಂಗಲು ಕೂದಲನ್ನು ಒಪ್ಪವಾಗಿ ಬಾಚಿ ಮದ್ಯ ಬೈತಲೆ ತೆಗೆದು ಎರಡು ಭಾಗ ಮಾಡಿ ಮುಂಗೂದಲಿಗೆ ಕಟ್ಟಿ ಜೋತಾಡಿಸುತ್ತಾರೆ. ಕೊರಳಲ್ಲಿ ಬಿಲ್ಲೆಯ ಹಾರವನ್ನು ಧರಿಸುವರು. ಇದಕ್ಕೆ 'ಹಾಂಸಲಿ' ಎನ್ನುತ್ತಾರೆ. ಬೆಳ್ಳಿಯ ಬಿಲ್ಲೆಯ ಉಂಗುರವನ್ನು ಕೈಗಳ ಬೆರಳುಗಳಲ್ಲಿ ಧರಿಸುತ್ತಾರೆ. ದಂತದ ಅಗಲವಾದ ಬಳೆಗಳನ್ನೇ ಇವರು ಇಟ್ಟುಕೊಳ್ಳುವರು.

ಯುಗಾದಿ ದೀಪಾವಳಿ ಹಬ್ಬಗಳಲ್ಲಿ ತಾಂಡಾದ ಹೆಂಗಸರೆಲ್ಲ ಒಟ್ಟಾಗಿ ಸೇರಿ ನರ್ತಿಸುವಾಗ ಇವರ ಉಡುಪು ತೊಡಪುಗಳು ಮನ ಸೆಳೆಯುತ್ತವೆ.

ಲಂಬಾಣಿ ಗಂಡಸರು: ಧೋತರ, ಪೈಜಾಮ, ಉದ್ದ ತೋಳಿನ ಅಂಗಿಗಳನ್ನೇ ಸಾಮಾನ್ಯವಾಗಿ ಧರಿಸುವರು. ಇತ್ತೀಚಿನವರು ಲುಂಗಿಯುಟ್ಟು ತಲೆಗೆ ಟುವಾಲು ಸುತ್ತುವರು.

ಮದುವೆ ಸಂದರ್ಭದಲ್ಲಿ ತಲೆಗೆ ಮೊಳಿಯಾ (ಪೇಟೆ), ಲಾಡಿ ಝಿಗಲಾ (ಕಸೆ ಅಂಗಿ) ಸೊಂಟಕ್ಕೆ ಪೆಂಟಾ ಸುತ್ತುವರು. ಹಾಗೂ ಮೈ ಮೇಲೆ ಕೆಂಪು ಬಣ್ಣದ ಶಾಲು ಹೊದಿಸುವರು. 'ಗುಡಿಗಿ ಜಾಂಗಿಯಾ' ಎಂದರೆ ಉದ್ದ ಚಲ್ಲಣ ಧರಿಸುವರು. ಎಲೆ-ಅಡಿಕೆ ಚಂಚಿಗೆ 'ಝೋಲಣಾ' ಎನ್ನುತ್ತಾರೆ.

ಮಕ್ಕಳ ಉಡುಪುಗಳಲ್ಲಿ ವಿಶೇಷ ವ್ಯತ್ಯಾಸವಿರುವದಿಲ್ಲ.

6.8 ಹಾಸಿಗೆ-ಹೊದಿಕೆಗಳು

ಪಾಟು:- ಹರಿದ ಗೋಣಿ ಚೀಲಗಳನ್ನು ಹಾಸಲು ಬಳಸುವರು. ಎಲ್ಲ ಋತುಮಾನಗಳಲ್ಲಿ ಇದನ್ನು ಬಳಸಬಹುದು. ಕಡು ಬಡವರು ಗೋಣಿಚೀಲದ ಪಾಟುಗಳನ್ನು ಹೆಚ್ಚಾಗಿ ಹಾಸಿಕೊಳ್ಳಲು ಬಳಸುವರು. ಮತ್ತು ಮಳೆಗಾಲದಲ್ಲಿ ಇದನ್ನೇ ಎರಡು ಪದರಿನ 'ಕುಂಚಿಗಿ' ಮಾಡಿಕೊಂಡು ಹೊದೆದು ಮಳೆಯಲ್ಲಿ ಹೊಸ ಗೆಲಸ ಮಾಡುವರು. ಮನೆಯಲ್ಲಿ 'ರಾಡಿ' ಆಗದಂತೆ ಕಾಲೊರೆಸಲು ಬಾಗಿಲ ಹತ್ತಿರ ಹಾಸುವರು. ಮನೆ ನೀರು ಒಳಗೆ ಸಿಡಿಯದಂತೆ ಕಿಟಗಳಿಗೆ ಕಟ್ಟುವರು. ಗುಡಿಸಲು ಬಾಗಿಲಗಳಿಗೆ ಪಾಟು ಹಾಕುವರು.

ಕಡ್ಡಿ ಚಾಪೆ:- ಶಹರಗಳಲ್ಲಿ ದೊರೆಯುವ ಕಡ್ಡಚಾಪೆಗಳನ್ನು ಮಲಗಲು ಬಳಸುವರು. ಬೀಗರು ಬಂದಾಗ ಹಾಸಿ ಕೂಡ್ರಿಸುವರು.

ಸಿಂದಿ ಚಾಪೆ:- ಈಚಲು ಗರಿಗಳಿಂದ ಈ ಚಾಪೆಗಳನ್ನು ಕೊರವರು ಹೆಣೆಯುವರು. ಕೆಳವರ್ಗದವರು ಇದನ್ನು ಹಾಸಿಗೆಯಾಗಿ ಬಳಸುವರು. ಸಿಂದಿ ಚಾಪೆಯನ್ನು ಬಳಸಿದರೆ ಚೇಳುಗಳು ಬರುತ್ತವೆ ಎಂಬುದು ಇತರ ಜಾತಿಯವರ ನಂಬಿಕೆ.

ತಲೆದಿಂಬು:- ಹಳೆಯ ಸೀರೆ, ಧೋತರ ತುಂಡುಗಳನ್ನು ಸುತ್ತಿ ಬಡವರು ತಲೆದಿಂಬು ಮಾಡಿಟ್ಟುಕೊಳ್ಳುವರು.

ಕಂಬಳಿ:- ಒಕ್ಕಲಿಗರು ಮನೆಯ ಚಾವಣಿಯಲ್ಲಿ ಯಾವಾಗಲೂ ಅತಿಥಿಗಳಿಗೆ ಕುಳಿತುಕೊಳ್ಳಲೆಂದು ಒಂದು ಕಂಬಳಿಯನ್ನು ಹಾಸಿರುತ್ತಾರೆ. ಇದನ್ನು ಹೊದೆಯಲು ಉಪಯೋಗಿಸುವರು. ಎಲ್ಲ ವಯಸ್ಸಿನವರಿಗೂ ಹೊದೆಯಲು ಅನುಕೂಲ. ಇದನ್ನು

ಹೊದೆಯುವದರಿಂದ ಸೊಳ್ಳೆಗಳ ಕಾಟ ತಪ್ಪುತ್ತದೆ. ಈ ಕಂಬಳಿಯನ್ನು ನಾಲ್ಕು ಪದರುಗಳಂತೆ ಮಡಿಸಿ 'ಗೊಂಗಡಿ ಕುಂಚಿ' ಯನ್ನು ಮಾಡಿ ಮಳೆಗಾಲದಲ್ಲಿ ಹೊದೆದು ಹೊಲಗಳಿಗೆ ಹೋಗುವರು. ಬಾಣಂತಿಯರನ್ನು ಇದು ಬೆಚ್ಚಗಿಡುತ್ತದೆ.

ಕೌದಿ:- ಗೊಂದಲಿಗರ ಮಹಿಳೆಯರು ವರ್ಷವಿಡೀ ಹಳೆಯ ಸೀರೆ, ಬಟ್ಟೆಗಳನ್ನು ಸಂಗ್ರಹಿಸಿ ಆಕರ್ಷಕವಾದ ಕೌದಿಗಳನ್ನು ಹೊಲಿದು ಮಾಗುತ್ತಾರೆ. 'ಕೌದಿ' ಹೊಲಿಯುವದು ಒಂದು ಕಲೆ. ಇದು ಎಲ್ಲ ಋತುಮಾನಗಳಲ್ಲಿ ಹಾಸಲು-ಹೊದಿಯಲು ಉಪಯುಕ್ತವಾಗಿರುತ್ತದೆ. ದೊಡ್ಡವರು ಹೊದಿಯುವ ಕೌದಿ ನೂರು-ನೂರಾ ಐವತ್ತು ರೂಪಾಯಿಗೆ ಸಿಗುತ್ತದೆ. ಮಕ್ಕಳ ಕೌದಿಗೆ ಮೂವತ್ತು ರೂಪಾಯಿ ಬೀಳುತ್ತದೆ. ಮಕ್ಕಳ ಕೌದಿಗೆ ದುಪ್ಪಟಿ ಎನ್ನುವರು.

ನೂಲಿನ ಸೀರೆಗಳನ್ನು ಕೌದಿ ಹೊಲಿಯಲು ಬಳಸುವರು. ಕೌದಿ ಹೊಲಿಯಲು ಬುಧವಾರ ಇಲ್ಲವೆ ಶನಿವಾರ ಒಳ್ಳೆಯದಿನವೆಂದು ಇವರು ಭಾವಿಸುವರು. ಅಂಬಾದೇವಿಯನ್ನು ಸ್ಮರಿಸಿ ಕೌದಿ ಹೊಲಿಯಲು ಪ್ರಾರಂಭಿಸುವರು. ಮೊದಲು ಸೀರೆಗಳನ್ನು, ಆರೇಳು ಪದರ ಮಡಿಕೊಳ್ಳುವರು. ಕೌದಿ ಸಾಮಾನ್ಯವಾಗಿ ಐದು ಆರು ಮೊಳ ಉದ್ದವಾಗಿರುತ್ತದೆ. ಇದಕ್ಕೆ 'ತಳಾಸಿಗೆ'(ಪಾಲಾ) ಎನ್ನುವರು. ನಂತರ ಸುತ್ತಲೂ ಸೀರೆಯ ದಡಿಕಟ್ಟುವರು. ನಂತರ ಬಣ್ಣ ಬಣ್ಣದ ಚೌಕ ಅರಿವೆ ತುಂಡುಗಳನ್ನು ಜೋಡಿಸಿ ಹೊಲಿಯುತ್ತ ಹೋಗುವರು. ಇದಕ್ಕೆ 'ಲ್ಯಾವಿ' ಹಚ್ಚುವದು ಎನ್ನುತ್ತಾರೆ. ಇದನ್ನು ಮುಗಿಸುವಾಗ ಇದರ ಹೊಟ್ಟೆಯಲ್ಲಿ 'ಜೋಳದ ಕಾಳು' ಇಲ್ಲವೆ ರೊಟ್ಟೀ ತುಂಡುಗಳನ್ನು ಇಟ್ಟು ಅರಿಷಿಮ ಕುಂಕುಮ ಹಾಕಿ ಪೂಜೆ ಮಾಡಿ ಮುಗಿಸುವರು. ಮಳೆಗಾಲ-ಚಳಿಗಾಲದಲ್ಲಿ ಇದು ಬೆಚ್ಚಗಾಗುತ್ತದೆ. ಬೇಸಿಗೆಯಲ್ಲಿ ದೇಹದ ಉಷ್ಣವನ್ನು ಹೀರಿಕೊಳ್ಳುತ್ತದೆ. ಶ್ರೀ ಸಿದ್ಧಾರೂಢ ಮಠದಲ್ಲಿ ಸಿದ್ಧಾರೂಢರಿಗೆ ಬಡ ಭಕ್ತರು ಕೌದಿಗಳನ್ನು ಅರ್ಪಿಸಿದ್ದಾರೆ. ಅನೇಕ ಮನೆತನಗಳಲ್ಲಿ ಇಂದಿಗೂ ವರ್ಷಕ್ಕೊಮ್ಮೆ 'ಕೌದಿ' ಪೂಜೆ ನಡೆಯುತ್ತದೆ. 'ಕೌದಿ ನಮ್ಮ ಪರಂಪರೆಯದ್ಯೋತಕ. ಕೌದಿ ಮನೆಯ ಹಿರಿಯರಿದ್ದಂತೆ.

ಜಮಖಾನೆ:- ಪಟ್ಟೆ ಪಟೆಯ ಜಮಖಾನಿಯನ್ನು ಹಾಸಲು ಬಳಸುವರು. ನವಲಗುಂದದಲ್ಲಿ ತಯಾರಾಗುವ ಜಮಾಖಾನೆಗಳು ಧಾರವಾಡ ಜಿಲ್ಲೆಯ ಸುತ್ತ ಜನಪ್ರಿಯವಾಗಿವೆ. ಭವಾನಿ ಮಗ್ಗದ ಜಮಖಾನೆಗಳನ್ನು ಹಾಸಿಕೊಳ್ಳುವರು.

ಚವಾಳಿ:- ದಪ್ಪ ನೂಲಿನ ಎಳೆಗಳಿಂದ ನೇಯ್ದ ಚವಾಳಿ ಹಗುರಾಗಿದ್ದು ಒಬ್ಬರು ಅದರ ಮೇಲೆ ಮಲಗಬಹುದು. ಗಾದಿಯ ಕೆಳಗೆ ಹಾಸಬಹುದು. ಅನೇಕರು ಮನೆಯ ಪಡಸಾಲೆಯಲ್ಲಿ ಚವ್ವಾಳಿ ಹಾಸುವರು.

ಗುಡಾರ:- ದೊಡ್ಡ ದೊಡ್ಡ ಜಮೀನುದಾರರ ಮನೆಗಳಲ್ಲಿ ಗುಡಾರದ ಬಳಕೆ ಹೆಚ್ಚು. ನವಲಗುಂದ ತಾಲೂಕಿನ ಹೆಬಸೂರಲ್ಲಿ ತಯಾರಾಗುವ ಗುಡಾರಗಳಿಗೆ ಬೇಡಿಕೆ ಹೆಚ್ಚು. ಮನೆಗೆ ನೂರಾರು ಜನ ಬೀಗರು ಬಂದಾಗ ಒಟ್ಟಿಗೆ ಮಲಗಲು ಕುಳಿತುಕೊಳ್ಳಲು ಹಾಸುವರು. ಕಾಳು-

ಕಡಿಗಳನ್ನು ಒಣಗಿಸಲು ಇದನ್ನು ಹಾಸುಗೆಯಾಗಿ ಬಳಸುವರು. ಕಾಳಿನ ರಾಶಿಯ ಮೇಲೆಯೂ ಗುಡಾರ ಹೊಚ್ಚುವರು. ಇವು ದಪ್ಪ ನೂಲಿನಿಂದ ನೇಯಲ್ಪಟ್ಟಿದ್ದು ಬಹಳ ಭಾರವಾಗಿರುತ್ತವೆ. ಉತ್ತರ ಕರ್ನಾಟಕದ ಕಡೆಗೆ ಗುಬ್ಬಿಯ ಮೇಲೆ ಗುಡಾರ ಹೊಚ್ಚಿದಂತೆ' ಎಂಬ ಗಾದೆ ಮಾತು ಬಳಕೆಯಲ್ಲಿದೆ. ನವಲಗುಂದ, ಕೊಣ್ಣೂರುಗಳಲ್ಲಿಯೂ ಗುಡಾರಗಳು ತಯಾರಾಗುತ್ತವೆ.

ತಾಡಪತ್ರಿ:– ಉತ್ತರ ಕರ್ನಾಟಕದಲ್ಲಿ ತಾಡಪತ್ರಿಗಳನ್ನು ಧಾನ್ಯಗಳನ್ನು ಒಣಗಿಸಲು, ಮಳೆಗಾಲದಲ್ಲಿ ರಾಶಿಯ ಮೇಲೆ ಹೊದಿಸಲು ಬಹಳ ಜನರು ಸೇರಿದಾಗ ಕುಳಿತುಕೊಳ್ಳಲು ಹಾಸುವರು. ಮದುವೆ ಹಂದರದ ಮೇಲೆ ತಾಡಪತ್ರಿಗಳನ್ನು ಹೊದಿಸುವರು.

ಇದು ಕ್ಯಾನವಾಸ್ ಬಟ್ಟೆಯಿಂದ ತಯಾರಿಸಿದ ಮೇಲೆ 'ಮ್ಯಾಣಗಮಟೆ'ನಲ್ಲಿ ನೆನೆಸಿ ಒಣಗಿಸುತ್ತಾರೆ.

ಅರಳಿಗಾದಿ:– ಹಳ್ಳಿಯ ಸ್ಥಿತಿವಂತರ ಮನೆಯಲ್ಲಿ ಮೆತ್ತಗಿನ ಅರಳಿಯ ಗಾದಿಗಳನ್ನು ಹಾಸಿಕೊಂಡು ಮಲಗುವರು. ಈ ಗಾದಿಗೆ ಮೇಲೆ ವಿವಿಧ ಬಣ್ಣಗಳ 'ಮಗ್ಗಲು ಹಾಸಿಗೆ' (ಬೆಡ್‌ಶೀಟ್) ಹಾಸುವರು.

ಹೊದೆಯಲು ರಗ್ಗು, ಶಾಲು, ಚಾದರಗಳನ್ನು ಉಪಯೋಗಿಸುವರು. ಸೋಲ್ಲಾಪುರ, ನಾಗಪುರ ಚಾದರಗಳಿಗೆ ಬೇಡಿಕೆ ಹೆಚ್ಚು. ಕಂಬಳಿಯನ್ನು ಎಲ್ಲರೂ ಹೊದೆಯುವರು.

ಸಮಿಕ್ಷೆ:– ಇಪತ್ತನೆಯ ಶತಮಾನದ ಕೊನೆಯ ವರ್ಷದಲ್ಲಿರುವ ನಾವು ಉತ್ತರ ಕರ್ನಾಟಕದ ಅದರಲ್ಲೂ ಗ್ರಾಮ ಸಂಸ್ಕೃತಿಯ ಉಡುಪುಗಳ ಅಧ್ಯಯನದಿಂದ ಮೂರು ತಲೆಮಾರುಗಳನ್ನು ಅವಲೋಕಿಸಿದಾಗ ನಮ್ಮ ದೇಶಿ ಸಂಸ್ಕೃತಿಯ ಉಡುಪುಗಳು ಕಣ್ಮರೆಯಾಗುವ ಕಾಲ ಬಂದಿದೆ. ಇಂದಿನ ಯುವ ಪೀಳಿಗೆ ನಮ್ಮ ಸಂಸ್ಕೃತಿಯ ಉಡುಪುಗಳ ವೈಶಿಷ್ಟ್ಯವನ್ನು ಮಹತ್ವ ಹಾಗೂ ಅವುಗಳ ಸೊಗಸನ್ನು ತಿಳಿದು ಆ ಉಡುಪುಗಳನ್ನು ಉಳಿಸಿಕೊಳ್ಳುವದರ ಮೂಲಕ ನಮ್ಮ ಸಂಸ್ಕೃತಿಯನ್ನು ರಕ್ಷಿಸಬೇಕಾದುದು ಅವಶ್ಯವಾಗಿದೆ.

ಬೈತಲೆಗೆ ಸಂಬಂಧಿಸಿದ ಆಭರಗಳು:– ಬೈತಲೆಯ ಆಭರಣಗಳನ್ನು ಸಾಮಾನ್ಯವಾಗಿ ಮಂಗಲ ಸೂಚಕವೆಂದು ಭಾವಿಸುವರು. ಅಂತಯೇ ಮದುವೆಯ ಸಂದರ್ಭದಲ್ಲಿ ಬೈತಲಮಣಿ, ಬೈತಲಸರ ಹಾಗೂ ಪದಕಗಳನ್ನು ಧರಿಸುವುದನ್ನು ಕಾಣುತ್ತೇವೆ. ಇದರ ಹೊರತಾಗಿ ನೃತ್ಯಮಾಡುವಾಗಲೂ. ಈ ಆಭರಣವನ್ನು ತೊಡುವುದರಿಂದ ನೃತ್ಯ ಹೆಚ್ಚು ಸುಂದರವಾಗಿ ತೋಡುವುದು. ಆದುದರಿಂದ ಇದು ಹೆಣ್ಣಿನ ಸೌಂದರ್ಯವನ್ನು ಇಮ್ಮಡಿಗೊಳಿಸುವ ಶಿರೋಭೂಷಣವೂ ಹೌದು.

ಬೈತಲಸರವನ್ನು ನೆತ್ತಿಯಿಂದ ಹಣೆಯವರೆಗೆ ಇಳಿಬಿಡುತ್ತಾರೆ. ಇದು ಸಾಮಾನ್ಯವಾಗಿ ಬಂಗಾರದ ಎಳೆಯಾಗಿರುತ್ತದೆ. ಕೆಲವೊಮ್ಮೆ ಸೌಂದರ್ಯಕ್ಕಾಗಿ ಈ ಚೈನಿನಲ್ಲಿ ಬಣ್ಣದ ಹರಳು ಮತ್ತು ಮುತ್ತುಗಳನ್ನು ಜೋಡಿಸಿರುತ್ತಾರೆ. ಇದಕ್ಕೆ ತುದಿಯಲ್ಲಿ ಕೊಂಡಿ ಇದ್ದು, ಬಗ್ಗಿದಾಗ ಜಾರಿಬೀಳದಂತೆ ತಲೆಯ ಮೇಲಿನ ಕೂದಲಿಗೆ ಅದನ್ನು ಸಿಕ್ಕಿಸಿಕೊಳ್ಳಲಾಗುತ್ತದೆ. ಈ ಬೈತಲ ಸರದ ತುದಿಗೆ ಒಂದು ಪದಕವಿದ್ದು ಅದನ್ನು ಬೈತಲಪದಕ ಅಥವಾ ಬೈತಲ ಬೊಟ್ಟು ಎಂದು ಕರೆಯಲಾಗುತ್ತದೆ. ಈ ಪದಕದಲ್ಲಿ ಬಣ್ಣದ ಹರಳುಗಳನ್ನು ಕೆಲವೊಮ್ಮೆ ಸೇರಿಸುತ್ತಾರೆ. ಪದಕದ ಕೆಳಭಾಗದಲ್ಲಿ ಬಂಗಾರದ ಗುಂಡುಗಳು ಅಥವಾ ಮುತ್ತುಗಳು ಜೋಲುವುದೂ ಉಂಟು. ಇಂಥ ಪದಕ ಮುಂದಲೆಯಲ್ಲಿ ಶೋಭಿಸುತ್ತಿರುತ್ತದೆ. ಬೈತಲ ಪದಕದಿಂದ ಸಾಮಾನ್ಯವಾಗಿ ಕೊಂಡಿ ಇರುವ ಮೂರು ಎಳೆಗಳು ಹೊರಟು, ಒಂದು ಬೈತಲೆಗೆ, ಮತ್ತೆರಡು ಕೆನ್ನೆಯ ಕಡೆಯಿಂದ ಕಿವಿಯ ಮೇಲ್ಭಾಗದ ಕೂದಲಿಗೆ ಹೋಗಿ ಸೇರುತ್ತವೆ. ಬಂಗಾರದ ಎಳೆಗಳ ಕೆಳಗೆ ಕೆಲವೊಮ್ಮೆ ಗುಂಡುಗಳಾಗಲೀ, ಮುತ್ತುಗಳಾಗಲೀ ಜೋಲುವಂತೆ ಕಲ್ಪಿಸಿರುವುದುಂಟು. ಬೈತಲಮಣಿಯ ಎಳೆಗಳಲ್ಲಿ ಮುತ್ತು ಸೇರಿದ್ದರೆ ಅದು ಮುತ್ತಿನ ಬೈತಲಮಣಿಯಾಗುತ್ತದೆ. ಹರಳು ತೆತ್ತಿಸಿದ್ದರೆ ಹರಳಿನ ಬೈತಲಮಣಿಯಾಗುತ್ತದೆ. ಹೀಗೆ ಬಳಸಿದ ವಸ್ತುವಿನಿಂದ ಬೈತಲ ಮಣಿಗೆ ಆಯಾ ಹೆಸರು ಪ್ರಾಪ್ತವಾಗುತ್ತದೆ. ಇದೇ ಬೈತಲ ಮಣಿಗೆ ಮೂಗಿನ ನೆತ್ತಿನಿಂದಲೂ ಕೊಂಡಿಸಹಿತವಾದ ಒಂದು ಎಳೆ ಕಿವಿಯ ಮೇಲಿನ ಕೂದಲಿಗೆ ಸೇರಿಸಲ್ಪಟ್ಟರೆ ಅದನ್ನು ಸೀಮಂತಮಣಿ ಎಂದು ಕರೆಯುತ್ತಾರೆ.

'ಸೀಮಂತ'ಕ್ಕೆ 'ಬೈತಲೆ' ಎಂಬ ಅರ್ಥವೂ ಇದೆ. ಹೆಣ್ಣುಮಕ್ಕಳು ಬಸುರಿಯರಾದಾಗ ಪ್ರಾಯಶಃ 'ಸೀಮಂತ' ಎಂಬ ಆಚರಣೆ ಮಾಡುತ್ತಿದ್ದು, ಅಂದು ಹೆಣ್ಣಿಗೆ ಬೈತಲೆತೆಗೆದು "ಸೀಮಂತಮಣಿ' ತೊಡಿಸುತ್ತಿದ್ದರೆಂದು ತೋರುತ್ತದೆ. ಕಾರಣ ಕಿಟೆಲ್ ತನ್ನ ಕೋಶದಲ್ಲಿ ಸೀಮಂತವೆಂದರೆ ಚೊಚ್ಚಿಲು ಬಸುರಿನಲ್ಲಿ ತಲೆಕೂದಲನ್ನು ಎರಡು ಭಾಗ ಮಾಡುವ ಮೂಲಕ ಚೊಚ್ಚಿಲು ಮಗುವಿಗೆ ದಾರಿ ಮಾಡಿಕೊಡುವುದು ಎನ್ನುತ್ತಾರೆ. (ಕಿಟ್ಟೆಲ್ ಇಂಗ್ಲಿಷ್ ಕನ್ನಡ ಡಿಕ್ಸನರಿ, ಪು 1551) ಇಂಥ ಒಂದು ನಂಬಿಕೆ ಆಗ ಇದ್ದಿರಬೇಕು. ಚೊಚ್ಚಿಲ ಬಸುರಿಗೆ ಕೂದಲು ಎರಡು ಭಾಗ ಮಾಡುವಂತೆ ನೆತ್ತಿಯ ಮೇಲಿಂದ ಬೈತಲೆತೆಗೆ ಮಧ್ಯೆ ಸೀಮಂತ ಮಣಿಯಂತಹ ಆಭರಣ ತೊಡಿಸಿ, ಚೆಂದಕಾಣುವಂತೆ ಮಾಡುತ್ತಿರಬೇಕು. ಇದರಿಂದ ಹೆರಿಗೆ ಸುಖವಾಗಿ ಆಗುತ್ತದೆಂಬ ನಂಬಿಕೆಯೂ ಆ ಹಿಂದಿನವರಿಗೆ ಇದ್ದಿರಬೇಕು. ಆದರೆ ಇದರ ವೈಜ್ಞಾನಿಕತೆಯ ಶೋಧವಾಗಬೇಕಾದ ಅವಶ್ಯಕತೆ ಇದೆ.

6.9 ಕಿವಿಯ ಆಭರಣಗಳು

ಆಭರಣಗಳನ್ನು ಧರಿಸುವ ದೇಹದ ಭಾಗಗಳಲ್ಲಿ ಮೂಗು ಮತ್ತು ಕಿವಿ ಅತ್ಯಂತ ಚಿಕ್ಕವೂ ಸೂಕ್ಷ್ಮವೂ ಆದ ಭಾಗಗಳಾಗಿವೆ. ಆದರೆ, ಕಿವಿಯೊಂದಕ್ಕೇ ಏಳಕ್ಕಿಂತ ಹೆಚ್ಚು ಆಭರಣಗಳನ್ನು ಧರಿಸುತ್ತಾರೆಂದರೆ ನಮ್ಮ ಜನಪದರ ಸೌಂದರ್ಯದೃಷ್ಟಿ, ಮತ್ತು ಸೂಕ್ಷ್ಮತೆಗಳನ್ನು ನಾವು ಊಹಿಸಬಹುದಾಗಿದೆ. ಇದರಲ್ಲಿ ವೈದ್ಯಕೀಯ ಅಂಶವೂ ಮಿಳಿತವಾಗಿರಬಹುದು.

ಮೂಗಿನ ಆಭರಣಗಳು:- ಮೂಗು, ಕಿವಿಗಿಂತಲೂ ಚಿಕ್ಕ ಅಂಗ ಆದರೆ, ನಮ್ಮ ಜನಪದರು ಇದಕ್ಕೂ ಸಾಕಷ್ಟು ಆಭರಣಗಳನ್ನು ತೊಡಿಸಲು ಪ್ರಯತ್ನಿಸಿದ್ದಾರೆ.

6.10 ತಾಳಿಗಳು

ಮದುವೆಯಾದ ಮಹಿಳೆಯರು ಧರಿಸುವ ತಾಳಿಗಳಲ್ಲೂ ವೈವಿಧ್ಯ ಹಾಗೂ ವೈಶಿಷ್ಟ್ಯಗಳಿರುವುದನ್ನು ಗಮನಿಸಬಹುದು. ಮದುವೆಗಿಂತ ಮೊದಲು ಗೌರಿಪೂಜೆಮಾಡಿ ಮುತ್ತೈದೆಯ ಕೈಯಿಂದ ಕುತ್ತಿಗೆಗೆ ಒಂದು ತಾಳಿ ಕಟ್ಟಿಸಿಕೊಳ್ಳುತ್ತಾರೆ. ಇದೇ ಗೌರಿ ತಾಳಿ ಅಥವಾ ತಾಯಿ ಮನೆ ತಾಳಿ. ಮದುವೆಯ ಸಂದರ್ಭದಲ್ಲಿ ಗಂಡ ಕಟ್ಟುವ ತಾಳಿಯನ್ನು ಗಂಡನಮನೆತಾಳಿ ಎಂದೇ ಹೆಸರಿಸುವರು. ಈ ತಾಳಿಯ ರಚನೆ, ಸಂಪ್ರದಾಯಬದ್ಧವಾಗಿಯೇ ಮಾಡಲ್ಪಡುತ್ತದೆ. ಮದುವೆ ನಿಶ್ಚಯವಾದಕೂಡಲೇ ಊರಿನಲ್ಲಿ ಪತ್ತಾರನಿಗೆ ತಾಳಿ ತಯಾರಿಸಲು ಹೇಳಿ ವೀಳ್ಯಕೊಟ್ಟುಬರುತ್ತಾರೆ. ಮದುವೆಯ ಸಂದರ್ಭದಲ್ಲಿ ತಾಳಿ ತರಲು ಮೆರವಣಿಗೆಯಲ್ಲಿ ಹೋಗುತ್ತಾರೆ. ಪತ್ತಾರನಿಗೆ ಉಲುಪಿ ಕೊಟ್ಟು ತಾಳಿಯ ಹಣವನ್ನು ಕೊಟ್ಟನಂತರ ಅವನು ತಾಳಿಯನ್ನು ಪೂಜಿಸಿಕೊಡುತ್ತಾನೆ. ಬಂಗಾರದಿಂದ ಮಾಡಲ್ಪಟ್ಟ ತಾಳಿಯನ್ನು ಪೂಜಿಸಿಕೊಡುತ್ತಾನೆ. ಬಂಗಾರದಿಂದ ಮಾಡಲ್ಪಟ್ಟ ತಾಳಿಯನ್ನು ಅಕ್ಕಸಾಲಿಗನ ಮನೆಯಿಂದ ಕೊಬ್ಬರಿ ಗಿಟುಕದಲ್ಲಿ ಇಟ್ಟುಕೊಂಡು ಮದುವೆ ಮನೆಗೆ ಬರುತ್ತಾರೆ. ಹಂದರದಲ್ಲಿದ್ದ ಮುತ್ತೈದಯರಿಗೆ ಅದನ್ನು ದಾರದಲ್ಲಿ ಪೋಣಿಸಲು ಕೊಡುತ್ತಾರೆ. ಕೆಲವು ಕಡೆಗೆ ಮೊದಲು ಐದು ಕರಿಮಣಿಯನ್ನಾದರು ಮದುವೆಯಾಗುವ ಹೆಣ್ಣು ಪೋಣಿಸಿಕೊಡಬೇಕು ಮುತ್ತೈದೆಯರು ಹಾಲುಮಣಿ, ಹಸರಮಣಿ, ಕರಿಮಣಿ ಮತ್ತು ಹಳದಿಮಣಿ ಹಾಕಿ ಪೋಣಿಸಿದ ತಾಳಿಯನ್ನು ಕೊಬ್ಬರಿಯ ಬಟ್ಟಲಲ್ಲಿ ಹಾಕಿ ಅಯ್ಯನವರ ಕಡೆ ಕೊಡುತ್ತಾರೆ. ಮದುವೆಯಲ್ಲಿ ಕನ್ಯಾದಾನದ ನಂತರ ಪಂಚಗಳಸದ ಮುಂದೆ ಕುಳಿತವರನು ವಧುವಿನ ಕೊರಳಿಗೆ ಈ ತಾಳಿಯನ್ನು ಕಟ್ಟುವುದಕ್ಕೆ ಮೊದಲು ಅದಕ್ಕೆ ಗಂಧ, ಅಕ್ಷತೆ, ಕುಂಕುಮ, ವಿಭೂತಿ ಮೊದಲಾದವುಗಳಿಂದ ಮತ್ತು ಮಂತ್ರದೊಂದಿಗೆ ಪೂಜಿಸಿ, ಅಲ್ಲಿ ನೆರೆದಿದ್ದ ಐದು ಜನ ಮುತ್ತೈದೆಯರಿಂದ ಹಸ್ತಸ್ಪರ್ಶಮಾಡಿಸಿ, ಅಯ್ಯನವರು ಐದುಗಂಟುಹಾಕಿ ವರನ ಕೈಯಲ್ಲಿ ಕೊಡುತ್ತಾರೆ. ವರನು ಅದನ್ನು ಆಕೆಯ ಹಣೆಗೆ ಮುಟ್ಟಿಸಿ ಕೊರಳಿಗೆ ಕಟ್ಟುತ್ತಾನೆ. ಮಂಗಲಸೂತ್ರ ಕಟ್ಟಿದ ನಂತರ ಗಂಡ ಹೆಂಡಿರ ಬಾಂಧವ್ಯ ಮತ್ತಷ್ಟು ಗಟ್ಟಿಗೊಂಡಂತೆ ಮದುವೆಯಾದಾಗಿನಿಂದ ಗಂಡನ ಮರಣದವರೆಗೂ ಈ ತಾಳಿ ಆಕೆಯ ಕೊರಳಲ್ಲಿ ಇದ್ದೇ ಇರುತ್ತದೆ. ಗಂಡನ ಮರಣವಾದರೆ, ವಿವಾಹ ವಿಚ್ಛೇಧನವಾದರೆ ಮಾತ್ರ ಅದನ್ನು ತೆಗೆಯುತ್ತಾಳೆ. ಅದು ಅವಳ ಮುತ್ತೈದೆತನ ಕಳೆದುಕೊಂಡ ಸಂದರ್ಭವೆಂದು ಭಾವಿಸಲಾಗುತ್ತದೆ. ಅಕಸ್ಮಾತ್ ಕರಿಮಣಿಸರ ಹರಿದರೆ ಸೆರಗಿನಲ್ಲಾದರೂ ತಾಳಿಯನ್ನು ಕಟ್ಟಿಟ್ಟುಕೊಳ್ಳಬೇಕೆಂಬ ವಿಧಿ ಇದೆ.

ಗಂಡ ಅರವತ್ತು ವರ್ಷದ ಶಾಂತಿ ಮಾಡಿಸಿಕೊಂಡಾಗ, ಹೆಂಡತಿಗೆ ಹೊಸ ತಾಳಿ ಮಾಡಿಸಿ ಹಾಕುತ್ತಾನೆ. ಹೆಣ್ಣು ಮುತ್ತೈದೆಯಾಗಿ ಸತ್ತರೆ, ಅವಳ ಕೊರಳ ತಾಳಿಯನ್ನು ದೇವರ ಜಗುಲಿಯ ಮೇಲಿಟ್ಟು ಪೂಜಿಸುವರು. ಅವಳ ಗಂಡ ಮರು ಮದುವೆಯಾದಲ್ಲಿ, ಆ ಹೆಣ್ಣುಮಗಳಿಗೆ

ಹೊಸತಾಳಿಯೊಡನೆ ಈ ತಾಳಿಯನ್ನೂ ಹಿರಿಯ ಮುತ್ತೈದೆ ತಾಳಿ ಎಂಬ ಹೆಸರಿನಲ್ಲಿ ಕಟ್ಟಿಸುವರು. ಕಿಳ್ಳೇಕ್ಯಾತರಲ್ಲಿ ತಾಳಿಯನ್ನು ಮುತ್ತೈದೆಯರ ಬದಲಾಗಿ ಹುತ್ತಕ್ಕೆ ಮುಟ್ಟಿಸುವ ಸಂಪ್ರದಾಯವಿದೆ. ಇವರ ತಾಳಿಯ ಮೇಲೂ ನಾಗನ ಚಿತ್ರವಿರುತ್ತದೆ. ಸಂತಾನ ಫಲವ ಹಿನ್ನೆಲೆಯಲ್ಲಿ ಇಂಥ ಪದ್ಧತಿಯೊಂದು ಅಸ್ತಿತ್ವಕ್ಕೆ ಬಂದಿರಬಹುದು.

ತೋಳಿನ ಆಭರಣಗಳು:- ತೋಳಬಂದಿ:- ಇದಕ್ಕೆ ಬಾಜುಬಂದ, ಬಾಹುಬಂದ ಎಂಬ ಹೆಸರುಗಳೂ ಇವೆ. ಇದು ಬಂಗಾರದ ಪಟ್ಟಿಯಂತೆ ಇದ್ದು ಅದರ ಮೇಲೆ ಸುಂದರವಾದ ಕೆತ್ತನೆ ಇರುತ್ತದೆ. ಮಧ್ಯೆ ಮಧ್ಯೆ ರತ್ನ ಅಥವಾ ಬಣ್ಣದ ಹರಳುಗಳನ್ನು ತೆತ್ತಿಸಿರುತ್ತಾರೆ. ಪಟ್ಟಿಯ ಕೆಳಗಡೆ ಮುತ್ತಿನ ಎಲೆಗಳನ್ನು ಜೋಲಿ ಬಿಟ್ಟಿರುತ್ತಾರೆ. ತೋಳಿಗೆ ಹಿಡಿದುಕೊಳ್ಳುವಂತೆ ಕೀಲಿನ ಮೂಲಕ ಅಥವಾ ಕಸೆಯ ಮೂಲಕ ಆಭರಣವನ್ನು ಬಂಧಿಸಲಾಗುತ್ತದೆ ಇದರಲ್ಲಿಯೇ ಆಕಾರ ವ್ಯತ್ಯಾಸದಿಂದ ವಂಕಿ, ನಾಗಮುರುಗಿ, ಚಳಕಿ ಮುಂತಾದವು ರೂಪುಗೊಳ್ಳುತ್ತವೆ.

ಬಳೆ, ಮುತ್ತೈದೆಯ ಸಂಕೇತ. ಚಿನ್ನ, ಬೆಳ್ಳಿ, ತಾಮ್ರ, ದಂತ, ಮಣ್ಣು ಗಾಜುಗಳಿಂದ ತಯಾರಿಸಿದ ಬಳೆಗಳನ್ನು ಹೆಣ್ಣು ಮಕ್ಕಳು ಧರಿಸುವರು. ಬೆಳ್ಳಿ, ಕಂಚು, ತಾಮ್ರ, ದಂತದ ಬಳೆಗಳನ್ನು ಬುಡಕಟ್ಟು ಅಥವಾ ಅಲೆಮಾರಿ ಹೆಂಗಸರು ಧರಿಸುವರು.

6.11 ಕೈಬೆರಳಿನ ಆಭರಣಗಳು

ಸಾಮಾನ್ಯವಾಗಿ ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳೆ, ಪಂಚಲೋಹ ಮುಂತಾದವುಗಳಲ್ಲಿ ಉಂಗುರಗಳನ್ನು ತಯಾರಿಸುವರು. ಚಿಕ್ಕದಾದರೂ ಆಕಾರದಲ್ಲಿ ಅಪಾರ ವೈವಿಧ್ಯತೆಯನ್ನು ಪ್ರದರ್ಶಿಸಿರುವ ಆಭರಣ ಪ್ರಕಾರವಿದು. ಸೌಂದರ್ಯ ಪ್ರಜ್ಞೆಯ ಜೊತೆಗೆ ಮುದ್ರೆಯಾಗಿ ಹಾಗೂ ಮಾಂತ್ರಿಕ ಶಕ್ತಿಯ ಸಂಕೇತವಾಗಿಯೂ ಉಂಗುರಗಳನ್ನು ಧರಿಸುವರು. ಬಂಗಾರದ ಉಂಗುರವನ್ನು ತೊಡುವ ಮೊದಲು ಆ ಬೆರಳಿಗೆ ಬೆಳ್ಳಿಯ ಉಂಗುರವನ್ನು ತೊಟ್ಟುಕೊಳ್ಳಬೇಕೆಂಬ ವಿಧಿ ಇದೆ. ಆದುದರಿಂದ ಬೆಳ್ಳಿಯ ಉಂಗುರವನ್ನು ಬೆರಳಿಗೆ ಮುಟ್ಟಿಸಿ ನಂತರ ಬಂಗಾರದ ಉಂಗುರ ತೊಡಿಸುವರು. ಉಂಗುರಗಳನ್ನು ಧರಿಸುವಲ್ಲಿ ಪ್ರತಿಯೊಂದು ಕೈ ಬೆರಳಿಗೂ ಬೇರೆ ಬೇರೆ ಸಂಕೇತಗಳಿವೆ. ತೋರು ಬೆರಳಿಗೆ ತೊಡುವ ಉಂಗುರ ಮದುವೆ ನಿಶ್ಚಿತಾರ್ಥದ ಸಂಕೇತ. ಮಧ್ಯ ಬೆರಳಿಗೆ ತೊಡುವ ಉಂಗುರ ನಿಶ್ಚಿತಾರ್ಥ ಆಗಿರುವುದನ್ನು ಸೂಚಿಸುತ್ತದೆ. ಅನಾಮಿಕೆಯಲ್ಲಿರುವ ಉಂಗುರ ವಿವಾಹವಾಗಿರುವುದನ್ನು ತಿಳಿಸುತ್ತದೆ. ಕಿರುಬೆರಳಿನ ಉಂಗುರ ಬ್ರಹ್ಮಚಾರಿಯಾಗಿರುವುದನ್ನು ಅರುಹುತ್ತದೆ. ಉಂಗುರಗಳ ರೂಪರಚನೆಯ ಮೇಲಿಂದ, ಮುದ್ರೆಯುಂಗುರ, ಗಜ್ಜೆಯುಂಗುರ. ವಂಕಿಯುಂಗುರ, ನಾಗರುಂಗುರ, ಬಾದಾಮಿ ಉಂಗುರ, ಕಳಾವರದುಂಗುರ, ಹೂವಿನುಂಗುರ ಸುತ್ತುಂಗುರ ಇತ್ಯಾದಿ ವೈವಿಧ್ಯತೆಯನ್ನು ಗಮನಿಸುತ್ತೇವೆ. ಮುದ್ರೆಯುಂಗುರದಲ್ಲಿ ಉಂಗುರದ ಮೇಲ್ಭಾಗ ಅಗಲವಾಗಿದ್ದು, ಅದರಲ್ಲಿ ಯಾವುದೇ ಚಿತ್ರ, ಅಕ್ಷರ, ಸಂಖ್ಯೆ ಅಥವಾ ಸಂಕೇತಗಳನ್ನು ಕೆತ್ತಿರುತ್ತಾರೆ. ಹಾವಿನಾಕಾರದ ರಚನೆಯನ್ನು ಹೊಂದಿದ್ದರೆ ಅದು ನಾಗರುಂಗುರ ಉಂಗುರದ ಮೇಲೆ

ಬೇರೆ ಬೇರೆ ರೀತಿಯ ಆಕಾರಗಳೊಂದಿಗೆ ಬಣ್ಣದ ಹರಳು, ರತ್ನಗಳನ್ನು ತೆತ್ತಿಸಿರುತ್ತಾರೆ. ಅಂತೆಯೇ ಅದು ತುಂಬಾ ಆಕರ್ಷಕವಾಗಿ ಕಾಣುತ್ತದೆ. ಬಂಗಾರ ಬೆಳ್ಳಿ, ಅಥವಾ ತಾಮ್ರ ಲೋಹದಿಂದ ತಯಾರಿಸಿದ ತಂತಿಗಳನ್ನು ಎರಡೂ ಮೂರು ಬಾರಿಸುತ್ತಿ, ಸುತ್ತುಂಗುರವನ್ನು ರಚಿಸುವರು. ಅಲ್ಲದೇ ಸಾದಾ ಉಂಗರಕ್ಕೆ ಬೆಳ್ಳಿ, ಬಂಗಾರಗಳಲ್ಲಿ ಗೆಜ್ಜೆ ಮಾಡಿ ಸೇರಿಸಿದಾಗ ಗೆಜ್ಜೆಯುಂಗುರವಾಗುತ್ತದೆ. ಉಂಗುರದ ಮೇಲ್ಭಾಗದಲ್ಲಿ ಪವಿತ್ರ ಗಂಟಿನ ರಚನೆ ಇದ್ದರೆ ಅದು ಪವಿತ್ರದುಂಗುರವೆನ್ನಿಸಿಕೊಳ್ಳುತ್ತದೆ. ಸಾದಾ ದಪ್ಪ ರಿಂಗಿನಂತಹ ಉಂಗುರವೂ ಇರುತ್ತದೆ. ಲಕ್ಷ್ಮಿ ಗಣಪತಿ, ವೆಂಕಟೇಶ ಮುಂತಾದ ದೇವರ ಮೂರ್ತಿಗಳ ಉಬ್ಬುಕೆತ್ತನೆಗಳೂ ಎಲೆ, ಬಳ್ಳಿಮ ನಕ್ಷತ್ರ ಮುಂತಾಗಿ ನಾನಾ ಆಕಾರಗಳ ಉಂಗುರಗಳನ್ನು ನೋಡಬಹುದು. ವಿವಿಧ ಆಕಾರದ, ವಿವಿಧ ಬಣ್ಣದ ಹರಳುಗಳನ್ನು ಉಂಗುರಗಳಲ್ಲಿ ಬಳಸಲಾಗುತ್ತದೆ. ಜೊತೆಗೆ ಅದೃಷ್ಟದ ಆಧಾರದ ಮೇಲೆ ನವರತ್ನಗಳ ಉಂಗುರಗಳನ್ನು ಕೆಲವರು ಧರಿಸುತ್ತಾರೆ.

ಸೊಂಟದ ಆಭರಣಗಳು:- ಉಟ್ಟ ಸೀರೆಯ ನೀಲಿಗೆಗಳನ್ನು ಬಿಗಿಯಾಗಿ ಹಿಡಿದಿಡಲು ಮತ್ತು ಸೊಂಟಕ್ಕೆ ಒಂದು ರೂಪ, ಬಲಗಳನ್ನು ಕೊಡಲು ಸೊಂಟದಪಟ್ಟಿಯ ಆವಶ್ಯಕತೆಯನ್ನು ಜನಪದರು ಕಂಡುಕೊಂಡಿದ್ದರು.

ಕಾಲಿನ ಆಭರಣಗಳು:- ಕಾಲಿನ ಆಭರಣವನ್ನು ಸಾಮಾನ್ಯವಾಗಿ ಶುದ್ಧ ಬೆಳ್ಳಿಯಲ್ಲಿ ಅಥವಾ ಮಿಶ್ರ ಬೆಳ್ಳಿಯಲ್ಲಿ ಮಾಡಲಾಗುತ್ತದೆ. ಬಂಗಾರ ಲಕ್ಷ್ಮೀಗೆ ಸಮನಾಗಿರುವುದರಿಂದ ಅದನ್ನು ಕಾಲಿಗೆ ತಾಗಿಸಬಾರದೆಂಬ ಉದ್ದೇಶವೂ ಅದರಲ್ಲಿದೆ.

ಕಾಲು ಚೈನುಗಳಲ್ಲಿ ಸಾದಾ ಚೈನು, ಪಟ್ಟಿಚೈನು, ಕಳಾವರ ಚೈನು, ಗೋಡಂಬಿಚೈನು ಇತ್ಯಾದಿ ರೂಪವೈಧ್ಯಗಳನ್ನು ಕಾಣುತ್ತೇವೆ. ಚೈನಿಗೆ ಅಲ್ಲಲ್ಲಿ ಗೆಜ್ಜೆಯನ್ನು ಅಳವಡಿಸಿದರೆ ಅದನ್ನು ಗೆಜ್ಜೆಚೈನು ಎನ್ನುತ್ತಾರೆ. ಕಾಲ್ಬೆರಳಿನ ಆಭರಣಗಳು:- ಹೆಣ್ಣಿನ ಸೌಭಾಗ್ಯದ ಸಂಕೇತಗಳಲ್ಲಿ ಕಾಲುಂಗುರಗಳು ಮಹತ್ವದವು ಇವು ಎರಡು, ಐದು ಅಥವಾ ಏಳು ಸುತ್ತಿನವುಗಳಾಗಿದ್ದು, ಬೆಳ್ಳಿಯಿಂದ ಮಾಡಿದವುಗಳಾಗಿರುತ್ತವೆ. ಕಾಲುಂಗುರಗಳನ್ನು ಮದುವೆಯಾದ ಹೆಣ್ಣು ಮಕ್ಕಳು ಧರಿಸುತ್ತಾರೆ. ಕಾಲಿನ ಬೇರೆ ಬೇರೆ ಬೆರಳುಗಳಿಗೆ ಬೇರೆ-ಬೇರೆ ರೀತಿಯ ಆಭರಣಗಳಿವೆ.

6.12 ಮಕ್ಕಳ ಆಭರಣಗಳು

ದೊಡ್ಡವರಂತೆ ಮಕ್ಕಳಿಗೂ ಆಭರಣ ತೊಡಿಸಿ, ಅಂದಚೆಂದಸವಿಯುತ್ತ, ಸಂತೋಷಿಸುವುದನ್ನು ಕಾಣುತ್ತೇವೆ. ಶ್ರೀಮಂತರಾದವರು ತಮ್ಮ ಪ್ರತಿಷ್ಠೆಯ ಸಂಕೇತವಾಗಿಯೂ ಮಕ್ಕಳಿಗೆ ಅನೇಕ ಬಗೆಯ ಆಭರಣಗಳನ್ನು ಮಾಡಿಸಿ ಹಾಕುತ್ತಾರೆ. ಜನಪದರಲ್ಲಿ ಸೌಂದರ್ಯ ಪ್ರಜ್ಞೆ ಅಥವಾ ಗೌರವ ಪ್ರತಿಷ್ಠೆಗಳಿಗಿಂತ ಮುಖ್ಯವಾಗಿ ಮಕ್ಕಳಿಗೆ ದೃಷ್ಟಿ ತಾಗದಿರಲೆಂಬ, ಕೆಲವು ರೋಗ ಬರದಿರಲೆಂಬ ವೈದ್ಯಕೀಯ ನಂಬಿಕೆಗಳು ವಿಶೇಷವಾಗಿ ಮಕ್ಕಳ ಆಭರಣಗಳ ಹಿಂದಿರುವುದನ್ನು ಗಮನಿಸುತ್ತೇವೆ.

ಅಧ್ಯಾಯ :– 7

ಶಿಸು ಪ್ರಾಸಗಳು

7.1 ಸಂಪ್ರದಾಯದ ಪ್ರಾಸಗಳು

7.2 ಋತುಮಾನಕ್ಕೆ ಸಂಬಂಧಿಸಿದ ಪ್ರಾಸಗಳು

7.3 ಲಾಲಿ ಅಥವಾ ಜೋಗುಳ ಪ್ರಾಸಗಳು

7.4 ಆಟಕ್ಕೆ ಸಂಬಂಧಿಸಿದ ಪ್ರಾಸಗಳು

7.5 ಸಂಖ್ಯಾ(ಎಣಿಕೆ) ಪ್ರಾಸಗಳು

7.6 ರಾಷ್ಟ್ರ ನಾಯಕರನ್ನು ಕುರಿತ ಪ್ರಾಸಗಳು

7.7 ಪ್ರಾಣಿಗಳನ್ನು ಕುರಿತ ಪ್ರಾಸಗಳು

7.8 ಹೂವಿಗೆ (ಪ್ರಕೃತಿ) ಸಂಬಂಧಿಸಿದ ಪ್ರಾಸಗಳು

7.9 ಮಾವನಿಗೆ ಸಂಬಂಧಿಸಿದ ಪ್ರಾಸಗಳು

7.10 ಹಾಸ್ಯಕ್ಕೆ ಸಂಬಂಧಿಸಿದ ಪ್ರಾಸಗಳು

7.11 ದೈನಂದಿನ ವ್ಯವಹಾರಕ್ಕೆ ಸಂಬಂಧಿಸಿದ ಪ್ರಾಸಗಳು

7.12 ವಿಡಂಬನಾತ್ಮಕ ಪ್ರಾಸಗಳು

7.13 ಕಥನ ಪ್ರಾಸಗಳು

7.14 ದಾಂಪತ್ಯಕ್ಕೆ ಸಂಬಂಧಿಸಿದ ಪ್ರಾಸಗಳು

7.15 ಒಗಟು ಪ್ರಾಸಗಳು

7.16 ಪ್ರಣಯ ಜೀವನಕ್ಕೆ ಸಂಬಂಧಿಸಿದ ಪ್ರಾಸಗಳು

7.17 ಬೈಗುಳಗಳನ್ನೊಳಗೊಂಡ ಪ್ರಾಸಗಳು

7.18 ಕೊಂಡಿ ಪ್ರಾಸಗಳು

7.1 ಪ್ರಸ್ತಾವನೆ

ಶಿಶುಪ್ರಾಸಗಳು ಜನಪದ ಸಾಹಿತ್ಯದ ಒಂದು ಅಂಗ, ಜನಪದ ಸಾಹಿತ್ಯ ಪ್ರಕಾರಗಳಾದ ಗೀತೆ, ಒಗಟು, ಗಾದೆ, ಕಥೆ ಇತ್ಯಾದಿಗಳಂತೆ ಶಿಶುಪ್ರಾಸಗಳೂ ವ್ಯಷ್ಟಿಯಿಂದ ಸೃಷ್ಟಿಗೊಂಡು ಸಮಷ್ಟಿಯಾಗಿ ಮಕ್ಕಳಲ್ಲಿ ಚಲಾವಣೆಗೆ ಬಂದಿವೆ. ನಿತ್ಯ ಜೀವನದಲ್ಲಿ ಕಾಣುವ, ಕೇಳುವ, ಕೆಲವು ಅಂಶಗಳನ್ನು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುತ್ತಾರೆ. ಈ ಪ್ರಾಸಗಳು ಬಾಯಿಂದ ಬಾಯಿಗೆ ಹರಿಯುವಾಗ, ವ್ಯತ್ಯಾಸ ಹಾಗೂ ರೂಪಾಂತರವಾಗುತ್ತವೆ. ಹೀಗಾಗುವುದು ಅನಿವಾರ್ಯ, ಇದು ಮಕ್ಕಳ ಕ್ರಿಯಾತ್ಮಕ ಬೆಳವಣಿಗೆಗೆ ಪೂರಕ.

ಮಕ್ಕಳ ಈ ಪ್ರಾಸಗಳನ್ನು 'ಓಣಥಿಜಡಿಥಿ ಖಿಥಿಟಜ' ಎಂಬ ಇಂಗ್ಲೀಷ್ ಪದಕ್ಕೆ ಸಂವಾದಿಯಾಗಿ ಬಳಸುತ್ತಿದ್ದಾರೆ. ಆದರೆ ಸ್ವಚ್ಛಂದವಾದ ಗ್ರಾಮೀಣ ಪರಿಸರದಲ್ಲಿ ಬೆಳೆಯುತ್ತಿರುವ ಮಕ್ಕಳ ಗೀತೆಗಳಿಗೂ, ಮಕ್ಕಳಲ್ಲಿ ಆಸಕ್ತಿ ಕುತೂಹಲವನ್ನು ಬೆಳೆಸಲು ದೊಡ್ಡವರು ರಚಿಸಿದ Nursery Rhyme'ಗೂ ವ್ಯತ್ಯಾಸವಿದೆ. ಬಹುತೇಕ ಗೀತೆಗಳಲ್ಲಿ ಪ್ರಾಸವೇ ಪ್ರಧಾನವಾಗಿರುವುದರಿಂದ ಮಕ್ಕಳ ಪ್ರಾಸಗಳು, ಅಥವಾ ಶಿಶುಪ್ರಾಸಗಳು ಎಂದು ಬಳಸುತ್ತಿರುವುದು ಸೂಕ್ತವಾಗಿಯೇ ಇದೆ. ಪ್ರಾಸ ಮಕ್ಕಳ ಮನಸ್ಸಿನಲ್ಲಿ ಬಹಳ ಕಾಲ ನಿಲ್ಲಲು, ನೆನಪಿನಲ್ಲಿಟ್ಟುಕೊಳ್ಳಲು ಸಹಕಾರಿಯಾಗಿದೆ. ಇಲ್ಲಿ ನಾನು ಶಿಶು ಪ್ರಾಸಗಳಿಗೆ ಸಂವಾದಿಯಾಗಿ ಕೆಲವು ಕಡೆ ಗೀತೆ, ಹಾಡು, ಪದ್ಯಗಳ ಅರ್ಥದಲ್ಲಿ ಬಳಸಿಕೊಂಡಿದ್ದೇನೆ.

ಜನಪದ ಸಾಹಿತ್ಯದಂತೆ ಶಿಶುಪ್ರಾಸಗಳು ಬಾಯಿಂದ ಬಾಯಿಗೆ ಹರಿದು ಬಂದಿವೆಯಾದರೂ ಮುಖ್ಯವಾಗಿ ಅವುಗಳು ಮಕ್ಕಳ ಮನಸ್ಸಿನಲ್ಲಿ ಬಹಳ ಕಾಲ ಉಳಿಯಲು, ಅವುಗಳಲ್ಲಿರುವ ಸರಳತೆ, ಹಾಗೂ ಹಿರಿಯರ, ಸ್ನೇಹಿತರ ಪ್ರೋತ್ಸಾಹ. ಚಿಕ್ಕಮಕ್ಕಳು ತೊದಲು ನುಡಿಯಿಂದ ಎಲ್ಲಿಯೋ ಕೇಳಿದ ಒಂದೆರಡು ಸಾಲುಗಳನ್ನು ತಂದೆ ತಾಯಿಗಳ ಮುಂದೆ ಹೇಳಿದಾಗ ಅವರು ಸಂತೋಷವನ್ನು ವ್ಯಕ್ತಪಡಿಸುತ್ತಾ ಮತ್ತೆ ಮತ್ತೆ ಹೇಳುವಂತೆ ಪ್ರೋತ್ಸಾಹಿಸುತ್ತಾರೆ. ಇದು ಮಕ್ಕಳ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ತಾನು ಹೇಳುವ ನುಡಿಗಳಿಂದ ಅವರಿಗೆ ಸಂತೋಷವಾಗುತ್ತದೆ ಎಂಬ ಭಾವನೆ ಮಕ್ಕಳ ಮನಸ್ಸಿನಲ್ಲಿ ಮೂಡಿ, ಸದಾ ಅವರಿಂದ ಮೆಚ್ಚಿಗೆಯನ್ನು ಬಯಸಿ ಬೇರೊಂದು ಪ್ರಾಸವನ್ನು ರಚಿಸಿ ಹೇಳುವ ಕ್ರಿಯಾತ್ಮಕವಾದ ಕಾರ್ಯದಲ್ಲಿ ಮಕ್ಕಳು ತೊಡಗುತ್ತಾರೆ. ಕೆಲವು ವೇಳೆ ತಾನು ಕೇಳಿ ಕಲಿತ ಪ್ರಾಸಗಳಿಗೆ ಸಂವಾದಿಯಾಗಿ ಅಂತಹದೇ ವಸ್ತುವನ್ನುಳ್ಳ ಬೇರೊಂದು ಪ್ರಾಸವನ್ನು ರಚಿಸಿ ಹಾಡಿ ಸ್ನೇಹಿತರಿಂದ ಹಿರಿಯರಿಂದ ಮೆಚ್ಚಿಗೆಯನ್ನು ಪಡೆಯುತ್ತಾರೆ. ಸುಮಾರು 14 ವರ್ಷ ದೊಳಗಿನವರು ಹಾಡುವ ಹಾಡುಗಳನ್ನು ಶಿಶುಪ್ರಾಸಗಳು ಗುಂಪಿಗೆ ಸೇರಿಸಬಹುದು. ಪ್ರಾಪ್ತ ವಯಸ್ಕರು ಇಂಥ ಶಿಶುಪ್ರಾಸಗಳು ಗೊತ್ತಿದ್ದರೂ ಹಾಡಲು ಸಂಕೋಚ ಪಡುತ್ತಾರೆ.

ಶಿಶುಪ್ರಾಸಗಳಲ್ಲಿ ಎದ್ದು ಕಾಣುವ ಲಕ್ಷಣ ಲಯಬದ್ಧತೆ, ದೈನಂದಿನ ವ್ಯವಹಾರಗಳಿಗೆ, ಸುತ್ತ ಮುತ್ತ ಕಾಣುವ ವಸ್ತುಗಳನ್ನು ಪ್ರತಿಬಿಂಬಿಸುವುದರಿಂದ ಅವುಗಳಲ್ಲಿ ಜೀವಂತಿಕೆಯಿದೆ. ಅವುಗಳಲ್ಲಿ

ಕಾವ್ಯಾಂಶವಿದೆ. ಬಹುತೇಕ ಪ್ರಾಸಗಳಲ್ಲಿ ಪದ್ಯವೂ ಅಲ್ಲದ ಗದ್ಯವೂ ಅಲ್ಲದ ಒಂದು ವಿಶಿಷ್ಟವಾದ ಧಾಟಿಯನ್ನು ಕಾಣಬಹುದು.

ಎಲ್ಲಾ ಶಿಶುಪ್ರಾಸಗಳು ವಸ್ತುನಿಷ್ಠವಾಗಿರುವುದಿಲ್ಲ. ಒಂದಕ್ಕೊಂದು ಸಂಬಂಧವಿಲ್ಲದ ಸಾಲುಗಳನ್ನೊಳಗೊಂಡ ಪ್ರಾಸಗಳೂ ಇವೆ. ಅವು ಯಾವುದೊ ವಿಷಯವನ್ನು ಪ್ರಾರಂಭಿಸಿ, ಕೊನೆಗೆ ಮತ್ಯಾವುದೋ ವಿಷಯದಲ್ಲಿ ಕೊನೆಗೊಳ್ಳುತ್ತವೆ. ಕೆಲವು ವೇಳೆ ಪ್ರಾಸ ಅರ್ಧದಲ್ಲಿಯೇ ಮರೆತು ಹೋದಾಗ ಅದನ್ನು ಪೂರ್ಣಗೊಳಿಸಲು, ಕೇಳುಗರ ಮುಂದೆ ತನ್ನ ಅಸಹಾಯಕತೆಯನ್ನು ತೋರಿಸಿಕೊಳ್ಳದೆ ಆ ಸಮಯದಲ್ಲಿ ಮನಸ್ಸಿಗೆ ಬಂದ ಪದಗಳನ್ನು ಸೇರಿಸಿ ಪೂರ್ಣಗೊಳಿಸಿದ ಪ್ರಾಸಗಳೂ ಉಂಟು. ಕೆಲವು ಪ್ರಾಸಗಳು ಧ್ವನಿ ಪೂರ್ಣವಾಗಿ ಕಿರಿದರಲ್ಲಿ ಹಿರಿಯ ಅರ್ಥವನ್ನು ಕೊಡುವ, ಜೀವನಕ್ಕೆ ಸಂದೇಶವನ್ನು ಕೊಡುವಂತಹ ಪ್ರಾಸಗಳೂ ಇವೆ.

ಸಾಮಾನ್ಯವಾಗಿ ಶಿಶುಪ್ರಾಸಗಳ ಸೃಷ್ಠಿ. ಆಟದ ಮೈದಾನದಲ್ಲಿ, ಸಾಕು ಪ್ರಾಣಿಗಳನ್ನು ಬಯಲಿನಲ್ಲಿ ಮೇಯಲು ಬಿಟ್ಟು ಹುಡುಗರೆಲ್ಲ ಒಂದೆಡೆ ಸೇರಿದಾಗ, ಕಾಲವನ್ನು ಕಳೆಯಲು, ಬೇಸತ್ತ ಮನಸ್ಸಿಗೆ ಮನರಂಜನೆಯನ್ನು ಪಡೆಯುವ ದೃಷ್ಟಿಯಿಂದ ತಮಗೆ ಬಂದ ಪ್ರಾಸಗಳನ್ನು ಹೇಳಿ ಖುಷಿ ಪಡುತ್ತಾರೆ. ಕೇಳುಗರನ್ನು ರಚಿಸಿ, ಇಲ್ಲವೆ. ಕೇಳಿದ ಹೊಸ ಪ್ರಾಸಗಳನ್ನು ತಮ್ಮ ನೆನಪಿನ ಭಂಡಾರಕ್ಕೆ ಸೇರಿಸಿಕೊಳ್ಳುತ್ತಾರೆ. ಈ ಪ್ರಾಸಗಳು ಒಬ್ಬರ ಸ್ವತ್ತಾಗದೆ ಇಡೀ ಸಮೂಹದ ಸ್ವತ್ತಾಗುತ್ತದೆ. ಅವು ಚಿಕ್ಕದಾಗಿದ್ದು ಸರಳವಾಗಿದ್ದು ಆಸಕ್ತಿಯನ್ನು ಕೆರಳಿಸುವಂತಹ ವಿಷಯಗಳನ್ನು ಒಳಗೊಂಡಿರುವುದರಿಂದ, ಮತ್ತೆ ಮತ್ತೆ ಪುನಾರಾವರ್ತನೆ ಮಾಡುವುದರಿಂದ ಮಕ್ಕಳ ಮನಸ್ಸಿನಲ್ಲಿ ಬಹುಕಾಲ ನಿಲ್ಲುತ್ತದೆ.

ಶಿಶು ಪ್ರಾಸಗಳನ್ನು ಪ್ರಮುಖವಾಗಿ ಎರಡು ಮಜಲುಗಳಲ್ಲಿ ಗುರುತಿಸಿಬಹುದು. 1. ಹಳ್ಳಿಯ ಪರಿಸರದಲ್ಲಿರುವ ಮಕ್ಕಳಲ್ಲಿ ಇರುವ ಪ್ರಾಸಗಳು 2. ನರ್ಸರಿ ಶಾಲಾ ಮಕ್ಕಳಲ್ಲಿರುವ ಪ್ರಾಸಗಳು, ಹಳ್ಳಿಯ ಪರಿಸರದಲ್ಲಿರುವ ಮಕ್ಕಳ ಪ್ರಾಸಗಳಲ್ಲಿ ಸಂಪ್ರದಾಯದ ಸೊಗಡಿದೆ. ಪ್ರಾದೇಶಿಕತೆಯ ಬನಿಯಿದೆ. ದೈನಂದಿನ ವ್ಯವಹಾರಕ್ಕೆ ಸಂಬಂಧಿಸಿದ ವಿವಿಧ ವಿಷಯಗಳಿವೆ. ಹಾಸ್ಯ, ವಿಡಂಬನೆ, ಒಗಟು ನಂಬಿಕೆ ಇತ್ಯಾದಿ ವಿಷಯಗಳನ್ನು ಇವರಾಡುವ ಪ್ರಾಸಗಳಲ್ಲಿ ಕಾಣಬಹುದು.

ನರ್ಸರಿ ಶಾಲಾ ಮಕ್ಕಳಲ್ಲಿರುವ ಪ್ರಾಸಗಳಲ್ಲಿ ನಾಜೂಕುತನವಿದೆ. ಆಧುನಿಕತೆಯ ಪ್ರಭಾವವಿದೆ. ಬಹುತೇಕ ಪ್ರಾಸಗಳು ವಿದ್ಯಾವಂತ ಹಿರಿಯರಿಂದ ರಚಿಸಿದಂತಹವು ವಸ್ತು, ಭಾಷೆ, ಶೈಲಿಯ ದೃಷ್ಠಿಯಿಂದ ಗ್ರಾಮೀಣ ಮಕ್ಕಳಲ್ಲಿರುವ ಪ್ರಾಸಗಳಿಗಿಂತ ಭಿನ್ನವಾಗಿವೆ.

ನಾನು ಇಲ್ಲಿ ಸಂಗ್ರಹಿಸಿರುವ ಶಿಶುಪ್ರಾಸಗಳು ಬೀದರ್ ತಾಲೂಕಿಗೆ ಸಂಬಂಧಿಸಿದವು ಪ್ರಾದೇಶಿಕತೆಯನ್ನು ಗಮನದಲ್ಲಿಟ್ಟುಕೊಂಡು ಸಂಗ್ರಹಿಸಿದ್ದೇನೆ. ಕೆಲವು ಪ್ರಾಸಗಳು ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರಚಲಿತವಿರುವ ಪ್ರಾಸಗಳನ್ನು ಹೋಲುತ್ತವೆ. ಹೊರ ನೋಟಕ್ಕೆ ಪುನರಾವರ್ತನೆಯಾದಂತೆ ಕಂಡು ಬರುತ್ತವೆ. ಮಕ್ಕಳ ಮನಸ್ಸು, ಅನುಭವ, ಎಲ್ಲಾ ಕಡೆಯೂ ಒಂದೇ

ಆಗಿರುತ್ತದೆ ಎಂಬುದನ್ನು ಪರಿಚಯ ಮಾಡಿಕೊಡುವ ದೃಷ್ಟಿಯಿಂದ ನೋಡಲು ಅವಕಾಶವಿದೆ. ಪ್ರಾಸಗಳು ಪ್ರಾದೇಶಿಕತೆಗೆ ಅನುಗುಣವಾಗಿ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ನಾಡಿನುದ್ದಕ್ಕೂ ಪ್ರಚಲಿತವಾಗಿವೆ, ಪ್ರಸರಣಗೊಂಡಿವೆ ಎಂಬುದನ್ನು ಗಮನಿಸಬಹುದು.

ಬೀದರ್ ಜಿಲ್ಲೆಯಾದ್ಯಂತ ಸುತ್ತಾಡಿ ನೂರಾರು ಶಿಶುಪ್ರಾಸಗಳನ್ನು ಸಂಗ್ರಹಿಸಿದ್ದರೂ, ಪುನರಾವರ್ತನೆಗೆ ಹೆಚ್ಚು ಅವಕಾಶ ಮಾಡಿಕೊಡದೆ ವೈವಿಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ಸೇರಿಸಿದ್ದೇನೆ. ಶಿಶು ಪ್ರಾಸಗಳು ಸ್ವಲ್ಪ ಬದಲಾವಣೆಯೊಂದಿಗೆ ಹೇಗೆ ಬೆಳವಣಿಗೆಯಾಗುತ್ತವೆ ಎಂಬುದನ್ನು ಪರಿಚಯ ಮಾಡಿಕೊಡುವ ದೃಷ್ಟಿಯಿಂದ ಒಂದೇ ವಸ್ತು ವಿಷಯಗಳನ್ನೊಳಗೊಂಡ ಒಂದೆರಡು ಪದಗಳ ವ್ಯತ್ಯಾಸವಿರುವ ಬೇರೆ ಬೇರೆ ಪ್ರಾಸಗಳನ್ನು ಸೇರಿಸಿದ್ದೇನೆ.

ನಾನು ಸಂಗ್ರಹಿಸಿರುವ ಶಿಶುಪ್ರಾಸಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅವುಗಳ ಆಧಾರದ ಮೇಲೆ ಸ್ಥೂಲವಾಗಿ ವರ್ಗೀಕರಣ ಮಾಡಿದ್ದೇನೆ. ಈ ವರ್ಗೀಕರಣವೇ ಅಂತಿಮ ಎಂದು ನಾನು ಭಾವಿಸಿಲ್ಲ. ಆದಷ್ಟು ಒಂದೇ ವಸ್ತುವನ್ನು ಒಳಗೊಂಡ ಪ್ರಾಸಗಳನ್ನು ಅಧ್ಯಯನದ ದೃಷ್ಟಿಯಿಂದ ಒಂದೆಡೆ ಸೇರಿಸಿದ್ದೇನೆ.

1. ಸಂಪ್ರದಾಯದ ಪ್ರಾಸಗಳು
2. ಋತುಮಾನಕ್ಕೆ ಸಂಬಂಧಿಸಿದ ಪ್ರಾಸಗಳು
3. ಲಾಲಿ ಅಥವಾ ಜೋಗುಳ ಪ್ರಾಸಗಳು
4. ಆಟಕ್ಕೆ ಸಂಬಂಧಿಸಿದ ಪ್ರಾಸಗಳು
5. ಸಂಖ್ಯಾ(ಎಣಿಕೆ) ಪ್ರಾಸಗಳು
6. ರಾಷ್ಟ್ರ ನಾಯಕರನ್ನು ಕುರಿತ ಪ್ರಾಸಗಳು
7. ಪ್ರಾಣಿಗಳನ್ನು ಕುರಿತ ಪ್ರಾಸಗಳು
8. ಹೂವಿಗೆ (ಪ್ರಕೃತಿ) ಸಂಬಂಧಿಸಿದ
9. ಮಾವನಿಗೆ ಸಂಬಂಧಿಸಿದ ಪ್ರಾಸಗಳು
10. ಹಾಸ್ಯಕ್ಕೆ ಸಂಬಂಧಿಸಿದ ಪ್ರಾಸಗಳು
11. ದೈನಂದಿನ ವ್ಯವಹಾರಕ್ಕೆ ಸಂಬಂಧಿಸಿದ ಪ್ರಾಸಗಳು
12. ವಿಡಂಬನಾತ್ಮಕ ಪ್ರಾಸಗಳು
13. ಕಥನ ಪ್ರಾಸಗಳು
14. ದಾಂಪತ್ಯಕ್ಕೆ ಸಂಬಂಧಿಸಿದ ಪ್ರಾಸಗಳು
15. ಒಗಟು ಪ್ರಾಸಗಳು
16. ಪ್ರಣಯ ಜೀವನಕ್ಕೆ ಸಂಬಂಧಿಸಿದ ಪ್ರಾಸಗಳು
17. ಬೈಗುಳಗಳನ್ನೊಳಗೊಂಡ ಪ್ರಾಸಗಳು
18. ಕೊಂಡಿ ಪ್ರಾಸಗಳು

7.1 ಸಂಪ್ರದಾಯದ ಪ್ರಾಸಗಳು

ಸಂಪ್ರದಾಯ, ಆಚರಣೆ, ನಂಬಿಕೆ ಇತ್ಯಾದಿಗಳು ಮಕ್ಕಳಿಗೆ ತಂದೆತಾಯಿಯರಿಂದ ರಕ್ತಗತವಾಗಿ ಬಂದ ಕೊಡುಗೆ, ಮನೆಯಲ್ಲಿ ಪ್ರತಿ ನಿತ್ಯ ಹಿರಿಯರು ಒಂದಲ್ಲ ಒಂದು ಆಚರಣೆಯಲ್ಲಿ ತೊಡಗಿರುವುದನ್ನು ಕಾಣುವ ಮಕ್ಕಳು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಅವುಗಳ ಪ್ರಭಾವಕ್ಕೆ ಒಳಗಾಗುತ್ತಾರೆ. ಸಕಲ ಕಾರ್ಯಗಳಿಗೂ ಮಂಗಳ ಸ್ವರೂಪನಾದ ಗಣಪತಿಯನ್ನು ಕಂಡರೆ ಮಕ್ಕಳಿಗೆ ಅಚ್ಚು ಮೆಚ್ಚು, ಅವನ ಬಗ್ಗೆ ಅಪಾರವಾದ ಭಕ್ತಿ, ಮಕ್ಕಳಿಗೂ, ಗಣೇಶನಿಗೂ ಬಿಡಿಸಲಾರದ ನಂಟು, ಹೊಟ್ಟೆ ದಪ್ಪಗಿರುವ ಮಕ್ಕಳನ್ನು ಗಣೇಶನಿಗೆ ಹೋಲಿಸುವುದುಂಟು, ಏನೋ ಗಣೇಶ ಬಂದೆ ಎಂದು ಹಾಸ್ಯ ಮಾಡುವುದುಂಟು, ಗಣೇಶನನ್ನು ಕುರಿತ ಪ್ರಾಸಗಳು ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಕಂಡು ಬರುತ್ತವೆ. ಅವೆಲ್ಲವೂ ಒಂದೇ ರೀತಿಯಲ್ಲಿರುವುದು ಪ್ರಾಸಗಳ ಸಾರ್ವತ್ರಿಕತೆಯನ್ನು ಸೂಚಿಸುತ್ತವೆ. ಈ ಪ್ರಾಸಗಳಲ್ಲಿ ಗಣೇಶನ ವರ್ಣನೆಯನ್ನು ಕಾಣಬಹುದು.

7.2 ಋತುಮಾನಕ್ಕೆ ಸಂಬಂಧಿಸಿದ ಪ್ರಾಸಗಳು

ಗ್ರಾಮೀಣ ಪರಿಸರದಲ್ಲಿ ಬೆಳೆದ ಮಕ್ಕಳಿಗೆ ಋತುಮಾನದ ಬಗ್ಗೆ ಸ್ಪಷ್ಟ ಕಲ್ಪನೆ ಇರುತ್ತದೆ. ಮಳೆಗಾಲ, ಚಳಿಗಾಲ, ಬೇಸಿಗೆ ಕಾಲಗಳನ್ನು ಕುರಿತು ಆಯಾ ಕಾಲದಲ್ಲಿ ದೈಹಿಕವಾಗಿ ಉಂಟಾಗುವ ಪರಿಣಾಮವನ್ನು ತಮ್ಮದೇ ಆದ ಬಾಲ ಭಾಷೆಯಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ವಾತಾವರಣಕ್ಕೆ ತಕ್ಕಂತೆ ಬೇಕಾಗುವ ಅವಶ್ಯಕತೆಗಳನ್ನು ಪ್ರಾಸಗಳಲ್ಲಿ ನಿರೂಪಿಸಿದ್ದಾರೆ.

ಮಳೆಗಾಲದ ವರ್ಣನೆ ಆಕರ್ಷಣೀಯವಾಗಿದೆ. ಗುಡುಗನ್ನು ಮುತ್ತಯ್ಯನಿಗೆ (ತಾತ) ಹೋಲಿಸಿ ಅವನು ಬರುವಾಗ ಜೊತೆಯಲ್ಲಿಯೇ ಮಲ್ಲಿಗೆ ಮಳೆಯನ್ನು ಸುರಿಸುತ್ತಾನೆ ಎನ್ನುವಲ್ಲಿ ರಮ್ಯತೆ ಇದೆ, ಸೌಂದರ್ಯವಿದೆ, ಭಾವ ಶ್ರೀಮಂತಿಕೆಯಿದೆ. (ಪ್ರಾಸ 10) ಮುಂದಿನ ಎರಡು ಸಾಲುಗಳಲ್ಲಿ ಆ ಕಾಲದಲ್ಲಿ ಬರುವ ಗೌರಿ ಗಣೇಶರ ಹಬ್ಬದ ಸೂಚನೆ ಇದೆ. ಮಕ್ಕಳಿಗೆ ಪ್ರಿಯವಾದ ಉಂಡೆ ಕಡಬನ್ನು ಕೊಡುತ್ತಾನೆ ಎಂಬುವಲ್ಲಿ, ಯಾವಾಗ ಗಣೇಶನ ಹಬ್ಬ ಬರುತ್ತದೆ ಎಂಬುದರ ಕಲ್ಪನೆಯಿದೆ. ಗುಡುಗಿನೊಂದಿಗೆ ಮಳೆಗಾಲ ಪ್ರಾರಂಭವಾದರೆ ಅವರು ನಿರೀಕ್ಷಿಸುವುದು ಉಂಡೆ ಕಡುಬನ್ನು ಮತ್ತೊಂದು ಪ್ರಾಸದಲ್ಲಿ (ನೋಡಿ ಪ್ರಾಸ 6) ಮಳೆಗಾಲದಲ್ಲಿ ಕೊಡೆಯನ್ನು ಹಿಡಿಯಬೇಕೆಂಬ ಎಚ್ಚರಿಕೆ ಇದೆ. ಬೇಸಿಗೆಯ ವರ್ಣನೆಯಿದೆ. ಮತ್ತೊಂದು ಪ್ರಾಸದಲ್ಲಿ (ಪ್ರಾಸ 5) ಮಳೆಯನ್ನು ರಾಜನಿಗೆ ಹೋಲಿಸಿ, ಅವನು ಬಂದರೆ ಊರು ಕೇರಿ ಎಲ್ಲವೂ ನೀರಿನಿಂದ ತುಂಬುತ್ತದೆ ಎನ್ನುವಲ್ಲಿ ಮಳೆಗಾಲದ ಚಿತ್ರಣವಿದೆ.

ಮಾಗಿ ಕಾಲವನ್ನು ಮಾವನಿಗೆ ಹೋಲಿಸಿದ್ದಾರೆ. ಪ್ರಾಸಕ್ಕಾಗಿ ಹಾಗೆ ಹೇಳಿರಬಹುದು. ಇಲ್ಲವೆ ಮಾವನಿಗೂ, ಮಾಗಿಗೂ ಯಾವುದೋ ರೀತಿಯ ಸಂಬಂಧವನ್ನು ಕಂಡು ಕೊಂಡಿದ್ದಾರೆ ಮಾಗಿಯ

ಕಾಲದಲ್ಲಿ ಕಾಣುವ ಮಂಜಿನ ತೆರೆಯನ್ನು ಮಲ್ಲಿಗೆ ಹೂವಿಗೆ ಹೋಲಿಸಿರುವಲ್ಲಿ ಸಾದೃಶ್ಯವಿದೆ. ಮಂಜು ಮಲ್ಲಿಗೆ ಯಷ್ಟೇ ಶುಭ್ರ ಬಿಳಿಯದು. ಮಲ್ಲಿಗೆ ಹೂವನ್ನು ತಂದ ಎನ್ನುವಲ್ಲಿ ಅವರಲ್ಲಿರುವ ಕಾವ್ಯ ಪ್ರತಿಭೆ ಅಭಿವ್ಯಕ್ತವಾಗಿದೆ.

7.3 ಲಾಲಿ ಅಥವಾ ಜೋಗುಳದ ಪ್ರಾಸಗಳು

ಮಕ್ಕಳ ಮನಸ್ಸು ಸೂಕ್ಷ್ಮವಾದುದು. ದಿನ ನಿತ್ಯ ತಾವು ನೋಡುವುದನ್ನು ಕೇಳುವುದನ್ನು ಅನುಕರಿಸಲು ಪ್ರಯತ್ನಿಸುತ್ತಾರೆ. ಅವುಗಳ ಬಗ್ಗೆ ಕುತೂಹಲ. ಕಾತರ, ಆಸಕ್ತಿ ಅನುಕರಣೆಯ ತತ್ತ್ವದ ಹಿನ್ನಲೆಯಲ್ಲಿಯೇ ಮಕ್ಕಳು ಮಾತಾಡುವುದು ತಿನ್ನುವುದು, ಓಡಾಡುವುದು. ಸಮಾಜದ ರೀತಿ ನೀತಿಗಳನ್ನು ಕರೆಯುತ್ತಾರೆ. ಅವರಿಗೆ ತಮಗಿಂತ ಚಿಕ್ಕ ಮಕ್ಕಳನ್ನು ತೊಟ್ಟಿಲಿನಲ್ಲಿ ಮಲಗಿಸಿ ತೂಗುತ್ತಾ ಜೋಗುಳ ಹಾಡುವುದನ್ನು, ಸ್ನಾನ ಮಾಡಿಸಿ ಬಟ್ಟೆ ತೊಡಿಸಿ ತೊಡೆಯ ಮೇಲೆ ಮಲಗಿಸಿ ಹಾಲು ಕುಡಿಸುವುದನ್ನು ನೋಡಿ ಆಸಕ್ತಿ ಕುತೂಹಲದಿಂದ ತಾವೂ ಅವರಂತೆ ಮಾಡಬೇಕೆಂಬ ಮನಸ್ಸು ಅವರಿಗಾಗುತ್ತದೆ. ಆದರೆ ಹಾಗೆ ಮಾಡಲು ಹಿರಿಯರ ಬಗ್ಗೆ ಭಯ; ನೋಡಿ ಎಲ್ಲಿ ಹೊಡೆಯುವರೊ ಎಂಬ ಅಂಜಿಕೆ. ಹೇಗಾದರೂ ಮಾಡಿ ಮನಸ್ಸಿನ ಬಯಕೆಯನ್ನು ಪೂರ್ಣ ಮಾಡುವ ಹಂಬಲದಿಂದ ಗೊಂಬೆಗಳ ಮೂಲಕವಾದರೂ ತಮ್ಮ ಇಚ್ಛೆಯನ್ನು ಪೂರೈಸಿಕೊಳ್ಳುವ ದೃಷ್ಟಿಯಿಂದ ಗೊಂಬೆಗಳಿಗೆ ಮೊರೆ ಹೋಗುತ್ತಾರೆ. ಗೊಂಬೆಗಳು ಚಿಕ್ಕದಾಗಿರುವುದರಿಂದ ತಾವು ಏನು ಮಾಡಿದರೂ ಯಾವುದೇ ಪ್ರತಿ ಕ್ರಿಯೆಯನ್ನು ತೋರದೆ ಇರುವುದರಿಂದ ಗೊಂಬೆಗಳು ಅವರಿಗೆ ಸ್ನಾನ ಮಾಡಿಸುವಂತೆ ನಟಿಸಿ, ಮೃದುವಾಗಿ ತಟ್ಟಿ ಹಾಡುತ್ತಾ ಮಲಗಿಸುತ್ತವೆ. ತಾಯಂದಿರು ಹಾಡುವ ಜೋಗುಳ ಪದಗಳ ತುಂಡುಗಳನ್ನು ತಮಗೆ ತಿಳಿದ ಪದಗಳನ್ನು ಸೇರಿಸಿ ಹಾಡುತ್ತಾರೆ. ಪ್ರಾಸ 14 ರಲ್ಲಿ ಗೊಂಬೆಗೆ ಲಂಗ ಉಡ್ಸಿ, ಕಣ್ಣಿಗೆ ಕಪ್ಪು ಹಚ್ಚಿ ಜೋಗುಳ ಹಾಡಿ ಮಲಗಿಸುವ ವರ್ಣನೆಯಿದೆ. ಬಹುತೇಕ ಪ್ರಾಸಗಳು ಗೊಂಬೆಗಳನ್ನು ಕುರಿತು ಹಾಡುವಂತಹವುಗಳು ಹೀಗೆ ಗೊಂಬೆಗಳನ್ನು ಆಡಿಸುವಲ್ಲಿ ಹೆಣ್ಣು ಮಕ್ಕಳೇ ಹೆಚ್ಚಾಗಿ ಕಂಡು ಬರುತ್ತಾರೆ. ಅವರಲ್ಲಿ ಸುಪ್ತವಾಗಿರುವ ತಾಯ್ತನ ಪರೋಕ್ಷವಾಗಿ ಈ ಮೂಲಕ ಅಭಿವ್ಯಕ್ತಿ ಪಡಿಸುವುದನ್ನು ಗುರುತಿಸಬಹುದು.

7.4 ಆಟಕ್ಕೆ ಸಂಬಂಧಿಸಿದ ಪ್ರಾಸಗಳು

ಮಕ್ಕಳು ದಿನ ನಿತ್ಯದ ಬಹುತೇಕ ಕಾಲವನ್ನು ಕಳೆಯುವುದು ಆಟಗಳಲ್ಲಿ. ಆಟ ಮಕ್ಕಳಿಗೆ ಹೋಳಿಗೆಯಷ್ಟೇ ಪ್ರಿಯ. ಆಟ ಆಡುವುದರಿಂದ ಮಕ್ಕಳ ಮಾನಸಿಕ ಬೌದ್ಧಿಕ ಬೆಳೆವಣಿಗೆಯ ಜೊತೆಗೆ ಮನರಂಜನೆಯೂ ದೊರೆಯುತ್ತದೆ. 'ಬಾಲ್ಯಾವಸ್ಥೆ ಕ್ರೀಡಾಸಕ್ತ' ಎಂಬ ಮಾತು ಅರ್ಥಪೂರ್ಣ, ಅವಕ್ಕೆ ಆಟವಾಡಲು ವಿಶಾಲವಾದ ಮೈದಾನವೇ ಬೇಕಿಲ್ಲ. ನಾಲ್ಕಾರು ಮಕ್ಕಳು ಸೇರಿದ ಕಡೆಯೇ ಗುಂಪು, ಮೈದಾನ, ಮನೆಯ ಅಂಗಳವಾದರೂ ಆದೀತು, ಹಳೆಯ ಚಾವಡಿ, ಅರಳಿ ಕಟ್ಟೆ, ಓಣಿಯ ಯಾವುದೇ ಜಾಗವಾದರೂ ಸರಿಯೆ. ಸಮಸ್ತವನ್ನು ಮರೆತು ಆಟಗಳಲ್ಲಿ ತನ್ಮಯರಾಗುತ್ತಾರೆ. ಆಟದ ಪ್ರಾರಂಭದಿಂದ ಹಿಡಿದು ಆಟ ಮುಗಿಯುವವರಿಗೂ ವಿವಿಧ ಹಂತಗಳಲ್ಲಿ ಆಟಗಳ ವೈವಿಧ್ಯತೆಗೆ

ಅನುಗುಣವಾಗಿ ಪ್ರಾಸಗಳನ್ನು ಹೇಳುತ್ತಾ ಪ್ರತಿಯೊಬ್ಬರೂ ಒಂದಲ್ಲ ಒಂದು ಸಂದರ್ಭದಲ್ಲಿ ಪ್ರಾಸಗಳನ್ನು ಹೇಳಬೇಕಾಗುತ್ತದೆ. ಹೀಗಾಗಿ ಮಕ್ಕಳಲ್ಲಿ ಅವು ಕಂಠಸ್ಥವಾಗಿ ಸೃಷ್ಟಿಕಾರ್ಯದೊಂದಿಗೆ ಉಳಿದು ಬಂದಿವೆ ಹರಿದು ಬಂದಿವೆ, ಬೆಳೆದು ಬಂದಿವೆ.

7.5 ಸಂಖ್ಯಾ (ಎಣಿಕೆ) ಪ್ರಾಸಗಳು

ಸಂಖ್ಯಾ ಪ್ರಾಸಗಳು ಬಹುತೇಕವಾಗಿ ಶಾಲಾ ಮಕ್ಕಳಲ್ಲಿ ಕಂಡು ಬರುತ್ತವೆ. ಮಗ್ಗಿಯನ್ನು ಕಲಿಸುವ ಪ್ರಾರಂಭದಲ್ಲಿ, ಸಂಖ್ಯೆಗಳು ನೆನಪಿನಲ್ಲಿ ಉಳಿಯಲು, ಸುಲಭವಾಗಿ ಅರ್ಥ ಮಾಡಿಕೊಳ್ಳಲಿ ಎಂಬ ದೃಷ್ಟಿಯಿಂದ ದಿನ ನಿತ್ಯ ಬೇಕಾಗುವ ಅವಶ್ಯಕ ವಸ್ತುಗಳ ಮೂಲಕ ಹೇಳಿ ಕೊಡುತ್ತಾರೆ. ಪ್ರಾಸ 36 ರಲ್ಲಿ ದೋಸೆಯನ್ನು ವಯಸ್ಸಿಗನುಗುಣವಾಗಿ ಹಂಚುವುದನ್ನು ಕಾಣಬಹುದು. ಈ ಪ್ರಾಸದಲ್ಲಿ ಐದರ ಸಂಖ್ಯೆಯವರೆಗೆ ಕಲಿಯಲು ಅವಕಾಶವಿದೆ. ಅಲ್ಲದೆ ಆಟ ಆಡುವಾಗ ಕೆಲವು ಆಟಗಳಲ್ಲಿ ಸೋಲು ಗೆಲವುಗಳನ್ನು ನಿರ್ಧರಿಸಲು ಗುಂಪುಗಳನ್ನು ಮಾಡಿಕೊಳ್ಳಲು ಸಂಖ್ಯೆಯನ್ನು ಬಳಸುತ್ತಾರೆ. (ಪ್ರಾಸ 20,21 ನೋಡಿ) ದಿನ ನಿತ್ಯ ಕಾಣುವ ವಸ್ತುಗಳಿಗೆ ಸಂಬಂಧಿಸಿದಂತೆ ಪ್ರಾಸಗಳು ಇರುವುದರಿಂದ ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಲು ಸಹಾಯಕವಾಗುತ್ತದೆ.

7.6 ರಾಷ್ಟ್ರ ನಾಯಕರನ್ನು ಕುರಿತ ಪ್ರಾಸಗಳು

ಶಾಲಾ ಮಕ್ಕಳಲ್ಲಿ ಬಾಯಲ್ಲಿ ಕೇಳಿ ಬರುವ ಈ ಪ್ರಾಸಗಳು ಹಿರಿಯರಿಂದ ರಚಿಸಲ್ಪಟ್ಟವುಗಳು. ದೊಡ್ಡವರ ಆದರ್ಶ ಗುಣಗಳನ್ನು ಮಕ್ಕಳು ಅಳವಡಿಸಿಕೊಂಡು ರಾಷ್ಟ್ರ ನಿರ್ಮಾಣ ಮಾಡುವಂತಹ ಉತ್ತಮ ಪ್ರಜೆಗಳಾಗಲಿ ಎಂಬ ಸದುದ್ದೇಶದಿಂದ ರಚಿತವಾದವುಗಳು. ಗಾಂಧಿ, ನೆಹರೂ ಅವರನ್ನು ಕುರಿತ ಪ್ರಾಸಗಳು ಮಕ್ಕಳಲ್ಲಿ ಕಂಠಸ್ಥವಾಗಿವೆ. ಈ ಪ್ರಾಸಗಳನ್ನು ಆಧಾರವನ್ನಾಗಿಟ್ಟುಕೊಂಡು ತಮಗಿಷ್ಟವಾದ ವ್ಯಕ್ತಿಗಳನ್ನು ಕುರಿತು ಮಕ್ಕಳು ಪ್ರಾಸಗಳನ್ನು ರಚಿಸುವುದುಂಟು.

7.7 ಪ್ರಾಣಿಗಳನ್ನು ಕುರಿತ ಪ್ರಾಸಗಳು

ರೈತರ ಜೀವನಾಡಿಗಳಾದ ಸಾಕು ಪ್ರಾಣಿಗಳ ಬಗ್ಗೆ ಮಕ್ಕಳಿಗೆ ಅಪಾರ ಅಭಿಮಾನ, ಪ್ರೀತಿ, ಅವರಿಗೆ ಬೆಕ್ಕು, ನಾಯಿಮರಿ, ಕುರಿಮರಿಗಳೊಂದಿಗೆ ಚೆಲ್ಲಾಟವಾಡುವಾಗ ಕಾಲದ ಪರಿವೆಯೇ ಇರುವುದಿಲ್ಲ. ಅವುಗಳೊಂದಿಗೆ ಬೆರೆತು ಮೈದಡವಿ ಮುದ್ದಿಸಿ ಆನಂದಪಡುತ್ತಾರೆ.

7.8 ಹೂವಿಗೆ ಸಂಬಂಧಿಸಿದ ಪ್ರಾಸಗಳು

ಹೆಣ್ಣು ಮಕ್ಕಳಿಗೆ ಹೂವುಗಳನ್ನು ಕಂಡರೆ ತುಂಬಾ ಇಷ್ಟ, ಹೂವನ್ನು ಮಾಲೆಯಾಗಿ ಕಟ್ಟಿ ಎಷ್ಟು ಮುಡಿದರೂ ತೃಪ್ತಿ ಇಲ್ಲ, ಮತ್ತೆ ಮತ್ತೆ ಮುಡಿಯಬೇಕೆಂಬ ಆಸೆ. ಸಾಮಾನ್ಯವಾಗಿ ಮನೆಯ ಹಿತ್ತಲಿನಲ್ಲಿ ಹೂ ಗಿಡಗಳನ್ನು ಬೆಳೆಯುತ್ತಾರೆ. ಪ್ರತಿ ನಿತ್ಯ ಗಿಡಗಳಿಗೆ ನೀರು ಹಾಕಿ ಸಲಹುವುದೊಂದು

ಹೆಣ್ಣು ಮಕ್ಕಳಿಗೆ ಕಾಯಕ. ಹೂವುಗಳಲ್ಲಿ ಗುಲಾಬಿ, ಮಲ್ಲಿಗೆ, ಜಾಜಿ ಕಂಡರೆ ಅತಿ ಮೆಚ್ಚು. ಅವುಗಳನ್ನು ಕುರಿತಂತೆ ಅನೇಕ ಪ್ರಾಸಗಳು ಅವರ ಬಾಯಲ್ಲಿ ನಲಿಯುತ್ತವೆ.

7.9 ಮಾವನಿಗೆ ಸಂಬಂಧಿಸಿದ ಪ್ರಾಸಗಳು

ಮಕ್ಕಳ ಮನಸ್ಸಿನ ಮೇಲೆ ಮುಖ್ಯವಾಗಿ ಪ್ರಭಾವ ಬೀರಿದ ವ್ಯಕ್ತಿ ಮಾವ, ಅವನು ಹಾಸ್ಯಕ್ಕೆಂದೇ ಮಿಸಲಾದ ವ್ಯಕ್ತಿ, ಅವನನ್ನು ಕುರಿತು ಎಷ್ಟು ಚುಡಾಯಿಸಿದರೂ ಮಕ್ಕಳ ಮನಸ್ಸಿಗೆ ಸಮಾಧಾನವಿಲ್ಲ. ಏಕೋ, ಏನೋ ಅವರ ದೃಷ್ಟಿಯಲ್ಲಿ ತುಂಬಾ ಅಗ್ಗವಾದ ವ್ಯಕ್ತಿಯಾಗಿದ್ದಾನೆ. ಅಂದರೆ ಅವರಿಗೆ ಮಾವನ ಬಗ್ಗೆ ಪ್ರೀತಿ ಇಲ್ಲವೆಂದಲ್ಲ ಇದೆ. ಅದು ಹಾಸ್ಯದ ಮೂಲಕ ವ್ಯಕ್ತಪಡಿಸುವ ಪ್ರೀತಿ. ಸಾಧು ಪ್ರಾಣಿ ಮಕ್ಕಳ ಬಾಯಲ್ಲಿ ಸಿಕ್ಕಿ ಮಾತಿನ ಮೂಲಕ ಪಟಾಕಿಯಂತೆ ಚಟುಗುಟ್ಟುತ್ತಿರುತ್ತಾನೆ.

7.10 ಹಾಸ್ಯಕ್ಕೆ ಸಂಬಂಧಿಸಿದ ಪ್ರಾಸಗಳು

ದುಡಿದುಡಿದು ಬೇಸತ್ತಾಗ ಮನಸ್ಸಿಗೆ ನೆಮ್ಮದಿಯನ್ನು ಕೊಡುವ ಸಂಜೀವಿನಿ ನಗು, ನಗುವಿನ ಉದ್ದೀಪನ ಶಕ್ತಿ ಹಾಸ್ಯ, ಹಾಸ್ಯದಿಂದ ಮನಸ್ಸು ತಿಳಿಯಾಗುತ್ತದೆ. ಚೈತನ್ಯ ಬರುತ್ತದೆ. ಹಾಸ್ಯಪ್ರವೃತ್ತಿ ಇರುವ ವ್ಯಕ್ತಿ ನಿತ್ಯ ಸುಖಿ ಎನ್ನುತ್ತಾರೆ. ದಿನ ನಿತ್ಯದ ನೂರೆಂಟು ನೋವುಗಳನ್ನು ಹಾಸ್ಯದ ಹೊನಲಿನಲ್ಲಿ ಮರೆಯುತ್ತಾನೆ. ಹಿರಿಯರ ಹಾಸ್ಯಪ್ರವೃತ್ತಿ ಮಕ್ಕಳ ಮೇಲೂ ಪರಿಣಾಮ ಬೀರುತ್ತದೆ. ಕೆಲವು ಸಂದರ್ಭಗಳಲ್ಲಿ ಹಿರಿಯರೇ ತಮಗೆ ಪ್ರಿಯವಾದ ವ್ಯಕ್ತಿಗೆ ಹಾಸ್ಯ ಮಾಡಲು ಪ್ರೇರೇಪಿಸುತ್ತಾರೆ. ಮದುವೆ ಸಮಾರಂಭಗಳಲ್ಲಿ, ದೀಪಾವಳಿ ಹಬ್ಬದಲ್ಲಿ ಭಾವನನ್ನು ಕುರಿತು ಹಾಡಿದ ಮೂಲಕ ಅವನ ರೂಪ, ಗುಣಗಳನ್ನು ಅಸಂಬದ್ಧವಾಗಿ ವರ್ಣಿಸಿ ಹೊಟ್ಟೆ ಹುಣ್ಣಾಗಿಸುವಂತೆ ನಗಿಸುತ್ತಾರೆ. ಮದುವೆಯಾದ ಹೊಸತರಲ್ಲಿ ಭಾವ ತನ್ನ ನಲ್ಲೆಯನ್ನು ನೋಡಲು ಬಂದಾಗ ಭಾವಮೈದುನರಿಗಂತೂ (ಮಕ್ಕಳು) ಸಂತಸ, ಸಂಭ್ರಮ. ಅವನು ಬರುವ ಸುದ್ದಿ ಕೇಳಿ ಹಾಸ್ಯ ಮಾಡಲು ಪರೀಕ್ಷೆಗೆ ಹೋಗುವ ಮುನ್ನ ಮಾಡಿಕೊಳ್ಳುವ ಸಿದ್ಧರಾಗಿರುತ್ತಾರೆ. ಇದಕ್ಕೆ ಹಿರಿಯರ ಪ್ರೋತ್ಸಾಹ, ಅಕ್ಕನ ಬೆಂಬಲವಿರುತ್ತದೆ.

ಭಾವನ ಹೊಟ್ಟೆಯನ್ನು ಗುಡಾಣಕ್ಕೆ, ಮೂಗನ್ನು ಆನೆಯ ಸೊಂಡಲಿಗೆ ಕಣ್ಣನ್ನು ಗಜನಿಂಬೆಗೆ, ಕಿವಿಯನ್ನು ಆನೆ ಕಿವಿಗೆ, ಹಲ್ಲನ್ನು ಬಾಚಿಗೆ ಹೋಲಿಸಿ ಭಾವನೂ ಸೇರಿದಂತೆ ಎಲ್ಲರೂ ನಗುವಂತೆ ಮಾಡುತ್ತಾರೆ. ಪ್ರಾಸ 58 ರಲ್ಲಿ ಬಹಳ ದಿನಗಳ ನಂತರ ಭಾವ ಕುದುರೆ ಮೇಲೆ ಬರುತ್ತಾನೆ. ಅಪರೂಪಕ್ಕೆ ಬಂದ ಅವನಿಗೆ ಶಾವಿಗೆ ಅಡುಗೆ ಮಾಡಿ ಬಡಿಸುತ್ತಾರೆ. ಅವನು ನಾಚಿಕೆಯಿಂದ ಕಳ್ಳನಂತೆ ಹೆದರಿಕೊಂಡಂತೆ ಕಂಡರೂ ಊಟವನ್ನು ಜಗ್ಗಿಸಿ ಹೊಡೆಯುತ್ತಾನೆ ಎಂದು ಹೇಳಿ ನಗಿಸುತ್ತಾರೆ. ಅವನ ಹೊಟ್ಟೆ ಬಾಕತನವನ್ನು ಪರೋಕ್ಷವಾಗಿ ಹೇಳಿರುವುದನ್ನು ಕಾಣಬಹುದು. ಪ್ರಾಸ 56 ರಲ್ಲಿ ಮಾವ ಮಾವಿನಗಿಡದ ಕೊಂಬೆಯನ್ನು ಹಿಡಿದು ಜೋತಾಡುವಾಗ (ಅವನು ಜೋತಾಡುವಂತೆ ಪ್ರೇರೇಪಿಸಿದವರು ಮಕ್ಕಳೆ) ಅವನ ದೈತ್ಯ ಭಾರಕ್ಕೆ ಕೊಂಬೆ ಮುರಿದು ಕೆಳಕ್ಕೆ ಬಿದ್ದಾಗ ಅವನ ಪ್ಯಾಂಟು ಹರಿಯುತ್ತದೆ. ಮಾವನ ಪ್ಯಾಂಟು ಹರೀತು ಎನ್ನುವಾಗ ಅವನು ಕೆಳಕ್ಕೆ

ಬಿದ್ದ ರೀತಿ ವ್ಯಕ್ತವಾಗುತ್ತದೆ. ಪ್ರಾಸ 34ರಲ್ಲಿ ಬಿಸಿಲಿನಲ್ಲಿ ಹೊರಟವರ ಬಗ್ಗೆ ಹೇಳಿದೆ. ಬಿಸಿಲಿನ ತಾಪದಿಂದ ನೆಲದ ಮೇಲೆ ಕಾಲಿಡಲು ಸಾಧ್ಯವಾಗದೆ ಬವಣೆ ಪಡುತ್ತಿರುವುದನ್ನು ಕಂಡ ಮಕ್ಕಳಿಗೆ ಚಲ್ಲಾಟ. ಅವರ ಆಗಿನ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಪ್ರಾಸ 60ರಲ್ಲಿ ಅಜ್ಜಿಯ ಬಗ್ಗೆ ಇದೆ. ಅವಳ ಮೊಮ್ಮಕ್ಕಳಿಗೆಂದು ಕಬ್ಬು, ಕಾಯಿಯನ್ನು ಹೊತ್ತುಕೊಂಡು ಬಂದು ಜಗಲಿಯ ಮೇಲೆ ಇಡುವಾಗ ಜಾರಿ ಬಿದ್ದುದನ್ನು ಕಂಡು ಮಕ್ಕಳಿಗೆ ಚಲ್ಲಾಟ. ಅವಳು ಆಗಿನ ಸ್ಥಿತಿಯನ್ನು ಕಂಡು ತಾವೂ ನಕ್ಕು ಬೇರೆಯವರಿಗೂ ತೋರಿಸಿ ನಗುತ್ತಾರೆ.

7.11 ದೈನಂದಿನ ವ್ಯವಹಾರಕ್ಕೆ ಸಂಬಂಧಿಸಿದ ಪ್ರಾಸಗಳು

ಮಕ್ಕಳು ಕುಟುಂಬದ ಒಂದು ಅಂಗ. ದಿನ ನಿತ್ಯದ ವ್ಯವಹಾರಗಳಲ್ಲಿ ಅವರು ಒಂದಲ್ಲ ಒಂದು ರೀತಿಯಲ್ಲಿ ಪಾಲುಗೊಳ್ಳುತ್ತಾರೆ. ಮನೆಯವರೊಂದಿಗೆ ಹೊಲಕ್ಕೆ ಹೋಗುವುದು, ಕಾಡಿಗೆ ಸೌದೆ ತರಲು ಹೋಗುವುದು, ಅಂಗಡಿಗೆ ಹೋಗಿ ಚಿಲ್ಲರೆ ಸಾಮಾನು ತರುವುದು ಇತ್ಯಾದಿ ಕೆಲಸ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ದಿನ ನಿತ್ಯ ತಮಗಾಗುವ ಅನುಭವವನ್ನು ಹಾಡುಗಳ ಮೂಲಕ ಅಭಿವ್ಯಕ್ತಿಪಡಿಸುತ್ತಾರೆ. ಪ್ರಾಸ 67ರಲ್ಲಿ ಗೆಡ್ಡೆ ಗೆಣಸನ್ನು ತರಲು ಕಾಡಿಗೆ ಹೋಗಿ ಬಿಸಿಲಿನಲ್ಲಿ ಸುತ್ತಾಡಿ ಸುಸ್ತಾಗಿ, ಈ ಹೊಟ್ಟೆಗಾಗಿ ಇಷ್ಟೆಲ್ಲ ಕಷ್ಟವನ್ನು ಅನುಭವಿಸಬೇಕು ಎನ್ನುವಲ್ಲಿ ಕಡುಬಡತನದ ಚಿತ್ರಣವಿದೆ. ಬೆಲ್ಲವೇನೊ ಬೇಕು ಆದರೆ ಕೊಳ್ಳಲು ಹಣವಿಲ್ಲ. ಖಾತೆ ತೆಗೆದು ಲೆಕ್ಕ ಬರೆದುಕೊಂಡು ಕೊಡು ಎನ್ನುವಲ್ಲಿ ಅವನ ಜೀವನ ಪರಿಸ್ಥಿತಿಯ ಅರಿವಾಗುತ್ತದೆ.

ಯಾವ ತಂದೆ ತಾಯಿಯೇ ಆಗಲಿ ತಮ್ಮ ಮಕ್ಕಳು ಅವಿದ್ಯಾವಂತರಾಗಿ ಬೀದಿ ಬೀದಿ ಅಲೆಯಲ್ಲಿ ಎಂದು ಬಯಸುವುದಿಲ್ಲ. ತಮಗೇನೇ ತೊಂದರೆ ಇದ್ದರೂ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ. ಅವರಿಗೆ ಶಾಲಾ ವಾತಾವರಣ ಹೊಂದಿಕೊಳ್ಳುವವರಿಗೂ ಕಷ್ಟ, ಹೊಂದಿಕೊಂಡ ಮೇಲೆ ತಾವೇ ಉತ್ಸುಕರಾಗಿ ಶಾಲೆಗೆ ಹೋಗುತ್ತಾರೆ. ಮುಂಜಾನೆಯಿಂದಲೇ ಶಾಲೆಗೆ ಹೋಗಲು ಸಿದ್ಧಪಡಿಸುವಂತೆ ತಾಯಿಗೆ ದುಂಬಾಲು ಬೀಳುತ್ತಾರೆ. (ನೋಡಿ ಪ್ರಾಸ 64) ಶಾಲೆಯಲ್ಲಿ ತಾವು ಕಲಿಯುವ ವಿವರಗಳನ್ನು ಪ್ರಾಸಗಳ ಮೂಲಕ ಅಭಿವ್ಯಕ್ತಿಪಡಿಸುತ್ತಾರೆ. (ಪ್ರಾಸ 65) ಪ್ರಾಸ 66 ರಲ್ಲಿ ವಿದ್ಯೆಯ ಮಹತ್ವವನ್ನು ಮಾಡಿಕೊಟ್ಟಿದ್ದಾರೆ.

7.12 ವಿಡಂಬನಾತ್ಮಕ ಪ್ರಾಸಗಳು

ಟೀಕೆ ಮಾಡುವುದು, ವ್ಯಂಗ್ಯವಾಗಿ ಮಾತನಾಡುವುದು ವ್ಯಕ್ತಿಗೆ ರಕ್ತಗತವಾಗಿ ಬಂದ ಗುಣ. ಒಬ್ಬ ವ್ಯಕ್ತಿಯ ಬೆಳವಣಿಗೆಯ ದೃಷ್ಟಿಯಿಂದ ತನ್ನಲ್ಲಿರುವ ಲೋಪ ದೋಷಗಳನ್ನು ಬೇರೆಯವರು ತೋರುಬೆರಳಿನಿಂದ ತೋರಿಸಿದಾಗ ತಿದ್ದಿಕೊಳ್ಳುವುದು ಅವನ ಆದರ್ಶ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ, ತನ್ನಲ್ಲಿರುವ ಲೋಪ ದೋಷಗಳನ್ನು ವಿಡಂಬನಾತ್ಮಕವಾಗಿ ತೋರಿಸುತ್ತಾ ಬೇರೊಬ್ಬರಲ್ಲಿರುವ ಲೋಪ ದೋಷಗಳನ್ನು ಹೇಳುವುದು ಒಂದು ಗುಣ. ಇಂಥ ಗುಣವನ್ನು ಮಕ್ಕಳ ಪ್ರಾಸಗಳಲ್ಲಿ ಕಾಣುತ್ತೇವೆ. ತನ್ನನ್ನು ಮೊದಲು ಆರೋಪಿಸಿಕೊಂಡು ನಂತರ ತನ್ನ ಸ್ನೇಹಿತರನ್ನು ವಿಡಂಬನೆ ಮಾಡುವ

ಪ್ರಾಸಗಳನ್ನು ಕಾಣಬಹುದು. ಆದರೆ ಈ ವಿಡಂಬತ್ಮಕ ಪ್ರಾಸಗಳಲ್ಲಿ ಹಾಸ್ಯದ ಲೇಪನವಿದೆ, ಮಕ್ಕಳು ಕಾಲ ಕಳೆಯುವ ದೃಷ್ಟಿಯಿಂದ ಮನರಂಜನೆಗಾಗಿ ರಚಿಸಿದಂತಹ ಪ್ರಾಸಗಳಾದರೂ ಸೂಕ್ಷ್ಮನಾಗಿ ಟೀಕಿಸಿದಂತಿವೆ. ಪ್ರಾಸ 68,70ರಲ್ಲಿ ಡಾಕ್ಟರನ್ನು ಕುರಿತು ಹೇಳಿದೆ. ಇಂದಿನ ವಿದ್ಯಾವಂತರ ಪಾಂಡಿತ್ಯದ ಬಗ್ಗೆ ಪರೋಕ್ಷನಾಗಿ ಹೇಳಿದಂತಿದೆ, ಡಾಕ್ಟರ್ ಗುಳಿಗೆ ಕೊಟ್ಟರೂ ತಲೆ ನೋವು ವಾಸಿಯಾಗಲಿಲ್ಲ ಎನ್ನುವಲ್ಲಿ ಅವರಿಗಿನ್ನೂ ವೈದ್ಯಕೀಯ ಕ್ಷೇತ್ರದಲ್ಲಿ ಅನುಭವವಿಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಪ್ರಾಸ 69ರಲ್ಲಿ ಅಧ್ಯಾಪಕ, ಕಳ್ಳ, ಪೋಲೀಸ್, ಸಾಧುಗಳ ವ್ಯಕ್ತಿತ್ವವನ್ನು ಕುರಿತು ಹೇಳಿದೆ.

7.13 ಕಥನ ಪ್ರಾಸಗಳು

ಕಥೆ ಕೇಳುವುದೆಂದರೆ ಮಕ್ಕಳಿಗೆ ತುಂಬಾ ಇಷ್ಟ, ಸಾಹಸ ವಸ್ತುವನ್ನುಳ್ಳ ಕಥೆಯಾದರಂತೂ ಅವರ ಕುತೂಹಲ ಹತ್ತು ಪಟ್ಟು ಹೆಚ್ಚಾಗುತ್ತದೆ. ಕಥೆ ವಸ್ತು ನಿಷ್ಟವಾಗಿರಲಿ ಇಲ್ಲವೆ ಕಾಲ್ಪನಿಕವಾಗಿರಲಿ ಅದು ಮುಖ್ಯವಲ್ಲ. ಕುತೂಹಲವನ್ನು ಕೆರಳಿಸುವಂತೆ ಹೇಳುವ ರೀತಿ ಮುಖ್ಯ ಕಥೆ ಹೇಳುವುದರಲ್ಲಿ ಮನೆಯಲ್ಲಿ ಅಜ್ಜಿಯದೇ ಮೇಲುಗೈ ಆಕೆ ಕಥೆ ಹೇಳುವಲ್ಲಿ ಕಲ್ಪವೃಕ್ಷವಿದ್ದಂತೆ. ಮಕ್ಕಳಿಗೆ ಕಥೆ ಹೇಳುವ ಕಲೆ ಅಜ್ಜಿಯಿಂದ ಬಂದ ಬಳುವಳಿ.

ಹಿರಿಯರು ಹೇಳುವ ಕಥೆಗಳು ದೊಡ್ಡದಾಗಿರುವುದರಿಂದ ಅವುಗಳನ್ನು ಪೂರ್ಣವಾಗಿ ನೆನಪಿನಲ್ಲಿಟ್ಟುಕೊಳ್ಳಲು ಮಕ್ಕಳಿಗೆ ಸಾಧ್ಯವಾಗುವುದಿಲ್ಲ. ಅಲ್ಲದೆ ಮಕ್ಕಳು ಗದ್ಯರೂಪದಲ್ಲಿರುವ ಕಥೆಗಳಿಗಿಂತ ಚಿಕ್ಕ ಚಿಕ್ಕ ವಾಕ್ಯಗಳಿಂದ ಕೂಡಿದ ಪದ್ಯದ ರೂಪದಲ್ಲಿರುವ ಕಥೆಗಳನ್ನು ಬೇಗ ಗ್ರಹಿಸುತ್ತವೆ. ಅದಕ್ಕಾಗಿ ಮಕ್ಕಳು ತಾವು ಕೇಳಿದ ಕಥೆಗಳಲ್ಲಿ ತಮಗೆ ಹಿಡಿಸಿದ, ಕಥೆಯ ಸಾರವನ್ನು ತಮ್ಮ ನೆನಪಿನಲ್ಲಿ ಉಳಿದಷ್ಟನ್ನು ಗಮನಿಸಿದ ಹಿರಿಯರು ಕಥೆಯ ಸಾರಂಶವನ್ನು ಪದ್ಯರೂಪದಲ್ಲಿ ರಚಿಸಿ ಹೇಳುವುದೂ ಉಂಟು, ಕಥನ ಪ್ರಾಸಗಳು ಮಕ್ಕಳ ಬಾಯಿಂದ ಬಾಯಿಗೆ ಹರಿಯುವಾಗ ಕೆಲವು ಸಾಲುಗಳು ಬಿಟ್ಟು ಹೋಗುತ್ತವೆ. ಕೆಲವು ಸಾಲುಗಳಲ್ಲಿ ಬದಲಾವಣೆ ಆಗುತ್ತವೆ.

ಪ್ರಾಸ 71ರಲ್ಲಿ ಗಣೇಶನ ವೃತ್ತಾಂತವನ್ನು ಹೇಳಿದೆ. ಪ್ರತಿಯೊಬ್ಬ ಭಾರತೀಯನಿಗೂ ಗಣೇಶನ ಕಥೆ ಗೊತ್ತಿದೆ. ಹೊಟ್ಟೆ ಹೊಡಿಯುವಷ್ಟು ಕಡುಬನ್ನು ತಿಂದು ಇಲಿಯ ಮೇಲೆ ಕುಳಿತು ಹೋಗುವಾಗ ದಾರಿಯಲ್ಲಿ ಬಿದ್ದು ಹೊಟ್ಟೆ ಒಡೆದಾಗ ಅಲ್ಲಿಯೇ ಹರಿಯುತ್ತಿದ್ದ ನಾಗರ ಹಾವನ್ನು ಸುತ್ತಿಕೊಂಡಿದ್ದು, ಅಂದು ಚೌತಿಯ ದಿನವಾಗಿದ್ದು, ಚಂದ್ರ ಅವನನ್ನು ನೋಡಿ ಪರಿಹಾಸ್ಯ ಮಾಡಿದ್ದನ್ನು ಕಂಡು ಕೋಪದಿಂದ ಶಾಪ ಕೊಟ್ಟಿದ್ದು ಕಥೆಯ ವಸ್ತು. ಕೊನೆಯಲ್ಲಿ ಹೇಳುವ ಮಾತು ಮಕ್ಕಳ ಮುಗ್ಧ ಮನಸ್ಸಿಗೆ ಹಿಡಿದ ಕನ್ನಡಿ, ನಿನ್ನ ಸೇವೆ ಮಾಡುವಲ್ಲಿ ಏನಾದರೂ ಲೋಪ ದೋಷಗಳನ್ನು ಕಂಡರೆ ಮನ್ನಿಸು ಎಂದು ಕೇಳುವ ದೊಡ್ಡ ಗುಣವಿದೆ. ಭಕ್ತಿ ಇದೆ, ದೈನ್ಯತೆ ಇದೆ, ಪ್ರಾಸ 72ರಲ್ಲಿ ಹುಚ್ಚನನ್ನು 73ರಲ್ಲಿ ಕಳ್ಳರನ್ನು ಕುರಿತು ಕಥೆ ಇದೆ.

7.14 ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ಪ್ರಾಸಗಳು

ಸಂಸಾರವೆಂದ ಮೇಲೆ ದಿನ ನಿತ್ಯ ಅನೇಕ ಸಮಸ್ಯೆಗಳು ಎದುರಾಗುವುದು ಅನಿವಾರ್ಯ, ಸಮಸ್ಯೆಗಳನ್ನು ಬಿಡಿಸುವಾಗ ಮನೆಯಲ್ಲಿ ಒಬ್ಬರಿಗೊಬ್ಬರಿಗೆ ಕಾರಣವಿದ್ದೂ ಇಲ್ಲದೆಯೂ, ಮನಸ್ತಾಪ ಉಂಟಾಗುವುದು ಸಂಸಾರದಲ್ಲಿ ಕಂಡು ಬರುವ ಸಾಮಾನ್ಯ ದೃಶ್ಯ. ಜಗಳ ಮನಸ್ತಾಪ ಇಲ್ಲದ ಸಂಸಾರವಿಲ್ಲ.

ಕೆಲವು ವೇಳೆ ಸಣ್ಣ ಕಾರಣಕ್ಕಾಗಿ ಗಂಡ ಹೆಂಡರಲ್ಲಿ ಮನಸ್ತಾಪ ಬರುವುದು ಸರ್ವೇ ಸಾಮಾನ್ಯ. ತಾನು ಹೇಳಿದ ಸೀರೆ ತಂದು ಕೊಡಲಿಲ್ಲವೆಂದೊ, ಒಡವೆ ಮಾಡಿಸಲಿಲ್ಲವೆಂದೊ, ತವರು ಮನೆಗೆ ಕಳುಹಿಸಲಿಲ್ಲವೆಂದೊ, ಹೆಂಡತಿ ಮುನಿಕೊಂಡರೆ ಗಂಡನಾದವನು ತಾನು ಹೇಳಿದ ಮಾತು ಕೇಳಲಿಲ್ಲವೆಂದೂ ತನಗಿಷ್ಟವಾದ ಅಡುಗೆ ಮಾಡಲಿಲ್ಲ ಇತ್ಯಾದಿ ಸಣ್ಣ ಸಣ್ಣ ವಿಚಾರಗಳಿಗೆ ಜಗಳವಾಡುವುದುಂಟು. ಇದರ ಪರಿಣಾಮ ಮಕ್ಕಳ ಮೇಲಾಗುತ್ತದೆ. ಅವರ ಮನಸ್ತಾಪಕ್ಕೆ ಕಾರಣವನ್ನು ಗುಣ ವಿಶೇಷಗಳನ್ನು ಮಕ್ಕಳು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಪಡಿಸಿದ್ದಾರೆ. ಇವು ಹೊರ ನೋಟಕ್ಕೆ ಹಾಸ್ಯದಂತೆ ಕಂಡು ಬಂದರೂ ನೈಜತೆ ಇದೆ. ಮಕ್ಕಳಿಗೆ ತಂದೆ ತಾಯಿಯರ ಬಗ್ಗೆ ಸ್ಪಷ್ಟವಾದ ಕಲ್ಪನೆಯಿದೆ.

ಪ್ರಾಸ 74ರಲ್ಲಿ ಹೆಂಡತಿ ತನ್ನ ಹಟಮಾರಿ ಗಂಡನ ಅಭಿರುಚಿಯನ್ನು ಹೇಳಿದರೆ ಪ್ರಾಸ 77ರಲ್ಲಿ ಗಂಡನ ಮೇಲೆ ಕೋಪಿಸಿಕೊಂಡ ಹೆಂಡತಿ ಹೇಳದೆ ಕೇಳದೆ ತವರಿಗೆ ಹೋಗಿದ್ದಾಳೆ. ಹೆಂಡತಿ ಮನೆಯಲ್ಲಿದ್ದಾಗಿನ ಸಿಟ್ಟು ಹೆಂಡತಿ ತವರಿಗೆ ಹೋದ ಮೇಲೆ ಕರಗುತ್ತದೆ. ಕಾರ್ಮೋಡವಾಗಿದ್ದ ಅವನ ಮನಸ್ಸು ತಿಳಿಯಾಗಿ ಬಾಳ ಸಂಗಾತಿಯನ್ನು ಕರೆಯಲು ಬರುತ್ತಾನೆ. ಹೆಂಡತಿಗೆ ಇನ್ನೂ ಕೋಪ ಇಳಿದಿಲ್ಲ. ಅವಳ ಗುಣವನ್ನು ಅರ್ಥ ಮಾಡಿಕೊಂಡಿದ್ದ ಗಂಡನಿಗೆ ಹೇಗೆ ಅವಳನ್ನು ಸಂತೋಷಪಡಿಸಬೇಕೆಂಬ ರಹಸ್ಯ ಗೊತ್ತಿದೆ. ಅದಕ್ಕಾಗಿ ಒಡವೆ ವಸ್ತ್ರಗಳನ್ನು ತಂದಿದ್ದಾನೆ. ಮದುವೆ ಸೀರೆಯನ್ನು ಚೆನ್ನಾಗಿ ಒಗೆದು ಉಟ್ಟುಕೊಂಡು ಮಂಚ ಹಾಕು ಎನ್ನುವಲ್ಲಿ ಧ್ವನಿ ಇದೆ. ಅವನ ಕಾತುರತೆಗೆ ಕಾರಣವಿದೆ, ದಾಂಪತ್ಯ ಜೀವನದ ಬೆಸುಗೆ ಇದೆ. ಪ್ರಾಸ 75,76ರಲ್ಲಿ ಗಂಡ ಹೆಂಡತಿಯನ್ನು ಕರೆಯಲು ಮಾವನ ಮನೆಗೆ ಹೋದ ಚಿತ್ರಣವಿದೆ.

7.15 ಒಗಟು ಪ್ರಾಸಗಳು

ಗೂಢತೆ, ರಹಸ್ಯ ವ್ಯಕ್ತಿಯ ಜೀವನದಲ್ಲಿ ಅನಿವಾರ್ಯ, ಪ್ರತಿಯೊಬ್ಬ ವ್ಯಕ್ತಿಯೂ ಕೆಲವು ವಿಷಯಗಳನ್ನು ಗುಪ್ತವಾಗಿ ಇಟ್ಟಿರುತ್ತಾನೆ. ಈ ಗೋಪ್ಯತೆ ವ್ಯಕ್ತಿಯ ಸಹಜ ಗುಣಗಳಲ್ಲಿ ಒಂದು, ಒಗಟು ಎನ್ನುವಾಗ ಅದು ವ್ಯಕ್ತಿಯನ್ನು ಗೊಂದಲಕ್ಕೆ ಒಳಪಡಿಸುವುದು ಯಾವುದೇ ಒಗಟಿನಲ್ಲಾದರೂ ಒಂದು ಪ್ರಶ್ನೆಯಿದೆ. ಅದು ಅಸ್ಪಷ್ಟವಾದ ಗೂಢವಾದ ಒಂದು ಹೇಳಿಕೆ. ಅದನ್ನು ಬಿಡಿಸುವಲ್ಲಿ ವ್ಯಕ್ತಿಯ ಬುದ್ಧಿವಂತಿಕೆ ವಿಚಾರ ಶಕ್ತಿ ವ್ಯಕ್ತವಾಗುತ್ತದೆ.

ಒಗಟನ್ನು ಒಡ್ಡಲು ಕನಿಷ್ಠ ಇಬ್ಬರಾದರೂ ಬೇಕಾಗುತ್ತಾರೆ. ಕೆಲವು ವೇಳೆ ಎರಡು ಗುಂಪುಗಳಿರುತ್ತವೆ. ಎರಡು ಗುಂಪಿನವರು ಎದುರು ಬದುರು ಕುಳಿತು ಒಬ್ಬರಿಗೆ (ಒಂದು ಗುಂಪಿಗೆ)

ಒಗಟನ್ನು ಹೇಳುವುದು, ಮತ್ತೊಬ್ಬರು ಅದನ್ನು ಬಿಡಿಸುವುದು. ಒಂದು ವೇಳೆ ಸೋತರೆ, ಸೋತವರು ಪ್ರತಿಯಾಗಿ ಏನಾದರೂ ದಂಡವಾಗಿ ಕೊಡಬೇಕಾಗುತ್ತದೆ. ಬೇಸರವಾದಾಗ ಸಮಯ ಕಳೆಯಲು ಒಗಟನ್ನು ಹೇಳುತ್ತಾರೆ.

ಒಗಟು ನಾವು ದಿನ ನಿತ್ಯ ನೋಡುವ ವಸ್ತುಗಳು, ಪ್ರಕೃತಿ, ಪ್ರಾಣಿ ಪಕ್ಷಿಗಳು ಇತ್ಯಾದಿಗಳನ್ನು ಒಳಗೊಂಡಿರುತ್ತವೆ. ಒಗಟನ್ನು ಒಡ್ಡುವವನು ಒಗಟಿನ ಪೂರ್ವಾರ್ಧವನ್ನಷ್ಟೇ ಹೇಳುತ್ತಾನೆ. ಬಿಡಿಸುವವನು ಒಂದೇ ಪದದಲ್ಲಿ ಅದಕ್ಕೆ ಉತ್ತರಿಸಬೇಕು.

ಈಗ ಹೆಚ್ಚಾಗಿ ಒಗಟು ಕಂಡು ಬರುವುದು ಮಕ್ಕಳಲ್ಲಿ. ಬಿಡುವು ಸಿಕ್ಕಾಗಲೆಲ್ಲ ಜೊತೆಗಾರರೊಂದಿಗೆ ಬೆರೆತು ತಮಗೆ ಒಗಟುಗಳನ್ನು ಒಡ್ಡಿ ಕೇಳುಗರನ್ನು ದಂಗು ಬಡಿಯುವಂತೆ ಮಾಡಿ ಸೋಲಿಸಿ ಖುಷಿ ಪಡುವುದೆಂದರೆ ಅವರಿಗೆ ಉಂಡೆ ಕಡುಬು ತಿಂದಷ್ಟು ಸಂತೋಷ. ಒಗಟನ್ನು ಬಿಡಿಸಿ ಗೆಲುವನ್ನು ತೋರಿಸಿಕೊಳ್ಳುವುದೆಂದರೆ ಅವರಿಗೆ ಅಗಾಧವಾದ ಕಾರ್ಯವನ್ನು ಸಾಧಿಸಿದಷ್ಟು ತೃಪ್ತಿ. ಇದರಿಂದ ಮಕ್ಕಳಿಗೆ ವಿಚಾರ ಶಕ್ತಿ ಬೆಳೆಯುತ್ತದೆ. ಬುದ್ಧಿ ಸೂಕ್ಷ್ಮವಾಗುತ್ತದೆ.

ಕೆಲವು ವೇಳೆ ಒಗಟನ್ನು ಒಡ್ಡುವಾಗ ಪಂಥ ಕಟ್ಟುತ್ತಾರೆ. ಸೋತರೆ ಪ್ರತಿಯಾಗಿ ಕಡಲೇಕಾಯಿ, ರೊಟ್ಟಿ, ಬಳಪ, ಗೋಲಿ, ಇತ್ಯಾದಿ ವಸ್ತುಗಳನ್ನು ದಂಡವಾಗಿ ಕೊಡಬೇಕೆಂಬ ಷರತ್ತು ಹಾಕುತ್ತಾರೆ. ಅವರ ದೃಷ್ಟಿಯಲ್ಲಿ ಇದು ಒಂದು ಆಟವಿದ್ದಂತೆ. ಅದು ಬೌದ್ಧಿಕವಾಗಿ ಅಲ್ಲ. ಮಾನಸಿಕವಾಗಿ. ಅವರು ಒಂದು ವಸ್ತುವನ್ನು ಕುರಿತು ಹೇಳುವ ರೀತಿ ವಿಶಿಷ್ಟವಾದುದು. ಕಲ್ಪನಾ ಶಕ್ತಿ ಅದ್ಭುತವಾದುದು. ಪ್ರಾಸ 79ರಲ್ಲಿ ಮಾವಿನಕಾಯಿಯನ್ನು ಕುರಿತು ಹೇಳುವ ಒಗಟು ಅವರ ಕಲ್ಪನಾ ಶಕ್ತಿಗೆ ಹಿಡಿದ ಕನ್ನಡಿ. ಅದರ ಬಣ್ಣವನ್ನು ಹಸಿರು ಅಂಗಿ ತೊಟ್ಟ ಅಮಲ್ದಾರನಿಗೆ ಹೋಲಿಸಿದರೆ, ಮೂರ್ತಿಯನ್ನು ಗಿಣಿ ಮೂರ್ತಿ ಶೇಕದಾರ ಎಂದು ಹೇಳುವಲ್ಲಿ ಪ್ರಜ್ಞೆಯಿದೆ. ಮೊದಲ ಎರಡು ಸಾಲುಗಳು ಮಾವಿನ ಕಾಯಿಯ ವರ್ಣನೆಮಾಡಿದರೆ. ಕೊನೆಯ ಎರಡು ಸಾಲುಗಳು ಮಾವಿನ ಕಾಯಿ ಯಾವಾಗ ಬಿಡುತ್ತವೆ ಎಂಬುದರ ಬಗ್ಗೆ ಇದೆ. ಯುಗಾದಿಗೆ ಬಂದು ತಗಾದಿ ಮಾಡೊ ಜಮಿನ್ದಾರನ ಎನ್ನುವಾಗ ಜಮಿನ್ದಾರನ ವ್ಯವಹಾರದ ಚಾಣಾಕ್ಷತನದ ಬಗ್ಗೆ ಅರಿವಿದೆ.

ಪ್ರಾಸ 82ರಲ್ಲಿ ಚುಕ್ಕುಲಿಯ ಚಿತ್ರಣವಿದೆ. ಸಾಮಾನ್ಯವಾಗಿ ಮಕ್ಕಳ ಪ್ರಜ್ಞೆ ತಿಂಡಿಯ ಕಡೆಗೆ ಬುದ್ಧಿ ಅನುಭವದಂತೆ ಕೆಲಸ ಮಾಡುತ್ತದೆ. ಯಾವುದೇ ಒಗಟನ್ನು ರಚಿಸುವಾಗ ಅನುಭವದ ಸಾದೃಶ್ಯತೆ ವ್ಯಕ್ತವಾಗುತ್ತದೆ. ಪ್ರಾಸ 83ರಲ್ಲಿ ದಿನ ನಿತ್ಯ ಬಳಸುವ ನಾಲ್ಕು ವಸ್ತುಗಳ ವರ್ಣನೆಯಿದೆ. ವಸ್ತುವಿನ ಮೊದಲ ಅಕ್ಷರವಿದೆ. ಅದರ ಆಧಾರದ ಮೇಲೆ ವಸ್ತುವಿನ ಹೆಸರನ್ನು ಹೇಳಬೇಕು. ಪ್ರಾಸ 84ರಲ್ಲಿ ಕೋಳಿ ಹುಂಜದ ಚಿತ್ರಣವಿದೆ. ಇಲ್ಲಿ ಕರೀಟ, ಗಡ್ಡ, ರಾಜ, ಸಾಬಿ, ಒಂದಕ್ಕೊಂದು ಹೋಲಿಕೆ ಇದೆ. ರಾಜನ ಗತವೈಭವವನ್ನು ಕಣ್ಣಾರೆ ನೋಡದಿದ್ದರೂ ಚಿತ್ರಗಳಲ್ಲಿ ಕಥೆ ನಾಟಕಗಳಲ್ಲಿ ನೋಡಿದ್ದಾರೆ. ಕೋಳಿಯ ತಲೆಯ ಮೇಲಿನ ಕುಚ್ಚವನ್ನು ಕಿರೀಟಕ್ಕೆ ಹೋಲಿಸಿರುವಲ್ಲಿ ಕಲ್ಪನಾ ಶಕ್ತಿಯನ್ನು ಕಾಣಬಹುದು. ಪ್ರಾಸ 85ರಲ್ಲಿ ಸಗಣಿಯ ವರ್ಣನೆಯಿದೆ. ಸಂತೆಯ ಪ್ರಸ್ತಾಪವಿದೆ. ತಕ್ಕಡಿಯ ಕಲ್ಪನೆ ಇದೆ, ಸಂಪ್ರದಾಯದ ಅರಿವಿದೆ.

ದಿನ ನಿತ್ಯ ಕಾಣುವ ಸಾಮಾನ್ಯ ವಸ್ತುಗಳನ್ನು ಕುರಿತು ಒಗಟಿನ ರೂಪದಲ್ಲಿ ಮುಂದಿಡುವುದು ಮಕ್ಕಳ ಕಲ್ಪನಾ ಶಕ್ತಿಯ ದ್ಯೋತಕ. ಒಂದು ವಸ್ತುವಿನ ಹೆಸರೇಳುವುದಕ್ಕಿಂತ ಅದನ್ನೇ ರೂಪಕ, ಉಪಮೆಗಳ ಮೂಲಕ ಹೇಳಿದಾಗ ಕೇಳುಗರಿಗೆ ಕುತೂಹಲವನ್ನು ಕೆರಳಿಸುತ್ತದೆ. ಮನರಂಜನೆ ದೊರೆಯುತ್ತದೆ. ಕಾವ್ಯಾಂಶವನ್ನು ಪಡೆದುಕೊಳ್ಳುವುದರ ಜೊತೆಗೆ ಬುದ್ಧಿಗೆ ಕಸರತ್ತನ್ನು ನೀಡುತ್ತವೆ.

7.16 ಪ್ರಣಯ ಜೀವನಕ್ಕೆ ಸಂಬಂಧಿಸಿದ ಪ್ರಾಸಗಳು

ಪ್ರಣಯ, ಪ್ರೇಮ ಎಂಬ ಶಬ್ದವೇ ಕೇಳುಗರನ್ನು ಪುಳುಕಿತರನ್ನಾಗಿ ಮಾಡುತ್ತದೆ, ಪ್ರೇಮ, ಪ್ರಣಯ ಮಕ್ಕಳಲ್ಲಿಯೂ ಸದಾ ಹೊಗೆಯಾಡುತ್ತಲೇ ಇರುತ್ತದೆ. ಚಿಕ್ಕ ಮಕ್ಕಳನ್ನು 'ಮದುವೆಯಾಗುತ್ತೀಯಾ ಮರಿ' ಎಂದರೆ ಮುಖ ಕೆಂಪಗಾಗಿ ನಾಚುವುದು, ಮಕ್ಕಳೆಲ್ಲ ಜೊತೆ ಗೂಡಿ ಕಲ್ಲುಗಳ ಗೊಂಬೆಗಳನ್ನು ಕೂರಿಸಿ ಗಂಡು ಹೆಣ್ಣಿನಂತೆ ಅಲಂಕಾರ ಮಾಡಿ ಶಾಸ್ತ್ರೋಕ್ತವಾಗಿ ಮದುವೆ ಮಾಡುವುದು ಇತ್ಯಾದಿಗಳೆಲ್ಲ ಮಕ್ಕಳಲ್ಲಿ ಸುಪ್ತವಾಗಿರುವ ಪ್ರೀತಿಯ ಸಂಕೇತ. ಅಲ್ಲದೆ ಮನೆಯಲ್ಲಿ ನೆರೆ ಹೊರೆಯವರಲ್ಲಿ ವಿವಾಹ, ಸೋಬನ ಇತ್ಯಾದಿ ಶುಭ ಕಾರ್ಯಗಳಲ್ಲಿ ಅವರು ಭಾಗವಹಿಸುತ್ತಿರುತ್ತಾರೆ. ಇದೆಲ್ಲವನ್ನು ನೋಡಿದ ಅವರಿಗೆ ಕುತೂಹಲ, ತಮಗೂ ಹೀಗೆ ಏಕೆ ಮಾಡುವುದಿಲ್ಲ ಎಂಬ ಮುಗ್ಧ ಪ್ರಶ್ನೆಯನ್ನು ಕೇಳಿ ಹಿರಿಯರನ್ನು ನಗೆಗಡಲಿನಲ್ಲಿ ಮುಳುಗಿಸುತ್ತಾರೆ. ಮನೆಯಲ್ಲಿ ಏನಾದರೂ ವಿಶೇಷವಾದ ತಿಂಡಿ ಮಾಡಿದಾಗ ಇಲ್ಲವೆ ತಿನ್ನಲು ಏನಾದರೂ ಕೊಟ್ಟಾಗ ತಮಗೆ ಪ್ರಿಯವಾದವರೆಗೆ (ಗಂಡು ಮಕ್ಕಳಾದರೆ ಹೆಣ್ಣು ಮಕ್ಕಳಿಗೆ ಹೆಣ್ಣು ಮಕ್ಕಳಾದರೆ ಗಂಡು ಮಕ್ಕಳಿಗೆ) ಕದ್ದು ಕೊಡುವುದು ಅವರಲ್ಲಿರುವ ಪ್ರಣಯ ಜೀವನದ ಪ್ರತಿಬಿಂಬ. ಪ್ರಣಯ ಜೀವನಕ್ಕೆ ಸಂಬಂಧಿಸಿದ ಅನೇಕ ಪ್ರಾಸಗಳನ್ನು ಮಕ್ಕಳು ಹಾಡುತ್ತಾರೆ.

7.17 ಬೈಗುಳಗಳನ್ನೊಳಗೊಂಡ ಪ್ರಾಸಗಳು

ಒಬ್ಬ ವ್ಯಕ್ತಿಯ ಮೇಲಿನ ಕೋಪ ಬೈಗುಳಗಳ ಮೂಲಕ ವ್ಯಕ್ತವಾಗುತ್ತದೆ. ಬೈಗುಳಗಳ ಬಿರಿಮಳೆ ಸುರಿದಾಗ ಕೋಪ ತಣ್ಣಗಾಗುತ್ತದೆ. ಆಗ ವ್ಯಕ್ತಿ ಮೊದಲಿನ ಸ್ಥಿತಿಗೆ ಬರುತ್ತಾನೆ. ಇದರಿಂದ ಎಷ್ಟೋ ಅನಾಹುತಗಳು ಕಡಿಮೆಯಾಗುತ್ತವೆ. ಬೈಗುಳಗಳಲ್ಲಿ ಅನೇಕ ಬಗೆಗಳಿವೆ. ಅದನ್ನಿಲ್ಲಿ ಪ್ರಸ್ತಾಪಿಸುವುದು ಅಪ್ರಸ್ತುತವೆಂದು ಭಾವಿಸಿ ಕೈ ಬಿಟ್ಟಿದ್ದೇನೆ.

ಒಂದಲ್ಲ ಒಂದು ಕಾರಣದಿಂದ ಮನೆಗಳಲ್ಲಿ ದಿನ ನಿತ್ಯ ಬೈಗುಳಗಳನ್ನು ಮಕ್ಕಳು ಕೇಳೂತ್ತಲೇ ಇರುತ್ತಾರೆ. ಮನೆಯಲ್ಲಿ ಹಿರಿಯರಿಂದ, ಹೊರಗೆ ಸ್ನೇಹಿತರಿಂದ, ಶಾಲೆಯಲ್ಲಿ ಮಾಸ್ತರಿಂದ ಬೈಸಿಕೊಳ್ಳುತ್ತಲೇ ಇರುತ್ತಾರೆ. ಏನಾದರೂ ತಪ್ಪು ಮಾಡಿದಾಗ ಬೈಗುಳಗಳ ರುಚಿ ನೋಡಬೇಕಾಗುತ್ತದೆಂಬುದನ್ನು ಮಕ್ಕಳು ಅರ್ಥ ಮಾಡಿಕೊಂಡಿರುತ್ತಾರೆ. ಅದರ ಅನುಭವ ಅವರಿಗಾಗಿರುತ್ತದೆ. ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪ್ರಭಾವ ಬೀರಿರುತ್ತವೆ, ಬೈಗುಳಗಳ ಶಬ್ದ ಅವರಿಗೆ ಅರ್ಥವಾಗಲಿ ಬಿಡಲಿ ತಾವು ಕೇಳಿದ ನೆನಪಿನಲ್ಲಿ ಉಳಿದ ಶಬ್ದಗಳನ್ನು ಕೆಲವು ಸಂದರ್ಭಗಳಲ್ಲಿ

ಬಳಸುತ್ತಾರೆ. ಪ್ರಾಸ 94ರಲ್ಲಿ 'ಹುಚ್ಚರಂಡಿ' 95ರಲ್ಲಿ 'ರಂಡಿ' ಈ ಶಬ್ದಗಳು ಹೆಣ್ಣನ್ನು ಕುರಿತ ಬೈಗುಳಗಳು. ಆಟ ಆಡುವಾಗ ಅರ್ಧದಲ್ಲಿಯೇ ಆಟ ಬಿಟ್ಟು ಹೋದರೆ ಬೈಯುವುದುಂಟು.

7.18 ಕೊಂಡಿ ಪ್ರಾಸಗಳು

ಕೊಂಡಿ ಪ್ರಾಸಗಳು ಮಕ್ಕಳ ವಿಚಾರ ಶಕ್ತಿಗೆ ನಿದರ್ಶನ ಯಾವುದಾದರೂ ಒಂದು ವಸ್ತುವನ್ನು ಹೇಳಿದಾಗ, ಅದರ ಮೇಲೆ ಪ್ರಶ್ನೆಗಳನ್ನು ಹಾಕುತ್ತಾ ಪ್ರಾಸವನ್ನು ಬೆಳೆಸಿಕೊಂಡು ಹೋಗಿ ಉತ್ತರ ಹೇಳುವವರನ್ನು ಗಲಿಬಿಲಿಗೊಳಿಸುತ್ತಾರೆ. ಪ್ರಾಸ 109ರಲ್ಲಿ ಬೆಲ್ಲದ ಅಚ್ಚಿನಿಂದ ಪ್ರಾರಂಭವಾದ ಪ್ರಾಸ, ಕೊನೆಗೆ ಏಟು ತಿನ್ನು ಎಂಬ ಬೇಸರದ ಶಬ್ದದೊಂದಿಗೆ ಮುಕ್ತಾಯವಾಗುತ್ತದೆ. ಪ್ರಾಸ 110ರಲ್ಲಿ ವಾಟ್ ಸಾರ್ ನಿಂದ ಪ್ರಾರಂಭವಾಗಿ ಏಟು ತಿನ್ನು ಎಂಬಲ್ಲಿಗೆ ಮುಗಿಯುತ್ತದೆ.

ಈಗಾಗಲೇ ಹೇಳಿರುವಂತೆ ಮೇಲಿನ ವರ್ಗೀಕರಣವೇ ಅಂತಿಮವಲ್ಲ. ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ಚಿಕ್ಕ ಚಿಕ್ಕ ವಿಷಯಗಳನ್ನು ಆಧಾರವನ್ನಾಗಿಟ್ಟುಕೊಂಡು ವರ್ಗೀಕರಿಸುತ್ತಾ ಹೋಗಬಹುದು. ವರ್ಗೀಕರಣಕ್ಕೆ ಒಳಪಡದೆ ಇರುವಂತಹ ಪ್ರಾಸಗಳು ಇವೆ. ಅವುಗಳನ್ನು ಇತರೆ ಪ್ರಾಸಗಳು ಎಂದು ಇಟ್ಟುಕೊಳ್ಳಬಹುದು. ವರ್ಗೀಕರಣವನ್ನು ವಿವರಿಸುವಾಗ ಉದಾಹರಣೆಗಾಗಿ ಕೆಲವು ಪ್ರಾಸಗಳನ್ನು ಮಾತ್ರ ಪ್ರಸ್ತಾಪಿಸಿದ್ದೇನೆ. ವಿವರಣೆ ದೀರ್ಘವಾಗುವುದೆಂಬ ದೃಷ್ಟಿಯಿಂದ ಎಲ್ಲಾ ಪ್ರಾಸಗಳ ಬಗ್ಗೆ ಹೇಳಿಲ್ಲ.

ಶಿಶುಪ್ರಾಸಗಳ ಸೃಷ್ಟಿ ಸಿದ್ಧತನದ ವಸ್ತುವನ್ನು ಅಳವಡಿಸಿಕೊಂಡು ನಿರಂತರವಾಗಿ ಸೃಷ್ಟಿಯಾಗುತ್ತಲೇ ಇರುತ್ತದೆ. ಸೃಷ್ಟಿಯಾಗುವಾಗ ಅನೇಕ ಹೊಸ ಶಬ್ದಗಳು ಸೇರ್ಪಡೆಯಾಗುತ್ತವೆ. ಕಾಫಿ, ಬೆಣ್ಣೆ, ಬಿಸ್ಕತ್, ಕೆಜಿ ಬೆಲ್ಲ. ಆಫೀಸು, ರಿಬ್ಬನ್, ಲೆಪ್ಪರೈಟ್, ಡಾಕ್ಟರ್, ಸೈಕಲ್ ಮಾತ್ರೆ, ವಾಟ್, ಗೌರ್ನಮೆಂಟ್ ಬಸ್, ಲೈಟು, ಡ್ರೈವರ್, ಕಂಡೆಕ್ಟರ್, ರೈಟ್, ಪೆನ್ಸಿಲ್, ರೇಡಿಯೋ, ವಿಮಾನ, ಇತ್ಯಾದಿ ಶಬ್ಧಗಳು ಸಮಕಾಲಿನ ಚಿತ್ರಣವನ್ನು ನೀಡುತ್ತವೆ, ಬೀದರ್ ಜಿಲ್ಲೆಯ ಶಿಶುಪ್ರಾಸಗಳು ಭಾಷೆ, ಶೈಲಿಯ ದೃಷ್ಟಿಯಿಂದ ಮಹತ್ವಪೂರ್ಣವಾದವುಗಳು, ಏಕೆಂದರೆ ಬೀದರ್ ಆಂಧ್ರ, ಮಹಾರಾಷ್ಟ್ರಗಳ ಗಡಿ ಪ್ರದೇಶದಲ್ಲಿರುವುದರಿಂದ ಇಲ್ಲಿಯ ಭಾಷೆಯ ಮೇಲೆ ತೆಲುಗು, ಮರಾಠಿ ಭಾಷೆಯ ಪ್ರಭಾವ ಬಿದ್ದಿವೆ. ಮೊದಲಿನಿಂದಲೂ ನಿಜಾಮರ ಆಡಳಿತಕ್ಕೆ ಒಳಪಟ್ಟಿರುವುದರಿಂದ ಉರ್ದು ಭಾಷೆಯ ಪ್ರಭಾವ ಹೇರಳವಾಗಿ ಕಂಡು ಬರುತ್ತದೆ. ಅವು ಕನ್ನಡ ಭಾಷೆಯೇನೋ ಎನ್ನುವಷ್ಟರ ಮಟ್ಟಿಗೆ ಜನರ ಮಾತಿನಲ್ಲಿ ಬೆರೆತು ಹೋಗಿವೆ. ಶಿಶುಪ್ರಾಸಗಳನ್ನು ಮನಶಾಸ್ತ್ರೀಯ ದೃಷ್ಟಿಯಿಂದ ಅಧ್ಯಯನ ಮಾಡಿದರೆ ಉಪಯುಕ್ತ ಅಂಶಗಳು ಹೊರಬೀಳಬಹುದು.

1

ಗಣಪ್ಪ ಬಂದ ಹಣೆಯೆಷ್ಟು ಚೆಂದ
ಹಣೆಯೆಷ್ಟು ಚೆಂದ
ಭಾರಿ ಕಡಬು ತಿಂದ
ಭಾಂಯಾಗ ಬಿದ್ದ
ಮುಣಗಿ ಮುಣಗಿ ಎದ್ದ

2

ಗಣಪತಿ ಬಂದ
ಹೊಟ್ಟೆ ಮ್ಯಾಲೆ ಗಂಧ
ಕಡಬು ಕಾಯಿ ತಿಂದ
ಬಾಂಯಾಗೆ ಬಿದ್ದ

3

ಗಣಪತಿ ಬಂದ
ಹಣೆ ಮೇಲೆ ಗಂಧ
ಅವ ಎಷ್ಟು ಚೆಂದ
ಕಡಬನು ತಿಂದ
ಲೋಕಾಕೆಲ್ಲ ಆನಂಧ

4

ಮಳೆರಾಜ ಬಂದ
ದೊಡ್ಡ ಮಳೆ ತಂದ
ಹಾದಿ ಬೀದಿ ನೀರು
ಓಣಿಯಲ್ಲ ಕೆಸರು

5

ಬಾರೋ ನಮ್ಮ ಗಣಪ
ಎಂದಿಗೆ ನಿಮ್ಮ ನೆನಪ
ವಿದ್ಯಾಪತಿ ಏನಪ್ಪ
ಬುದ್ಧಿ ಕೊಡು ನಮ್ಮಪ್ಪ

6

ಮಳೆ ಬಂತು ಮಳೆ
ಕೊಡೆ ಹಿಡಿದು ನಡೆ
ಜಾರಿ ಬಿದ್ದ್ಯ ಕೊಂಚ ತಾಳು
ಬಟ್ಟೆಯೆಲ್ಲ ಕೊಳೆ
ಬಿಸಿಲು ಬಂತು ಧಗೆ
ಕೋಟು ಟೋಪಿ ತೆಗೆ

7

ಮಳೆರಾಯ ಬಂದಾನ
ಮೋಡದ ಮರೆಯಲ್ಲಿ ನಿಂತಾನ
ಮಳೆ ನೀರ ಚೆಲ್ಲಾನ
ಹುಡುಗರಿಗೆ ಆನಂದ ತಂದಾನ

8

ಬ್ಯಾಸಿಗೆ ಬಿಸಿಲು ಬಂದಿತ್ತು
ಕಾಗೆಯ ಗಂಟಲು ಒಣಗಿತ್ತು
ಅತ್ತ ಇತ್ತ ನೋಡಿತ್ತು
ದೂರದಿಂದ ಒಂದು ಕೊಡವಿತ್ತು
ಅದರಲ್ಲಿ ಸ್ವಲ್ಪ ನೀರಿತ್ತು
ಚೊಂಚಲಿ ಹಳ್ಳ ತಂದಿತ್ತು
ಬಂದು ಬಂದು ಬಗೆದಿತ್ತು
ಮೇಲಕ್ಕೆ ನೀರು ಬಂದಿತ್ತು

ಗುಟುಕು ಗುಟುಕು ಕುಡಿತಾ
ಕಾವು ಕಾವು ಹಾರಿತು

9
ಮಳೆ ಮಾಮ ಬಂದ
ಮಲ್ಲಿಗೆ ಹೂವ ತಂದ
ಅಪ್ಪಪ್ಪ ಚಳಿ
ಕೌದೆ ಹಚ್ಕೊಂಡಿದ್ದೆ
ಗೊಂಗಡಿ ಹಚ್ಕೊಂಡೆದ್ದೆ
ಚಳಿನೆ ಬಿಟ್ಟಿಲ್ಲ
ಅಡಿಗೆ ಮನೆಗೆ ಹೋಗಿ
ಒಂದು ಕಪ್ಪು ಬಿಸಿ ಬಿಸಿ
ಚಾ ಕುಡಿದೆ
ಎಲ್ಲ ಚಳಿನು ಬಿಟ್ಟು

10
ಮಾಗಿ ಮಾವ ಬಂದ
ಮಲ್ಲೆ ಹೂವ ತಂದ
ಚಳಿರಪ್ಪ ಚಳಿರೋ
ಚಳಿರಪ್ಪ ಚಳಿರೋ
ಅಯ್ಯೋ ಏನು ಬೇಕಪ್ಪ
ಒಂದು ರಗ್ಗು ಕೊಡಪ್ಪ
ರಗ್ಗು ಹೊದ್ಕೊಂಡು ಏನ್ಮಾಡ್ದ ಗೊತ್ತಾ
ಬಿಸಿ ಬಿಸಿ ಕಾಫಿ ಕೇಳಿದ
ಕೊಟ್ಟ ತಕ್ಷಣ ಗಟಗಟಂತ ಕುಡಿದ
ಮಾಗಿ ಮಾವ

11
ಮಳೆರಾಯ ಬಂದಾನ
ಮಳೆ ಹನಿಯ ಸುರಿಸಾನ
ಬೆಳೆಯನ್ನು ಬೆಳೆಸಾನ
ಆನಂದ ತಂದಾನ

12
ಬಾ ಬಾ ಗೊಂಬೆ
ಬೆಣ್ಣೆ ಬಿಸ್ಕತ್ ತಿನ್ನೋಣ
ಕುದುರೆ ಗಾಡಿ ಕಟ್ಟೋಣ
ಜಮ್ಮಂತ ಕೂಡೋಣ

13
ಗುಡು ಗುಡು ಮುತ್ಯಾ ಬಂದಾನ
ಮಲ್ಲಿಗೆ ಮಳೆಯ ಸುರಿಸಾನ
ಉಂಡೆ ಕಡುಬು ತಂದಾನ
ಹುಡುಗರ ಕೈಲಿ ಕೊಟ್ಟಾನ

15
ಪುಟ್ಟ ಪುಟ್ಟ ಗೊಂಬೆ
ಇದು ಚಿತ್ರವಾದ ಗೊಂಬೆ
ಅಮ್ಮ ನನಗೆ ತಂದು ಕೊಟ್ಟ
ಅಂದವಾ ಗೊಂಬೆ

14
ಚಿಕ್ಕ ಚಿಕ್ಕ ಗೊಂಬೆ
ಚಿತ್ರವಾದ ಗೊಂಬೆ
ಅಮ್ಮ ನನಗೆ ತಂದು ಕೊಟ್ಟ
ಬಲವಾದ ಗೊಂಬೆ
ಲಂಗ ಲಂಗ ಉಡ್ಸಿ ಅದಕೆ
ಜ್ವಾಕೆ ಮಾಡಿ ಇಡಿಸುವೆ
ಕಣ್ಣಿಗೆ ಕಪ್ಪ ಹಚ್ಚುವೆ
ಕೀಲಿ ಕೊಟ್ಟರೆ ನಡುವೆ
ಬಿರಾ ಬಿಸಾ ಎಂದು
ಜೋಗುಳವ ಪಾಡುವುದು
ನಿದ್ರೆ ಮಾಡುವುದು

16

ಪುಟ್ಟ ಪುಟ್ಟ ಗೊಂಬೆ
ಪುಟಾಣಿ ಗೊಂಬೆ
ಕೈಯಲ್ಲಿ ಬ್ಯಾಗು
ಕಾಲಲಿ ಬೂಟು
ಅಕ್ಕ ಪಕ್ಕ ಮನೆಯಲ್ಲಿ
ಉಪ್ಪಿನ ಖಾರಾ, ಅದು ಬಹು ಖಾರಾ.

17

ಬಾ ಪುಟ್ಟ ಬಾ
ಇತಕ ಬಾ
ಎದುರಿಗೆ ಬಾ
ಚಂದನ ಕೋಲನು ಹಾಕನು ಬಾ

18

ಲಾಲಿ ಲಾಲಿ ಲಲಿಯುವೆ
ಪರಬ್ರಹ್ಮದ ಶಿಶುವೆ
ಮಾಲೆಯ ಹೂವೆ
ಮಲಿ ಮಲಿ ಮಲ್ಲಿಗೆ
ಹೂವಿನದಲ್ಲಿಗೆ

19

ರತ್ತೋ ರತ್ತೋ ರಾಯನ ಮಗಳೆ
ಬಿತ್ತೋ ಬಿತ್ತೋ ಭೀಮನ ಮಗಳೆ
ಹದಿನಾರಾಣಿ ಕಾಸಾಲಾರೆ
ಬೈಟ್ ಕಂಬ
ಬಾಳೆ ಕಂಬ
ಕುಕ್ಕರ ಬಸವಿ
ಕೂರೆ ಬಸವಿ

20

ಸಜನಕ ದೀಪಾ ಒಂದು
ಸಜನಕ ದೀಪಾ ಎರಡು

21

ತಂದಾಣಿ ಪಿಲ್ಲಾ ಒಂದು
ತಂದಾಣಿ ಪಿಲ್ಲಾ ಎರುಡು
ತಂದಾಣಿ ಪಿಲ್ಲಾ ಮೂರು
ತಂದಾಣಿ ಪಿಲ್ಲಾ ನಾಲ್ಕು
ತಂದಾಣಿ ಪಿಲ್ಲಾ ಐದು

22

ಆಚಿಕ್ ಮಾಚಿಕ್ ಗಿಲಿ ಗಿಲಿ ಗೀಚಕ್ಕ
ಕಲ್ಯಾಣ ಕೋಪ ಪ್ಯಾಸಿ ಎನ್ನ ನೀಲಕನ್ನ
ಟೇಬಲ್ ಬಸ್ಸ್

23

ಬಿತ್ತಿ ಕಟಗಿ ಬಾವನ್ ಬಸವನ
ಕೈ ಕೈ ಜೋಡಿಗ್ಯೆ
ಪಂಚಂ ಪಂಗಡಂ ಎಂಮ್ಸೆ ತೋಟ
ತಲುವಾರ್ ಬಂದು ಚೂರಿ ಚಿಟಕ

24

ಅಕಡಾ ಮಕಡಾ
ನಿಂಬಿಕಾಯಿ ತುಕಡಾ
ಟಾಮ ಟೂಮ ತಮನೇ
ಟುಂಯ ಟುಸ್ಸ್

25

ಹತ್ತಿ ಕಟಗಿ
ಬಿತ್ತಿ ಕಟಗಿ
ಭಾವನವರ ಬಸವನೋಡ
ಕೈ ಕೈ ಜೊಟಗ್ಯೆ
ಪಂಚಮ ಪಗಡಮ
ತಾಳಮ್ಮ ಗೆಜ್ಜೆಯ
ತಡಲ ತುಡಲ
ಸವತಿ ಮಿಡಲ

26

ಅಂಚಿ ಮಿಂಚಿ
ಚಾವಳ ಚುಂಚಿ
ಢರಾ ಪೇಪರ್
ಡೈಯ ಡುಸ್ಕ

27

ಅವಲಕ್ಕಿ ಪಾವಲಕ್ಕಿ
ಕಾಂಚನಿ ಮಿನಿ ಮಿನಿ
ಢಾಂ ಢೂಂ ಡಸ್ ಪುಸ್
ಕುಯ್ ಕೊಟಾರ್

28

ಎಕ್ಕಲ ಖಾಜಾ
ದುಡ್ಡಿಗೆ ರಾಜಾ
ತಿರುಣಮ ಬೋಜಾ
ಚಾರಿಗೆ ಚಂಡು
ಪಾಂಚಿಗಿ ಪಂಡು

ಸೀಮಾ ಝುಂಡು
ಸಡಾಪ ಟೋಲಿ
ಅಟಾಪನಲ್ಲಿ
ನವ್ವನ ಟಲ್ಲಿ
ದಹಾರೆ ಬಿಲ್ಲಿ

29

ಆಟ ಗೂಟ ಜೈ
ಭಾರತ ಮಾತಾಕಿ ಜೈ
ಆಟ ಸಾಕು ಊಟ ಬೇಕು

30

ಒಕ್ಕಟೆ ರಂಡು ಮುತ್ತಿನ
ಮೂರು ಮಾಸ್ತರಿ
ನಾಕು ನಲ್ಲಂಗ
ಐದು ಚಟಮಿಟಿ
ಆರು ಡಾಳೆಂಬುರ
ಏಳು ಕರೆತೇಳು
ಎಂಟು ಮಂಟಪ
ಹಾಗರ ಹಾಗರಾಯ
ಹತ್ತಿ ಕಾಳ್ಯಾ

31

ಥಾವ್ ಥಾವ್ ಮಟಕಿ
ಕುಂಬಾರ ಚಟಕಿ
ಕುಂಬಾರ್ ಹೋದ ಹೇಲಾಕ
.... ತಿನಲಾಕ

32

ಆಟ ಗೂಟ ಬೈನೆ ತೋಟ
ತೊಗರಿ ಹೊಲದಾಗೆ ಸಿಕ್ಕಿ ಬಿತ್ತು
ಕುಂಬಾರ ಹೋದ ಹೇಲಾಕ
.... ಅವರು ಹೋದ್ರು ನೆಕ್ಕಲಾಕ

33

ಯಾರ ಮ್ಯಾಲ ಆಟ
ಕುದುರೆಗೇನು ಗೂಟ

34

ಯಾವೂರ ನಂಟ
ಬಿಸಿಲಾಗೆ ಹೊಂಟ
ಕಾಲು ಸುಡುತವೆ ಚಟ ಚಟ
ಸಲಾಮು ಹೊಡಿತಾನೆ ಪಟ ಪಟಾ
ಕುಂಡೆಗೆ ಕಡಿತವೆ ಕಟ ಕಟ

35

ಕೆಟ್ ಕೆಟ್ ಆಣಿ ಕ್ಯಾರೋಳಾಣಿ
ಅಂಬಾಳಾಣಿ ಜೋಗುಳಾಣಿ
ಹಳ್ಳಕೋದ್ರು ಹಾವು ಕಚ್ಚಬೇಕು
ಮನಿಗೆ ಬಂದ್ರೆ ಚೇಳು ಕಚ್ಚಬೇಕು

36

ದೋಸೆಮ್ಮ ದೋಸೆ
ತುಪ್ಪನಾಗ ಮಾಡಿದ ದೋಸೆ
ಅಪ್ಪನಿಗೆ ಐದು ಅಮ್ಮನಿಗೆ ನಾಲ್ಕು
ಅಣ್ಣನಿಗೆ ಮೂರು ಅಕ್ಕನಿಗೆ ಎರಡು
ನನಗೆ ಒಂದು

37

ಎಂಟು ದಿನಕೆ ಸೋಮವಾರ
ತೆಂಗಿನಕಾಯಿ ಕರ್ಪೂರ
ಯಾಕ ಬಂದಿರಪ್ಪ ನೀವು
ಮುತ್ತಿನ ಭಜನಿ ಮಾಡಕ

38

ಹಸುವಿಗೆ ಬಾಲ ಒಂದ
ಬೆಕ್ಕಿಗೆ ಕಿವಿ ಎರಡು
ಶಿವನಿಗೆ ಕಣ್ಣು ಮೂರು
ಮಂಚಕ್ಕೆ ಕಾಲು ನಾಲ್ಕು
ಕೈಗೆ ಬೆರಳು ಐದು
ನೊಣಕ್ಕೆ ಕಾಲು ಆರು
ವಾರಕ್ಕೆ ದಿನಗಳು ಏಳು
ಬೆಕ್ಕಿಗೆ ಹುರಿಗಳು ಎಂಟು
ನವಗ್ರಹಗಳು ಸಂಖ್ಯೆ ಒಂಭತ್ತು
ರಾವಣನ ತಲೆ ಹತ್ತು

39

ನಾನು ನೆಹರು ಆಗುವೆನು
ನಾನು ಗಾಂಧಿ ಆಗುವೆನು
ಅರ್ಧದಲಿ ಜುಬ್ಬ ಹಾಕುವೆನು
ಕರದಲಿ ವಾಚು ಕಟ್ಟುವೆನು
ಊರೂರು ನಾನು ತಿರುಗುವೆನು
ಜೋರಾಗಿ ಭಾಷಣ ಮಾಡುವೆನು

40

ಬಂದ್ರು ಬಂದ್ರು ಯಾರು ಬಂದ್ರು
ನೆಹರು ಬಂದ್ರು
ಜವಲಾಲು ನೆಹರು
ಯಾವ ಜವಲಾಲು
ಮಕ್ಕಳ ಜವಾಲಾಲು
ಯಾವ ಮಕ್ಕಳು
ದೇಶದ ಮಕ್ಕಳು

41

ಬಂದ್ರು ಬಂದ್ರು ಯಾರು ಬಂದ್ರು
ಗಾಂಧೀ ಬಂದ್ರು
ಯಾವ ಗಾಂಧಿ
ಮಹಾತ್ಮ ಗಾಂಧಿ
ಯಾವ ಮಹಾತ್ಮ
ಮಕ್ಕಳ ಮಹಾತ್ಮ
ಯಾವ ಮಕ್ಕಳು
ದೇಶದ ಮಕ್ಕಳು
ಯಾವ ದೇಶ
ಭಾರತ ದೇಶ

42

ಚಿಗುರೆ ಮರಿಯೆ
ಓಡಿ ಓಡಿ ಬಾ
ಅತ್ತ ಇತ್ತ ನೋಡು
ಸುತ್ತ ಮುತ್ತ ನೋಡು
ಕತ್ತಲಾಯಿತು ಈಗ
ಮತ್ತೆ ಓಡಿ ಬಾ ಬಾ ಬಾ

43

ಚಿಗುರೆ ಮರಿಯೆ
ಮತ್ತೆ ಮತ್ತೆ ಓಡಿ ಬಾ
ಕುಣಿ ಕುಣಿದಾಡು
ನಲಿ ನಲಿದಾಡು
ಆನೆಯ ಹಿಂಡು
ನೋಡು ನೋಡು ದುಂಡು
ಬೇಟೆಗಾರ ಬಂದ
ಬಿಲ್ಲು ಬಾಣ ತಂದ

44

ಕೊಕ್ಕೋ ಕೋಳಿ
ಬೆಳಗಾಯಿತು ಏಳಿ
ಮ್ಯಾಂ ಮ್ಯಾಂ ಬೆಕ್ಕು
ಕದ್ದು ಹಾಲು ನೆಕ್ಕು
ಬುಸ್ ಬುಸ್ ಹಾವು
ಗೆಳೆಯರೆಲ್ಲ ನಾವು

45

ಆನೆ ಬಂತು ಆನೆ
ಯಾವೂರ ಆನೆ
ಮೈಸೂರ ಆನೆ

46

ನಾಯಿ ಬಂತು ನಾಯಿ
ಯಾವೂರ ನಾಯಿ
ಶಾಬಾದ ನಾಯಿ

47

ಬಾ ಬಾ ಬಸವಣ್ಣ
ಕಡಲೆ ಕಾಯಿ ತಿನ್ನೋಣ
ಮಾವನ ಮನೆಗೆ ಹೋಗೋಣ
ಮಾವಿನ ಕಾಯಿ ತಿನ್ನೋಣ
ಹಸಿರು ಹುಲ್ಲಲಿ ಕೂಡೋಣ
ಹೆಸರು ಬೇಳೆ ತಿನ್ನೋಣ

48

ಕೋಳಿ ಬಂದಾವ ಕೋಳೀ
ಕೋಳಿ ಬಂದಾವ ಕೋಳೀ
ಎಷ್ಟು ಅಂಡಿ ಇಟ್ಟಾವ
ಬುಟ್ಟಿ ತುಂಬಾ
ಏನ ಪಲ್ಯ ಮಾಡಿದಿ
ಅದೇ ಪಲ್ಯಾ
ನನಗೀಟು ಕುಡು
ನಮ್ಮತ್ತಿ ಬೈತಾಳ
ಕದ್ದು ಕುಡು
ಬಾ ಕೊಡುತೀನಿ
ನಮ್ಮತ್ತಿ ಪಲ್ಯ ಕುಡತಾಳ
ಬೆಕ್ಕು ತಿಂದಿತು
ಇದೇನು ಕುಡುವೆ ಕರಗಾಲಿ ಕರಗಾಲಿ

49

ಅಜಿಜಿ ಮಲ್ಲಿಗೆ
ಜಾಜಿಯ ಸಂಪಿಗೆ
ರಾಜ ತೇಜ
ಮಗುವೆ ತನ್ನ
ಗಾಜು ಗೊಂಬೆಗೆ

50

ಚಿಕ್ಕ ಗುಲಾಬಿ ಹೂವೆ
ಬಿಸಿಲಲಿ ಕುಳಿತು ಎದ್ದೇಳು
ಮೇಲಕೆ ಹಿಂದೆ ಮುಂದೆ ತಿರುಗು
ನಿನಗೆ ಯಾರು ಬೇಕು ಆರಿಸಿಕೊ

51

ಹೂವು ಹೂವು ಯಾವ ಹೂವು
ಮಲ್ಲಿಗೆ ಹೂವು
ಯಾವ ಮಲ್ಲಿಗೆ
ತೋಟದ ಮಲ್ಲಿಗೆ

52

ಅಲ್ಲಿ ಭಾವ ಬಂದು ಕುಂತಿತ್ತು
ನಾನು ನೀರಿಗೆ ಹೋಗಿದ್ದೆ
ನನಗೆ ನೋಡಿ ಅಳತಿತ್ತು
ಸೈಕಲ್ ನೋಡಿ ನಗತಿತ್ತು

ಯಾವ ತೋಟ
ಮಕ್ಕಳ ತೋಟ
ಯಾವ ಮಕ್ಕಳು
ಶಾಲೆಯ ಮಕ್ಕಳು
ಯಾವ ಶಾಲೆ
ಸಂತಪೂರ ಶಾಲೆ

53
ಆಡರೆ ಪಾಡರೆ
ಆಯಿ ಬಿಟ್ಯಾಗಿ ಹೇಲಾರೆ
ಮಮ್ಮನ ಕುಂಡಿ ಚಂಚಾಲೆ
ಗೋಡೆ ಚಿಡಿದು ಓಡಾರೆ

54
ಕಾಗೆ ಕಾಗೆ ಕವ್ವ
ಯಾರು ಬಂದರವ್ವ
ಮಾವ ಬಂದರವ್ವ
ಏನು ತಂದನವ್ವ
ಹಂಡೆಯಂತ ಕುಂಡಿ ಬಿಟ್ಟುಕೊಂಡು
ಬಂದನವ್ವ
ಮಾವನಿಗೆ ಏನು ಊಟ
ಬೀಸ ಕಲ್ಲು ಗೂಟ

55
ಚಂದುಳ್ಳಿ ಮಾಮ
ಚಕ್ಕುಲಿ ಮಾವ
ಮುತ್ತಿನ ಕುಡುಕೆ ಕೊಡು ಮಾಮ

56
ಮಾಮ ಮಾಮ ಮಾತಾಡೋ
ಮಾವಿನ ಗಿಡಕಾ ಜೋತಾಡೋ
ಮಾವಿನ ಟೊಂಗಿ ಮುರೀತು
ಮಾಮನ ಪ್ಯಾಂಟು ಹರೀತು

57
ಮಾಮ ಬಂದನವ
ಏನ ತಂದನವ
ರೇಡು ತಂದನವ
ಹ್ಯಾಂಗ ಚಾಲು ಮಾಡನವ
ಹೀಂಗ ಚಾಲು ಮಾಡನವ

58
ಭಾವ ಬಂದನು ಬಾಳ ದಿನಕ
ಕುದುರೆ ಕಟ್ಯಾನು ಕುಳುಬನಕ
ಶ್ಯಾವಗಿ ಹೊಡೆದಾನ ರೆಟಾಸಿ
ಲೆಂಡಕಿ ಇಟ್ಟನು ಜಪ್ಪೊಸಿ

59

ಮುತ್ಯ ಮುತ್ಯ ಮೂಗರಾಣಿ
ಮುತ್ಯಾನ ಕುಂಡ್ಯಾಗ ಆವರಾಣಿ
ಮುತ್ಯಾ ಹೋದ ಮಣ್ಣಾಗ
ಆವರಾಣಿ ಹೋಯ್ತು ಗ್ವಾಡ್ಯಾಗ

60

ಆಯಿ ಬಂದಾಳ
ಕಬ್ಬು ಕಾಯಿ ತಂದಾಳ
ಜಗಲಿ ಮ್ಯಾಲೆ ಇಟ್ಟಾಳ
ಜಾರಿಕೊಂಡು ಬಿದ್ದಾಳ

61

ಮೂರು ಇಲಿಗಳು
ಅಗೋ ಓಡುತ್ತಿದ್ದವು
ಅದರ ಬಾಲ ಕೊಯ್ದು ಬಿಟ್ಟರೆ
ಎಂಥ ಒಳ್ಳೆ ತಮಾಷ
ಗುಂಡು ಹೊಡೆಯೋ ಡುಂ

62

ಬೆಲ್ಲದ ಅಂಗಡಿ ಮಲ್ಲಪ್ಪ
ಕೆಜಿ ಬೆಲ್ಲ ತೂಗಪ್ಪ
ಚಿಲ್ಲರ ರೊಕ್ಕ ಇಲ್ಲಪ್ಪ
ಖಾತೆ ತೆಗೆದು ಬರೆಯಪ್ಪ

63

ನನ್ನ ಪಾಠಿ ಕರಿಯದು
ಅದರ ಕಟ್ಟು ಬಿಳಿಯದು
ಅಮ್ಮ ನನಗೆ ಪುಸ್ತಕ ಕೊಟ್ಟಳು
ನಾನು ಬಳಪ ತಂದೆನು
ಅ ಆ ಇ ಈ ಬರೆದನು
ಅಮ್ಮನಿಗೆ ತೋರಿಸಿದೆನು
ಅಮ್ಮ ಉಂಡೆ ಕೊಟ್ಟಳು
ಗಬ ಗಬ ತಿಂದೆನು
ತಕ ತಕ ಕುಣಿದೆನು

64

ತುತ್ತು ಮಾಡಿ ಉಣಸ
ಹೊಸ ಅಂಗಿ ತೊಡಿಸ
ಪಾಟಿ ಚೀಲ ಕೊಡಸ
ನನಗೆ ಶಾಲಿಗಿ ಕಳಸ

65

ಅಪ್ಪ ದುಡ್ಡು ಕೊಟ್ಟಾನು
ಒಂದು ಪೆನ್ಸಿಲ್ ತಂದೇನು
ಅ ಆ ಇ ಈ ಬರೆದೇನು
ಅಮ್ಮನ ಮುಂದೆ ಹಿಡಿದೇನು
ಅಮ್ಮ ಊಟಕ ಹಾಕೋಳು

66

ಅಕ್ಷರ ಕಲಿತು
ಲಕ್ಷವ ನೋಡು
ಇಲ್ದೆ ಹೋದರೆ
ಬಿಕ್ಷೆಯ ಪಾಡು

67

ಅತ್ತ ಇತ್ತ ತಿರುಗಿದೆವು
ಕಾಡಿನ ಬೇಟೆಗಾಗಿ
ತಿರುಗಿ ಗಿರುಗಿ ಸಾಕಾಯಿತು
ಈ ಹೊಟ್ಟೆಗಾಗಿ

68

ಅಮ್ಮಮ್ಮ ಅಬ್ಬಬ್ಬ ತಲೆನೋವು ಜಾಸ್ತಿ
ಡಾಕ್ಟರ್ ಹತ್ತಿರ ಹೋಗಿದ್ದೆ
ಗುಳಿಗೆ ನಾದ್ರು ತಗೊಂಡೆ
ತಲೆ ನೋವು ಬಿಟ್ಟೇ ಬಿಟ್ಟಿಲ್ಲ
ಅಮ್ಮಮ್ಮ ಅಬ್ಬಬ್ಬ ತಲೆನೋವು ಜಾಸ್ತಿ
ಅಮ್ಮನ ಹತ್ರ ಹೋಗಿದ್ದೆ
ಕಾಫಿ ನಾದ್ರು ಕುಡಿದಿದ್ದೆ
ತಲೆನೋವು ಬಿಟ್ಟೇ ಬಿಟ್ಟಿಲ್ಲಾ

69

ನಾನು ಟೀಚರ್ ನೀನು ಟೀಚರ್
ಪಾಠನೆ ಹೇಳಿಲ್ಲ
ಡೋಲು ಬಜಾನ ಡುಂಕ ಬಜಾನ
ನಾನು ಕಳ್ಳ ನೀನು ಕಳ್ಳ
ಕಳ್ಳತನ ಮಾಡಿಲ್ಲ
ಡೋಲು ಬಜಾನ ಡುಂಕ ಬಜಾನ
ನಾನು ಪೋಲೀಸ್ ನೀನು ಪೋಲೀಸ್
ಕಳ್ಳನ ಹಿಡಿದಿಲ್ಲ
ಡೋಲು ಬಜಾನ ಡುಂಕ ಬಜಾನ
ನಾನು ಸಾಧು ನೀನು ಸಾಧು
ಜುಟ್ಟನೆ ಕಟ್ಟಿಲ್ಲ
ಡೋಲು ಬಜಾನ ಡುಂಕ ಬಜಾನ

70

ಡುಂಕ ಬಜಾರ ಡೋಲು ಬಜಾರ
ನಾನು ಡಾಕ್ಟರ್ ನೀನು ಡಾಕ್ಟರ್
ನೀನು ಡಾಕ್ಟರ್ ಡಿಗ್ರಿ ಗೊತ್ತಿಲ್ಲ
ಡುಂಕ ಬಜಾರ ಡೋಲು ಬಜಾರ
ನಾನು ಹುಡುಗಿ ನೀನು ಹುಡುಗಿ ಹಲ್ಲಿಲ್ಲ
ನಾನು ಮುದುಕಿ ನೀನು ಮುದುಕಿ ಹಲ್ಲಿಲ್ಲವೆ
ನಾನು ಮಂಗ ನೀನು ಮಂಗ
ಬಾಲ ಇಲ್ಲ ಡಂಕ

71

ಗಣಪತಿ ರಾಯ
ಮುಗಿದೇವು ಕೈಯ
ಸಣ್ಣ ಸಣ್ಣ ಮಕ್ಕಳು
ನಿನ್ನ ಸೇವೆ ಮಾಡುವೆ
ಚೌತಿ ದಿವಸ ಬಂದಿದ್ದ
ಸೊಂಡಿ ಗಣಪ ಬಂದಿದ್ದ

72

ಒಂದು ದಿನ ಹುಚ್ಚನ ಹೆಂಡತಿ
ಲಾಡು ಮಾಡಿದ್ದು
ಯಾರು ನೋಡಬಾರದೆಂದು
ಡಬ್ಬಿಗೆ ಹಾಕಿದ್ಲು
ಅಲ್ಲಿಂದ ಬಂದ ಹುಚ್ಚ
ಡಬ್ಬಿ ನೋಡಿದ

ಉಂಡೆ ಕಡುಬ ತಂದಿದ್ದ
ಹೊಟ್ಟೆಗೆ ಹಾವು ಸುತ್ತಿದ್ದ
ಇಲಿಯ ಮೇಲೆ ಕುಂತಿದ್ದ
ಡುಬಕಂತ ಬಿದ್ದಿದ್ದ
ಚಂದ್ರ ನೋಡಿ ನಕ್ಕಿದ್ದ
ಅವನಿಗೆ ಶಾಪ ಕೊಟ್ಟಿದ್ದ
ಮಕ್ಕಳೆಲ್ಲ ಕೂಡಲಿ
ತಪ್ಪಿದರೆ ಒಪ್ಪಿಕೊಳ್ಳಯ್ಯ

ಚೆಂಡು ಚೆಂಡೆಂದು ಆಡ ತೊಡಗಿದ
ಒಂದು ದಿನ ಹುಚ್ಚನ ಹೆಂಡತಿ
ಕೋಡು ಬಳೆ ಮಾಡಿದ್ಲು
ಯಾರು ನೋಡಬಾರದೆಂದು
ಡಬ್ಬಿಗೆ ಹಾಕಿದ್ಲು
ಅಲ್ಲಿಂದ ಬಂದ ಹುಚ್ಚ
ಬಗ್ಗಿ ನೋಡಿದ
ಬಳೆ ಬಳೆ ಎಂದು ಆಡ ತೊಡಗಿದ
ಒಂದು ದಿನ ಹುಚ್ಚನ ಹೆಂಡತಿ
ಮಲಿಕೊಂಡಿದ್ಲು
ಯಾರು ನೋಡಬಾರದೆಂದು
ಸೆರಗು ಮುಚ್ಚಿದ್ಲು
ಅಲ್ಲಿಂದ ಬಂದ ಹುಚ್ಚ
ಬಗ್ಗಿ ನೋಡಿದ
ಸತ್ಲು ಸತ್ಲು ಎಂದು
ಬೆಂಕಿ ಹಚ್ಚತೊಡಗಿದ

73

ಕಳ್ಳಿಯ ಗಿಡದಾಗೆ ಬಂದರು
ಮೂಗರು ಕಳ್ಳರು
ಒಬ್ಬರಿಗೆ ಕಾಲಿಲ್ಲ
ಇಬ್ಬರು ಕುಂಟ ಇದ್ದಾರೆ
ಕುಂಟಿದ್ದ ಕಳ್ಳರು
ಕದ್ದರು ಮೂರ ಎಮ್ಮೆ
ಒಂದು ಗೊಡ್ಡಿ ಅದ
ಎರಡು ಈದೇ ಇಲ್ಲ
ಗೊಡ್ಡಿದ್ದ ಎಮ್ಮೆಗೆ
ಮಾರ್‍ಯಾರ ಮೂರು ರೂಪಾಯಿ
ಒಂದು ನಡೆತೆ ಇಲ್ಲ
ಎರಡು ಕೋಠಿ ಅವ
ಕೊಟ್ಟಿತ್ತು ದುಡ್ಡಿಗೆ
ಕೊಂಡ ಕೊಂಡರ ಮೂರ ಗಡಿಗೆ

74

ಹಟಮಾರಿ ನನಗಂಡ
ಸೆಟಕೊಂಡು ತಾ ಹೋದ
ಹೊಸಾ ಸೀರೀ ಉಟ್ಟಾಗ
ಕುಸಿಯಾಗಿ ನೆಗೆಯುತ್ತಿದ್ದ

75

ಭಾಗ್ಯದ ಗಂಡ
ಕರಿಲಕ ಬಂದ
ವಲ್ಲ ವಲ್ಲ ಅಂದ
ವಾಲಿ ತಂದ
ಸಹಿ ಸಹಿ ಅಂದ
ಸರಿಗ ತಂದ
ಬಾವಿ ದಂಡೆಯಲ್ಲಿಟ್ಟರ
ಕಾಗಿ ಎತಕೊಂಡು ಹೋಯಿತು.

ಒಂದು ಸುಟ್ಟೇ ಇಲ್ಲ
ಎರಡು ಹಸಿನೇ ಐತೆ
ಸುಟ್ಟಿಲ್ಲದ ಗಡಿಗ್ಯಾಗೆ
ಕುದಿಸ್ಯಾರ ಮೂರ ಕಡುಬು
ಒಂದು ಕುದ್ದೇ ಇಲ್ಲ
ಎರಡು ಹಸಿನಾ ಅವ
ಕುದ್ದಿಲ್ಲದ ಕಡುಬಿಗೆ
ಬಂದರು ಮೂಗರು ಬೀಗರು
ಒಬ್ಬನಿಗೆ ಹಲ್ಲೇ ಇಲ್ಲ
ಇಬ್ಬರು ಬಕ್ಕೆ ಅವರೆ
ಬಕ್ಕಲ್ಲದ ಬೀಗರಿಗೆ
ತಂದವ ಮೂರು ಒನಕೆ
ಒಬ್ಬ ಓಡೇ ಹೋದ
ಇಬ್ಬರು ಪತ್ತೇನ ಇಲ್ಲ

76

ಚೌಕಟ ಚೌರಿ
ಬಂಗಾರ ಚೌರಿ
ದುಸಮಾನ ಗಂಡ
ಕರಿಲಕ ಬಂದ
ವಲ ವಲ ಅಂದ
ವಾಲಿ ತಂದ
ಪಟ್ಟಳಿ ಸೀರಿ
ಉಟ್ಟರಿ ಅಂದ
ಹಾವಿನ ಕುಪ್ಪಸ
ತೊಟ್ಟು ಹರಿ ಅಂದ

77

ಪುಗಡಿ ಪುಗಡಿ ಪುಟಾಣಿ
ನೌಣಿ ರಾಣಿ ಬರಾಣಿ
ಚೌಕಟ ಬವರಿ
ಬಂಗಾರ ಚವರಿ
ದುಸಮಾನ ಗಂಡ ಕರಿಲಾಕ ಬಂದ
ವಲ್ ವಲ್ ಎಂದ ವಾಡಿ ತಂದ
ಪಟ್ಟಳಿ ಸೀರಿ ಕಟ್ಟಿಕ್ಕಂದ
ಮದುವೆ ಸೀರಿ ಮಡಿಮಾಡಂದ
ಹಿತ್ತಲಕ ಹೊಗರೆ ಹರಿ ಹೂವ ತರಕಿ
ದೊಡ್ಡ ತುಂಬ ಕಟ್ಟರೆ ಸಣ್ಣ ತುರಬ ಕಟ್ಟರೆ
ಸಣ್ಣ ಮಂಚ ಹಾಕರೆ ದೊಡ್ಡ ಮಂಚ ಹಾಕರೆ

78

ಅರಕಟ್ಟು ಮರಕಟ್ಟು
ಮರಕೆ ಮೂವತ್ತಾರು ಕಟ್ಟು
ಇದನ್ನು ಹೇಳಿದವರಿಗೆ
ಚಂದನದ ಹಿಟ್ಟು
ಹೇಳದೆ ಇದ್ದವರಿಗೆ
ಪಪ್ಪಾಸ ಪೆಟ್ಟು

79

ಹಸಿರಂಗಿ ಅಮುಲ್ದಾರ
ಗಿಣಿ ಮೂತಿ ಶೇಕದಾರ
ಯುಗಾದಿಗೆ ಬಂದು
ತಗಾದಿ ಮಾಡೊ ಜಮಿನ್ದಾರ

80

ಅಕ್ಕಣ್ಣನಿಗೆ ಆರು ಕಣ್ಣು
ಮುಕ್ಕಣ್ಣನಿಗೆ ಮೂರು ಕಣ್ಣು
ಲಿಂಗಣ್ಣನಿಗೆ ಒಂದೇ ಕಣ್ಣು

81

ಅಂಗಡಿ ಅಂಗಡಿ ಅರವತ್ತು ಅಂಗಡಿ
ಬಿಚ್ಚಿ ನೋಡಿದರೆ ಒಂದೇ ಅಂಗಡಿ

82
ಅಕಟಕ ಪಕಟಕ ಅವರನ್ ತಂದ್
ಮನೆಯವರು ಆನೆ ತಂದ
ಮುಳ್ಳಿನ ಮನೆಯವರನು ತಂದ

83
ಅಂಕ ಡೊಂಕ 'ಆ'
ಅದರ ತಮ್ಮ 'ಸಾ'
ನಾಲ್ಕು ಚೌಕದ 'ಜಿ'
ಕರಿಯದೊಂದು 'ಮೆ'

84
ಕರೀಟವಿದೆ ರಾಜನಲ್ಲ
ಗಡ್ಡವಿದೆ ಸಾಬಿಯಲ್ಲ

85
ಸಂತೆಯಲ್ಲಿಟ್ಟು ಮಾಡುವುದಲ್ಲ
ತಕ್ಕಡಿಯಲ್ಲಿಟ್ಟು ತೂಗುವುದಿಲ್ಲ
ಅದಿಲ್ಲದೆ ಹಬ್ಬ ಮಾಡುವುದಿಲ್ಲ

86
ಕುಂತರ ಮನಿ
ಕೂಗಿದರೆ ಹುಲಿ
ಹಾರಿದರೆ ಹನುಮ

87
ವ್ಯಾಪಾರ ವ್ಯಾಪರ ಯಾವಾಗ
ಎದುರು ಬದರು ಕುಂತಾಗ
ಅಳುವುದು ಯಾವಾಗ
ಅರ್ಧ ಒಳಕೆ ಹೋದಾಗ
ನಗುವುದು ಯಾವಾಗ
ಪೂರ್ತಿ ಒಳಕೆ ಹೋದಾಗ

88
ಬೆಳ್ಳನೆ ಪೋರಿ
ಕರ್‍ರನೆ ಕುಬಸ
ಒಗಿಲಕೆ ಬಂದಳು ಹಳ್ಳಕೆ
ನೀರಗೆ ನಿಂತು
ನೆರ ಮಾಡು ತಾಳೋ
ನಾನಿದ್ದೇನೆ ನಿನ್ನ ತಕ್ಕವ

89
ನನ್ನ ತಮ್ಮ ಅಂಬ್ರೇಶ್ವರ
ಅವನ ಗೆಳೆಯ ಪರಮೇಶ್ವರ
ಅಂಬ್ರೇಶ್ವರ ಪರಮೇಶ್ವರ ಕೂಡಿಕೊಂಡು
ಮಾಡಿದರೊಂದು ಈಶ್ವರ

90
ನನ್ನ ಅಣ್ಣ ರಾಮ
ಅವನ ಗೆಳೆಯ ಭೀಮ
ರಾಮ ಭೀಮ ಕೂಡಿಕೊಂಡು
ಮಾಡಿದರೊಂದು ಡ್ರಾಮ

91
ನಮ್ಮ ಮನೆಯ ಸೀತಾಪತಿ
ಆಚೆ ಮನೆಯ ಲಕ್ಷ್ಮೀಪತಿ
ಇಬ್ಬರು ಸೇರಿ ಮಾಡಿದರೊಂದು ಕಿತಾಪತಿ

92

ಯಮ್ಮ ಯಮ್ಮ ಗೆಣಸ
ಕುಳ್ಯಾಗೆ ಹಾಕಿ ಕುದಿಸ
ಸಕ್ಕರೆ ತುಪ್ಪ ತರಿಸ
ತುತ್ತ ಮಾಡಿ ಉಣಿಸ
ಹಾಸಿ ಹಚ್ಚಿ ಮಲಗಿಸ

93

ಬುಸ್ ಬುಸ್ ನಾಗಪ್ಪ
ನಿನಗೇನು ಬೇಕಪ್ಪ
ಹಾಲು ಕೊಟ್ಟರೆ ಕುಡಿತೇನಪ್ಪ
ಹೊಡಿಯಕ್ಕ ಬಂದರೆ ಕಚ್ಚುತೇನಪ್ಪ

94

ಚವಳಿ ಚೊಂಡಿ
ನತ್ತಿ ಮ್ಯಾಲ ಬಂಡಿ
ನುಚ್ಚ ನೀಡೆ ಹುಚ್ಚರಂಡಿ

95

ಘಾ(ಗಾ)ಳಿ ಬಿಟ್ಟಿತು ಥಂಡಿ
ಗಡ ಗಡ ನಡುಗಿತು ಕುಂಡಿ
ಬೆಂಕಿ ತಾರೆ ರಂಡಿ
ಹಚ್ಚಿ ಕಾಸುವೆ ಕುಂಡಿ

96

ಹೋಳಿರೇ ಹೋಳಿ
ಸರ್ಕಾರ ಹೋಳಿ
ಸರ್ಕಾರ ಕುಂಡ್ಯಾಗ
ಏಳು ಏಂಟು ಕೋಳಿ

97

ಕಟಗಿ ಕಾಲಿನವ
ಇಣಚಿ ಮೂಗಿನವ
ಸಂಧ್ಯಾಗ ಹಾಕತ್ತಾನ ಸವಾಲು
ಗಡ್ಡ ಹಿಡಿದು ಎಳಕೊಂಡು ಬರ್‍ರಿ
ನಾಕ ಮಂದ್ಯಾಗ

98

ಆ ಊರ ಪಟೇಲ ಗೋಲಾರೆ ಗೋಲಾ
ಈ ಊರ ಪಟೇಲ ಗೋಲಾರೆ ಗೋಲಾ
ಹೆಗಲಿಗೆ ಹಾಕ್ಯಾನೊ ಪುಟಾಣಿ ಚೀಲಾ
ಬರ ಬರಚಿ ತಿಂತಾನೋ ಹೊಲ
ಮಾಡೋರ ಹೇಲಾ

99

ನಂಬಲ್ಲಿ ಹಿಂಬಲ್ಲಿ ಒಂದೇ ರೂಪಾಯಿ
ತಬಲಕ ತರಿ ಗಂಗಳ ತರಿ
ಶಿವ್ ಶಿವ್ ಗದಗಿ ರಾಯರ ರೂಪ
ಹೆಣ್ ಕೊಡು ಆತಗಿ ಹೆಣ್ಣು ಕುಡು

100

ಮುಗಿಲ ಮ್ಯಾಲೆ ಚುಕ್ಕಿ
ಯಾರ ಪಕೀರ ಪಕ್ಕ
ಮೊಗಲು ಮ್ಯಾಲೆ ಹಾಕತಾಳೋ
ಯಾರ ಪಕೀರನ ಮಕ್ಕಳೋ

101

ಅತ್ತಿಂದ ಹೊಂಟಾವ ನೂರಹದ್ದು
ಇತ್ತಿಂದ ಹೊರಟಾವೆ ನೂರಹದ್ದು
ಪಕ್ಕ ಕಡಿದು ಪಕ್ಕಗೆ ಬಿತ್ತು
ಗಿಡ ಕಡಿದು ಹೊಳೆಗೆ ಬಿತ್ತು

102

ಅತ್ತ ಬಿದ್ರು ಇತ್ತ ಬಿದ್ರು
ಭಾವನ ಕುಂಡ್ಯಾಗ ಸಿಕ್ಕ ಬಿದ್ರು
ಭಾನ ಕುಂಡ್ಯಾಗ ಸಿಕ್ಕಿ ಬಿದ್ರು

103

ಲಕ್ಷ್ಮಣ್ ಲಕ್ಷ್ಮಣ್ ಏನೆನ್ನ ಬೇಕು
ಲಕ್ಕೀ ಗಿಡದಲ್ಲಿ ಜೇನಿರಬೇಕು
ಜೇನಿಗೆ ಹೊಡೆದವನೆ ಜಾಣಿರಬೇಕು
ಜಾಣನ ಮೈದಾಗ ಅಂಗಿರಬೇಕು
ಅಂಗ್ಯಾಗೊಂದು ದುಡ್ಡಿರಬೇಕು
ಚೊಂಗ್ಯಾಗೊಂದು ದುಡ್ಡಿರಬೇಕು
ದುಡ್ಡಿನ ಸೂಳಿ ಬಿದ್ದಿರಬೇಕು

104

ಅಚ್ಚು ಅಚ್ಚು ಬೆಲ್ಲದ ಅಚ್ಚು
ಅಲ್ಲಿ ನೋಡು
ಇಲ್ಲಿ ನೋಡು
ಪಂಚರಂಗಿ ಮರದೇ ಗುಂಪು ನೋಡು
ಯಾವ ಗುಂಪು
ಕಾಗೆ ಗುಂಪು
ಯಾವ ಕಾಗೆ
ಕಪ್ಪ ಕಾಗೆ
ಯಾವ ಕಪ್ಪು
ಇದ್ದಿಲು ಕಪ್ಪು
ಯಾವ ಇದ್ದಿಲು
ಸುಡಗಾಡು
ಯಾವ ಸುಡು
ರೊಟ್ಟಿ ಸುಡು
ಯಾವ ರೊಟ್ಟಿ
ತಿನ್ನೋ ರೊಟ್ಟಿ
ಯಾವ ತಿನ್ನೋ
ಏಟು ತಿನ್ನೊ

105

ಅಮ್ಮ ಮಾಡೇಳು ಉಪ್ಪಿಟ್ಟು
ರಾಜು ಬೇಡಾನು ಹಳ್ಳಿಟ್ಟು
ಅಮ್ಮ ಕೊಟ್ಟಾಳು ಉಪ್ಪಿಟ್ಟು
ರಾಜು ಹೋಗವನೆ ಮನೆ ಬಿಟ್ಟು

106

ಎರಡು ಜಡೆ ಹಾಕುವೆ
ಜರದ ರಿಬ್ಬನ್ ಕಟ್ಟುವೆ
ಮೋಟಾರಿನಲ್ಲಿ ಹೋಗುವೆ
ಕಪ್ಪಿಲಿಂದ ಉಪ್ಪಿ ತಿಂದು
ಲೆಪ್ಪ ರೈಟ್ ಲೆಪ್ಪ ರೈಟ್

107

ವಾಟ್ ಸಾರ್
ಹುಳಿ ಸಾರ್
ವಾಟ್ ಹುಳಿ
ನಿಂಬೆ ಹುಳಿ
ವಾಟ್ ನಿಂಬೆ

108

ಬಂತು ಬಂತು ವಿಮಾನ
ಯಾರು ಇದರ ಸಮಾನ
ಬಾನ ಬಳ್ಳಿಯಾನ

ಮಾಡಿತು ಭರ ಭರ ಗಾನ

109
ಬಸ್ ಬಂತು ಬಸ್
ಗೌರ್ನಮೆಂಟ್ ಬಸ್
ಕೆಂಪು ಬಿಳಿಯ ಬಣ್ಣ
ನೋಡು ಬಾರಣ್ಣ
ನಾನು ಡ್ರೈವರ್ ಆಗುವೆ
ರೈಟ್ ಗಾಡಿ ರೈಟ್

ನಾನು ಕಂಡೆಕ್ಟರ್ ಆಗುವೆ
ರೈಟ್ ಎಂದು ಹೇಳುವೆ
ಬಸ್ಸ್ ಬಂತು ಬಸ್ಸ್
ಗೌರ್ನಮೆಂಟ್ ಬಸ್ಸ್

ಗಜ ನಿಂಬೆ
ವಾಟ್ ಗಜ
ಆನೆ ಗಜ
ವಾಟ್ ಆನೆ
ಕಾಡಾನೆ
ವಾಟ್ ಕಾಡು
ಸುಡುಗಾಡು
ವಾಟ್ ಸುಡು
ರೊಟ್ಟಿ ಸುಡು
ವಾಟ್ ರೊಟ್ಟಿ
ತಿನ್ನೊ ರೊಟ್ಟಿ
ವಾಟ್ ತಿನ್ನೊ
ಏಟು ತಿನ್ನೊ

110
ಮಾಳಿಗೆ ಮ್ಯಾಲೆ ಹಪ್ಪಳ
ಗಂಡ ಹೆಂಡತಿ ಸಪ್ಪಳ
ಅಂಗಡ್ಯಾಗ ಕಾಚ
ಗಂಡ ಹೆಂಡತಿ ನಾಚ

111
ಭಾಂವಿ ಮ್ಯಾಲ ಸಾಬೂನ
ಗಂಡ ಹೆಂಡತಿ ಸೋಬಾನ
ಹಾಸ್ಗಲ್ ಹಂಪಗಲ್
ಸಾವಿರ ಮಂದಿ ಎತ್ತಗಲ್

112
ಇಷ್ಟಿಷ್ಟು ಸಾರ
ಕುಂಡೆಗೆ ದಾರ
ಇಷ್ಟಿಷ್ಟು ಸಾರ
ಮೈತುಂಬ ಗೆಜ್ಜೆ

113
ಟಂ ಟಂ ಗಾಡಿ
ತಂದೆನು ಹೂಡಿ
ಎತ್ತುಗಳು ಇಲ್ಲ
ಕುದುರೆಗಳು ಇಲ್ಲ
ನಾನೇ ಎಲ್ಲಾ

114
ಬಾ ಬಾರೆ ಕಂದ
ಬಾರೆ ಸುನಂದ

ಸುರು ಮುರು ತಂದು
ಕುರು ಕುರು ತಿಂದು
ಚಿಕ್ಕು ಬುಕ್ಕು ರೈಲು ಗಾಡಿ
ಕುರಿಮರಿ ಆಟ ಆಡೋಣ
ಅಗೋ ಬಂದ ನಮ್ಮಣ್ಣ
ಮಕ್ಕಳ ಕೂಟ ಹಿಡಿಯೋಣ

ಕೆಲವು ಪ್ರಮುಖ ಪ್ರಾಸಗಳ ವಿವರಣೆ

ಪ್ರಾಸ 31.32:– ಆಟ ಆಡುವಾಗ ಈ ಪ್ರಾಸವನ್ನು ಬಳಸುತ್ತಾರೆ. ಆಟ ಆಡುವಾಗ ಮಧ್ಯದಲ್ಲಿ ಬಿಟ್ಟು ಹೋದರೆ ಅಥವಾ ಪಂಥ ಕಟ್ಟಿ ಸೋತಾಗ ದಂಡವನ್ನು (ಓಡುವುದು, ಒಂಟಿ ಕಾಲಿನಲ್ಲಿ ಕುಂಟುವುದು, ಬಳಪ, ಗೋಲಿ ಕೊಡುವುದು, ಕಿವಿ ಹಿಡಿದುಕೊಂಡು ಕುಳಿತು ಹೇಳುವುದು ಇತ್ಯಾದಿ) ಕೊಡದಿದ್ದರೆ ಅವರನ್ನು ಕುರಿತು ಕೆಟ್ಟದಾಗಿ ಪ್ರಾಸಗಳನ್ನು ಹಾಡುತ್ತಾ ಕೊನೆಯಲ್ಲಿ ...... ಬಿಟ್ಟ ಜಾಗದಲ್ಲಿ ಯಾರನ್ನು ಕುರಿತು ಹೇಳಬೇಕೋ, ಅವರ ಹೆಸರನ್ನು ಸೇರಿಸಿ ಹೇಳುತ್ತಾರೆ. ಸ್ನೇಹಿತರ ಮುಂದೆ ಹೀಗೆ ಅನ್ನಿಸಿಕೊಳ್ಳುವುದರಿಂದ ಅವಹೇಳನಕ್ಕೆ ಗುರಿಯಾಗ ಬೇಕಾಗುತ್ತದೆಂಬ ಉದ್ದೇಶದಿಂದ ಸೋತವನು ದಂಡಕೊಡುತ್ತಾನೆ. ಯಾವುದೇ ಕೆಲಸವಿದ್ದರೂ, ಆಟದ ಮಧ್ಯೆ ಬಿಟ್ಟು ಹೋಗದೆ ಪೂರ್ಣಗೊಳಿಸಿ ಹೋಗುತ್ತಾನೆ. ಇದು ಒಂದು ರೀತಿಯಲ್ಲಿ ಕಾನೂನು ಇದ್ದಂತೆ.

ಪ್ರಾಸ 21:– ಆಟ ಆಡಬೇಕಾದರೆ ಮೊದಲು ಎರಡು ಗುಂಪುಗಳನ್ನು ಮಾಡಿಕೊಳ್ಳಬೇಕು. ಅದಕ್ಕಾಗಿ ಮೊದಲು ಆಟವಾಡಲು ಆಸಕ್ತಿ ಇರುವವರನ್ನೆಲ್ಲಾ ಒಂದು ಕಡೆ ಸಾಲಾಗಿ ನಿಲ್ಲಿಸಿ ತಂದಾಣಿ ಪಿಲ್ಲಾ ಒಂದು, ತಂದಾಣಿ ಪಿಲ್ಲಾ ಎರಡು, ಹಾಗೆ ಸಂಖ್ಯೆಗಳನ್ನು ಹೇಳುತ್ತಾರೆ. ಸಾಲಾಗಿ ನಿಂತವರು ಕ್ರಮವಾಗಿ ಒಬ್ಬರು ಒಂದು ಗುಂಪಿನ ಕಡೆ ಹೋದರೆ, ಮತ್ತೊಬ್ಬರು ಇನ್ನೊಂದು ಗುಂಪಿನ ಕಡೆಗೆ ಹೋಗಬೇಕು. ಹಾಗೆ ಸಾಲಿನಲ್ಲಿ ಎಷ್ಟು ಜನರಿರುವರೋ, ಅವರನ್ನೆಲ್ಲಾ ಈ ಮೇಲಿನ ಕ್ರಮದಿಂದ ಗುಂಪುಗಳಾಗಿ ವಿಂಗಡಿಸುತ್ತಾರೆ.

ಪ್ರಾಸ 20:– ಇಬ್ಬರು ಭಾಗವಹಿಸುವ ಕಲ್ಲಿನಾಟದಲ್ಲಿ ಮೂರು ಸಣ್ಣ ಕಲ್ಲುಗಳನ್ನು ತೆಗೆದುಕೊಳ್ಳುತ್ತಾರೆ. ಒಬ್ಬರು ಮೂರು ಕಲ್ಲುಗಳನ್ನು ಬಲಗೈಲಿ ಹಿಡಿದುಕೊಂಡು ಒಂದು ಕಲ್ಲನ್ನು ಮೇಲಕ್ಕೆ ಎಸೆಯುತ್ತಾ ಕೈಯನ್ನು ನೆಲಕ್ಕೆ ಬಡಿದು ಮತ್ತೆ ಆ ಕಲ್ಲನ್ನು ಆತುಕೊಳ್ಳುತ್ತಾರೆ. ಒಂದು ವೇಳೆ ಮೇಲಕ್ಕೆ ಎಸೆದ ಕಲ್ಲನ್ನು ಆತುಕೊಳ್ಳದಿದ್ದರೆ ಅವರು ಆಟದಲ್ಲಿ ಸೋತಂತೆ. ಒಂದೊಂದು ಕಲ್ಲನ್ನು ಹೇಳುತ್ತಾ ಆಟವನ್ನು ಮುಂದುವರಿಸುತ್ತಾರೆ.

ಪ್ರಾಸ 22:– ಸಾಮಾನ್ಯವಾಗಿ ಆಟ ಆಡುವ ಮುನ್ನ ಎರಡು ಗುಂಪು ಮಾಡಿಕೊಳ್ಳುತ್ತಾರೆ. ಯಾರು ಯಾವ ಕಡೆ ಹೋಗಬೇಕೆಂದು ತೀರ್ಮಾನಿಸಲು ಮೇಲಿನ ಪ್ರಾಸವನ್ನು ಹೇಳುತ್ತಾ ಗುಂಪಿನ

ಸದಸ್ಯರನ್ನು ಆಯ್ಕೆ ಮಾಡಲು ಒಂದು ತಂತ್ರವನ್ನು ಬಳಸುತ್ತಾರೆ. ಎಲ್ಲರನ್ನು ವೃತ್ತಾಕಾರವಾಗಿ ನಿಲ್ಲಿಸಿ ಅಥವಾ ಕೂರಿಸಿ, ಒಬ್ಬೊಬ್ಬರಿಗೆ ಒಂದೊಂದು ಹೆಸರನ್ನು ಉದಾ: ಅಚಿಕ ಎಂದು ಒಬ್ಬರಿಗೆ ಹೇಳಿದರೆ ಮತ್ತೊಬ್ಬರಿಗೆ ಮಾಚಕ ಇನ್ನೊಬ್ಬರಿಗೆ ಗಿಲಿಗಿಲಿ ಗೀಚಕ್, ಹೀಗೆ ಹೇಳುತ್ತಾರೆ. ಕೊನೆಗೆ ಯಾರಿಗೆ 'ಟೇಬಲ್ ಬಸ್' ಅಥವಾ ಚೂರಿ ಚಿಲಕ್ ಬರುತ್ತದೆಯೋ ಅವರು ಗೆದ್ದಂತೆ. ಅವರನ್ನು ಒಂದು ಕಡೆಗೆ ಕಳುಹಿಸಿ (ನಿಲ್ಲಿಸಿ) ಮತ್ತೆ ಪ್ರಾರಂಭಿಸುತ್ತಾರೆ. ಹೀಗೆ ಒಂದು ಗುಂಪಿಗೆ ಎಷ್ಟು ಸದಸ್ಯರು ಬೇಕೋ ಅಲ್ಲಿಯವರಿಗೂ ಈ ಕ್ರಮವನ್ನು ಅನುಸರಿಸುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಪ್ರಚಲಿತವಿರುವ 'ಸರಾಫ್' ಲಕ್ಷಣವನ್ನು ಹೋಲುತ್ತದೆ.

ಪ್ರಾಸ 35:– ತಮಗಿಷ್ಟವಾದ, ಅಪರೂಪವಾದ, ವಸ್ತುವನ್ನು ಯಾರೂ ತೆಗೆದುಕೊಂಡು ಹೋಗಬಾರದೆಂದು ತಮ್ಮ ಮಿತ್ರರ ಮುಂದೆ ಆಣೆ ಇಡುತ್ತಾರೆ. ಯಾರಾದರೂ ಕದ್ದುಕೊಂಡು ಹೋದರೆ ತೊಂದರೆಯಾಗಲಿ ಎಂಬ ಉದ್ದೇಶದಿಂದ ಹೇಳುತ್ತಾರೆ. ಹೀಗೆ ಹೇಳಿದರೆ ತಮಗೆ ತೊಂದರೆಯಾಗುವುದೆಂಬ ಭಯ ಹಾಗೂ ನಂಬಿಕೆಯಿಂದ, ವಸ್ತುವನ್ನು ಮುಟ್ಟುವ ಗೋಜಿಗೆ ಹೋಗುವುದಿಲ್ಲ. ಈ ಪ್ರಾಸ ಕಳ್ಳತನವನ್ನು ನಿಯಂತ್ರಿಸುವ ಸಾಮಾಜಿಕ ಕಾನೂನು ಇದ್ದಂತೆ.

ಪ್ರಾಸ 28:– ಗೋಲಿ ಆಟವಾಡುವಾಗ, ಈ ಪ್ರಾಸವನ್ನು ಹೇಳುತ್ತಾ ಆಟವನ್ನು ಮುಂದುವರಿಸುತ್ತಾರೆ.

ಪ್ರಾಸ 30:– ಹೆಣ್ಣು ಮಕ್ಕಳು ಹಳ್ಳದ ಆಟವಾಡುವಾಗ ಹೇಳುವ ಪ್ರಾಸ, ಪ್ರಾಸ 20ರ ವಿವರಣೆ ನೋಡಿ.

ಪ್ರಾಸ 78:– ಒಗಟನ್ನು ಒಡ್ಡುವಾಗ ಹೇಳುವ ಪ್ರಾಸ.

ಒಗಟಿಗೆ ಉತ್ತರ

ಪ್ರಾಸ 79–ಮಾವಿನ ಕಾಯಿ

ಪ್ರಾಸ 80–ಕೊಳಲು, ತೆಂಗಿನ ಚಿಪ್ಪು

ಪ್ರಾಸ 81–ಪುಸ್ತಕ

ಪ್ರಾಸ 82–ಚಕ್ಕಲಿ

ಪ್ರಾಸ 83–ಅಡಕೆ, ಸಾಸುವೆ, ಬೆಲ್ಲ, ಮೆಣಸು

ಪ್ರಾಸ 84–ಕೋಳಿ ಹುಂಜ
ಪ್ರಾಸ 85–ಸಗಣಿ
ಪ್ರಾಸ 86–ಕಪ್ಪೆ

ಶಿಶುಪ್ರಾಸಗಳ ಅರ್ಥಕೋಶ

ಅಠಪ–ಎಂಟು

ಅಂಗ್ಯಾಗೊಂದು–ಅಂಗಿಯಲ್ಲಿ ಒಂದು

ಅಂಡಿ–ಮೊಟ್ಟೆ

ಆಯಿ–ಅಜ್ಜಿ

ಆಡರೆ ಪಾಡರೆ–ಹೇಗೆ ಹಾಡಲಿ

ಆತಗಿ–ಅವನಿಗೆ, ಆತನಿಗೆ

ಉಣಿಸ–ಊಟ ಮಾಡಿಸು

ಊಟಕ–ಊಟಕ್ಕೆ

ಎಕ್ಕಲ–ಒಂದು

ಐತೆ–ಇದೆ

ಕರ್‍ರನೆ–ಕರಿಯದು,ಕಪ್ಪನೆಯ

ಕರಗಾಲಿ–ಕೆಟ್ಟ ಕಾಲಿನವಳು

ಕಟಗಿ–ಸಣ್ಣ ಕಡ್ಡಿಯಂತ

ಕರಾಳಾಣೆ–ಕೆಟ್ಟ ಆಣೆ

ಕರಿಲಕ–ಕರೆಯುವುದು

ಕುಳಬನಕ–ಬೆರಣಿಗಳ ಗುಂಪು(ಗುಡ್ಡೆ)

ಕುದಿಸ–ಕುದಿಸು

ಕುಳ್ಳಾಗೆ–ಕುಡಿಕೆಗೆ

ಕುಂಟೆ–ಕುಂಟಿ, ಕಾಲಿಲ್ಲದವ, ಹೆಳವ

ಕುಡ್ಡ–ಕುರುಡ

ಕುಡುವೆ–ಕೊಡವೆ

ಕುಡುತಾಳ–ಕೊಡುತ್ತಾಳೆ

ಕುಡಿಕೆ–ಮಣ್ಣಿನ ಚಿಕ್ಕಪಾತ್ರೆ

ಕುಡು–ಕೊಡು

ಕಾಚ–(ಗಂಡಸರು) ಬಳಸುವ ಒಳ ಉಡುಪು

ಕೌದೆ–ಹೊದಿಕೆ, (ಹರಿದ ಬಟ್ಟೆಗಳನ್ನು ಸೇರಿಸಿ ಹೊಲಿದ ಹೊದಿಕೆ)

ಖೊಟ್ಟಿ–ಕೆಟ್ಟವನು

ಗೊಡ್ಡಿ–ಬರಡು

ಗಬ ಗಬ–ಸರಸರನೆ, ಒಂದೇ ಸಮನೆ

ಚಿಲ್ಲ–ಚಿಲ್ಲರೆ

ಚವರಿ–ಬೀಸಣಿಗೆ

ಚಂಚಾಲೆ–ಎಲೆ ಹಾಕುವ ಚೀಲ

ಚಿಡಿಡು–ಸಿಡಿದು

ಚಟಗಿ–ಮುರಿಯುವುದು

ಚೊಂಗ್ಯಾ–ಜೇಬು

ಚಾರಿಗೆ–ನಾಲ್ಕು

ಚಾಲು ಮಾಡು–ಪ್ರಾರಂಭಿಸು

ಆಪ್ಪೊಸಿ–ನಿಧಾನವಾಗಿ

ಜೋಗುಳಾಣಿ–ತೊಟ್ಟಿಲು ಆಣೆ

ತರಿಸ–ತರಿಸು

ತರ್ರಿ–ತನ್ನಿ, ತೆಗೆದುಕೊಂಡು ಬನ್ನಿ

ತುಕಡಾ–ತುಣಕು

ತುರಬ–ಕೂದಲು

ತಿರಣಮ–ಮೂರು

ಟೊಂಗಿ–ಕೊಂಬೆ, ರೆಂಬೆ

ದಾಣಿ–ಧಾನ್ಯ

ದುಸುಮಾನ–ವೈರಿ,ಶತ್ರು

ದಹಾರೆ–ಹತ್ತು

ದುಡ್ಡು–ಹಣ

ನುಚ್ಚು–ಒಂದು ಬಗೆಯ ಆಹಾರ

ನತ್ತಿಮ್ಯಾಲ–ತಲೆಮೇಲೆ

ನಂಬಲ್ಲಿ–ನಮ್ಮಲ್ಲಿ

ನಮ್ಮತ್ತಿ–ನಮ್ಮ ಅತ್ತೆ, ಗಂಡನ ತಾಯಿ

ನವ್ವ–ಒಬತ್ತು

ನನಗೀಟೆ–ನನಗಿಷ್ಟು, ನನಗೆ ಸ್ವಲ್ಪ

ನೌಣೆ–ಒಂದು ಜಾತಿಯ ಅಕ್ಕಿ(ಧಾನ್ಯ)

ಪಪ್ಪಾಸ–ಚಪ್ಪಲಿ

ಪಟ್ಟಳಿ–ರೇಷ್ಮೆ ಸೀರೆ

ಪಾಟಿ–ಸ್ಲೇಟು, ಮಕ್ಕಳು ಬರೆಯಲು ಬಳಸುವ ಕಪ್ಪು ಹಲಗೆ

ಪಾಂಚಿಗೆ–ಐದು

ಪೋರಿ–ಹುಡುಗಿ

ಬಕ್ಕೆ–ಹಲ್ಲಿಲ್ಲದ ಬಾಯಿ, ಬೊಚ್ಚು ಬಾಯಿ

ಬಜಾರ–ಅಂಗಡಿಗಳಿರುವ ಬೀದಿ

ಬೈನೆ ತೋಟ–ಬೇವಿನ ತೋಟ

ಮಮ್ಮನ–ಮಾವನ

ಮುತ್ಯ–ಅಜ್ಜ, ತಾತ

ಮೂಗರು–ಮೂವರು, ಮೂರು ಜನ

ಮೂಗರಾಣಿ–ಎತ್ತಿನ ಮೂಗಿಗೆ ಹಾಕಿ ಕಟ್ಟುವ ಒಂದು ಸಣ್ಣ ಹಗ್ಗ

ರೆಟಾಸಿ–ಜೋರಾಗಿ

ರೇಡು–ರೇಡಿಯೋ

ರೊಕ್ಕ–ಹಣ, ದುಡ್ಡು

ಲೆಂಡಕೆ–ಬಯಲು ಕಡೆ ಹೋಗುವುದು(ಬಹಿರ್ದೆಸೆ)

ವಲ್ಲ–ಇಲ್ಲ

ವಾಟ್–ಏನು?

ಸಹಿಸಹಿ–ಸರಿ ಸರಿ (ಒಪ್ಪು)

ಸಟಾಪ–ಏಳು

ಸೆಟಕೊಂಡು–ಸಿಟ್ಟು ಮಾಡಿಕೊಂಡು, ಮುಖ ಊದಿಸಿಕೊಂಡು

ಸೂಳಿ–ವೇಶ್ಯೆ

ಸರಿಗೆ–ಒಂದು ಆಭರಣ

ಸವಕಾಸಿ–ನಿಧಾನವಾಗಿ

ಹಚ್ಚಿ–ಹಾಸಿ

ಹಚ್ಕೊಂಡಿದ್ದೆ–ಹೊದ್ದು ಕೊಂಡಿದ್ದೆ

ಹಾಕೋಳು–ಹಾಕಿದಳು, ಊಟಕ್ಕೆ ಇಟ್ಟಳು

ಹ್ಯಾಂಗ–ಹೇಗೆ

ಹೀಂಗ–ಹೀಗೆ

ಹೊಲ್ಟಾವೆ–ಹೊರಟಾವೆ

ಅಧ್ಯಾಯ :- 8

ಭಾಷಾ ಚಮತ್ಕಾರಗಳು

8.1 ಪ್ರಸ್ತಾವನೆ

8.2 ಅಕ್ಷರ ಚಮತ್ಕಾರಗಳು

8.3 ಪದ ಚಮತ್ಕಾರಗಳು

8.4 ಉಕ್ತಿ ಚಮತ್ಕಾರಗಳು

8.5 ಒಗಟು ಚಮತ್ಕಾರಗಳು

8.6 ಒಗಟು ಕಥಾ ಚಮತ್ಕಾರಗಳು

8.7 ಸಂಭಾಷಣಾ ಒಗಟು ಚಮತ್ಕಾರಗಳು

8.8 ಗಣಿತಾತ್ಮಕ ಚಮತ್ಕಾರಗಳು

8.9 ಗಣಿತಾತ್ಮಕ ಒಗಟು ಚಮತ್ಕಾರಗಳು

8.10 ಚುಟುಕು ಲೆಕ್ಕ ಚಮತ್ಕಾರಗಳು

8.11 ಪತ್ರ ಚಮತ್ಕಾರಗಳು

8.12 ಪ್ರಶ್ನೆ ಚಮತ್ಕಾರಗಳು

8.13 ಪದ ಸಮಸ್ಯೆ ಚಮತ್ಕಾರಗಳು

8.14 ಒಂದೇ ಮಾತಿನ ಚಮತ್ಕಾರಗಳು

8.15 ಒಡಪು ಚಮತ್ಕಾರಗಳು

8.1 ಪ್ರಸ್ತಾವನೆ

ಸೃಷ್ಟಿಯ ನಿಗೂಢತೆಯಲ್ಲೇ. ಮಾನವನ ಸೃಷ್ಟಿಕ್ರಿಯೆಯೊಳಗೆ ಅರಳಿ, ಬೃಹತ್ತಾಗಿ ಬೆಳೆದ ಅತಿ ಮಹತ್ವದ ಸ್ಥಾನವಿದೆ. ಹಿಂದೆ ಭಾಷೆ ಎಂದರೆ ದೈವಸೃಷ್ಟಿ, ದೇವರ ವರ ಅಂತೆಲ್ಲಾ ಭಾವಿಸಿದ್ದರೂ ಸಹ, ಮನುಷ್ಯನ ಆಲೋಚನೆಗಳು. ಚಿಂತನೆ ವಿಚಾರಗಳು ಬೆಳೆದು ಬಂದಂತೆಲ್ಲಾ ಮುಂದೆ ವೈಜ್ಞಾನಿಕ ದೃಷ್ಟಿಕೋನ ತನ್ನ ಹರವನ್ನು ಚಾಚಿಕೊಂಡಂತೆಲ್ಲಾ ಭಾಷೆ ಮಾನವ ಸೃಷ್ಟಿ ಎನಿಸಿದ್ದು ಸತ್ಯ ಸಂಗತಿಯಲ್ಲವೆ?

ಭಾಷೆ ಮನುಷ್ಯನ ಅವಿಭಾಜ್ಯ ಅಂಗ. ಭಾಷೆಯಿಲ್ಲದೆ ವ್ಯಕ್ತಿಯಿಲ್ಲ. ವ್ಯಕ್ತಿಯಿಲ್ಲದೆ ಭಾಷೆಯ ಬೆಳವಣಿಗೆ ಸಾಧ್ಯವಿಲ್ಲ. ಮನುಷ್ಯನಿಗೆ ಭಾಷೆ ಇಲ್ಲದಿದ್ದಲ್ಲಿ ಎಂದೋ ಮೂಕ ಪ್ರಾಣಿಯಂತೆಯೇ ಬದುಕುತ್ತಿದ್ದ. ಭಾಷೆ ಮಾನವನ ಅಂತರಂಗವನ್ನು ಹೊಕ್ಕ ಕಾರಣ ಅವನ ಅಭಿಪ್ರಾಯ, ಅನಿಸಿಕೆ, ಹಾವಭಾವ, ಚಲನವಲನದ ಕ್ರಿಯೆಗಳೆಲ್ಲವೂ ಭಾಷಿಕವಾಗಿ ಬೆಳೆಯತೊಡಗಿದವು. ಮೊದಮೊದಲಿಗೆ ಸನ್ನೆ–ಸಂಕೇತಗಳ ಪ್ರಭಾವಕ್ಕೆ ಒಳಗಾಗಿ ಅವುಗಳನ್ನು ಬಳಸಿದ ಕಣ್ಣು ಮಿಟುಕಿಸುತ್ತ ತಲೆ ಅಲ್ಲಾಡಿಸುತ್ತ ಚಪ್ಪಾಳೆ ತಟ್ಟುತ್ತ. ಕೈ ಬೀಸುತ್ತ ಬೆರಳು ತೋರಿಸುತ್ತ, ಚಿಟಿಕೆ ಹಾಕುತ್ತ ಇತ್ಯಾದಿ ಚಟುವಟಿಕೆಗಳನ್ನು ರೂಢಿಸಿಕೊಳ್ಳುವಾಗ ತನ್ನಲ್ಲಿನ ವಿಚಾರಗಳನ್ನು ಮತ್ತೊಬ್ಬರೊಂದಿಗೆ ವಿನಿಮಯ ಮಾಡಿಕೊಳ್ಳಲು ತೊಡಗಿದ ಆದರೆ ಇವುಗಳ ಪ್ರಯತ್ನ ಭಾಷೆಯಷ್ಟು ಪರಿಣಾಮಕಾರಿ ಎನಿಸಲಿಲ್ಲ. ಕೆಲವನ್ನು ಮಾತ್ರ ಸನ್ನೆ–ಸಂಕೇತಗಳಿಗೆ ಉಳಿಸಿಕೊಂಡು, ಉಚ್ಚಾರಿತ ಧ್ವನಿಗಳ ಸಹಾಯದೊಂದಿಗೆ ಭಾಷೆಯ ಬಳಕೆಗೆ ತೊಡಗಿದಾಗ ಈ ಭಾಷೆಯ ಸೃಷ್ಟಿ, ಬೆಳವಣಿಗೆ, ಅಭಿವೃದ್ಧಿ ತಾನೇ ತಾನಾಗಿ ಹೊರಹೊಮ್ಮತೊಡಗಿತು. ಭಾಷೆ ಮಾನವ ಸೃಷ್ಟಿಯಲ್ಲಿ ಪ್ರಮುಖ ಪಾತ್ರವಾಗಿ ಬೆಳೆದು ಬಂತು.

ಅನೇಕ ಪಾಶ್ಚಾತ್ಯ ವಿದ್ವಾಂಸರು ಭಾಷೆಯೆಂದರೆ ಏನು ಎಂಬ ಬಗ್ಗೆ ನಾನಾ ರೀತಿಯಲ್ಲಿ ಅಭಿಪ್ರಾಯ ಪಡುತ್ತಾರೆ.

1. "ಧ್ವನಿ ಸಂಕೇತಗಳ ಮೂಲಕ ಮನುಷ್ಯ ತನ್ನ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಮಹತ್ ಸಾಧನವೇ ಭಾಷೆ" ಪ್ಲೇಟೊ.
2. "ಪದಗಳ ಮೂಲಕ ವಿಚಾರಗಳನ್ನು ಅಭಿವ್ಯಕ್ತಗೊಳಿಸುವುದು ಭಾಷೆ ಎನಿಸಿಕೊಳ್ಳುತ್ತದೆ" ಪ್ಲೇಟೊ
3. "ತಮ್ಮ ಭಾವನೆಗಳನ್ನು ಭಾವಾವೇಶಗಳನ್ನು ಬಯಕೆಗಳನ್ನು ಸ್ವಪ್ರೇರಿತ ಧ್ವನಿ ಸಂಕೇತಗಳಿಂದ ಮನುಷ್ಯ ಇನ್ನೊಬ್ಬರಿಗೆ ತಿಳಿಸುವ ಮಹತ್ ಸಾಧನವೇ ಭಾಷೆ" ಎಡ್ವರ್ಡ್ ಸಫೀರ್.
4. "ನಮ್ಮ ಅಂತರಾಳದ ಸ್ಥಿತಿಯನ್ನು ಅಥವಾ ನಮ್ಮ ಮನಸ್ಸಿನಲ್ಲಿರುವುದನ್ನು ಉಚ್ಚಾರಿತ ಧ್ವನಿಗಳ ಮೂಲಕ ಅಭಿವ್ಯಕ್ತಗೊಳಿಸುವ ಮಹತ್ ಸಾಧನವೇ ಭಾಷೆ" – ಮಾರ್ಟಿ.

ಒಟ್ಟಿನಲ್ಲಿ ಭಾಷೆ ಎನ್ನುವುದು ಅನಿಸಿಕೆ. ಅನುಭವಗಳ ಅಭಿವ್ಯಕ್ತಿಯ ಮಾಧ್ಯಮ ಎನ್ನಬಹುದು; ಅರ್ಥ, ಧ್ವನಿ, ಸಂಕೇತಗಳ ಪ್ರತಿಬಿಂಬ ಎಂದು ಕರೆಯಬಹುದು. ಇದು ಒಂದು ಸಮಾಜ ಆಡುವ

ಮಾತು; ಅವರ ಆಯಾ ಸಂದರ್ಭದ ಸಾಂದರ್ಭಿಕ ಸೃಷ್ಟಿ; ವ್ಯವಹಾರ, ವಿಚಾರ ವಿನಿಮಯಗಳಿಗಾಗಿ ಬಳಸಿಕೊಂಡ ಮಾಧ್ಯಮ ಮಾನವ ಸಮಾಜದಲ್ಲಿನ ಅನೇಕ ವರ್ಗ, ಜಾತಿ, ಧರ್ಮಗಳ ಜನರನ್ನು ಒಗ್ಗೂಡಿಸುವ ಪ್ರಯತ್ನವನ್ನು ಭಾಷೆ ಮಾಡುತ್ತದೆ. ಅಲ್ಲದೆ ಬೇರೆ ಬೇರೆ ದೇಶಗಳ ಆರ್ಥಿಕ, ವಾಣಿಜ್ಯ, ರಾಜಕೀಯ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮೊದಲಾದ ವಿಚಾರಗಳಲ್ಲಿ ಸಂಪರ್ಕ ಹೊಂದಲು ಭಾಷೆ ಅತ್ಯಗತ್ಯ, ಪ್ರಪಂಚದಲ್ಲಿ ಸಾವಿರಾರು ಭಾಷೆಗಳು ಆಯಾ ಪ್ರದೇಶದ ಜನರ ಸಾಂಸ್ಕೃತಿಕ, ಚಾರಿತ್ರಿಕ ದಾಖಲೆಗಳನ್ನು ವಿಭಿನ್ನ ರೀತಿಯಲ್ಲಿ ವೈಶಿಷ್ಟ್ಯಪೂರ್ಣವಾಗಿ ಉಳಿಸಿಕೊಳ್ಳುತ್ತಾ ಬಂದಿವೆ. ಇಲ್ಲಿನ ಭಾಷೆಯ ಪ್ರಯೋಗ, ಪ್ರಯತ್ನ, ಚಮತ್ಕಾರ ಚಾತುರ್ಯ ನಿಜಕ್ಕೂ ವಿಸ್ಮಯಕಾರಿಯಾದುದು ಶಿಷ್ಟ ಹಾಗೂ ಜಾನಪದಗಳೆರಡರಲ್ಲೂ ಭಾಷೆಯ ವೈವಿಧ್ಯವನ್ನು ಹಲವು ಬಗೆಗಳಲ್ಲಿ ಕಾಣಬಹುದು.

ಜಾನಪದ ಸಾಹಿತ್ಯಿಕ, ಕ್ರಿಯಾತ್ಮಕ. ವೈಜ್ಞಾನಿಕ ಹಾಗೂ ಭಾಷಿಕ ಈ ನಾಲ್ಕು ಬಗೆಗಳಲ್ಲಿ ಕಂಡು ಬರುವಂಥದು ಕತೆ, ಗೀತೆ, ಲಾವಣಿ ಇವು ಸಾಹಿತ್ಯಿಕದಲ್ಲೂ ನೃತ್ಯ. ಸಂಗೀತ, ಕಲೆ, ಆಟ ಇವು ಕ್ರಿಯಾತ್ಮಕದಲ್ಲೂ ಆಚಾರ, ವೈದ್ಯ, ನಂಬಿಕೆ ಇವು ವೈಜ್ಞಾನಿಕದಲ್ಲೂ; ಒಗಟು, ಒಡಪು, ಗಾದೆ, ಗಣಿತ, ಭಾಷಾ ಚಮತ್ಕಾರಗಳು ಭಾಷಿಕ ಬಗೆಯಲ್ಲೂ ಮೂಡಿಬಂದಿವೆ.

ಮಾತನಾಡುವ ಶಕ್ತಿ ಪಡೆದ ಮಾನವ ಅನೇಕ ಬಗೆಯ ವೈಶಿಷ್ಟ್ಯಗಳಿಗೆ ಕಾರಣೀಭೂತನಾಗಿದ್ದಾನೆ ಭಾವನೆಗಳ ಮಿಳಿತಕ್ಕೆ ಒಳಗಾದಂದಿನಿಂದ ಬೌದ್ಧಿಕ ಪ್ರತಿಭೆಯ ಹೊನಲನ್ನು ಹರಿಯಗೊಳಿಸಿದ್ದಾನೆ. ಬಾಯಿಂದ ಬಾಯಿಗೆ ಕಿವಿಯಿಂದ ಕಿವಿಗೆ ಪೀಳಿಗೆಯಿಂದ ಪೀಳಿಗೆಗೆ ಸಂಸ್ಕಾರಗೊಂಡು ನಿರಂತರವಾಗಿ ಹೊಸ ಹೊಸ ಅಭಿವ್ಯಕ್ತಿ ಮಾಧ್ಯಮದಲ್ಲಿ ಸೃಷ್ಟಿಗೊಂಡ ಈ ಬೌದ್ಧಿಕತೆಯ ಹೊನಲು ಜಾನಪದ ಸಾಹಿತ್ಯಕ್ಕೆ ಬೃಹತ್ ಕೊಡುಗೆಯನ್ನೇ ಧಾರೆಯೆರೆದಿದೆ. ಎಲ್ಲರ ಹೃದಯಕ್ಕೆ ಲಗ್ಗೆ ಹಾಕಿ ಜಗ್ಗನೆ ಮಿಂಚಿ ಕಣ್ ಸೆಳೆದಿದೆ.

ಬೀಸುವಾಗ, ಕುಟ್ಟುವಾಗ, ನಾಟಿಮಾಡುವಾಗ, ಕಳೆ ಕೀಳುವಾಗ, ಕೊಯಿಲು ಮಾಡುವಾಗ, ಒಕ್ಕಲು ಮಾಡಿಕೊಳ್ಳುವಾಗ, ಬೇಸರ ನೀಗಿಕೊಳ್ಳುವಾಗ, ವಿದ್ವತ್ತಿನ ಹೊನಲು ಹರಿಸಿಕೊಳ್ಳುವಾಗ, ಸಹಜವಾಗೇ, ಅಪ್ರಯತ್ನಪೂರ್ವಕವಾಗಿಯೇ ದಿನನಿತ್ಯದ ಬದುಕನ್ನು ಹಸನುಗೊಳಿಸಿಕೊಳ್ಳುವ ಒಂದು ಸೃಷ್ಟಿಕ್ರಿಯೆಯಾಗಿ ಈ ಪ್ರತಿಭಾ ಚಮತ್ಕಾರ ಹೊಮ್ಮಿ ಬಂದಿದೆ. ಅದರಲ್ಲೂ ಭಾಷೆಯ ಚಮತ್ಕಾರ ಜನಪದ ಸಾಹಿತ್ಯದ ಎಲ್ಲ ಕ್ಷೇತ್ರಗಳ ಪ್ರಕಾರಗಳಲ್ಲೂ ತನ್ನ ಹರಹನ್ನು ಚಾಚಿಕೊಂಡಿದೆ. ಕತೆ, ಗೀತೆ, ಲಾವಣಿ, ಗಾದೆ, ಒಗಟು, ಒಡಪು, ವೈದ್ಯ, ಗಣಿತ, ಮೊದಲಾದ ಪ್ರಕಾರಗಳಲ್ಲಿ ಮಾತಿನ ಚಮತ್ಕಾರ ಒಂದಲ್ಲ ಒಂದು ರೀತಿಯಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿದೆ. ಚಮತ್ಕಾರದ ಭಾಷೆ ಇಲ್ಲಿನ ಮಾತು–ಕೃತಿಗಳಲ್ಲಿ ನಾನಾ ರೀತಿಯಲ್ಲಿ ಹೊರಹೊಮ್ಮಿದೆ. ಭಾಷೆಯಲ್ಲಿನ ಪ್ರಧಾನ ಚಾತುರ್ಯ–ಅಕ್ಷರ, ಪದ, ಉತ್ತರಗಳ ಮೂಲಕ ಜನಪದರ ಜಾಣ್ಮೆಯನ್ನು ನಿರಂತರವಾಗಿ ಎತ್ತಿ ಹಿಡಿದಿರುವಂತಹುದು.

ಚಮತ್ಕಾರ ಎಂದರೆ ಚಾತುರ್ಯ, ಕೌಶಲ, ಬೌದ್ಧಿಕ ಪ್ರದರ್ಶನ ಎನ್ನಬಹುದು ಹಾಸ್ಯ, ವಿನೋದ ವಿಡಂಬನೆ, ಮನರಂಜನೆ ಇತ್ಯಾದಿಗಳಿಗೆ ಇಲ್ಲಿ ಹೆಚ್ಚು ಪ್ರಾಶಸ್ತ್ಯ ಭಾಷಾಚಮತ್ಕಾರ ಎಂದರೆ ಭಾಷೆಯೊಳಗಿನ ಚಾತುರ್ಯ, ಕೌಶಲ, ಬೌದ್ಧಿಕ ಕಸರತ್ತಿನ ಪ್ರಯೋಗವಾಗಿದೆ ಮಾತಿನ ಮೋಡಿಯಲ್ಲೇ

ಚಕಿತಗೊಳಸುವ ಮನರಂಜನಾತ್ಮಕ ಸೃಷ್ಟಿಯಾಗಿದೆ. ಭಾಷಾಚಮತ್ಕಾರಗಳು ಹೆಚ್ಚಾಗಿ ಜನಪದ ಕಥೆ, ಒಗಟು, ಗಾದೆ, ಗಣಿತ, ಈ ಮೊದಲಾದವುಗಳ ಮುಂದುವರಿದ ಭಾಗವಾಗಿವೆ. ಬದುಕಿನಲ್ಲಿ ಕಥೆಯಾಗಿ ಹರಿದದ್ದು, ಒಗಟಾಗಿ ರೂಪುಗೊಳ್ಳುತ್ತಾ. ಒಡಪಿನ ಹಾಸ್ಯವನ್ನು ಬೆರೆಸಿಕೊಂಡು, ಜೀವನಾನುಭವಗಳ ನಿಗುಡಾರ್ಥದ ಚಾಟಿಯೇಟಿನ ಗಾದೆಯಾಗಿ, ವ್ಯವಹಾರಿಕ ಲೋಕದ ಗಣಿತದ ವಿನೋದ, ಕೌಶಲ್ಯ, ಬೌದ್ಧಿಕತೆಯ ಚಾತುರ್ಯವಾಗಿ, ಈ ಭಾಷಾ ಚಮತ್ಕಾರಗಳು ಹೊರಹೊಮ್ಮಿದೆ. ಒಂದು ರೀತಿಯಲ್ಲಿ ಬುದ್ಧಿಕೌಶಲದ ಜಾಣಮಾತಿನ ಪ್ರತೀಕಗಳೆಂದೇ ಇವುಗಳನ್ನು ಕರೆಯಬಹುದು.

ಭಾಷಾ ಚಮತ್ಕಾರಗಳ ವಸ್ತು ಇಂಥದೇ ಎನ್ನಬೇಕಿಲ್ಲ. ಪೌರಾಣಿಕ, ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಸಾಹಿತ್ಯಿಕ ಮೊದಲಾದ ಕ್ಷೇತ್ರಗಳ ಹರಹನ್ನು ಇದು ಒಳಗೊಂಡಿದೆ. ಜನಪದರು ತಮ್ಮ ಜೀವನಾನುಭವದ ಘಟನೆಗಳೊಂದಿಗೆ ಈ ಎಲ್ಲ ವಿಷಯಗಳಿಂದ ವಸ್ತುಗಳನ್ನು ಆರಿಸಿಕೊಂಡು ಚಮತ್ಕಾರಿಕ ಪ್ರಯೋಗಗಳನ್ನು ನಿಗೂಡಾರ್ಥದ ಮೂಲಕ ನಿರಂತರವಾಗಿ ಉಳಿಸಿಕೊಂಡು ಬಂದಿದ್ದಾರೆ. ಪಂಚತಂತ್ರದ ಕತೆಗಳು, ತೆನಾಲಿರಾಮಕೃಷ್ಣ, ಅಕ್ಬರ್-ಬೀರಬಲ್ಲರ ಕತೆಗಳು ಭಾಷಾ ಚಮತ್ಕಾರಗಳ ಪ್ರಯೋಗಗಳಲ್ಲಿ ಪೌರಾಣಿಕ, ಮಹಾಭಾರತ, ಭಾಗವತಗಳ ವಸ್ತು ಕಾವ್ಯಾತ್ಮಕ ಚಮತ್ಕಾರಗಳಲ್ಲಿ ಅಕ್ಷರ, ಪದ, ಉಕ್ತಿಗಳ ಚಮತ್ಕಾರಿಕೆಯನ್ನು ಹಾಗೆಯೇ ಉಳಿಸಿಕೊಟ್ಟಿದೆ. ದನ ಕಾಯುವ ಹುಡುಗ-ಹುಡುಗಿಯರಲ್ಲಿ, ಹೊಲಮನೆಗಳಲ್ಲಿ ದುಡಿಯುವ ಹೆಂಗಸು ಗಂಡಸರಲ್ಲಿ ಹಳ್ಳಿಗರಲ್ಲೇ ವಿನೋದ ತುಂಬಿ ರಂಜಿಸುವ ಬೌದ್ಧಿಕ ವ್ಯಕ್ತಿಗಳಲ್ಲಿ ಈ ಭಾಷಾಚಮತ್ಕಾರಗಳ ಪ್ರಯೋಗ ಇಂದಿಗೂ ಚಮತ್ಕಾರಯುತವಾಗಿ ಉಳಿದು ಬಂದಿವೆ.

ಒಗಟು, ಒಡಪು, ಗಣಿತ, ಗಾದೆಗಳ ಹಾಗೆ ಇಲ್ಲಿನ ಭಾಷಾಪ್ರಯೋಗದ ಪ್ರತಿಯೊಂದು ಮಾತುಗಳಲ್ಲಿ ಜಾಣ್ಮೆ ಇದ್ದೇ ಇರುತ್ತದೆ. ಸವಾಲು ಹಾಕುವುದು, ಬಿಡಿಸಿಕೊಳ್ಳುವುದು, ಸಮಸ್ಯೆಗೆ ಮತ್ತೊಂದು ಸಮಸ್ಯೆಯನ್ನಿಟ್ಟು ಬೆಳೆಸುವುದು ಇಲ್ಲಿ ಸರ್ವೇ ಸಾಮಾನ್ಯ ಪ್ರತಿಯೊಬ್ಬ ವ್ಯಕ್ತಿಯ ಬುದ್ಧಿಯನ್ನು ಕೆರಳಿಸಿ, ಪ್ರಚೋದಿಸಿ, ಚೂಪುಗೊಳಿಸಿ, ವಾಕ್‌ಚಾತುರ್ಯದ ಜಾಣ್ಮೆಗೆ ಪುಟವಿಕ್ಕಿ ಪರೀಕ್ಷಿಸುವುದು ಇವುಗಳ ಮುಖ್ಯ ಉದ್ದೇಶವಾಗಿದೆ.

ಭಾಷಾಚಮತ್ಕಾರಗಳನ್ನು ಮೇಲ್ಕಂಡ ಹಿನ್ನೆಲೆಗೆ ಅನುಗುಣವಾಗಿ ಈ ಕೆಳಕಂಡಂತೆ ಹಲವು ಬಗೆಗಳಲ್ಲಿ ವಿಂಗಡಿಸಿಕೊಳ್ಳಬಹುದು. ಮುಖ್ಯವಾಗಿ 1. ಅಕ್ಷರ ಚಮತ್ಕಾರ 2. ಪದ ಚಮತ್ಕಾರ 3. ಉಕ್ತಿ ಚಮತ್ಕಾರಗಳೇ ಇಲ್ಲಿ ಪ್ರಧಾನ ಎಂಬುದನ್ನು ಮರೆಯಬಾರದು. ಇವುಗಳಲ್ಲಿ ಹೊರಹೊಮ್ಮುವ ಅರ್ಥ, ಧ್ವನಿ, ಸಂಕೇತಗಳನ್ನು ಆಯಾ ಸಂದರ್ಭಕ್ಕೆ ತಕ್ಕಂತೆ ಬಳಸುವ ಭಾಷೆಯ ಚಮತ್ಕಾರಗಳಲ್ಲಿ ಗುರುತಿಸಿಕೊಳ್ಳಬಹುದು. ಒಟ್ಟಿನಲ್ಲಿ ಭಾಷಾಚಮತ್ಕಾರಗಳು ಒಗಟು ಚಮತ್ಕಾರಗಳಲ್ಲಿ, ಒಗಟುಕಥಾ ಚಮತ್ಕಾರಗಳಲ್ಲಿ. ಸಂಭಾಷಣಾ ಒಗಟು ಚಮತ್ಕಾರಗಳಲ್ಲಿ, ಗಣಿತಾತ್ಮಕ ಒಗಟು ಚಮತ್ಕಾರಗಳಲ್ಲಿ ಚುಟುಕು ಲೆಕ್ಕ ಚಮತ್ಕಾರಗಳಲ್ಲಿ ಗಾದೆ ಚಮತ್ಕಾರಗಳಲ್ಲಿ ಹಾಗೆ ಇನ್ನೂ ಹಲವುಬಗೆಯ ಸಮಯ ಜಾಣ್ಮೆಯ ಚಮತ್ಕಾರದ ಮಾತುಗಳಲ್ಲಿ, ಒಂದಲ್ಲಾ ಒಂದು ಬಗೆಯಲ್ಲಿ ಕಾಣಬರುತ್ತವೆ. ನಮ್ಮ

ಪ್ರತಿಯೊಂದು ಮಾತು. ಕತೆ, ಹಾಡು, ಚಮತ್ಕಾರ ಪ್ರತಿಭೆಯ ಅಭಿವ್ಯಕ್ತಿಯಲ್ಲಿ ಈ ಭಾಷಾ ಚಮತ್ಕಾರಗಳ ಸೊಗಡು, ಸೊಡರು, ಸೊಗಸು ಅಡಗಿಕೊಂಡಿದೆ.

8.2 ಅಕ್ಷರ ಚಮತ್ಕಾರಗಳು

ಅಕ್ಷರ ಚಮತ್ಕಾರ ಎಂದಾಗ ಇಲ್ಲಿ ಅಕ್ಷರಗಳ ಬಳಕೆ ಚಾತುರ್ಯ, ಚಮತ್ಕಾರ, ವೈಶಿಷ್ಟ್ಯ ಇದ್ದೇ ಇರುತ್ತದೆ ಉದಾ: "ಒಬ್ಬ ಬುದ್ಧಿವಂತನಿಗೂ ಒಬ್ಬ ಹಳ್ಳಿಯವನಿಗೂ ಒಂದ್ ಸಾರಿ ವಾದ ಬಿತ್ತು. ಹಳ್ಳಿಯವನಿಗೂ ಕೇಳಿದ" ಕೈಮುಂದೆ ಏನೈತಿ" ಅಂತ. ಅವಗ ಅವನು. ಬುದ್ಧಿವಂತ ಹ್ಯಂಗೆ ಉತ್ರ ಕೊಟ್ಟ? ಕೈಮುಂದೆ ಏನೈತಿ?"

ನಮ್ಮ ಕೈಮುಂದೆ ಇರುವುದನ್ನು ಹೇಳಲಿಕ್ಕೆ ಹೊರಟರೆ ದಡ್ಡನೆನಿಸಿಕೊಳ್ಳುವುದು ತಡವೇನಲ್ಲ. ಯೋಚಿಸಬೇಕು. ಅದೂ ಕಾಗುಣಿತ ತಿಳಿದಿರಬೇಕು. ಬುದ್ಧಿವಂತ ಹೇಳಲಿಕ್ಕಾಗದೆ ಸೋತಾಗ ಹಳ್ಳಿಯವನೇ ಕೈ ಮುಂದೆ ಕೊ ಎಂದೇ ಉತ್ತರ ಕೊಡುತ್ತಾನೆ. ಕಾಗುಣಿತದ ಅಕ್ಷರ ಕ ಕಾ ಕಿ ಕೀ ಕು ಕೂ ಕೃ ಕೆ ಕೇ ಕೈ ಕೊ.

ಮತ್ತೆ ಅದೇ ಹಳ್ಳಿಯವ 'ಕೈ' ನಲ್ಲಿ ಐವತ್ತು ತೆಗೆದೆ ಇನ್ನೇನು ಉಳಿಯಿತು?" ಅಂತ ಕೇಳುತ್ತಾನೆ. ಆಗಲೂ ಕೊಡುವ ಉತ್ತರ ಜಾಣತನದ್ದಾಗಿರಬೇಕು ತಾನೇ? 'ಕೈ' ಎಂಬ ಅಕ್ಷರದಲ್ಲಿ ಒತ್ತಕ್ಷರ ತೆಗೆದಾಗ ಉಳಿಯುವುದು 'ಕೆ' ತಾನೆ?

ಹಳ್ಳಿಗ ಅಕ್ಷರಜ್ಞಾನ ಹೊಂದಿರುತ್ತಾನೆ ಎಂದಿಟ್ಟುಕೊಳ್ಳೋಣ. ಅವನಿಗೆ ಅಕ್ಷರಗಳ ಚೆಲ್ಲಾಟದಲ್ಲೇ ಖುಷಿ ಸಿಗುತ್ತದೆ ಎಂದು ಭಾವಿಸಿದಂತೆ ಅದರಲ್ಲಿ ತಪ್ಪೇನಿಲ್ಲ. ಹಾಗಾಗಿ ಎಲ್ಲೆಂದರಲ್ಲಿ ಯಾರ ಹತ್ತಿರ ಬೇಕಾದರೂ ಅವನು ತನ್ನ ಮಾತಿನ ಚಾಟಿಯನ್ನು ಬೀಸಬಲ್ಲ. ಚಕ್ಕನೆ "ಆರ್ಗ್ಗಾ ಮೂರ್ಗ್ಗಾ ಮಠದೈಯ್ಗ್ಗ ಆರತಿ ಎತ್ತಿರಿ ಇದನ್ನು ಬಿಡಿಸಿ ಹೇಳ್ತೀರಾ?" ಎಂದು ಕೇಳಿದಾಗ, ಯೋಚಿಸಿ ಉತ್ತರ ಕೊಟ್ಟಲ್ಲಿ ಎಂಥವರಿಗೂ ಕೂಡ ಹಳ್ಳಿಗರ ಸಾಮರ್ಥ್ಯ ದಂಗು ಬಡಿಸುತ್ತದೆ. ಉತ್ತರ (ಆರು) ಗ ಗ ಗ ಗ ಗ (ಮೂರು) ಗ ಗ ಗ ಮಠದ ಸ್ವಾಮಿಗೆ (ಆರು) ತಿ ತಿ ತಿ ತಿ ತಿ ತಿ ಎತ್ತಿರಿ.

ಹೀಗೆ ಅಕ್ಷರ ಚಮತ್ಕಾರಗಳಿಗೆ ಎಣೆಯಿಲ್ಲದಷ್ಟು ಉದಾಹರಣೆ ಕೊಡಬಹುದು. "ಮದ್ರಾಸಿನಲ್ಲಿನಸಿದ್ರಾಮ" "ಗಿರಿಬಸಕನ ಕಸಬರಿಗಿ" "ಅರ್ಧಚಂದ್ರನಂಗೆ ಆಕಾರುಂಟು, ಮುತ್ತು ಕೊಟ್ಟರೆ ಮುಕುಳಿ ಗದ್ದಲಿಸುತ್ತೆ ಹಾಗಾದ್ರೆ ಅಕ್ಷರ ನೀವೆ ಹುಡುಕಿ ಹೇಳ್ತಿರಾ? ಇಲ್ಲೆಲ್ಲಾ ಅಕ್ಷರಗಳ ಚಮತ್ಕಾರ ತನ್ನದೇ ಆದ ಅಭಿನ್ನತೆಯ ರೂಪವನ್ನು ಮೈಗೂಡಿಸಿಕೊಂಡಿದೆ.

8.3 ಪದ ಚಮತ್ಕಾರಗಳು

ಅಕ್ಷರ ಅಕ್ಷರ ಸೇರಿದರೆ ಪದ. ಪದ ಪದಗಳು ಸೇರಿದರೆ ವಾಕ್ಯ. ವಾಕ್ಯದಲ್ಲಿ ಯಾವುದೇ ಒಂದು ಅಥವಾ ಎರಡು ಪದಗಳ ಚಮತ್ಕಾರ ಇಡೀ ಸಂದರ್ಭದ ಅರ್ಥವನ್ನೇ ನಾನಾರೀತಿಯಲ್ಲಿ

ಯೋಚಿಸುವಂತೆ ಮಾಡಬಹುದು. ಪದದೊಳಗಿನ ನಿಗೂಢತೆ ಸುಲಭವಾಗಿ ಅರ್ಥವಾಗದಿದ್ದಲ್ಲಿ ಏನು ಮಾಡಿದರೂ ಕೂಡ ಅಲ್ಲಿನ ಹಾಸ್ಯ, ವಿನೋದ. ವ್ಯಂಗ್ಯ, ವಿಡಂಬನೆ. ಒಗಟಿನಂಶ ನಮಗೆ ದಕ್ಕುವುದಿಲ್ಲ. ಈ ಉದಾಹರಣೆ ಗಮನಿಸಿ.

"ಒಬ್ಬ ಮೈಸೂರಿಗೆ ಹೋಕನಿ ನೋಡಾಕೆ" ಅಂದ. ಇನ್ನೊಬ್ಬ ಹೇಳಿದ "ಇಲ್ಲೆ ಮೈಸೂರು ತೋರುಸ್ತೀನಿ ಬಾ" ಅಂದ. "ಹ್ಲೊ ಹಾಗಾದ್ರೆ ತೋರಿಸು" ಅಂದ. ಹಾಗಾದರೆ ಹೇಗೆ ತೋರಿಸಬೇಕು?

ಇಲ್ಲಿ "ಮೈಸೂರು" ಪದದಲ್ಲಿನ ಅರ್ಥ ಬಹಳ ನಿಗೂಢ ಬಿಡಿಸಿ ಒಳಹೊಕ್ಕು ನೋಡದಿದ್ದಲ್ಲಿ "ಮೈಸೂರು" ನೋಡಲಾಗುವುದಿಲ್ಲ ಮೈಸೂರು ಇವರಿರುವ ಸ್ಥಳಕ್ಕೆ ದೂರವೇನೊ ಸರಿ ಹಾಗಾದರೆ ಇದ್ದಲ್ಲೇ ಮೈಸೂರು ತೋರಿಸುವುದೆಂದರೇನು? ಜಾಣ ಚಮತ್ಕಾರಿಗನ ಕೌಶಲ್ಯವೇ ಇಲ್ಲಿ ಬೇರೆ. ಇದ್ದ ಜಾಗದಲ್ಲೇ ಅಂದರೆ ಅವರು ಮನೆಯ ಕಟ್ಟೆಯ ಮೇಲೆ ಕುಳಿತಿದ್ದಾರೆ ಎಂದು ಭಾವಿಸಿಕೊಳ್ಳಿ. ಆಗ ಮೈಸೂರು ತೋರಿಸಬೇಕಾದರೆ ತನ್ನ ಮೈಯನ್ನು ಮೈ ಎಂದು ಅಲ್ಲೆ ಮನೆಯ ಮುಂಭಾಗದ ಸೂರ(ಅಂಚು)ನ್ನು 'ಸೂರು ಎಂದು "ಇದೆಯಪ್ಪ ಮೈಸೂರು" ರನ್ನುವಾಗ, ಎಂತಹ ಜಾಣನೂ ಕೂಡ ಅವನ ಉತ್ತರಕ್ಕೆ ವಿಸ್ಮಯಗೊಳ್ಳುತ್ತಾನೆ. ಹೀಗೆ ಕಲ್ಕತ್ತ (ಕಲ್ಲು+ಕತ್ತ(ಹಗ್ಗ) ಬೊಂಬಾಯಿ (ಬೊಂಬು (ಬಿದಿರು)+ಬಾಯಿ)ಗಳನ್ನು ಇದ್ದಲ್ಲಿಯೇ ಚಾಣಾಕ್ಷತನದ ಮಾತಿನ ಪದಗಳ ಮೂಲಕ ಈ ಹಳ್ಳಿಗ ತೋರಿಸಬಲ್ಲವನಾಗಿದ್ದಾನೆ.

ಮಾತು ಬಲ್ಲವ ಜಯಿಸಬಲ್ಲ ಚಮತ್ಕಾರ ತಿಳಿದವ ಚಾತುರ್ಯ ತೋರಬಲ್ಲ ಎನ್ನುವ ಹಾಗೆ ಅವನ ಎದೆಯಾಳದಿಂದ ಹೊರಬರುವ ಪದ ಚಮತ್ಕಾರಗಳಿಗೆ ಕೊನೆಯೇ ಇಲ್ಲ. "ಕಪ್ಪು ತುಂಬಾ ಚಾ ಕುಡಿತೀಯ"? ಅಂತಾನೆ. ಕಪ್ಪಿನ ತುಂಬಾ ಕುಡಿಯದೆ ಕಪ್ಪನ್ನು ಸುತ್ತಿಸುತ್ತಾ ಅದರ ಕಂಠದ ಸುತ್ತಲೂ ಬಾಯಿ ಹಾಕಿ ಕುಡಿಯುವುದು ಎಂಬ ಉತ್ತರ ಯಾರಿಗೆ, ಹೇಗೆ ಹೊಳೆಯಲು ಸಾಧ್ಯ? ಇನ್ನು "ಬೆಂಡಕಾಯಿ ಬಿತ್ತಿ ಅವರೆ ಕಾಯಿ ಕೀಳ್ಬೇಕು" ಸಾಧ್ಯವೆ ಉತ್ತರಿಸಲು? ಏಕಿಲ್ಲ–ಎಂದಾಗ ಬೆಂಡೆ ಕಾಯಿ ಬೀಜವನ್ನು ನೆಲದಲ್ಲಿ ಯಾರು ಊಳಿರು(ಹಾಕಿರು)ತ್ತಾರೋ ಅವರೇ. ಅದು ಗಿಡವಾಗಿ ಬೆಂಡೆಕಾಯಿ ಬಿಟ್ಟಾಗ, ಕೀಳುವುದು ಸಾಧ್ಯತಾನೆ? ಅಡಿಕೆ ಎಲೆ ತಿನ್ನಬೇಕು ಎಂದು ಕೆಣಕಿ ಕೇಳಿದಾಗ ಅಡಿಕೆ ಮತ್ತು ಎಲೆ ಎರಡನ್ನು ತಿನ್ನುವುದು ಎಂದು ಉತ್ತರಿಸಬೇಕಿಲ್ಲ. ಅಡಿಕೆಮರದ ಎಲೆ ತಿನ್ನಬೇಕು ಎಂದು ಹೇಳಬೇಕು 'ಹತ್ತಲೆ' ಹರಕಂಡು ಬರಬೇಕೆಂದು ಪಂಥ ಕಟ್ಟಿ ಹೋಗಿ ಹತ್ತು ಎಲೆಗಳನ್ನು ಹರಿದುಕೊಂಡು ಬಂದರೆ? ಇದರ ಅರ್ಥವೇ ಬೇರೆ ಮರವನ್ನು ಹತ್ತಿ ಎಲೆಯನ್ನು ಹರಿದುಕೊಂಡು ಎಣಿಸುವ ಗೋಜಿಗೆ ಹೋಗದೆ (ಒಂದೇ ಎಲೆ ಆಗಬಹುದು) ತರುವುದು. "ಕಂಟಿ ಮ್ಯಾಲ್ಹಾಸಿ" ಹೋಗಿ ಕಲ್ಲಂಗಡಿ ಹಣ್ಣು ತರಬೇಕು ಎಂದು ಬಾಜಿ ಕಟ್ಟಿಕೊಂಡು ಮುಳ್ಳು ಕಂಟಿಯ ಮೇಲಿನಿಂದ ಹಾರಿಹೋಗಿ ಹಣ್ಣು ತರುವುದು ಎಂದು ಭಾವಿಸಬಾರದು. ತನ್ನ ಮೈಮೇಲೆ ಟೊವೆಲ್ಲು ಇದ್ದರೆ ಅದನ್ನು ಮುಳ್ಳುಕಂಟಿಯ ಮೇಲೆ ಹಾಸಿ ಹೋಗಿ (ಹೇಗಾದರೂ) ಹಣ್ಣನ್ನು ತರಬೇಕು. ಹೀಗೆ ಪದಚಮತ್ಕಾರಗಳ ಚಾತುರ್ಯಕ್ಕೆ ಇಲ್ಲಿ ಕೊನೆಯೇ ಇಲ್ಲ. ಮಾತು ಮಾತಿಗೂ ಬೆಳೆಸಿಕೊಳ್ಳುತ್ತಾ

ಕಟ್ಟಿಕೊಳ್ಳುತ್ತಾ ಸೋಲು ಗೆಲುವುಗಳ ಪಂದ್ಯವನ್ನೊಡ್ಡುತ್ತಾ ಮುನ್ನಡೆದ ಈ ಜಾಣ ಚಮತ್ಕಾರಗನ ಭಾಷಾ ಚಾತುರ್ಯ ನಿಜಕ್ಕೂ ರಂಜನೀಯವಾದುದು.

8.4 ಉಕ್ತಿ ಚಮತ್ಕಾರಗಳು

ಇಡೀ ವಾಕ್ಯದಲ್ಲಿನ ಅಕ್ಷರ. ಪದ. ವಾಕ್ಯಕೂಡ ಭಾಷಾ ಚಾತುರ್ಯದಿಂದ ಕೂಡಿದ್ದು ಭಾಷಾ ಪ್ರಾವೀಣ್ಯವುಳ್ಳವನ ಸಾಮರ್ಥ್ಯದ ಮೇಲೆ ಇಲ್ಲಿನ ಸೊಗಡು ಎಂಥವರನ್ನೂ ಕ್ಷಣಕಾಲವೇಕೆ, ದೀರ್ಘ ಸಮಯದವರೆಗೂ ಚಿಂತನೆಗೆ ಹಚ್ಚಬಲ್ಲದು. ಇಲ್ಲಿನ ಸೊಗಡು ಎಂಥವರನ್ನೂ ಕ್ಷಣಕಾಲವೇಕೆ, ದೀರ್ಘ ಸಮಯದವರೆಗೂ, ಚಿಂತನೆಗೆ ಹಚ್ಚಬಲ್ಲದು. ಇಲ್ಲಿನ ವಸ್ತು ಪಾಂಡಿತ್ಯದ ಸಾಮರ್ಥ್ಯಕ್ಕೊಡ್ಡುವುದಾಗಿ ಕಂಡರೂ ಹಳ್ಳಿಗರಲ್ಲಿರುವ ಪುರಾಣ ಪಂಡಿತರನ್ನು ನಾವು ಜನಪದರೆಂದೇ ಭಾವಿಸಿಕೊಂಡಲ್ಲಿ ಇಂಥ ಪ್ರಯೋಗಗಳಿಗೆ ತನ್ನದೇ ಅದ ನೆಲೆ ಗುರುತಿಸುವಂತೆ ಮಾಡಬಹುದು. ಪುರಾಣ, ಭಾಗವತ, ಮಹಾಭಾರತ, ರಾಮಾಯಣ ಮೊದಲಾದ ಕಾವ್ಯಗಳಲ್ಲಿನ ಕಥಾರೂಪಕ್ಕನುಗುಣವಾಗಿ ಕಾವ್ಯಾತ್ಮಕ ಭಾಷೆಯ ಚಾತುರ್ಯಗಳಲ್ಲಿ ಉಕ್ತಿ ಚಮತ್ಕಾರಗಳನ್ನು ಸೃಷ್ಟಿಸಿಕೊಂಡಿರುವ ಇಲ್ಲಿನ ಜನಪದರ ಬುದ್ಧಿಕೌಶಲ ಮೆಚ್ಚುವಂತಹುದು. ನೋಡುತ್ತಿದ್ದಂತೆ ಶಿಷ್ಟತೆಯ ಛಾಯೆ ಎದ್ದುಕಂಡರೂ ಇವುಗಳನ್ನು ಉಳಿಸಿರುವ ವ್ಯಕ್ತಿಗಳ ಹಿನ್ನೆಲೆ ಕೂಡ ಜನಪದರ ಸಮೂಹದಿಂದಲೇ ಬಂದದ್ದು ಎಂಬುದನ್ನು ಮರೆಯಲಾಗದಲ್ಲವೆ? ಎನ್ನುವ ಭಾವನೆ ಮೂಡದಿರದು.

"ವಿರಾಟರಾಯನ ಹೆಂಡತಿ ತಮ್ಮನ ವೈರಿಯ ಅಣ್ಣನ ಅಪ್ಪನ ವಾಹನವಾವುದು?" ಉತ್ತರ; ಕೋಣ. ಇದರ ಅರ್ಥವನ್ನು ಬಿಡಿಸುತ್ತಾ ಹೋದ ಹಾಗೆಲ್ಲ ಇಲ್ಲಿರುವ ವ್ಯಕ್ತಿಗಳ ಸಂಬಂಧದ ಮೂಲ ಪರಿಚಯ ನಮಗಾಗುತ್ತದೆ. ಇಡೀ ವಾಕ್ಯದಲ್ಲಿನ ಹಲವಾರು ಹೆಸರುಗಳು ಸಂಬಂಧಿ ಸೂಚಿತ ಪದಗಳ ಹಿನ್ನೆಲೆಯಲ್ಲೇ ಅಡಗಿಕೊಂಡಿದೆ. ವಿರಾಟರಾಯನ ಹೆಂಡತಿ ತಮ್ಮ ಕೀಚಕ, ಇವನ ವೈರಿ ಭೀಮ, ಭೀಮನ ಅಣ್ಣ ಧರ್ಮರಾಯ, ಇವನ ಅಪ್ಪ ಯಮ, ಯಮನ ವಾಹನ ಕೋಣ.

"ಹರನ ಹಾರನ ಆಹಾರನ ಸುತನ ಸ್ವಾಮಿಯ ಅನುಜನ ವೈರಿ ಯಾರು"? ಉತ್ತರ : ಇಂದ್ರಜಿತ್.

"ಭಾನುಹಳ್ಳಿ ಸೋಮನಗೌಡರ ಮಗಳು
ಬುದ್ಧಿಕಲಿಯಲು ಗುರು ಮಠಕ್ಕೆ ಸೇರಿ
ಶುಕ (ಶುಖ)ಪಟ್ಟು ಶನಿಯಾದಳು"

ಇಲ್ಲಿಯೂ ಕೂಡ ಒಂದೊಂದು ಪದದಲ್ಲಿ ಒಂದೊಂದು ವಾರಗಳ ಹೆಸರು ಸೇರಿಕೊಂಡು ಇಡೀ ವಾಕ್ಯವೇ ಉಕ್ತಿ ಚಮತ್ಕಾರವೆನಿಸಿದೆ. ಈ ಉದಾಹರಣೆ ನೋಡಿ; "ರಸವೈಪುರಿ ತ್ರಿಕಾಂಚ ಪಾಶಾಲ ವಿನಾಕಾ ಉಮಾ ಮಾಹೇಶ್ವರ ರಕ್ಷಿಸೊ ನಮ್ಮನ್ನು "ಇಲ್ಲಿ ಪ್ರತಿಯೊಂದು ಅಕ್ಷರ ಕೂಡ ಒಬ್ಬೊಬ್ಬ ವ್ಯಕ್ತಿಯ ಪರಿಚಯ ಮಾಡಿಕೊಡುತ್ತದೆ. ಮಾತ್ರವಲ್ಲ ಅವರ ಸಂಸಾರದ ಚರಿತ್ರೆಯನ್ನು ಸೂಕ್ಷ್ಮವಾಗಿ ಪರಿಚಯಿಸುತ್ತದೆ. ಇದನ್ನು ಹೀಗೆ ಬಿಡಿಸಿಕೊಳ್ಳಿ.

ರಜತಾದ್ರಿಸತ್ಯಲೋಕವೈಕುಂಠಗಳಿಗೆ ಒಡೆಯರಾದ

ತ್ರಿಶೂಲ,ಖಡ್ಗ,ಚಕ್ರಧಾರಿಗಳಾದ

ಪಾರ್ವತಿ,ಶಾರದೆ,ಲಕ್ಷ್ಮೀ ಪತಿಯರುಗಳಾದ

ವಿಘ್ನೇಶ್ವರ,ನಾರದ,ಕಾಮರಿಗೆ ತಂದೆಯವರಾದ

ಶಿವ,ಬ್ರಹ್ಮ,ವಿಷ್ಣು ಪರಮಾತ್ಮರೆ...

ಇಂತಹ ಪ್ರಯೋಗಗಳ ಸಾಮರ್ಥ್ಯ ಸಾಮಾನ್ಯ ಹಳ್ಳಿಗರಿಗೆ ಬರಲಾರದೆಂಬುದೇನೋ ನಿಜ ಆದರೆ ಪುರಾಣ ಪಂಡಿತರ ಬತ್ತಳಿಕೆಯಲ್ಲಿ ಇಂಥ ಪ್ರಯೋಗಗಳಿಗೆ ಕೊರತೆಯಿಲ್ಲ. ಸಾಮಾನ್ಯಮಟ್ಟದ ಜನರಿಗಿಂತ ಪಾಂಡಿತ್ಯ ಚಾತುರ್ಯವುಳ್ಳವರಿಂದ ಇವುಗಳು ಉಳಿದುಕೊಂಡಿವೆ.

8.5 ಒಗಟು ಚಮತ್ಕಾರಗಳು

ಒಗಟಿನ ಮೂಲಕ ಭಾಷೆಯ ಚಮತ್ಕಾರವನ್ನು ಇಲ್ಲಿ ಗಮನಿಸಬಹುದು. ಕೇಳುಗರಿಗೆ ಕೇವಲ ಒಗಟಾಗಿ ಕಂಡರೂ ಅಲ್ಲಿ ಬಳಸಿರುವ ಭಾಷೆಯ ಚಾತುರ್ಯ ಬಹಳ ನಿಗೂಢವಾಗಿಯೇ ಇರುತ್ತದೆ. ಅರ್ಥವನ್ನು ಸರಿಯಾಗಿ ನಿಧಾನವಾಗಿ ಬಿಡಿಸಿಕೊಂಡಾಗ ಮಾತ್ರ ಇಲ್ಲಿನ ಜಾಣ್ಮೆಯ ಅರಿವಾಗುತ್ತದೆ.

"ಊಟಮಾಡಿದೂಟ ಮತ್ತೊಂದ್ ಸಾರಿ ಸಿಕ್ಕಲ್ಲ

ಇದೆಂಥ ಊಟಾಂತ ಹೇಳ್ತೀರಾ ನೀವೆಲ್ಲಾ?

ಇಲ್ಲಿನ ಒಗಟು ಒಳಗೊಂಡಿರುವ 'ಊಟ ಮಾಡಿದೂಟ' ಪದದಲ್ಲಿನ ಅರ್ಥ ಚಮತ್ಕಾರ ತುಸು ಯೋಚಿಸುವಂತೆ ಮಾಡುತ್ತದೆ. ಇದರ ಅರ್ಥ ಎದೆಯಹಾಲು ಊಟ. ಇನ್ನೊಂದು

ಉದಾ: ಕಲ್ಲಕ್ಕ ಮಲ್ಲಕ್ಕ ಗುದ್ದಾಡ್ತಿದ್ರು

ಬಲ್ಲಕ್ಕ ಬಂದು ಬಿಡಿಸೋದ್ಲು

ಇವರ್‍ಯಾರೂಂತ ನಿಮಗೆ ಗೊತ್ತಿದ್ರೆ

ನನಿಗೆ ಸ್ವಲ್ಪ ಹೇಳ್ತೀರಾ, ನೋಡೋಣ?

'ಕಲ್ಲಕ್ಕ' 'ಮಲ್ಲಕ್ಕ' ಬಲ್ಲಕ್ಕ ಪದಗಳಲ್ಲಿನ ನಿಗೂಢಾರ್ಥ ಪ್ರಾಸದ ಸೊಗಡಿನೊಂದಿಗೆ ರಂಜಿಸುತ್ತಾ ಬೀಗ, ಬೀಗದ ಕೈಗಳ ಅರ್ಥವನ್ನು ಹೊರಗೆಡುವುತ್ತದೆ.

ಕೊಟ್ಟು ಬಂಜೆ ಕೊಡುದ್ ಬಂಜೆ ।

ಹುಟ್ಟು ಬಂಜೆ ಅಂದ್ರೆ ಯಾರ್‍ಯಾರು?

ಇಲ್ಲಿರುವ 'ಕೊಟ್ಟು' ಕೊಡುದ್ ಹುಟ್ಟು ಪದಗಳ ಹಿಂದಿನ ಅರ್ಥ ಬೇರೆ ಬೇರೆ ಹೆಣ್ಣನ್ನು ಕೊಟ್ಟು ಹೆಣ್ಣು ಮಕ್ಕಳಿಲ್ಲದವರು ಕೂಡದೆ, ಮಕ್ಕಳೇ ಇಲ್ಲದವರು ಹುಟ್ಟು ಬಂಜೆ ಎಂದು ವಿವರಿಸಲಾಗಿದೆ. ಹೀಗೆ ಒಗಟು ಚಮತ್ಕಾರಗಳಲ್ಲಿನ ವೈಶಿಷ್ಟ್ಯ ಭಾಷಾ ಪ್ರಯೋಗದೊಂದಿಗೆ ಎಲ್ಲರನ್ನೂ ರಂಜಿಸಬಲ್ಲದು. ಚಿಂತನೆಗೆ ಹಚ್ಚಬಲ್ಲದು.

8.6 ಒಗಟು ಕಥಾ ಚಮತ್ಕಾರಗಳು

ಒಗಟಿನ ರೂಪ ಬೆಳೆದ ಹಾಗೆಲ್ಲಾ ಕಥನಾತ್ಮಕವಾಗಿ ರೂಪುಗೊಂಡು. ಮಾತಿನ ಚಮತ್ಕಾರದಲ್ಲೇ ಎಲ್ಲರ ಮನಸ್ಸನ್ನು ಸೆರೆಹಿಡಿದು. ಬಳಸುವ ಒಂದೊಂದು ಪದ. ಅಕ್ಷರ ವಾಕ್ಯಗಳಲ್ಲಿನ ನಿಗೂಢಾರ್ಥವನ್ನು ತುಂಬಿ ಎಂತಹ ಪಾಂಡಿತ್ಯವುಳ್ಳವರನ್ನು ಕ್ಷಣಕಾಲ ದಂಗುಬಡಿಸಿ ಸೋಲು ಗೆಲುವುಗಳ ಅಹಂ ಅನ್ನು ದೂರಗೊಳಿಸಿ ಶರಣಾಗುವ ಸನ್ನಿವೇಶವನ್ನು ಸೃಷ್ಟಿಗೊಳಿಸಬಹುದು. ಈ ಉದಾಹರಣೆ ನೋಡಿ.

"ಒಬ್ಬ ಸಾಧು ದೇಶದ ದೊಡ್ಡದೊಡ್ಡ ಪಂಡಿತ್ತು ನೆಲ್ಲ ಗೆದ್ದು ಆನೆಮ್ಯಾಲೆ ಕಥೆ ಪುರಾಣದ ಪುಸ್ತಕ್ಕಾನೆಲ್ಲ ಹೇರ್‍ಕೊಂಡು ಬರ್‍ತಾ ಇದ್ದ. ಬರ್‍ತಾಯಿರ್‍ಬೇಕಾದರೆ ಊರ್‍ಮಗ್ಲಾಗೆ ಕಣ ಕಣದ್ಹತ್ರ ಹೋಗ್ಬೇಕರೆ ಒಬ್ಬ ರೈತ ಜ್ವಾಳ ತೂರ್‍ತಾ ಇದ್ದ ಅಲ್ಲೆ ಎಮ್ಮೆ ಕಾಯ್ತಾ ಇದ್ದ ಅವ್ನ ಮಗಳು ಹೋಗೊ ಸ್ವಾಮಿಗಳ್ನೋಡಿ "ಬರಿ ಸ್ವಾಮಿಗಳೆ" ಅಂತ ಕರೀತು. ಅಡಿಕ್ಕಾಸಲು ಏನೂ ಇದ್ದಿಲ್ಲ. ಅಪ್ಪನ ಕೈಯಾಳ ಮೊರ ತಂದಿಟ್ಟು ಕುತಗಳ್ರೀಂತು. ಕುತಗಂದಾಗ "ಸ್ವಾಮಿ ಆಗೊಮ್ಮೆ ಈಗೊಮ್ಮೆ ಏಸ್ ಹೇಳ್ರೀ"ಂತು ಆ ಸಾಧು ಯೋಚ್ನೆ ಮಾಡ್ದ ಎಷ್ಟ್ ಯೋಚ್ನೆ ಮಾಡದ್ರೂ ಹೊಳಿವಲ್ದು. ಪುರಾಣನೆಲ್ಲ ತಗ್ದು ತಿರುವಿ ತಿರುವಿ ಹಾಕ್ದ ಎಲ್ಲೂ ಸಿಗಲಿಲ್ಲ. "ನಾನ್ ಎಂತೆಂತೋರ್‍ನೋ ಸೋಲಿಸ್ಥೆ ಕಾಣವ್ವ ನಿನ್ನ ಪ್ರಶ್ನೆಗೆ ಮಾತ್ರ ಉತ್ರ ಹೇಳುಕ್ ಆಗಲಿಲ್ಲ. ನೀನೆ ಹೇಳವ್ವಾ"ಂದ್ರು ಆಗ ಹೆಣ್ ಮಗ್ಳು ಹೇಳಿದ್ಲು ಏನು?"

ದನಕಾಯುವ ಹೆಣ್ಣು ಮಗಳಿಗೆ ಇದೊಂದು ಚಿಕ್ಕ ಸಮಸ್ಯೆ. ಅವಳಿಗೆ ಒಂದು ಬಗೆಯಲ್ಲಿ ಸಮಸ್ಯೆಯೂ ಅಲ್ಲ. ಪ್ರತ್ಯಕ್ಷ ಪರೀಕ್ಷೆಯ ನೆಪದಲ್ಲಿ ಪಂಡಿತರನ್ನು ಸಾಮಾನ್ಯ ಜ್ಞಾನದ ಅಳತೆಗೋಲಿನಿಂದ ನೋಡಿದ್ದು ಇಲ್ಲಿದ ಅವಳ ದೃಷ್ಟಿಯಲ್ಲಿ ನೋಡ ನೋಡುತ್ತಿದ್ದಂತೆಯೇ ಉತ್ತರಕೊಡಬಹುದೆಂಬ ಭಾವನೆ ಇದೆ. ಆದರೆ ಪಾಂಡಿತ್ಯವಿದೆ ಎಂದು ಆಸ್ಥಾನಗಳಲ್ಲಿ ಚಾಕ ಚಕ್ಯತೆ ತೋರುವ ವ್ಯಕ್ತಿಗೆ ಇಲ್ಲಿ ದೊಡ್ಡ ಸವಾಲು ಎದುರಾಗಿದೆ. ಬಿಡಿಸಲು ತೋಚುತ್ತಿಲ್ಲ. ಹೊಳೆಯುತ್ತಿಲ್ಲ.

ಅವಳಿಗೆ ಶರಣಾಗದ ಬೇರೆ ದಾರಿಯಿಲ್ಲ. ಕೊನೆಗೆ ಆ ಹುಡುಗಿ ಬಿಡಿಸಿ ಹೇಳಿದಾಗ ಪಂಡಿತನಿಗೆ ಆಶ್ಚರ್ಯ ಮುಜುಗರ ಸಂಕೋಚಗಳಾಗುವುದು ಸಹಜ. ಉತ್ತರ ಹೀಗಿದೆ. "ಆಗೊಮ್ಮೆ ಅಂದ್ರೆ ಹುಟ್ಟಿದಾಗ ಕೂಸಿದಾಗ ಮರ್ಾದೆಗೆ ಹಾಕಿದ್ರು ಈಗ್ಲೂ ಅದೇ ಮರ್ಾದೆಗೆ ಕುಂತುದೀರಿ ಅಂತ ಇಂಗ್ಲಿಸೇಳ್ದ್ದ ಅವಾಗ ಸಾಧು ತಾನ್ ಗೆದ್ದು ತಂದುದ್ನೆಲ್ಲ ಆ ಹುಡ್ಗಿಗೆ ಕೊಟ್ಟ ಆ ಹುಡ್ಗಿ ನಾಕ್‌ಮೊರ ಜ್ವಾಳಾನ ರಾಸಿಂದ ತಗ್ದ್ ಕೊಡ್ತು"

ಹೀಗೆ ಒಗಟು ಕಥಾ ಚಮತ್ಕಾರಗಳ ಸಂಖ್ಯೆಗೆ ಕೊರತೆಯೇ ಇಲ್ಲ. ಕಥೆಯ ಜೊತೆಗೆ ರಂಜನೆ ನೀಡುವ ನೆವದಲ್ಲಿ ಬುದ್ಧಿ ಪರೀಕ್ಷೆಯ ಪ್ರಯತ್ನ ಮಾಡುವುದು ಇಲ್ಲಿನ ವೈಶಿಷ್ಟ್ಯ.

8.7 ಸಂಭಾಷಣಾ ಒಗಟು ಚಮತ್ಕಾರಗಳು

ಒಬ್ಬ ವ್ಯಕ್ತಿ ಮಾತ್ರ ಒಗಟು ಹೇಳಿ, ಒಗಟು ಕತೆ ಹೇಳಿ ಹಲವರ ಬುದ್ಧಿ ಪರೀಕ್ಷೆ ಮಾಡಬಹುದು. ಅದೇ ಇನ್ನೊಬ್ಬ ಒಗಟು. ಒಗಟು ಕತೆ ಹೇಳಿ ಸವಾಲು ಹಾಕುವಂತವನಾದರೆ? ಇಬ್ಬರ ಮಾತೂ ಕೂಡ ಸಂಭಾಷಣಾತ್ಮಕ ಒಗಟು ಚಮತ್ಕಾರಗಳಾಗಿ ಬೆಳೆಯಬಲ್ಲುದು ತಾನು? ಇಬ್ಬರ ಮಾತುಗಳಲ್ಲೂ ಕೂಡ ಚಾಕಚಕ್ಯತೆಯ ಪ್ರಯೋಗ ಇದ್ದೇ ಇರುತ್ತದೆ. ಕತೆಯ ಒಳಗೇ ಸಂಭಾಷಣಾ ಒಗಟು ಚಮತ್ಕಾರಗಳು ಪ್ರಶ್ನೆ ಉತ್ತರಗಳಾಗಿ ಮಾರ್ಪಟ್ಟು ಕೊನೆಗೆ ಎರಡನ್ನೂ ಬಿಡಿಸಿ ಹೇಳುವ ಪ್ರಸಂಗ ತಲೆದೋರುತ್ತದೆ ಈ ಉದಾಹರಣೆಯನ್ನು ಗಮನಿಸಿ.

"ಒಂದು ಮನೆಯಾಗ ಇಬ್ರು ಗಂಡ ಹೇಣ್ನಿ ಇದ್ರು ಗಂಡ ಹೊತ್ತಾರ ಎದ್ದು ಕೂಡ್ಲೆ ಕೆಲಸಕ್ಕೆ ಹೋಗಿದ ಹೇಣ್ತಿ ಮನೆಯಾಗೆ ಕೆಲಸೈತ ಅಂತ ಇದ್ಲು ತಾಸೊತ್ತು ಆಗಲ್ದು ಗಂಡಗೆ ಹೊಟ್ಟೆ ಹಸಿತ್ತು ಬಂದ ಬಂದೋನು ಹೇಣ್ತಿ ಕುಟಾಗ ಹೇಳಿದ

"ತಾಟಗಿತ್ತಿ ಕುಟಾಗ ತಾಟಾಡಿ ಬಂದೇನಿ ತಾರೆ ಹುಡುಗಿ ನೀರ"

ಅಂತಂದು ಉಣ್ಣಾಕ ಹೇಳಿದ ಅಕ್ಕೇನೂ

"ಗಂಜಿ ಹುಡುಗನ್ನ ಕುಟಾಗ ಗುಂಜಾಡಿ ಬಂದೇನಿ ತಂದಿಲ್ಲ ಹೋಗೊ ನೀರ"

ಅಂತಂದು ತನಿಗೂ ಸಾಕಾಗೇತೇಂತ ಹೇಳಿದ್ಲು. ಹಾಗಾದ್ರೆ ಇವರು ಹಿಂಗೆ ಹೇಳಿದ್ರ ಅರ್ಥ ಏನೇನು?

ಒಬ್ಬರ ಒಗಟಿನ ಪ್ರಶ್ನೆಗೆ ಮತ್ತೊಬ್ಬರು ಒಗಟಿನಲ್ಲೆ ಪ್ರಶ್ನಿಸುವ, ಉತ್ತರಿಸುವ ಚಮತ್ಕಾರ ಇಲ್ಲಿದೆ 'ತಾಟಗಿತ್ತಿ. ಗಂಜಿ ಹುಡುಗ ಎಂಬ ಸಂಕೇತಗಳ ಮೂಲಕ ತಮ್ಮ ಕರ್ತವ್ಯಗಳ ಪರಿಚಯ ಮಾಡಿಕೊಂಡಿದ್ದಾರೆ. ನೇರವಾಗಿ ಹೇಳುವುದನ್ನು ಚಮತ್ಕಾರಯುತವಾಗಿ ಒಗಟಿನ ರೂಪದಲ್ಲಿ ಹೇಳಿ, ಕ್ಷಣಕಾಲ ಯೋಚನೆಗೆ ಹಚ್ಚಲಾಗಿದೆ ತಾಟಗಿತ್ತಿ ಅಂದರೆ ಅಡಿಕೆಮರ. ಗಂಜಿ ಹುಡುಗ ಅಂದರೆ ಮೊಸರು ಕಡೆಯುವ ಕಡಗಲ್ಲು ಅವನು ಒಂದು ಅಡಿಕೆ ಮರದಿಂದ ಇನ್ನೊಂದು ಅಡಿಕೆ ಮರಕ್ಕೆ

ಹಾರಿ ಹಾರಿ ಅಡಿಕೆ ಹರಿದು ಸುಸ್ತಾಗಿ ಬಂದು ನೀರು ಕೇಳಿದ್ದಾನೆ. ಇವಳು ಮೊಸರು ಕಡೆದು ಕಡೆದು ಸುಸ್ತಾಗಿರುವ ಕಾರಣ ನೀರು ತಂದಿಲ್ಲ ಎಂದಿದ್ದಾಳೆ. ಇಂತಹ ಚಮತ್ಕಾರದ ಸಂಭಾಷಣ ಒಗಟುಗಳು ಸಾಕಷ್ಟು ಸಂಖ್ಯೆಯಲ್ಲಿ ನಮಗೆ ದೊರೆಯುತ್ತವೆ. ಹೇಳುವವರು ಇದನ್ನು ಕಥಾರೂಪದಲ್ಲಿದ್ದರೂ ಉಳಿಸಿಕೊಳ್ಳಬಹುದು. ಚುಟುಕು ರೂಪದ ಒಗಟು ಚಮತ್ಕಾರದಲ್ಲಾದರೂ ಉಳಿಸಿಕೊಳ್ಳಬಹುದು. ಒಬ್ಬರಿಗೊಬ್ಬರು ನೀಡುವ ಸ್ಪರ್ಧೆ ಇಲ್ಲಿ ಅವರವರ ಚಾತುರ್ಯದ ಸಾಮರ್ಥ್ಯವನ್ನು ಎತ್ತಿ ಹಿಡಿಯುತ್ತದೆ ಕೆಲವು ಸಂಭಾಷಣೆಗಳನ್ನು ಇಲ್ಲಿ ಗಮನಿಸಿ.

1. ಅತ್ತೆ: ಕರಕಟ್ಟಿದ ಹುಲ್ಲು ಹಾಕಿದೆ. ಕರ ಯಾಕೆ ಹುಲ್ಲು ಮೇಯ್ತಾ ಇಲ್ಲ?
   ಅಳಿಯ: ಮೋಡ ಕಟ್ಟಿದ ಮೇಲೆ ಕಟ್ಟಿದೆ ಮಳೆ ಯಾಕೆ ಆಗ್ತ ಇಲ್ಲ?
   ಉತ್ತರ: ಊಟಕ್ಕೆ ನೀಡಿದೆ. ಊಟ ಯಾಕೆ ಮಾಡುತ್ತಿಲ್ಲ?
   ತುಪ್ಪ ಇದ್ದರೂ ಯಾಕೆ ಬಿಡ್ತಾ ಇಲ್ಲ?
2. ದಾರಿಕಾರ: ಉಡಿಮ್ಯಾಲೆ ಉಡಿಕಟ್ಟಿರೋ ಜಾಣೆ
   ಉಡುಗಣಿಗ್ಹೋಗೊ ದಾರ್‍ಯಾವು?
   ಹೆಂಗಸು: ಹೂಮ್ಯಾಲೆ ಹೂ ಮುಡ್ಯೊ ಜಾಣ
   ನೀ ಯಾವ ದಾರ್‍ಯಾಗ ಹೋಗ್ತಿದಿಯೋ ಅದೇ ಹೋಗೊ ಕೋಣ!

ಅವಳು ಹೊಲದಲ್ಲಿ ಬಸಿರು ಹೊಟ್ಟೆಯ ಮೇಲೆ ಮಂಕರಿ ಕಟ್ಟಿಕೊಂಡು ಕೂರಿಗೆಯಲ್ಲಿ ಕಾಳು ಬಿತ್ತುತ್ತಿದ್ದಾಳೆ. ಅವನು ಮದುವೆಯಾಗಿದರೂ ಅವಳ ಮೇಲೆ ಮನಸ್ಸಾಗಿ ಪ್ರಶ್ನಿಸಿದ್ದಾನೆ. ಅವಳು ಅದಕ್ಕೆ ತಕ್ಕನಾಗೆ ಉತ್ತರಿಸಿದ್ದಾಳೆ.

8.8 ಗಣಿತಾತ್ಮಕ ಚಮತ್ಕಾರಗಳು

ಗಣಿತದ ರೂಪವನ್ನು ಒಗಟು ಮಾತಿನ ರೂಪದಲ್ಲಿ ಉಳಿಸಿಕೊಳ್ಳುವ ಪ್ರಯತ್ನದಿಂದಾಗಿ ಗಣಿತಾತ್ಮಕ ಚಮತ್ಕಾರಗಳು ಚಮತ್ಕಾಗಿ ಲೆಕ್ಕವಂತರಲ್ಲಿ ಉಳಿದುಕೊಂಡು ಬಂದಿವೆ. ಶಿಷ್ಠ ಕವಿಗಳು ಇಂತಹ ಪ್ರಯೋಗಗಳನ್ನು ಕಾವ್ಯದ ರೂಪದಲ್ಲಿ ಉಳಿಸಿ ಜನಪದರಿಗೂ ಸಹಕಾರಿಯಾಗಿದ್ದಾರೆ. ಇಲ್ಲವೇ ಜನಪದರ ಗಣಿತವನ್ನು ಶಬ್ದ ಸಂಪತ್ತಿನ ಸಹಾಯದಿಂದ ಕಾವ್ಯ ಪ್ರಯೋಗಗಳ ಮೂಲಕ ಉಳಿಸಿಕೊಟ್ಟಿರುವಂತೆ ಶಿಷ್ಠ ಕವಿಗಳು ಪ್ರಯತ್ನಿಸಿರುವಂತಿದೆ. ಹಸ್ತಪ್ರತಿಗಳಲ್ಲಿ ದೊರಕುವ ಇಂತಹ ಉದಾಹರಣೆಗಳು ಪಾಂಡಿತ್ಯವುಳ್ಳ ಪಂಡಿತರ ಬಾಯಲ್ಲಿ ಸುಲಲಿತವಾಗಿ ಸಾಗಿ ಬಂದಿರುವುದು ಸತ್ಯ.

ಉದಾ: ಒಂದೆರಡು ಮೂರ್‍ನಾಕು

ಸಂದೀಲೈದಾರೇಳು

ಇದನ್ನು ಇಪ್ಪತ್ತೊಂದರಿಂದ

ನಿಶ್ಶೇಷವಾಗಿ ಭಾಗಿಸಿ.

ಭಾಗಾಕಾರಕ್ಕೆ ಸಂಬಂಧಿಸಿದ ಲೆಕ್ಕಕ್ಕೆ ಉತ್ತರವೂ ಕೂಡ ಅದೇ ದಾಟಿಯಲ್ಲಿ ಉತ್ತರ ಏಳು ನಾಕಾರು ಮುಂದೊಂಬತ್ತೇಳು ಹೀಗೆ ಬರೆದುಕೊಳ್ಳಬೇಕು.

ಒಂದೆರೆಡು – 1 1

ಮೂರ್ನಾಕು – 3 3 3 3

ಸಂದಿಲೈದಾರೇಳು – 6 6 6 6 6 7

ಕೂಡಿಸಿ ಬರೆದಾಗ – 1 6 1 6 3 6 3 6 3 6 3 7

ಇದನ್ನು 21 ರಿಂದ ಭಾಗಿಸಿದಾಗ

ಏಳು–7

ನಾಕಾರು–6 6 6 6

ಮುಂದೊಂಬತ್ತೇಳು–9 9 9 9 7

ಬರುವ ಉತ್ತರ: 7 6 9 6 9 6 9 6 9 7

ಇಲ್ಲಿ ಇಡೀ ಲೆಕ್ಕವನ್ನು ಒಗಟು ಮಾತಿನ ಚಮತ್ಕಾರ ರೂಪದಲ್ಲಿ ಹಿಡಿದಿಡಲಾಗಿದೆ. ಇಂತಹ ಪ್ರಯತ್ನ ಸಾಮಾನ್ಯ ವ್ಯಕ್ತಿಗಳಿಂದ ಸಾಧ್ಯವಾಗದು. ಗಣಿತದಲ್ಲಿ ಪಾಂಡಿತ್ಯ ಹಾಗೂ ಇಲ್ಲಿನ ಸೂಕ್ತತರವಾದ ಸೂತ್ರದ ಹೊಳಹನ್ನು ಬಲ್ಲವರು ಇದರಲ್ಲಿ ನಿಪುಣರಾಗಿರುತ್ತಾರೆ. ಇಂತಹ ಒಂದು ಪ್ರಯತ್ನ ವ್ಯವಹಾರಿಕವಾಗಿ ಹುಟ್ಟಿಕೊಳ್ಳುವ ಚಮತ್ಕಾರ ಲೆಕ್ಕಗಳಿಗೆ ಪ್ರೇರಣೆ ಒದಗಿಸಲೂ ಬಹುದು. ಅದೇ ಮನರಂಜನಾತ್ಮಕವಾಗಿ ಬಳಸಿಕೊಂಡಾಗ ಚುಟುಕು ಲೆಕ್ಕದ ಗಣಿತಾತ್ಮಕ ಒಗಟು ಮಾದರಿಗಳು ರೂಪತಾಳಿ ಎಲ್ಲರನ್ನೂ ರಂಜಿಸಬಹುದು. ಪದಗಳ ಚಮತ್ಕಾರದಲ್ಲೇ ಮೋಸಗೊಳಿಸುವ ಜಾಣ್ಮೆ ತೋರಬಹುದು.

8.9 ಗಣಿತಾತ್ಮಕ ಒಗಟು ಚಮತ್ಕಾರಗಳು

ಗಣಿತವನ್ನೊಳಗೊಂಡ ಒಗಟಿನ ರೂಪದ ಚಮತ್ಕಾರಗಳು ಈ ಗುಂಪಿಗೆ ಸೇರುತ್ತವೆ. ಗಣಿತ ಅಂಶವನ್ನು ಪ್ರಕಟಗೊಳಿಸುತ್ತಲೇ ಮೋಸಗೊಳಿಸುವ ಜಾಣ್ಮೆ ಇಲ್ಲಿನ ಚಮತ್ಕಾರಗಳಲ್ಲಿ ಕಂಡುಬರುತ್ತವೆ. ಗಣಿತ ಮತ್ತು ಒಗಟು ಇವೆರಡೂ ಜೊತೆ ಜೊತೆಯಾಗಿಯೇ ಸೇರಿಕೊಂಡು ಹಾಸ್ಯ ಬುದ್ಧಿಕೌಶಲಗಳನ್ನು ವ್ಯಕ್ತಗೊಳಿಸುತ್ತವೆ.

ಉದಾ: ಕರೆಯಾಗೆ ಏಳೆಮ್ಮೆ

ದಡದ್ ಮ್ಯಾಲೆ ಹತ್ತೆಮ್ಮೆ

ಮನ್ಯಯಾಗೆ ಹಿಂಡೆಮ್ಮೆ

ಅಂಗಾರೆ ಏಸೆಮ್ಮೆ?

ಇಲ್ಲಿ 'ಏಳೆಮ್ಮೆ' 'ಹತ್ತೆಮ್ಮೆ' ಮತ್ತು ಹಿಂಡೆಮ್ಮೆ' ಪದಗಳಲ್ಲಿನ ಅರ್ಥ ಬೇರೆ ಬೇರೆ ಕೂಡಲೇ ಏಳು+ಹತ್ತು ಎಂದು ಕೂಡಿಸಿ ಲೆಕ್ಕ ಮಾಡಿ ಹೇಳ ಹೊರಟರೆ ಹಾಸ್ಯಾಸ್ಪದರಾಗುತ್ತೇವೆ. ಕೆರೆಯಲ್ಲಿ ಮಲಗಿದ ಎಮ್ಮೆಯನ್ನು ದಡಕ್ಕೆ ಹತ್ತಿಸಿ ಮನೆಗೆ ಹೊಡೆದುಕೊಂಡು ಬಂದು ಹಾಲು ಹಿಂಡಿಕೊಳ್ಳುವುದು ಎಂದು ಹೇಳುವುದೇ ಇಲ್ಲಿನ ಅರ್ಥ ಹೀಗೆ ಇನ್ನೊಂದು ಉದಾಹರಣೆ ಕೊಡುವುದಾದರೆ.

ಕೂಣಿಗ್ಯಾಗೆ ಒಂದು ರೊಟ್ಟಿ

ಹೆಂಚಿನ್ಯಾಗೆ ಹತ್ತು ರೊಟ್ಟಿ

ಪುಟ್ಯಾಗೆ ಆರು ರೊಟ್ಟಿ

ಅಂಗಾರೆ ಏಸುರೊಟ್ಟಿ?

ಇಲ್ಲೂ ಸಹ ಕೋಣಿಗೆಯಲ್ಲಿ ಸುಟ್ಟ (ತಟ್ಟಿದ) ರೊಟ್ಟಿಯನ್ನು ಹೆಂಚಿನಲ್ಲಿ ಬೇಯಲು ಹಾಕಿ, ನಂತರ ಆರಲು ಪುಟ್ಟಿಯಲ್ಲಿ ಹಾಕಬೇಕು. ಇಲ್ಲಿರುವುದು ಒಂದೇ ರೊಟ್ಟಿ ಗಣಿತಾತ್ಮಕ ಒಗಟಿನ ಸೊಗಡು ಇಲ್ಲಿ ಸ್ವಲ್ಪ ಹೊತ್ತು ಮೋಸಗೊಳಿಸಲು ಯತ್ನಿಸಿದರೂ ಅರ್ಥ ಹೊಳೆದ ಕೂಡಲೆ ಭಾಷೆಯ ಚಮತ್ಕಾರದ ಅರಿವು ನಮಗಾಗುತ್ತದೆ. ಯಾರೂ ಕೂಡ ತಟ್ಟನೆ ಮೋಸ ಹೋಗದೆ, ಮನರಂಜನೆಯ ಆಸ್ವಾದಕ್ಕೆ ಒಳಗಾದಲ್ಲಿ. ಇಂತಹ ಪ್ರಯತ್ನಗಳ ಬಗ್ಗೆ ಇನ್ನೂ ಯೋಚಿಸಬಹುದಾದ ಬುದ್ದಿ ಕೌಶಲ ಚುರುಕುಗೊಳ್ಳುತ್ತಾ ಇಂತಹ ಗುಣಿತಾತ್ಮಕ ಒಗಟುಗಳು ರಂಜನೆ ಒದಗಿಸಬಲ್ಲವು.

8.10 ಚುಟುಕು ಲೆಕ್ಕ ಚಮತ್ಕಾರಗಳು

ಚುಟುಕು ಲೆಕ್ಕ ಚಮತ್ಕಾರಗಳನ್ನು ಒಂದು ರೀತಿಯಲ್ಲಿ ಮೋಸಗೊಳಿಸುವ ಜಾಣ ಚಮತ್ಕಾರಗಳೆಂದೇ ಕರೆಯಬೇಕಾಗುತ್ತದೆ. ಉತ್ತರ ತಕ್ಷಣ ಹೊಳೆಯುತ್ತಿದ್ದರೂ ಸರಿಯೋ ತಪ್ಪೊ ಎಂದು ಯೋಚಿಸುವ ಹೊತ್ತಿಗಾಗಲೇ ಯಾವುದೋ ಒಂದು ಉತ್ತರವನ್ನು ಹೇಳಿ ಮೋಸಹೋಗಿರುತ್ತೇವೆ. ಮೋಸಗೊಳಿಸಿರುತ್ತೇವೆ. ಇವುಗಳಿಗೆ ಸಮಯ ಜಾಣ್ಮೆ ಅತ್ಯಂತ ಮುಖ್ಯ. ಇಲ್ಲಿ ಬರುವ ಅಕ್ಷರ, ಪದಗಳ ಚಮತ್ಕಾರ ಗಣಿತ ಮತ್ತು ಒಗಟಿನ ರೂಪದಲ್ಲಿ ಸೇರಿಕೊಂಡಿರುತ್ತವೆ.

ಚಾಲಿ(ಳೀ)ಸ್ ರೂಪಾಯ್‌ಕೆ ನಾಲ್ಕು

ಹಾಗಾದ್ರೆ ಒಂದುಕ್ಕೆಷ್ಟು?

ಇಲ್ಲಿ 'ಚಾಲಿಸ್' 'ಚಾಳೀಸ್' ಈ ಎರಡು ಪದಗಳ ಅರ್ಥ ಬೇರೆ ಬೇರೆ ಚಾಲಿಸ್ ಅಂದರೆ 40 (ಹಿಂದಿ) ಚಾಳೀಸ್ ಅಂದರೆ ಕನ್ನಡಕ ಚಾಲಿಸ್ ರೂಪಾಯ್ಕೆ 4 ಅಂದಾಗ ವಸ್ತು ಯಾವುದಾದರೂ ಸರಿ 10 ರೂ ಗೆ ಒಂದು ಎಂಬ ಅರ್ಥ ಚಾಳೀಸ್ ರೂಪಾಯ್‌ಕೆ 4 ಅಂದಾಗ ಕನ್ನಡಕ 25ಪೈಸೆಗೆ ಒಂದು ಎಂದು ಅರ್ಥ.

ಮುನ್ನೂರು ರೂಪಾಯ್‌ದಾಗೆ

ನಾನೂರು ತಗೊಂಡ್ರೆ

ಇನ್ನೆಷ್ಟು ಉಳೀತು?

ಇಲ್ಲಿ 'ಮುನ್ನೂರು' ನಾನೂರು' ಪದಗಳನ್ನು ಗಮನಿಸಿ ಮುನ್ನೂರರಲ್ಲಿ ನಾನೂರು ತೆಗೆದುಕೊಳ್ಳಲು ಸಾಧ್ಯವೆ? ಇದು ಮೊದಲ ಪ್ರಶ್ನೆ ಇಲ್ಲಿ ಏನೊ ಒಂದು ಚಮತ್ಕಾರ ನಾನೂರ ರಲ್ಲಿ ದೆಯಲ್ಲವೆ? ನಾನೂರು ಎಂಬುದನ್ನು ನಾ-ನೂರು ಎಂದು ಬಿಡಿಸಿಕೊಂಡಲ್ಲಿ 'ಮುನ್ನೂರ'ರಲ್ಲಿ ನಾ-ನೂರು ತೆಗೆದುಕೊಂಡರೆ ಉಳಿಯುವುದು ಇನ್ನೂರು ತಾನೆ?

ಮುದ್ದೆ ಮುರುಕಿಗೆ ಮೂರು ಅವರೆ ಕಾಳು

ಹಾಗಾದ್ರೆ ಮುದ್ದಿಗೇಸ್ ಬಿದ್ವು?

ಇಲ್ಲಿ 'ಮುದ್ದೆ ಮುರುಕು' ಪದ ಇದರ ಅರ್ಥ ಒಂದು ಮುದ್ದೆಯಲ್ಲಿನ ಅರ್ಧ ಭಾಗಕ್ಕೆ ಮುದ್ದೆ ಮುರುಕು ಎಂದು ಅರ್ಥ ಮುದ್ದೆಗೆ 3 ಅವರೆಕಾಳು ಆದರೆ ಪೂರ್ಣ ಮುದ್ದೆಗೆ ಆರು ಇನ್ನು ನೀವೇ ಯೋಚಿಸಿ.

1. ನಾಲ್ಕೂವರೆ ಅರ್ಧದ ಎರಡರಷ್ಟು ಅಂದ್ರೆ-ಎಷ್ಟು?
2. 7-2 ಆಣೆಗೆ 4-5 ಬಾಳೆಹಣ್ಣು ಹಾಗಾದ್ರೆ ಒಂದುಕ್ಕೆಷ್ಟು?
3. ಅಡ್ಡ ದುಡ್ಡೆ 3 ಸೇರು ಬೆಲ್ಲ ಆದ್ರೆ ನಿಮ್ಮಪ್ಪನ ಗಡ್ಡಕ್ಕೇನು ಬಿತ್ತು?

ಹೀಗೆ ಇವೆಲ್ಲ ಮೋಸದ ಚಮತ್ಕಾರಗಳು ಕೇಳುಗನನ್ನು ತಟ್ಟನೆ ಮೋಸಗೊಳಿಸಿ, ಗೊಂದಲಕ್ಕೊಳಪಡಿಸಿ, ತಕ್ಷಣ ಉತ್ತರ ಬಯಸುತ್ತಾ ಗೆಲ್ಲುವುದಕ್ಕಾಗಿ ಕಟ್ಟಿಕೊಂಡವುಗಳು. ಇಲ್ಲಿನ ಹಾಸ್ಯ ವಿನೋದ. ರಂಜನೆ ಬುದ್ದಿ ಕೌಶಲ ಮಾತ್ರ ಎಲ್ಲರನ್ನೂ ಚಕಿತ ಗೊಳಿಸಬಲ್ಲುದು.

8.11 ಪತ್ರ ಚಮತ್ಕಾರಗಳು

ಜನಪದ ಬುದ್ಧಿಕೌಶಲದ ಭಾಷಾ ಚಾತುರ್ಯದ ಪ್ರತೀಕವೆನಿಸಿದ ಗಣಿತ ಚಮತ್ಕಾರದ ಒಂದು ಭಾಗವೇ ಪತ್ರ ಚಮತ್ಕಾರ ಪತ್ರ ಬರೆಯುವುದು ಒಂದು ಕಲೆ ತಾನೆ? ತಂದೆ-ತಾಯಿ, ಅಣ್ಣ-ತಂಗಿ, ಮಾವ-ಅಳಿಯ, ಪ್ರಿಯ-ಪ್ರೇಯಸಿ, ಅಕ್ಕ-ತಮ್ಮ, ಗೆಳೆಯ-ಗೆಳತಿ, ಪರಿಚಯವಿರದ ಇತರ ವ್ಯಕ್ತಿ ಮೊದಲಾದವರಿಗೆ ಪತ್ರ ಬರೆಯುವಾಗ ಅನುಸರಿಸುವ ಕ್ರಮ ಹಲವಾರು ಬರೆಯಲ್ಲಿವೆ ಪತ್ರದೊಳಗಿನ

ವೈವಿಧ್ಯ 2 ಬಗೆಯದು ಒಂದು ಸರಳನೋಟಕ್ಕೆ ಅರ್ಥವಾಗುವ ಕ್ರಮ: ಇನ್ನೊಂದು ಸರಳವಾಗಿ ಹೇಳುವುದನ್ನು ಗುಪ್ತವಾಗಿ, ಚಮತ್ಕಾರಯುತವಾಗಿ ಹೇಳುವ ರೀತಿ.

ಮೊದಲನೆಯದು ಪ್ರತಿಯೊಬ್ಬರಿಗೂ ಗೊತ್ತಿರುವ ಸಂಗತಿ, ಎರಡನೆಯದು ಅಪರೂಪ ಸೀಮಿತ ಜನಪದರಲ್ಲಿರುವ ಪತ್ರ ಚಮತ್ಕಾರ ಈ ಗುಂಪಿಗೆ ಸೇರಿದ್ದು ಇದು ವಿನೋದಕ್ಕೆ ಬುದ್ದಿ ಪರೀಕ್ಷೆಗೆ ಶ್ರಮವಹಿಸಿ, ಹೋಲಿಕೆ ಉಪಮಾದಿ ರೂಪಕಗಳಿಂದ ವ್ಯಕ್ತಿ ಸ್ಥಳ ವಸ್ತುಗಳ ಹೆಸರುಗಳನ್ನು ಅಳವಡಿಸಿಕೊಂಡು ಬರೆದ ರೀತಿಯಲ್ಲಿ ಕಂಡು ಬರುತ್ತದೆ. ಇಲ್ಲಿ ಹೇಳುವ ವಿಷಯ ಸಾಮಾನ್ಯ ಸಂಗತಿಯೇ ಆಗಿದ್ದರೂ ಅದನ್ನು ಹೇಳುವ ವಿಧಾನ ಹೊಸದು.

"ಅರಸನ ಸತಿಯ ಹಿಂದೂರಿನಲ್ಲಿರುವ ಜಲಜ ಮಿತ್ರಪ್ಪನವರಿಗೆ ಸರ್ವ ದಿಬ್ಬದಲ್ಲಿರುವ ರಾಧಾ ಮಾಡುವ ನಮಸ್ಕಾರಗಳು

ಅಚಲ ಸುತೆ ಪತಿಯ ಸಂವತ್ಸರದಲ್ಲಿ ಹಿರೇ ಮಾಸದಲ್ಲಿ ರುಕ್ಮಾಂಗದ ತಿಥಿಯಲ್ಲಿ ಹರಿಯ ವೈರಿಯ ಏರಿದ ಅಳಿಯನ ಸತಿಯ ಹೆಸರಿನ ನಕ್ಷತ್ರದಲ್ಲಿ ನನ್ನ ಮಗಳು ಋತುಮತಿಯಾಗಿರುತ್ತಾಳೆ.

ತಾವು ಬರುವಾಗ ತಾಯಿ ತಮ್ಮನ ಕಾಯಿ ಒಂದು ಇಬ್ಬರ ಹೆಂಡಿರ ಕಾಯಿ ಒಂದು ಒಣಕೆ ಮುಟ್ಟದ ಅಕ್ಕಿ ಒಂದು ಸೇರು ಬೆಣ್ಣೆ ಕಾಸದ ತುಪ್ಪ ಒಂದು ಸೇರು ದಾಹ ಅಡಗಿಸುವ ಹಣ್ಣು ಐದು–ಇವುಗಳನ್ನು ತೆಗೆದುಕೊಂಡು, ತುರುಕರು ಪಾನಮಾಡುವ ಗೌಡನನ್ನು ಕರೆದುಕೊಂಡು ತಪ್ಪದೆ ಬರಬೇಕು.

ಇತಿ

ರಾಧಾಸಾನಿ ಮಾಡುವ ನಮಸ್ಕಾರಗಳು"

ಇಂಥ ಪತ್ರಗಳು ನಮಗೆ ಸಿಗುವುದೇ ಅಪರೂಪ ಎಂದೆನ್ನಬೇಕು. ಇಡೀ ಈ ಪತ್ರ ಚಮತ್ಕಾರದ ಸ್ವರೂಪ. ರಚನೆ ಬೆಳವಣಿಗೆಗಳನ್ನು ಗಮನಿಸಿದಾಗ ಹೋಲಿಕೆಗಳ ಮಾಲಿಕೆಯಲ್ಲಿ ಜನಪದರು ಕಟ್ಟಿಕೊಂಡ ಕಲ್ಪನೆಯ ಸೊಗಸು ಎಂಥವರಿಗೂ ಆಕರ್ಷಣೀಯ ಅನುಕರಣೀಯ: ಆದರಣೀಯ ಇಂಥ ಪತ್ರ ಚಮತ್ಕಾರಗಳ ಬೆಳವಣಿಗೆ ತುಂಬಾ ಕಡಿಮೆ ಇದ್ದರೂ ಮೂರ್ತಿ ಚಿಕ್ಕದಿದ್ದರೂ ಕೀರ್ತಿ ದೊಡ್ಡದು ಎಂಬಂತೆ. ಒಗಟಿನ ನಿಗೂಢತೆಯನ್ನು ತುಂಬಿಕೊಂಡು, ಭಾಷೆಯ ಜಾಣ್ಮೆಯನ್ನು ಚಮತ್ಕಾರಯುತವಾಗಿ ಪ್ರಕಟಪಡಿಸುವಂತೆ ಕಾಣಬರುವುದು ಮೆಚ್ಚಬೇಕಾದ ಸಂಗತಿಯೆ.

ಈಶ್ವರ ನಾಮ ಸಂವತ್ಸರದ ಚೈತ್ರ ಮಾಸದ 8ನೇ ತಿಥಿಯ ಉತ್ತರಾ ನಕ್ಷತ್ರದಲ್ಲಿ ನನ್ನ ಮಗಳು ದೊಡ್ಡವ(ಋತುಮತಿ)ಳಾಗಿರುತ್ತಾಳೆ. ತಾವು ಬರುವಾಗ ಒಂದು ಮಾವಿನಕಾಯಿ. ಒಂದು ಸೌತೆಕಾಯಿ. ಒಂದು ಸೇರು ಏಲಕ್ಕಿ, ಒಂದು ಸೇರು ಜೇನುತುಪ್ಪ, ಐದು ನಿಂಬೆ ಹಣ್ಣು–ಇವುಗಳನ್ನು

ತೆಗೆದುಕೊಂಡು ಅಳಿಯ ಕೃಷ್ಣನನ್ನು ಕರೆದುಕೊಂಡು ತಪ್ಪದೆ ಬರಬೇಕು. ಇತಿ ರಾಧಾ ಮಾಡುವ ನಮಸ್ಕಾರಗಳು.

ಹಳ್ಳಿಗಳಲ್ಲಿ ಪಾಂಡಿತ್ಯವುಳ್ಳ ಪ್ರತಿಭೆಯುಳ್ಳ ವ್ಯಕ್ತಿಗಳಲ್ಲಿ ಇಂತಹ ಪ್ರಯೋಗಗಳು ಸಿಗಲು ಸಾಧನ ಒಗಟು ಚಮತ್ಕಾರದ ಸೊಗಡನ್ನು ಪಾಂಡಿತ್ಯವುಳ್ಳ ಭಾಷೆಯ ಮೂಲಕ ಇಲ್ಲಿ ನಿರೂಪಣೆಗೈದು, ಸಾಕಷ್ಟು ಯೋಚಿಸುವ ತಡಕಾಡುವ ಪ್ರಯತ್ನಕ್ಕೆ ತೊಡಗಿಸಿರುವುದೇ ಇಲ್ಲಿನ ವೈಶಿಷ್ಟ್ಯವಾಗಿದೆ.

8.12 ಪ್ರಶ್ನೆ ಚಮತ್ಕಾರಗಳು

ಕೇಳಿದ ಪ್ರಶ್ನೆಗೆ ಬೇಗನೆ ಯೋಚಿಸಿ ಉತ್ತರಿಸುವ ಕೌಶಲ್ಯ ಇಲ್ಲಿ ಮುಖ್ಯ ಹಾಗೆಂದ ಮಾತ್ರಕ್ಕೆ ಪ್ರತಿಯೊಬ್ಬರೂ ಎಲ್ಲ ಪ್ರಶ್ನೆಗಳಿಗೂ ಉತ್ತರಿಸುತ್ತಾರೆಂದಲ್ಲ. ಪ್ರಶ್ನೆಗಳ ವಿಷಯ ಗೊತ್ತಿರಬೇಕಲ್ಲ? ಇಲ್ಲಿನ ಪ್ರಶ್ನೆಗಳು ಪುರಾಣ, ಭಾಗವತ, ರಾಮಾಯಣ, ಮಹಾಭಾರತಗಳಿಗೆ ಸಂಬಂಧಿಸಿದ್ದಾಗಿದ್ದರೆ? ಇವುಗಳ ಕತೆಯ ಅರಿವು ಇರಬೇಕು. ಹಳ್ಳಿಗರಲ್ಲಿ ಕೆಲವರು ಇಂತಹ ಪ್ರಯತ್ನ ಮಾಡಬಹುದು. ಸಾಮಾನ್ಯವಾಗಿ ಜನಜನಿತವಾದ ಕಥೆಗಳಾಗಿದ್ದರೆ ಆಗಾಗ ಮೆಲುಕು ಹಾಕುವಂತಹವಾಗಿದ್ದರೆ ನೆನಪಿನಲ್ಲಿ ಉಳಿಯಲು ಸಾಧ್ಯ ಪ್ರಶ್ನೆ ಕೇಳಿದವನ ಹಿನ್ನೆಲೆಯಲ್ಲಿ ಅವನು ಬಳಸಿದ ಪದದ ಇಲ್ಲವೆ ಮಾತಿನ ಅರ್ಥಸೃಷ್ಟಿಯ ಕಥೆಯನ್ನು ನೆನಪಿಟ್ಟುಕೊಳ್ಳುವುದು ಇಲ್ಲಿನ ವಿಶೇಷವೆನಿಸಿದೆ. ಅವಿದ್ಯಾವಂತರಾದ ಜನಪದರು ಒಬ್ಬರಿಂದ ಒಬ್ಬರಿಗೆ ಬಂದ ಕಥೆಗಳನ್ನು ನೆನಪಿಟ್ಟುಕೊಂಡು ಹೇಳುವುದು ಅವರ ಬುದ್ಧಿವಂತಿಕೆಯ ಲಕ್ಷಣವಾಗಿದೆ. ಚಮತ್ಕಾರಗಳಲ್ಲಿ ಈ ಬಗೆಯದು ಉಳಿದುಕೊಂಡು ಬಂದಿರುವುದು ಗಮನಾರ್ಹ.

ಪ್ರಶ್ನೆ: ಮುಟ್ಟಿ ಕೆಟ್ಟವನಾರು? ಮುಟ್ಟದೆ ಕೆಟ್ಟವನಾರು?

ಮುಟ್ಟಿ ಕೆಟ್ಟವನಾರು–ಎಂದು ಹೇಳುವಲ್ಲಿ ಬಳಸಿರುವ 'ಮುಟ್ಟಿ' ಅನ್ನುವ ಪದ ಯಾರನ್ನು ಮುಟ್ಟಿ? ಕೆಟ್ಟವ ಅಂದಾಗ ಯಾಕೆ? ಎಂಬ ಪ್ರಶ್ನೆ ಇಲ್ಲಿವೆ. ಒಂದೇ ಮಾತಿನಲ್ಲಿ ಹೇಳಬೇಕಾದರೆ ದೇವೇಂದ್ರ 'ಅಹಲ್ಯೆ'ಯನ್ನು ಮುಟ್ಟಿ ಕೆಟ್ಟ ಎನ್ನಬಹುದು ಅಹಲ್ಯೆಯನ್ನು 'ಮುಟ್ಟಿ'ದ್ದರಿಂದ ಗೌತಮ ಋಷಿಯಿಂದ 'ಸಹಸ್ರಾಕ್ಷನಾಗು' ಎಂಬ ಶಾಪವನ್ನು ಪಡೆದು ಕೆಟ್ಟವನೆನ್ನಿಸಿಕೊಳ್ಳಲಿಕ್ಕೆ ಕಾರಣನಾದ.

ಮುಟ್ಟದೆ ಕೆಟ್ಟವನಾರು–ಎಂದು ಹೇಳುವಲ್ಲಿ 'ಮುಟ್ಟದೆ' ಎನ್ನುವ ಪದ ವಿಶಿಷ್ಟತೆಯನ್ನು ಪಡೆದಿದೆ ಯಾರನ್ನು ಮುಟ್ಟದೆ ಯಾಕೆ ಕೆಟ್ಟ? ಎಂಬ ಪ್ರಶ್ನೆಗಳು ಇಲ್ಲಿವೆ. ದುಶ್ಯಾಸನ ಸಭಾಮಧ್ಯದಲ್ಲಿ ಅಣ್ಣ ದುರ್ಯೋಧನನ ಆಜ್ಞೆಯಂತೆ ದ್ರೌಪದಿಯ ಸೀರೆಯನ್ನು ಸೆಳೆಯುವದರಲ್ಲಿ ಕೆಟ್ಟವನಾಗಿ ತೋರಿಸಿಕೊಂಡ. ದ್ರೌಪದಿಯ ಮೈಸುಖ ಪಡೆಯದಿದ್ದರೂ ಅವಳ ಸೀರೆಯ ಸೆರಗಿಗೆ ಕೈ ಹಾಕಿದ್ದು ತನ್ನ ಅವನತಿಗೆ ತಾನೇ ಕೊಡಲಿ ಪೆಟ್ಟು ಹಾಕಿಕೊಂಡತಾಯಿತು. ಮುಂದೆ ಭೀಮ ತನ್ನ ಎದೆಯನ್ನು ಬಗೆದು ರಕ್ತ ಕುಡಿಯುವ ಸ್ಥಿತಿಯನ್ನು ಭರಿಸಿಕೊಂಡದ್ದು–ಈ ಕಾರಣ ಮುಟ್ಟದೆ ಕೆಟ್ಟವನಾದ ದುಶ್ಯಾಸನ ತನ್ನ ಪ್ರಾಣಕ್ಕೂ ಸಂಚಕಾರವನ್ನು ತಂದುಕೊಂಡ ಹೀಗೆ ರಾಮಾಯಣದ ರಾವಣ ಸೀತೆಯನ್ನು ಅಪಹರಿಸಿ ಒಯ್ದುದ್ದರಿಂದ ರಾಮನಿಂದ ಹತನಾಗುವ ದುಸ್ಥಿತಿಯನ್ನು ತಂದುಕೊಂಡ

ಹಾಗೇ ಕೀಚಕ ದ್ರೌಪದಿಯನ್ನು ಕಾಮಪಿಪಾಸೆಯ ದೃಷ್ಟಿಯಿಂದ ಕೆಣಕ ಹೋಗಿ ಭೀಮನಿಂದ ಒದೆ ತಿಂದು ಮುಟ್ಟದೆ ಕೆಟ್ಟವನಾದ.

'ಮುಟ್ಟಿ' ಮುಟ್ಟದೆ' ಎನ್ನುವ ಪದಗಳು ಕೆಟ್ಟವನಾರು? ಏಕೆ? ಎಂಬ ಪ್ರಶ್ನೆಗೆ ಕೊಡುವ ಉತ್ತರದ ಹಿಂದೆ ದೀರ್ಘ ಕಥೆಯನ್ನೇ ಹೊಂದಿ ವಿವಿದಾರ್ಥದ ಕಲ್ಪನೆಗಳನ್ನು ನಮಗೆ ತಂದುಕೊಟ್ಟಿವೆ. ಹೀಗೆ ಇನ್ನೆಷ್ಟೋ ಉದಾಹರಣೆಗಳು ನಮಗೆ ಆಶ್ಚರ್ಯವನ್ನುಂಟು ಮಾಡುವುದರಲ್ಲಿ ಸಂದೇಹವಿಲ್ಲ. ಕೊಟ್ಟು ಕೆಟ್ಟವನಾರು? (ಕರ್ಣ-ಇಂದ್ರನ ರೂಪದ ಕೃಷ್ಣನಿಗೆ ಕವಚ ಕುಂಡಲಗಳನ್ನು ಕೊಟ್ಟು) ಕೊಡದೆ ಕೆಟ್ಟವನಾರು? (ದುಯೋಧನ-ಪಾಂಡವರಿಗೆ ಹತಃ ಕುಂಜರ ಎಂದು ಸುಳ್ಳು ಹೇಳಿ) ಆಡದೆ ಕೆಟ್ಟವನಾರು? (ಸಹದೇವ - ಭವಿಷ್ಯ ಗೊತ್ತಿದ್ದು ಏನನ್ನೂ ಹೇಳದೆ) ಹೀಗೆ ಇನ್ನೂ ಅನೇಕ ಪ್ರಶ್ನೆ ಚಮತ್ಕಾರಗಳು ಒಂದೊಂದು ಬಗೆಯ ಚಾತುರ್ಯದ ಸೊಗಡನ್ನು ಹೊರಚೆಲ್ಲಬಲ್ಲವು.

8.13 ಪದಸಮಸ್ಯ ಚಮತ್ಕಾರಗಳು

ಕಂತಿ-ಹಂಪನ ಸಮಸ್ಯೆಗಳ ಹಿನ್ನೆಲೆ ರೂಪದಲ್ಲಿ ವಾಗ್ವಾದದ ಚಾತುರ್ಯದ ಸೊಗಡಿನಲ್ಲಿ ವಿಶಿಷ್ಟ ವ್ಯಕ್ತಿ, ಕವಿ, ರಾಜ, ವಸ್ತು, ನದಿ, ಆಭರಣ ಮೊದಲಾದ ವಿಷಯಗಳ ಪದಗಳ ಹೆಸರಿನ ಅರ್ಥ ವಿಶ್ಲೇಷಣೆಯಲ್ಲಿ ಪದಸಮಸ್ಯ ಚಮತ್ಕಾರಗಳು ಬೆಳೆದುಕೊಂಡು ಬಂದಿವೆ. ಒಂದು ಪದದಲ್ಲಿನ ಎಲ್ಲಾ ಅಕ್ಷರಗಳ ಅಕ್ಷರ ಚಲ್ಲಾಟವಾಡಿ ಒಂದೊಂದು ಅರ್ಥವನ್ನು ಕಂಡುಕೊಳ್ಳುವ ಪ್ರಯತ್ನ ಇಲ್ಲಿನ ವಿಶೇಷತೆಯೆನಿಸಿದೆ.

ಕಂತಿ ಹಂಪನ ಸಮಸ್ಯೆಯಲ್ಲಿ ಕಂತಿಯು ಅಭಿನವ ಪಂಪನಾದ ನಾಗಚಂದ್ರನಿಗೆ ಕೇಳುವ ಸಮಸ್ಯೆಯ ಒಂದು ಪದಸಮಸ್ಯಾ ಚಮತ್ಕಾರ ಹೀಗಿದೆ.

ಕಡೆದೊಡೆಯಲು ಹರನಾಮಂ

ನಡುದೊಡೆಯಲು ಹವಿಯ ನಾಮ ಮೊದಲಕ್ಕರವಂ

ತೊಡೆಯಲು ತಾಮ ರವಿನಾಮಂ

ಕಡೆಯಿಂದೋದಲ್ಕೆ 'ವಿರಹ' ಕೇಳಲೋ ಪಂಪ

ಉತ್ತರ: ಹರವಿ(ಹರ-ಹವಿ-ರವಿ)

ಇಂತಹ ಪ್ರಯೋಗಗಳನ್ನು ಹುಟ್ಟುಹಾಕುವ ಪ್ರವೀಣರೂ ಹಳ್ಳಿಗರಲ್ಲಿ ಇಲ್ಲದಿಲ್ಲ. ವಿಶಿಷ್ಟವಾದ ಒಂದು ಹೆಸರು ಕಣ್ಣಿಗೆ ಬಿದ್ದರೆ ಸಾಕು. ಅದರಲ್ಲಿನ ಎಲ್ಲಾ ಅಕ್ಷರವನ್ನು ಆರಿಸಿಕೊಂಡು, ಅರ್ಥಹೊಂದುವ ಪದಗಳನ್ನಾಗಿ ಕೂಡಿಸಿ, ಹೊಸ ಹೊಸ ಅರ್ಥವನ್ನು ಸೃಷ್ಟಿಯಾಗುವಂತೆ ಮಾಡಿ, ಮಾತಿನ ಚಾತುರ್ಯದಲ್ಲಿ ಪ್ರಶ್ನೆ ಕೇಳಿ, ಉತ್ತರಿಸುವ ವ್ಯಕ್ತಿಯ ಬುದ್ದಿ ಕೌಶಲವನ್ನು ಚಿಂತನೆಯ ಒರೆಗೆ

ಹಚ್ಚಿಸಿ ನೋಡುವ ಪ್ರಯತ್ನ ನಿಜಕ್ಕೂ ಕುತೂಹಲಕಾರಿಯಾದುದು. ಅಕ್ಷರ ಜ್ಞಾನ ಅರ್ಥಗಳ ನೆರವಿನಿಂದ ಯಾರು ಬೇಕಾದರು ಇಂಥವಕ್ಕೆ ಉತ್ತರಿಸಬಹುದು.

ಇದು ನೋಡಿ ಒಬ್ಬ ಕವಿ ಹೆಸರು. ಐದಕ್ಷರ ಇದೆ. ಇದ್ರಾಗೆ 1,2,3ನೇ ಅಕ್ಷರ ಸೇರಿದ್ರೆ ದೇವರಿಗೆ ಬೀಸೊ "ಬೀಸಣಿಕೆ" ಅಂತ ಅರ್ಥ ಕೊಡ್ತತಿ: 4,2,3ನೇ ಅಕ್ಷರ ಸೇರಿದ್ವಂದ್ರೆ "ಯುದ್ಧ" ಅನ್ನೋದ್ರರ್ಥಾನ: 1. 3ನೇ ಅಕ್ಷರ "ದೂತ" ಎಂಬದ್ನ; 4, 3ನೇವು "ಹಾರ" ಅಂತ ಅರ್ಥಾನ: 2,3ನೇ ಅಕ್ಷರಗಳು ಭೂಮಿ ಮೇಲೆ ಬೆಳೆಯೊ ಒಂದು ವಸ್ತೂನ ಸೂಚಿಸ್ತವೆ. ಹಾಗಾದ್ರೆ ಆ ಕವಿ ಹೆಸರೇನು ಹೇಳ್ತೀರಾ?

ಉತ್ತರ: ಚಾಮರಸ

1, 2, 3ನೇ ಅಕ್ಷರವೇ ಚಾಮರ (ಬೀಸಣಿಕೆ)

4,2,3ನೇ .. ಸಮರ (ಯುದ್ಧ)

1,3ನೇ .. ಚಾರ (ದೂತ)

4,3ನೇ .. ಸರ (ಹಾರ)

2,3ನೇ .. ಮರ (ವಸ್ತು)

ಯಾವ ಪದದಲ್ಲಿ ಹೆಚ್ಚಿನ ಅರ್ಥಗಳನ್ನು ಹೊರಗೆಡವಲು ಸಾಧ್ಯವೋ ಅಂತಹ ಪದಗಳನ್ನು ಇಲ್ಲಿನ ಭಾಷಾ ಚತುರರು ಆಯ್ಕೆ ಮಾಡಿಕೊಳ್ಳಬಲ್ಲರು. ಹಾಗಂತ ಎಲ್ಲಾ ಪದಗಳಿಗೂ ವಿಶಿಷ್ಟ ಅರ್ಥವನ್ನು ಕೊಡಲು ಸಾಧ್ಯವಿಲ್ಲ. ವಿಶಿಷ್ಟ ಪದಗಳಾಗಿದ್ದು. ಎಲ್ಲಾ ಅರ್ಥ ಬಿಡಿಸಿಯಾದ ಮೇಲೆ ಇಂಥದ್ದು ಸೂಕ್ತ ಎಂಬ ಹಾಗೆ ಸುಳುವು ದೊರಕಬಲ್ಲ ಪದಗಳ ಆಯ್ಕೆ ಮುಖ್ಯ ಉದಾ: ಕುಮಾರ ವ್ಯಾಸ, ಕನಕದಾಸ, ಪುರಂದರದಾಸ, ಅರಿಕೇಸರಿ, ನರಿಕೇಸರಿ, ಮದನಕುಮಾರ, ಮಹಿಪತಿ, ದಶಶಿರ, ಬಕಾಸುರ, ಹರಿವಾಣ, ಗೋದಾವರಿ, ಮದೀನ ಗಡಿಯಾರ, ವಿನಾಕ ಈ ಮೊದಲಾದ ಪದಸಮಸ್ಯಾ ಚಮತ್ಕಾರಗಳಲ್ಲಿನ ಅಕ್ಷರ ಚಾತುರ್ಯ, ಅರ್ಥ ವಿಶಿಷ್ಟತೆ ಬಿಡಿಸುವವನ ಚಕಚಕ್ಯತೆಯ ಮೇಲಿದೆ.

ಗಾದೆಯ ಗಣಿಯನು ಶೋಧಿಸಿ ನೀನೋಡು

ಬೂದ್ಯಲ್ಲ ಅಣ್ಣ ಮಣ್ಣಲ್ಲ–ಅನುಭವ

ಹದಗೊಂಡು ಅಲ್ಲಿ ಜೀವಂತ

ಈ ಮಾತಿನ ಅಂತರಾತ್ಮವನ್ನು ಗಮನಿಸಿದಾಗ ಗಾದೆಗಳು ಜನಪದರ ಜೀವನಾನುಭವಗಳ ಹದಗೊಂಡ ಪ್ರತಿರೂಪಗಳ ಸೃಷ್ಟಿ ಎನ್ನಬಹುದು. ಒಂದೊಂದು ಚಿಕ್ಕ ವಾಕ್ಯ ಕೂಡ ನಿಗೂಢಾರ್ಥವನ್ನು ಒಳಗೊಂಡಿದ್ದು ವಿವೇಕ, ಜ್ಞಾನ, ಬೋಧನೆ, ಮಾರ್ಗದರ್ಶನ ಇತ್ಯಾದಿಗಳನ್ನು ತಿಳಿಸಿಕೊಡುತ್ತವೆ. ಕೆಲವೊಂದು ನುಡಿಗಟ್ಟುಗಳಲ್ಲಿ ಬರುವ ಭಾಷಿಕ ಚಮತ್ಕಾರದ ಪದಗಳು ಒಂದೊಂದು ಕತೆಯನ್ನೇ ವಿವರಿಸಿ ಹೇಳಬಲ್ಲವು. ಇಡೀ ವಾಕ್ಯ ಹಿವಚನದಂತೆ ಕಂಡರೂ ಒಂದೂಂದು ಕತೆಯನ್ನೇ ವಿವರಿಸಿ ಹೇಳಬಲ್ಲವು ಇಡೀ ವಾಕ್ಯ ಹಿವಚನದಂತೆ ಕಂಡರೂ ಅರಿತು ನಡೆಯುವ ವ್ಯಕ್ತಿ ಸೂಕ್ಷ್ಮವನ್ನು ತಿಳಿದುಕೊಂಡು ಬಾಳುವೆ ಮಾಡಿದ್ದಾದರೆ ಅದೇ ಒಂದು ದೊಡ್ಡ ಕೊಡುಗೆ–ಈ ಗಾದೆ ಮಾತಿನ ಚಮತ್ಕಾರಕ್ಕೆ ಸಲ್ಲುತ್ತದೆ.

"ಹೀಗೆ ನಿನ್ನಂತೋನು ಹೊಸ್ದಾಗಿ ಮದುವ್ಯಾಗಿದ್ನಲ, ಅವಗ ಅತ್ತೆ ಮನಿಗೆ ಹೋದ ಹೊಸ ಅಳಿಯಗೆ ಅತ್ತೆ ಚೆನ್ನಾಗಿ ನೋಡಿಕೊಳ್ತಿದ್ಲು. ಹಿಂಗಿರಕರೆ ಒಂದ್ಸಾರಿ ಮನಸ್ತಾಪ ಬಂದಿತ್ತು. ಅದೆ ಮಕದಾಗ ತನ್ನ ಮನೆಕಡೆ ಹೊಂಟಿದ್ದ. ದಾರ್‍ಯಾಗೆ ಅವನ ಗೆಳೆಯ ಸಿಕ್ಕು "ಏನೋ ಆಗ್ಲೆ ಹೊಂಟು ಬಿಟ್ಟಿದಿ?" ಅಂದ. ಅವನು "ಏನ್ ಮಾಡೋದು ಬ್ಯಾಜಾರಾತು ಅದ್ಯೆ" ಅಂದ. ಮೊಕ ನೋಡಿ ಆಳ್ತೆ ಹಾಕಿದ ಗೆಳೆಯ ಅತ್ತೆಗೂ ಇವ್‌ನಿಗೂ ಏನೋ ನಡೆದಿರಂಗೆ ಅಂತ ತಿಳ್ದು.

"ಹಾಕ್ಮಣೆ ನೂಕ್ಮಣೆ ಯಾಕ್ಮಣೆ ಕತೆ ಗೊತ್ತಾ?" ಅಂದ. ಅವನಿಗೆ ಸಿಟ್ಟು ಬಂದು "ಯಾವ್ ಕತೆ ಹ್ಯಂಗಿದ್ರೇನು ಹೋಗ! ಸರಿ ಹೊತ್ತಾತು ಹೋಕನಿ" ಅಂದು ಹೊಂಟೇ ಹೋದ."

"ಈ ಕತೆಯಲ್ಲಿ ಬರುವ ಗಾದೆಮಾತಿನ ವಾಕ್ಯ ಇಡೀ ಅವನ ಬದುಕಿನ ಸಂದರ್ಭದಲ್ಲಿ ನಡೆದ ಎಲ್ಲ ಘಟನೆಯನ್ನು ಹೇಳುತ್ತದೆ. ಅ ಮೂರು ಪದಗಳಲ್ಲಿನ ಒಂದೊಂದು ಕತೆ ಬಹಳ ಸ್ವಾರಸ್ಯಕರವಾಗಿದೆ.

"ಈ ಕತೆ ಅಳಿಯಾಗೋರಿಗೆ ಗೊತ್ತಿದ್ದೆ ಇರ್ತಿ ಅಂತ ಗೆಳೆಯ ಅಂಗ್ಹೇಳಿದ್ದ. ಅತ್ತೆ ಮನಿಗೆ ಮೊದ್ಲೆ ಸಾರಿ ಅಳಿಯ ಹೋದಾಗ ಅತ್ತೆ 'ಬಾ ತಮ್ಮ, ಈಗ ಬಂದ್ಯಾ, ಕೂತ್ಕೊ ಮಣೆ ಹಾಕ್ದನಿ" ಅಂತ ಹಾಕಿ, ಉಪಚಾರ ಮಾಡಿದ್ಲು. ಇದೆಯೆಲ ಹಾಕ್ಮಣೆ?

ಹಿಂಗೆ ಹೋಗಿ ಬಂದು ಮಾಡ್ತಿರಬೇಕರೆ ಮತ್ತೊಂದು ಸಾರಿ ಅತ್ತೆ 'ಬಾತಮ. ಯಾವಾಗ ಬಂದೆ? ಅಂತ ಮಾತಾಡಿಸ್ದಂಗೆ, ಮಣೆ ಹಾಕಿಕೊಡದಂಗೆ, ಅಲ್ಲೆ ಇದ್ದ ಮಣೇನು ಸೈತ ನೂಕಿ ಕೂಡ್ತಿದ್ದಿಲ್ಲ. ಅವನಾಗೆ ಕುಂತ್ರೆ ಕೂತ್ಗೊಬೇಕು. ಮಾತಾಡ್ಸಿದ್ರೆ ಮಾತಾಡ್ಬೇಕು. ಉಣ್ಣಾಕಿಕ್ಕಿದ್ರೆ ಉಣ್‌ಬೇಕು. ಇದೆಯಲ್ಲ ಯಾಕ್ಮಣೆ?

ಇಂತಹ ಮಾತಿನ ಚಮತ್ಕಾರಗಳು ಬದುಕನ್ನು ತಿದ್ದುವ. ಹದಗೊಳಿಸುವ, ಎಚ್ಚರಿಸುವ ಕೆಲಸವನ್ನು ಸುಲಭವಾಗಿ ಮಾಡಬಲ್ಲವು. ಸಾಮಾನ್ಯವಾಗಿ ಅಡಿಕೆ ಎಲೆಯನ್ನು ಹಾಕಿಕೊಳ್ಳುವಾಗ ಒಂದು ವಿಷಯ ನೆನಪಿಟ್ಟುಕೊಳ್ಳಬೇಕು. ಬರೀ ಅಡಿಕೆಯನ್ನು ಬಾಯಲ್ಲಿಟ್ಟು ಕಡಿಯುವಾಗ ಅದು ಬೇಗನೆ ಹೋಳಾಗುವುದಿಲ್ಲ. ನುರಿಯುವುದಿಲ್ಲ. ಎನ್ನುತ್ತಾರೆ. ಎಲೆಯ ಜೊತೆಗೆ ಒಟ್ಟಿಗೆ ಹಾಕಿಕೊಂಡರೆ

ಬೇಗ ನುರಿಯುತ್ತದೆ ಎಂದು ಹೇಳುವಾಗ "ಹಸೆದು ಬಿಸೆದು ಕೂಡ್ಸಿ ಹಾಕ್ಯಂದ್ರೆ ಬೇಗ ನುರ್ದೀತು" ಎಂಬ ಮಾತು ಪ್ರಯೋಗ ಸಾಧ್ಯತೆಯನ್ನು ಒತ್ತಿ ಹೇಳುತ್ತದೆ.

8.14 ಒಂದೇ ಮಾತಿನ ಚಮತ್ಕಾರಗಳು

ಎರಡು ಸಂದರ್ಭದ ಪ್ರಶ್ನೆ, ಸಮಸ್ಯೆ ಸಂದಿಗ್ದಗಳಿಗೆ ಒಂದೆ ಮಾತಿನಲ್ಲಿ ಪರಿಹರಿಸುವ ಉತ್ತರದ ಚಮತ್ಕಾರಗಳು ಈ ಭಾಷಾ ಚಮತ್ಕಾರಗಳಲ್ಲಿ ಸಿಗುತ್ತವೆ. ಸಮಯದ ಜಾಣ್ಮೆ ಉತ್ತರಿಸುವವನ ಮೇಲೆ ನಿರ್ಧಾರವಾಗಿದ್ದಾಗ ಇಂತಹ ಪ್ರಯೋಗಗಳಿಗೆ ಅರ್ಥ ಬರುವುದುಂಟು. ಉತ್ತರ ಹೇಳುವ ಪದಗಳಲ್ಲಿ ಎರಡರ್ಥದ ಛಾಯೆ ಇದ್ದಲ್ಲಿ ಇಬ್ಬರ ಸಮಸ್ಯೆಗಳನ್ನು ಒಂದೇ ಕ್ಷಣಕ್ಕೆ ಬಗೆಹರಿಸಿಕೊಡುಬಹುದು. ಇಂತಹ ಪ್ರಯತ್ನಗಳು ಆಯಾ ವ್ಯಕ್ತಿಯ ಬುದ್ಧಿ ಚಾತುರ್ಯ. ಜಾಣ್ಮೆಗಳನ್ನು ಹೊರಗೆಡವುತ್ತ. ಸುತ್ತಲಿರುವ ಜನಕ್ಕೆ ಮನರಂಜನೆ, ವಿಸ್ಮಯಗಳನ್ನು ತಂದುಕೊಡುತ್ತವೆ.

"ಸಂತಿಗೆ ಹೋಗಾಕೆ ಒಬ್ಬೋನಿಗೆ ತಕ್ಕಡಿ ಬೇಕಾಗಿತ್ತು. ಮತ್ತೊಬ್ಬನಿಗೆ ಸುತ್ತಾಡಕೆ ಒಂದು ಕುದುರೆ ಬೇಕಿತ್ತು. ತನ್ನ ಹತ್ರ ಇರೊ ಕುದ್ರೇನ ತಮ್ಮೊ ಅಣ್ಣೊ ಎಲ್ಲಿಗೋ ಒಯ್ದಿದ್ರು. ಈಗ ಇಬ್ರಿಗೂ ಒಂದೇ ಮಾತ್ನಾಗೆ ಉತ್ರ ಹೇಳಿ ಕಳಿಸಬೇಕು. ಹ್ಯಂಗೆ ಹೇಳೋದು?

ಉತ್ತರ ಸುಲಭ. ಹೇಳುವಾಗ ಅಷ್ಟೆ ಎಚ್ಚರ ಅಗತ್ಯ ತಕ್ಕಡಿಯ ಸ್ವರೂಪ ಮತ್ತು ಕುದುರೆ ಹೋಗಿರುವ ಸಂದರ್ಭ ಎರಡನ್ನು ಗಮನಿಸಿ "ದಂಡಿಗೆ ಹೋಗಿದೆ" ಎಂದು ಹೇಳುವಾಗ ಎಲ್ಲರಿಗೂ ಈ ಉತ್ತರದಿಂದ ಕುತೂಹಲ ಉಂಟಾಗುತ್ತದೆ. ಕುದುರೆ ದಂಡಿಗೆ ಹೋಗಿದೆ. ತಕ್ಕಡಿಯ ಮೇಲ್ಭಾಗದ ದಂಡಿಗೆ ಹೋಗಿದೆ (ಮುರಿದಿದೆ) ಹೀಗೆ ಇಲ್ಲಿ ಎರಡು ಅರ್ಥಗಳಿವೆ.

'ಒಂದು ಮರದ ಹತ್ರ ಒಬ್ಬೋನು ಕುತ್ಗಂದಿರ್ತಾನೆ. ಆ ಕಡಿಂದ ಒಬ್ಬನು ಬಂದು "ಗಂಟೆ ಎಷ್ಟೀಗ?" ಅಂತ ಕೇಳ್ತಾನೆ. ಇನ್ನೊಂದ್ಕಡಿಂದ ಇನ್ನೊಬ್ಬನು ಬಂದು "ಈ ಮರ ಹತ್ಬೋದ?" ಅಂತಾನೆ. ಅವಗ ಇಬ್ರಿಗೂ ಒಂದೇ ಉತ್ತರ ಏನು ಕೊಡ್ತಿ?' ಮರ ಹತ್ತುವ ಸಮಯ ತಿಳಿಸುವ ಎರಡೂ ಮಾತಿಗೂ ಒಂದೇ ಉತ್ತರ 'ಹತ್ತು' ಈಗ ಆಗಿರುವುದು ಹತ್ತು (ಗಂಟೆ) ಹತ್ತುವುದಿದ್ದರೆ ಮರ ಹತ್ತು.

ಹೀಗೆ ಒಂದೇ ಮಾತಿನಲ್ಲಿ ಹೇಳಬಹುದಾದ ಪದ ಚಮತ್ಕಾರಗಳಿಗೆ ಇಲ್ಲಿ ಕೊರತೆಯೇನಿಲ್ಲ. 'ನಾಕಾಣೆ' ಹಲ್ಲು ಹೋಗಿವೆ, 'ಅರಳಿಲ್ಲ' ಮೂರಳು, ಹಿಂದಿಲ್ಲ. ಏಳು, ಹಲ್ಲಿಲ್ಲ, ಕರು ಅವೆ, ಕರಜಿಕಾಯಿ' ಈ ಮೊದಲಾದ ಪದಗಳ ಹಿಂದಿರುವ ಕತೆಗಳು ಎರಡು ಘಟನೆಗಳನ್ನು ಒಳಗೊಂಡೇ ಭಾಷಾ ಚಮತ್ಕಾರಗಳ ಸೊಗಡನ್ನು ಉಳಿಸಿಕೊಟ್ಟಿವೆ.

8.15 ಒಡಪು ಚಮತ್ಕಾರಗಳು

ಒಡಪುಗಳಲ್ಲಿ ಬರುವ ಭಾಷಾ ಚಮತ್ಕಾರಗಳು ಗಂಡ-ಹೆಂಡತಿಯರ ಗುಣಾವಗುಣಗಳನ್ನು ಎತ್ತಿ ಹಿಡಿಯುತ್ತಲೇ ತಿದ್ದುವ, ವಿವೇಕ ಹೇಳುವ, ಹಾಡಿ ಹೊಗಳುವ, ಅಣಕುಮಾತುಗಳಿಂದ ಸರಿದಾರಿಗೆ ಬರುವಂತೆ ಮಾಡುವ ಪ್ರಯತ್ನ ಮಾಡುತ್ತಿರುತ್ತವೆ. ಭಾಷಿಕವಾಗಿ ಮೂಲಕ ಹೋಲಿಕೆ, ಉಪಮೆಗಳನ್ನು ಒಡಪುಗಳಲ್ಲಿ ಒಡಮೂಡಿಸಿ, ಒಂದು ರೀತಿಯಲ್ಲಿ ಮಾತಿನ ಚಮತ್ಕಾರದ ನುಡಿಗಟ್ಟುಗಳನ್ನು ಸೃಷ್ಟಿಸಿರುವುದು ಕಂಡುಬರುತ್ತದೆ. ಗಂಡನ-ಹೆಂಡತಿಯ ಹೆಸರು ಹೇಳುವ ವಿಶೇಷ ಸಂದರ್ಭಗಳಲ್ಲಿ ಅಂದರೆ ಮದುವೆ. ಮುಂಜಿ, ಕಾರ್ಯಗಳಲ್ಲಿ ಇಂತಹ ಪ್ರಯೋಗಗಳು ಚಾಲ್ತಿಯಲ್ಲಿವೆ. ಇವುಗಳ ಉದ್ದೇಶ ಸಂದರ್ಭದ ಸೊಗಡನ್ನು ಹಾಸ್ಯಮಯಗೊಳಿಸಿ ಮನರಂಜನೆ ಪಡೆಯುವುದಾಗಿದೆ.

ಹರುಕು ಪಟಗಣ್ಣಿ

ಮುರುಕು ನೊಗ

ಎಳಿಲಾರ್ದ ಎತ್ತು ಕಟ್ಗೆಂದು

ಎದೆ ಎದೆ ಬಡಕೊಳ್ತಾರೆ ....

ಇಲ್ಲಿ ಗಂಡನ ಬದುಕಿನ ಚಿತ್ರ, ಅವನ ಕಾರ್ಯ ವೈಖರಿಯ ನೈಜ ಚಿತ್ರಣ, ಜೊತೆಗೆ ಇನ್ನೂ ಸುಧಾರಿಸಿಲ್ಲದ ಸ್ಥಿತಿಯಲ್ಲಿ ಬದುಕುತ್ತಿರುವ ರೀತಿ, ಏನೇ ಸಂಪತ್ತು ಇದ್ದರೂ ಖರ್ಚು ಮಾಡಲಾರದೆ ಜಿಪುಣತನದಿಂದ ಕಾಲ ಹಾಕುವ ಮನಸ್ಥಿತಿಯ ಅಂಶ-ಈ ಎಲ್ಲಾ ಅರ್ಥಗಳನ್ನು ಈ ಒಡಪು ಚಮತ್ಕಾರ ಪ್ರತಿಬಿಂಬಿಸಬಹುದು. ಗಂಡಸರಿಗಿಂತ ಹೆಚ್ಚಾಗಿ ಹೆಂಗಸರಲ್ಲೇ ಕಂಡುಬರುವ ಒಡಪು ಚಮತ್ಕಾರಗಳು ಗಂಡನ ಎಲ್ಲ ಬಗೆಯ ಚಟುವಟಿಕೆಗಳನ್ನು ನಿರೂಪಿಸುತ್ತಾ ಹೋಗುತ್ತವೆ. ಅತ್ತೆ, ಸೊಸೆ, ಮಾವ, ಅಳಿಯ, ಗೆಳೆಯ, ಗೆಳತಿ ಮೊದಲಾದವರ ಮೇಲೂ ಕಟ್ಟಿಕೊಂಡಿರುವ ಇಂತಹ ಒಡಪು ಚಮತ್ಕಾರಗಳು ಸಮಯದ ಜಾಣ್ಮೆಯನ್ನು ಉಪಯೋಗಿಸಿಕೊಂಡೇ ಎಲ್ಲರಿಗೂ ಮನರಂಜನೆಯನ್ನು ಒದಗಿಸಿಕೊಡುತ್ತವೆ.

ಗಂಡಸಿನ ಬಗ್ಗೆ ಕಟ್ಟಿರುವ ಒಡಪು ಚಮತ್ಕಾರಗಳಂತೆಯೇ ಹೆಂಗಸಿನ ಬಗ್ಗೆಯೂ ಕಟ್ಟಿರುವ ಒಡಪು ಚಮತ್ಕಾರಗಳು ಸಾಕಷ್ಟು ದೊರಕುತ್ತವೆ. ಆಸೆ, ಆಕಾಂಕ್ಷೆ ಕರ್ತವ್ಯಪ್ರಜ್ಞೆ ಮೊದಲಾದ ವಿಷಯಗಳ ಹಿನ್ನೆಲೆಯನ್ನು ಇಟ್ಟುಕೊಂಡೇ ಹಾಸ್ಯಮಯವಾಗಿ, ರಂಜನೀಯವಾಗಿ ಇವುಗಳನ್ನು ಹೇಳಬಲ್ಲರು.

ಹಂಡೇವು ಸಂದ್ಯಾಗೆ

ಉಂಡೆ ತಿಂತಾಳೆ ....

ಅಂತ ಒಂದು ಸಲಕ್ಕೆ ಹೇಳಿದರೆ, ಇನ್ನೊಮ್ಮೆ

ಕಾಡೋಳಲ್ಲ ಬೇಡೋಳಲ್ಲ

ಚಾಡಿಮಾತ ಕೇಳೋಳಲ್ಲ

ಇದ್ದುದ್ರಲ್ಲೆ ತೃಪ್ತಿಪಡ್ತಾಳೆ ......

ಎಂದು ತನಗೆ ಹೊಂದಿಕೊಂಡಿರುವ ಬಗೆಯನ್ನು ವಿವರಿಸುತ್ತಾನೆ. ಹೀಗೆ ಒಡಪು ಚಮತ್ಕಾರಗಳು ಜನಪದರ ಬದುಕಿನಲ್ಲಿ ವಿಶೇಷ ಸಂದರ್ಭದ ಸೃಷ್ಟಿಗಳಾಗಿ ಮೂಡಿಬಂದಿವೆ.

ಹೀಗೆ ಮಾತಿನ ಎಲ್ಲ ಬಗೆಯ ವೈವಿದ್ಯಗಳನ್ನು ಗಮನಿಸುತ್ತಾ ಹೋದಹಾಗೆಲ್ಲ ಭಾಷಾ ಚಮತ್ಕಾರಗಳ ಪ್ರಯೋಗ ಒಂದಲ್ಲ ಒಂದು ಬಗೆಯಲ್ಲಿ ತನ್ನ ವೈವಿದ್ಯದ ಹರವನ್ನು ನಮ್ಮ ಕಣ್ಮುಂದೆ ಸುಳಿಯುತ್ತಲೇ ಹೋಗುತ್ತದೆ. ಯಾರಲ್ಲಿ ಮಾತಿನ ಜಾಣ್ಮೆ ಇದೆಯೋ ಅವನು ಮಾತಿನ ಮೂಲಕ ಎಲ್ಲರನ್ನೂ ಕೆದಕಬಲ್ಲ, ಎಲ್ಲರಿಗೂ ತನ್ನ ಬುದ್ಧಿ ಕೌಶಲ್ಯ ತೋರಿಸಬಲ್ಲ. ಎಲ್ಲರ ಬುದ್ದಿಗೂ ಚಿಂತನೆ ಹಚ್ಚಿಸಬಲ್ಲ. ಎಲ್ಲ ಕಾಲಕ್ಕೂ ಅಚ್ಚಳಿಯದಿರುವ ಭಾಷಾ ವೈವಿಧ್ಯಗಳ ಚಮತ್ಕಾರ ರೂಪಗಳನ್ನು ಉಳಿಸಿಕೊಡಬಲ್ಲ. ಜಾಣನಿಗೆ ಮಾತಿನ ಪೆಟ್ಟು ದಡ್ಡನಿಗೆ ದೊಣ್ಣೆ ಪೆಟ್ಟು ಎಂಬ ಗಾದೆಯ ಹಾಗೆ, ಬಂಗಾರವನ್ನು ಉಜ್ಜಿದಂತೆಲ್ಲಾ ಅದು ಇನ್ನಷ್ಟು ಹೊಳೆಯುತ್ತದೆ. ಗಂಧವನ್ನು ತೇಯ್ದಷ್ಟು ಅದು ಪರಿಮಳವನ್ನು ಹೊರ ಚೆಲ್ಲುತ್ತಲೇ ಇರುತ್ತದೆ ಎಂಬ ಮಾತೂ ಅಷ್ಟೇ ಸತ್ಯ ಭಾಷಾ ಚಮತ್ಕಾರಗಳು ಕಥಾರೂಪದಲ್ಲಾಗಲಿ. ಗೀತರೂಪದಲ್ಲಾಗಲಿ. ಒಂದೇ ಒಂದು ಪದ, ಅಕ್ಷರ ವಾಕ್ಯಗಳ ರೂಪದಲ್ಲಾಗಲಿ ದೊರಕುತ್ತವೆಂಬುದನ್ನು ಈವರೆಗೂ ನೋಡಿದ್ದೇವೆ. ಇಲ್ಲಿ ಅವುಗಳು ಹೊರಗೆಡವುವ ಅರ್ಥ, ಧ್ವನಿ, ಸಂಕೇತಗಳು ಭಾಷೆಯ ಮೇಲ್ಮೈಯನ್ನು ಯಾವ ಕಾಲಕ್ಕು ಜೀವಂತವಿಡುತ್ತವೆ.

ಭಾಷೆ ಹುಟ್ಟಿದಂದಿನಿಂದ ಇಂದಿನವರೆಗೂ ಸಾಕಷ್ಟು ಪ್ರಯೋಗ, ಪ್ರಯತ್ನ, ಬದಲಾವಣೆಗಳು ಕಾಲ ಕಾಲಕ್ಕೂ ಆಗುತ್ತಲೇ ಬಂದಿದೆ. ಹಿಂದೆ ಭಾಷೆ ದೈವಸೃಷ್ಟಿ, ಎಂಬ ಮಾತು ಹೋಗಿ ಅದು ಮಾನವ ಸೃಷ್ಟಿ ಅವನ ಅವಿಭಾಜ್ಯ ಅಂಗ, ಮಾನವನ ಬದುಕಿಗೆ ಭಾಷೆ ಅತ್ಯಗತ್ಯ, ಅನಿವಾರ್ಯ, ಸಹಜ ಎಂಬ ಮಾತುಗಳನ್ನು ಈಗ ಒತ್ತಿ ಹೇಳಬೇಕಿಲ್ಲ. ಭಾಷೆ ಮಾನವನ ಒಡನಾಡಿ, ಅವನ ಜೀವದುಸಿರು. ಜನಪದರ ಭಾಷೆ ಆಡುಮಾತಿನ ಸೊಗಡನ್ನು ಯಥಾವತ್ತಾಗಿ ಪ್ರತಿಬಿಂಬಿಸುತ್ತದೆ. ಅವರ ಎಲ್ಲ ಬಗೆಯ ಪ್ರಯೋಗ. ಪ್ರಯತ್ನ, ಸೃಷ್ಟಿಗಳು ಈ ಭಾಷಾ ಚಮತ್ಕಾರಗಳ ನಾನಾ ರೂಪಗಳನ್ನು ನಮ್ಮ ಬದುಕಿಗೆ ಹೊಸಜೀವಕಳೆಯಾಗಿ ಕಾಣಿಕೆ ರೂಪದಲ್ಲಿ ಕೊಟ್ಟಿದೆ. ಜನಪದ ಭಾಷಾ ಚಮತ್ಕಾರಗಳ ವಕ್ತೃಗಳು ಎಲ್ಲ ಕಡೆಯೂ ಎಲ್ಲ ಜನಾಂಗ, ಬುಡಕಟ್ಟುಗಳಲ್ಲೂ, ಎಲ್ಲ ಸಂಸ್ಕೃತಿಗಳಲ್ಲೂ ಇದ್ದೆ ಇದ್ದಾರೆ. ಆಯಾ ಪ್ರದೇಶಕ್ಕೆ ತಕ್ಕಂತೆ ಆಯಾ ಪ್ರದೇಶಿಕ ಭಾಷೆಯ ಸೊಗಡಿನಲ್ಲಿ ಭಾಷಾಪ್ರಯೋಗಗಳನ್ನು ಸೃಷ್ಟಿಸಿದ್ದಾರೆ. ಅವರು ಬಳಸುವ ಒಂದೊಂದು ಅಕ್ಷರ, ಪದ, ವಾಕ್ಯಗಳಲ್ಲಿನ ಅರ್ಥ, ಧ್ವನಿ, ಸಂಕೇತಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಾದರೆ ನಮಗೆ ಭಾಷಾ ಚಮತ್ಕಾರಗಳಲ್ಲಿ ಅಡಗಿರುವ ಚಾತುರ್ಯ, ಕೌಶಲ, ಬೌದ್ಧಿಕತೆಗಳ ಪರಿಚಯವುಂಟಾಗುತ್ತದೆ. ಇಂತಹ ಭಾಷಾ ಚಮತ್ಕಾರಗಳನ್ನು

ಈಗಾಗಲೇ ಅನೇಕ ಪುಸ್ತಕಗಳಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ. ನನ್ನ ಸಂಗ್ರಹದ ಈ ಕೆಳಕಂಡ ಐದು ಪುಸ್ತಕಗಳಲ್ಲಿ ಸುಮಾರು ಮುನ್ನೂರು ಭಾಷಾ ಚಮತ್ಕಾರಗಳನ್ನು ಕೊಡಲಾಗಿದೆ.

1. ಜನಪದ ಜಾಣಗಣಿತ ಮತ್ತು ಭಾಷಾ ಚಮತ್ಕಾರ (14ನೇ ಮುದ್ರಣ)
2. ಜನಪದ ಗಣಿತ–ಚಮತ್ಕಾರ(11ನೇ ಮುದ್ರಣ)
3. ಗ್ರಾಮೀಣ ಚಮತ್ಕಾರ ಗಣಿತ (10ನೇ ಮುದ್ರಣ)
4. ಜನಪದ ಅಂಕಗಣಿತ–ಜಾಣ ಚಮತ್ಕಾರ (6ನೇ ಮುದ್ರಣ)
5. ಜನಪದ ವಿನೋದ ಗಣಿತ (3ನೇ ಮುದ್ರಣ)

ಈ ಪುಸ್ತಕಗಳಲ್ಲದೆ ಡಾ. ಪಿ.ಕೆ. ರಾಜಶೇಖರ ಮತ್ತು ಗೆಳೆಯರು ಸಂಗ್ರಹಿಸಿರುವ' ಜನಪದ ಚಮತ್ಕಾರ ಗಣಿತ, 'ಜನಪದ ಆಯ್ದ ಲೆಕ್ಕಗಳು' ಹಾಗೂ ವೀರಣ್ಣ ರಾಜೂರ ಅವರ 'ಜಾನಪದ ಜಾಣ್ಮೆ' ಕೃತಿಗಳು ಮುಖ್ಯವಾದವು. ಒಗಟು, ಒಡಪು, ಗಾದೆ, ಕತೆ, ಗೀತೆ ಪ್ರಕಾರದ ಸಂಗ್ರಹಗಳಲ್ಲಿ ಈ ಬಗೆಯ ಚಮತ್ಕಾರಗಳು ದೊರಕುತ್ತವೆ. ಒಗಟು, ಒಡಪು, ಕತೆಗಳ ಸಂಗ್ರಹಗಳಲ್ಲಿಯೂ ಭಾಷಾ ಚಮತ್ಕಾರಗಳ ಸಂಖ್ಯೆ ಸಾಕಷ್ಟಿದ್ದು. ಈವರೆಗೆ ಪ್ರಕಟವಾಗಿರುವ ಎಲ್ಲ ಒಗಟು, ಒಗಟು ಕತೆಗಳ ಸಂಗ್ರಹಗಳನ್ನು ಗಮನಿಸಬಹುದಾಗಿದೆ.

ಜನಪದ ಭಾಷಾ ಚಮತ್ಕಾರಗಳಲ್ಲಿ ಕಂಡುಬರುವ ಪಾಂಡಿತ್ಯ ಪೂರ್ಣ ಚಮತ್ಕಾರಗಳನ್ನು ಪುರಾಣ, ರಾಮಾಯಣ, ಮಹಾಭಾರತ, ಭಾಗವತ ಕತೆಗಳನ್ನು ಬಲ್ಲವರು ಹೇಳಿದ್ದಾರೆ. ಸಾಮಾನ್ಯ ಹಳ್ಳಿಗರಿಗಿಂತ ತಕ್ಕ ಮಟ್ಟಿನ ಅಕ್ಷರ ಜ್ಞಾನವುಳ್ಳ ಅಂದರೆ ಕೇಳಿಯೂ ಓದಿಯೂ ತಿಳಿದಿರುವಂತಹ ವ್ಯಕ್ತಿಗಳ ಮೂಲಕ ಇಂತಹ ರಚನೆಗಳು ಉಳಿದುಬಂದಿವೆ. ಹಾಗಾಗಿ ಇವುಗಳನ್ನು ಶಿಷ್ಟರೂಪಗಳೆಂದು ತಿರಸ್ಕರಿಸುವುದು ಸೂಕ್ತವಲ್ಲ. ಜನಪದದ ಅನೇಕ ಪ್ರಕಾರಗಳಂತೆ ಭಾಷಾ ಚಮತ್ಕಾರಗಳ ಕೊಡುಗೆ ಅಪಾರವಾಗಿದೆ. ವೈವಿಧ್ಯಮಯವಾಗಿದೆ. ಈ ಪ್ರಕಾರಗಳಂತೆ ಭಾಷಾ ಚಮತ್ಕಾರಗಳ ಕೊಡುಗೆ ಅಪಾರವಾಗಿದೆ. ಈ ಪ್ರಕಾರವನ್ನು ಅಲಕ್ಷಿತ ಜನಪದ ಪ್ರಕಾರವೆಂದು ಕರೆಯಲು ಸಾಧ್ಯವಿಲ್ಲ. ಈಗಾಗಲೇ ಈ ಪ್ರಕಾರದಲ್ಲಿ ಏಳೆಂಟು ಕೃತಿಗಳು ಪ್ರಕಟಗೊಂಡಿವೆ ಮತ್ತು ಇತರೆ ಪ್ರಕಾರಗಳಲ್ಲೂ ಇವುಗಳ ಸಂಗ್ರಹ ನಡೆದೇ ಇದೆ. ಈಗ ಸಮಗ್ರವಾಗಿ ಹೊರಬರುತ್ತಿರುವ ನನ್ನ ಜನಪದ ಗಣಿತ ಮತ್ತು ಭಾಷಾ ಚಮತ್ಕಾರ ಕೃತಿಯಲ್ಲಿ ಎಲ್ಲ ಬಗೆಯ ಭಾಷಾ ಚಮತ್ಕಾರಗಳನ್ನು ಒಂದೆಡೆ ಸಂಗ್ರಹಿಸಿಕೊಡುವ ಪ್ರಯತ್ನ ನಡೆಸಿದ್ದೇನೆ.

ಅಧ್ಯಾಯ:–9

* ಸಮಾರೋಪ

<u>ಸಮಾರೋಪ</u>:- 9

ಜಾನಪದ ಅಧ್ಯಯನದ ಉದ್ದೇಶ ವ್ಯಾಪಕವಾದುದು. ಇದನ್ನು ಸೂತ್ರಪ್ರಾಯವಾಗಿ ಹೇಳುವುದು ಕಷ್ಟ. ಇದು ಕಳೆದು ಹೋದ ಸಂಸ್ಕೃತಿಯ ಅಧ್ಯಯನವಷ್ಟೇ ಅಲ್ಲ. ಪ್ರಸ್ತುತ ಸಂಸ್ಕೃತಿಯ ಅಧ್ಯಯನವೂ ಆಗಿದೆ. ಈ ಅಧ್ಯಯನದಿಂದ ಬೀದರ ತಾಲೂಕಿನ ಜೀವನ ವಿಧಾನವನ್ನು ಅರಿಯಲು ಅವಕಾಶ ನೀಡುವುದು. ಇಲ್ಲಿ ಮೌಖಿಕಪರಂಪರೆಯ ವಿಷಯಗಳನ್ನು ಪರಿಚಯಿಸಲಾಗುತ್ತದೆ.

ಜಾನಪದ ಅಂತರ್ ರಾಷ್ಟ್ರೀಯ ಸ್ವರೂಪದ್ದಾಗಿರುವುದರಿಂದ, ಇದರ ಅಧ್ಯಯನದಿಂದ, ವಿವಿಧ ಜನಾಂಗಗಳ ನಡುವೆ ಸಾಮರಸ್ಯ ಮೂಡಲು, ಸೌಹಾರ್ದತೆ ಹುಟ್ಟಲು ಸಹಾಯಕವಾಗುತ್ತದೆ. ಸಾಹಿತ್ಯದ ಅಭ್ಯಾಸದಲ್ಲಿ ಜಾನಪದದ ಅಗತ್ಯ ಬಹಳವಾಗಿದೆ. ಏಕೆಂದರೆ ಶಿಷ್ಟಸಾಹಿತ್ಯ ಸತ್ವಹೀನವಾದಾಗ ಜಾನಪದದಿಂದ ಸ್ಪೂರ್ತಿ ಪಡೆದಿರುವುದಕ್ಕೆ ಉದಾಹರಣೆಗಳಿವೆ. ಚರಿತ್ರೆಯ ಪುನರ್ ಸೃಷ್ಠಿಯಲ್ಲಿ ಜಾನಪದ ಕೊಡುಗೆಯೂ ನೆರವಾಗುತ್ತದೆ. ಹಾಗೂ ಜಾನಪದವು ಸಂಸ್ಕೃತಿಯ ಪ್ರತಿಬಿಂಬವೆನಿಸಿದೆ. ಇದರ ವೈಶಿಷ್ಟ್ಯ, ವಿನೂತನತೆ ವ್ಯಾಪಕತೆ ಎಲ್ಲ ವರ್ಗದ ಜನರನ್ನು ಸೆಳೆಯುತ್ತದೆ. ಮಾನವೀಯ ಮೌಲ್ಯಗಳನ್ನು ಅರಿಯಲು, ವ್ಯಾಪಕತೆ ಎಲ್ಲ ವರ್ಗದ ಜನರನ್ನು ಸೆಳೆಯುತ್ತದೆ. ಮಾನವೀಯ ಮೌಲ್ಯಗಳನ್ನು ಅರಿಯಲು, ಸಮಾಜದ ಬಗೆಗೆ ತಿಳಿಯಲು, ನಿರ್ಲಕ್ಷ ಜನಾಂಗದ ಬದುಕನ್ನು ಅರ್ಥಮಾಡಿಕೊಳ್ಳಲು, ಸಂಸ್ಕೃತಿಯ ಪರಿಪೂರ್ಣ ಮಾಹಿತಿ ಪಡೆಯಲು ಇಂಥ ಅಧ್ಯಯನಗಳು ನೆರವಾಗುತ್ತವೆ.

ಜನಪದ ಸಾಹಿತ್ಯ ಮೌಖಿಕವಾಗಿಯೇ ಉಳಿದುಕೊಂಡು ಬಂದಿರುವುದು. ಇದೊಂದು ಎಂದೆಂದಿಗೂ ಮುಗಿಯದ ತುಂಬು ಕಣಜ. ಅನಕ್ಷರಸ್ಥರ ಈ ಸಾಹಿತ್ಯ ಹಾಗೆಯೇ ಅಳಿದು ಹೋಗದಂತೆ ಅವುಗಳ ಸಂಗ್ರಹ ಹಾಗೂ ಅಧ್ಯಯನದ ಅತ್ಯಾವಶ್ಯಕವಾಗಿದೆ. ಈ ಬೀದರ ತಾಲೂಕಿನ ಜಾನಪದ ಸಾಹಿತ್ಯಿಕ ಹಾಗೂ ಸಾಮಾಜಿಕ ಸಂಶೋಧನೆಯ ಕ್ರಮವನ್ನು ಅನುಸರಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಜನಪದ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದರೊಂದಿಗೆ ವರ್ಗಾಂತರಿಸುವ ಕಾರ್ಯ ಮಾಡುವುದೇ ಅಧ್ಯಯನದ ಉದ್ದೇಶವಾಗಿದೆ.

ಬೀದರ ತಾಲೂಕಿನ ಗಡಿಯಾಚೆ ಮಹಾರಾಷ್ಟ್ರದಲ್ಲಿರುವ ಕನ್ನಡ ಭಾಷಿಕರು ಮರಾಠಿ ಭಾಷೆಯನ್ನೂ, ಮರಾಠಿಗರು ಕನ್ನಡ ಭಾಷೆಯನ್ನು ಕಲಿತು ಒಬ್ಬರನ್ನೊಬ್ಬರು ಸಹಯೋಗದಿಂದ ಭಾಷಾ ಭೇದ ಮರೆತು, ಭಾವೈಕ್ಯತೆಯಿಂದ ಬಾಳುತ್ತಿರುವುದು ಒಂದು ಅಪರೂಪದ ಸಂಗತಿ. ಎಂದೇ ಹೇಳಬೇಕು ಇದನ್ನು ಈ ಅಧ್ಯಯನದ ಮೂಲಕ ಮುಂದಿನ ಜನಾಂಗಕ್ಕೆ ಭಾವೈಕ್ಯತೆಯ ಸಂದೇಶ ನೀಡುತ್ತದೆ.

ಬೀದರ ತಾಲೂಕಿನ ಜಾನಪದದಲ್ಲಿ ಅಂದಿನ ಕಾಲದ ಸಂಸ್ಕೃತಿಯನ್ನು ಕಾಣುವುದಲ್ಲದೆ, ನಮ್ಮ ಸಂಸ್ಕೃತಿಯನ್ನು ಕಾಪಾಡಿ ಕೊಂಡೊಯ್ಯುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಎಲ್ಲರ ಗಮನ ಇತ್ತ ಕಡೆಗೆ ಸೆಳೆಯಲಾಗಿದೆ. “ಬೇರು ನೆನೆಯದೇ ಹೂವು ಅರಳದು” ಮುಂದಿನ

ಪ್ರಗತಿಯ ಕುರಿತು ಮುಂದಾಲೋಚನೆ ಮಾಡಿದ ಆಧುನಿಕರು ಹಿಂದಿನ ಕಾಲದ ಸಾಹಿತ್ಯ ಸಂಸ್ಕೃತಿಗಳನ್ನು ಉತ್ತಮ ರೀತಿಯಲ್ಲಿ ಅವಲೋಕಿಸಿ ಮುನ್ನಡೆಯುವುದು ಅಗತ್ಯ ಎನಿಸುತ್ತದೆ.

ಈ ಜನಪದ ಸಾಹಿತ್ಯದಲ್ಲಿ ಹೆಣ್ಣು ತನ್ನ ಕಷ್ಟ-ಸುಖ, ನೋವು-ನಲಿವುಗಳನ್ನು ತೋಡಿಕೊಂಡಿದ್ದಾಳೆ. ದೇವರು ನಿಸರ್ಗ, ಕುಟುಂಬ, ಬದುಕು, ಸಮಾಜ, ಕುರಿತಂತೆ ಜನಪದ ಹೆಣ್ಣಿನ ನಿಲುವೇನು ಎಂಬುದನ್ನು ತಿಳಿಯುವುದಕ್ಕೆ ಒಳ್ಳೆಯ ಉದಾಹರಣೆಗಳಾಗಿವೆ.

ಭಾರತೀಯ ಜನಪದರ ಜೀವನದಲ್ಲಿ ಹಬ್ಬಗಳಿಗೆ ಅಪಾರವಾದ ಮಹತ್ವವಿದೆ. ಇವುಗಳು ಮಹತ್ತರವಾದ ಪಾತ್ರ ನಿರ್ವಹಿಸುತ್ತವೆ. ಅನೇಕ ಹಬ್ಬಗಳಲ್ಲಿ ಜನರು ತಮ್ಮ ವೈಯಕ್ತಿಕ ಕಾರ್ಪಣ್ಯಗಳನ್ನು ಮರೆತು ಆನಂದವಾಗಿ ಕಾಲ ಕಳೆಯುತ್ತಾರೆ. ಈ ಹಬ್ಬಗಳು ವಿಶೇಷ ವಾತಾವರಣ ಸೃಷ್ಟಿಸಿ ಮನರಂಜನೆ ಒದಗಿಸುತ್ತವೆ. ಅನೇಕ ಹಬ್ಬಗಳು ಧಾರ್ಮಿಕ ಹಿನ್ನೆಲೆಯಲ್ಲಿ ಹುಟ್ಟಿಕೊಂಡು ಆಚರಿಸಲ್ಪಡುತ್ತವೆ.

ಆದರೆ ಇಂದು ಕಾಲಕ್ರಮೇಣ ಆಧುನೀಕರಣದ ಪ್ರಭಾವದಿಂದಾಗಿ ಈ ಆಚರಣೆಗಳು, ಸಂಪ್ರದಾಯಗಳಾಗಿ, ತಾತ್ವಿಕ ವಿಚಾರಗಳು ಗೌಣವಾಗಿ ಮರೆತೇ ಹೋಗುತ್ತಿವೆ. ಹೆಣ್ಣು ಮಕ್ಕಳು ಶಿಕ್ಷಣಕ್ಕಾಗಿ ದಿನದ ಹೆಚ್ಚಿನ ಸಮಯ ಮನೆಯಹೊರಗೆ ಕಳೆಯುತ್ತಿದ್ದಾರೆ. ವಸತಿಶಾಲೆಗಳನ್ನೂ ಸೇರುತ್ತಿದ್ದಾರೆ. ತಂದೆ-ತಾಯಿಯರೂ ಹೊರಗಡೆ ದುಡಿಯಲು ಹೋಗುತ್ತಿದ್ದಾರೆ. ಅವಿಭಕ್ತ ಕುಟುಂಬಗಳೆಲ್ಲಾ ಒಡೆದು ಹಿರಿಯರು ಇಂಥಹ ಸಂಪ್ರದಾಯಗಳನ್ನು ತಮ್ಮ ಮಕ್ಕಳಿಗೆ ಹೇಳಿ ಕೊಡಲು ಆಗುತ್ತಿಲ್ಲ. ಈ ಎಲ್ಲ ಕಾರಣಗಳಿಂದಾಗಿ ಸುಶಿಕ್ಷಿತರೂ ಗೊಡ್ಡು ಸಂಪ್ರದಾಯವೆಂತಲೂ, ಹೆಸರಿಗೆ ಮಾತ್ರ ಒಂದು ದಿನದ ಪೂಜೆ ಮಾಡಿ ಮುಗಿಸುವ ಹುನ್ನಾರ ಮಾಡುತ್ತಿದ್ದಾರೆ.

ಜಾಗತೀಕರಣದ ಈ ಹಿನ್ನೆಲೆಯಲ್ಲಿ, ನಮ್ಮ ನೆಲಸಂಸ್ಕೃತಿ, ಜಲಸಂಸ್ಕೃತಿ ಕಾಪಾಡಿಕೊಳ್ಳುವ ಅಗತ್ಯತೆ, ಅನಿವಾರ್ಯತೆ ಹಿಂದಿಗಿಂತಲೂ ಇಂದು ಮುಖ್ಯವಾಗಿದೆ. ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಜನಪದ ಸಾಹಿತ್ಯ ಬಿಂಬಿತವಾಗುತ್ತದೆ.

ಜನಪದ ಸಾಹಿತ್ಯ ರೂಪಗಳು ಹಣವಿಲ್ಲದೆ ಅನುಭವಿಸುವ ಮನರಂಜನೆಯ ಮಾಧ್ಯಮಗಳಾಗಿವೆ. ಜೊತೆಗೆ ಮಾನಸಿಕ ನೆಮ್ಮದಿ ನೀಡುವಂಥಹ ಮಾಧ್ಯಮಗಳು, ಜನಪದರು ಕೆಲಸಗಳೊಂದಿಗೆ ಮನರಂಜಿಸಿ ತಾವು ಮಾಡುವ ಕೆಲಸದ ದಣಿವು ತಮಗೆ ಅರಿವಾಗದಂತೆ ಮುಗಿಯಲೆಂಬ ಉದ್ದೇಶ ಕಂಡುಬರುತ್ತದೆ. ಇಂದು ದೈಹಿಕ ವ್ಯಾಯಾಮಕೊಡುವ ಕಾರ್ಯ ಕಡಿಮೆಯೇ ಆಗಿದೆ. ಪ್ರತಿಯೊಂದು ಕಾರ್ಯಗಳ ಬದಲಾಗಿ ಯಂತ್ರಗಳ ಕಾರ್ಯ ನಿರ್ವಹಿಸುತ್ತಿರುವುದರ ಹಿನ್ನೆಲೆಯಲ್ಲಿ ಕಾಣಬರುವ ಸ್ಥೂಲಕಾಯ, ಹೊಟ್ಟೆಯ ಅವ್ಯವಸ್ಥೆ, ಉಬ್ಬಸ, ಸಿಹಿಮೂತ್ರರೋಗ, ರಕ್ತದೊತ್ತಡ, ಮುಟ್ಟುದೋಷಗಳು, ಮಾನಸಿಕ ಒತ್ತಡ, ಮುಂತಾದ ತೊಂದರೆಗಳು ಎದುರಿಸುವುದು ಅನಿವಾರ್ಯವಾಗಿದೆ.

ಜನಪದ ಸಾಹಿತ್ಯ ಮನರಂಜನೆಗಳಿಗಾಗಿ ಅಷ್ಟೇ ಅಲ್ಲ. ಅದರ ಹಿಂದಿರುವ ವೈಜ್ಞಾನಿಕ ಸತ್ಯದ ಕುರಿತೂ ನಿರೂಪಿಸಲಾಗಿದೆ. ಅವುಗಳಲ್ಲಿ ಪ್ರಮುಖವಾಗಿ ದೈಹಿಕ ವ್ಯಾಯಾಮದಿಂದ ಆಳ ಉಸಿರಾಟ ಉಂಟಾಗಿ ಆರೋಗ್ಯ ವೃದ್ಧಿಸುತ್ತದೆ. ಚರ್ಮದ ಕಾಂತಿ ಹೆಚ್ಚುತ್ತದೆ. ಲವಲವಿಕೆ ಮೂಡುತ್ತದೆ. ಸೌಂದರ್ಯ ವೃದ್ಧಿಸಿ, ಆಯಾಸ ಮಾಯವಾಗಿ, ಬುದ್ಧಿ ಚುರುಕಾಗುತ್ತದೆ. ಬೊಜ್ಜು ಕರಗಿ, ಮಾನವನಲ್ಲಿ ಹೊಸ ಚೈತನ್ಯ ಉತ್ಪತ್ತಿಯಾಗಿ ಲವಲವಿಕೆ ಉಂಟಾಗುವುದು. ಜಠರ, ಕರುಳು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತವೆ. ನಿರ್ನಾಳಗ್ರಂಥಿಗಳಿಗೆ ಹೇರಳ ರಕ್ತ ಪೂರೈಕೆಯಾಗಿ, ದೇಹ ಸುಸ್ಥಿತಿಯಲ್ಲಿಡುತ್ತದೆ. ಮೇಲಾಗಿ ಪ್ರಸನ್ನತೆ ಮೂಡುತ್ತದೆ. ದೈಹಿಕ ಪರಿಶ್ರಮದಿಂದ ದೀರ್ಘಕಾಲದ ರೋಗಗಳು ಶಾಶ್ವತವಾಗಿ ನಿಯಂತ್ರಿಸಬಹುದು. ಅದಕ್ಕಾಗಿಯೇ ವೈದ್ಯರು ಇಂದು ರೋಗಿಗಳಿಗೆ ಯೋಗ, ವ್ಯಾಯಾಮ, ವಾಕಿಂಗ್‌ಗಳಿಗೆ ಹೆಚ್ಚು ಒತ್ತು ಕೊಡುತ್ತ ಬರುತ್ತಿದ್ದಾರೆ.

ಜನಪದ ಕುಣಿತಗಳಿಂದ ದೈಹಿಕ ಶ್ರಮದಿಂದ ಮಾನವನ ಆಯಸ್ಸು ವೃದ್ಧಿಯಾಗುವುದು. ಆರೋಗ್ಯಕ್ಕೆ ದೇಹ ಸೌಂದರ್ಯಕ್ಕೆ ಪ್ರತಿನಿತ್ಯ ವ್ಯಾಯಾಮ ನೀಡುವ ಕೆಲಸಗಳು ಮಾಡುತ್ತಲೇ ಇರಬೇಕು. ಇದರಿಂದ ಸೌಂದರ್ಯದೊಂದಿಗೆ, ಮನಸ್ಸಿನ ಉಲ್ಲಾಸ ಉಂಟಾಗಿ, ರೋಗದಿಂದ ಮುಕ್ತಿ ಪಡೆಯಬಹುದು. ಅದಕ್ಕಾಗಿಯೇ ಉತ್ತುವಾಗ, ಬಿತ್ತುವಾಗ, ನಾಟಿ ಹಾಕುವಾಗ, ಕಳೆ ಕೀಳುವಾಗ, ನೇಯುವಾಗ, ನೂಲುವಾಗ, ಕುಟ್ಟು-ಬೀಸುವಾಗ ಇಂಥಹ ಹಲವು ಸಂದರ್ಭಗಳಲ್ಲಿ ಪರಿಶ್ರಮವೂ ಎದ್ದುಕಾಣುತ್ತದೆ.

ಜನಪದ ಕುಣಿತಗಳು ಜನಪದರ ಜೀವನಾಡಿ, ದೇವರನ್ನು ಸ್ತುತಿಮಾಡುವ ಭಜನೆ ದೈವೀಉಪಾಸನೆಯ ಮಹತ್ವದ ಸಾಧನಗಳಲ್ಲಿ ಒಂದು ದೈವತ್ವವನ್ನು ನಂಬಿದ ಎಲ್ಲ ಮತೀಯರೂ ಕುಣಿತಗಳನ್ನು ರೂಢಿಸಿಕೊಂಡಿದ್ದಾರೆ. ಜಾನಪದರ ಬದುಕು ಶೀಲಗುಣ ಸಂಪತ್ತಿನಿಂದ ಕಂಗೊಳಿಸುವಲ್ಲಿ ಮಾದರಿ ಎನಿಸಿದೆ.

ಬೀದರ್ ತಾಲೂಕಿನ ಮೇಲೆ ಎಲ್ಲಾ ಭಾಷೆಗಳ ಪ್ರಭಾವ ಬೇರೆ ಈ ತಾಲೂಕಿನ ಮೇಲೆ ಹೆಚ್ಚಾಗಿ ಕಂಡು ಬರುತ್ತದೆ. ಐದನೇ ಶತಮಾನದಿಂದೀಚೆಗೆ ಅನೇಕ ಅರಸು ಮನೆತನಗಳು ವಿಶೇಷವಾಗಿ ದೆಹಲಿಯ ಸುಲ್ತಾನರು, ಬಹಮನಿ ಸುಲ್ತಾನರು, ಬರೀದ್‌ಶಾಹಿ ಸುಲ್ತಾನರು, ಮೊಗಲರು, ನಿಜಾಮರು ಕೆಲಕಾಲ ಶಿವಾಜಿ, ಯಾದವರಂಥವರ ವಶದಲ್ಲಿ ಈ ತಾಲೂಕವಿತ್ತೆಂದು ತಿಳಿದು ಬರುತ್ತದೆ. ಇದರಿಂದಾಗಿ ಈ ತಾಲೂಕಿನ ಮೇಲೆ ಮರಾಠಿ, ಹಿಂದಿ, ಉರ್ದು, ಭಾಷೆಗಳು ತೀವ್ರವಾದ ಪ್ರಭಾವ ಬೀರಿರಿರುವುದನ್ನು ನಾವು ಕಾಣುತ್ತೇವೆ. ಇಷ್ಟಾದರೂ ಹಲವು ಭಾಷೆ, ಹಲವು ಜಾತಿ, ಮತ, ಪಂಥಗಳು, ಕಂಡು ಬಂದರೂ ಯಾವದೇ ರೀತಿಯ ಭೇದಭಾವಕ್ಕೆ ಎಡೆಮಾಡಿಕೊಡದೆ ನಾವೆಲ್ಲರೂ ಒಂದು ಎಂಬ ಭಾವೈಕ್ಯದ ಭಾವನೆ ಎಲ್ಲ ಜನಾಂಗಗಳಲ್ಲಿ ಕಾಣಬಹುದಾಗಿದೆ.

ಸಮಾಜದ ಕಟ್ಟು-ನಿಟ್ಟುಗಳು ಜನಪದರು ಪಾಲಿಸುತ್ತ ಬಂದಿದ್ದಾರೆ ಪ್ರಣಯವು ಹರೆಯದ ಜೀವಿಗೆ ಸ್ವಾಭಾವಿಕ, ರಸನಿಮಿಷಗಳ ರಸಿಕರೂ, ರಸಾವೇಶಗಳ ಬಂಟರೂ, ಆದ ನಮ್ಮ ಹಳ್ಳಿಗರಲ್ಲಿ ಪ್ರಣಯವು ಒಂದು ರಸೋನ್ಮತ್ತವಾದ ಲೋಲೆಯಾಗಿದೆ. ಹಗಲಿರುಳು ಬಿಸಿಲು, ಗಾಳಿ, ಚಳಿಯನ್ನದೆ

ದುಡಿವ ದೇಹಾರೋಗ್ಯವನ್ನು ಬೆಳೆಸಿದ ಅವರು ಪ್ರಣಯಿಗಳೂ ಅಹುದು ಸಮಾಜದ ಕಟ್ಟಳೆಯಂತೆ ಮದುವೆಯೊಡನೆ ಪೂರ್ತಿಗೊಂಡು ದಾಂಪತ್ಯ ಜೀವನಕ್ಕೆ ಇಳಿಯುವುದು, ಇದನ್ನು ಬಿಡಿಸಿ ಅಗಲಿಸುವುದೇ ಅಸಾಧ್ಯ ಆದುದರಿಂದ ಹಳ್ಳಿಗರ ಹಾಡುಗಳಲ್ಲಿ ಸರಸ-ಸಲ್ಲಾಪದ ಕುರಿತು ಅನೇಕ ಉಸುರುಗಳು-ಉದ್ಗಾರಗಳು ಕಂಡುಬರುತ್ತವೆ.

'ಜನಪದರಿಗೆ ಸಾಮಾಜಿಕ ಮೌಲ್ಯಗಳಿಗಿಂತಲೂ ಜೀವನ ಪ್ರೀತಿಮುಖ್ಯವಾಗಿತ್ತು. ಪುರುಷ ಜೀವನಾನುಭವದ ಅಭಿವ್ಯಕ್ತಿಗಿಂತಲೂ ಸ್ತ್ರೀ ಸಂವೇದನೆಗಳಲ್ಲಿ ಹೆಚ್ಚಾಗಿ ಗುರುತಿಸಬಹುದು. ಮಾನವ ಸುಖ, ಶಾಂತಿ, ನೆಮ್ಮದಿಯಿಂದ ಬದುಕಬೇಕಾದರೆ ಶೀಲ, ಪಾತಿವ್ರತ್ಯ, ನೀತಿಯಂತಹ ಸಾಮಾಜಿಕ ಮೌಲ್ಯಗಳ ಜೊತೆಯಾಗಿ ಪ್ರೀತಿ, ತ್ಯಾಗ, ಸಹನೆಯಂಥಹ ಮಾನವೀಯ ಮೌಲ್ಯಗಳನ್ನು ಸ್ವೀಕರಿಸಬೇಕಾಯಿತು. ಈ ಮೌಲ್ಯಗಳು ಸ್ತ್ರೀಪುರುಷರಿಗೆ ಸಮಾನವಾಗಿ ಅನ್ವಯಿಸದೇ ಏಕಪಕ್ಷೀಯವಾಗಿದೆ. ಇಂತಹ ಪಕ್ಷಪಾತಕ್ಕೆ ಬಲಿಯಾದ ಮಹಿಳೆಯ ನೋವಿನ, ಸಂವೇದನೆಯ, ಎಳೆಗಳು ಜನಪದ ಸಾಹಿತ್ಯದಲ್ಲಿ ಹೆಣೆಯಲ್ಪಟ್ಟಿವೆ. ಗಂಡನಿಗೆ ಹೆಂಡತಿ, ಮಕ್ಕಳಿಗೆ ತಾಯಿ, ಸೊಸೆಗೆ ಅತ್ತೆ, ಮತ್ತು ಅತ್ತೆಗೆ ಸೊಸೆಯಾಗಿ ಬದುಕುವ ಅವಳಿಗೆ ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳು ಪ್ರಶ್ನಾತೀತವಾಗಿವೆ. ಜನಪದರಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ ದ್ವಿಮುಖವಾದದ್ದು, ಒಂದು ಕಡೆ ಮಾನಸಿಕ ಯಾತನೆ ಮತ್ತೊಂದು ಕಡೆ ಅಸಮಾನತೆಯ ನೋವುಗಳಾಗಿ ಹೊರಹೊಮ್ಮಿದೆ.

ಭಾರತೀಯ ಸಮಾಜ, ಸಂಸ್ಕೃತಿಯಲ್ಲಿ ಹೆಣ್ಣಿನ ಶೀಲಕ್ಕೆ ಒತ್ತು ಕೊಟ್ಟಿರುವುದನ್ನು ಕಾಣುತ್ತೇವೆ. ಸಾಮಾಜಿಕ ರೀತಿ-ನೀತಿ ಬೆಳೆದಂತೆ ಸ್ವಚ್ಛಂದ ಜೀವನದಿಂದ ಕೌಟುಂಬಿಕ ಜೀವನಕ್ಕೆ, ಅನಾಗರಿಕತೆಯಿಂದ ನಾಗರಿಕತೆಯತ್ತ ಜನರ ಜೀವನ ಕ್ರಮವಾಗಿಯೂ ಗಂಡನಿಗೆ ಮೀಸಲಾಗಿರುವುದು. ಇಲ್ಲವಾದಲ್ಲಿ ಚಾರಿತ್ರ್ಯದ ಪತನವಾದಂತೆ, ಹೆಣ್ಣಿನ ಶೀಲ ವ್ಯಾಪಕವಾಗಿ ಗ್ರಹಿಸಲ್ಪಟ್ಟು, ನೈತಿಕ ಶಿಕ್ಷಣವನ್ನು ನಡೆನುಡಿಗಳಿಂದ, ಹಾಡು, ಕಥೆಗಳಿಂದ ಕೊಡಲಾಗುತ್ತದೆ 'ಹೆಣ್ಣಿಗೆ ಗುಣವೇ ಶೃಂಗಾರ' ಎನ್ನುವ ಮಾತಿಗೆ ಬೆಲೆ ಕೊಟ್ಟವರು ನಮ್ಮ ಜನಪದರು, ಎಂಬುದನ್ನು ಈ ಅಧ್ಯಯನದಿಂದ ತಿಳಿದು ಬರುತ್ತದೆ.

'ದನ ದ್ರವ್ಯವಲ್ಲ' ಎಂಬುದು ರೈತ ಚೆನ್ನಾಗಿ ಬಲ್ಲ, ಆದರೂ ದನಗಳೊಡನೆ ಜನಪದರ ಅವಿನಾಭಾವ ಸಂಬಂಧವನ್ನು ಕಾಣುತ್ತೇವೆ. ಆದಿಮಾನವ ಪ್ರಾಣಿಗಳೊಡನೆ ಪ್ರಾಣಿಗಳಂತೆಯೇ ಬದುಕಿದ್ದರೆಂಬುದು ನಮಗೆ ಗೊತ್ತಿರುವ ಸಂಗತಿ. ವಿಶ್ವದ ಪ್ರಾಣಿ ಜನಪದ ಕಥೆಗಳನ್ನು ಗಮನಿಸಿದರೆ ಬಹುಪಾಲ ಪ್ರಾಣಿಗಳು ಮನುಷ್ಯರ ಜೊತೆಗೆ ಮನುಷ್ಯರಂತೆ ಬದುಕಿದ್ದ ನಿದರ್ಶನಗಳೂ ದೊರೆಯುತ್ತವೆ. ಭಾಷಾ ವಿಜ್ಞಾನಿಗಳು ಜಗತ್ತಿನ ಎಲ್ಲ ಪ್ರಾಣಿಗಳ ಮೂಲ ಪ್ರಾಣಿಭಾಷೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. ಪ್ರಾಣಿಗಳಿಗೆ ಮಾತು ಮಾತ್ರ ಬರದು ಆದರೆ ಮಾನವನಿಗಿಂತಲೂ ಪ್ರಾಣಿಗಳು ಬುದ್ಧಿಜೀವಿಗಳಾಗಿರುತ್ತವೆ. ಆದ್ದರಿಂದ ಜನಪದರು ಕೃಷಿ ಉಪಕರಣಗಳನ್ನು ಬಳಸಿಕೊಂಡು ಕೃಷಿಯ ಮೇಲೆ ಅವಲಂಬಿತರಾದರೆಂದು ತಿಳಿಯಬಹುದು.

ಇಂದು ನಮ್ಮ ಜನಪದ ಸಂಸ್ಕೃತಿ–ಆಟ, ಪಾಠ, ಉಡಿಗೆ–ತೊಡಿಗೆ, ಕಲೆಗಳು ಊಟ, ಆಚರಣೆ, ಕಟ್ಟು–ಕಟ್ಟಳೆಗಳು, ಕೃಷಿ ಸಂಬಂಧ ಪಟ್ಟ ಸಲಕರಣೆಗಳು ಅಳಿವಿನ ಅಂಚಿನಲ್ಲಿವೆ. ಅಳಿದು ಹೋಗುತ್ತಿವೆ. ಅವುಗಳ ಮಹತ್ವ ಈ ಅಧ್ಯಯನದಿಂದ ತಿಳಿದುಕೊಳ್ಳಬಹುದು.

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದಾಗಿ ನಮ್ಮ ಭಾರತೀಯರೂ ಅಕ್ಷರಜ್ಞಾನ, ಪದವಿಗಳನ್ನು ಪಡೆದು ವೈಟ್‌ಕಾಲರ್ ಜಾಬ್‌ಗಳನ್ನು ಬಯಸುತ್ತಿದ್ದಾರೆ. ಭಾರತ ಕೃಷಿಪ್ರಧಾನವಾದ ರಾಷ್ಟ್ರವಾದರೂ ಬೆವರು ಸುರಿಸಿ ದುಡಿದರೆ ಆರ್ಥಿಕವಾಗಿ ಬೆಳೆಯಲು ಅಸಾಧ್ಯವೆಂದು ಹುಟ್ಟು ಹಾಕಿದ ನೌಕರಶಾಹಿ ವರ್ಗಕ್ಕೆ ಸೇರಲು ಬಯಸುತ್ತಿದ್ದಾರೆ. ಎಲ್ಲರೂ ಸುಖ ಜೀವನಕ್ಕೆ ಮಾರುಹೋಗಿ, ದೇಶಿಯ ಸಂಸ್ಕೃತಿ ಮರೆತು, ಸಂಪೂರ್ಣ ಅಳಿದು ಹೋಗುವಂತೆ ವರ್ತಿಸುತ್ತಿದ್ದಾರೆ. ಆದ್ದರಿಂದ ಕೃಷಿ ಪದ್ಧತಿಯ ಮೇಲೆ ಅವಲಂಬಿತರಾಗುತ್ತಿಲ್ಲ.

ಜನಪದ ಸಂಸ್ಕೃತಿಯ ಪ್ರತಿಬಿಂಬವಾದ ಕೃಷಿ ಉಪಕರಣಗಳು ಕುಣಿತಗಳು, ಜನಪದ ಚಿತ್ತಾರಗಳು, ಕ್ರೀಡೆಗಳು, ಇವೆಲ್ಲವುಗಳು ಒಂದು ಪುನರುಜ್ಜೀವನ ಆಗಲಿ ಎಂದು, ಅದೇ ರೀತಿ ಅಂತರ್ ಶಿಸ್ತು ಅಧ್ಯಯನ, ಜನಪದ ಸಾಹಿತ್ಯ ಮತ್ತು ಮನಃಶಾಸ್ತ್ರ ಅಧ್ಯಯನ ಇವೆಲ್ಲವೂಗಳು ಪುನರುಜ್ಜೀವನ ಆಗಲಿ ಎಂಬುದರ ನಿಟ್ಟಿನಲ್ಲಿ ಈ ಜನಪದ ಅಧ್ಯಯನ ಪ್ರಸ್ತುತವಾಗಿದೆ.

ಪಾಶ್ಚಾತ್ಯ ಸಂಸ್ಕೃತಿಯಿಂದ ಕುಟುಂಬದಲ್ಲಿ ಸಡಿಲತೆ ಉಂಟಾಗುತ್ತಿದೆ. ಇದಕ್ಕೆ ಜ್ವಲಂತ ಸಾಕ್ಷಿಯಾಗಿ ಪ್ರತಿನಿತ್ಯ ನಡೆಯುತ್ತಿರುವ ವಿವಾಹವಿಚ್ಛೇದನಗಳು ಪ್ರತಿಯೊಂದು ಆಚರಣೆಗಳ ಹಿಂದೆ ಒಂದೊಂದು ವೈಜ್ಞಾನಿಕ ಮಾನವೀಯತೆಯ ದೃಷ್ಟಾಂತಗಳಿವೆ. ಅವುಗಳಲ್ಲಿ ಮುಖ್ಯವಾಗಿ ಮಾನಸಿಕ ಅಂಗವಿಕಲತೆ ಯುಂಟಾಗುವುದು. ಹೇಗೆಂದರೆ ಮುಂಜಾನೆಯಿಂದ ಸಾಯಂಕಾಲದವರೆಗೂ ಒಂದೇ ಕಡೆ ಕುಳಿತು ಕಾರ್ಯ ನಿರ್ವಹಿಸುವುದು, ಅಭ್ಯಾಸ ಮಾಡುವುದು, ಮುಂದುವರೆದು ಇದು ಅಂಗವಿಕಲತೆಗೆ ಕಾರಣವಾಗುವುದು. ಆದ್ದರಿಂದ ದೇಶಿ ಕ್ರೀಡೆಗಳು, ಕುಣಿತಗಳು ಆರೋಗ್ಯವಂತಾಗಲು ಸಹಕಾರಿಯಾಗಿವೆ.

ಇಂದು ನಗರೀಕರಣ, ಔದ್ಯೋಗಿಕರಣ, ಆಧುನೀಕರಣದಿಂದಾಗಿ, ಮತೀಯ ವಿಪರ್ಯಾಸವುಂಟಾಗಿದೆ. ಆನೆ ಅಂಬಾರಿ ಮ್ಯಾಲ ಮಗ, ಸೊಸೆ ಬರಲಿ ಎಂದು ಹಿಂದೆ ಹೇಳುತ್ತಿದ್ದರು. ಆದರೆ ಇಂದು ಕಾರು, ವಿಮಾನದಲ್ಲಿ ಬರಲಿ ಎಂಬ ಭಾವನೆವುಂಟಾಗಿದೆ. ಇವೆಲ್ಲವೂಗಳಿಂದಾಗಿ ವೃದ್ಧಾಪ್ಯ ಆಶ್ರಮ, ಕಿಂಡರ್ ಗಾರ್ಟನ್ ಶಾಲೆಗಳು ಹುಟ್ಟಿಕೊಂಡಿವೆ. ನಮ್ಮ ಬೀದರದಂತಹ ಸಣ್ಣ ಪಟ್ಟಣದಲ್ಲಿಯೂ ವೃದ್ಧಾಶ್ರಮಗಳು ಕಾಣಸಿಗುತ್ತಿವೆ. ಇವೆಲ್ಲಕ್ಕೂ ಮೂಲಕಾರಣ ಪಾಶ್ಚಾತ್ಯಾರ ಪ್ರಭಾವವೇ ಆದುದರಿಂದ ಜನಪದ ಸಂಸ್ಕೃತಿಯ ಕುರಿತು ಮರುಚಿಂತನೆ ಮಾಡಬೇಕೆಂಬ ನಿಟ್ಟಿನಲ್ಲಿ ಈ ಅಧ್ಯಯನ ಪಸ್ತುತವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಮಹಾಪ್ರಬಂಧವನ್ನು ರಚನೆಗೊಂಡಿದೆ. ಈ ಪ್ರಬಂಧದಲ್ಲಿ ನಿರೂಪಿತವಾದ ಅನೇಕ ವಿಷಯಗಳು ಕಣ್ಮರೆಯಾದರೂ ಅವುಗಳ ಹಿಂದಿನ ಉದ್ದೇಶ ಮತ್ತು ಪ್ರಯೋಜನಗಳು ಏನೆಂಬುದು ವಿವರಿಸಲಾಗಿದೆ.

ಅಧ್ಯಯನದ ಫಲಿತಗಳು

ಬೀದರ ತಾಲೂಕಿನ ಜಾನಪದ ಅನ್ವೇಷಣೆ; ಎಂಬ ವಿಷಯದ ಕುರಿತಾಗಿ ಮಹಾಪ್ರಬಂಧವನ್ನು ಬರೆಯಲಾಗಿದ್ದು, ಪ್ರಸ್ತುತ ಅಧ್ಯಯನದಲ್ಲಿ ಕಂಡು ಬಂದಿರುವ ಒಟ್ಟಾರೆ ಫಲಿತಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

1) ಬೀದರ ತಾಲೂಕು ಕರ್ನಾಟಕ ರಾಜ್ಯದ ಉತ್ತರದ ಗಡಿಯಲ್ಲಿರುವುದರಿಂದ ಇಲ್ಲಿ ಸಮ್ಮಿಶ್ರ ಸಂಸ್ಕೃತಿಯನ್ನು ಕಾಣುತ್ತೇವೆ. ಕನ್ನಡ ಭಾಷೆಯಲ್ಲಿ ಹಿಂದಿ, ಉರ್ದು, ಮರಾಠಿ ಭಾಷೆಯ ಶಬ್ದಗಳನ್ನು ಕಾಣುತ್ತೇವೆ.
2) ಜನಪದ ಚಿತ್ತಾರಗಳು ಜನಪದರ ಬದುಕಿನೊಂದಿಗೆ ಹೇಗೆ ಹಾಸುಕೊಕ್ಕಾಗಿವೆ. ಅದರ ಸಾಮಾಜಿಕ ಗ್ರಹಿಕೆಗಳೇನು ಇದರ ಬೆಳವಣಿಗೆಯಲ್ಲಿ ಜಾನಪದರ ಮಹಿಳೆಯರ ಪಾತ್ರವು ಅನನ್ಯವಾದುದಾಗಿದೆ.
3) ಶಿಸು ಪ್ರಾಸಗಳು ಜನಪದ ಸಾಹಿತ್ಯದ ಅಂಗ. ಜನಪದ ಸಾಹಿತ್ಯ ಪ್ರಕಾರಗಳಾದ ಗೀತೆ, ಒಗಟು, ಗಾದೆ, ಕಥೆ, ಇತ್ಯಾದಿಗಳಂತೆ ಶಿಸುಪ್ರಾಸಗಳು ವ್ಯಷ್ಟಿಯಿಂದ ಸೃಷ್ಟಿಗೊಂಡು ಸಮಷ್ಟಿಯಾಗಿ ಮಕ್ಕಳಲ್ಲಿ ಚಲಾವಣೆಗೆ ಬಂದಿವೆ ನಿತ್ಯ ಜೀವನದಲ್ಲಿ ಕಾಣುವ, ಕೆಲವು ಅಂಶಗಳನ್ನು ತಮ್ಮದೇ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುತ್ತಾರೆ. ಎಂಬುದನ್ನು ಕಂಡುಬರುತ್ತದೆ.
4) ಜನಪದ ಕುಣಿತಗಳು ಬೀದರ ತಾಲೂಕಿನಲ್ಲಿ ಹೇಗೆ ವಿಭಿನ್ನತೆಯನ್ನು ಪಡೆದಿವೆ. ಜನಪದರ ಪಾಲುಗಾರಿಕೆ ಯಾವ ರೀತಿಯಾಗಿದೆ. ಜನಪದ ಕುಣಿತಗಳು ಸಾಂಸ್ಕೃತಿಕ ಜಗತ್ತಿನಲ್ಲಿ ಯಾವ ಸ್ಥಾನಮಾನಗಳನ್ನು ಪಡೆದಿವೆ ಎಂಬುದರ ಹಿನ್ನೆಲೆಯಲ್ಲಿ ಬೀದರ ತಾಲೂಕಿನ ಜಾನಪದವು ಮಹತ್ವಪೂರ್ಣ ಎನಿಸಿದೆ.
5) ಬೀದರ ತಾಲೂಕಿನಲ್ಲಿ 30ಕ್ಕೂ ಹೆಚ್ಚು ದೇಶಿ ಕ್ರೀಡೆಗಳ ಇನ್ನೂ ಜೀವಂತವಾಗಿವೆ. ಸಾವಿರಾರು ವರ್ಷಗಳ ಇತಿಹಾಸ ಇವುಗಳಿಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜನರನ್ನು ಪರಸ್ಪರ ಕೂಡಿ ಬಾಳುವ ಅವಕಾಶವನ್ನು ಕಲ್ಪಿಸಿ ಕೊಡುತ್ತ ಬಂದಿವೆ. ಕೂಡಿ ಬಾಳುವ ಗುಣವನ್ನು ಇದರಲ್ಲಿವೆ. ಈ ದೇಶಿ ಕ್ರೀಡೆಗಳು ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಸ್ಪರ್ಧಾತ್ಮಕವಿದ್ದರೂ ಅಲ್ಲಿ ಯಾವ ಕಲಹಕ್ಕೂ ಎಡೆ ಇರುವುದಿಲ್ಲ. ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.
6) ಪ್ರಾಚೀನ ಕಾಲದಿಂದಲೂ ಜನಪದರು ಬಳಸುತ್ತಿದ್ದ ಉಡುಗೆ ತೊಡುಗೆಗಳು ಅವರ ವ್ಯಕ್ತಿಗೆ ವಾತವರಣಕ್ಕೆ ತಕ್ಕಂತೆ ರೂಪುಗೊಳ್ಳುತ್ತಿದ್ದವು. ಮೊದಮೊದಲು ಕೇವಲ ಮೈ ಮುಚ್ಚುವುದಕ್ಕಾಗಿ ಎಂಬುದನ್ನು ತಿಳಿದುಕೊಂಡಿದ್ದರು. ಕಾಲಕ್ರಮೇಣ ಪರಿಷ್ಕರಿಸಲ್ಪಡುತ್ತ ಹೋಗಿ, ಇತ್ತೀಚಿಗೆ ಅಗತ್ಯಕ್ಕಿಂತ ಹೆಚ್ಚಿಗೆ ಅಂದಚೆಂದ ಮತ್ತು ಕಲಾತ್ಮಕತೆಗಳಿಗೆ ಹೆಚ್ಚು ಕೊಡುತ್ತ ರೂಪುಗೊಂಡು ಪರಾಕರ್ಷಣೆಯ ಪ್ರಮುಖ ಮಾಧ್ಯಮಗಳಾಗಿ ಮಾರ್ಪಟಿವೆ ಎಂಬುದನ್ನು ಈ ಅಧ್ಯಯನದಲ್ಲಿ ಕಾಣಬಹುದಾಗಿದೆ.

7) ಶಿಸು ಪ್ರಾಸಗಳು ಜನಪದ ಸಾಹಿತ್ಯದ ಒಂದು ಅಂಗ. ಜನಪದ ಸಾಹಿತ್ಯದ ಪ್ರಕಾರಗಳಾದ ಗೀತೆ, ಒಗಟು, ಗಾದೆ, ಕಥೆ, ಇತ್ಯಾದಿಗಳಂತೆ ಶಿಸುಪ್ರಾಸಗಳೂ ವ್ಯಷ್ಟಿಯಿಂದ ಸೃಷ್ಟಿಗೊಂಡು ಸಮಷ್ಟಿಯಾಗಿ ಮಕ್ಕಳಲ್ಲಿ ಚಲಾವಣೆಗೆ ಬಂದಿರುತ್ತವೆ. ನಿತ್ಯ ಜೀವನದಲ್ಲಿ ಕಾಣುವ ಕೆಲವು ಅಂಶಗಳನ್ನು ತಮ್ಮದೇ ಆದ ರೀತಿಯಲ್ಲಿ ಅಭಿವ್ಯಕ್ತಿಗೊಂಡಿವೆ. ಈ ಪ್ರಾಸಗಳು ಬಾಯಿಂದ ಬಾಯಿಗೆ ಹರಿಯುವಾಗ ವ್ಯತ್ಯಾಸ ಮತ್ತು ರೂಪಾಂತರಗೊಳಗಳುತ್ತವೆ. ಇವು ಮಕ್ಕಳ ಕ್ರಿಯಾತ್ಮಕ ಬೆಳವಣಿಗೆಗೆ ಪೂರಕ ಎನ್ನಬಹುದು. ಶಿಸು ಪ್ರಾಸಗಳು ದೈನಂದಿನ ವ್ಯವಹಾರಗಳಿಗೆ ಸುತ್ತ ಮುತ್ತ ಕಾಣುವ ವಸ್ತುಗಳನ್ನು ಪ್ರತಿಬಿಂಬಿಸುತ್ತವೆ. ಬೀದರ ತಾಲೂಕಿನ ಶಿಸುಪ್ರಾಸಗಳು ವೈವಿಧ್ಯತೆಯಿಂದ ಕೂಡಿವೆ. ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ಗುರುತಿಸಲಾಗಿದೆ.

8) ಭಾಷಾ ಚಮತ್ಕಾರಗಳು ಜಾನಪದದಲ್ಲಿ ಹೇಗೆ ವಿಭಿನ್ನತೆಯನ್ನು ಪಡೆದುಕೊಂಡಿವೆ. ಸಾಹಿತ್ಯಕ, ಕ್ರಿಯಾತ್ಮಕ, ವೈಜ್ಞಾನಿಕ, ಹಾಗೂ ಭಾಷಿಕ ಈ ನಾಲ್ಕು ಬಗೆಗಳಲ್ಲಿ ಕಂಡುಬರುವಂಥದ್ದು, ಕತೆ, ಗೀತೆ, ಲಾವಣಿ ಇವು ಸಾಹಿತ್ಯದಲ್ಲೂ ನೃತ್ಯ ಸಂಗೀತ, ಕಲೆ, ಆಟ, ಇವು ಕ್ರಿಯಾತ್ಮಕದಲ್ಲೂ, ಆಚಾರ, ವೈದ್ಯ ನಂಬಿಕೆ ಇವು ವೈಜ್ಞಾನಿಕದಲ್ಲೂ ಒಗಟು ಒಡಪು, ಗಾದೆ, ಗಣಿತ, ಭಾಷಾ ಚಮತ್ಕಾರಗಳು ಭಾಷಿಕ ಬಗೆಯಲ್ಲಿ ಮೂಡಿ ಬಂದಿವೆ. ಬೀದರ ತಾಲೂಕಿನ ಭಾಷಾ ಚಮತ್ಕಾರಗಳನ್ನು ಸ್ಥಳೀಯ ಸೊಗಡಿನ ಹಿನ್ನಲೆಯಲ್ಲಿ ಹದಮೂರು ಪ್ರಕಾರಗಳಾಗಿ ಗುರುತಿಸಲಾಗಿದೆ. ಜನಪದದ ಹಲವು ಬಗೆಯ ಪ್ರಕಾರಗಳಂತೆ ಭಾಷಾ ಚಮತ್ಕಾರಗಳ ಕೊಡುಗೆ ಅನನ್ಯವಾಗಿದೆ. ಈ ಪ್ರಕಾರವನ್ನು ಅಲಕ್ಷಿತ ಜನಪದ ಪ್ರಕಾರವೆಂದು ಕಂಡುಬರುತ್ತದೆ. ಸಾಮಾನ್ಯ ಹಳ್ಳಿಗಗಿಕ್ಕಿಂತ ತಕ್ಕಮಟ್ಟಿನ ಅಕ್ಷರ ಜ್ಞಾನವುಳ್ಳ ವ್ಯಕ್ತಿಗಳಿಂದ ಭಾಷೆ ಚಮತ್ಕಾರಗಳ ಕೊಡುಗೆ ಅಪಾರವಾಗಿದೆ ಎಂಬುದನ್ನು ಇಲ್ಲಿನ ಅಧ್ಯಯನದ ಮೂಲಕ ಗುರುತಿಸಲಾಗಿದೆ.

9) ಬೀದರ ತಾಲೂಕಿನ ಜಾನಪದದಲ್ಲಿ ಅಂದಿನ ಸಂಸ್ಕೃತಿಯನ್ನು ಕಾಣುವುದಲ್ಲದೆ ಆಧುನಿಕ ಸಂದರ್ಭದ ಜಾಗತೀಕರಣದಂತಹ ಸಂದಿಗ್ಧ ವಾತಾವರಣದಲ್ಲಿ ಮರು ವಿಶ್ಲೇಷಣೆಗೆ ಒಳಪಡಿಸಿ ನಮ್ಮ ಸಾಂಸ್ಕೃತಿಕ ಜೀವನದ ಬುನಾದಿಯನ್ನು ಗುರುತಿಸಲು ಸಹಕಾರಿಯಾಗುತ್ತದೆ.

10) ಜಾನಪದದ ಅಧ್ಯಯನದಿಂದ ಚರಿತ್ರೆಯನ್ನು ಪುನರ್ ಸೃಷ್ಟಿಸಲು ಸಾಧ್ಯವಾಗುತ್ತದೆ. ಸಂಸ್ಕೃತಿಯ ವೈವಿಧ್ಯತೆಯನ್ನು ತಿಳಿದುಬರುತ್ತದೆ. ಬಿದರಿ ಕಲೆ ಇಂದು ಅಂತರಾಷ್ಟ್ರೀಯ ಮನ್ನಣೆ ಪಡೆದಿದೆ. ಬೀದರ ತಾಲೂಕಿನ ಊರು ಕೇರಿಗಳು ವ್ಯಕ್ತಿ, ಪ್ರಾಣಿ–ಪಕ್ಷಿ, ಸಂಖ್ಯೆ–ಗಾತ್ರ, ಭೌಗೋಳಿಕ ಸ್ಥಿತಿ, ಘಟನೆ, ಗಿಡ–ಗಂಟೆ, ರಾಜವಂಶ, ದೇವರು, ಮುಂತಾದವುಗಳಿಂದ ಬಂದವುಗಳಾಗಿವೆ ಎಂಬುದನ್ನು ತಿಳಿದುಬರುತ್ತದೆ. ಉದಾ: ಮೈಲೂರು, ನಾಗೂರು, ಅತಿವಾಳ, ಬೆನಕನಳ್ಳಿ, ನಾವದಗೇರಿ, ಲಾಡಗೇರಿ, ಕುಂಬಾರಗೇರಿ ಮುಂತಾದವುಗಳನ್ನು ಹೆಸರಿಸಬಹುದಾಗಿದೆ.

ಅನುಬಂಧ

1) ಆಕರ ಗ್ರಂಥಗಳು

1. ಅಭಿನಂದನ (ಲೇ) ಜನಪದ ಕಲೆಗಳು: 2009 ಜಯಶ್ರೀ ಎಂಟರ್‌ಪ್ರೈಸಸ್, ಬೆಂಗಳೂರು.
2. ಅತ್ತಿಗೇರಿ ಸುಮಂಗಲಾ (ಲೇ) ಕೃಷಿ ಜಾನಪದ ಮತ್ತು ಮಹಿಳೆ: 2010: ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು.
3. ಅಮರೇಶ ನುಗಡೋಣಿ (ಸಂ) ಕನ್ನಡ ಸಂಶೋಧನೆಯ ವೈಧಾನಿಕತೆಗಳು: 2008: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
4. ಅಭಿನಂದನ (ಲೇ) ಜನಪದ ಆಟಗಳು 2011 ಚಂದನ ಪ್ರಕಾಶ, ಬೆಂಗಳೂರು.
5. ಅರವಿಂದ ಮಾಲಗತ್ತಿ (ಪ್ರ.ಸಂ) ಕನ್ನಡ ವಿಷಯ ವಿಶ್ವಕೋಶ:2005: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ.
6. ಈಶ್ವರಪ್ಪ ಎಂ.ಜಿ. ಮತ್ತು ಶಿವರಾಮು ವ.ನಂ. (ಸಂ) ಜಾನಪದ ಗಂಗೋತ್ರಿ: 1996 ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.
7. ಉಮೇಶ ಎಚ್.ಎಸ್. ಮತ್ತು ಹಾಲತಿ ಸೋಮಶೇಖರ (ಸಂ): ಸಮಕಾಲಿನ ಸಂಶೋಧನೆ ಎನು? ಎತ್ತ: 2014 : ವಿಸ್ಮಯ ಪ್ರಕಾಶನ ಮೈಸೂರು.
8. ಕಲಬುರ್ಗಿ ಎಂ.ಎಂ. (ಲೇ) ಪರಿಕಲ್ಪನೆ: 2007 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
9. ಕೊಂಡಾ ಬಿ.ಆರ್. (ಲೇ) ಬೀದರ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ:2009: ಪ್ರಸಾರಾಂಗ, ಸ್ನಾತಕೋತ್ತರ ಕನ್ನಡ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಕರ್ನಾಟಕ ಕಾಲೇಜು, ಬೀದರ.
10. ಗದ್ದಗಿಮಠ ಬಿ.ಎಸ್. (ಲೇ) ಕನ್ನಡ ಜನಪದ ಗೀತೆಗಳು: 1963: ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
11. ಗಾಣಧಾಳು ಶ್ರೀಕಂಠ (ಲೇ) ಕೃಷಿ ಉಪಕರಣ : 2008 ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.
12. ಗಿರಜಾಪತಿ ನೆ.ಮ. (ಲೇ) : ಸಂಶೋಧನೆ: 2015 ಚೈತನ್ಯ ಪಬ್ಲಿಷರ್ಸ್ ರಾಮಸಾಗರ.
13. ಗೋವಿಂದರಾಜು ಟಿ. (ಲೇ) ಪ್ರಾಚ್ಯ ಜಾನಪದ : 2006 : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,
14. ಗೋವಿಂದ ರಾಜು ಟಿ. (ಲೇ) ಹಳ್ಳೀಮನೆ: 2006 ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
15. ಚಂದ್ರಶೇಖರ ಕಂಬಾರ (ಸಂ): ಕನ್ನಡ ಜಾನಪದ ವಿಶ್ವಕೋಶ ಸಂ. 1 ಮತ್ತು ಸಂ. 2: 1985: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
16. ಚಿದಾನಂದಮೂರ್ತಿ ಎಂ. (ಲೇ) ಸಂಶೋಧನೆ: 2012 ಡಿ.ವಿ.ಕೆ. ಮೂರ್ತಿ ಪ್ರಕಾಶನ ಮೈಸೂರು.

17. ಜವರೇಗೌಡ ದೇ. (ಲೇ) ಜಾನಪದ ವಾಹಿನಿ: 1986: ಡಿ.ವಿ.ಕೆ. ಮೂರ್ತಿ ಪ್ರಕಾಶನ ಮೈಸೂರು.
18. ಜಗನ್ನಾಥ ಹೆಬ್ಬಾಳೆ (ಲೇ) ಧರಿ ಜಾನಪದ : 2011 ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ ಬೀದರ.
19. ಜಗನ್ನಾಥ ಹೆಬ್ಬಾಳೆ (ಸಂ): ಧರಿನಾಡಿನ ಜನಪದ ಹಾಡುಗಳು : 2013 : ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ, ಬೀದರ.
20. ಜಗನ್ನಾಥ ಹೆಬ್ಬಾಳೆ (ಸಂ): ಬೀದರ ಜಿಲ್ಲೆಯ ನಾಟಿ ವೈದ್ಯ: 2006: ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
21. ತಪಸ್ವಿಕುಮಾರ ನಂ (ಲೇ) ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ:1999 ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
22. ದೇಶಾಂಶ ಹುಡಗಿ ಮತ್ತು ಚಂದ್ರಪ್ಪ ಹೆಬ್ಬಾಳಕರ್ (ಸಂ) ಬೀದರ ಜಿಲ್ಲೆಯ ಜಾನಪದ ಸೊಗಡು:2012 ಶೋಭಾ, ಕಲೆ ಸಾಹಿತ್ಯ, ಸಂಗೀತ ಮತ್ತು ಸಾಂಸ್ಕೃತಿಕ ಟ್ರಸ್ಟ (ರಿ) ಬೀದರ.
23. ಧನಲಕ್ಷ್ಮೀ ವಿಶ್ವನಾಥ (ಲೇ) ಬೀದರ ಜಿಲ್ಲೆಯ ಜನಪದ ಸಾಹಿತ್ಯ : 2011(ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಂಧ) ಕನ್ನಡ ವಿಶ್ವವಿದ್ಯಾಲಯ ಹಂಪಿ,
24. ನಾಗವೇಂದ್ರ ಸ್ವಾಮಿ ಚಿದರವಳ್ಳಿ (ಲೇ) 2000 ನನ್ನೂರು–ನನ್ನೋರು: ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
25. ನಾಯಕ ಎನ್.ಆರ್. (ಲೇ) ಕರ್ನಾಟಕದ ಶಕ್ತಿದೇವತೆಗಳು: 1983: ಐಬಿಎಚ್ ಪ್ರಕಾಶನ ಬೆಂಗಳೂರು.
26. ನಾರಾಯಣರಾವ್ ಎಂ.ವಿ. (ಲೇ) ನಮ್ಮ ಕರಕುಶಲ ವಸ್ತುಗಳು: 1998: ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಹೊಸದೆಹಲಿ.
27. ನಾವಡ ಎ.ವಿ. (ಸಂ) : ಕರ್ನಾಟಕ ಸಂಶೋಧನಾ ಜಾನಪದ : 2014 : ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಗೊಟಗೋಡಿ.
28. ನಾಗರಾಜಯ್ಯ ಹಂಪಾ (ಪ್ರ.ಸಂ.) ದ್ರಾವಿಡ ಭಾಷಾ ಜ್ಞಾತಿ ಪದಕೋಶ:2014: ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
29. ನಿಂಗಣ್ಣ ಚಿ.ಸಿ. (ಸಂ) ಜಾನಪದ ಸಾಹಿತ್ಯ ಸಂಗಾತಿ : 2012 ಕಾವ್ಯ–ಕಿರಣ ಪ್ರಕಾಶನ ಕಲಬುರ್ಗಿ.
30. ನೀಲಗಂಗಾ (ಲೇ) ಚಿತ್ತಾರ 2010 ನೀಲಗಂಗಾ ಚರಂತಿಮಠ ಪ್ರಕಾಶನ ಬೆಳಗಾವಿ.
31. ಪರಮಶಿವಮೂರ್ತಿ ಡಿ.ವಿ. (ಸಂ) ಸಾಹಿತ್ಯ ಕರ್ನಾಟಕ : 2002 : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
32. ಪಡ್ರೆ ಶ್ರೀ (ಲೇ) ಕರ್ನಾಟಕದ ಬರನಿರೋಧಕ ಜಾಣ್ಮೆಗಳು : 2008 ; ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು.

33. ಪುಟ್ಟಯ್ಯ ಬಿ.ಎಂ. (ಲೇ) ಸಂಶೋಧನೆ ತಾತ್ವಿಕ ಆಯಾಮಗಳು : 2015 : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.
34. ಪ್ರಕಾಶ ಗ.ಖಾಡೆ: ಜಾನಪದ ಹೆಬ್ಬಾಗಿಲು: 2013 : ಅಂಬಾರಿ ಪ್ರಕಾಶನ ಮೈಸೂರು.
35. ಬಸವರಾಜ ನೆಲ್ಲಿಸರ (ಸಂ) ಜಾನಪದ : 1996 ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.
36. ಬಸವರಾಜ ಸಬರದ (ಲೇ) ಬಹು ಮುಖಿ ಜಾನಪದ 2008 ಪಲ್ಲವಿ ಪ್ರಕಾಶನ ಕಲಬುರ್ಗಿ.
37. ಬಸವರಾಜ ಸಬರದ (ಲೇ) ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ 1982 ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
38. ಬಸವರಾಧ್ಯ ಎನ್ (ಪ್ರ.ಸಂ) ಸಂಕ್ಷಿಪ್ತ ಕನ್ನಡ ನಿಘಂಟು: 2001 : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
39. ಬೀದರ ಉತ್ಸವ 2014 ಸ್ಮರಣ ಸಂಚಿಕೆ: 2014 ಜಿಲ್ಲಾ ಆಡಳಿತ ಬೀದರ.
40. ಬೀದರ ಉತ್ಸವ 2006 ಸ್ಮರಣ ಸಂಚಿಕೆ ಜಿಲ್ಲಾ ಸಂಸ್ಕೃತಿ ಪರಿಷತ್, ಬೀದರ,
41. ಬಿರಾದಾರ ಎಂ.ಎಸ್. (ಸಂ) ಮಹಾರಾಷ್ಟ್ರದ ಗಡಿಯ ಜಾನಪದ ಗೀತೆಗಳು: 1989 : ಉದಯಗಿರಿ ಮಹಾವಿದ್ಯಾಲಯ ಉದಗೀರ ಮಹಾರಾಷ್ಟ್ರ.
42. ಮಲ್ಲಿಕಾರ್ಜುನ ಶಿ.ಲಠ್ಠೆ (ಸಂ) ಉತ್ತರ ಕರ್ನಾಟಕದ ಜನಪದ ನಂಬಿಕೆಗಳು: ಪ್ರಶಾಂತ ಪ್ರಕಾಶನ ಮುತನಾಳ.
43. ಮಳಲಿ ವಸಂತಕುಮಾರ (ಲೇ); ಜಾನಪದ ಜಾಗೃತಿ 2013 ಸಪ್ನ ಬುಕ್ ಹೌಸ್, ಬೆಂಗಳೂರು.
44. ಮಲ್ಲಿಕಾರ್ಜುನ ಸಂ. ಮೇತ್ರಿ (ಲೇ) ಜಾನಪದ ಆಟಗಳು: 2006 : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
45. ಮಲ್ಲಣ್ಣ ಶಂಕರಣ್ಣ ನಾಗನಾಳ (ಲೇ) ಒಣ ಬೇಸಾಯ ಪದ್ಧತಿಗಳು 2010 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
46. ಮಹಾಬಲೇಶ್ವರರಾವ (ಲೇ) ಸಂಶೋಧನ ಮಾರ್ಗ; 2000: ನವಕರ್ನಾಟಕ ಪ್ರಕಾಶನ ಬೆಂಗಳೂರು.
47. ಮಹಾದೇವಿ ಮುಲಗೆ (ಲೇ) ಬೀದರ ಜಿಲ್ಲೆಯ ದೇವರೋತ್ಸವಗಳು: 2011 ಅಖಿಲ ಭಾರತ ಜಾನಪದ ಸಮ್ಮೇಳನ, ಬೀದರ.
48. ಮುರಿಗೆಪ್ಪ ಎ. (ಲೇ) ಬೀದರ ಜಿಲ್ಲೆಯ ಕನ್ನಡ: 2006 : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
49. ರಮೇಶ ಸ.ಚಿ. (ಸಂ) ಜಾನಪದ ಸೆಲೆ 2006 ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ ಬೀದರ.
50. ರಮೇಶ ಸ.ಚಿ. (ಸಂ) ಜಾನಪದ ಕರ್ನಾಟಕ : 2010 : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,

51. ರಾಮೇಶ್ವರ ಎ.ಕೆ. (ಲೇ) ಹಬ್ಬಗಳು: 1979 ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
52. ಲಿಂಗಯ್ಯ ಡಿ. (ಲೇ) ಕರ್ನಾಟಕದ ಗ್ರಾಮ ದೇವತೆಗಳು: 1984 ಐಬಿಎಚ್ ಪ್ರಕಾಶನ ಬೆಂಗಳೂರು.
53. ವಾಲಿ ಎಂ.ಎನ್ (ಲೇ) ಕೃಷಿ ಜಾನಪದ 2006 : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
54. ವಿಜಯಕುಮಾರ ಗಿಡ್ನವರ (ಲೇ) ಬೀದರ ಜಿಲ್ಲೆಯಲ್ಲಿ ಕೃಷಿ 2000 ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ.
55. ವೀರಣ್ಣ ದಂಡೆ (ಸಂ) ಆಯ್ದ ಗಾದೆಗಳು ಹಾಗೂ ಒಗಟುಗಳು : 2007 ಕವಿಮಾರ್ಗ ಪ್ರಕಾಶನ ಕಲಬುರ್ಗಿ.
56. ವೀರೇಂದ್ರ ಶೀಲವಂತ (ಲೇ) ಕೃಷಿ ಆಚರಣೆಗಳು: 2010 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
57. ಶಿವರಾಜ ಪಾಟೀಲ (ಸಂ) ಜಾನಪದ ತವನಿಧಿ 2007 ಬಸವ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳು ಕಲಬುರ್ಗಿ.
58. ಶೇಷಗಿರಿರಾವ ಎಲ್.ಎಸ್. (ಪ್ರ.ಸಂ) ಕಿರಿಯರ ಕರ್ನಾಟಕ 1994: ಕನ್ನಡ ವಿಶ್ವವಿದ್ಯಾಲಯ ಹಂಪಿ.
59. ಷಂಶುದ್ದೀನ್ ಬಿ.ಎ. (ಸಂ) ಸಂಶೋಧನೆಯ ಶೋಧನೆಯಲ್ಲಿ 2011 ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮಡಕೇರಿ.
60. ಸಂಧ್ಯಾರೆಡ್ಡಿ ಕೆ.ಆರ್. (ಲೇ) ಜಾನಪದ ಪರಿಶೀಲನೆ: 2006 : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
61. ಸ್ವಾಮಿ ಬಿ.ಎಸ್. (ಲೇ) ಹಬ್ಬ ಹರಿದಿನಗಳು: 1987 ನವೀನ ಪ್ರಕಾಶನ ಬೆಂಗಳೂರು.
62. ಸಿದ್ದಗಂಗಪ್ಪ ಎಚ್. ಎಸ್. (ಲೇ) ಜಾನಪದ ಸಂಶೋಧನ ತೆನೆಗಳು: 2016 ಛಾಯಾ ಸಾಹಿತ್ಯ, ಬೆಂಗಳೂರು.
63. ಸುರೇಶ ಚನಶೆಟ್ಟಿ (ಪ್ರ.ಸಂ) ವಚನ ಸಂಸ್ಕೃತಿ ನೆನಪಿನ ಸಂಚಿಕೆ : 2010 ತಾಲೂಕ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ.
64. ಸೋಮನಾಥ ಯಾಳವಾರ, ಕಾವ್ಯಶ್ರೀ ಪ್ರದೀಪ ಕೊಟ್ಟಗಿ (ಲೇ) ವೈದ್ಯ ಜಾನಪದ 2006 ಸ್ವಾಗತ ಸಮಿತಿ, ಅಖಿಲ ಭಾರತ ಜಾನಪದ ಸಮ್ಮೇಳನ ಬೀದರ.
65. ಸೋಮಣ್ಣ (ಲೇ) ವ್ಯವಸಾಯ ಸಂಬಂಧಿ ಆಚರಣೆಗಳು 2010 ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
66. ಹಕಾರಿ ದೇವೇಂದ್ರಕುಮಾರ ಮತ್ತು ಸಂಧ್ಯಾರಡ್ಡಿ ಕೆ.ಆರ.(ಸಂ) ಗ್ರಾಮೀಣ ಪಶುಸಾಕಣೆ 2000 ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.
67. ಹಿರೇಮಠ ಎಸ್.ಎಂ. (ಸಂ. ಮತ್ತು ಲೇ) ಬೀದರ ಜಿಲ್ಲೆಯ ತತ್ತ್ವಪದಕಾರರ ಸ್ಮಾರಕಗಳು ಸಂಪುಟ 1,2, ಮತ್ತು 3:2012 ಕನ್ನಡ ಅಧ್ಯಾಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ.

68. ಹಿರೇಮಠ ಎಸ್.ಪಿ. (ಲೇ) ಗ್ರಾಮೀಣ ತಂತ್ರಜ್ಞಾನ 1983 ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ.

69. Seshagiri Rao (S.C. Ed): Subhash English – English-kannada Dictionary : 2012 : Subhash Stores Books Corner Banglore.

2: ವಕ್ತಾರರ ಪಟ್ಟಿ

ಕ್ರಮ.ಸಂ	ಹೆಸರು ವಿಳಾಸ	ವಯಸ್ಸು	ಶಿಕ್ಷಣ	ವೃತ್ತಿ
1	ಚಂದ್ರಮ್ಮಾ ಬಿರಾದಾರ ಗುನ್ನಳ್ಳಿ, ತಾ. ಜಿಲ್ಲಾ. ಬೀದರ	75	ಇಲ್ಲ	ಗೃಹಣಿ
2	ಲಕ್ಷ್ಮಿಬಾಯಿ ಗುನ್ನಳ್ಳಿಕರ್ ನಾವದಗೇರಿ ತಾ. ಜಿಲ್ಲಾ. ಬೀದರ	60	ಇಲ್ಲ	ಗೃಹಣಿ
3	ಗುಂಡಮ್ಮಾ ಎಚ್. ನಾವದಗೇರಿ ತಾ. ಜಿಲ್ಲಾ. ಬೀದರ	53	ಇಲ್ಲ	ಗೃಹಣಿ
4	ವಿಜಯಲಕ್ಷ್ಮಿ ತುಳಸಿರಾಮ ಅಲಿಯಾಬಾದ ತಾ. ಜಿಲ್ಲಾ. ಬೀದರ	51	7ನೇ ತರಗತಿ	ಹೈನುಗಾರಿಕೆ
5	ನಿರ್ಮಲಾ ಶೆಟಕಾರ ಕಾಡವಾದ. ತಾ. ಜಿಲ್ಲಾ. ಬೀದರ	62	10ನೇ ತರಗತಿ	ವ್ಯವಸಾಯ
6	ರೇಣುಕಾಬಾಯಿ ಶಿವಕುಮಾರ ಕುತ್ತಾಬಾದ. ತಾ. ಜಿಲ್ಲಾ. ಬೀದರ	48	8ನೇ ತರಗತಿ	ಗೃಹಣಿ
7	ಷರೀಫಾ ಬೆಗಂ ಖಾದರನಗರ ತಾ. ಜಿಲ್ಲಾ. ಬೀದರ	65	ಇಲ್ಲ	ಗೃಹಣಿ
8	ಮೀನಾಕ್ಷಿ ಬಸವರಾಜ ಕೋಳಾರ (ಬಿ) ತಾ. ಜಿಲ್ಲಾ. ಬೀದರ	46	ಪಿಯುಸಿ	ಗೃಹಣಿ
9	ಮಹೇಶ್ವರಿ ಸುನಿಲ ಮಾನಕಾರ ಗಾದಗಿ, ತಾ. ಜಿಲ್ಲಾ. ಬೀದರ	48	ಬಿ.ಎ.	ಟೇಲರಿಂಗ
10	ಸುರೇಖಾ ಬಿರಾದಾರ ಕಂಗಟಿ. ತಾ. ಜಿಲ್ಲಾ. ಬೀದರ	55	10ನೇ ತರಗತಿ	ಗೃಹಣಿ

11	ಶಿವಲಿಲಾ ಮಠಪತಿ ಭಂಗೂರ, ತಾ. ಜಿಲ್ಲಾ. ಬೀದರ	50	ಪಿಯುಸಿ	ವ್ಯವಸಾಯ
12	ಪ್ರಿಯಾಂಕಾ ಬಳತೆ ಹಿಪ್ಪಳಗಾಂವ. ತಾ. ಜಿಲ್ಲಾ. ಬೀದರ	40	ಪಿಯುಸಿ	ಗೃಹಣಿ
13	ಗೀತಾ ಮೂಲಗೆ ಚಿಲ್ಲರ್ಗಿ ತಾ. ಜಿಲ್ಲಾ. ಬೀದರ	40	ಬಿ.ಎ.	ಗೃಹಣಿ
14	ಅಶ್ವಿನಿ ತೆಲಂಗಾಣೆ ಚಿಲ್ಲರ್ಗಿ. ತಾ. ಜಿಲ್ಲಾ. ಬೀದರ	40	5ನೇ ತರಗತಿ	ಗೃಹಣಿ
15	ಚಂದ್ರಕಲಾ ಹಣಮಂತಪ್ಪಾ ಪಾಟೀಲ ಚಿಮಕೋಡ ತಾ. ಜಿಲ್ಲಾ. ಬೀದರ	68	5ನೇ ತರಗತಿ	ಗೃಹಣಿ
16	ಶರಣಮ್ಮಾ ಬೇಲೂರೆ ಜನವಾಡ ತಾ. ಜಿಲ್ಲಾ. ಬೀದರ	75	ಇಲ್ಲ	ಗೃಹಣಿ
17	ಸಂಗೀತಾ ಎರನಾಳೆ ಚಿಕಪೇಟ ತಾ. ಜಿಲ್ಲಾ. ಬೀದರ	38	10ನೇ ತರಗತಿ	ಟೆಲರಿಂಗ
18	ಬಕ್ಕಮ್ಮಾ ಮಠಪತಿ ನಾವದಗೇರಿ ತಾ. ಜಿಲ್ಲಾ. ಬೀದರ	78	ಇಲ್ಲ	ಗೃಹಣಿ
19	ಜಗದೇವಿ ಬೀಚಕುಂದೆ ಹೊನ್ನಿಕೇರಿ ತಾ. ಜಿಲ್ಲಾ. ಬೀದರ	45	ಪಿಯುಸಿ	ಟೇಲರಿಂಗ್
20	ಪ್ರಭಾವತಿ ಎಚ್ ಹೊನ್ನಡ್ಡಿ ತಾ. ಜಿಲ್ಲಾ. ಬೀದರ	65	ಇಲ್ಲ	ಗೃಹಣಿ
21	ನರಸಮ್ಮಾ ಪತ್ತೆಪುರ ತಾ. ಜಿಲ್ಲಾ. ಬೀದರ	48	ಇಲ್ಲ	ಹೈನುಗಾರಿಕೆ
22	ಚಾಂದಬಿ ಮೈಲೂರ ತಾ. ಜಿಲ್ಲಾ. ಬೀದರ	70	5ನೇ ತರಗತಿ	ಗೃಹಣಿ

23	ಇಂದುಮತಿ ಮಾಳಗೆ ನೌಬಾದ ತಾ. ಜಿಲ್ಲಾ. ಬೀದರ	45	ಬಿ.ಎ.	ಗೃಹಣಿ
24	ಶಂಕರ ಚೊಂಡಿ ತಾ. ಜಿಲ್ಲಾ. ಬೀದರ	48	10ನೇ ತರಗತಿ	ಕಲಾವಿದ
25	ಶಾರದಾ ಬುಯ್ಯಾ ಮರಖಲ ತಾ. ಜಿಲ್ಲಾ. ಬೀದರ	60	10ನೇ ತರಗತಿ	ಗೃಹಣಿ
26	ನಾಜಿಯಾ ಬೇಗಂ ಸಿಂದೋಲ ತಾ. ಜಿಲ್ಲಾ. ಬೀದರ	58	ಇಲ್ಲ	ಗೃಹಣಿ
27	ಕಲ್ಪನಾ ಬೀದೆ ಜನವಾಡ ತಾ. ಜಿಲ್ಲಾ. ಬೀದರ	62	ಪಿಯುಸಿ	ಗೃಹಣಿ
28	ಶಾಮಲಾ ಎಲಿ ತಡಪಳ್ಳಿ ತಾ. ಜಿಲ್ಲಾ. ಬೀದರ	65	ಬಿ.ಎ.	
29	ಮಲ್ಲಮ್ಮಾ ಸಂತಾಜಿ ನೌಬಾದ ತಾ. ಜಿಲ್ಲಾ. ಬೀದರ	48	ಬಿ.ಎ.	ಶಿಕ್ಷಕಿ
30	ಶಿವಕುಮಾರ ಪಾಂಚಾಳ ಕುಂಬಾರವಾಡ ತಾ. ಜಿಲ್ಲಾ. ಬೀದರ	49	ಪಿಯುಸಿ	ಸಂಗೀತಗಾರ
31	ಗೀತಾ ಪಾಟೀಲ ಜನವಾಡ ತಾ. ಜಿಲ್ಲಾ. ಬೀದರ	38	ಬಿ.ಎ.	ಶಿಕ್ಷಕಿ
32	ಧನಲಕ್ಷ್ಮಿ ಪಾಟೀಲ ಹೊಕ್ರಾಣ ತಾ. ಜಿಲ್ಲಾ. ಬೀದರ	46	ಪಿ.ಎಚ್.ಡಿ	ಉಪನ್ಯಾಸಕಿ
33	ಜಯಶ್ರೀ ಪ್ರಕಾಶ ಸುಕಾಲೆ ಗಾದಗಿ ತಾ. ಜಿಲ್ಲಾ. ಬೀದರ	50	ಪಿಯುಸಿ	ಗೃಹಣಿ
34	ಚಂದ್ರಕಲಾ ಹಾರೂರಗೇರಿ ಶ್ರೀಮಂಡಲ ತಾ. ಜಿಲ್ಲಾ. ಬೀದರ	58	10ನೇ ತರಗತಿ	ಸಂಗೀತಗಾರ

35	ಗೌರಮ್ಮಾ ಮಾಮನಕೇರಿ ತಾ. ಜಿಲ್ಲಾ. ಬೀದರ	75	ಇಲ್ಲ	ಗೃಹಣಿ
36	ರತ್ನಮ್ಮಾ ಮೇತ್ರೆ ಭಂಗೂರ ತಾ. ಜಿಲ್ಲಾ. ಬೀದರ	65	ಇಲ್ಲ	ಗೃಹಣಿ
37	ಸುಶೀಲಾಬಾಯಿ ಸಂಗೋಳಗಿ ತಾ. ಜಿಲ್ಲಾ. ಬೀದರ	75	ಇಲ್ಲ	ಗೃಹಣಿ
38	ಶೋಭಾ ಔರಾದ ಬಗದಲ ತಾ. ಜಿಲ್ಲಾ. ಬೀದರ	55	ಪಿಯುಸಿ	ಗೃಹಣಿ
39	ಪ್ರಭಾವತಿ ಹಳ್ಳದಕೇರಿ ತಾ. ಜಿಲ್ಲಾ. ಬೀದರ	70	ಇಲ್ಲ	ಗೃಹಣಿ
40	ಸರಸ್ವತಿ ಹೊದಲೂರೆ ಶಹಾಪೂರ ತಾ. ಜಿಲ್ಲಾ. ಬೀದರ	63	ಇಲ್ಲ	ಗೃಹಣಿ
41	ರಾಜಮ್ಮಾ ಬಕಚೌಡಿ ತಾ. ಜಿಲ್ಲಾ. ಬೀದರ	60	ಇಲ್ಲ	ಗೃಹಣಿ
42	ವೈಜಂತಿ ಕಾಳೆ ಬಾಪೂರ ತಾ. ಜಿಲ್ಲಾ. ಬೀದರ	80	ಇಲ್ಲ	ಗೃಹಣಿ
43	ಶ್ರೀದೇವಿ ರಾಜಕುಮಾರ ಹೊಚಕನಳ್ಳಿ ತಾ. ಜಿಲ್ಲಾ. ಬೀದರ	52	ಇಲ್ಲ	ಗೃಹಣಿ
44	ಮಹಾದೇವಿ ಸಂಗೋಳಗಿ ತಾ. ಜಿಲ್ಲಾ. ಬೀದರ	58	ಇಲ್ಲ	ಗೃಹಣಿ
45	ಸುನಿತಾ ಬಾಬುರಾವ ವಿಳಾಸಪುರ ತಾ. ಜಿಲ್ಲಾ. ಬೀದರ	35	ಪಿಯುಸಿ	ಗೃಹಣಿ
46	ಕವಿತಾ ಹಲಬರ್ಗೆ ನೇಮತಾಬಾದ ತಾ. ಜಿಲ್ಲಾ. ಬೀದರ	46	10ನೇ ತರಗತಿ	ಗೃಹಣಿ

47	ಪ್ರೇಮಿಲಾ ಪಾಟೀಲ ಮನ್ನಳ್ಳಿ ತಾ. ಜಿಲ್ಲಾ. ಬೀದರ	58	ಪಿಯುಸಿ	ಗೃಹಣಿ
48	ಶೆಂಕರೆಮ್ಮಾ ರಾಚಣ್ಣಾ ದದ್ದಾಪೂರ ಬುಧೇರಾ ತಾ. ಜಿಲ್ಲಾ. ಬೀದರ	63	ಇಲ್ಲ	ಗೃಹಣಿ
49	ಶೆಕಮ್ಮಾ ದದ್ದಾಪೂರ ತಾ. ಜಿಲ್ಲಾ. ಬೀದರ	70	ಇಲ್ಲ	ಗೃಹಣಿ
50	ಮಹೇಶ್ವರಿ ಸುನೀಲ ಬಂಪಳ್ಳಿ ತಾ. ಜಿಲ್ಲಾ. ಬೀದರ	45	ಇಲ್ಲ	ಗೃಹಣಿ
51	ಗಂಗಮ್ಮಾ ಸಾಳೆ ನಿಡವಂಚಾ ತಾ. ಜಿಲ್ಲಾ. ಬೀದರ	68	ಇಲ್ಲ	ಗೃಹಣಿ
52	ಪರ್ಯಾಗಬಾಯಿ ಕಾಶಪ್ಪಾ ಚಿದಕನಳ್ಳಿ ತಾ. ಜಿಲ್ಲಾ. ಬೀದರ	73	ಇಲ್ಲ	ಗೃಹಣಿ
53	ಉಜ್ವಲ ಸಿದ್ಧವೀರ ಭಂಗೂರ ತಾ. ಜಿಲ್ಲಾ. ಬೀದರ	43	ಪಿಯುಸಿ	ಗೃಹಣಿ
54	ಅನುಸೂಯಾ ಮೇತ್ರೆ ಮಲ್ಕಾಪುರ ತಾ. ಜಿಲ್ಲಾ. ಬೀದರ	70	ಇಲ್ಲ	ಹೈನುಗಾರಿಕೆ
55	ನೂರಜಾ ಅಲ್ಲಾಪೂರ ತಾ. ಜಿಲ್ಲಾ. ಬೀದರ	55	ಇಲ್ಲ	ಗೃಹಣಿ
56	ಕಲಾವತಿ ಬಿರಾದಾರ ರಂಜೋಳಖೇಣಿ ತಾ. ಜಿಲ್ಲಾ. ಬೀದರ	65	ಬಿ.ಎ.	ಗೃಹಣಿ
57	ತುಕ್ಕಮ್ಮಾ ಬರೂರ ತಾಂಡ ತಾ. ಜಿಲ್ಲಾ. ಬೀದರ	78	ಇಲ್ಲ	ಗೃಹಣಿ

58	ಪುಣ್ಯವತಿ ಕಡಾಳೆ ಮರಖಲ್ ತಾ. ಜಿಲ್ಲಾ. ಬೀದರ	68	ಇಲ್ಲ	ಗೃಹಣಿ
59	ಶಾಂತಬಾಯಿ ರಾಜಗೀರಾ ತಾ. ಜಿಲ್ಲಾ. ಬೀದರ	72	ಇಲ್ಲ	ಗೃಹಣಿ
60	ಗಯಾಬಾಯಿ ಪಾಂಡುರಂಗ ಸಾತೋಳಿ ತಾ. ಜಿಲ್ಲಾ. ಬೀದರ	62	ಇಲ್ಲ	ಗೃಹಣಿ
61	ರಂಗಮ್ಮ ಸಾವಲೆ ಸಿದ್ದಾಪುರ ತಾ. ಜಿಲ್ಲಾ. ಬೀದರ	59	ಇಲ್ಲ	ಗೃಹಣಿ
62	ಪುತಳಾಬಾಯಿ ಭುರೆ ಹಮಿಲಾಪುರ ತಾ. ಜಿಲ್ಲಾ. ಬೀದರ	63	5ನೇ ತರಗತಿ	ಗೃಹಣಿ
63	ಶಿವಮ್ಮಾ ಶೇಕಪ್ಪಾ ಸೋಲಪುರ ತಾ. ಜಿಲ್ಲಾ. ಬೀದರ	82	ಇಲ್ಲ	ಗೃಹಣಿ
64	ಕಾಶಮ್ಮಾ ಕಡಾಳೆ ಸಿರ್ಸಿ ತಾ. ಜಿಲ್ಲಾ. ಬೀದರ	76	ಇಲ್ಲ	ಗೃಹಣಿ
65	ನಿಂಗಮ್ಮಾ ಮಾಳಗೆ ಸಿರಕಟನಳ್ಳಿ ತಾ. ಜಿಲ್ಲಾ. ಬೀದರ	54	ಇಲ್ಲ	ಗೃಹಣಿ
66	ಮಲ್ಲಮ್ಮಾ ಚಂದ್ರಶೇಖರ ರೇಕುಳಗಿ ತಾ. ಜಿಲ್ಲಾ. ಬೀದರ	57	8ನೇ ತರಗತಿ	ಗೃಹಣಿ
67	ಸಂಗಮ್ಮಾ ಮಠಪತಿ ರೇಕುಳಗಿ ತಾ. ಜಿಲ್ಲಾ. ಬೀದರ	64	3ನೇ ತರಗತಿ	ಗೃಹಣಿ
68	ಝುರೆಮ್ಮ ಮೇತ್ರೆ ಮಾಳೆಗಾಂವ ತಾ. ಜಿಲ್ಲಾ. ಬೀದರ	77	ಇಲ್ಲ	ಹೈನುಗಾರಿಕೆ
69	ಜಗದೇವಿ ಹಣಮಂತ ಮೊರಡೆ ಯದಲಾಪುರ ತಾ. ಜಿಲ್ಲಾ. ಬೀದರ	46	4ನೇ ತರಗತಿ	ಗೃಹಣಿ

70	ಪಾರ್ವತಿ ಈಶ್ವರ ಮರಕುಂದಾ ತಾ. ಜಿಲ್ಲಾ. ಬೀದರ	48	6ನೇ ತರಗತಿ	ಟೇಲರಿಂಗ್
71	ಮಲ್ಲಮ್ಮಾ ಚಾಂಚೋಳಿ ಬೆಳ್ಳೂರ ತಾ. ಜಿಲ್ಲಾ. ಬೀದರ	76	ಇಲ್ಲ	ಗೃಹಣಿ
72	ಕರುಣಾ ಸಲಗರ ನಿಡವಂಚಾ ತಾ. ಜಿಲ್ಲಾ. ಬೀದರ	51	ಬಿ.ಎಡ್.	ಶಿಕ್ಷಕಿ
73	ಪಾರ್ವತಿ ಚಿಮಕೋಡೆ ನಾಗೂರಾ ತಾ. ಜಿಲ್ಲಾ. ಬೀದರ	79	ಇಲ್ಲ	ಗೃಹಣಿ
74	ನಾಗಮ್ಮಾ ನಿಣ್ವೆ ನಂದಗಾಂವ ತಾ. ಜಿಲ್ಲಾ. ಬೀದರ	83	ಇಲ್ಲ	ಗೃಹಣಿ
75	ಲಕ್ಷ್ಮಿಬಾಯಿ ಜುಜಾ ಬರೂರ ತಾ. ಜಿಲ್ಲಾ. ಬೀದರ	75	ಇಲ್ಲ	ಗೃಹಣಿ
76	ಜ್ಞಾನದೇವಿ ಸಂತಾಜಿ ಬೈರನಲ್ಲಿ ತಾ. ಜಿಲ್ಲಾ. ಬೀದರ	50	4ನೇ ತರಗತಿ	ಗೃಹಣಿ
77	ಸುಮನ ಬಾವಗೆ ಬಸಂತಪೂರ ತಾ. ಜಿಲ್ಲಾ. ಬೀದರ	52	10ನೇ ತರಗತಿ	ಗೃಹಣಿ
78	ಸುವರ್ಣ ಚೌಳಿಕರ ಬಕಚೌಡಿ ತಾ. ಜಿಲ್ಲಾ. ಬೀದರ	45	10ನೇ ತರಗತಿ	ಗೃಹಣಿ
79	ರಾಜಮ್ಮಾ ಕಮಠಾಣೆ ಅಲಮಸಪೂರ ತಾ. ಜಿಲ್ಲಾ. ಬೀದರ	65	ಇಲ್ಲ	ಗೃಹಣಿ
80	ಶೀಲಾದೇವಿ ವಾತಡೆ ಐಸಪುರ ತಾ. ಜಿಲ್ಲಾ. ಬೀದರ	49	ಪಿಯುಸಿ	ಗೃಹಣಿ
81	ಪಂಡರಿಬಾಯಿ ರಾಮದೇವ ಚಿದ್ರಿ ತಾ. ಜಿಲ್ಲಾ. ಬೀದರ	68	ಇಲ್ಲ	ಗೃಹಣಿ

82	ಜೈಶ್ರೀ ಕಣಜೆ ತಡಪಳ್ಳಿ ತಾ. ಜಿಲ್ಲಾ. ಬೀದರ	40	ಪಿಯುಸಿ	ಗೃಹಣಿ
83	ಭಾರತಿ ಚಿಟಮೆ ಇಸ್ಲಾಂಪುರ ತಾ. ಜಿಲ್ಲಾ. ಬೀದರ	54	ಪಿಯುಸಿ	ಗೃಹಣಿ
84	ಬಸಮ್ಮಾ ಖಿಂಡಾಳೆ ಚಿಟ್ಟಾ ತಾ. ಜಿಲ್ಲಾ. ಬೀದರ	61	ಇಲ್ಲ	ಗೃಹಣಿ
85	ಶೋಭಾ ವೀರಣ್ಣಾ ಅಷ್ಟೂರ ತಾ. ಜಿಲ್ಲಾ. ಬೀದರ	44	ಬಿ.ಎ.	ಗೃಹಣಿ
86	ಕಪಿಲಾ ಸಾವಲೆ ಅಣದೂರ ತಾ. ಜಿಲ್ಲಾ. ಬೀದರ	49	ಪಿಯುಸಿ	ಗೃಹಣಿ
87	ಮಂಗಲಾ ಕನ್ನಾಳೆ ಅಮದಲಪಾಂಡೆ ತಾ. ಜಿಲ್ಲಾ. ಬೀದರ	42	ಪಿಯುಸಿ	ಗೃಹಣಿ
88	ಮಹಾದೇವಿ ಮೂಲಗೆ ನಾವದಗೇರಿ ತಾ. ಜಿಲ್ಲಾ. ಬೀದರ	37	ಪಿಯುಸಿ	ಉಪನ್ಯಾಸಕಿ
89	ಶ್ರೀದೇವಿ ವಡ್ಡೆ ಗೊರನಳ್ಳಿ ತಾ. ಜಿಲ್ಲಾ. ಬೀದರ	58	ಇಲ್ಲ	ಗೃಹಣಿ
90	ಶಾಂತಾಬಾಯಿ ಹುಡುಗೆ ಖಾಸೆಂಪೂರ ತಾ. ಜಿಲ್ಲಾ. ಬೀದರ	63	ಇಲ್ಲ	ಗೃಹಣಿ
91	ಗಾಯತ್ರಿ ವಾರದ ಅಮಲಾಪುರ ತಾ. ಜಿಲ್ಲಾ. ಬೀದರ	42	10ನೇ ತರಗತಿ	ಗೃಹಣಿ
92	ಜ್ಯೋತಿ ವಾಡೆ ಅತಿವಾಳ ತಾ. ಜಿಲ್ಲಾ. ಬೀದರ	40	ಪಿಯುಸಿ	ಗೃಹಣಿ
93	ಆರತಿ ಭುರೆ ಕಪಲಾಪೂರ ತಾ. ಜಿಲ್ಲಾ. ಬೀದರ	38	10ನೇ ತರಗತಿ	ಗೃಹಣಿ

94	ಶಕುಂತಲಾ ಮಾಮಡೆ ಕಾಳೆನಗರ ತಾ. ಜಿಲ್ಲಾ. ಬೀದರ	68	10ನೇ ತರಗತಿ	ಗೃಹಣಿ
95	ಶೀಲಾವತಿ ಪಾಟೀಲ ಗೌಸಪುರ ತಾ. ಜಿಲ್ಲಾ. ಬೀದರ	55	ಪಿಯುಸಿ	ಗೃಹಣಿ
96	ರೇಖಾದೇವಿ ಹಾದಿಮನಿ ಕುಂಬಾರವಾಡ ತಾ. ಜಿಲ್ಲಾ. ಬೀದರ	59	ಬಿ.ಎ.	ಶಿಕ್ಷಕಿ
97	ಜಗದೇವಿ ಗುಡ್ಡಾ ತಾ. ಜಿಲ್ಲಾ. ಬೀದರ	52		ಉಪನ್ಯಾಸಕಿ
98	ಜ್ಯೋತಿ ಚೆಲುವಾ ಸಿಂದೋಲ ತಾ. ಜಿಲ್ಲಾ. ಬೀದರ	44	ಪಿಯುಸಿ	ಗೃಹಣಿ
99	ರತ್ನಮ್ಮಾ ಬಿಕ್ಲೆ ಸಾತೋಳಿ ತಾ. ಜಿಲ್ಲಾ. ಬೀದರ	72	ಇಲ್ಲ	ಗೃಹಣಿ
100	ವಿಮಲಾ ಲದ್ದೆ ಹಜ್ಜರಗಿ ತಾ. ಜಿಲ್ಲಾ. ಬೀದರ	74	ಇಲ್ಲ	ಗೃಹಣಿ
101	ಪಲ್ಲವಿ ರಾಗಾ ಸಂಗನಳ್ಳಿ ತಾ. ಜಿಲ್ಲಾ. ಬೀದರ	38	ಪಿಯುಸಿ	ಗೃಹಣಿ
102	ನಿರ್ಮಲಾ ಮಾಳಗೆ ಶೇಖಾಪೂರ ತಾ. ಜಿಲ್ಲಾ. ಬೀದರ	61	10ನೇ ತರಗತಿ	ಗೃಹಣಿ
103	ಶೀಲಾ ರಾಮದಾಸ ಶಿಪುಲಗೇರಾ ತಾ. ಜಿಲ್ಲಾ. ಬೀದರ	50	7ನೇ ತರಗತಿ	ಗೃಹಣಿ
104	ದೀಪಾ ಗುರುನಾಥ ಮಾಳಗೆ ಮುಗಂದಾಳ ತಾ. ಜಿಲ್ಲಾ. ಬೀದರ	35	4ನೇ ತರಗತಿ	ಗೃಹಣಿ
105	ರೇಖಾ ಗುಂಡಪ್ಪಾ ಮಂದಕನಳ್ಳಿ ತಾ. ಜಿಲ್ಲಾ. ಬೀದರ	33	ಪಿಯುಸಿ	ಗೃಹಣಿ

106	ಅರುಣಾ ಮಸೂದೆ ಸುಲ್ತಾನಪುರ ತಾ. ಜಿಲ್ಲಾ. ಬೀದರ	51	ಇಲ್ಲ	ಗೃಹಣಿ
107	ಅರುಣಾ ಮಸೂದೆ ಸುಲ್ತಾನಪೂರ ತಾ. ಜಿಲ್ಲಾ. ಬೀದರ	60		
108	ಕಪಿಲಾ ಮೇತ್ರೆ ಸಿರ್ಸಿ ತಾ. ಜಿಲ್ಲಾ. ಬೀದರ	46	ಇಲ್ಲ	ಗೃಹಣಿ
109	ಸರಸ್ವತಿ ಮಾಣಿಕಪ್ಪಾ ಬೆಳ್ಳೂರ ತಾ. ಜಿಲ್ಲಾ. ಬೀದರ	60	ಇಲ್ಲ	ಗೃಹಣಿ
110	ಪುಷ್ಪಾವತಿ ಕಣಜಿ ಮಲ್ಕಾಪೂರ ತಾ. ಜಿಲ್ಲಾ. ಬೀದರ	53	ಪಿಯುಸಿ	ಗೃಹಣಿ
111	ಎಸ್.ಬಿ.ಕುಚಬಾಳ ಶಾಪೂರಗೇಟ್ ಬೀದರ	65	ಬಿಎ.ಬಿಎಡ್	ನಿವೃತ್ತ ಅಧಿಕಾರಿ
112	ನಿಜಲಿಂಗಪ್ಪ ತಗಾರೆ ಕಾಜಿ ಕಾಲೋನಿ ಬೀದರ	61	ಬಿಎ.ಬಿಎಡ್	ನಿವೃತ್ತ ಶಿಕ್ಷಕ
113	ಎಸ್.ಎಂ. ಜನವಾಡಕರ್ ಆನಂದ ನಗರ ಬೀದರ	65	ಬಿಎ.ಬಿಎಡ್	ನಿವೃತ್ತ ಅಧಿಕಾರಿ
114	ಎಸ್.ಬಿ.ಬಿರಾದಾರ ರಾಘವೇಂದ್ರ ಕಾಲೋನಿ ಬೀದರ	71	ಎಂ.ಎಸ್.ಸಿ	ನಿವೃತ್ತ ಪ್ರಾಚಾರ್ಯ
115	ಶಂಕರ ಚೊಂಡಿ ಚೊಂಡಿ ಬೀದರ	46	ಎಸ್.ಎಸ್.ಎಲ್.ಸಿ	ಕಲಾವಿದರು
116	ವೀರಣ್ಣಾ ಕುಂಬಾರ ಭಾಲ್ಕಿ ಬೀದರ	62	ಡಿಪ್ಲೊಮಾ	ನಿವೃತ್ತ ಇಂಜಿನಿಯರ್
117	ಡಾ. ಜಗನ್ನಾಥ ಹೆಬ್ಬಾಳೆ ಶರಣ ನಗರ ಬೀದರ	53	ಪಿಎಚ್.ಡಿ.	ಕನ್ನಡ ಪ್ರಾಧ್ಯಾಪಕರು
118	ಶಂಭುಲಿಂಗ ಕಾಮಣ್ಣಾ ಭಾಲ್ಕಿ ಬೀದರ	57	ಎಂ.ಎ.	ಕನ್ನಡ ಉಪನ್ಯಾಸಕ
119	ದೇಶಾಂಶ ಹುಡಗಿ ಚಿಟ್ಟಾ ಬೀದರ	75	ಬಿಎ.ಬಿಎಡ್	ನಿವೃತ್ತ ಶಿಕ್ಷಕ
120	ರಘುನಾಥ ಹಡಪದ ಚಿಟ್ಟಾವಾಡಿ ಬೀದರ	65	ಎಸ್.ಎಸ್.ಎಲ್.ಸಿ	ಕಲಾವಿದ